ಕರ್ನಾಟಕದಲ್ಲಿ ವಿದ್ಯಾರ್ಥಿ ಸಂಘಟನೆಗಳ ರಾಜಕೀಯ ಸಾಮಾಜೀಕರಣ - ಅಧ್ಯಯನ

(ರಾಜ್ಯಶಾಸ್ತ್ರ ವಿಷಯಕ್ಕೆ ಸಂಬಂಧಪಟ್ಟಂತೆ ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಸಂಶೋಧನಾ ಮಹಾಪ್ರಬಂಧ)

ಸಂಶೋಧಕರು

ಭೀಮರಾವ ಗುಂಡೇರಾವ ಕುಲಕರ್ಣಿ

ಅಭಿವೃದ್ಧಿ ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ ಹಂಪಿ. ವಿದ್ಯಾರಣ್ಯ-583276

ಮಾರ್ಗದರ್ಶಕರು

ಡಾ. ಎ. ಶ್ರೀಧರ

ಸಹ ಪ್ರಾಧ್ಯಾಪಕರು,

ಅಭಿವೃದ್ಧಿ ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ ಹಂಪಿ, ವಿದ್ಯಾರಣ್ಯ-583276

ಸಮಾಜ ವಿಜ್ಞಾನಗಳ ನಿಕಾಯ

ಅಭಿವೃದ್ಧಿ ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ-583276

2017

ತಂ.ಶಂ.ರೆ. ಜಿಗಿಪೆ

ಕರ್ನಾಟಕದಲ್ಲಿ ವಿದ್ಯಾರ್ಥಿ ಸಂಘಟನೆಗಳ ರಾಜಕೀಯ ಸಾಮಾಜೀಕರಣ – ಅಧ್ಯಯನ

(ರಾಜ್ಯಶಾಸ್ತ್ರ ವಿಷಯಕ್ಕೆ ಸಂಬಂಧಪಟ್ಟಂತೆ ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಸಂಶೋಧನಾ ಮಹಾಪ್ರಬಂಧ)

ಸಂಶೋಧಕರು

ಭೀಮರಾವ ಗುಂಡೇರಾವ ಕುಲಕರ್ಣಿ

ಅಭಿವೃದ್ಧಿ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ ಹಂಪಿ, ವಿದ್ಯಾರಣ್ಯ–583276

ಮಾರ್ಗದರ್ಶಕರು

ಡಾ. ಎ. ಶ್ರೀಧರ

ಸಹ ಪ್ರಾಧ್ಯಾಪಕರು,
ಅಭಿವೃದ್ಧಿ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ ಹಂಪಿ, ವಿದ್ಯಾರಣ್ಯ–583276

ಸಮಾಜ ವಿಜ್ಞಾನಗಳ ನಿಕಾಯ,

ಅಭಿವೃದ್ಧಿ ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ.

2017

ಸಂಶೋಧಕರ ಘೋಷಣಾ ಪತ್ರ

"ಕರ್ನಾಟಕದಲ್ಲಿ ವಿದ್ಯಾರ್ಥಿ ಸಂಘಟನೆಗಳ ರಾಜಕೀಯ ಸಾಮಾಜೀಕರಣ – ಅಧ್ಯಯನ" ಎಂಬ ರಾಜ್ಯಶಾಸ್ತ್ರ ವಿಷಯದ ಮಹಾಪ್ರಬಂಧವನ್ನು ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯದ ಅಭಿವೃದ್ಧಿ ಅಧ್ಯಯನ ವಿಭಾಗದ ಸಹ ಪ್ರಾಧ್ಯಾಪಕರಾದ ಡಾ. ಎ. ಶ್ರೀಧರ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಲಾಗಿದೆ.

ಪ್ರಸ್ತುತ ಮಹಾಪ್ರಬಂಧದ ಯಾವುದೇ ಭಾಗವನ್ನು ಈ ಮೊದಲು ಬೇರೆ ಯಾವುದೇ ಉದ್ದೇಶ ಅಥವಾ ಪದವಿಗಳಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ದಿನಾಂಕ: 30-01-2017

ಸ್ಥಳ: ವಿದ್ಯಾರಣ್ಯ

ಭೀಮರಾವ ಗುಂಡೇರಾವ ಕುಲಕರ್ಣಿ
ಅಭಿವೃದ್ಧಿ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ ಹಂಪಿ, ವಿದ್ಯಾರಣ್ಯ–583276

ಮಾರ್ಗದರ್ಶಕರ ದೃಢೀಕರಣ ಪತ್ರ

ಭೀಮರಾವ ಗುಂಡೇರಾವ ಕುಲಕರ್ಣೀ ಇವರು ರಾಜ್ಯಶಾಸ್ತ್ರ ವಿಷಯದಲ್ಲಿ ಪಿಎಚ್.ಡಿ ಪದವಿಗಾಗಿ ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ "ಕರ್ನಾಟಕದಲ್ಲಿ ವಿದ್ಯಾರ್ಥಿ ಸಂಘಟನೆಗಳ ರಾಜಕೀಯ ಸಾಮಾಜೀಕರಣ – ಅಧ್ಯಯನ" ಎಂಬ ವಿಷಯದ ಮಹಾಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯದ ಅಭಿವೃದ್ಧಿ ಅಧ್ಯಯನ ವಿಭಾಗಕ್ಕೆ ಸಲ್ಲಿಸಿದ್ದಾರೆ.

ಪ್ರಸ್ತುತ ಮಹಾಪ್ರಬಂಧದ ಯಾವುದೇ ಭಾಗವನ್ನು ಈ ಮೊದಲು ಬೇರೆ ಯಾವುದೇ ಉದ್ದೇಶ ಅಥವಾ ಪದವಿಗಳಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ದಿನಾಂಕ: 30-01-2017

ಸ್ಥಳ: ವಿದ್ಯಾರಣ್ಯ

ಡಾ. ಎ. ಶ್ರೀಧರ
ಸಹ ಪ್ರಾಧ್ಯಾಪಕರು,
ಅಭಿವೃದ್ಧಿ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ ಹಂಪಿ,
ವಿದ್ಯಾರಣ್ಯ–583276

ಪರಿವಿಡಿ

ಕೋಷ್ಟಕಗಳು

ಅಧ್ಯಾಯ – 1

ಪೀಠಿಕೆ

1. ಪ್ರಸ್ತಾವನೆ.

ವಿದ್ಯಾರ್ಥಿ ರಾಜಕೀಯವು ಸಮಾಜ ವಿಜ್ಞಾನಿಗಳಿಗೆ ಅತ್ಯಂತ ಮಹತ್ವದಾದ ಸಂಶೋಧನಾ ಅಧ್ಯಯನದ ಕ್ಷೇತ್ರವಾಗಿದೆ. 1960ರ ನಂತರ ವಿದ್ಯಾರ್ಥಿಗಳು ರಾಜಕೀಯದಲ್ಲಿ ಭಾಗವಹಿಸುವಿಕೆ ಹೆಚ್ಚಾದ ನಂತರ ವಿದ್ವಾಂಸರು ಈ ಕ್ಷೇತ್ರದಲ್ಲಿ ಸಂಶೋಧನೆ ಮಾಡುವಂತೆ ಪ್ರಚೋದಿಸಿತು. ಇಂದು ವಿದ್ಯಾರ್ಥಿ ಕ್ರಿಯಾಶೀಲತೆ ಜಾಗತಿಕ ವಿದ್ಯಮಾನವಾಗಿದೆ. ಸಾಮಾಜಿಕ ಮತ್ತು ರಾಜಕೀಯ ಬದಲಾವಣೆಯ ನಿಯೋಗಗಳಲ್ಲಿ ವಿದ್ಯಾರ್ಥಿ ಚಳವಳಿಯು ತನ್ನದೇ ಆದ ಸ್ಥಾನವನ್ನು ಪಡೆದುಕೊಂಡಿದೆ. ಕೆಲವು ರಾಷ್ಟ್ರಗಳಲ್ಲಿ ಸರಕಾರಗಳನ್ನು ಮತ್ತು ನೀತಿ ಅಥವಾ ಧೋರಣೆಗಳನ್ನು ಬದಲಾಯಿಸುವಲ್ಲಿ ವಿದ್ಯಾರ್ಥಿಗಳು ಯಶಸ್ವಿಯಾಗಿದ್ದಾರೆ. ಆಗಸ್ಟ್ ಬ್ಲಾಂಕಿಯವರು 19ನೇ ಶತಮಾನದ ಮಧ್ಯಭಾಗದಲ್ಲಿ, ಎರಡು ಪ್ರಮುಖ ಕ್ರಾಂತಿಕಾರಿ ವರ್ಗಗಳೆಂದರೆ ವಿದ್ಯಾರ್ಥಿಗಳು ಮತ್ತು ಪ್ರಾಧ್ಯಾಪಕರುಗಳು ಎಂದು ವಾದಿಸಿದ್ದಾರೆ. ರಾಷ್ಟ್ರೀಯತೆ ಮತ್ತು ವಸಾಹಾತುಶಾಹಿ ಕ್ರಾಂತಿಗಳಲ್ಲಿ ಕಾಲೇಜು ಮತ್ತು ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು ಆಕ್ರಮಣಕಾರಿ ಪಾತ್ರ ವಹಿಸಿದ್ದರು. ಇದರಿಂದ ಒಂದು ಅಂಶ ಸ್ಪಷ್ಟವಾಗುವುದೇನೆಂದರೆ, ಸಾಮಾಜಿಕ ಚಳವಳಿಗಳನ್ನು ವಿದ್ಯಾರ್ಥಿ ಚಳವಳಿಗಳಿಂದ ಬೇರ್ಪಡಿಸಲು ಸಾಧ್ಯವಿಲ್ಲ.

ಸ್ಯಾಮ್ಯೂಯಲ್ ಹಂಟಿಂಗಟನ್‌ರವರು "ದೇಶದೊಳಗೆ ವಿರೋಧಿಸುವ ಮೂಲಾಧಾರ ನಗರ, ನಗರದೊಳಗೆ ವಿರೋಧಿಸುವ ಮೂಲಾಧಾರ ಮಧ್ಯಮ ವರ್ಗ, ಮಧ್ಯಮ ವರ್ಗದೊಳಗೆ ವಿರೋಧಿಸುವ ಪ್ರಮುಖ ಮೂಲಾಧಾರ ಪ್ರಜ್ಞಾವಂತ ಸಮೂಹ, ಪ್ರಜ್ಞಾವಂತ ಸಮೂಹದೊಳಗೆ ವಿರೋಧಿಸುವ ಅತ್ಯಂತ ಪ್ರಮುಖ ಮತ್ತು ಪರಿಣಾಮಕಾರಿ ಗುಂಪು ಎಂದರೆ ವಿದ್ಯಾರ್ಥಿಗಳು" ಎಂದು ಅಭಿಪ್ರಾಯ ಪಡುತ್ತಾರೆ. ಈ ಹಿನ್ನೆಲೆಯಿಂದ ನೋಡಿದಾಗ ವಿದ್ಯಾರ್ಥಿ ರಾಜಕೀಯವು ಪ್ರಸ್ತುತ ವ್ಯವಸ್ಥೆಯಲ್ಲಿ ತನ್ನದೇ ಆದ ಮಹತ್ವವನ್ನು ಪಡೆದುಕೊಂಡಿರುವುದನ್ನು ಗಮನಸಬಹುದು.

ಮನೋಜ್ ಘುಖಾನ್ ತಮ್ಮ "ಸ್ಟುಡೆಂಟ್ಸ್ ಪೊಲಿಟಿಕ್ಸ್ ಇನ್ ಆಸ್ಸಾಂ" ಎಂಬ ಗ್ರಂಥದಲ್ಲಿ "ವಿದ್ಯಾರ್ಥಿ ಸಮುದಾಯವು ಇಡಿ ವಿಶ್ವವನ್ನು ಅದ್ಭುತವಾಗಿ ಇಡುವ ಸರ್ವಶ್ರೇಷ್ಠ ಶಕ್ತಿಗಳಲ್ಲಿ ಒಂದು" ಎಂದು ಅಭಿಪ್ರಾಯ ಪಡುತ್ತಾರೆ. ಜಗತ್ತಿನಾದ್ಯಂತ ಇಂದು ವಿದ್ಯಾರ್ಥಿಗಳು ಮಾನವನ ಬದುಕಿಗೆ ಸಂಬಂಧಿಸಿದ ಹಲವಾರು ವಿಷಯಗಳ ಕುರಿತು ಅವರು ಧ್ವನಿ ಎತ್ತುತ್ತಿದ್ದಾರೆ. ಸಮಾಜ ಎದುರಿಸುತ್ತಿರುವ ಶೈಕ್ಷಣಿಕ, ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಸಮಸ್ಯೆಗಳಿಗೆ ಪರಿಹಾರ ಹುಡುಕುವ ಪ್ರಯತ್ನ ಈ ವಿದ್ಯಾರ್ಥಿ ಸಮುದಾಯ ಮಾಡುತ್ತಿದೆ. ಹಲವಾರು ದೇಶಗಳಲ್ಲಿ ನಡೆದ ಚಳುವಳಿಗಳಲ್ಲಿ ವಿದ್ಯಾರ್ಥಿ ಸಮುದಾಯದ ಪಾತ್ರವನ್ನು

ನಾವು ಕಡೆಗಣಿಸುವಂತಿಲ್ಲ. 1968 ರಲ್ಲಿ ಫ್ರಾನ್ಸ್‌ನಲ್ಲಿ ನಡೆದ ವಿದ್ಯಾರ್ಥಿ ಚಳವಳಿಯು ಹತ್ತು ಲಕ್ಷ ಕಾರ್ಮಿಕರು ಪ್ರತಿಭಟನೆಯಲ್ಲಿ ಭಾಗವಹಿಸುವಂತೆ ಮಾಡಿದ್ದು ಅದರ ಯಶಸ್ಸಿಗೆ ಸಾಕ್ಷಿಯಾಗಿದೆ ಎಂದು ಹೇಳಬಹುದು. ವಿಶ್ವದಲ್ಲಿ ನಡೆದ ಪ್ರಮುಖ ರಾಷ್ಟ್ರವಿರೋಧಿ ಕೃತ್ಯಗಳು ಮತ್ತು ಅಧಿಕಾರದ ದುರುಪಯೋಗದ ವಿರುದ್ಧ ವಿದ್ಯಾರ್ಥಿಗಳು ತಮ್ಮ ಪ್ರಭಲವಾದ ಧ್ವನಿ ಎತ್ತುತ್ತಾ ಬಂದಿದ್ದು ಇತಿಹಾಸದ ಪುಟಗಳನ್ನು ತಿರುವಿ ಹಾಕಿದಾಗ ನಮ್ಮ ಗಮನಕ್ಕೆ ಬರುತ್ತದೆ. ಯೂರೋಪಿನಲ್ಲಿ ಸಂಭವಿಸಿದ ಪ್ರಮುಖ ಚಳವಳಿಗಳ ಮೇಲೆ ವಿದ್ಯಾರ್ಥಿ ಸಮುದಾಯದ ದಟ್ಟ ಪ್ರಭಾವ ಇರುವುದನ್ನು ನಾವು ಕಾಣಬಹುದು. 1848 ರಲ್ಲಿ ಜರ್ಮನಿ ಮತ್ತು ಆಸ್ಟ್ರಿಯಾದಲ್ಲಿ ಪ್ರಾಧ್ಯಾಪಕರು ಮತ್ತು ಸಂಸತ್ತು ವಿದ್ಯಾರ್ಥಿ ಚಟುವಟಿಕೆಗಳನ್ನು ಪ್ರೋತ್ಸಾಹಿಸಿದ ಪರಿಣಾಮವಾಗಿ ಹಲವಾರು ಅರಸು ಮನೆತನಗಳು ತಮ್ಮ ಅಧಿಕಾರ ಕಳೆದುಕೊಂಡವು. ಅಮೇರಿಕಾದಲ್ಲಿಯೂ ಪ್ರಮುಖ ವಿಷಯಗಳಿಗೆ ಸಂಬಂಧಿಸಿದಂತೆ ವಿದ್ಯಾರ್ಥಿ ಸಮುದಾಯ ಪ್ರಮುಖ ಪಾತ್ರ ವಹಿಸುತ್ತಾ ಬಂದಿದೆ. ಉದಾಹರಣೆಗೆ ಗುಲಾಮಗಿರಿ ಪದ್ಧತಿ ನಿರ್ಮೂಲನೆ ಮಾಡುವುದರಲ್ಲಿ ವಿದ್ಯಾರ್ಥಿ ಸಂಘಟನೆಗಳ ಪಾತ್ರ ಪ್ರಮುಖವಾಗಿದೆ. ಅದು ಮುಂದೆ ಅಮೇರಿಕಾದಲ್ಲಿ ನಾಗರಿಕ ಕಲಹಕ್ಕೆ ದಾರಿ ಮಾಡಿಕೊಟ್ಟಿತ್ತು. ಇಂಗ್ಲೆಂಡ್‌ನಲ್ಲಿ ರಾಷ್ಟ್ರೀಯ ಬಿಕ್ಕಟ್ಟು ಸಂಭವಿಸಿದಾಗಲೆಲ್ಲಾ ವಿದ್ಯಾರ್ಥಿಗಳು ರಾಷ್ಟ್ರದ ರಕ್ಷಣೆಗೆ ಮುಂದೆ ಬಂದಿರುವುದನ್ನು ನಾವು ನೋಡಬಹುದು. ಕೇವಲ ಯುದ್ಧ ಸಮಯದಲ್ಲಿ ಅಷ್ಟೇ ಅಲ್ಲದೆ ಶಾಂತಿ ಸಂದರ್ಭದಲ್ಲಿಯೂ ವಿದ್ಯಾರ್ಥಿಗಳು ಸಮಾಜ ಎದುರಿಸುತ್ತಿರುವ ಸಮಸ್ಯೆಗಳನ್ನು ಪರಿಹರಿಸುವಲ್ಲಿ ತಮ್ಮದೇ ಆದ ಯೋಗದಾನವನ್ನು ನೀಡಿದ್ದಾರೆ. ಝಾರಿಸ್ಟ್ ರಷ್ಯಾದಲ್ಲಿಯೂ ವಿದ್ಯಾರ್ಥಿಗಳು ಚಳವಳಿಗಳನ್ನು ಸಂಘಟಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. 1935 ರಲ್ಲಿ ರಷ್ಯಾದ ರೈತರು ಮತ್ತು ಕಾರ್ಮಿಕರ ಸಮಸ್ಯೆಗಳನ್ನು ಪರಿಹರಿಸುವುದಕ್ಕಾಗಿ ಸ್ವಯಂ ಪ್ರೇರಿತರಾಗಿ ಚಳವಳಿಗಳಲ್ಲಿ ಭಾಗವಹಿಸಿದ್ದರು. ಜನೆವರಿ, 1943 ರಲ್ಲಿ ಸ್ಕಾಟ್‌ಲ್ಯಾಂಡ್‌ನಲ್ಲಿ ವಿದ್ಯಾರ್ಥಿ ಸಮ್ಮೇಳನ ಜರುಗಿತು. ಈ ಸಮ್ಮೇಳನದಲ್ಲಿ 18 ವಿಶ್ವವಿದ್ಯಾಲಯಗಳ ಮತ್ತು ಮಹಾವಿದ್ಯಾಲಯಗಳ 250 ವಿದ್ಯಾರ್ಥಿ ಪ್ರತಿನಿಧಿಗಳು ಭಾಗವಹಿಸಿದ್ದರು. ಈ ಸಮ್ಮೇಳನವು ಶೈಕ್ಷಣಿಕ ಉದ್ದೇಶಗಳನ್ನು ಈಡೇರಿಸಿಕೊಳ್ಳುವಲ್ಲಿ ಯಶಸ್ವಿಯಾಯಿತು. ಚೀನಾದಲ್ಲಿ ಮಾಂಚು ಆಧಿಪತ್ಯ ಕಿತ್ತೊಗೆಯುವಲ್ಲಿ ಹಾಗೂ 1911 ರಲ್ಲಿ ರಿಪಬ್ಲಿಕ್ ಚೀನಾ ಸ್ಥಾಪಿಸುವ ಚಳವಳಿಯಲ್ಲಿ ವಿದ್ಯಾರ್ಥಿ ಶಕ್ತಿ ಒಂದು ಮೂಲಭೂತ ಶಕ್ತಿಯಾಗಿ ಕಾರ್ಯನಿರ್ವಹಿಸಿತು. 1930 ರಲ್ಲಿ ಚೀನಾ ಬಾಹ್ಯ ಆಕ್ರಮಣಕ್ಕೆ ಒಳಗಾದಾಗ ಜಪಾನ ವಿರುದ್ಧ ವಿದ್ಯಾರ್ಥಿಗಳು ಹಿಂಸಾತ್ಮಕ ಹೋರಾಟದಲ್ಲಿ ಭಾಗವಹಿಸಿದರು. ಮುಂದೆ ವಿದ್ಯಾರ್ಥಿಗಳು ಕಮ್ಯೂನಿಸ್ಟರನ್ನು ಬೆಂಬಲಿಸಿ ಮಾವೋ–ತ್ಸೆ–ತುಂಗ್ ಅಧಿಕಾರಕ್ಕೆ ಬರುವಲ್ಲಿ ನಿರ್ಣಾಯಕ ಪಾತ್ರವಹಿಸಿದರು.

'ಭಾರತದಲ್ಲಿಯೂ ಕೂಡ ರಾಷ್ಟ್ರೀಯ ಬಿಕ್ಕಟ್ಟು ಉದ್ಭವಿಸಿದಾಗ ವಿದ್ಯಾರ್ಥಿಗಳು ಎಲ್ಲರೂ ಮೆಚ್ಚುಗೆ ಪಡುವಂತಹ ಕಾರ್ಯನಿರ್ವಹಿಸಿದ್ದಾರೆ. ಸ್ವಾತಂತ್ರ್ಯ ಪೂರ್ವದಲ್ಲಿಯೇ

ಅಂದರೆ 1905 ರಲ್ಲಿಯೆ ವಿದೇಶಿಯರ ಕಪಿಮುಷ್ಠಿಯಿಂದ ಭಾರತವನ್ನು ಮುಕ್ತಗೊಳಿಸಲು ದೇಶದ ತುಂಬೆಲ್ಲಾ ಹೋರಾಟ ಮಾಡಿದರು. ಹಲವಾರು ವಿದ್ಯಾರ್ಥಿ ಸಂಘಟನೆಗಳು ಆ ಸಂದರ್ಭದಲ್ಲಿ ಅಸ್ತಿತ್ವಕ್ಕೆ ಬಂದವು. ಆಲ್ ಇಂಡಿಯಾ ಕಾಲೇಜ್ ಸ್ಟುಡೆಂಟ್ ಕಾನಫರೆನ್ಸ್ (1920), ಆಲ್ ಬೆಂಗಾಲ್ ಸ್ಟುಡೆಂಟ್ಸ್ ಅಸೋಸಿಯೇಷನ್ (1929), ದಿ ಹಿಂದೂ ಸ್ಟುಡೆಂಟ್ಸ್ ಫೆಡರೇಷನ್ (1930), ಬಾಂಬೆ ಪ್ರೆಸಿಡೆನ್ಸಿ ಸ್ಟುಡೆಂಟ್ಸ್ ಫೆಡರೇಷನ್ (1936), ಆಲ್ ಇಂಡಿಯಾ ಮುಸ್ಲಿಮ್ ಸ್ಟುಡೆಂಟ್ಸ್ ಫೆಡರೇಷನ್ (1937), ಮುಂತಾದ ವಿದ್ಯಾರ್ಥಿ ಸಂಘಟನೆಗಳು ದೇಶದ ಸ್ವಾತಂತ್ರ್ಯ ಹೋರಾಟದಲ್ಲಿ ಪ್ರಮುಖ ಪಾತ್ರವಹಿಸಿದವು. ಇಂದು ದೇಶದಲ್ಲಿ ಅಸ್ತಿತ್ವದಲ್ಲಿರುವ ಪ್ರಮುಖ ವಿದ್ಯಾರ್ಥಿ ಸಂಘಟನೆಗಳಾದ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್, ಸ್ಟುಡೆಂಟ್ ಫೆಡರೇಷನ್ ಆಫ್ ಇಂಡಿಯಾ, ಆಲ್ ಇಂಡಿಯಾ ಡೆಮಾಕ್ರ್ಯಾಟಿಕ್ ಸ್ಟುಡೆಂಟ್ ಆರ್ಗನೈಜೇಷನ್ ಮುಂತಾದವುಗಳು ಸಮಾಜ ಬದಲಾವಣೆಯ ಪ್ರಕ್ರಿಯೆಯಲ್ಲಿ ತಮ್ಮದೇ ಆದ ಮಹತ್ವದ ಕೊಡುಗೆಯನ್ನು ನೀಡುತ್ತಿವೆ.

ಕರ್ನಾಟಕದಲ್ಲಿ ವಿದ್ಯಾರ್ಥಿಗಳು ಸ್ವಾತಂತ್ರ್ಯ ಹೋರಾಟದಲ್ಲಿ ಅತ್ಯಂತ ಪ್ರಮುಖವಾದ ಪಾತ್ರವಹಿಸಿರುವುದು ನಮ್ಮೆಲ್ಲರಿಗೂ ಗೊತ್ತಿರುವ ವಿಷಯ. ಸ್ವಾತಂತ್ರ್ಯ ನಂತರ ಶಿಕ್ಷಣ ಸುಧಾರಣೆಯ ರೂಪುರೇಷೆಗಳನ್ನು ಸಿದ್ಧಪಡಿಸುವಾಗ ಕೂಡ ಅವರು ಗಮನಾರ್ಹವಾದ ಪ್ರಭಾವವನ್ನು ಬೀರಿದ್ದಾರೆ. ಈ ಹಿನ್ನೆಲೆಯಿಂದ ನೋಡಿದಾಗ ರಾಜ್ಯದಲ್ಲಿ ವಿದ್ಯಾರ್ಥಿ ಸಂಘಟನೆಗಳು ರಾಜಕೀಯದ ಬೆನ್ನೆಲುಬಾಗಿ ಕೆಲಸ ಮಾಡುತ್ತಿವೆ ಎಂದು ಹೇಳಿದರೆ ತಪ್ಪಾಗಲಾರದು. ರಾಜ್ಯದ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿಗಳು ಕೂಡ ವಿದ್ಯಾರ್ಥಿಗಳ ರಾಜಕೀಯ ಚಟುವಟಿಕೆಗಳ ಮೇಲೆ ಸಾಕಷ್ಟು ಪ್ರಭಾವ ಬೀರಿವೆ. 1975-77ರ ತುರ್ತುಪರಿಸ್ಥಿತಿಯ ಅವಧಿಯನ್ನು ಹೊರತುಪಡಿಸಿ ಉಳಿದೆಲ್ಲ ಸಂದರ್ಭಗಳಲ್ಲಿಯೂ ವಿದ್ಯಾರ್ಥಿ ಸಂಘಟನೆಗಳು ತುಂಬಾ ಸಕ್ರಿಯವಾಗಿರುವುದನ್ನು ನಾವು ಕಾಣಬಹುದಾಗಿದೆ. ಈ ಕಾರಣಕ್ಕಾಗಿಯೇ ಇಂದು ವಿದ್ಯಾರ್ಥಿಗಳು ವಿಶ್ವವಿದ್ಯಾಲಯದ ಸೆನೆಟ್‌ನಲ್ಲಿ ಪ್ರತಿನಿಧಿತ್ವವನ್ನು ಪಡೆದಿದ್ದಾರೆ. ರಾಜ್ಯಶಾಸ್ತ್ರದ ಆಧುನಿಕ ಪರಿಕಲ್ಪನೆಗಳಾದ ಸ್ವಾತಂತ್ರ್ಯ, ಸಮಾಜವಾದ ಮತ್ತು ಸಮಾನತೆಯ ಮಹತ್ವವನ್ನು ಸಾಮಾನ್ಯ ಜನರಲ್ಲಿ ಈ ವಿದ್ಯಾರ್ಥಿ ಸಂಘಟನೆಗಳು ಮೂಡಿಸಿವೆ.

ಸಾಮಾಜೀಕರಣವೆಂಬ ಪದವನ್ನು ಇಂಗ್ಲಿಷ್ ಸಾಹಿತ್ಯದಲ್ಲಿ ಕ್ರಿ.ಶ.1828ರಲ್ಲಿ ಮೊದಲ ಬಾರಿಗೆ ಬಳಸಲಾಯಿತು.ಆದರೆ ಈ ಪದವನ್ನು ಆಧುನಿಕ ಅರ್ಥದಲ್ಲಿ ಬಳಸಿರುವವರೆಂದರೆ ಫ್ರಾಯಿಡ್, ಜಿ.ಎಚ್.ಮುಡ್, ಸಿ.ಎಚ್.ಕೂಲೆ ಮತ್ತು ಪಿಗೆಟ್.

1. ವಿಲಿಯಂ. ಎಫ್.ಆಗ್ ಬರ್ನ್ ರವರ ಪ್ರಕಾರ "ಸಮಾಜದ ನಿಯಮಗಳಿಗೆ ಅನುಸಾರವಾಗಿ ತನ್ನ ನಡತೆಯನ್ನು ರೂಪಿಸಿಕೊಳ್ಳುವ ಪ್ರಕ್ರಿಯೆಯೇ ಸಾಮಾಜೀಕರಣ".

2. ಪೀಟರ್ ವರ್ಸ್ಲೆರವರ ಪ್ರಕಾರ "ಸಾಮಾಜೀಕರಣವು ಸಾಂಸ್ಕೃತಿಕ ಸಂಚರಣೆಯ ಪ್ರಕ್ರಿಯೆಯಾಗಿದ್ದು ಇದರ ಮೂಲಕ ಜನರು ಸಾಮಾಜಿಕ ಸಮೂಹಗಳ ನಿಯಮ ಮತ್ತು ಆಚರಣೆಗಳನ್ನು ಕಲಿತುಕೊಳ್ಳುವರು".

3. ಅಲ್ಮಂಡ್ ಮತ್ತು ವರ್ಬ್‌ರವರು "ರಾಜಕೀಯ ಸಂಸ್ಕೃತಿಯನ್ನು ಸಂರಕ್ಷಿಸುವ ಮತ್ತು ಮಾರ್ಪಡಿಸುವ ಒಂದು ಪ್ರಕ್ರಿಯೆಗೆ ರಾಜಕೀಯ ಸಾಮಾಜೀಕರಣವೆಂದು ಕರೆದಿದ್ದಾರೆ.

4 ರಾಜಕೀಯ ಪದ್ಧತಿಯ ಬಗ್ಗೆ ನಂಬಿಕೆಗಳನ್ನು ಅಥವಾ ಅನಿಸಿಕೆಗಳನ್ನು ಸ್ಥಾಪಿಸಿ ಬೆಳೆಸಿಕೊಳ್ಳುವುದೇ ರಾಜಕೀಯ ಸಾಮಾಜೀಕರಣ"ವೆಂದು ಆರ್.ಬಾಲ್ ರವರು ವ್ಯಾಖ್ಯಾನಿಸಿದ್ದಾರೆ.

ಒಟ್ಟಿನಲ್ಲಿ ವ್ಯಕ್ತಿಗಳು ಒಂದು ರಾಜಕೀಯ ವ್ಯವಸ್ಥೆಯ ಬಗ್ಗೆ ಹೊಂದಿರುವ ಧೋರಣೆಗಳು, ಮೌಲ್ಯಗಳು ಮತ್ತು ಅನಿಸಿಕೆಗಳು ಹಾಗೂ ರಾಜಕೀಯ ಘಟನೆಗಳಿಗೆ ಅವರ ಪ್ರತಿಕ್ರಿಯೆಯನ್ನು ನಿರ್ಧರಿಸುವ ವಿಧಾನವೇ ರಾಜಕೀಯ ಸಾಮಾಜೀಕರಣ.

2. ಸಮಷ್ಟೀಕರಣ

ರಾಜಕೀಯ ಅಭಿವೃದ್ಧಿ ಮತ್ತು ಆಧುನೀಕರಣ ಪ್ರಕ್ರಿಯೆಯ ಅಧ್ಯಯನ ಮಾಡುವಾಗ ವಿದ್ಯಾರ್ಥಿ ರಾಜಕೀಯವನ್ನು ನಾವು ನಿರ್ಲಕ್ಷಿಸುವಂತಿಲ್ಲ. ಜಾಗತಿಕ ಮಟ್ಟದಲ್ಲಿ ಇಂದು ವಿದ್ಯಾರ್ಥಿ ಕ್ರಿಯಾಶೀಲತೆಯು ತನ್ನದೇ ಆದ ಮಹತ್ವವನ್ನು ಪಡೆದುಕೊಂಡಿದೆ. ಈ ಹಿನ್ನೆಲೆಯಲ್ಲಿ ವಿದ್ಯಾರ್ಥಿ ಕ್ರಿಯಾಶೀಲತೆಯ ಬಗ್ಗೆ ಚರ್ಚಿಸುವುದು ಇಲ್ಲಿ ಹೆಚ್ಚು ಪ್ರಸ್ತುತವಾಗುತ್ತದೆ.

ಕ್ರಾಂತಿಕಾರಿ ಚಳವಳಿಗಳು ಯಾವತ್ತೂ ಆದರ್ಶಗಳನ್ನು ಹೊಂದಿರುವ ಹಾಗೂ ಅವುಗಳನ್ನು ಅನುಷ್ಠಾನಗೊಳಿಸಬೇಕೆಂಬ ಉತ್ಸಾಹದಲ್ಲಿರುವ ವಿದ್ಯಾರ್ಥಿಗಳ ಬೆಂಬಲವನ್ನು ಬಯಸುತ್ತವೆ. ಅದಕ್ಕಾಗಿಯೇ ಸಿ. ರೈಟ್ ಮೀಲ್ಸ್ ಎಂಬ ವಿದ್ವಾಂಸರು "ಹೊಸ ಕ್ರಾಂತಿಕಾರಿ ಚಳವಳಿಗೆ ಬುದ್ಧಿಜೀವಿಗಳು ಹಾಗು ವಿದ್ಯಾರ್ಥಿಗಳು ಮಾತ್ರ ಒಂದು ಭದ್ರವಾದ ಅಡಿಪಾಯ ಹಾಕುತ್ತಾರೆ" ಎಂದಿದ್ದಾರೆ. ಇವರ ವಿಚಾರಗಳಿಗೆ ಪೂರಕವಾಗಿ ಎಸ್.ಎಮ್.ಲಿಪ್‌ಸೆಟ್ "ಭವಿಷ್ಯತ್ತಿನ ರಾಜಕೀಯವನ್ನು ವಿಶ್ಲೇಷಣೆ ಮಾಡುವಾಗ ವಿದ್ಯಾರ್ಥಿಗಳನ್ನು ಕಡೆಗಣಿಸುವುದು ಮಹಾ ಪ್ರಮಾದಕ್ಕೆ ದಾರಿ ಮಾಡಿ ಕೊಡುತ್ತದೆ"[1] ಎಂದು ಅಭಿಪ್ರಾಯ ಪಟ್ಟಿದ್ದಾರೆ. ಹಾಗೆಯೇ ಲೀಬ್‌ಮ್ಯಾನ್ ವಾಕರ್ ಮತ್ತು ಗ್ಲೇಜರ್ ಜಗತ್ತಿನಾದ್ಯಂತ ಶಾಂತಿ ಕದಡುವ, ಸಾಂಪ್ರದಾಯಿಕ ಮೌಲ್ಯಗಳನ್ನು ಹಾಗೂ ಅಸ್ತಿತ್ವದಲ್ಲಿರುವ ಸರಕಾರಗಳನ್ನು ಪ್ರಶ್ನಿಸುವ ಎರಡೇ ಎರಡು ಗುಂಪುಗಳೆಂದರೆ ಬುದ್ಧಿಜೀವಿಗಳು ಮತ್ತು ವಿದ್ಯಾರ್ಥಿಗಳು"[2] ಎಂದು ಸ್ಪಷ್ಟವಾಗಿ ತಿಳಿಸಿರುತ್ತಾರೆ.

1955ರಲ್ಲಿ ಅರ್ಜಂಟೀನಾದ ಪೆರೋನನ್ನು ಉರುಳಿಸುವಲ್ಲಿ, 1958ರಲ್ಲಿ ವೆನೆಜ್ಯುವೇಲಾದ ಪೆರೋಜ್ ಜಿಮೆನೇಜ್‌ನ ಅಧಃಪತನ, 1963ರಲ್ಲಿ ವಿಯಟ್ನಾಂ ಮೇಲೆ ಅಮೇರಿಕೆಯ ದಾಳಿಯನ್ನು ಉಗ್ರವಾಗಿ ಪ್ರತಿಭಟಿಸಿದ್ದು, 1960ರಲ್ಲಿ ಜಪಾನ–ಅಮೇರಿಕೆಯ ಮಧ್ಯ ಆದ ಭದ್ರತಾ ಒಪ್ಪಂದದ ವಿರುದ್ಧದ ಪ್ರತಿಭಟನೆ, ಅದು ಕಿಶಿ ಸರಕಾರದ ಅಧಃಪತನಕ್ಕೂ ಕಾರಣವಾಯಿತು, 1966ರಲ್ಲಿ ಸುಕಾರ್ನೊ ವಿರುದ್ಧ ಇಂಡೋನೇಷ್ಯಾದಲ್ಲಿನ ಚಳವಳಿ, 1969ರಲ್ಲಿ ಪಾಕಿಸ್ತಾನದಲ್ಲಿ ಅಯೂಬಖಾನನ ಅಧಃಪತನ ಮತ್ತು ಜೇಕೊಸ್ಲಾವಾಕಿಯಾದಲ್ಲಿ ಉದಾರೀಕರಣಕ್ಕಾಗಿ ನಡೆದ ತೀವ್ರತರವಾದ ಚಳವಳಿಗಳಲ್ಲಿ ವಿದ್ಯಾರ್ಥಿಗಳು ವಹಿಸಿದ ನಿರ್ಣಾಯಕ ಪಾತ್ರವೇ ಈ ಮೇಲಿನ ವಿದ್ವಾಂಸರ ಹೇಳಿಕೆಗಳಿಗೆ ಸಮರ್ಥನೆ ನೀಡುತ್ತವೆ.

ಬಹುಸಂಖ್ಯಾತ ವಿದ್ಯಾರ್ಥಿಗಳು ಕ್ರಾಂತಿಕಾರಿ ಮನೋವೃತ್ತಿಯುನ್ನು ಹೊಂದಿರುವದಿಲ್ಲ. ಎಲ್ಲಾ ದೇಶಗಳಲ್ಲಿಯೂ ಬಹುಸಂಖ್ಯಾತ ವಿದ್ಯಾರ್ಥಿಗಳು ರಾಜಕೀಯವಾಗಿ ಸೌಮ್ಯವಾದಿ ದೃಷ್ಟಿಕೋನವನ್ನು ಹೊಂದಿರುತ್ತಾರೆ. ಹೆಚ್ಚಿನ ರಾಷ್ಟ್ರಗಳಲ್ಲಿ, ಎಡಪಂಥೀಯ ವಿದ್ಯಾರ್ಥಿಗಳು ಅಲ್ಪಸಂಖ್ಯಾತರಾಗಿದ್ದು, ವೈಚಾರಿಕ ಕ್ರಾಂತಿಯನ್ನು ಹುಟ್ಟುಹಾಕುವಲ್ಲಿ ಮುಂಚೂಣಿಯಲ್ಲಿರುವುದನ್ನು ಗಮನಿಸಬಹುದು. ಬಹುಸಂಖ್ಯಾತ ವಿದ್ಯಾರ್ಥಿಗಳು ರಾಜಕೀಯ ವ್ಯವಹಾರಗಳ ಬಗ್ಗೆ ನಿರಾಸಕ್ತಿ ಹೊಂದಿದವರಾಗಿರುತ್ತಾರೆ.

ಎಸ್. ಎಂ. ಲಿಪ್‌ಸೆಟ್ ಮತ್ತು ಫಿಲೀಪ್ ಅಲ್ತಬಷ್ ರವರ ಪ್ರಕಾರ ಬಹಳಷ್ಟು ಸಲ ಕ್ಯಾಂಪಸ್ ಅವಸ್ಥೆಯು ಕೂಡ ರಾಜಕೀಯ ಚಟವಟಿಕೆಗಳಿಗೆ ಅವಕಾಶಗಳನ್ನು ಒದಗಿಸಿಕೊಡುತ್ತದೆ. ವಿದ್ಯಾರ್ಥಿಯ ಕೌಟುಂಬಿಕ ಹಿನ್ನೆಲೆ ಹಾಗೂ ಸಾಮಾಜಿಕ ಅಂತಸ್ತು ಬಹುಮುಖ್ಯ ಅಂಶಗಳಾದರೂ, ಅವರು ತಮ್ಮ ಸ್ನೇಹಿತರ ಸಂಪರ್ಕಕ್ಕೆ ಬಂದಾಗ ಈ ಅಂಶಗಳು ಗೌಣವಾಗುತ್ತವೆ. ತಮ್ಮ ವರ್ಗ ಮತ್ತು ಅಂತಸ್ತಿಗಿಂತ ತಾವು ಆಯ್ಕೆಮಾಡಿಕೊಂಡ ವಿಶ್ವವಿದ್ಯಾಲಯ ಮತ್ತು ಶೈಕ್ಷಣಿಕ ಕ್ಷೇತ್ರ ಅತ್ಯಂತ ಮಹತ್ವದ್ದಾಗುತ್ತದೆ.[3] ಅದರಲ್ಲಿಯೂ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಲ್ಲಿ ವಿದ್ಯಾರ್ಥಿಗಳು ವೈವಿಧ್ಯಮಯ ವಿಭಾಗಗಳಿಂದ ಬಂದವರಾದ್ದರಿಂದ ಅವರಲ್ಲಿ ಸಾಮೂದಾಯಿಕ ಪ್ರಜ್ಞೆ ಇರುವದಿಲ್ಲ. ಭಾರತದ ಮಟ್ಟಿಗೆ ಇದು ಅಕ್ಷರಶಃ ನಿಜವೆಂದು ಹೇಳಬಹುದು.

ಆಯನ್ ರ್‍ಯಾಂಡ್ "ದಿ ನೀವ್ ಲೆಫ್ಟ್; ದಿ ಆ್ಯಂಟಿ–ಇಂಡಸ್ಟ್ರಿಯಲ್ ರೆವುಲ್ಯೂಶನ್" ಎಂಬ ಗ್ರಂಥದಲ್ಲಿ 1964ರ ಕ್ಯಾಲಿಫೋರ್ನಿಯಾ ವಿಶ್ವವಿದ್ಯಾಲಯದಲ್ಲಿ ಸಂಭವಿಸಿದ ಬರ್ಕ್ಲಿ ವಿದ್ಯಾರ್ಥಿ ದಂಗೆ ಮತ್ತು 1968ರ ಫ್ರೆಂಚ್ ಸ್ಟುಡೆಂಟ್ ರಿವೋಲ್ಟ್ ಎರಡೂ ಕೂಡ ಕ್ಯಾಂಪಸ್‌ಗಳಲ್ಲಿನ ಅವ್ಯವಸ್ಥೆ ವಿಶ್ವವಿದ್ಯಾಲಯದ ಸರ್ವಾಧಿಕಾರಿ ಧೋರಣೆ ಮತ್ತು ಅದರ ಅಸಮರ್ಪಕ ಆಡಳಿತ ವಿರುದ್ಧದ ಪ್ರತಿಭಟನೆಗಳಾಗಿದ್ದವು. ಆದರೆ ಈ ಎರಡು ಪ್ರತಿಭಟನೆಗಳು ಯಶಸ್ವಿ ಕ್ರಾಂತಿಗಳನ್ನಾಗಿ ಮಾರ್ಪಡಿಸುವಲ್ಲಿ ವಿಫಲವಾದವು. ಅಮೇರಿಕಾ ಮತ್ತು ಫ್ರಾನ್ಸಿನ

ವಿದ್ಯಾರ್ಥಿ ನಾಯಕರು ಸಂಗತಿಗಳಿಗೆ ಹೆಚ್ಚಿನ ಮಹತ್ವ ನೀಡಿದ್ದರೆ ಹೊರತು ತಾತ್ವಿಕತೆಗೆ ಅಲ್ಲ. ಸ್ವಾತಂತ್ರ್ಯದ ಕ್ರಿಯೆ ವಾಕ್ ಸ್ವಾತಂತ್ರ್ಯಕ್ಕಿಂತ ಬಹುಮುಖ್ಯವಾದದ್ದು. ವಿಶ್ವವಿದ್ಯಾಲಯಗಳು ವಿದ್ಯಾರ್ಥಿಗಳು ಮತ್ತು ಪ್ರಾಧ್ಯಾಪಕರಿಂದ ನಡೆಯಬೇಕು. ಆದರೆ ಕಾಲೇಜುಗಳು ಮತ್ತು ವಿಶ್ವವಿದ್ಯಾಲಯಗಳು ಬಂಡವಾಳಶಾಹಿಗಳ ಅಡಿಯಾಳಾಗಿ ಕಾರ್ಯನಿರ್ವಹಿಸುತ್ತಿವೆ[4] ಎನ್ನುವುದು ಅವರ ಭಾವನೆ.

ಎ. ಬೆಲ್ಡನ್ ಫೀಲ್ಡ್ಸ್ "ದ ರೆವುಲ್ಯುಶನ್ ಬೆಟ್ರಾಯಿಡ್: ದ ಫ್ರೆಂಚ್ ಸ್ಟುಡೆಂಟ್ ರಿವೋಲ್ಟ್ ಆಫ್ ಮೇ-ಜೂನ್ 1968" ಎಂಬ ಸಂಶೋಧನಾ ಲೇಖನದಲ್ಲಿ ಫ್ರೆಂಚ್ ವಿದ್ಯಾರ್ಥಿ ನಾಯಕರು ಫ್ರಾನ್ಸಿನ ಶೈಕ್ಷಣಿಕ ವ್ಯವಸ್ಥೆಯಲ್ಲಿನ ಅಸಮಾನತೆಯನ್ನು ಉಗ್ರವಾಗಿ ಪ್ರತಿಭಟಿಸಿದರು. ಧಾರ್ಮಿಕ ವಿಭಜನೆ, ಪ್ರಾದೇಶಿಕತೆ, ಭಾಷೆ, ಜನಾಂಗೀಯತೆ ಮತ್ತು ಆದಿವಾಸಿ ಭಿನ್ನತೆಗಳು ವಿದ್ಯಾರ್ಥಿ ಚಳುವಳಿಗೆ ಕಾರಣಗಳಾದವು. ವಿದ್ಯಾರ್ಥಿಗಳ ಮೇಲೆ ವಿಶ್ವವಿದ್ಯಾಲಯ ಹೇರಿದ ನಿರ್ಬಂಧನೆಗಳು ಅವರು ರಾಜಕೀಯದಲ್ಲಿ ಪಾಲ್ಗೊಳ್ಳಲು ಹಾಗೂ ಕ್ಯಾಂಪಸ್‌ನಲ್ಲಿ ರಾಜಕೀಯ ವಾತಾವರಣ ಹೆಚ್ಚಾಗಲು ಕಾರಣವಾದವು.[5] ಅದಕ್ಕಾಗಿ ಪರೀಕ್ಷಾ ವ್ಯವಸ್ಥೆಯು ವಿದ್ಯಾರ್ಥಿಗಳ ರಾಜಕೀಯ ಕ್ರಿಯಾಶೀಲತೆಯನ್ನು ನಿರ್ಧರಿಸುವ ಪ್ರಮುಖ ಅಂಶವಾಗಿದೆ. ಭಾರತದಲ್ಲಿ ವಿದ್ಯಾರ್ಥಿಗಳು ವರ್ಷದ ಕೊನೆಗೆ ಪರೀಕ್ಷೆ ಬರೆಯುವದರಿಂದ, ಅವರಿಗೆ ಸಾಕಷ್ಟು ಸಮಯ ಸಿಗುವುದರಿಂದ ಅವರು ರಾಜಕೀಯ ಚಟುವಟಿಕೆಗಳಲ್ಲಿ ಭಾಗವಹಿಸುವುದಕ್ಕೆ ಸಾಧ್ಯವಾಗುತ್ತದೆ.

ಎ. ಬೆಲ್ಡನ್ ಫೀಲ್ಡ್ಸ್ : ವಿಶ್ಲೇಷಣಾತ್ಮಕ ಉದ್ದೇಶಗಳಿಗಾಗಿ ವಿದ್ಯಾರ್ಥಿ ಸಂಘಟನೆಗಳನ್ನು ಎರಡು ಗುಂಪುಗಳಾಗಿ ವಿಂಗಡಿಸಿದ್ದಾರೆ. ಮೊದಲನೆಯದು ಸ್ಥಾಪಿತ ಅಧಿಕಾರ ಅಥವಾ ವ್ಯವಸ್ಥೆಯನ್ನು ವಿರೋಧಿಸುವ ಟ್ರಾನ್ಸ್‌ಗ್ರೆಸ್ಸಿವ್ ಗುಂಪಾದರೆ ಎರಡನೆಯದು ಸಾಮಾಜಿಕ ಮೌಲ್ಯಗಳನ್ನು ಪ್ರಶ್ನಿಸದೆ ಅವುಗಳನ್ನು ಪಾಲಿಸಿಕೊಂಡು ಹೋಗುವ ಸಾಂಪ್ರದಾಯಿಕ ಗುಂಪು. ಟ್ರಾನ್ಸ್‌ಗ್ರೆಸ್ಸಿವ್ ಗುಂಪು ಸಾಮಾಜಿಕ ಮೌಲ್ಯಗಳಲ್ಲಿ ಮೂಲಭೂತವಾದ ಬದಲಾವಣೆಗಳಾಗಬೇಕೆಂದು ಬಯಸುತ್ತದೆ. ಆದರೆ ಸಾಂಪ್ರದಾಯಿಕ ಗುಂಪು ಅಸ್ತಿತ್ವದಲ್ಲಿರುವ ಸಾಮಾಜಿಕ ಮೌಲ್ಯಗಳನ್ನು ಪ್ರಶ್ನಿಸದೇ ಯಥಾವತ್ತಾಗಿ ಪಾಲಿಸಿಕೊಂಡು ಹೋಗಲು ಪ್ರಯತ್ನಿಸುತ್ತದೆ. ಮೌಲ್ಯಗಳಲ್ಲಿನ ವ್ಯತ್ಯಾಸಗಳು ಸಂಘರ್ಷಕ್ಕೆ ದಾರಿ ಮಾಡಿಕೊಡುತ್ತವೆ.[6]

ಜಗತ್ತಿನಾದ್ಯಂತ ಇಂದು ಉನ್ನತ ಶಿಕ್ಷಣದ ಆವರಣಗಳು ಸಂಕ್ರಮಣ ಮತ್ತು ಪ್ರಕ್ಷುಬ್ಧ ಕಾಲದಲ್ಲಿವೆ. ಸಮಾಜ ವಿಜ್ಞಾನಿಗಳು ವಿದ್ಯಾರ್ಥಿ ಪ್ರತಿಭಟನೆಗೆ ಹಲವಾರು ವಿವರಣೆಗಳನ್ನು ನೀಡಿದ್ದಾರೆ. ಬೇಕ್ ಮತ್ತು ಡೊಗ್ಲಸ್ (1970) ಮಾನವ ಜೀವನದ ಎಲ್ಲ ಪ್ರಕಾರಗಳಲ್ಲಾದ ಜ್ಞಾನ ಸ್ಫೋಟವು ಅವನ ದೃಷ್ಟಿಕೋನವನ್ನು ತೀವ್ರವಾಗಿ ಬದಲಾಯಿಸಿತು. ಹೀಗಾಗಿ ವ್ಯಕ್ತಿ ಪ್ರತಿಯೊಂದನ್ನು ಪ್ರಶ್ನಿಸಲು ಪ್ರಾರಂಭಿಸಿದ. ಸಾಮಾನ್ಯ ಜನರ

ದೃಷ್ಟಿಕೋನದಲ್ಲಾದ ಬದಲಾವಣೆ ಪ್ರತಿಭಟನೆಗೆ ಮೂಲ ಕಾರಣವಾಯಿತು ಎಂದು ಹೇಳಿದರೆ, ಮೋರಿಸ್ (1976) ರವರ ಪ್ರಕಾರ ಇದು ಕೇವಲ ಜ್ಞಾನದ ಪರಾಕಾಷ್ಠೆ ಮಾತ್ರವಲ್ಲ, ಹೊಸ ಜ್ಞಾನದ ಮಧ್ಯಸ್ಥಿಕೆಯು ಸಾಂಪ್ರದಾಯಿಕ ಮೌಲ್ಯಗಳು ಮತ್ತು ವ್ಯಕ್ತಿಯಂತರ್ಗತ ಸಂಬಂಧಗಳ ಮೇಲೆ ಪ್ರಬಲವಾದ ನಿರ್ಬಂಧ ಹೇರಿತು ಎಂದಿದ್ದಾರೆ. ಇನ್ನು ಪೋಪ್ಪಮ್‌ರವರು ಮನುಷ್ಯ ಇಂದು ಮುಕ್ತವಾಗಿದ್ದಾನೆ ಸಾಮಾಜಿಕ ಜೀವನದಲ್ಲಿ ಇಂದು ರಹಸ್ಯ ಮತ್ತು ನಿಯಂತ್ರಣಗಳು ಮಿಥ್ಯೆಗಳಾಗಿವೆ ಎಂದಿದ್ದಾರೆ. ರೋಲ್ವಿನ್ ಮತ್ತು ಸೀನಿ (1973) ಮನುಷ್ಯ ಇಂದು ಬಹಳ ಅನ್ವೇಷಣಾಶೀಲನಾಗಿದ್ದಾನೆ ಮತ್ತು ಮೂಲಭೂತ ಸಮಸ್ಯೆಗೂ ತಕ್ಷಣ ಪರಿಹಾರಕ್ಕಾಗಿ ಹಾತೊರೆಯುತ್ತಾನೆ ಎಂದಿದ್ದಾರೆ. ಈ ಮೇಲಿನ ಸಮಾಜ ವಿಜ್ಞಾನಿಗಳ ವಾದವೇನೆಂದರೆ, ದೃಷ್ಟಿಕೋನದಲ್ಲಾದ ಬದಲಾವಣೆ ಮತ್ತು ಸಮಾಜ ವ್ಯವಸ್ಥೆಯಲ್ಲಿ ವ್ಯಕ್ತಿಯ ಅಂತಸ್ತಿನಲ್ಲಾದ ಬದಲಾವಣೆ ಕ್ಯಾಂಪಸ್ ಅಶಾಂತಿಗೆ ಕಾರಣಗಳು [7] ಎಂದು ಗುರುತಿಸಿರುತ್ತಾರೆ.

ವಿದ್ಯಾರ್ಥಿ ಅಶಾಂತಿಗೆ ಮೇಲೆ ನೀಡಿದ ವಿವರಣೆಗಳು ಆ ದಿನಗಳಲ್ಲಿ ಯಥೋಚಿತವಾಗಿದ್ದವು. ಆದರೆ ಇಂದು ಇವುಗಳು ತಮ್ಮ ಪ್ರಸ್ತುತತೆಯನ್ನು ಕಳೆದುಕೊಂಡಿವೆ. ಅದಕ್ಕಾಗಿಯೇ ಈ ಸಾರ್ವತ್ರಿಕ ವಿದ್ಯಮಾನವನ್ನು ಅರ್ಥ ಮಾಡಿಕೊಳ್ಳಲು ಹೊಸ ವಿವರಣೆಗಳನ್ನು ಇಂದು ನೀಡಲಾಗುತ್ತಿದೆ. ಇಂದು ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ವಿದ್ಯಾರ್ಥಿಗಳ ಅಶಾಂತಿಗೆ ಸಂಬಂಧಿಸಿದಂತೆ ಎರಡು ಸಿದ್ಧಾಂತಗಳು ಹೆಚ್ಚಿನ ಮಹತ್ವವನ್ನು ಪಡೆದುಕೊಳ್ಳುತ್ತಿವೆ. ಮೊದಲನೆಯದು ತಲೆಮಾರು ಸಂಘರ್ಷ ಸಿದ್ಧಾಂತ. ಇದನ್ನು ಓಡಿಪಲ್ ರೆಬೆಲಿಯನ್ ಎಂದು ಕೂಡ ಕರೆಯಲಾಗುತ್ತದೆ. ಈ ಸಿದ್ಧಾಂತವನ್ನು ಪ್ರತಿಪಾದಿಸಿದವರು ಲೆವಿಸ್ ಎಸ್. ಫಿವರರ್. ಎರಡನೆಯದು ಐತಿಹಾಸಿಕ ಅಪ್ರಾಸಂಗಿಕ ಸಿದ್ಧಾಂತ. ಈ ಸಿದ್ಧಾಂತವನ್ನು ಜೆಬ್ನಿವ್ ಬ್ರೆಜ್ನಿಸ್ಕಿ ಮತ್ತು ಡೇನಿಯಲ್ ಬೆಲ್ ಪ್ರತಿಪಾದಿಸಿದ್ದಾರೆ. ಒಡಿಪಲ್ ರೆಬೆಲಿಯನ್ ಸಿದ್ಧಾಂತವು ಸಾಮಾನ್ಯವಾಗಿ ಹಳೆ ತಲೆಮಾರಿನವರು ವಿದ್ಯಾರ್ಥಿಗಳನ್ನು ದ್ವೇಷಿಸುವುದರಿಂದ ಇದು ವಿದ್ಯಾರ್ಥಿ ಪ್ರತಿಭಟನೆಗೆ ದಾರಿ ಮಾಡಿಕೊಡುತ್ತದೆ ಎಂದು ಪ್ರತಿಪಾದಿಸುತ್ತದೆ. ಐತಿಹಾಸಿಕ ಅಪ್ರಾಸಂಗಿಕ ಸಿದ್ಧಾಂತವು ಪ್ರಸ್ತುತ ಸಮಾಜವು ನಮ್ಮನ್ನು ನಿರ್ಲಕ್ಷಿಸುತ್ತಿದೆ ಎನ್ನುವ ಭಾವನೆ ವಿದ್ಯಾರ್ಥಿಗಳಲ್ಲಿ ಮೂಡುವುದರಿಂದ ಅವರು ಪ್ರತಿಭಟನೆಯಲ್ಲಿ ತೊಡಗುತ್ತಾರೆ ಎಂದು ಪ್ರತಿಪಾದಿಸುತ್ತದೆ. ಮೊದಲನೆಯ ಸಿದ್ಧಾಂತವು ವಿದ್ಯಾರ್ಥಿಗಳ ಅಶಾಂತಿಗೆ ಮಾನಸಿಕ ಕಾರಣಗಳನ್ನು ಪರಿಗಣಿಸಿದರೆ ಎರಡನೆಯ ಸಿದ್ಧಾಂತವು ಸಾಮಾಜಿಕ ಕಾರಣಗಳಿಗೆ ಹೆಚ್ಚು ಒತ್ತು ನೀಡಿದೆ.[8]

ಆದರೆ ವಿದ್ಯಾರ್ಥಿ ಚಳುವಳಿಗಳ ಬಗ್ಗೆ ಆಳವಾಗಿ ಅಧ್ಯಯನವನ್ನು ನಡೆಸಿರುವ ತಜ್ಞರಾದ ಕೆನೇಥ್ ಕೇನಿಸ್ಟನ್ ಈ ಮೇಲಿನ ಎರಡು ಸಿದ್ಧಾಂತಗಳನ್ನು ಅಲ್ಲಗಳೆಯುತ್ತಾರೆ. ಅವರು ವಿದ್ಯಾರ್ಥಿ ಅಶಾಂತಿಗೆ ಬೇರೆ ಕಾರಣಗಳನ್ನೇ ನೀಡುತ್ತಾರೆ. "ಧೋರಣೆಗಳನ್ನು

ಅಥವಾ ನೀತಿಗಳನ್ನು ರೂಪಿಸುವಾಗ ಹಾಗೂ ಕಾರ್ಯಕ್ರಮಗಳನ್ನು ರಚಿಸುವಾಗ ತಮ್ಮ ಪಾಲನ್ನು ಇಂದು ವಿದ್ಯಾರ್ಥಿಗಳು ಕೇಳುತ್ತಿದ್ದಾರೆ. ಅಲ್ಲದೆ ಆಧುನಿಕ ಸಮಾಜವು ತಾರುಣ್ಯಾವಸ್ಥೆಯನ್ನು ಬೆಳವಣಿಗೆಯ ಒಂದು ವಿಶಿಷ್ಟ ಹಂತವೆಂದು ಒಪ್ಪಿಕೊಂಡಿದೆ, ಅಲ್ಲದೆ ಸಾಮಾನ್ಯವಾಗಿ ಸಮಾಜ ಜೀವನದ ಹಂತಗಳನ್ನು ವ್ಯಾಖ್ಯಾನಿಸುವುದಕ್ಕೂ ಮತ್ತು ಅದರ ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯ ಲಕ್ಷಣಗಳ ನಡುವೆ ಒಂದು ನಿಕಟವಾದ ಸಂಬಂಧವಿದೆ" ಎನ್ನುತ್ತಾರೆ. ಹೀಗಾಗಿ ನಮ್ಮ ಮಕ್ಕಳಿಗೆ ಯೋಗ್ಯವಾದ ಶಿಕ್ಷಣವನ್ನು ನೀಡಿ ಅವರನ್ನು ಜವಾಬ್ದಾರಿಯುತ ನಾಗರಿಕರನ್ನಾಗಿ ತಯಾರು ಮಾಡುವುದರ ಮುಖಾಂತರ ಸಮಾಜದಲ್ಲಿ ಸಂಭವಿಸುವ ವಿದ್ಯಮಾನಗಳ ವಿಮರ್ಶಾತ್ಮಕ ಮೌಲ್ಯಮಾಪನ ಮಾಡುವ ಸಾಮರ್ಥ್ಯವನ್ನು ಬೆಳೆಸಿಕೊಳ್ಳಲು ಅನುವು ಮಾಡಿಕೊಡಬೇಕು.[9]

ಎಡ್ವರ್ಡ ಶಿಲ್ಸ್ ಅವರು ತಮ್ಮ "ಡ್ರೀಮ್ಸ್ ಆಫ್ ಪ್ಲಾನಿಟ್ಯೂಡ್ ನೈಟ್ಮೇರ್ಸ್ ಆಫ್ ಸ್ಕೇರ್ಸಿಟಿ" ಎಂಬ ಲೇಖನದಲ್ಲಿ ವಿದ್ಯಾರ್ಥಿ ಸಂಘರ್ಷಕ್ಕೆ ಭಿನ್ನವಾದ ಕಾರಣಗಳನ್ನು ನೀಡುತ್ತಾರೆ. ಅವರ ಪ್ರಕಾರ "ವಿಶ್ವವಿದ್ಯಾಲಯದ ಮೌಲ್ಯಗಳು ಮತ್ತು ಸಮಾಜದ ಮೌಲ್ಯಗಳ ನಡುವೆ ಸಂಘರ್ಷವಿದೆ. ಸಮಾಜದ ಒಂದು ಮಾದರಿಯಾಗಿ ವಿಶ್ವವಿದ್ಯಾಲಯವಿರಬೇಕೆಂದು ಎಲ್ಲರೂ ಬಯಸುತ್ತಾರೆ. ವಿಶ್ವವಿದ್ಯಾಲಯ ಸಾರ್ವತ್ರಿಕತೆಯ ಮತ್ತು ಮೆರಿಟೋಕ್ರ್ಯಾಟಿಕ್ ಗುಣಗಳನ್ನು ಹೊಂದಿದ್ದರೆ ಸಮಾಜ ಈ ಗುಣಗಳನ್ನು ಹೊಂದಿರುವದಿಲ್ಲ. ಇದು ವಿಶ್ವವಿದ್ಯಾಲಯದ ಮೌಲ್ಯಗಳು ಮತ್ತು ಸಮಾಜ ಮೌಲ್ಯಗಳ ನಡುವಿನ ಸಂಘರ್ಷಕ್ಕೆ ಅವಕಾಶ ಮಾಡಿಕೊಡುತ್ತದೆ"[10] ಎಂದಿದ್ದಾರೆ.

ಭಾರತದಲ್ಲಿ ವಿದ್ಯಾರ್ಥಿ ಚಳುವಳಿಗೆ ಸಂಬಂದಿಸಿದಂತೆ ವೈವಿಧ್ಯಮಯವಾದ ಅಭಿಪ್ರಾಯಗಳನ್ನು ವಿದ್ವಾಂಸರು ವ್ಯಕ್ತಪಡಿಸಿರುತ್ತಾರೆ. ಕೆಲವರು ಭಾರತದಲ್ಲಿ ಅಂಥಹ ಚಳುವಳಿ ಅಸ್ತಿತ್ವದಲ್ಲಿದೆಯೇ? ಎಂದು ಪ್ರಶ್ನಿಸಿರುತ್ತಾರೆ. ಎಡ್ವರ್ಡ ಶೀಲ್ಸ್ "ಸ್ಟುಡೆಂಟ್ ಪೊಲಿಟಿಕ್ಸ್ ಅಂಡ್ ಯುನಿವರ್ಸಿಟೀಸ್" ಎಂಬ ಲೇಖನದಲ್ಲಿ "ಮೇಲಿಂದ ಮೇಲೆ ಗಲಭೆಯಾಗದೆ, ನಿಜವಾದ ಅರ್ಥದಲ್ಲಿ ಒಂದು ಚಳವಳಿಯೆನಿಸಿಕೊಳ್ಳಬೇಕಾದರೆ ಅಲ್ಲಿ ಒಂದು ಸೈದ್ಧಾಂತಿಕ ಹಿನ್ನೆಲೆ ಇರಲೇಬೇಕು. ಸಿದ್ಧಾಂತ ಮತ್ತು ಚಳವಳಿಗಳೂ ವ್ಯವಸ್ಥೆ ಅಥವಾ ಸಂಸ್ಥೆಗಳಿಗಾಗಿ ಇರುವಂಥವುಗಳೇ ಹೊರತು ಪ್ರಾಸಂಗಿಕ ಮತ್ತು ನಿರ್ದಿಷ್ಟ ಕುಂದುಕೊರತೆಗಳಿಗಾಗಿ ಇರುವಂಥವುಗಳಲ್ಲ" ಎಂದಿದ್ದಾರೆ. ಒಂದು ಸರಳ ಸತ್ಯವೇನೆಂದರೆ ಭಾರತದಲ್ಲಿ ವಿದ್ಯಾರ್ಥಿಗಳು ಸುಧಾರಣೆಗಳಿಗಾಗಿ ಪ್ರತಿಭಟಿಸುವದಿಲ್ಲ. ಅವರು ಯಾವುದೇ ದೂರಗಾಮಿ ಉದ್ದೇಶಗಳನ್ನು ಹೊಂದಿರುವದಿಲ್ಲ. ವಿದ್ಯಾರ್ಥಿಗಳು ವಿಶ್ವವಿದ್ಯಾಲಯದ ಉಪಕುಲಪತಿಯ ಮೇಲೆ ಹಲ್ಲೆ ಮಾಡುತ್ತಾರೆ ಆದರೆ ಅವರ ಅಧಿಕಾರ ಕಡಿತಗೊಳಿಸಬೇಕೆಂದು ಪ್ರತಿಭಟಿಸುವುದಿಲ್ಲ. ಹಾಗೆಯೇ ಪೋಲೀಸರ ಮೇಲೆ ಆಕ್ರಮಣ ಮಾಡುತ್ತಾರೆ ಆದರೆ

ಪೋಲೀಸರ ಕಾರ್ಯವಿಧಾನದ ಬದಲಾವಣೆಗಳಿಗಾಗಿ ಹೋರಾಟವನ್ನು ಮಾಡುವುದಿಲ್ಲ. ಬಂಡಾಯ ವಿದ್ಯಾರ್ಥಿಗಳು ಪ್ರಭುತ್ವದ ಕುರಿತು ಗೌರವ ಇಟ್ಟುಕೊಂಡಿರುವುದಿಲ್ಲ. ಏಕೆಂದರೆ ವ್ಯವಸ್ಥೆ ಭ್ರಷ್ಟ ಮತ್ತು ಅಸಮರ್ಥವಾಗಿದೆ ಎನ್ನುವುದು ಅವರ ಭಾವನೆ. ಹೀಗಾಗಿ ಪ್ರಭುತ್ವ ವಿದ್ಯಾರ್ಥಿಗಳ ಸಮಸ್ಯೆಗಳನ್ನು ಪರಿಹರಿಸುವ ಬದಲು ಅವುಗಳಿಂದ ದೂರ ಉಳಿಯಲು ಪ್ರಯತ್ನಿಸುತ್ತದೆ. ಇದರ ಒಟ್ಟು ಫಲಿತಾಂಶವೆನೆಂದರೆ ವಿದ್ಯಾರ್ಥಿ ಪ್ರತಿಭಟನೆಗಳು ಚಳುವಳಿಗಳಾಗಿ ರೂಪುಗೊಳ್ಳುವಲ್ಲಿ ವಿಫಲವಾಗುತ್ತದೆ. ವ್ಯವಸ್ಥೆಯ ಅಮೂಲಾಗ್ರ ಬದಲಾವಣೆಗಳು ಇಂತಹ ಪ್ರತಿಭಟನೆಗಳಿಂದ ಸಾಧ್ಯವಾಗುವುದಿಲ್ಲ.

ಈ ಮೇಲಿನ ವಾದದಲ್ಲಿ ಸತ್ಯಾಂಶವಿದ್ದರೂ, ಭಾರತದಲ್ಲಿ ವಿದ್ಯಾರ್ಥಿ ಚಳವಳಿಗಳೇ ನಡೆದಿರುವುದಿಲ್ಲವೆಂದು ಹೇಳಿದರೆ ತಪ್ಪಾಗುತ್ತದೆ. ಇಂದು ವಿದ್ಯಾರ್ಥಿಗಳು ತೀವ್ರ ಸಾಮಾಜಿಕ ಬದಲಾವಣೆಯ ಪ್ರಕ್ರಿಯೆಯಲ್ಲಿ ಸಿಲುಕಿಕೊಂಡಿದ್ದಾರೆ. ಭಾರತದ ನಿಜವಾದ ಸಮಸ್ಯೆ ವಿದ್ಯಾರ್ಥಿ ಅಶಿಸ್ತು, ಭ್ರಷ್ಟಾಚಾರ ಅಥವಾ ಪಕ್ಷ ರಾಜಕೀಯವಲ್ಲ. ನಿಜವಾದ ಸಮಸ್ಯೆ ಆಳವಾಗಿ ಬೇರೂರಿರುವುದು ಸಮಾಜ ಬದಲಾವಣೆಯಲ್ಲಿ. ದೇಶದಲ್ಲಿ ವಿದ್ಯಾರ್ಥಿ ಚಳವಳಿಯು ರಾಷ್ಟ್ರೀಯ ಚಳವಳಿಯ ಭಾಗವಾಗಿರುವುದನ್ನು ನಾವು ಇಲ್ಲಿ ನೆನಪಿಸಿಕೊಳ್ಳಬೇಕು. 1942 ಭಾರತ ಬಿಟ್ಟು ತೊಲಗಿ ಚಳವಳಿಯು ವಿದ್ಯಾರ್ಥಿ ಕ್ರಿಯಾಶೀಲತೆಗೆ ತಕ್ಕ ಉದಾಹರಣೆಯಾಗಿದೆ.

ಭಾರತದಲ್ಲಿ ವಿದ್ಯಾರ್ಥಿ ಚಳುವಳಿಗಳು ಬೇರೆ ಬೇರೆ ಹಂತಗಳಲ್ಲಿ ವಿಕಾಸಗೊಂಡಿರುವುದನ್ನು ಹಿಂದಿನ ಶತಮಾನದಲ್ಲಿ ನಾವು ಗಮನಿಸಬಹುದು. 19ನೇ ಶತಮಾನದ ಮೊದಲ ಅರ್ಧ ಭಾಗದಲ್ಲಿ ಭಾರತದಲ್ಲಿ ಅನೇಕ ಸಾಮಾಜಿಕ ಸುಧಾರಣೆಯ ಚಳುವಳಿಗಳು ನಡೆದಿದ್ದು, ಅದರಲ್ಲಿ ವಿದ್ಯಾರ್ಥಿಗಳೂ ಭಾಗವಹಿಸಿದ್ದರು. ಸಮಾಜ ಸುಧಾರಣೆಯ ಉದ್ದೇಶವನ್ನು ಇಟ್ಟುಕೊಂಡು ವಿದ್ಯಾರ್ಥಿಗಳು ಸಂಘಟನೆಗಳನ್ನು ಸ್ಥಾಪಿಸಿಕೊಂಡರು.

1857ರ ಸಿಪಾಯಿ ದಂಗೆಯ ನಂತರ, ಭಾರತೀಯ ಸಮಾಜದಲ್ಲಿ ರಾಜಕೀಯ ಪ್ರಜ್ಞೆ ಜಾಗೃತವಾಯಿತು ಮತ್ತು ವಿದ್ಯಾರ್ಥಿ ಸಮುದಾಯವು ಅದರಿಂದ ಪ್ರಭಾವಿತವಾಯಿತು. 1875ರಲ್ಲಿ ಆನಂದ ಮೋಹನ ಭೋಸ್ ಎಂಬುವವರು 'ಸ್ಟುಡೆಂಟ್ ಅಸೋಸಿಯೆಷನ್' ಎಂಬ ವಿದ್ಯಾರ್ಥಿ ಸಂಘಟನೆಯನ್ನು ಸ್ಥಾಪಿಸಿದರು. ಆ ಸಮಯದಲ್ಲಿ ಮೆಟ್ರೋ ಪಾಲಿಟನ್ ಕಾಲೇಜಿನ ಅಧ್ಯಾಪಕರಾದ ಸುರೇಂದ್ರನಾಥ ಬ್ಯಾನರ್ಜಿಯವರು ರಾಷ್ಟ್ರದ ಹಿತದೃಷ್ಟಿಯಿಂದ ವಿದ್ಯಾರ್ಥಿ ಸಮುದಾಯದಲ್ಲಿ ರಾಜಕೀಯ ಪ್ರಜ್ಞೆ ಮೂಡಿಸಲು ಪ್ರಯತ್ನಿಸಿದರು. ನಂತರ 1893ರಲ್ಲಿ ಅಶುತೋಷ ಮುಖರ್ಜಿಯವರ ನಾಯಕತ್ವದಲ್ಲಿ ವಿದ್ಯಾರ್ಥಿಗಳು ಸುರೇಂದ್ರನಾಥ ಬ್ಯಾನರ್ಜಿಯವರ ನ್ಯಾಯ ವಿಚಾರಣೆಯನ್ನು ವಿರೋಧಿಸಿ ಹೋರಾಟಗಳನ್ನು ನಡೆಸಿದರು.

1885ರಲ್ಲಿ ಸ್ಥಾಪಿತವಾದ ರಾಷ್ಟ್ರೀಯ ಕಾಂಗ್ರೆಸ್ಸಿನ ಮೃದು ಧೋರಣೆಗಳಿಗೆ ಬಂಗಾಳದ ಯುವಕರು ಅದರಲ್ಲೂ ವಿದ್ಯಾರ್ಥಿಗಳು ಅತೃಪ್ತರಾಗಿದ್ದರು. ಕ್ರಾಂತಿಕಾರಿ ಮಾರ್ಗದಿಂದ ಮಾತ್ರ ದೇಶದ ಸ್ವಾತಂತ್ರ್ಯ ಗಳಿಸಬಹುದು[11] ಎಂದು ಅವರು ಬಲವಾಗಿ ನಂಬಿದ್ದರು.

1905ರಲ್ಲಿ ಬ್ರಿಟಿಷರು ಬಂಗಾಳವನ್ನು ಧರ್ಮದ ನೆಲೆಯಲ್ಲಿ ವಿಭಜಿಸುವುದನ್ನು ವಿದ್ಯಾರ್ಥಿಗಳು ಉಗ್ರವಾಗಿ ಪ್ರತಿಭಟಿಸಿದರು. ಬಂಗಾಳ ವಿಭಜನೆ ವಿರೋಧದ ಹೋರಾಟ 20ನೇ ಶತಮಾನದ ವಿದ್ಯಾರ್ಥಿ ಕ್ರಿಯಾಶೀಲತೆಯ ಮಹಾ ಸಾಧನೆ ಅಥವಾ ಹೆಗ್ಗುರುತು ಎಂದು ಪರಿಗಣಿಸಲಾಗಿದೆ. ಕಲ್ಕತ್ತಾದ ಈಡನ್ ಹಿಂದೂ ಹಾಸ್ಟೆಲಿನ ವಿದ್ಯಾರ್ಥಿಗಳು ಲಾರ್ಡ ಕರ್ಜನ್‌ರವರ ಪ್ರತಿಕೃತಿಯನ್ನು ದಹಿಸಿದರಲ್ಲದೆ, ಪರೀಕ್ಷೆಗಳನ್ನು ಬಹಿಷ್ಕರಿಸಿ ಪ್ರತಿಭಟಿಸಿದರು.[12] ಬಂಗಾಳ ವಿಭಜನೆ ವಿರೋಧಿ ಚಳುವಳಿಯೂ ವಿದ್ಯಾರ್ಥಿಗಳ ಸಕ್ರಿಯ ಭಾಗವಹಿಸುವಿಕೆಯಿಂದ ಒಂದು ಸ್ಪಷ್ಟ ಸ್ವರೂಪ ಪಡೆದುಕೊಂಡಿತ್ತು.

ಭಾರತೀಯ ವಿದ್ಯಾರ್ಥಿಗಳು ದೇಶದ ಸ್ವಾತಂತ್ರ್ಯ ಚಳವಳಿಗೆ ಅರ್ಥ ಪೂರ್ಣವಾದ ಕೊಡುಗೆಯನ್ನು ನೀಡಿದ್ದಾರೆ. ಬಾಲ ಗಂಗಾಧರ ತಿಲಕ ಮತ್ತು ಮಹಾತ್ಮ ಗಾಂಧಿಜಿಯವರ ನೇತ್ರತ್ವದಲ್ಲಿ ವಿದ್ಯಾರ್ಥಿ ಸಮುದಾಯ ಮಾಸ್ ಪೊಲಿಟಿಕ್ಸ್‌ಗೆ ತನ್ನದೆ ಆದ ಕೊಡುಗೆಯನ್ನು ನೀಡಿದೆ. ಭಾರತದ ವಿದ್ಯಾರ್ಥಿಗಳು 1917ರಲ್ಲಿ ರಷಿಯಾದಲ್ಲಿ ಸಂಭವಿಸಿದ ಅಕ್ಟೋಬರ್ ಕ್ರಾಂತಿಯಿಂದ ತುಂಬಾ ಪ್ರಭಾವಿತಕ್ಕೊಳಗಾಗಿದ್ದರು. ಅಷ್ಟೇ ಅಲ್ಲದೆ ಯುರೋಪಿನ ವಿಚಾರಧಾರೆಗಳಿಂದಲೂ ಸಾಕಷ್ಟು ಪ್ರಭಾವಕ್ಕೊಳಗಾಗಿ ಉದಾತ್ತ ಕಾರಣಗಳಿಗಾಗಿ ಹೋರಾಡಲು ಕಂಕಣ ಬದ್ಧರಾದರು. ಇದಕ್ಕೆ 1920ರ ಅಸಹಕಾರ ಚಳುವಳಿ, 1919ರ ಜಲಿಯನ್‌ವಾಲಾಬಾಗ್ ಹತ್ಯಾಕಾಂಡ ಮತ್ತು 1942ರ ಭಾರತ ಬಿಟ್ಟು ತೊಲಗಿ ಚಳುವಳಿಗಳೇ ಸಾಕ್ಷಿ. ವಿದ್ಯಾರ್ಥಿ ಸಮುದಾಯದ ರಾಜಕೀಯ ಜೀವನಕ್ಕೆ ಈ ಚಳುವಳಿಗಳು ಹೊಸ ತಿರುವು ನೀಡಿದವು. ರಾಷ್ಟ್ರೀಯ ಕಾಂಗ್ರೆಸ್ಸಿನ ನಾಯಕರು ಬಹಿರಂಗವಾಗಿ ವಿದ್ಯಾರ್ಥಿಗಳು ಚಳುವಳಿಯಲ್ಲಿ ಭಾಗವಹಿಸುವಂತೆ ಕರೆ ನೀಡಿದರು. ಅಷ್ಟೇ ಅಲ್ಲದೆ ಕಾಂಗ್ರೆಸ್ಸಿನ ನಾಯಕರು ಬಂಧನಕ್ಕೊಳಗಾದಾಗ, ವಿದ್ಯಾರ್ಥಿಗಳು ಚಳುವಳಿಯ ನಾಯಕತ್ವವನ್ನು ವಹಿಸಿಕೊಂಡರು. ಅಸಹಕಾರ ಚಳುವಳಿಯು ಭಾರತದಲ್ಲಿ 'ನ್ಯಾಷನಲ್ ಸ್ಟುಡೆಂಟ್ ಫೆಡರೇಷನ್' ಎಂಬ ಸಂಘಟನೆ ರಚಿಸಲು ಪ್ರಚೋದಿಸಿತ್ತು. ಮೊಟ್ಟ ಮೊದಲ ಬಾರಿಗೆ ಅಖಿಲ ಭಾರತ ಕಾಲೇಜು ವಿದ್ಯಾರ್ಥಿಗಳ ಸಮ್ಮೇಳನವನ್ನು ಲಾಲಾ ಲಜಪತರಾಯ್ ಅವರ ಅಧ್ಯಕ್ಷತೆಯಲ್ಲಿ 1920ರಲ್ಲಿ ನಾಗಪೂರದಲ್ಲಿ ಸಂಘಟಿಸಲಾಯಿತು. ಇದೇ ವೇಳೆಗೆ ಪ್ರಾದೇಶಿಕ ವಿದ್ಯಾರ್ಥಿ ಸಂಘಟನೆಗಳು ಅಸ್ತಿತ್ವಕ್ಕೆ ಬಂದವು. ಈ ವಿದ್ಯಾರ್ಥಿ ಸಮ್ಮೇಳನಗಳ ಅಧ್ಯಕ್ಷತೆಯನ್ನು ಆಗಿನ ಪ್ರಮುಖ ವ್ಯಕ್ತಿಗಳಾದ ಲಾಲಾ ಲಜಪತರಾಯ್, ಸರೋಜಿನಿ ನಾಯ್ಡು, ಭಗವಾನದಾಸ, ಸಿ.ಆರ್.ದಾಸ್. ಮತ್ತು ಜವಾಹರಲಾಲ ನೆಹರುರವರು ವಹಿಸಿದ್ದರು ಎಂಬುವುದು ಗಮನಾರ್ಹವಾದ

ವಿಷಯ. "ಆ ಅವಧಿಯಲ್ಲಿ ಭಾರತದ ರಾಜಕೀಯ ಜೀವನದಲ್ಲಿ ವಿದ್ಯಾರ್ಥಿ ಚಳುವಳಿಯು ಅತ್ಯಂತ ಮಹತ್ವದ ಮೈಲುಗಲ್ಲಾಗಿತ್ತು"[13] ಎಂದು ಅಲ್ತಬಷ್ ಜಿ ಫೀಲಿಫ್ ಅಭಿಪ್ರಾಯ ಪಡುತ್ತಾರೆ.

1930ರ ಸವಿನಯ ಅವಿಧೇಯತೆ ಚಳುವಳಿಯ ಪರಿಣಾಮವೆನೆಂದರೆ 1936ರಲ್ಲಿ ಆಲ್ ಇಂಡಿಯಾ ಸ್ಟುಡೆಂಟ್ ಫೆಡರೇಷನ್‌ನ ರಚನೆಗೆ ಅವಕಾಶ ಮಾಡಿಕೊಟ್ಟಿತು. ಈ ಸಂಘಟನೆಯ ಮೊದಲ ಸಮ್ಮೇಳನವನ್ನು ಲಕ್ನೋದಲ್ಲಿ ಆಯೋಜಿಸಲಾಯಿತು. ಪಂಡಿತ ಜವಾಹರಲಾಲ ನೆಹರು ರವರು ಸಮ್ಮೇಳನದಲ್ಲಿ ಮಾತನಾಡಿ ರಾಷ್ಟ್ರೀಯ ಚಳುವಳಿಯಲ್ಲಿ ವಿದ್ಯಾರ್ಥಿಗಳು ಭಾಗವಹಿಸುವುದು ಅವರ ಪವಿತ್ರ ಕರ್ತವ್ಯವಾಗಿದೆ. ಪ್ರೋಲೆಟೆರಿಯನ್ ಕಾರ್ಮಿಕರ ಜೊತೆಗೂಡಿ ವಿದ್ಯಾರ್ಥಿಗಳು ರಾಷ್ಟ್ರೀಯ ಚಳುವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸಬೇಕೆಂದು ಕರೆ ನೀಡಿದರು. AISF ಮೊಟ್ಟ ಮೊದಲ ಬಾರಿಗೆ ಕಾಂಗ್ರೆಸ್ ಸರ್ಕಾರವಿರುವ ಏಳು ರಾಜ್ಯಗಳಲ್ಲಿ ತನ್ನ ಕೆಲವು ಶೈಕ್ಷಣಿಕ ಬೇಡಿಕೆಗಳನ್ನು ಮುಂದೆ ಇಟ್ಟಿತ್ತು. ಅವುಗಳೆಂದರೆ 1) ಶೈಕ್ಷಣಿಕ ಶುಲ್ಕ ಕಡಿತ ಮಾಡುವುದು. 2) ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ನೀಡುವುದು. 3) ಪಠ್ಯ ಪುಸ್ತಕಗಳಿಂದ ರಾಷ್ಟ್ರ ವಿರೋಧಿ ವಿಚಾರಧಾರೆಗಳನ್ನು ತೆಗೆದು ಹಾಕುವುದು 4) ದೇಶಿಯ ಭಾಷೆಗಳಲ್ಲಿ ಶಿಕ್ಷಣ ನೀಡುವುದು 5) ವಿಶ್ವವಿದ್ಯಾಲಯಗಳು ವಿದ್ಯಾರ್ಥಿ ಸಂಘಟನೆಗಳಿಗೆ ಮಾನ್ಯತೆ ನೀಡುವುದು 6) ವಿಶ್ವವಿದ್ಯಾಲಯ ಆಡಳಿತ ಮಂಡಳಿಯಲ್ಲಿ ವಿದ್ಯಾರ್ಥಿಗಳಿಗೆ ಪ್ರಾತಿನಿಧ್ಯ ನೀಡುವುದು ಮತ್ತು 7) ಕೋಮುವಾದಿ ವಿದ್ಯಾರ್ಥಿ ಸಂಘಟನೆಗಳನ್ನು ನಿಷೇಧಿಸುವುದು.[14] ಇಲ್ಲಿ ಒಂದು ಗಮನಿಸಬೇಕಾದ ವಿಷಯವೆನೆಂದರೆ AISF ಆ ಸಮಯದಲ್ಲಿಟ್ಟ ಬೇಡಿಕೆಗಳು ಮುಂದೆ ದೇಶ ಸ್ವಾತಂತ್ರ್ಯವಾದ ಮೇಲೆ ಅದರ ಕೆಲವು ವಿಚಾರಗಳನ್ನು ಸಂವಿಧಾನದಲ್ಲಿ ಅಳವಡಿಸಿರುವುದು ವಿದ್ಯಾರ್ಥಿ ಸಂಘಟನೆಗಳ ಸಾಧನೆಗೆ ಹಿಡಿದ ಕನ್ನಡಿ ಎಂದು ಹೇಳಬಹುದು. 1930ರಲ್ಲಿ ಧರ್ಮದ ಆಧಾರದ ಮೇಲೆ ಹಿಂದೂ ಸ್ಟುಡೆಂಟ್ ಫೆಡರೇಷನ್ ಸ್ಥಾಪಿಸಲಾಯಿತು. ಈ ಸಂಘಟನೆಗೆ ಪ್ರತಿಯಾಗಿ 1937ರಲ್ಲಿ ಮುಸ್ಲಿಂ ಸ್ಟುಡೆಂಟ್ ಫೆಡರೇಷನ್ ರಚಿಸಲಾಯಿತು. ವಿದ್ಯಾರ್ಥಿ ಸಮುದಾಯವು ಧರ್ಮದ ಆಧಾರದ ಮೇಲೆ ವಿಭಜನೆ ಆದದ್ದು ಈ ದೇಶದ ದುರಂತವೆಂದೇ ಹೇಳಬಹುದು. ಅಷ್ಟೇ ಅಲ್ಲದೆ ಕೋಮುವಾದಿ ನೆಲೆಯಲ್ಲಿ ವಿದ್ಯಾರ್ಥಿ ಸಮುದಾಯವು ವಿಭಜನೆಯಾದುದ್ದು ರಾಷ್ಟ್ರೀಯ ಮತ್ತು ವೈಚಾರಿಕ ವಿದ್ಯಾರ್ಥಿ ಸಂಘಟನೆಗಳಿಗೆ[15] ದೊಡ್ಡ ಹೊಡೆತ ನೀಡಿತ್ತು.

ದೇಶ ಸ್ವಾತಂತ್ರ್ಯಗಳಿಸಿದ ನಂತರ, ವಿದ್ಯಾರ್ಥಿ ಚಳುವಳಿಗಳು ತಮ್ಮ ತೀವ್ರತೆಯನ್ನು ಕಳೆದುಕೊಂಡವು. ಸ್ವಾತಂತ್ರ್ಯ ನಂತರ, ವಿದ್ಯಾರ್ಥಿ ಚಳುವಳಿಯಲ್ಲಿ ಸಾಕಷ್ಟು ಗಮನಾರ್ಹವಾದ ಬದಲಾವಣೆಗಳಾದವು[16] ಎಂದು ಅಲ್ತ್ ಬಷ್ ಅಭಿಪ್ರಾಯಪಟ್ಟರೆ ಹಜಾರೆಯವರು

"ಸ್ವಾತಂತ್ರ್ಯ ನಂತರ ವೈಚಾರಿಕ ರಾಜಕೀಯ ಕ್ಷೀಣಿಸುವಿಕೆಯಿಂದ ಕ್ಯಾಂಪಸ್ ರಾಜಕೀಯಕ್ಕೆ ದಾರಿ ಮಾಡಿಕೊಟ್ಟಿತ್ತು. ಅಲ್ಲದೆ ವಿದ್ಯಾರ್ಥಿಗಳ ನಿರ್ದಿಷ್ಟ ಸಮಸ್ಯೆಗಳು ಮತ್ತು ಅವುಗಳ ಪರಿಹಾರಕ್ಕಾಗಿ ಈ ಸಂಘಟನೆಗಳು ತಮ್ಮ ಕಾರ್ಯ ಚಟುವಟಿಕೆಗಳನ್ನು ಸಿಮೀತಗೊಳಿಸಿದವು"[17] ಎಂದು ಅಭಿಪ್ರಾಯ ಪಡುತ್ತಾರೆ.

1950ರಲ್ಲಿ ಕಾಂಗ್ರೆಸ್ ನಾಯಕತ್ವವು ವಿದ್ಯಾರ್ಥಿಗಳು ಪಕ್ಷ ರಾಜಕೀಯದಿಂದ ದೂರ ಉಳಿಯಬೇಕು ಮತ್ತು ರಾಷ್ಟ್ರ ನಿರ್ಮಾಣ ಚಟುವಟಿಕೆಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಳ್ಳಬೇಕೆಂದು ಹೇಳಲು ಪ್ರಾರಂಭಿಸಿದರು. ಪಂಡಿತ ಜವಾಹರಲಾಲ ನೆಹರು ಅವರು "ವಿದ್ಯಾರ್ಥಿಗಳು ರಾಜಕೀಯ ಅಧ್ಯಯನ ಮಾಡಬೇಕು, ದೇಶದಲ್ಲಿ ಸಂಭವಿಸುತ್ತಿರುವ ರಾಜಕೀಯ ವಿದ್ಯಮಾನಗಳ ಅರಿವು ಇರಬೇಕು ಆದರೆ ಅವರು ಅನಾವಶ್ಯಕವಾಗಿ ರಾಜಕೀಯದಲ್ಲಿ ಭಾಗವಹಿಸಬಾರದು. ಅವರು ತಮ್ಮ ಹೆಚ್ಚಿನ ಸಮಯವನ್ನು ಓದಿನಲ್ಲಿ ತೊಡಗಿಸಿಕೊಳ್ಳಬೇಕು"[18] ಎಂದು ಹೇಳಿದರು. ಸ್ವಾತಂತ್ರ್ಯ ಪೂರ್ವದಲ್ಲಿ ವಿದ್ಯಾರ್ಥಿಗಳು ರಾಷ್ಟ್ರೀಯ ಚಳುವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸಬೇಕೆಂದು ಹೇಳಿದ ನೆಹರು ಅವರು ಸ್ವಾತಂತ್ರ್ಯ ನಂತರ ತಮ್ಮ ನಿಲುವು ಬದಲಾಯಿಸಿದ್ದು ಹಲವು ಅನುಮಾನಗಳಿಗೆ ಅವಕಾಶ ಮಾಡಿಕೊಡುತ್ತದೆ.

ಸ್ವಾತಂತ್ರ್ಯ ನಂತರ ವಿದ್ಯಾರ್ಥಿ ಪ್ರತಿಭಟನಾ ಚಳುವಳಿಯು ಅರಾಜಕೀಯಕರಣ ಮತ್ತು ಪ್ರತ್ಯೇಕೀಕರಣಗೊಳಿಸಲಾಯಿತೆಂದು ಅಲ್ತಬಷ್ ಅಭಿಪ್ರಾಯ ಪಟ್ಟಿದ್ದಾರೆ. ಈ ಪ್ರವೃತಿಗೆ ಹಲವಾರು ಕಾರಣಗಳನ್ನು ಅವರು ಗುರುತಿಸಿದ್ದಾರೆ. ಮೊದಲನೆಯದಾಗಿ ವಿದ್ಯಾರ್ಥಿ ಸಮುದಾಯದಲ್ಲಿ ಹೆಚ್ಚುತ್ತಿರುವ ವೈವಿಧ್ಯತೆ. ಈ ಕಾರಣದಿಂದಾಗಿ ಇಂದು ವಿದ್ಯಾರ್ಥಿಗಳಲ್ಲಿ ಏಕತೆ ಇಲ್ಲದಂತಾಗಿದೆ. ಎರಡನೆಯದಾಗಿ ಉದಾತ್ತ ಕಾರಣಗಳಿಗಾಗಿ ಸ್ವಾರ್ಥತ್ಯಾಗ ಮತ್ತು ಬದ್ಧತೆಯ ಉತ್ಸಾಹ ಸ್ವಾತಂತ್ರ್ಯ ನಂತರ ಕಣ್ಮರೆಯಾಗಿರುವುದು ಮತ್ತು ಇಂದು ರಾಜಕೀಯ ನಾಯಕರು ರಾಷ್ಟ್ರಪುನರ್‌ನಿರ್ಮಾಣಕ್ಕಿಂತ ಹೆಚ್ಚಾಗಿ ರಾಜಕೀಯದಲ್ಲಿ ತಮ್ಮ ಸ್ಥಾನ ಭದ್ರಪಡಿಸಿಕೊಳ್ಳುವ ನಿರೀಕ್ಷಣೆಯಲ್ಲಿರುವುದು. ಮೂರನೆಯದಾಗಿ ರಾಷ್ಟ್ರದ ರಾಜಕೀಯ ಸಂಸ್ಥೆಗಳಲ್ಲಿ ಹೆಚ್ಚುತ್ತಿರುವ ಸ್ಥಿರತೆಯು ವಿದ್ಯಾರ್ಥಿ ರಾಜಕೀಯವು ರಾಷ್ಟ್ರ ರಾಜಕೀಯದ ಮೇಲೆ ಪ್ರಭಾವ ಬೀರುವುದನ್ನು ಕಡಿಮೆಮಾಡಿತ್ತು. ನಾಲ್ಕನೆಯದಾಗಿ ಸ್ವಾತಂತ್ರ್ಯ ಪೂರ್ವ ವಿಶ್ವವಿದ್ಯಾಲಯಗಳು ಕಲಾ ಮತ್ತು ಸಮಾಜ ವಿಜ್ಞಾನಗಳಿಗೆ ಹೆಚ್ಚಿನ ಆದ್ಯತೆ ನೀಡಿದವು. ಈ ವಿಭಾಗದ ವಿದ್ಯಾರ್ಥಿಗಳು ಬೌದ್ಧಿಕ ಚಟುವಟಿಕೆಗಳಿಗೆ ಮತ್ತು ರಾಜಕೀಯ ವಿದ್ಯಮಾನಗಳಿಗೆ ಹೆಚ್ಚಿನ ಮಹತ್ವ ನೀಡುತ್ತಿದ್ದರು. ವೈಚಾರಿಕ ಪ್ರತಿಭಟನೆಯಲ್ಲಿ ಅವರು ಪಾಲ್ಗೊಳ್ಳುತ್ತಿದ್ದರು. ಆದರೆ ಸ್ವಾತಂತ್ರ್ಯ ನಂತರ ವೃತ್ತಿಪರ ಕೋರ್ಸಗಳಿಗೆ ಹೆಚ್ಚಿನ ಆದ್ಯತೆ ನೀಡಿದ್ದರಿಂದ ಈ ವಿಭಾಗದ ವಿದ್ಯಾರ್ಥಿಗಳು ರಾಜಕೀಯ ಚಟುವಟಿಕೆಗಳಲ್ಲಿ ಭಾಗವಹಿಸುವುದು ತೀರಾ

ಕಡಿಮೆ ಹೀಗಾಗಿ ಸ್ವಾತಂತ್ರ್ಯ ನಂತರ ವಿದ್ಯಾರ್ಥಿಗಳು ರಾಜಕೀಯದಲ್ಲಿ ಭಾಗವಹಿಸುವುದು ಕಡಿಮೆಯಾಯಿತು[19] ಎಂದು ಅವರು ಹೇಳಿದ್ದಾರೆ.

ಓಂ ದತ್ತ ತ್ರಿಪಾಠಿ ಅವರು ತಮ್ಮ "ಎ ಸರ್ವೆ ಆಫ್ ಸ್ಟುಡೆಂಟ್ ಆ್ಯಕ್ಟಿವಿಸಮ್ ಇನ್ ಯುನಿವರ್ಸಿಟಿ" ಎಂಬ ಸಂಶೋಧನಾ ಪ್ರಬಂಧದಲ್ಲಿ ದೇಶ ಸ್ವಾತಂತ್ರ್ಯ ಗಳಿಸಿದ ನಂತರ ಕೇಂದ್ರಾಭಿಗಾಮಿ ಶಕ್ತಿಗಳಾದ ದೇಶಭಕ್ತಿ ಮತ್ತು ರಾಷ್ಟ್ರೀಯತೆ ತಮ್ಮ ಮಹತ್ವ ಕಳೆದುಕೊಳ್ಳಲು ಪ್ರಾರಂಭಿಸಿದವು. ಇವುಗಳ ಸ್ಥಾನದಲ್ಲಿ ಕೇಂದ್ರಾಪಗಾಮಿ ಶಕ್ತಿಗಳಾದ ಪ್ರಾದೇಶಿಕತೆ, ಕೋಮುವಾದ, ಪ್ರಾಂತೀಯತೆ, ವೃತ್ತಿಪರತೆ ಮುಂತಾದವುಗಳು ಸಮಾಜದ ಮೇಲೆ ಪ್ರಭಾವ ಬೀರಲು ಪ್ರಾರಂಭಿಸಿದವು. ವಿದ್ಯಾರ್ಥಿಗಳು ಸಮಾಜದ ಭಾಗವಾಗಿದ್ದರಿಂದ ಅವರೂ ಕೂಡ ಈ ಶಕ್ತಿಗಳ ಪ್ರಭಾವಕ್ಕೆ ಒಳಗಾಗಬೇಕಾಯಿತು[20] ಎಂದು ಹೇಳಿದ್ದಾರೆ

ಸ್ವಾತಂತ್ರ್ಯ ನಂತರ, ಯಾವುದೇ ರಾಷ್ಟ್ರವ್ಯಾಪಿ ಚಳುವಳಿಗಳು ವಿದ್ಯಾರ್ಥಿ ಸಮುದಾಯದಿಂದ ಆಗಲಿಲ್ಲ. ದೇಶದಲ್ಲಿ ಎಲ್ಲಾ ವಿದ್ಯಾರ್ಥಿ ಸಂಘಟನೆಗಳು ಒಗ್ಗೂಡಿ ರಾಷ್ಟ್ರವ್ಯಾಪಿ ಚಳುವಳಿಯನ್ನು ನಡೆಸದೆ ಇರುವುದು ನಾವು ಗಮನಿಸಬೇಕಾದ ವಿಷಯ. ಇದಕ್ಕೆ ಮೂಲಕಾರಣ ವಿದ್ಯಾರ್ಥಿ ಸಮೂಹಗಳು ರಾಜಕೀಯ ಆಧಾರದ ಮೇಲೆ ವಿಭಜನೆಗೊಂಡಿರುವುದು ಆಗಿರುತ್ತದೆ. ಆದರೆ ಬೇರೆ ಬೇರೆ ರಾಜ್ಯಗಳಲ್ಲಿ ವಿದ್ಯಾರ್ಥಿ ಸಮೂಹಗಳು ಹಲವಾರು ಬೇಡಿಕೆಗಳ ಈಡೇರಿಕೆಗಾಗಿ ಹೋರಾಟ ಮಾಡಿದ್ದನ್ನು ನಾವು ನೋಡಬಹುದು ಅಷ್ಟೇ ಅಲ್ಲದೆ ಕೆಲವು ರಾಜ್ಯಗಳಲ್ಲಿ ವಿದ್ಯಾರ್ಥಿ ಪ್ರತಿಭಟನೆಯೂ ತೀವ್ರ ಸ್ವರೂಪ ಪಡೆದುಕೊಂಡು ಸರ್ಕಾರಗಳ ಬದಲಾವಣೆಗೂ ಕಾರಣೀಕರ್ತವಾದವು.

ವಿದ್ಯಾರ್ಥಿ ಚಳುವಳಿಯನ್ನು ಬೆಳೆಸಿ ಪೋಷಿಸಿಕೊಂಡುಬಂದ ಮೊದಲ ರಾಜ್ಯವೆಂದರೆ ಪಶ್ಚಿಮ ಬಂಗಾಳ. ವಿದ್ಯಾರ್ಥಿ ಕ್ರಿಯಾಶೀಲತೆಗೆ ಪಶ್ಚಿಮ ಬಂಗಾಳದ ರಾಜಧಾನಿಯಾದ ಕಲ್ಕತ್ತಾ ಕೇಂದ್ರ ಸ್ಥಳವಾಯಿತು. ವಿದ್ಯಾರ್ಥಿಗಳು ರಾಜ್ಯದ ಜನಪರ ಚಳುವಳಿಗಳಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದರು. ಟ್ರಾಮ್‌ಫೇರ್ ಸ್ಟ್ರೈಕ್, ಬಂಗಾಲ–ಬಿಹಾರ ವಿಲೀನಗೊಳಿಸುವುದು, ಬೆಲೆ ಏರಿಕೆ, ಶಿಕ್ಷಕರ ಸಂಬಳ ಹೆಚ್ಚಳ ಮುಂತಾದ ಪ್ರತಿಭಟನೆಗಳಲ್ಲಿ ವಿದ್ಯಾರ್ಥಿಗಳು[21] ನಿರ್ಣಾಯಕ ಪಾತ್ರ ವಹಿಸಿದರು.

1967ರಲ್ಲಿ ವಿದ್ಯಾರ್ಥಿಗಳು ನೇರವಾಗಿ ಚುನಾವಣಾ ಪ್ರಚಾರದಲ್ಲಿ ಭಾಗವಹಿಸಿದ್ದಲ್ಲದೆ ಮೊಟ್ಟಮೊದಲಬಾರಿಗೆ ಪಶ್ಚಿಮ ಬಂಗಾಳದಲ್ಲಿ ಕಾಂಗ್ರೆಸ್ಸೇತರ ಸಮ್ಮಿಶ್ರ ಸರ್ಕಾರ ಅಧಿಕಾರಕ್ಕೆ ಬರುವಂತೆ ಮಾಡಿದರು. 1967 ಮತ್ತು 1970ರ ಅವಧಿಯಲ್ಲಿ ಪ್ರಸಿಡೆನ್ಸಿ ಕಾಲೇಜು ಮತ್ತು ಹಿಂದೂ ಹಾಸ್ಟೆಲ್ ನಕ್ಸಲೈಟ್ ಚಟುವಟಿಕೆಗಳ ಸಕ್ರಿಯ ತಾಣಗಳಾಗಿದ್ದವು. ಅಷ್ಟೇ ಅಲ್ಲದೆ ಈ ಮಹಾ ವಿದ್ಯಾಲಯ ಒಳ್ಳೆಯ ಮಾವೊಯಿಸ್ಟ್ ನಾಯಕರನ್ನು ಹುಟ್ಟುಹಾಕಿತು.[22] ಚಾರು

ಮುಜುಮ್‌ದಾರ್ ಅವರ ನಾಯಕತ್ವದಲ್ಲಿ ಪಶ್ಚಿಮ ಬಂಗಾಳದ ಕೆಲವು ಭಾಗಗಳಲ್ಲಿ ವಿದ್ಯಾರ್ಥಿಗಳು ಗೆರಿಲ್ಲಾ ಯುದ್ಧ ಮತ್ತು ಭಯೋತ್ಪಾದನಾ ತಂತ್ರಗಳನ್ನು ಬಳಸಿಕೊಂಡರು. ಆದರೆ ಸರಕಾರದ ಕಠಿಣ ಧೋರಣೆಯಿಂದಾಗಿ ಚಳುವಳಿ ನಿರೀಕ್ಷಿತ ಯಶಸ್ಸು ಕಾಣಲಿಲ್ಲ. ಪ್ರತಿಭಾವಂತ ಯುವಕ ಮತ್ತು ಯುವತಿಯರ ಬಲಿದಾನ ಭಾರತದಲ್ಲಿ ಜನತಾ ಪ್ರಜಾಸತ್ತಾತ್ಮಕ ಕ್ರಾಂತಿಗೆ ಒಂದು ಉದಾಹರಣೆಯಾಯಿತು.

ಉತ್ತರ ಪ್ರದೇಶ ಕೂಡ ವಿದ್ಯಾರ್ಥಿ ರಾಜಕೀಯ, ಅದರಲ್ಲಿಯೂ ಶೈಕ್ಷಣಿಕ ಬಿಕ್ಕಟ್ಟಿನಲ್ಲಿ ವಿದ್ಯಾರ್ಥಿಗಳ ಪಾಲ್ಗೊಳ್ಳುವಿಕೆಯ ಪ್ರಭಾವಕ್ಕೆ ಒಳಗಾಗಬೇಕಾಯಿತು. ಬನಾರಸ, ಅಲಹಾಬಾದ ಮತ್ತು ಅಲಿಘರ ವಿಶ್ವವಿದ್ಯಾಲಯಗಳು ಮೇಲಿಂದ ಮೇಲೆ ವಿದ್ಯಾರ್ಥಿಗಳ ಪ್ರತಿಭಟನೆಯನ್ನು ಎದುರಿಸಬೇಕಾಯಿತು. ಪ್ರಾದೇಶಿಕತೆ ಮತ್ತು ರಾಜಕೀಯಕರಣವು 1958, 1965 ಮತ್ತು 1968ರಲ್ಲಿ ಬನಾರಸ ವಿಶ್ವವಿದ್ಯಾಲಯದಲ್ಲಿ ನಡೆದ ವಿದ್ಯಾರ್ಥಿ ಪ್ರತಿಭಟನೆಗೆ ಮೂಲಕಾರಣಗಳಾದವು. ಜೋಸೆಫ್ ಡಿ ಬೋನಾ ತಮ್ಮ ಅಲಹಾಬಾದ ವಿಶ್ವವಿದ್ಯಾಲಯದ ಅಧ್ಯಯನದಲ್ಲಿ, ಪ್ರಾಂತೀಯತೆ ಮತ್ತು ಕೆಳವರ್ಗದ ವಿದ್ಯಾರ್ಥಿಗಳ ಸಂಖ್ಯೆಯಲ್ಲಿ ಹೆಚ್ಚಳವು ವಿದ್ಯಾರ್ಥಿಗಳ ಅಶಾಂತಿಗೆ ಪ್ರಮುಖ ಕಾರಣಗಳಾದವು[23] ಎಂದು ಅವರು ಗುರುತಿಸಿರುತ್ತಾರೆ.

ಬಿಹಾರದಲ್ಲಿ ರಾಜಕಾರಣಿಗಳು ಮತ್ತು ಶಿಕ್ಷಕ ರಾಜಕಾರಣಿಗಳು ತಮ್ಮ ಹಿತಾಸಕ್ತಿಗಳನ್ನು ಕಾಪಾಡಿಕ್ಕೊಳ್ಳುವುದಕ್ಕೋಸ್ಕರ ಶೈಕ್ಷಣಿಕ ಸಂಸ್ಥೆಗಳನ್ನು ರಾಜಕೀಯ ವೇದಿಕೆಗಳನ್ನಾಗಿ ಉಪಯೋಗಿಸಿಕೊಂಡರು. ವಿದ್ಯಾರ್ಥಿ ಸಮುದಾಯವನ್ನು ಹಲವು ಗುಂಪುಗಳಾಗಿ ವಿಂಗಡಿಸಿ, ಅವುಗಳ ಮಧ್ಯೆ ಭಿನ್ನಾಭಿಪ್ರಾಯ ಹುಟ್ಟು ಹಾಕಿ ಆಂತರಿಕ ಹೋರಾಟಕ್ಕೆ ದಾರಿ ಮಾಡಿಕೊಟ್ಟರು.[24] ವಿದ್ಯಾರ್ಥಿಗಳು ಚುನಾವಣಾ ರಾಜಕೀಯದಲ್ಲಿ ಭಾಗವಹಿಸುವುದರ ಮುಖಾಂತರ ಕಾಂಗ್ರೆಸ್ಸೇತರ ಪಕ್ಷಗಳಿಗೆ ಬೆಂಬಲ ನೀಡಿದರು.

1974ರ ಬಿಹಾರ ವಿದ್ಯಾರ್ಥಿ ಚಳುವಳಿಯು ಭಾರತದ ವಿದ್ಯಾರ್ಥಿ ರಾಜಕೀಯದ ಒಂದು ಮಹತ್ವದ ಘಟ್ಟವಾಗಿರುತ್ತದೆ. 'ಛಾತ್ರ ಸಂಘರ್ಷ ಸಮಿತಿಯು' ಜಯಪ್ರಕಾಶ ನಾರಾಯಣರವರ ನಾಯಕತ್ವದಲ್ಲಿ ಮೊಟ್ಟಮೊದಲ ಬಾರಿಗೆ ವ್ಯಾಪಕ ಸಾಮಾಜಿಕ ಸಂಗತಿಗಳಾದ ಪ್ರಜಾಪ್ರಭುತ್ವ ಉಳಿಸಿ, ಚುನಾವಣಾ ಸುಧಾರಣೆ, ಸ್ವಜನ ಪಕ್ಷಪಾತ ಮತ್ತು ಭ್ರಷ್ಟಾಚಾರದ ನಿರ್ಮೂಲನೆ, ಅವಶ್ಯಕ ವಸ್ತುಗಳು ನ್ಯಾಯ ಬೆಲೆಗೆ ಸಿಗುವುದು ಮತ್ತು ಶಿಕ್ಷಣ ವ್ಯವಸ್ಥೆಯ ಪುನರ್ ರಚನೆ ಈ ವಿಷಯಗಳ ಮೇಲೆ ಹೆಚ್ಚು ಕೇಂದ್ರಿಕರಿಸಿತು.[25] ಸಾಮಾನ್ಯ ಜನತೆಯಿಂದ ಈ ಚಳುವಳಿಗೆ ಸಾಕಷ್ಟು ಬೆಂಬಲ ದೊರೆಯಿತು. ಆದರೆ 1974ರ ಚಳುವಳಿಯು ಸರಕಾರವನ್ನು ಅಧಿಕಾರದಿಂದ ತೆಗೆದುಹಾಕುವಲ್ಲಿ ಯಶಸ್ವಿಯಾಯಿತು. ಆದರೆ ಸಂಪೂರ್ಣ ಕ್ರಾಂತಿಯ ಕಲ್ಪನೆ ಇದ್ದಾಗಿಯೂ, ಅಸ್ತಿತ್ವದಲ್ಲಿದ್ದ ಸಾಮಾಜಿಕ ಮತ್ತು ರಾಜಕೀಯ ವ್ಯವಸ್ಥೆಯನ್ನು ಬದಲಾಯಿಸುವಲ್ಲಿ[27] ಈ ಚಳುವಳಿಯು ವಿಫಲವಾಯಿತು.

1974ರಲ್ಲಿ ಗುಜರಾತನಲ್ಲಿ ನಡೆದ ವಿದ್ಯಾರ್ಥಿ ಚಳುವಳಿಯು ವಿದ್ಯಾರ್ಥಿ ಕ್ರಿಯಾಶೀಲತೆಯ ಒಂದು ಮಹತ್ವದ ಹಂತ ಎಂದು ಹೇಳಬಹುದು. ಸಾಮಾಜಿಕ ಸಂಗತಿಗಳಾದ ಉನ್ನತ ಸ್ಥಾನಗಳಲ್ಲಿ ಮಿತಿಮೀರಿದ ಭ್ರಷ್ಟಾಚಾರ, ಕಾಳಸಂತೆ, ಬೆಲೆ ಏರಿಕೆ ಮತ್ತು ನಿರುದ್ಯೋಗದ ವಿರುದ್ಧ ವಿದ್ಯಾರ್ಥಿಗಳು ಬೀದಿಗಿಳಿದು ಪ್ರತಿಭಟಿಸಿದರು. ವಿದ್ಯಾರ್ಥಿ ಚಳುವಳಿಯ ಇತಿಹಾಸದಲ್ಲಿಯೇ ಇದು ವಿದ್ಯಾರ್ಥಿ ಶಕ್ತಿ ಎನೆಂಬುವುದಕ್ಕೆ ಸಾಕ್ಷಿಯಾಯಿತು. ಈ ಚಳುವಳಿಯು ಇಡೀ ಗುಜರಾತ ರಾಜ್ಯಾದ್ಯಂತ ಪಸರಿಸಿತ್ತಲ್ಲದೆ ಅಧಿಕಾರದಲ್ಲಿದ್ದ ಕಾಂಗ್ರೆಸ್ ಸರಕಾರವನ್ನು ಕೆಳಗಿಳಿಸಿತು. ಅಷ್ಟೇ ಅಲ್ಲದೆ ವಿಧಾನ ಸಭೆ ವಿಸರ್ಜಿಸುವಂತೆ ಪ್ರಧಾನ ಮಂತ್ರಿಯವರ ಮೇಲೆ ಒತ್ತಡ ಹೇರಿತು. ಸಮಾಜೋ–ಆರ್ಥಿಕ ವಿಷಯಗಳಿಗೆ[28] ಈ ಚಳುವಳಿಯು ಹೆಚ್ಚಿನ ಆದ್ಯತೆ ನೀಡಿತು.

1973–74ರ ಗುಜರಾತ ಮತ್ತು ಬಿಹಾರದಲ್ಲಾದ ಚಳುವಳಿಗಳು ಇಂದಿರಾಗಾಂಧಿಯವರ ಆಡಳಿತವನ್ನು ಸಾಮಾನ್ಯ ಜನತೆ ವಿರೋಧಿಸುವಂತೆ ಮಾಡುವಲ್ಲಿ ಯಶಸ್ವಿಯಾದವು. ಆದರೆ ಸಾಮಾಜಿಕ– ರಾಜಕೀಯ ವ್ಯವಸ್ಥೆಯಲ್ಲಿ ಗಮನಾರ್ಹವಾದ ಬದಲಾವಣೆ ಮಾಡುವಲ್ಲಿ ವಿಫಲವಾದವು. ವಿದ್ವಾಂಸ ಥಕರನ್ ಪಿ.ಕೆ.ಮೈಕಲ್ ಹೇಳುವಂತೆ "ವಿದ್ಯಾರ್ಥಿಗಳು ಚಳುವಳಿಯನ್ನು ಹುಟ್ಟುಹಾಕಬಹುದು, ಮುನ್ನಡೆಸಬಹುದು ಎಂಬುವುದನ್ನು ಗುಜರಾತ ಮತ್ತು ಬಿಹಾರ ಚಳುವಳಿಗಳು ರುಜುವಾತುಪಡಿಸಿವೆ. ಆದರೆ ಇದರರ್ಥ ನಿಜವಾದ ಕ್ರಾಂತಿಕಾರಿ ಚಳುವಳಿಯನ್ನು ವಿದ್ಯಾರ್ಥಿಗಳು ಮುನ್ನಡೆಸಿಕೊಂಡು ಹೋಗುವ ಸಾಮರ್ಥ್ಯ ಇದೆ ಎಂದು ಅರ್ಥವಲ್ಲ. ಏಕೆಂದರೆ ಸಾಮಾಜಿಕ ಪ್ರಗತಿಯ ಶಕ್ತಿಗಳು ಉತ್ಪಾದನಾ ಸಂಬಂಧಿ ಮೇಲೆ ಅವಲಂಬನೆಯಾಗಿವೆ. ಆದಕಾರಣ ವಿದ್ಯಾರ್ಥಿಗಳು, ಕಾರ್ಮಿಕರಿಗೆ ಹಾಗೂ ರೈತರಿಗೆ ತಮ್ಮ ಬೆಂಬಲ ನೀಡಬಹುದೇ ಹೊರತು ತಾವೇ ಕ್ರಾಂತಿಕಾರಿ ಬದಲಾವಣೆ ಚಳುವಳಿಯ ನಾಯಕತ್ವದ ಜವಾಬ್ದಾರಿ ವಹಿಸುವ ಸಾಮರ್ಥ್ಯ ಹೊಂದಿಲ್ಲವೆಂದು[29] ಸ್ಪಷ್ಟ ಪಡಿಸಿದ್ದಾರೆ.

1950ರಲ್ಲಿ ಆಂಧ್ರ ಪ್ರತ್ಯೇಕ ರಾಜ್ಯ ಚಳುವಳಿಯಲ್ಲಿ ವಿದ್ಯಾರ್ಥಿಗಳು ಅತ್ಯಂತ ಮಹತ್ವದ ಪಾತ್ರ ವಹಿಸಿದರು. ರಾಜ್ಯದಲ್ಲಿ ನಡೆಯುತ್ತಿರುವ ನಕ್ಸಲೈಟ್ ಚಳುವಳಿಗೆ ಪ್ರಗತಿಪರ ವಿದ್ಯಾರ್ಥಿ ನಾಯಕರು ಸಹಾನುಭೂತಿಯುಳ್ಳವರಾಗಿದ್ದಾರೆ. ತೆಲಂಗಾಣ ಪ್ರತ್ಯೇಕ ರಾಜ್ಯ ಬೇಡಿಕೆಯ ಪ್ರತಿಭಟನೆಯಲ್ಲಿಯೂ ವಿದ್ಯಾರ್ಥಿಗಳು ಮುಂಚೂಣಿಯಲ್ಲಿರುವುದು ಗಮನಿಸಬೇಕಾದ ವಿಷಯ. ದಕ್ಷಿಣ ಭಾರತದಲ್ಲಿ ಜನತೆಯ ಮೇಲೆ ಹಿಂದಿಯನ್ನು ರಾಷ್ಟ್ರ ಭಾಷೆಯನ್ನಾಗಿ ಒತ್ತಾಯಪೂರ್ವಕವಾಗಿ ಹೇರಿದಾಗ ವಿದ್ಯಾರ್ಥಿಗಳು ಅದರ ವಿರುದ್ಧದ ಹೋರಾಟದಲ್ಲಿ ಪ್ರಮುಖ ಪಾತ್ರ ವಹಿಸಿದರು. ಅದರಲ್ಲಿಯೂ ತಮಿಳುನಾಡಿನ ವಿದ್ಯಾರ್ಥಿಗಳು ಪ್ರತಿಭಟನೆಯ ಮುಂಚೂಣಿಯಲ್ಲಿದ್ದು ವಿರೋಧಿಸಿದರು. ಇಂಗ್ಲಿಷ್ ಸಂಪರ್ಕ ಭಾಷೆಯನ್ನಾಗಿ ಮುಂದುವರೆಸಲು ಕೇಂದ್ರದ ಮೇಲೆ ಸಾಕಷ್ಟು ಒತ್ತಡ ಹೇರಿದರು. ಭಾಷಾಕಾರಣಕ್ಕಾಗಿಯೆ

ತಮಿಳುನಾಡಿನಲ್ಲಿ ಕಾಂಗ್ರೆಸ್ ಪಕ್ಷ ಅಧಿಕಾರ ಕಳೆದುಕೊಂಡಿತು ಮತ್ತು ವಿದ್ಯಾರ್ಥಿಗಳ ಬೆಂಬಲದಿಂದಾಗಿ ಡಿ.ಎಮ್.ಕೆ. ಪಕ್ಷ ಅಧಿಕಾರಕ್ಕೆ ಬಂದದ್ದು ಇತಿಹಾಸ.

1950ರಲ್ಲಿ ಮಹಾರಾಷ್ಟ್ರದಲ್ಲಿ ವಿದ್ಯಾರ್ಥಿಗಳು ಮರಾಠಿ ಮಾತನಾಡುವ ಜನರಿಗೆ ಪ್ರತ್ಯೇಕ ರಾಜ್ಯ ಬೇಡಿಕೆಗಾಗಿ ಹೋರಾಟ ಪ್ರಾರಂಭಿಸಿದರು. 1960ರಲ್ಲಿ ತಮ್ಮ ಈ ಹೋರಾಟದಲ್ಲಿ ಯಶಸ್ವಿಯನ್ನು ಕಂಡರು. 1978ರಲ್ಲಿ ಮರಾಠಾವಾಡ ವಿಶ್ವವಿದ್ಯಾಲಯಕ್ಕೆ ಡಾ॥ ಬಿ.ಆರ್.ಅಂಬೇಡ್ಕರ್ ಹೆಸರಿಡುವಂತೆ ವಿದ್ಯಾರ್ಥಿಗಳು ದೊಡ್ಡ ಪ್ರಮಾಣದ ಆಂದೋಲನ ನಡೆಸಿದರು. ಈ ಸಂದರ್ಭದಲ್ಲಿ ಹರಿಜನ ವಿದ್ಯಾರ್ಥಿಗಳು ಹಾಗೂ ಜಾತಿ ಹಿಂದೂ ವಿದ್ಯಾರ್ಥಿಗಳ ನಡುವೆ ದೊಡ್ಡ ಸಂಘರ್ಷವೇ[30] ಉಂಟಾಯಿತು. 1977ರಲ್ಲಿ ಸೆಂಟ್ ಗ್ಸೇವಿಯರ್ ಕಾಲೇಜಿನ ವಿದ್ಯಾರ್ಥಿಗಳು ವಾಕ್ ಸ್ವಾತಂತ್ರ್ಯ ಮತ್ತು ಪ್ರಜಾಸತ್ತಾತ್ಮಕ ಹಕ್ಕುಗಳನ್ನು ಪ್ರಾಚಾರ್ಯ ಮತ್ತು ಕಾಲೇಜಿನ ಆಡಳಿತ ಮಂಡಳಿ ಕಸಿದುಕೊಂಡಿದೆ ಎಂದು ಕಾಲೇಜಿನ ವಿರುದ್ಧ ಸಂಪು ಹೂಡಿದರು.

1978ರಲ್ಲಿ ಅಕ್ರಮ ವಿದೇಶಿಯರ ಒಳ ನುಸುಳುವಿಕೆಯ ಸಮಸ್ಯೆ ಆಸ್ಸಾಂನಲ್ಲಿ ಗಂಭೀರ ಸ್ವರೂಪ ಪಡೆದುಕೊಂಡಿತು. ಸಾಂಸ್ಕೃತಿಕವಾಗಿ, ಧಾರ್ಮಿಕವಾಗಿ ಹಾಗೂ ಭಾಷಿಕವಾಗಿ ಎಲ್ಲಿ ನಮ್ಮ ನಾಡಿನಲ್ಲೇ ನಾವು ಅಲ್ಪ ಸಂಖ್ಯಾತರಾಗುವ ಭೀತಿ ಅವರನ್ನು ಕಾಡಲಾರಂಭಿಸಿತು. ಇದರ ವಿರುದ್ಧ ವಿದ್ಯಾರ್ಥಿಗಳು ರಾಜ್ಯವ್ಯಾಪಿ ಪ್ರತಿಭಟನೆಗೆ ಮುಂದಾದರು. ಅದರಲ್ಲಿಯೂ 1979ರಲ್ಲಿ ಚುನಾವಣಾ ಆಯುಕ್ತರು ಮತದಾರರ ಪಟ್ಟಿ ಪರಿಷ್ಕರಣೆಗೆ ಆದೇಶ ಹೊರಡಿಸಿದಾಗ ಆಸ್ಸಾಂ ಅಕ್ಷರಶಃ ರಣಭೂಮಿಯಾಗಿ ಮಾರ್ಪಟ್ಟಿತ್ತು. ಆಲ್ ಆಸ್ಸಾಂ ಸ್ಟುಡೆಂಟ್ ಯುನಿಯನ್ಸ್, ಆಸ್ಸಾಂ ಗಣ ಸಂಗ್ರಾಮ್ ಪರಿಷತ್, ಕೆಲವು ಪ್ರಾದೇಶಿಕ ಪಕ್ಷಗಳು ಮತ್ತು ಸಾಂಸ್ಕೃತಿಕ ಸಂಘಟನೆಗಳು ಒಟ್ಟುಗೂಡಿ, ಅಕ್ರಮ ವಿದೇಶಿಯರ ಒಳನುಸುಳುವಿಕೆ ಕುರಿತು ಜನಸಾಮಾನ್ಯರಲ್ಲಿ ಜಾಗೃತಿ ಮೂಡಿಸಲು ರಾಜ್ಯವ್ಯಾಪಿ ಆಂದೋಲನ ಪ್ರಾರಂಭಿಸಿದವು. ಈ ಚಳುವಳಿಯ ನಾಯಕರು ರಾಜ್ಯದಲ್ಲಿ ಅಕ್ರಮವಾಗಿ ವಾಸಿಸಿರುವ ವಿದೇಶಿಯರನ್ನು ಗುರುತಿಸಿ ಅವರ ಮತದಾನದ ಹಕ್ಕನ್ನು ಕಸಿದುಕೊಳ್ಳಬೇಕೆಂದು ಕೇಂದ್ರ ಸರ್ಕಾರಕ್ಕೆ ತಮ್ಮ ಬೇಡಿಕೆಯನ್ನು ಸಲ್ಲಿಸಿದರು. 1979ನೇ ವರ್ಷವು ಸರ್ಕಾರದ ಅಸ್ಥಿರತೆ, ನಿರಂತರ ಪ್ರತಿಭಟನೆ ಮತ್ತು ಜನಾಂಗೀಯ ಹಿಂಸೆಗಳಿಗೆ ಸಾಕ್ಷಿಯಾಯಿತು. 1979ರಲ್ಲಿ ಪ್ರಾರಂಭವಾದ ವಿದ್ಯಾರ್ಥಿ ಚಳುವಳಿಯು 1985ರ ವರೆಗೆ ಕೇಂದ್ರ ಸರ್ಕಾರ ಆಸ್ಸಾಂ ಗಣ ಸಂಗ್ರಾಮ್ ಪರಿಷತ್‌ನೊಂದಿಗೆ ಒಪ್ಪಂದ ಮಾಡಿಕೊಳ್ಳುವವರೆಗೂ ಮುಂದುವರೆಯಿತು. ಮುಂದೆ ಆಸ್ಸಾಂ ವಿಧಾನಸಭೆಗೆ ಚುನಾವಣೆಗಳು ನಡೆದು ಅದರಲ್ಲಿ ಮೊಟ್ಟ ಮೊದಲಬಾರಿಗೆ ಆಸ್ಸಾಂ ಗಣ ಪರಿಷತ್ ಅಧಿಕಾರದ ಚುಕ್ಕಾಣಿ ಹಿಡಿಯಿತು. ಭಾರತದ ವಿದ್ಯಾರ್ಥಿ ರಾಜಕೀಯ ಇತಿಹಾಸದಲ್ಲಿಯೇ ಇದೊಂದು ಅತ್ಯಂತ ಅವಿಸ್ಮರಣೀಯವಾದ ಘಟನೆ[31] ಎಂದು ಅವರು ದಾಖಲಿಸಿದ್ದಾರೆ.

1975ರಲ್ಲಿ ಶ್ರೀಮತಿ ಇಂದಿರಾಗಾಂಧಿಯವರ ಸರಕಾರ ದೇಶದ ಆರ್ಥಿಕ–ಸಾಮಾಜಿಕ ಸಮಸ್ಯೆಗಳನ್ನು ಬಗೆಹರಿಸುವಲ್ಲಿ ವಿಫಲವಾದುದ್ದು, ಹಲವಾರು ಪ್ರತಿಭಟನೆಗಳಿಗೆ ಹಾಗೂ ಅತೃಪ್ತಿಗೆ ಅವಕಾಶ ಮಾಡಿಕೊಟ್ಟಿತು. ವಿದ್ಯಾರ್ಥಿ ಚಳುವಳಿಯು ಜಯಪ್ರಕಾಶ ನಾರಾಯಣರವರ ಮಾರ್ಗದರ್ಶನದಲ್ಲಿ ಬಿಹಾರ ಮತ್ತು ಗುಜರಾತನಲ್ಲಿ ಕಾಂಗ್ರೆಸ್ ಸರಕಾರವನ್ನು ಅಧಿಕಾರದಿಂದ ತೆಗೆದು ಹಾಕುವಲ್ಲಿ ಯಶಸ್ವಿಯಾಯಿತು. ಪರಿಸ್ಥಿಯ ಗಂಭೀರತೆಯನ್ನು ಅರಿತ ಶ್ರೀಮತಿ ಇಂದಿರಾಗಾಂಧಿಯವರು 1975ರಲ್ಲಿ ದೇಶದಲ್ಲಿ ಆಂತರಿಕ ತುರ್ತು ಪರಿಸ್ಥಿತಿಯನ್ನು ಘೋಷಿಸಿದರು. ಚಳುವಳಿಯ ಮೂಂಚೂಣಿಯಲ್ಲಿದ್ದ ವಿದ್ಯಾರ್ಥಿಗಳು ಕಾಂಗ್ರೆಸ್ ನಾಯಕರ ಕೆಂಗಣ್ಣಿಗೆ ಗುರಿಯಾಗಬೇಕಾಯಿತು. ವಿದ್ಯಾರ್ಥಿ ಸಂಘಗಳನ್ನು ಅರಾಜಕೀಯಕರಣ ಗೊಳಿಸಲಾಯಿತು. ವಿದ್ಯಾರ್ಥಿ ಸಂಘಗಳಿಗೆ ಚುನಾವಣೆಗಳನ್ನು ನಿಷೇಧಿಸಲಾಯಿತು. ಸೆಮಿಸ್ಟರ್ ಪದ್ಧತಿ ಜಾರಿಗೊಳಿಸಿ ವಿದ್ಯಾರ್ಥಿಗಳು ಪ್ರತಿಭಟನೆಯಲ್ಲಿ ಭಾಗವಹಿಸದಂತೆ ತಡೆಯಲಾಯಿತು. ಎಸ್.ಎಫ್.ಆಯ್. ಮತ್ತು ಎ.ಬಿ.ವಿ.ಪಿ. ಸಂಘಟನೆಯ ವಿದ್ಯಾರ್ಥಿಗಳು ಭೂಗತರಾಗಬೇಕಾಯಿತು ಇಲ್ಲವೆ ಬಂಧನಕ್ಕೊಳಗಾಗಬೇಕಾಯಿತು. ಇಷ್ಟೆಲ್ಲಾ ನಿರ್ಬಂಧನೆಗಳು ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ ಹಾಕಿದ್ದಾಗಿಯೂ ಕೂಡ, ವಿದ್ಯಾರ್ಥಿ ಚಳುವಳಿಯು ಅಳಿಯದೇ ತನ್ನ ಅಸ್ತಿತ್ವವನ್ನು ಉಳಿಸಿಕೊಂಡಿತು. ನಿಜವಾಗಿಯೂ 1975–77ರಲ್ಲಿ ತುರ್ತು ಪರಿಸ್ಥಿತಿಯ ವಿರುದ್ಧದ ಹೋರಾಟಕ್ಕೆ ವಿದ್ಯಾರ್ಥಿಗಳು ಮೌಲ್ಯಯುತವಾದ ಕೊಡುಗೆ ನೀಡಿದ್ದಾರೆ ಎಂದು ಹೇಳಿದರೆ ಉತ್ಪ್ರೇಕ್ಷೆಯಾಗಲಾರದು. ತುರ್ತು ಪರಿಸ್ಥಿತಿಯ ಸಮಯದಲ್ಲಿ ವಿದ್ಯಾರ್ಥಿಗಳ ಮೇಲಾದ ಅಹಿತಕರ ಘಟನೆಗಳು ಅವರ ಅಶಾಂತಿಗೆ ಕಾರಣವಾಯಿತು. ಮುಂದೆ 1977ರ ಸಾರ್ವತ್ರಿಕ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷವನ್ನು ಸೋಲಿಸುವಲ್ಲಿ ವಿದ್ಯಾರ್ಥಿಗಳು ನಿರ್ಣಾಯಕ ಪಾತ್ರ ವಹಿಸಿದರು. ಮೊಟ್ಟಮೊದಲಬಾರಿಗೆ ಕೇಂದ್ರದಲ್ಲಿ ಕಾಂಗ್ರೆಸ್ಸೇತರ ಸರಕಾರ ಅಧಿಕಾರಕ್ಕೆ ಬರುವಲ್ಲಿ ವಿದ್ಯಾರ್ಥಿಗಳ ಪಾತ್ರವನ್ನು ಯಾರೂ ನಿರ್ಲಕ್ಷಿಸುವಂತಿಲ್ಲ.

1990ರಲ್ಲಿ ವಿದ್ಯಾರ್ಥಿ ಪ್ರತಿಭಟನೆಯು ಹಿಂಸಾತ್ಮಕ ಸ್ವರೂಪ ಪಡೆದುಕೊಂಡಿತು. ಏಕೆಂದರೆ ಮೀಸಲಾತಿ ವಿಷಯಕ್ಕೆ ಸಂಬಂಧಿಸಿದಂತೆ ಮಂಡಲ್ ಆಯೋಗದ ಶಿಫಾರಸ್ಸುಗಳನ್ನು ಜಾರಿಗೆ ತರಲು ವಿ.ಪಿ.ಸಿಂಗ್ ಸರಕಾರ ನಿರ್ಧರಿಸಿತ್ತು. ಉತ್ತರ ಪ್ರದೇಶ, ಓರಿಸ್ಸಾ, ಚಂಡಿಘಡ ಮತ್ತು ದೆಹಲಿ ವಿದ್ಯಾರ್ಥಿಗಳು ಮಂಡಲ್ ವಿರೋಧಿ ಚಳುವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸಿದರು. ಅಷ್ಟೆ ಅಲ್ಲದೆ, ಕೆಲವು ವಿದ್ಯಾರ್ಥಿಗಳು ಆತ್ಮಾಹುತಿಗೂ ಪ್ರಯತ್ನಿಸಿದರು. ಈ ವಿಷಯ ಸಂಸತ್ತಿನಲ್ಲಿ ಚರ್ಚೆಗೂ ಅವಕಾಶಮಾಡಿಕೊಟ್ಟಿತ್ತು. ಆದರೆ ಈ ಚಳುವಳಿಯು ನಿರ್ದಿಷ್ಟ ಕಾರಣಗಳಿಂದಾಗಿ ಒಟ್ಟು ದೇಶದ ಗಮನ ಸೆಳೆಯುವುದರಲ್ಲಿ ವಿಫಲವಾಯಿತು. ಮೊದಲನೆಯದಾಗಿ, ನಗರದಲ್ಲಿರುವ ಮೇಲ್ಜಾತಿ ವಿದ್ಯಾರ್ಥಿಗಳಿಗೆ ಮಾತ್ರ

ಇದು ಸಿಮೀತವಾಯಿತು. ಎರಡನೆಯದಾಗಿ, ವಿದ್ಯಾರ್ಥಿ ಸಮುದಾಯವು ಸೆಕ್ಟೆರಿಅನ್ ಆಧಾರದ ಮೇಲೆ ವಿಭಜಿಸಿತು. ಮೂರನೆಯದಾಗಿ, ಮೀಸಲಾತಿ ಸೂಕ್ಷ್ಮ ವಿಷಯವಾದ್ದರಿಂದ ವಿದ್ಯಾರ್ಥಿ ಸಂಘಟನೆಗಳಾಗಲಿ ಅಥವಾ ರಾಜಕೀಯ ಪಕ್ಷಗಳಾಗಲಿ ಬಹಿರಂಗವಾಗಿ ಚಳುವಳಿಗೆ ಬೆಂಬಲ ನೀಡಲಿಲ್ಲ. ಆದರೆ ಈ ಚಳುವಳಿಯ ದೊಡ್ಡ ಕೊಡುಗೆಯೆಂದರೆ ಮೀಸಲಾತಿ ಪರ-ವಿರೋಧಿ ಚರ್ಚೆಗೆ ಅವಕಾಶ ಮಾಡಿಕೊಟ್ಟಿತ್ತು.

ಎಂ.ಚಂದ್ರ ಪೂಜಾರಿಯವರು ತಮ್ಮ ರಾಜಕೀಯ ಬಡತನ ಎಂಬ ಗ್ರಂಥದಲ್ಲಿ ಮೀಸಲಾತಿ ವಿಷಯವನ್ನು ಗಂಭೀರವಾಗಿ ಚರ್ಚಿಸಿದ್ದಾರೆ. ಅವರ ಪ್ರಕಾರ "ಮೀಸಲಾತಿ ಮತ್ತು ದಕ್ಷತೆಯ ಅಥವಾ ಮೀಸಲಾತಿ ಮತ್ತು ಮೆರಿಟ್ ಸಂಬಂಧ – ಜಾತಿ ಆಧಾರದಲ್ಲಿ ಮೀಸಲಾತಿ ನೀಡುವುದರಿಂದ ನಮಗೆ ಯೋಗ್ಯ ಅಭ್ಯರ್ಥಿಗಳು ಸಿಗುವುದಿಲ್ಲ ಎನ್ನುವ ವಾದದ ಹಿಂದೆ ಒಂದು ಗ್ರಹಿತ ಇದೆ. ಇದೇ ಸಂದರ್ಭದಲ್ಲಿ ಮೀಸಲಾತಿ ಒಂದು ಸಾಮಾಜಿಕ ಪರಿವರ್ತನೆಯ ಸಾಧನವೆಂದು[32] ಕೂಡ ಅವರು ವಾದಿಸಿದ್ದಾರೆ.

ಬಿ.ವಿ.ವೀರಭದ್ರಪ್ಪ "ದಕ್ಷತೆಯ ಮಾನದಂಡವನ್ನು ಮುಂದಿಟ್ಟುಕೊಂಡು ವಾದ ಮಾಡುವ ಪ್ರತಿಭಾವಂತ ಮಿತ್ರರಿಗೆ ಒಂದು ಪ್ರಶ್ನೆ. ನಮ್ಮ ದೇಶ ನಾಲ್ಕೈದು ಸಾವಿರ ವರ್ಷಗಳ ಇತಿಹಾಸದಲ್ಲಿ ಎಲ್ಲ ಉನ್ನತ ಸ್ಥಾನಗಳೂ ಪ್ರತಿಭಾವಂತರಿಗೇ ಮೀಸಲಾಗಿದ್ದುದಲ್ಲಾ, ಆದರೂ ಈ ದೇಶ ಏಕೆ ಮೌಢ್ಯ, ಅಜ್ಞಾನ, ಮತ್ತು ಬಡತನಗಳಿಗೆ ತುತ್ತಾಯಿತು? ಏಕೆ ಈ ದೇಶದ ಜನರಲ್ಲಿ ದೇಶಾಭಿಮಾನ, ಒಗ್ಗಟ್ಟುಗಳಿಲ್ಲದೆ, ಮೇಲಿಂದ ಮೇಲೆ ಪರಕೀಯರ ದಾಳಿಗೆ ತುತ್ತಾಗಬೇಕಾಯಿತು?[33] ಎಂದು ಪ್ರಶ್ನಿಸಿದ್ದಾರೆ. ಅಸ್ಗರ್ ಅಲಿ ಎಂಜಿನೀಯರ್ ಅವರು ಮೀಸಲಾತಿ ಆರ್ಥಿಕ ಕಾರಣಗಳಿಗಿಂತಲೂ ಹೆಚ್ಚಾಗಿ ಸಾಮಾಜಿಕ ಕಾರಣಗಳಿಗಾಗಿ ಅವಶ್ಯಕತೆ ಇದೆ[34] ಎಂದು ಅಭಿಪ್ರಾಯ ಪಟ್ಟಿದ್ದಾರೆ.

ಈ ವಿದ್ಯಾರ್ಥಿ ಚಳುವಳಿಗಳು ಹಾಗೂ ಪ್ರತಿಭಟನೆಯ ಸಂಕ್ಷಿಪ್ತ ಸಮೀಕ್ಷೆಯು ಕ್ಯಾಂಪಸ್ ಅಶಾಂತಿಗೆ ಕಾರಣಗಳು ಮತ್ತು ವಿದ್ಯಾರ್ಥಿ ಕ್ರಿಯಾಶೀಲತೆಯ ಮೂಲಾಧಾರ ಇವುಗಳನ್ನು ನಾವು ಇಲ್ಲಿ ಚರ್ಚಿಸಲು ಅವಕಾಶ ಮಾಡಿಕೊಡುತ್ತವೆ. ವಿದ್ಯಾರ್ಥಿ ಕ್ರಿಯಾಶೀಲತೆಯ ಮೂಲಾಧಾರವನ್ನು ಎರಡು ಗುಂಪುಗಳಾಗಿ ವಿಂಗಡಿಸಬಹುದು. ಒಂದು ವಿಶ್ವವಿದ್ಯಾಲಯ ಮೂಲಾಧಾರ, ಎರಡನೆಯದು ಸಮಾಜ ಮೂಲಾಧಾರ. ಶೈಕ್ಷಣಿಕ ಪ್ರತಿಭಟನೆಗಳು ಮೂಲಭೂತವಾಗಿ ವಿದ್ಯಾರ್ಥಿಗಳ ಹಿತಾಸಕ್ತಿಗಳ ರಕ್ಷಣೆ ಮತ್ತು ಅಭಿವೃಧಿಗೆ ಸಂಬಂಧಿಸಿದೆ. ಶಿಕ್ಷಣದ ದೋಷಪೂರಿತ ಯೋಜನೆಗಳು ಇಂದು ವಿದ್ಯಾರ್ಥಿಗಳ ಅಶಾಂತಿಗೆ ಮತ್ತು ಅಶಿಸ್ತಿಗೆ ಕಾರಣವಾಗಿದೆ. ಅಲ್ಟ್‌ಬಷ್, ಫಿಲೀಪ್ ಜಿ, "ಇಂಡಿಯಾ ಆಂಡ್ ದಿ ವರ್ಲ್ಡ್ ಯುನಿರ್ವಸಿಟಿ ಎಂಬ ಗ್ರಂಥದಲ್ಲಿ ವಿಶ್ವವಿದ್ಯಾಲಯ ಜೀವನದ ಪ್ರಮುಖ ಅಂಶವೆಂದರೆ ಭಾರತದಲ್ಲಿ ಬಹಳಷ್ಟು ವಿಶ್ವವಿದ್ಯಾಲಯಗಳನ್ನು ರಾಜಕೀಯಕರಣಗೊಳಿಸಿರುವುದು. ಈ

ಅಂಶ ವಿದ್ಯಾರ್ಥಿಗಳ ಅಶಾಂತಿಗೆ ಮತ್ತು ಕ್ರಿಯಾಶೀಲತೆಗೆ ಕಾರಣವಾಗಿದೆ. ಭಾರತೀಯ ವಿದ್ಯಾರ್ಥಿಗಳು ಸಮಾಜದ ಒಂದು ಭಾಗವಾಗಿದ್ದರಿಂದ ಸಮಾಜದ ಸಮಸ್ಯೆಗಳು ಹಾಗೂ ಒತ್ತಡಗಳು ಅವರ ಮೇಲೆ ಪ್ರಭಾವ ಬೀರುತ್ತಿವೆ. ಸಮಾಜದಲ್ಲಿರುವ ಸಮಾಜೋ–ಆರ್ಥಿಕ ಸಮಸ್ಯೆಗಳು ಹಾಗು ಸಾಮಾಜಿಕ ಬದಲಾವಣೆಯ ಪ್ರಕ್ರಿಯೆಯಲ್ಲಿ ಆಳವಾಗಿ ಬೇರೂರಿರುವ ಸಮಸ್ಯೆಗಳು ವಿದ್ಯಾರ್ಥಿ ಅಶಾಂತಿಗೆ ಪ್ರಮುಖ ಕಾರಣಗಳಾಗಿವೆ[35] ಎಂದು ಹೇಳಿದ್ದಾರೆ.

ಫೀಷರ್ ಜೋಸೆಫ್ "ದಿ ಯುನಿರ್ವಸಿಟಿ ಸ್ಟೂಡೆಂಟ್ಸ್ ಇನ್ ಸೌಥ್ ಈಸ್ಟ್ ಏಷಿಯಾ" ಎನ್ನುವ ಲೇಖನದಲ್ಲಿ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಲ್ಲಿ ವಿದ್ಯಾರ್ಥಿಗಳ ಅಶಾಂತಿಗೆ ಕಾರಣಗಳನ್ನು ಗುರುತಿಸಿರುತ್ತಾರೆ. ಮೊದಲನೆಯದಾಗಿ ತಲೆಮಾರುಗಳ ನಡುವಿನ ವಿಭಜನೆ, ಎರಡನೆಯದಾಗಿ ಸಾಧನೆ ಮತ್ತು ಉಲ್ಲಾಸಶೀಲತೆಗೆ ಇರುವ ಸೀಮಿತವಾದ ಅವಕಾಶಗಳು, ಮೂರನೆಯದಾಗಿ, ಸಾಮಾಜಿಕ ಮತ್ತು ಆರ್ಥಿಕ ಪ್ರತಿಫಲ ನೀಡುವಂತಹ ಉದ್ಯೋಗ ಅವಕಾಶಗಳ ಕೊರತೆ ಇವುಗಳು ವಿದ್ಯಾರ್ಥಿ ಅಶಾಂತಿಗೆ ಪ್ರಮುಖ ಕಾರಣಗಳು[36] ಎಂದಿದ್ದಾರೆ. ಹಜಾರೆ ಎಸ್.ಸಿ. ಯವರು " ಹಿರಿಯರ ಮತ್ತು ರಾಜಕಾರಣಿಗಳ ವರ್ತನೆ ವಿದ್ಯಾರ್ಥಿ ಸಮುದಾಯದ ಮನಸ್ಥಿತಿಯ ಮೇಲೆ ಘೋರವಾದ ಪ್ರಭಾವ ಬೀರಿದೆ. ಭಾರತದ ಸಾಮಾಜಿಕ ಮತ್ತು ರಾಜಕೀಯ ಜೀವನದ ಎಲ್ಲಾ ಲಕ್ಷಣಗಳನ್ನು ಇಂದಿನ ಶಿಕ್ಷಣ ಸಂಸ್ಥೆಗಳು ಪ್ರತಿಬಿಂಬಿಸುತ್ತಿವೆ.[37] ಆಶಿಷ್ ನಂದಿರವರು "ಭಾರತದಲ್ಲಿ ವಿದ್ಯಾರ್ಥಿಗಳು ಸಮಾಜ ಬದಲಾಣೆ ಪ್ರಕ್ರಿಯೆಯ ಕೇಂದ್ರ ಬಿಂದುಗಳು ಅಲ್ಲ, ಭವಿಷ್ಯತ್ತಿನ ಸಮಾಜದ ಏಂಟೆನಾಗಳು[38] ಅಲ್ಲವೆಂದಿದ್ದಾರೆ. ರಾಜಕೀಯದಲ್ಲಿ ತಾತ್ವಿಕತೆಯ ಕ್ಷೀಣಿಸುವಿಕೆ, ನಿಸ್ವಾರ್ಥ ಸೇವೆ ಮಾಡುವ ನಾಯಕರ ಕೊರತೆ, ರಾಜಕೀಯದಲ್ಲಿನ ಮಿತಿಮೀರಿದ ಭ್ರಷ್ಟಾಚಾರ ಮತ್ತು ರಾಜಕೀಯದ ಕುರಿತು ವಿದ್ಯಾರ್ಥಿ ಸಮುದಾಯದ ನಿರಾಸಕ್ತಿ ವಿದ್ಯಾರ್ಥಿ ಕ್ರಿಯಾಶೀಲತೆ ಹಾಗು ವಿದ್ಯಾರ್ಥಿ ಚಳುವಳಿಗಳು ಕ್ಷೀಣಿಸುವುದಕ್ಕೆ ಮೂಲಭೂತವಾದ [39]ಕಾರಣಗಳಾದವು.

ಜೋಸೆಫ್ ಡಿ.ಬೋನಾರವರು "ವಿದ್ಯಾರ್ಥಿ ರಾಜಕೀಯ ಮತ್ತು ನಾಯಕತ್ವ – ಅಲಹಾಬಾದ ವಿಶ್ವವಿದ್ಯಾಲಯ" ಸಂಬಂಧಿಸಿದಂತೆ ಅಧ್ಯಯನ ಮಾಡಿದ ಪ್ರಾಯಶಃ ಮೊದಲ ವಿದ್ವಾಂಸರಾಗಿದ್ದಾರೆ. ಅವರು ತಮ್ಮ ಸಂಶೋಧನೆಯಿಂದ ಕಂಡುಕೊಂಡ ಸತ್ಯಗಳು ಹೀಗಿವೆ. ಪೂರ್ವ ಉತ್ತರ ಪ್ರದೇಶ ಭಾಗದ ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳು ಅಲಹಾಬಾದ ವಿಶ್ವವಿದ್ಯಾಲಯದ ವಿಶಿಷ್ಟ ಲಕ್ಷಣವನ್ನು ಬದಲಾಯಿಸಿದ್ದಾರೆ. ವಿದ್ಯಾರ್ಥಿ ಸಂಘಟನೆಗಳ ಅಮೂಲಾಗ್ರ ಬದಲಾವಣೆಗೆ ಕಾರಣೀಕರ್ತರಾಗಿದ್ದಾರೆ. ಅಷ್ಟೆ ಅಲ್ಲದೆ ಸ್ವಾತಂತ್ರ್ಯ ಪೂರ್ವ, ವಿದ್ಯಾರ್ಥಿ ನಾಯಕರು ಸಾಮಾನ್ಯವಾಗಿ ಮಧ್ಯಮ ವರ್ಗದ ಕುಟುಂಬದ ಹಿನ್ನಲೆಯವರಾಗಿದ್ದು ಹಾಗೂ ಶೈಕ್ಷಣಿಕವಾಗಿ ಸಾಧನೆ ಮಾಡಿದವರಾಗಿದ್ದರು. ಆದರೆ ಸ್ವಾತಂತ್ರ್ಯ ನಂತರ ವಿದ್ಯಾರ್ಥಿ ನಾಯಕರು ಗ್ರಾಮೀಣ ಪ್ರದೇಶದ ಹಿನ್ನೆಲೆ ಹೊಂದಿದವರಾಗಿದ್ದು

ಓದಿನಲ್ಲಿ ಸಾಧಾರಣವಾಗಿರುತ್ತಾರೆ. ಅಷ್ಟೆ ಅಲ್ಲದೆ ಈ ವಿದ್ಯಾರ್ಥಿ ನಾಯಕರು ತಮ್ಮ ವಾಕ್ ಚಾತುರ್ಯದ ಮೂಲಕ ದೊಂಬಿಯನ್ನು ಒಂದು ಚಳುವಳಿಯಾಗಿ ಪರಿವರ್ತಿಸಿವ ಸಾಮರ್ಥ್ಯವನ್ನು[40] ಹೊಂದಿರುತ್ತಾರೆ.

ವಿದ್ಯಾರ್ಥಿ ನಾಯಕರ ಆಯ್ಕೆಯಲ್ಲಿ ನಿರ್ಣಾಯಕ ಪಾತ್ರ ವಹಿಸುವ ಅಂಶಗಳಾದ ಜಾತಿ, ವಯಸ್ಸು, ಮತ್ತು ದೀರ್ಘಕಾಲ ವಿಶ್ವವಿದ್ಯಾಲಯದ ಸಂಬಂಧ ಇವುಗಳ ಕುರಿತು ಪ್ರಮೋದಕುಮಾರ ಅವರು ತಮ್ಮ ಅಲಹಾಬಾದ ವಿಶ್ವವಿದ್ಯಾಲಯದ ಅಧ್ಯಯನದಲ್ಲಿ ಚರ್ಚಿಸಿದ್ದಾರೆ. ಅವರ ಪ್ರಕಾರ ವಿದ್ಯಾರ್ಥಿ ನಾಯಕರು ವಯಸ್ಸಿನಲ್ಲಿ ತಮ್ಮ ಸಹಪಾಠಿಗಳಿಗಿಂತ ಹಿರಿಯರಾಗಿರುತ್ತಾರೆ, ಮೇಲ್ಜಾತಿಯವರಾಗಿರುತ್ತಾರೆ ಹಾಗೂ ದೀರ್ಘಕಾಲ ವಿಶ್ವವಿದ್ಯಾಲಯದ ನಂಟನ್ನು ಹೊಂದಿದವರಾಗಿರುತ್ತಾರೆ.[41]

ರಾಬರ್ಟ ಸಿ. ಶಹಾ ಅವರು ತಮ್ಮ ಅಧ್ಯಯನದಲ್ಲಿ ಉಸ್ಮಾನಿಯಾ ವಿಶ್ವವಿದ್ಯಾಲಯ ಹೈದ್ರಾಬಾದದ ವಿದ್ಯಾರ್ಥಿ ನಾಯಕರುಗಳ ಲಕ್ಷಣಗಳನ್ನು ಈ ಕೆಳಗಿನಂತೆ ಪಟ್ಟಿ ಮಾಡಿರುತ್ತಾರೆ,1) ವಿದ್ಯಾರ್ಥಿ ನಾಯಕರು ಮಧ್ಯಮ ಹಾಗೂ ಮೇಲ್ಮಧ್ಯಮ ಕುಟುಂಬ ವರ್ಗಕ್ಕೆ ಸೇರಿದವರಾಗಿರುತ್ತಾರೆ. 2) ಓದಿನಲ್ಲಿ ಸಾಮಾನ್ಯರಾಗಿದ್ದು ಇಂಗ್ಲಿಷ್ ಭಾಷೆಯ ಮೇಲೆ ಒಳ್ಳೆಯ ಪ್ರಭುತ್ವ ಹಾಗೂ ವಾಕ್ ಚಾತುರ್ಯ ಹೊಂದಿದವರಾಗಿರುತ್ತಾರೆ. 3) ತಮ್ಮ ಸಹಪಾಠಿಗಳಿಗಿಂತ ವಯಸ್ಸಿನಲ್ಲಿ ಹಿರಿಯರಾಗಿರುತ್ತಾರೆ. 4) ಇವರು ಮುಂದೆ ರಾಜಕಾರಣಿಗಳಾಗುವ ಉತ್ಕಟ ಆಸೆ ಇಟ್ಟುಕೊಂಡಿರುತ್ತಾರೆ. 5) ತಮ್ಮ ಬೇಡಿಕೆಗಳು ಯಾವಾಗಲು ನ್ಯಾಯಬದ್ಧವಾದವುಗಳು[42] ಎಂಬ ಭ್ರಮೆಯಲ್ಲಿರುತ್ತಾರೆ.

ಎಸ್.ಎಮ್.ಸೈಯಿದ್ ಅವರು ಲಕ್ನೋ ವಿಶ್ವವಿದ್ಯಾಲಯ ವಿದ್ಯಾರ್ಥಿ ಸಂಘಟನೆಯ ನಾಯಕರುಗಳ ಕುರಿತಾಗಿ–1948 ರಿಂದ 1970 ರ ವರೆಗೆ ಅಧ್ಯಯನ ಮಾಡಿರುತ್ತಾರೆ. ಇವರ ಅಧ್ಯಯನದ ಫಲಶೃತಿಗಳೆಂದರೆ ವಿದ್ಯಾರ್ಥಿ ನಾಯಕರು ಹುಟ್ಟಿನಿಂದ ನಾಯಕರಾದವರಲ್ಲ ಪರಿಸ್ಥಿತಿ ಹಾಗೂ ಸಂದರ್ಭಗಳಿಗನುಗುಣವಾಗಿ ನಾಯಕರಾಗಿ ಹೊರಹೊಮ್ಮಿದವರು. ಇವರು ಯುವ ಸಂಘಟನೆಯ ಸಕ್ರಿಯ ಸದಸ್ಯರಾಗಿದ್ದು ಯಾವುದಾದರೂ ಒಂದು ರಾಜಕೀಯ ಪಕ್ಷದೊಂದಿಗೆ ಗುರುತಿಸಿಕೊಂಡಿರುತ್ತಾರೆ. ಅಷ್ಟೆ ಅಲ್ಲದೆ ವಿದ್ಯಾರ್ಥಿ ಪ್ರತಿಭಟನೆಗಳು ರಾಜಕೀಯ ಪಕ್ಷಗಳ ಪ್ರಾಯೋಜಕತ್ವದಲ್ಲಿ ನಡೆಯುತ್ತವೆ[43] ಎಂದು ತಮ್ಮ ಅಧ್ಯಯನದಲ್ಲಿ ತಿಳಿಸಿರುತ್ತಾರೆ.

ಸೈಯದ್ ರಷೀದ್ ಅಲಿ ಅವರು ಲಕ್ನೋ ವಿಶ್ವವಿದ್ಯಾಲಯದ 220 ವಿದ್ಯಾರ್ಥಿ ನಾಯಕರುಗಳನ್ನು ಸಂದರ್ಶಿಸಿ ವಿದ್ಯಾರ್ಥಿ ನಾಯಕರ ಲಕ್ಷಣಗಳನ್ನು ಈ ರೀತಿಯಾಗಿ ಪಟ್ಟಿ ಮಾಡಿರುತ್ತಾರೆ.1) 85.5% ಪ್ರತಿಶತ ನಾಯಕರು ಹಿಂದೂಗಳಾಗಿರುತ್ತಾರೆ. 2) ವಿದ್ಯಾರ್ಥಿ

ನಾಯಕತ್ವವು ಮೇಲ್ಜಾತಿ ಹಿಂದೂಗಳ ಏಕಸ್ವಾಮ್ಯವಾಗಿದೆ (93.6%) 3) ಪ್ರತಿಶತ 68% ರಷ್ಟು ವಿದ್ಯಾರ್ಥಿ ನಾಯಕರುಗಳು ಗ್ರಾಮೀಣ ಪ್ರದೇಶಕ್ಕೆ ಸೇರಿದವರಾಗಿದ್ದಾರೆ. 4) ಹೆಚ್ಚಿನ ವಿದ್ಯಾರ್ಥಿ ನಾಯಕರುಗಳು ಹಾಸ್ಟೆಲ್‌ನಲ್ಲಿ ವಾಸವಾಗಿದ್ದವರು. (60.9%) 5) ಹೆಚ್ಚಿನ ವಿದ್ಯಾರ್ಥಿ ನಾಯಕರು ವಿಶ್ವವಿದ್ಯಾಲಯದ ಸ್ನಾತಕ ಪದವೀಧರರಾಗಿದ್ದವರು.(75%) 6) ವೃತ್ತಿಪರ ಕೋರ್ಸಗಳಿಂದ ಬಂದ ವಿದ್ಯಾರ್ಥಿ ನಾಯಕರ ಸಂಖ್ಯೆ ತುಂಬಾ ಕಡಿಮೆಯಿರುವುದು. 7) ವಯಸ್ಸಿನಲ್ಲಿ ತಮ್ಮ ಸಹಪಾಠಿಗಳಿಗಿಂತ ಹಿರಿಯರಾಗಿರುವುದು.[44]

ಮತ್ತೆ ಅವರು ಮುಂದುವರೆದು ವಿದ್ಯಾರ್ಥಿ ನಾಯಕತ್ವದ ಲಕ್ಷಣಗಳನ್ನು ಹೀಗೆ ಗುರುತಿಸಿರುತ್ತಾರೆ. 1) ಸಾಮಾನ್ಯವಾಗಿ ವಿಜ್ಞಾನ ವಿಭಾಗದ ವಿದ್ಯಾರ್ಥಿಗಳು ಪ್ರತಿಭಟನೆಯಲ್ಲಿ ಭಾಗವಹಿಸುವುದು ಕಡಿಮೆ. ಸಮಾಜ ವಿಜ್ಞಾನ ವಿಭಾಗಗಳ ವಿದ್ಯಾರ್ಥಿಗಳು ಪ್ರತಿಭಟನೆಯಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಾರೆ. 2) ವಿದ್ಯಾರ್ಥಿ ನಾಯಕರು ಸ್ನಾತಕೋತ್ತರ ಪದವಿಗಿಂತ ಸ್ನಾತಕ ಪದವಿಯುವರು ಹೆಚ್ಚಿನವರಾಗಿರುತ್ತಾರೆ. 3) ಇವರು ಶೈಕ್ಷಣಿಕವಾಗಿ ಸಾಧಾರಣವಾಗಿರುತ್ತಾರೆ. 4) ಹೆಚ್ಚಿನ ವಿದ್ಯಾರ್ಥಿ ನಾಯಕರು ಪಠ್ಯೇತರ ಚಟುವಟಿಕೆಗಳಾದ ಡ್ರಾಮಾ ಮತ್ತು ಕ್ರೀಡೆಯಲ್ಲಿ ಭಾಗವಹಿಸುವುದಿಲ್ಲ[45] ಎಂಬುವುದನ್ನು ತಮ್ಮ ಅಧ್ಯಯನದಿಂದ ಸ್ಪಷ್ಟ ಪಡಿಸಿದ್ದಾರೆ.

ಟಿ.ಕೆ.ಓಮೆನ್‌ರವರು ತಮ್ಮ "ದೆಹಲಿ ವಿಶ್ವವಿದ್ಯಾಲಯದಲ್ಲಿ ವಿದ್ಯಾರ್ಥಿ ರಾಜಕೀಯ 1968–69ರ ಅವಧಿ" ಎಂಬ ಅಧ್ಯಯನದಲ್ಲಿ ವಿದ್ಯಾರ್ಥಿ ನಾಯಕರ ಸಾಮಾಜಿಕ ಹಾಗೂ ಆರ್ಥಿಕ ಹಿನ್ನೆಲೆಯನ್ನು ವಿಶ್ಲೇಷಿಸಿದ್ದಾರೆ. ಬಹುತೇಕ ವಿದ್ಯಾರ್ಥಿ ನಾಯಕರು ವ್ಯಾಪಾರ ಕುಟುಂಬದ ಹಿನ್ನೆಲೆಯಿಂದ ಬಂದವರಾಗಿದ್ದು, ನಗರದಲ್ಲಿ ಬೆಳೆದವರಾಗಿದ್ದಾರೆ. ಓದಿನಲ್ಲಿ ಸಾಧಾರಣವಾಗಿದ್ದು, ಪ್ರತಿಶತ 83.8% ರಷ್ಟು ವಿದ್ಯಾರ್ಥಿ ನಾಯಕರು ಮಾನವಿಕ, ಸಮಾಜ ವಿಜ್ಞಾನ ಹಾಗೂ ಕಾನೂನು ವಿಭಾಗಗಳ ವಿದ್ಯಾರ್ಥಿಗಳಾಗಿದ್ದಾರೆ. ಇವರು ರಾಜಕೀಯ ನಾಯಕರಾಗುವ ಉತ್ಕಟ ಆಸೆಯನ್ನು ಹೊಂದಿದವರಾಗಿದ್ದು, ಯಾವುದಾದರೊಂದು ರಾಜಕೀಯ ಪಕ್ಷದ ಜೊತೆಗೆ ಗುರುತಿಸಿಕೊಂಡಿರುತ್ತಾರೆ [46] ಎಂದು ತಿಳಿಸಿದ್ದಾರೆ.

ಅಲ್ತೆಬಷ್‌ರವರು ತಮ್ಮ " ಬಾಂಬೆಯ ವಿದ್ಯಾರ್ಥಿ ರಾಜಕೀಯ" ಎಂಬ ಸಂಶೋಧನಾ ಅಧ್ಯಯನದಲ್ಲಿ ವಿದ್ಯಾರ್ಥಿ ನಾಯಕತ್ವ ಕುರಿತು ಈ ಕೆಳಗಿನ ಅಂಶಗಳನ್ನು ಗುರುತಿಸಿರುತ್ತಾರೆ. 1) ಸ್ವಾತಂತ್ರ್ಯ ನಂತರ ವಿದ್ಯಾರ್ಥಿ ನಾಯಕತ್ವವು ಮಧ್ಯಮ ವರ್ಗದಿಂದ ಕೆಳ ಮಧ್ಯಮ ವರ್ಗದವರಿಗೆ ಸ್ಥಳಾಂತರವಾಗಿದ್ದು ಈ ವರ್ಗದ ವಿದ್ಯಾರ್ಥಿಗಳು ನಾಯಕತ್ವದ ಜವಾಬ್ದಾರಿ ವಹಿಸಿಕೊಂಡಿರುವುದು ಕಂಡುಬರುತ್ತದೆ. 2) ವೃತ್ತಿಪರ ಕೋರ್ಸನ ವಿದ್ಯಾರ್ಥಿಗಳಿಗೆ ರಾಜಕೀಯ ಪ್ರಜ್ಞೆ ಕಡಿಮೆಯಿದ್ದು ಅವರು ವಿದ್ಯಾರ್ಥಿ ಚಳುವಳಿಗಳಲ್ಲಿ ಅಷ್ಟು ಸಕ್ರಿಯವಾಗಿ ಭಾಗವಹಿಸದೆ ಇರುವ ಅಂಶದ ಮೇಲೆ ಹೆಚ್ಚಿನ ಬೆಳಕು ಚೆಲ್ಲಿದ್ದಾರೆ. ಬಾಂಬೆಯಲ್ಲಿ ವಿದ್ಯಾರ್ಥಿ

ಚಳುವಳಿಗಳು ದಿನದಿಂದ ದಿನಕ್ಕೆ ಕ್ಷೀಣಿಸುತ್ತಿರುವುದನ್ನು [47] ತಮ್ಮ ಸಂಶೋಧನೆಯಲ್ಲಿ ಗುರುತಿಸಿರುತ್ತಾರೆ.

ಆರ್.ಎನ್.ಶರ್ಮಾರವರು "ಪಾಟ್ನಾ ವಿಶ್ವವಿದ್ಯಾಲಯದ ವಿದ್ಯಾರ್ಥಿ ನಾಯಕರು" ಎಂಬ ತಮ್ಮ ಅಧ್ಯಯನದಲ್ಲಿ ವಿದ್ಯಾರ್ಥಿ ನಾಯಕರ ವಿಶಿಷ್ಟ ಗುಣಗಳನ್ನು ಗುರುತಿಸಿದ್ದಾರೆ. ಅವರ ಪ್ರಕಾರ ವಿದ್ಯಾರ್ಥಿ ನಾಯಕರು ಸಾಮಾನ್ಯವಾಗಿ ಸುಸಂಸ್ಕೃತರು, ಸಭ್ಯರು, ನಯನಾಜೂಕಿನವರಾಗಿದ್ದು ತಮ್ಮ ಸಹ ವಿದ್ಯಾರ್ಥಿಗಳ ನ್ಯಾಯಯುತ ಬೇಡಿಕೆಗಳು ಹಾಗೂ ಅವರ ಕಲ್ಯಾಣದ ಬಗ್ಗೆ ಸಹಾನುಭೂತಿಯುಳ್ಳವರಾಗಿರುತ್ತಾರೆ. ಕೆಲವೊಮ್ಮೆ ಇವರೂ ಕೂಡಾ ರಾಜಕೀಯದ ಉಪಕರಣಗಳಾದ ಕೈಚಳಕ ಪ್ರದರ್ಶನ, ಮೋಸ, ಕಪಟ ಹಾಗೂ ವಂಚನೆ ಮುಂತಾದವುಗಳನ್ನು ಬಳಸುತ್ತಾರೆ. ವಿದ್ಯಾರ್ಥಿ ನಾಯಕರು ಹಾಗೂ ರಾಜಕೀಯ ನಾಯಕರ ನಡುವೆ ಸಾಮ್ಯತೆಯಿದ್ದು ಇವರು ಯಾವುದೇ ಉದಾತ್ತವಾದ ಧ್ಯೇಯೊದ್ದೇಶಗಳಿಂದ ಪ್ರೇರಿತರಾಗಿರುವುದಿಲ್ಲ[48] ಎಂದು ಹೇಳಿದ್ದಾರೆ.

ಎಸ್.ಕೆ.ಪಟ್ನಾಯಕ್ **ಅವರು** ವಿದ್ಯಾರ್ಥಿ ಕ್ರಿಯಾಶೀಲತೆಯ ಮಾನಸಿಕ–ಸಾಮಾಜಿಕ ಪಾರ್ಶ್ವ ಚಿತ್ರಣ ನೀಡಿದ್ದಾರೆ. ಅವರ ಸಂಶೋಧನೆಯ ಫಲಿತಗಳು ಹೀಗಿವೆ, 1) ವಿದ್ಯಾರ್ಥಿ ಕ್ರಿಯಾಶೀಲತೆ ಮೇಲ್ವರ್ಗದ ಕುಟುಂಬದಿಂದ ಬಂದವರು 2) ನಗರ ವಾಸಿಗಳು 3) ವಿದ್ಯಾರ್ಥಿ ನಿಲಯಗಳಲ್ಲಿ ವಾಸಿಸುವವರು. 4) ಉತ್ತಮ ಶೈಕ್ಷಣಿಕ ಹಿನ್ನೆಲೆ ಹೊಂದಿದವರು ಹಾಗೂ ವಿದ್ಯಾರ್ಥಿನಿಯರಿಗಿಂತ ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿರುವುದನ್ನು ತಮ್ಮ ಅಧ್ಯಯನದಿಂದ ದೃಢೀಕರಿಸಿದ್ದಾರೆ. 1971 ರಿಂದ ಜವಾಹಾರಲಾಲ ನೆಹರು ವಿಶ್ವವಿದ್ಯಾಲಯದ ವಿದ್ಯಾರ್ಥಿ ಸಂಘಟನೆಯ ಅಧ್ಯಕ್ಷರು ಅತ್ಯಂತ ಶ್ರೀಮಂತ ಕುಟುಂಬದವರು ಹಾಗೂ ಅಧ್ಯಯನದಲ್ಲಿ ಸಾಧನೆ ಮಾಡಿದವರು ಆಗಿದ್ದಾರೆ[49] ಎಂದು ಅವರು ತಮ್ಮ ಸಂಶೋಧನಾ ಪ್ರಬಂಧದಲ್ಲಿ ತಿಳಿಸಿರುತ್ತಾರೆ.

ಚಿತ್ರಾ ಶಿವುಕುಮಾರ ಅವರು ಕುಲೀನರ ವಿದ್ಯಾರ್ಥಿ ರಾಜಕೀಯ ರಚನೆಯಲ್ಲಿ ಜಾತಿ ಮತ್ತು ಸಂಪತ್ತು ಪ್ರಮುಖ ಅಂಶಗಳಾಗಿವೆ. ಕುಲೀನ ವಿದ್ಯಾರ್ಥಿಗಳು ಶ್ರೀಮಂತ ಮೇಲ್ಜಾತಿಯ ಆದರೆ ಅಬ್ರಾಹ್ಮಣರಾಗಿದ್ದು ಇವರಿಗೆ ಕೆಳಜಾತಿಯ ವಿಶೇಷವಾಗಿ ಪರಿಶಿಷ್ಟ ಜಾತಿ ವಿದ್ಯಾರ್ಥಿ ನಾಯಕರು ಪ್ರತಿಸ್ಪರ್ಧಿಗಳಾಗಿದ್ದಾರೆ. ಹಣ ಮತ್ತು ಸಂಪತ್ತು ಕುಲೀನರ ವಿದ್ಯಾರ್ಥಿ ರಾಜಕೀಯದಲ್ಲಿ ನಿರ್ಣಾಯಕ ಪಾತ್ರ ವಹಿಸುವ ಅಂಶಗಳಾಗಿವೆ ಹಾಗೂ ಇವರು ರಾಜಕೀಯ ನಾಯಕರೊಂದಿಗೆ ಗುರುತಿಸಿಕೊಂಡವರಾಗಿದ್ದಾರೆ[50] ಎಂದು ಅವರು ತಿಳಿಸಿರುತ್ತಾರೆ

ಹಜಾರೆ ಯವರು ರವೇಣಶಾ ಮಹಾವಿದ್ಯಾಲಯ ಕಟಕ ಓರಿಸ್ಸಾದಲ್ಲಿ ಕುಲೀನರ ವಿದ್ಯಾರ್ಥಿ ರಾಜಕೀಯವನ್ನು 1938 ರಿಂದ 1979ರ ವರೆಗೆ ವಿಸ್ತಾರವಾಗಿ ಅಧ್ಯಯನ

ಮಾಡಿದ್ದು ಅವರ ಸಂಶೋಧನೆಯ ಫಲಿತಗಳು ಈ ರೀತಿ ಇವೆ. 1) ಹೆಚ್ಚಿನ ವಿದ್ಯಾರ್ಥಿ ನಾಯಕರು ಮಧ್ಯಮ–ಕೆಳ ಮಧ್ಯಮ ವರ್ಗದ ಕುಟುಂಬದಿಂದ ಬಂದವರು 2) ಗ್ರಾಮೀಣ ಹಾಗೂ ಮೇಲ್ಜಾತಿಯ ಹಿನ್ನಲೆಯಿಂದ ಬಂದವರು. 3) ಪ್ರತಿಶತ 80%ರಷ್ಟು ವಿದ್ಯಾರ್ಥಿ ನಾಯಕರು ಸಮಾಜ ವಿಜ್ಞಾನ ಹಾಗೂ ಮಾನವಿಕ ವಿಭಾಗಗಳಿಗೆ ಸಂಬಂಧಿಸಿದವರಾಗಿದ್ದಾರೆ. 4) ಅರ್ಧದಷ್ಟು ವಿದ್ಯಾರ್ಥಿ ನಾಯಕರು ಒಳ್ಳೆಯ ಶೈಕ್ಷಣಿಕ ಗುಣಮಟ್ಟ ಪಡೆದುಕೊಂಡವರಾಗಿದ್ದಾರೆ. 5) ಪ್ರತಿಶತ 30% ವಿದ್ಯಾರ್ಥಿ ನಾಯಕರು ಮಾತ್ರ ರಾಜಕೀಯವನ್ನು ಒಂದು ವೃತ್ತಿಯನ್ನಾಗಿ ಮಾಡಿಕೊಳ್ಳುವ ಬಯಕೆಯನ್ನು ಇಟ್ಟುಕೊಂಡವರಾಗಿದ್ದಾರೆಂದು[51] ತಮ್ಮ ಸಂಶೋಧನೆಯಲ್ಲಿ ತಿಳಿಸಿರುತ್ತಾರೆ.

ರೇ ಯವರ ಪ್ರಕಾರ ವಿದ್ಯಾರ್ಥಿ ರಾಜಕೀಯವು ಫ್ಯಾಕಲ್ಟಿ ರಾಜಕೀಯ ಹಾಗೂ ಪಕ್ಷ ರಾಜಕೀಯದಿಂದ ಬೇರ್ಪಡಿಸಲು ಸಾಧ್ಯವಿಲ್ಲ 1958, 1965 ಮತ್ತು 1968 ರಲ್ಲಿ ಬನಾರಸ ಹಿಂದೂ ವಿಶ್ವವಿದ್ಯಾಲಯದಲ್ಲಿ ನಡೆದ ವಿದ್ಯಾರ್ಥಿ ಚಳುವಳಿಗಳನ್ನು ಅವರು ಉದಾಹರಿಸಿದ್ದಾರೆ. ಈ ಪ್ರತಿಭಟನೆಗಳಿಗೆ ರಾಜಕೀಯ ಪಕ್ಷಗಳು ಹಾಗೂ ಫ್ಯಾಕಲ್ಟಿಯ ಪ್ರಚೋದನೆಯೇ ಕಾರಣವೆಂದು ತಮ್ಮ ಸಂಶೋಧನೆಯಿಂದ ರುಜುವಾತು ಪಡಿಸಿದ್ದಾರೆ. ವಿದ್ಯಾರ್ಥಿ ನಾಯಕರು ರಾಜಕೀಯ ಪಕ್ಷಗಳ ಸಕ್ರಿಯ ಸದಸ್ಯರಾಗಿರುವುದನ್ನು ಅವರು ತಮ್ಮ ಅಧ್ಯಯನದಿಂದ[52] ದೃಢಪಡಿಸಿದ್ದಾರೆ.

ಸಿನ್ಹಾ ರವರ ಅಭಿಪ್ರಾಯದಲ್ಲಿ ವಿದ್ಯಾರ್ಥಿ ರಾಜಕೀಯವು ಅವಕಾಶವಾದೀತನದಾಗಿದ್ದು ಯಾವುದೇ ತತ್ವ, ವಿಚಾರಗಳನ್ನು ಹೊಂದಿರುವುದಿಲ್ಲ ಇವರಿಗೆ ರಾಜಕೀಯ ತತ್ವಾದರ್ಶಗಳ ಜ್ಞಾನ ಕಡಿಮೆಯಿರುತ್ತದೆ[53] ಎಂದು ತಿಳಿಸಿದ್ದಾರೆ.

ಪ್ರದೀಪ ಸಿಂಗ್ ರವರ ಪ್ರಕಾರ ವಿದ್ಯಾರ್ಥಿ ರಾಜಕೀಯವು ರಾಜಕೀಯ ಪಕ್ಷಗಳ ಜೊತೆಗೆ ನಿಕಟ ಸಂಬಂಧ ಹೊಂದಿದೆ. ಆದಕಾರಣ ಇವರು ರಾಜಕೀಯ ಪಕ್ಷಗಳ ಕೈಗೊಂಬೆಗಳಾಗಿ ಕೆಲಸ ನಿರ್ವಹಿಸುತ್ತಾರೆ. ರಾಜಕೀಯ ಪಕ್ಷಗಳು ಚುನಾವಣಾ ಸಂದರ್ಭದಲ್ಲಿ ಇವರನ್ನು ತಮ್ಮ ಸ್ವಾರ್ಥ ಸಾಧನೆಗೆ ಬಳಸಿಕೊಳ್ಳುತ್ತವೆ ಎಂದು ಹೇಳಿದ್ದಾರೆ. ಪ್ರತಿಯೊಂದು ವಿದ್ಯಾರ್ಥಿ ಸಂಘಟನೆಗಳು ಒಂದೊಂದು ರಾಜಕೀಯ ಪಕ್ಷಗಳ ಜೊತೆಗೆ ಗುರುತಿಸಿಕೊಂಡಿರುವುದನ್ನು[54] ಅವರು ತಮ್ಮ ಸಂಶೋಧನೆಯಲ್ಲಿ ಗುರುತಿಸಿರುತ್ತಾರೆ.

ಗಾಡಿನೋ ರವರು "ಇಂಡಿಯನ್ ಯುನಿವರ್ಸಿಟಿ" ಎಂಬ ಸಂಶೋಧನಾ ಅಧ್ಯಯನದಲ್ಲಿ ವಿದ್ಯಾರ್ಥಿ ಮತ್ತು ರಾಜಕೀಯ ಎಂಬ ವಿಷಯವನ್ನು ಪ್ರಸ್ತಾಪಿಸಿದ್ದಾರೆ. ಅವರ ಪ್ರಕಾರ ವಿದ್ಯಾರ್ಥಿ ನಾಯಕರು ಓದಿನಲ್ಲಿ ಸಾಧಾರಣವಾಗಿದ್ದು, ವಿಶ್ವವಿದ್ಯಾಲಯ ಆವರಣದಲ್ಲಿ ದೀರ್ಘಕಾಲದಿಂದ ವಾಸವಾಗಿದ್ದು, ರಾಜಕೀಯ ಭವಿಷ್ಯ ಸಾಧಿಸುವ

ಉದ್ದೇಶವನ್ನು ಹೊಂದಿದ್ದಾರೆ. ಇವರು ವಿದ್ಯಾರ್ಥಿ ಸಮುದಾಯಕ್ಕೆ ಹೆಚ್ಚಿನ ಅನುಕೂಲತೆಗಳೇನನ್ನು ಮಾಡಿಲ್ಲವೆಂದು[55] ತಿಳಿಸಿರುತ್ತಾರೆ.

ಎಸ್.ಎಲ್.ಶರ್ಮಾರವರು ತಮ್ಮ "ರವಿಶಂಕರ ವಿಶ್ವವಿದ್ಯಾಲಯ, ರಾಯಪೂರ ಮತ್ತು ಪಂಜಾಬ್ ವಿಶ್ವವಿದ್ಯಾಲಯ ಚಂಡಿಗಡ್– ತುಲನಾತ್ಮಕ ಅಧ್ಯಯನ" ಎಂಬ ಸಂಶೋಧನಾ ಪ್ರಬಂಧದಲ್ಲಿ ಪ್ರತಿಶತ 50% ರಷ್ಟು ವಿದ್ಯಾರ್ಥಿ ಕಾರ್ಯಕರ್ತರು ಸ್ಥಳಿಯ ರಾಜಕಾರಣಿಗಳೊಂದಿಗೆ ನಿಕಟ ಸಂಪರ್ಕ ಹೊಂದಿರುತ್ತಾರೆ. ವಯಸ್ಕ ರಾಜಕಾರಣಿಗಳು ವಿದ್ಯಾರ್ಥಿ ಪ್ರತಿಭಟನೆಗಳಿಗೆ ಪ್ರಚೋದನೆ ನೀಡುತ್ತಾರೆ" ಎಂದು ತಿಳಿಸಿರುತ್ತಾರೆ. ಇವರ ಅಧ್ಯಯನದ ಪ್ರಮುಖ ಫಲಿತವೆಂದರೆ ವಿದ್ಯಾರ್ಥಿ ರಾಜಕೀಯವು ತಾತ್ವಿಕ ರಾಜಕೀಯಕ್ಕೆ ಯಾವುದೇ ಪ್ರಾಮುಖ್ಯತೆ ನೀಡುವುದಿಲ್ಲ. ಹೀಗಾಗಿ ವಿದ್ಯಾರ್ಥಿ ಶಕ್ತಿ ಮತ್ತು ರಾಜಕೀಯ ಪಕ್ಷಗಳ ನಡುವಿನ ಒಪ್ಪಂದ ತಾತ್ವಿಕ ರಾಜಕೀಯಕ್ಕಿಂತ ಹೆಚ್ಚಾಗಿ, ವ್ಯವಹಾರಿಕ ರಾಜಕೀಯ ಅಥವಾ ರಾಜಕೀಯ ಅವಕಾಶವಾದಿತನಕ್ಕೆ ದಾರಿ ಮಾಡಿಕೊಟ್ಟಂತಾಗಿದೆ. ಈ ಕಾರಣದಿಂದಾಗಿ ವಿದ್ಯಾರ್ಥಿ ಪ್ರತಿಭಟನೆಯು ವಿದ್ಯಾರ್ಥಿ ಕ್ರಿಯಾಶೀಲತೆಯ ಹಂತದಲ್ಲಿಯೆ ನಿಲ್ಲುತ್ತದೆ. ಅದು ಚಳುವಳಿಯಾಗಿ ರೂಪುಗೊಳ್ಳುವುದರಲ್ಲಿ ವಿಫಲವಾಗುತ್ತದೆ" ಎಂದಿದ್ದಾರೆ.

ಪ್ರೇಮಲತಾ ಪಂತ್‌ರವರ ಪ್ರಕಾರ ಪ್ರತಿಶತ 70%ರಷ್ಟು ವಿದ್ಯಾರ್ಥಿ ನಾಯಕರ ವರ್ತನೆಗೆ ಅವರ ಪಾಲಕರನ್ನು ಜವಾಬ್ದಾರರನ್ನಾಗಿ ಮಾಡುವಂತಿಲ್ಲವೆಂದಿದ್ದಾರೆ. ಹಾಗೆಯೇ ಪ್ರತಿಶತ 71% ವಿದ್ಯಾರ್ಥಿಗಳು ಗ್ರಾಮೀಣ ಹಿನ್ನಲೆಯಿಂದ ಬಂದವರಾಗಿರುತ್ತಾರೆ. ಅವರ ಸಂಶೋಧನೆಯ ಪ್ರಮುಖ ಫಲಿತವೇನೆಂದರೆ ಹೊಸ ನಗರ ಸಂಸ್ಕೃತಿಗೆ ಗ್ರಾಮೀಣ ಹಿನ್ನೆಲೆಯಿಂದ ಬಂದ ವಿದ್ಯಾರ್ಥಿಗಳು ಹೊಂದಿಕೊಳ್ಳುವಲ್ಲಿನ ಅಸಮರ್ಥತೆಯು ವಿದ್ಯಾರ್ಥಿ ಅಶಾಂತಿಗೆ ಕಾರಣವಾಗುತ್ತದೆ" ಎನ್ನುವುದು ಅವರ ವಾದವಾಗಿದೆ.

ಇನ್ನೊಬ್ಬ ಲೇಖಕರಾದ ಪ್ರೊ॥ ಸ್ವರೂಪ ಅವರ ಅಭಿಪ್ರಾಯದಲ್ಲಿ ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿದ್ದಂತೆ ಭಾರತದಲ್ಲಿ ವಿದ್ಯಾರ್ಥಿ ಪ್ರತಿಭಟನೆಗೆ ಒಂದು ನಿರ್ದಿಷ್ಟ ಕಾರ್ಯ ಚೌಕಟ್ಟು ಇಲ್ಲವೆಂದಿದ್ದಾರೆ. ಏಕೆಂದರೆ ಭಾರತದಲ್ಲಿ ವಿದ್ಯಾರ್ಥಿ ಪ್ರತಿಭಟನೆಯ ಸ್ವಭಾವ ಮತ್ತು ವಿಧಗಳು ಬೇರೆ ಬೇರೆ ಹಂತಗಳಲ್ಲಿ ಬೇರೆ ಬೇರೆಯಾಗಿರುತ್ತವೆ. ಇದಕ್ಕೆ ಪ್ರಮುಖ ಕಾರಣವೇನೆಂದರೆ ಆಧುನೀಕರಣ ಪ್ರಕ್ರಿಯೆ ಪ್ರಭಾವಕ್ಕೆ ವಿದ್ಯಾರ್ಥಿಗಳು ಒಳಗಾಗುತ್ತಿರುವುದು. ಅವರು ವಿದ್ಯಾರ್ಥಿಗಳನ್ನು ನಾಲ್ಕು ಗುಂಪುಗಳನ್ನಾಗಿ ವಿಂಗಡಿಸುತ್ತಾರೆ.

01) ಅಸಂಪ್ರದಾಯಿಕ ವೇಷಭೂಷಣಗಳನ್ನು ಧರಿಸುವ ಹಾಗು ಪಾಪ್ ಸಂಗೀತ ಆಲಿಸುವ, ಸುಶಿಕ್ಷಿತ ಅಥವಾ ವಿದ್ಯಾವಂತ ಕುಟುಂಬಗಳಿಂದ ಬಂದ ವಿದ್ಯಾರ್ಥಿಗಳ ಗುಂಪು

02) ಕಮ್ಯುನಿಸ್ಟ್ ಸಿದ್ಧಾಂತಗಳಿಗೆ ಕಮ್ಯುನಿಸ್ಟ್ ನಾಯಕರುಗಳಿಂದಲೇ ವಿಶ್ವಾಸ ದ್ರೋಹವಾಗಿದೆ ಎನ್ನುವ ಪ್ರಗತಿಪರ ವಿದ್ಯಾರ್ಥಿಗಳ ಗುಂಪು.

03) ಸನಾತನ ಮೌಲ್ಯಗಳನ್ನು ತಿರಸ್ಕರಿಸುವ ಮತ್ತು ಉದಾರವಾದಿ ಮತ್ತು ಪರೋಪಕಾರಿ ವಿಚಾರಗಳನ್ನು ಅಳವಡಿಸಿಕೊಂಡ ಅತೀ ಬುದ್ಧಿವಂತ ಮತ್ತು ಅತೀ ಸೂಕ್ಷ್ಮ ವಿದ್ಯಾರ್ಥಿಗಳ ಗುಂಪು.

04) ಅಂತಸ್ತಿನ ಬಗ್ಗೆ ಪ್ರಜ್ಞೆ ಇರುವ ಮತ್ತು ಪ್ರತಿಭಟನೆಯ ಮುಖಾಂತರ ತಮ್ಮ ಅಂತಸ್ತನ್ನು ಸ್ಥಾಪಿಸಿಕೊಳ್ಳಲು ಬಯಸುವ ಕುಲೀನ ರಾಜಕೀಯ ನಾಯಕರ ಮತ್ತು ಅಧಿಕಾರಿಗಳ ಮಕ್ಕಳ ಗುಂಪು.

ಕರ್ನಾಟಕ ವಿದ್ಯಾರ್ಥಿಗಳ ರಾಜಕೀಯ ಸಾಮಾಜೀಕರಣದಲ್ಲಿ ವಿದ್ಯಾರ್ಥಿ ಸಂಘಟನೆಗಳ ಪಾತ್ರ ಗುರುತಿಸುವ ಪ್ರಯತ್ನ ಈ ಅಧ್ಯಯನದಲ್ಲಿ ಮಾಡಲಾಗಿರುತ್ತದೆ. ಈ ಪಾತ್ರವನ್ನು ವ್ಯವಸ್ಥಿತವಾಗಿ ವಿಶ್ಲೇಷಣೆ ಮಾಡಬೇಕೆಂದರೆ ವಿದ್ಯಾರ್ಥಿ ಚಳವಳಿಯ ಸ್ವಭಾವ, ವಿದ್ಯಾರ್ಥಿ ಪ್ರತಿಭಟನೆ, ವಿದ್ಯಾರ್ಥಿ ಕ್ರಿಯಾಶೀಲತೆ, ವಿದ್ಯಾರ್ಥಿ ನಾಯಕತ್ವ, ವಿದ್ಯಾರ್ಥಿಗಳಲ್ಲಿನ ಪ್ರಕಾರಗಳು, ಪ್ರಸ್ತುತ ಸಮಾಜೋ–ಆರ್ಥಿಕ ಸಮಸ್ಯೆಗಳು ಮುಂತಾದವುಗಳ ಸ್ಪಷ್ಟ ಅರಿವು ಇರಬೇಕಾಗುತ್ತದೆ. ಈ ಕಾರಣಕ್ಕಾಗಿ ಮೇಲಿನ ವಿದ್ಯಾರ್ಥಿ ರಾಜಕೀಯ ಕ್ರಿಯಾಶೀಲತೆಯ ವಿವರವಾದ ವಿವರಣೆಯು ಅವಶ್ಯಕವಾಗುತ್ತದೆ.

ಭಾರತದ ಶಿಕ್ಷಣ ವ್ಯವಸ್ಥೆ ಎದುರಿಸುತ್ತಿರುವ ಸಮಸ್ಯೆಗಳು ಹಾಗು ಬಿಕ್ಕಟ್ಟುಗಳನ್ನೆ ನಮ್ಮ ರಾಜ್ಯ ಶಿಕ್ಷಣ ವ್ಯವಸ್ಥೆಯು ಎದುರಿಸುತ್ತಿದೆ. ದೇಶಾದ್ಯಂತ ಇರುವಂತೆ ನಮ್ಮಲ್ಲಿಯೂ ಕೂಡ ವಿದ್ಯಾರ್ಥಿಗಳ ಮಧ್ಯೆ ಏಕತೆ ಇಲ್ಲದಿರುವದು. ವಿದ್ಯಾರ್ಥಿ–ಅಧ್ಯಾಪಕರ ನಡುವಿನ ಸೌಹಾರ್ದಯುತ ಸಂಬಂಧದ ಕೊರತೆ. ನೈತಿಕ ಗುಣಮಟ್ಟ ಮತ್ತು ಶಿಕ್ಷಣದ ಗುಣಮಟ್ಟ ದಿನದಿಂದ ದಿನಕ್ಕೆ ಕುಸಿಯುತ್ತಿದೆ. ಶಿಕ್ಷಣದ ವ್ಯಾಪಾರೀಕರಣದಿಂದ ಬಡ ಮತ್ತು ಮಧ್ಯಮ ವರ್ಗದ ಮಕ್ಕಳು ಉನ್ನತ ವ್ಯಾಸಂಗದಿಂದ ದೂರ ಉಳಿಯುವಂತಾಗಿದೆ. ಉನ್ನತ ಶಿಕ್ಷಣ ದುಬಾರಿಯಾಗುತ್ತಿದೆ. ಸರ್ಕಾರವೇ ನಿಗದಿಪಡಿಸಿದ ಶುಲ್ಕವನ್ನು ಪಾವತಿಸಲು ಬಡ ವಿದ್ಯಾರ್ಥಿಗಳಿಗೆ ಸಾಧ್ಯವಾಗುತ್ತಿಲ್ಲ. ವಿಶ್ವವಿದ್ಯಾಲಯಗಳಲ್ಲಿ ಭ್ರಷ್ಟಾಚಾರ ಮತ್ತು ಅಕ್ರಮ ನೇಮಕಗಳು ಹೆಚ್ಚಾಗುತ್ತಿವೆ. ಅತಿಯಾದ ರಾಜಕೀಯ ಹಸ್ತಕ್ಷೇಪದಿಂದ ಉನ್ನತ ಶಿಕ್ಷಣ ಕ್ಷೇತ್ರ ಬಡವಾಗುತ್ತಿದೆ. ಅಲ್ಲದೆ ನಾಗಾಲೋಟದಲ್ಲಿ ನಡೆಯುತ್ತಿರುವ ಜಾಗತೀಕರಣದ ಹಿನ್ನೆಲೆಯಲ್ಲಿ, ವಿದೇಶಿ ವಿಶ್ವವಿದ್ಯಾಲಯಗಳು ಭಾರತವನ್ನು ಹಾಗೂ ನಮ್ಮ ರಾಜ್ಯವನ್ನು ಪ್ರವೇಶಿಸುವ ಎಲ್ಲ ಲಕ್ಷಣಗಳು ಇಂದು ಕಂಡುಬರುತ್ತಿವೆ. ಇಂತಹ ಪ್ರಸ್ತಾವವೊಂದು ಕೇಂದ್ರ ಸರಕಾರದ ಮುಂದಿದೆ. ವಿದೇಶಿ ವಿಶ್ವವಿದ್ಯಾಲಯಗಳು ಇಲ್ಲಿಗೆ ಬಂದರೂ ನಮ್ಮ ದೇಶದ

ಸಾಮಾಜಿಕ, ಆರ್ಥಿಕ ಪರಿಸ್ಥಿಗಳಿಗೆ ಅಗತ್ಯವಾದ ಪಠ್ಯ ವಿಷಯಗಳನ್ನು ಶಿಕ್ಷಣದಲ್ಲಿ ಅಳವಡಿಸುವ ಸಾಧ್ಯತೆ ಕಡಿಮೆ. ನಮ್ಮ ದೇಶದ ಸಮಸ್ಯೆಗಳ ಪರಿಹಾರಕ್ಕೆ ಅಗತ್ಯವಾದ ಶಿಕ್ಷಣವನ್ನು ರೂಪಿಸದೆ, ಅಗತ್ಯ ತಂತ್ರಜ್ಞಾನ–ಕೌಶಲ್ಯಗಳನ್ನು ಬೆಳಸದೆ, ಇಲ್ಲಿ ಗಳಿಸಿದ ಹಣವನ್ನು ತಮ್ಮ ದೇಶಗಳಿಗೆ ರವಾನಿಸಿ, ಈಗಾಗಲೇ ನಗರ–ಹಳ್ಳಿಗಳ ನಡುವೆಯಿರುವ ಕಂದರವನ್ನು ಮತ್ತಷ್ಟು ಹೆಚ್ಚಿಸಬಹುದು. ವಿದೇಶಿ ವಿಶ್ವವಿದ್ಯಾಲಯಗಳು ಭಾರತಕ್ಕೆ ಬಂದು ಉತ್ತಮ ಗುಣಮಟ್ಟದ ಶಿಕ್ಷಣ ನೀಡಿದರೂ, ಅದನ್ನು ಪಡೆದ ನಮ್ಮ ವಿದ್ಯಾರ್ಥಿಗಳು ವಿದೇಶಗಳಿಗೆ ಹೋಗುವ ಸಾಧ್ಯತೆಯೆ ಹೆಚ್ಚು. ಹೀಗಾಗಿ ಉನ್ನತ ಶಿಕ್ಷಣ ಪಡೆದ ವಿಧ್ಯಾರ್ಥಿಗಳನ್ನು ವಿದೇಶಿ ಮಾರುಕಟ್ಟೆಗಳಿಗೆ ಸರಬರಾಜು ಮಾಡುವ ಕೇಂದ್ರಗಳಾಗಿ ಈ ವಿಶ್ವವಿದ್ಯಾಲಯಗಳು ಕೆಲಸ ಮಾಡಿದರೆ ಆಶ್ಚರ್ಯವೇನಿಲ್ಲ. ಇಂತಹ ವಿಶ್ವವಿದ್ಯಾಲಯಗಳನ್ನು ಸ್ವಾಗತಿಸಿ ಅವುಗಳಿಗೆ ಎಲ್ಲಾ ಅನುಕೂಲತೆಗಳನ್ನು ಕಲ್ಪಿಸಿಕೊಡುವುದು ಸರಕಾರಕ್ಕೆ ಆದ್ಯತೆಯ ವಿಷಯವಾಗಬೇಕೆ?

ಇನ್ನು ಪ್ರಾಥಮಿಕ ಶಿಕ್ಷಣದ ಹಂತದಲ್ಲಿ ಒಂದು ಕಡೆ ಸ್ವವಿತ್ತ ಪೋಷಿತ ಇಂಗ್ಲಿಷ್ ಮಾಧ್ಯಮದ ಶಾಲೆಗಳು ಮತ್ತು ಇನ್ನೊಂದುಕಡೆ ಸೌಲಭ್ಯರಹಿತ ಸರಕಾರಿ ಶಾಲೆಗಳು ಇವುಗಳ ಕಾರಣದಿಂದ ಉದ್ಭವವಾಗಿರುವ ದ್ವಿವಿಧ ಶಿಕ್ಷಣ ವ್ಯವಸ್ಥೆ ಮತ್ತು ಪರಿಣಾಮ ರೂಪವಾಗಿ ನಿರ್ಮಾಣವಾಗುತ್ತಿರುವ ವರ್ಗಭೇದವನ್ನು ತಡೆಗಟ್ಟಿ ಎಲ್ಲರಿಗೂ ಸಮಾನ ಶಿಕ್ಷಣ ವ್ಯವಸ್ಥೆ ನೀಡುವ ಅವಶ್ಯಕತೆ ಇದೆ.

ಇಂದು ಶಿಕ್ಷಣ ಸಂಸ್ಥೆಗಳಲ್ಲಿ ಶಿಕ್ಷಕ ಮತ್ತು ವಿದ್ಯಾರ್ಥಿಗಳ ಪ್ರಜಾತಾಂತ್ರಿಕ ಹಕ್ಕುಗಳನ್ನು ಹತ್ತಿಕ್ಕುವ ಪ್ರಯತ್ನ ನಡೆಯುತ್ತಿದೆ. ಶಿಕ್ಷಕರ ಮತ್ತು ವಿದ್ಯಾರ್ಥಿಗಳ ಸಾಮಾಜಿಕ ಹಾಗೂ ಪ್ರಜಾತಾಂತ್ರಿಕ ಚಟುವಟಿಕೆಗಳಿಗೆ ಮುಕ್ತ ಅವಕಾಶ ಇಲ್ಲದಂತಾಗಿದೆ.

ಈ ಮೇಲಿನ ಕಾರಣಗಳಿಂದಾಗಿ, ರಾಜಕೀಯ ಪ್ರಜ್ಞೆ ಇರುವ ವಿದ್ಯಾರ್ಥಿ ಸಮುದಾಯವು ಶಿಕ್ಷಣ ಕ್ಷೇತ್ರದಲ್ಲಿನ ಭ್ರಷ್ಟ ಆಚರಣೆಗಳನ್ನು ಸರಿಪಡಿಸುವ ಶಕ್ತಿಯಾಗಿ ಇಂದು ಕಾರ್ಯನಿ ರ್ವಹಿಸಬೇಕಾಗಿದೆ. ಶಿಕ್ಷಣಕ್ಷೇತ್ರದಲ್ಲಿ ಇಂದು ಅಮೂಲಾಗ್ರ ಬದಲಾವಣೆ ತರಬೇಕಾಗಿದೆ. ಈ ದೃಷ್ಟಿಯಿಂದ ವಿದ್ಯಾರ್ಥಿ ಸಂಘಟನೆಗಳು ಪ್ರಸ್ತುತ ವ್ಯವಸ್ಥೆಯಲ್ಲಿ ಸ್ವಾಭಾವಿಕ ಮತ್ತು ಅವಶ್ಯಕವಾಗಿವೆ.

ವಿದ್ಯಾರ್ಥಿ ಸಂಘಟನೆಗಳು ಕರ್ನಾಟಕದ ರಾಜಕೀಯ ವ್ಯವಸ್ಥೆಯ ಮೇಲೆ ಸಾಕಷ್ಟು ಪ್ರಭಾವ ಬೀರಿವೆ ಮತ್ತು ಬೀರುತ್ತಿವೆ. ಸರಕಾರದ ನೀತಿ ನಿರ್ಧಾರಗಳ ಮೇಲೆ ಅವುಗಳ ಪ್ರಭಾವವಿರುವುದನ್ನು ನಾವು ಕಾಣಬಹುದಾಗಿದೆ. ರಾಜ್ಯದಲ್ಲಿರುವ ವಿದ್ಯಾರ್ಥಿ ಸಂಘಟನೆಗಳು ಒಂದೊಂದು ರಾಜಕೀಯ ಪಕ್ಷದೊಂದಿಗೆ ಗುರುತಿಸಿಕೊಂಡಿವೆ. ಸಾರ್ವಜನಿಕ ಚುನಾವಣೆಗಳ ಸಂದರ್ಭದಲ್ಲಿ ಈ ಪಕ್ಷಗಳು ವಿದ್ಯಾರ್ಥಿ ಸಂಘಟನೆಗಳನ್ನು ಬಳಸಿಕೊಳ್ಳುವದು

ಸಾಮಾನ್ಯವಾಗಿದೆ. ಅಧಿಕಾರಕ್ಕೆ ಬಂದ ರಾಜಕೀಯ ಪಕ್ಷವು ವಿದ್ಯಾರ್ಥಿ ಸಂಘಟನೆಗಳ ಪ್ರಭಾವಕ್ಕೆ ಒಳಗಾಗುವುದು ಸಾಮಾನ್ಯವಾಗಿದೆ. ಈ ಸಂಘಟನೆಗಳಲ್ಲಿ ಏಕತೆಯನ್ನು ಕಾಣುವುದು ದುಸ್ತರ. ಏಕೆಂದರೆ ರಾಜ್ಯದಲ್ಲಿ ಹಲವಾರು ವಿದ್ಯಾರ್ಥಿ ಸಂಘಟನೆಗಳು ರಚನೆಯಾಗಿವೆ. ಈ ಸಂಘಟನೆಗಳ ವಿದ್ಯಾರ್ಥಿಗಳು ಶಾಲಾ/ ಕಾಲೇಜುಗಳ ವಿದ್ಯಾರ್ಥಿ ಮತ್ತು ಶಿಕ್ಷಕರ ನಡುವೆ ಸೌಹಾರ್ದಯುತ ಸಂಬಂಧವನ್ನು ಬೆಳೆಸುವಲ್ಲಿ ವಿಫಲವಾಗಿವೆ. ವಿದ್ಯಾರ್ಥಿಗಳಲ್ಲಿ ನೈತಿಕ, ಶೈಕ್ಷಣಿಕ ಗುಣಮಟ್ಟ ಕುಸಿತ ಹಾಗೂ ಅಶಾಂತಿಯ ಮನೋಭಾವನೆ ಬೆಳೆಯಲು ಕಾರಣವಾಗಿದೆ. ಆದ್ದರಿಂದ ರಾಜಕೀಯ ಪ್ರಜ್ಞೆ ಇರುವ ವಿದ್ಯಾರ್ಥಿ ಸಮುದಾಯ, ವ್ಯವಸ್ಥೆಯಲ್ಲಿನ ದೋಷಗಳನ್ನು ಸರಿಪಡಿಸುವುದು ಹಾಗೂ ಶೈಕ್ಷಣಿಕ ಕ್ಷೇತ್ರದಲ್ಲಿನ ಭ್ರಷ್ಟಾಚಾರದ ವಿರುದ್ಧ ಹೋರಾಡುವುದು ತಮ್ಮ ಆದ್ಯ ಕರ್ತವ್ಯವೆಂದು ಭಾವಿಸಿವೆ. ಶಿಕ್ಷಣದ ವ್ಯಾಪಾರೀಕರಣದ ವಿರುದ್ಧ ಇಂದು ವಿದ್ಯಾರ್ಥಿ ಸಂಘಟನೆಗಳು ಬೀದಿಗಿಳಿದಿವೆ. ಶಿಕ್ಷಣದಲ್ಲಿ ಗಮನಾರ್ಹವಾದ ಬದಲಾವಣೆ ತರಬೇಕೆಂದು ಈ ಸಂಘಟನೆಗಳು ಸರಕಾರದ ಮುಂದೆ ಬೇಡಿಕೆ ಇಟ್ಟಿವೆ.

ಇನ್ನು ಸಂಸದೀಯ ಪ್ರಜಾಪ್ರಭುತ್ವ ಯಶಸ್ವಿಯಾಗಿ ಕಾರ್ಯನಿರ್ವಹಿಸಬೇಕಾದರೆ ಜನರು ರಾಜಕೀಯವಾಗಿ ಪ್ರಜ್ಞಾವಂತರಿರಬೇಕು. ವಿದ್ಯಾರ್ಥಿಗಳು ಒಟ್ಟು ಜನಸಂಖ್ಯೆಯ ಸ್ವಲ್ಪ ಭಾಗವಾಗಿದ್ದರೂ ಅವರೂ ರಾಜಕೀಯವಾಗಿ ಪ್ರಜ್ಞಾವಂತರಾಗಿರಬೇಕೆಂಬುದರಲ್ಲಿ ಸಂಶಯವಿಲ್ಲ. ರಾಜಕೀಯವಾಗಿ ಪ್ರಜ್ಞಾವಂತರಾದ ವಿದ್ಯಾರ್ಥಿಗಳು ಮಾತ್ರ ಸುಭದ್ರವಾದ ರಾಜಕೀಯ ವ್ಯವಸ್ಥೆಯನ್ನು ರೂಪಿಸಬಲ್ಲರು. ಆ ಕಾರಣಕ್ಕಾಗಿಯೇ ಸಂಶೋಧನಾ ಅಧ್ಯಯನಕ್ಕಾಗಿ ಈ ವಿಷಯವನ್ನು ಆಯ್ಕೆ ಮಾಡಿಕೊಳ್ಳಲಾಗಿದೆ.

ಈಗಾಗಲೇ ಆಗಿರುವ ಅಧ್ಯಯನಗಳ ವಿಶ್ಲೇಷಣೆಯ ಹಿನ್ನಲೆಯಲ್ಲಿ ವಿದ್ಯಾರ್ಥಿ ರಾಜಕೀಯ ಅಧ್ಯಯನಕ್ಕೆ ಸಂಬಂಧಿಸಿದಂತೆ ಈ ಕೆಳಗಿನ ಪ್ರಶ್ನೆಗಳನ್ನು ಎತ್ತಿಕೊಳ್ಳಲಾಗಿದೆ.

- ವಿದ್ಯಾರ್ಥಿಗಳಲ್ಲಿ ರಾಜಕೀಯ ಪ್ರಜ್ಞೆ ಬೆಳೆಸುವಲ್ಲಿ ವಿದ್ಯಾರ್ಥಿ ಸಂಘಟನೆಗಳು ಯಾವ ಪಾತ್ರ ವಹಿಸಿವೆ?
- ಶೈಕ್ಷಣಿಕ, ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಪ್ರಗತಿಗೆ ವಿದ್ಯಾರ್ಥಿ ರಾಜಕೀಯ ಎಷ್ಟರಮಟ್ಟಿಗೆ ಪೂರಕವಾಗಿದೆ?
- ರಾಜಕೀಯ ಸಾಮಾಜೀಕರಣದ ಪ್ರಭಾವ ವಿದ್ಯಾರ್ಥಿ ಸಂಘಟನೆಗಳ ಮೇಲೆ ಎಷ್ಟರಮಟ್ಟಿಗೆ ಆಗಿದೆ?
- ವಿದ್ಯಾರ್ಥಿ ಸಂಘಟನೆಗಳು ರಾಜಕೀಯ ಪಕ್ಷಗಳೊಂದಿಗೆ ಗುರುತಿಸಿಕೊಳ್ಳುವುದು ಎಷ್ಟರಮಟ್ಟಿಗೆ ಸಮಂಜಸ?

ಮೇಲಿನ ಪ್ರಶ್ನೆಗಳಿಗೆ ಉತ್ತರಗಳನ್ನು ಕಂಡುಕೊಳ್ಳಲು ಈ ಅಧ್ಯಯನದಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡಲಾಗಿದೆ.

3. ಸಂಶೋಧನಾ ಅಧ್ಯಯನದ ಉದ್ದೇಶಗಳು.

1. ವಿದ್ಯಾರ್ಥಿ ಸಂಘಟನೆಗಳ ರಾಜಕೀಯ ಸಾಮಾಜೀಕರಣದ ವೈಜ್ಞಾನಿಕ ಅಧ್ಯಯನ ಮಾಡುವುದು.
2. ಕರ್ನಾಟಕದ ರಾಜ್ಯದ ವಿದ್ಯಾರ್ಥಿಗಳಲ್ಲಿ ರಾಜಕೀಯ ಪ್ರಜ್ಞೆ ಬೆಳೆಸುವಲ್ಲಿ ವಿದ್ಯಾರ್ಥಿ ಸಂಘಟನೆಗಳ ಪಾತ್ರ ಗುರುತಿಸುವುದು.
3. ಸಾಮಾಜಿಕ, ಶೈಕ್ಷಣಿಕ ಹಾಗೂ ರಾಜಕೀಯ, ಸಂಗತಿಗಳಿಗೆ ಸಂಬಂಧಿಸಿದಂತೆ ವಿದ್ಯಾರ್ಥಿಗಳ ಗ್ರಹಿಕೆಯನ್ನು ವಿಶ್ಲೇಷಿಸುವುದು.

4. ಸಂಶೋಧನೆಯ ವಿಧಾನಗಳು

ಸಂಶೋಧನೆಯ ಅಧ್ಯಯನಕ್ಕಾಗಿ ಐತಿಹಾಸಿಕ ಹಾಗೂ ವಿಶ್ಲೇಷಣಾತ್ಮಕ ವಿಧಾನಗಳನ್ನು ಅಳವಡಿಸಿಕೊಳ್ಳಲಾಗಿದೆ. ಬಹುತೇಕ ರಾಷ್ಟ್ರಗಳಲ್ಲಿ ವಿದ್ಯಾರ್ಥಿ ಕ್ರಿಯಾಶೀಲತೆ ಹಾಗೂ ಚಳುವಳಿಗಳು ಇತಿಹಾಸದ ಭಾಗವಾಗಿವೆ. ವಸಾಹತುಶಾಹಿ ವಿರೋಧಿ ಹೋರಾಟದಲ್ಲಿ ವಿದ್ಯಾರ್ಥಿ ಸಂಘಟನೆಗಳು ವಹಿಸಿದ ಪಾತ್ರ ಅತ್ಯಂತ ಮಹತ್ವವಾದದ್ದು. ಇದರ ಜೊತೆಗೆ ವಿದ್ಯಾರ್ಥಿ ಸಂಘಟನೆಗಳ ರಾಜಕೀಯ ಚಟುವಟಿಕೆಗಳನ್ನು ವಿಶ್ಲೇಷಣಾತ್ಮಕವಾಗಿ ವಿವರಿಸಲು ಪ್ರಶ್ನಾವಳಿಗಳನ್ನು ಸಿದ್ಧಪಡಿಸಿ ಸಂಶೋಧನೆಗೆ ಸಂಬಂಧಪಟ್ಟಂತೆ ಅಗತ್ಯ ಮಾಹಿತಿಗಳನ್ನು ಕಲೆಹಾಕಲಾಯಿತು. ಪ್ರಶ್ನಾವಳಿಯನ್ನು ನಾಲ್ಕು ಭಾಗಗಳಾಗಿ ವಿಂಗಡಿಸಲಾಗಿದೆ. ಪ್ರಶ್ನಾವಳಿಯ ಮೊದಲನೆಯ ಭಾಗ ವಿದ್ಯಾರ್ಥಿಗಳ ಸಾಮನ್ಯ ವಿವರಗಳಿಗೆ ಸಂಬಂಧಿಸಿದೆ. ಪ್ರಶ್ನಾವಳಿಯ ಎರಡನೆಯ ಭಾಗವು ರಾಜಕೀಯ ಸಾಮಾಜೀಕರಣ ಹಾಗೂ ರಾಜಕೀಯ ಸಾಮಾಜೀಕರಣದ ನಿಯೋಗಗಳ ಪ್ರಭಾವಕ್ಕೆ ಸಂಬಧಿಸಿದ ಪ್ರಶ್ನೆಗಳಾಗಿರುತ್ತವೆ. ಮೂರನೆಯ ಭಾಗವು ರಾಜಕೀಯ ಭಾಗವಹಿಸುವಿಕೆ ಹಾಗೂ ಪ್ರಜ್ಞೆಗೆ ಸಂಬಂಧಿಸಿದ ವಿಷಯಗಳನ್ನು ಒಳಗೊಂಡಿದೆ. ಪ್ರಶ್ನಾವಳಿಯ ನಾಲ್ಕನೆಯ ಭಾಗವು ಸಾಮಾಜಿಕ, ರಾಜಕೀಯ ಹಾಗೂ ಶೈಕ್ಷಣಿಕ ಸಂಗತಿಗಳ ಬಗ್ಗೆ ವಿದ್ಯಾರ್ಥಿಗಳ ಗ್ರಹಿಕೆಗಳಿಗೆ ಸಂಬಂಧಿಸಿದ ವಿಷಯಗಳನ್ನು ಒಳಗೊಂಡಿದೆ. ಒಟ್ಟು 200 ವಿದ್ಯಾರ್ಥಿ ಸಂಘಟನೆಗಳ ಪದಾಧಿಕಾರಿಗಳನ್ನು ಹಾಗೂ ಕಾಲೇಜುಗಳಲ್ಲಿ ಯೂನಿಯನ್‌ನ ಪ್ರತಿನಿಧಿಗಳನ್ನು ಅಧ್ಯಯನದ ಉದ್ದೇಶಗಳಿಗನುಗುಣವಾಗಿ ಪ್ರಶ್ನಾವಳಿಯನ್ನು ನೀಡಿ ಮಾಹಿತಿಯನ್ನು ಸಂಗ್ರಹಿಸಲಾಗಿದೆ. ಪ್ರಶ್ನಾವಳಿಗಳ ಮುಖಾಂತರ ಸಂಗ್ರಹಿಸಿದ ದತ್ತಾಂಶಗಳನ್ನು ಎಸ್. ಪಿ. ಎಸ್. ಎಸ್. (ಸ್ಟ್ಯಾಟಿಸ್ಟಿಕಲ್ ಪ್ಯಾಕೇಜ್ ಇನ್ ಸೋಶಿಯಲ್ ಸೈನ್ಸಸ್) ಒಳಪಡಿಸಿ ವಿಶ್ಲೇಷಿಸಲಾಗಿದೆ. ಇದರ ಜೊತೆಗೆ ಆಧುನಿಕ ಸಂಶೋಧನಾ ವಿಧಾನಗಳಾದ ಸಂದರ್ಶನ

ಹಾಗೂ ಅನೌಪಚಾರಿಕ ಚರ್ಚೆ ವಿಧಾನಗಳನ್ನು ಅಳವಡಿಸಿಕೊಂಡು ವಸ್ತುನಿಷ್ಠವಾಗಿ ಮತ್ತು ವೈಜ್ಞಾನಿಕವಾಗಿ ಅಧ್ಯಯನ ಮಾಡಲಾಗಿರುತ್ತದೆ. ರಾಜಕೀಯ ತಜ್ಞರಾದ ಎಸ್.ಎಂ.ಲಿಪ್ ಸೆಟ್, ಫಿಲಿಪ್, ಅಲ್ ಮಂಡ್, ಪೂವೆಲ್, ಎಸ್.ಪಿ.ವರ್ಮಾ, ಅರ್ ಬರ್ಟ್, ಬಲರಾಮ್, ಡಿ.ಕೆ. ಮೊಹಂತಿ, ನೀನಾ ಶರ್ಮಾ, ಬಿನೊದಾನಂದ ಝಾ, ಎಸ್.ಕೆ.ಪಟ್ನಾಯಕ, ಅನೀಲ ರಜೀಮವಾಲೆ, ಮನೋಜ ಘುಕಾನ್, ಎಮ್. ಎಮ್. ಮ್ಯಾಥ್ಯೂ, ರಷೀದ ಅಲಿ ಸೈಯದ್ ಮುಂತಾದವರು ರಚಿಸಿದ ಕೃತಿಗಳ ಆಧಾರವನ್ನು ಪಡೆಯಲಾಗಿರುತ್ತದೆ. ಇದರ ಜೊತೆಗೆ ದಿನಪತ್ರಿಕೆ ಮತ್ತು ಸಂಶೋಧನಾ ಪತ್ರಿಕೆಗಳಲ್ಲಿ ಪ್ರಕಟವಾದ ಲೇಖನಗಳನ್ನು ಅಧ್ಯಯನ ಮಾಡಿ ಅವುಗಳ ಸಹಾಯವನ್ನು ತಗೆದುಕೊಳ್ಳಲಾಗಿದೆ.

5. ಅಧ್ಯಯನದ ಕ್ಷೇತ್ರ ಆಯ್ಕೆ:

ಈ ಮೇಲಿನ ಅಧ್ಯಯನದ ಉದ್ದೇಶಗಳನ್ನು ಈಡೇರಿಸುವದಕ್ಕಾಗಿ, ಕಲಬುರ್ಗಿ ಜಿಲ್ಲೆಯನ್ನು ಅಧ್ಯಯನಕ್ಕೆ ಆಯ್ಕೆ ಮಾಡಿಕೊಳ್ಳಲಾಗಿದೆ. ಕಲಬುರ್ಗಿ ಜಿಲ್ಲೆಯನ್ನೇ ಅಧ್ಯಯನಕ್ಕೆ ಆಯ್ಕೆ ಮಾಡುಕೊಳ್ಳಲು ಪ್ರಮುಖ ಕಾರಣವೆಂದರೆ ಇಲ್ಲಿ ಮೊದಲಿನಿಂದಲೂ ವಿದ್ಯಾರ್ಥಿ ಸಂಘಟನೆಗಳು ಸಕ್ರಿಯವಾಗಿದ್ದು, ಹಲವಾರು ಸಮಾಜಮುಖಿ ಕೆಲಸಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿವೆ.

ಸ್ವತಂತ್ರ್ಯ ಭಾರತದ 29 ರಾಜ್ಯಗಳಲ್ಲಿ ಕರ್ನಾಟಕವೂ ಒಂದು ಪ್ರಮುಖ ರಾಜ್ಯವಾಗಿದೆ. ಇದು ಭಾರತದ ದಕ್ಷಿಣಕ್ಕಿದ್ದು, ಆಂಧ್ರಪ್ರದೇಶ, ಮಹಾರಾಷ್ಟ್ರ, ತಮಿಳನಾಡು, ಕೇರಳ, ಹಾಗೂ ಗೋವಾ ರಾಜ್ಯಗಳು ಕರ್ನಾಟಕದ ಗಡಿ ರಾಜ್ಯಗಳಾಗಿವೆ. ರಾಜ್ಯದ ಪಶ್ಚಿಮದಲ್ಲಿ ಕರಾವಳಿ ಇದೆ. ಕರ್ನಾಟಕವನ್ನು ಮುಖ್ಯವಾಗಿ ಬಯಲು ಪ್ರದೇಶ, ಕರಾವಳಿ ಪ್ರದೇಶ ಹಾಗೂ ಮಲೆನಾಡು ಪ್ರದೇಶವೆಂದು ಸ್ಥೂಲವಾಗಿ ವಿಂಗಡಿಸಲಾಗಿದೆ. ಕರ್ನಾಟಕದ ಬಯಲು ಪ್ರದೇಶದಲ್ಲಿರುವ ಉತ್ತರ ಬಯಲೇ ಹೈದ್ರಾಬಾದ ಕರ್ನಾಟಕ. ಈ ಭಾಗದ ಜನರು ಬಡವರಲ್ಲ. ಹಿಂದುಳಿದವರೂ ಅಲ್ಲ. ಒಂದು ಜನಾಂಗದ ಅಭಿವೃದ್ಧಿ ಹೊಂದಲು ಅವರಿಗೆ ತಮ್ಮ ಪ್ರದೇಶದ ಕಲೆ, ಸಂಸ್ಕೃತಿ, ಶಿಲ್ಪಕಲೆ, ಸಾಹಿತ್ಯ, ಸಂಗೀತ, ನೃತ್ಯ ಮತ್ತು ಆಯಾ ಕ್ಷೇತ್ರಗಳಲ್ಲಿ ಪ್ರಗತಿ ಸಾಧಿಸಿದ ಮಹಾಪುರುಷರ ಅಭಿಮಾನ ಬೇಕಾಗುತ್ತದೆ. ಜೊತೆಗೆ ತಮ್ಮ ಪ್ರದೇಶದಲ್ಲಿಯ ಗುಡ್ಡ, ಬೆಟ್ಟ, ಜಲಪಾತ, ನಿಸರ್ಗಪ್ರೇಮ ಇವುಗಳ ಬಗ್ಗೆಯೂ ಅಭಿಮಾನ ಬೇಕಾಗುತ್ತದೆ.

ಕರ್ನಾಟಕವನ್ನು ಬ್ರಿಟಿಷರ ಆಳ್ವಿವಿಕೆಯ ಆಧಾರದ ಮೇಲೆ ವಿಶೇಷವಾಗಿ ಅದರ ಆಳ್ವಿವಿಕೆಯ ಅಂತ್ಯಭಾಗದಲ್ಲಿ ಮದ್ರಾಸ್-ಕರ್ನಾಟಕ, ಮುಂಬೈ-ಕರ್ನಾಟಕ, ಹೈದ್ರಾಬಾದ-ಕರ್ನಾಟಕ, ಹಳೇಯ ಮೈಸೂರು ಮತ್ತು ಕೊಡಗು ಎಂದು ಐದು ಭಾಗಗಳಲ್ಲಿ ವಿಂಗಡಿಸಲಾಯಿತು.

ಹೈದ್ರಾಬಾದ–ಕರ್ನಾಟಕ್ಕೆ ಉಳಿದ ನಾಲ್ಕು ಭಾಗಗಳಿಗೆ ಸ್ವಾತಂತ್ರ್ಯ ದೊರೆತ 13 ತಿಂಗಳ ನಂತರ ಎಂದರೆ ಸೆಪ್ಟೆಂಬರ್ 17, 1948 ರಲ್ಲಿ ಸ್ವಾತಂತ್ರ್ಯ ಹೊಂದಿತು. ಹೈದ್ರಾಬಾದ ವಿಮೋಚನೆಯ ನಂತರ ಈ ಭಾಗವು ನವ್ಹೆಂವರ್ 1, 1956 ರಲ್ಲಿ ವಿಶಾಲ ಕರ್ನಾಟಕದಲ್ಲಿ ಒಂದಾಯಿತು. ಈ ಭಾಗದ ಜಿಲ್ಲೆಗಳೆಂದರೆ ಕೊಪ್ಪಳ, ರಾಯಚೂರ, ಕಲಬುರ್ಗಿ ಮತ್ತು ಬೀದರ. ಇದರಲ್ಲಿ ಒಟ್ಟು 24 ತಾಲೂಕುಗಳಿವೆ.

ವಿಸ್ತೀರ್ಣದಲ್ಲಿ ಅತ್ಯಂತ ದೊಡ್ಡ ಜಿಲ್ಲೆ ಕಲಬುರ್ಗಿ. ಇದನ್ನು ಗುಲಬರ್ಗಾ ಎಂದು ಕರೆಯುತ್ತಾರೆ. ಇದು ಕನ್ನಡ ಸಾಹಿತ್ಯದ ತವರು ಜಿಲ್ಲೆ. ಹೇಗೆಂದರೆ 'ಕವಿರಾಜಮಾರ್ಗ' ರಚಿತವಾದದ್ದು ಇಲ್ಲಿಯೇ ಮತ್ತು ವಚನ ಸಾಹಿತ್ಯದ ಪ್ರಥಮ ದಾಖಲಾತಿಯು ಈ ಜಿಲ್ಲೆಗೆ ಸೇರಿದೆ. ಈ ಜಿಲ್ಲೆಯಲ್ಲಿ ರಾಷ್ಟ್ರಕೂಟರು, ಬಹುಮನಿ ಸುಲ್ತಾನರು, ಸುರುಪುರದ ನಾಯಕರು ಹೀಗೆ ಅನೇಕ ರಾಜಮನೆತನಗಳು ಆಳಿ ಹೋಗಿದ್ದಾರೆ. ಸಾಮಾಜಿಕವಾಗಿ, ಐತಿಹಾಸಿಕವಾಗಿ, ಸಾಂಸ್ಕೃತಿಕವಾಗಿ ಈ ಜಿಲ್ಲೆಯು ತುಂಬಾ ಶ್ರೀಮಂತವಾಗಿದೆ. ಕಲಬುರ್ಗಿ ಜಿಲ್ಲೆಯಲ್ಲಿ ಒಂದು ಕೇಂದ್ರಿಯ ವಿಶ್ವವಿದ್ಯಾಲಯ, ಗುಲಬರ್ಗಾ ವಿಶ್ವವಿದ್ಯಾಲಯ, ಹೈಕೋರ್ಟ್ ಪೀಠ, ದೂರದರ್ಶನ ಕೇಂದ್ರ, ಆಕಾಶವಾಣಿ ಕೇಂದ್ರ, ವಿಜ್ಞಾನ ಕೇಂದ್ರ ಮತ್ತು ಕೃಷಿ ಸಂಶೋಧನಾ ಕೇಂದ್ರವು ಇದೆ. ಇದು ಹಲವಾರು ದೃಷ್ಟಿಕೋನದಿಂದ ಅತ್ಯಂತ ಶ್ರೇಷ್ಠ ಜಿಲ್ಲೆಯೆಂದು ಪರಿಗಣಿಸಬೇಕಾಗಿದೆ.

ಕರ್ನಾಟಕದ ರಾಜಕೀಯ ಇತಿಹಾಸವನ್ನು ಅವಲೋಕಿಸಿದಾಗ, ರಾಜಕೀಯ ಪಕ್ಷಗಳಷ್ಟೇ ಪ್ರಭಾವಶಾಲಿಯಾಗಿ ಆಂದೋಲನಗಳು, ಚಳುವಳಿಗಳು ಕಂಡುಬರುತ್ತವೆ. ಉದಾಹರಣೆಗೆ, ರೈತ ಚಳುವಳಿ, ಭಾಷೆಯ ಉಳಿವಿಗಾಗಿ ನಡೆದಂತಹ ಗೋಕಾಕ್ ಚಳುವಳಿ, ಕಾಸರಗೋಡು ಉಳಿಸಿ ಚಳುವಳಿ, ಪರಿಸರ ಉಳಿಸಿ ಚಳುವಳಿ, ಕಾವೇರಿ – ಮಹದಾಯಿ ನದಿ ನೀರಿನ ಕುರಿತಾದ ಚಳುವಳಿ, ಉತ್ತರ ಕರ್ನಾಟಕ–ಹೈದ್ರಾಬಾದ್ ಕರ್ನಾಟಕದ ಅಭಿವೃದ್ಧಿಗಾಗಿನ ಆಂದೋಲನ ಇತ್ಯಾದಿ. ಇದೇ ಹಿನ್ನೆಲೆಯನ್ನು ಆಧರಿಸಿದ ವಿದ್ಯಾರ್ಥಿ ಸಮೂಹದ ಆಂದೋಲನಗಳೂ ರಾಜ್ಯದ ರಾಜಕೀಯದ ಸ್ಥಿತಿಗತಿಗಳನ್ನು ನಿರ್ಧರಿಸುವ ಒಂದು ಅಂಶವಾಗಿ ಕಂಡುಬಂದಿದೆ. ಪ್ರತಿ ರಾಜಕೀಯ ಪಕ್ಷಗಳು ತಮ್ಮ ಪಕ್ಷದ ನೆಲೆಯ ವಿಸ್ತಾರಕ್ಕೆ ಮತ್ತು ರಾಜಕೀಯ ಸಿದ್ಧಾಂತಗಳ ಗಟ್ಟಿಗೊಳಿಸುವಿಕೆಗೆ ವಿದ್ಯಾರ್ಥಿ ಸಮೂಹವನ್ನು ಆಕರ್ಷಿಸುತ್ತವೆ. ಉದಾಹರಣೆಗೆ ನ್ಯಾಷನಲ್ ಸ್ಟೂಡೆಂಟ್ ಯೂನಿಯನ್ ಕಾಂಗ್ರೆಸ್ ಪ್ರಣೀತ ವಿದ್ಯಾರ್ಥಿ ಸಂಘಟನೆಯಾದರೆ, ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ ಭಾರತೀಯ ಜನತಾ ಪಕ್ಷಕ್ಕೆ ಪೂರಕವಾಗಿ ಯುವಜನತೆಯಲ್ಲಿ ರಾಜಕೀಯ ಪ್ರಜ್ಞೆಯನ್ನು ಮೂಡಿಸುತ್ತಿದೆ. ಉದ್ದೇಶಗಳು ಪ್ರಜಾಪ್ರಭುತ್ವವನ್ನು ಗಟ್ಟಿಗೊಳಿಸುವುದಾದರೂ, ಹೆಚ್ಚಿನ ರಾಜಕೀಯ ಪಕ್ಷಗಳು ಯುವ ಸಮುದಾಯ ಅದರಲ್ಲೂ ಮುಖ್ಯವಾಗಿ ವಿದ್ಯಾರ್ಥಿಗಳನ್ನು ರಾಜಕೀಯದ ಋಣಾತ್ಮಕ

ಬೆಳವಣಿಗೆಯಲ್ಲಿ ತೊಡಗಿಸಿಕೊಳ್ಳುತ್ತಿವೆ ಎಂಬ ಆರೋಪವೂ ಇದೆ. ಆದರೆ ರಾಜಕೀಯ ಸಿದ್ಧಾಂತದ ಹಿನ್ನೆಲೆಯಲ್ಲಿ, ವಿದ್ಯಾರ್ಥಿ ಸಂಘಟನೆಗಳ ರಾಜಕೀಯ ಸಾಮಾಜೀಕರಣವು ಹೆಚ್ಚಿನ ಮಹತ್ವವನ್ನು ಪಡೆದುಕೊಳ್ಳುತ್ತಿದೆ ಮತ್ತು ಅಧ್ಯಯನ ಸೂಕ್ತವಾದ ಕುತೂಹಲವನ್ನು ಹುಟ್ಟುಹಾಕಿದೆ.

ಈ ಮೇಲಿನ ಹಿನ್ನೆಲೆಯ ಆಧಾರದಲ್ಲಿ ಮತ್ತು ವಿಚಾರಧಾರೆಗಳು ಯುವ ಸಮುದಾಯದಲ್ಲಿ ಬೀರುತ್ತಿರುವ ಪ್ರಭಾವಗಳ ಕುರಿತು, ಕರ್ನಾಟಕ ರಾಜ್ಯದ ವಿದ್ಯಾರ್ಥಿ ಸಂಘಟನೆಗಳ ಕಾರ್ಯವೈಖರಿಯನ್ನು ಅಧ್ಯಯನ ಮಾಡಲಾಗಿದೆ. ಕ್ಷೇತ್ರಕಾರ್ಯಕ್ಕೆ ಆರಿಸಲ್ಪಟ್ಟ ವಿದ್ಯಾರ್ಥಿ ಸಂಘಟನೆಗಳನ್ನು ಮತ್ತು ತತ್ಸಂಬಂಧಿ ಕಾಲೇಜುಗಳ ವಿವರಗಳೊನ್ನಳಗೊಂಡಂತೆ, ವಿಸ್ತೃತ ವರದಿಯನ್ನು ಈ ಅಧ್ಯಾಯದಲ್ಲಿ ನೀಡಲಾಗಿದೆ.

ಅಧ್ಯಯನಕ್ಕೆ ಆರಿಸಲ್ಪಟ್ಟ ಕಾಲೇಜುಗಳ ವಿವರ :

ಕ್ರ.ಸಂ	ಅಧ್ಯಯನಕ್ಕೆ ಆರಿಸಲ್ಪಟ್ಟ ಕಾಲೇಜಿನ ವಿವರ	ಸಂಖ್ಯೆ
1	ಸರಕಾರಿ ಪ್ರಥಮ ದರ್ಜೆ ಕಾಲೇಜು, ಸೇಡಂ, ಗುಲ್ಬರ್ಗಾ	23
2	ನೃಪತುಂಗ ಪ್ರಥಮ ದರ್ಜೆ ಕಾಲೇಜು, ಸೇಡಂ, ಗುಲ್ಬರ್ಗಾ	16
3	ನೂತನ ಪದವಿ ಮಹಾವಿದ್ಯಾಲಯ, ಗುಲ್ಬರ್ಗಾ	40
4	ಶರಣ ಬಸವೇಶ್ವರ ಮಹಾವಿದ್ಯಾಲಯ, ಗುಲ್ಬರ್ಗಾ	35
5	ಎನ್ ಟಿ ಎಸ್ ಕಾಲೇಜು, ಸೇಡಂ, ಗುಲ್ಬರ್ಗಾ	10
6	ಸರಕಾರಿ ಮಹಾವಿದ್ಯಾಲಯ, ಆಳಂದ, ಗುಲ್ಬರ್ಗಾ	10
7	ಅಂಬೇಡ್ಕರ್ ಮಹಾವಿದ್ಯಾಲಯ, ಗುಲ್ಬರ್ಗಾ	10
8	ಸರಕಾರಿ ಮಹಾವಿದ್ಯಾಲಯ, ಚಿಂಚೋಳಿ, ಗುಲ್ಬರ್ಗಾ	14
9	ಸರಕಾರಿ ಮಹಾವಿದ್ಯಾಲಯ, ಗುಲ್ಬರ್ಗಾ	12
10	ನ್ಯಾಷನಲ್ ಡಿಗ್ರಿ ಕಾಲೇಜು, ಗುಲ್ಬರ್ಗಾ	10
11	ಸರಕಾರಿ ಮಹಾ ವಿದ್ಯಾಲಯ, ಜೇವರ್ಗಿ, ಗುಲ್ಬರ್ಗಾ	10
12	ವೀರಮ್ಮ ಗಂಗಸಿರಿ ಮಹಿಳಾ ಮಹಾವಿದ್ಯಾಲಯ ಗುಲ್ಬರ್ಗಾ	10

ಕಲಬುರಗಿ ಜಿಲ್ಲೆಯ ಒಟ್ಟು 12 ಕಾಲೇಜುಗಳಲ್ಲಿ ವಿದ್ಯಾರ್ಥಿ ಸಂಘಟನೆಗಳನ್ನು ಸಂಪರ್ಕಿಸಿ, ಮಾಹಿತಿಗಳನ್ನು ಕಲೆಹಾಕಲಾಗಿದೆ. ಒಟ್ಟು 200 ವಿದ್ಯಾರ್ಥಿಗಳನ್ನು ಅಧ್ಯಯನದ ಉದ್ದೇಶಗಳಿಗನುಗುಣವಾಗಿ ಪ್ರಶ್ನಾವಳಿಗಳನ್ನು ನೀಡಿ ಮಾಹಿತಿಯನ್ನು ಸಂಗ್ರಹಿಸಲಾಗಿದೆ..

ಕಲಬುರಗಿ ಭಾಗದ ಈ ಕಾಲೇಜುಗಳಲ್ಲಿ ವಿದ್ಯಾರ್ಥಿ ಸಂಘಟನೆಗಳು ಸ್ಥಳೀಯವಾಗಿ ಕಂಡುಬರುವ ಆಸಕ್ತಿಗಳನ್ನು ಕೇಂದ್ರೀಕರಿಸಿ, ರಾಜಕೀಯ ಬೆಂಬಲದ ಮೂಲಕ ತಮ್ಮನ್ನು ತಾವು ತೊಡಗಿಸಿಕೊಂಡಿರುವುದು ಸಾಮಾನ್ಯವಾಗಿ ಕಂಡುಬರುವ ಅಂಶ.

6. ಅಧ್ಯಯನದ ಪ್ರಯೋಜನಗಳು.

1. ಕರ್ನಾಟಕ ರಾಜ್ಯದ ವಿದ್ಯಾರ್ಥಿ ಸಂಘಟನೆಗಳ ರಾಜಕೀಯ ಸಾಮಾಜೀಕರಣದ ಮೂಲಭೂತ ವಿಚಾರಗಳನ್ನು ತಿಳಿದುಕೊಳ್ಳಲು ಈ ಅಧ್ಯಯನ ಸಹಾಯಕಾರಿಯಾಗುವುದು.
2. ಈ ಕ್ಷೇತ್ರದಲ್ಲಿ ಆಸಕ್ತಿಯಿರುವ ಸಂಶೋಧಕರಿಗೆ, ವಿದ್ಯಾರ್ಥಿ ಮತ್ತು ಶಿಕ್ಷಕರಿಗೆ,ಈ ಅಧ್ಯಯನದಿಂದ ತುಂಬಾ ಪ್ರಯೋಜನವಾಗುವುದು.
3. ವಿದ್ಯಾರ್ಥಿ ಸಂಘಟನೆಗಳ ಆಂತರಿಕ ಪ್ರಜಾಪ್ರಭುತ್ವ, ಅವುಗಳು ರಾಜ್ಯದ ನೀತಿ ನಿರೂಪಣೆಯಲ್ಲಿ ವಹಿಸುವ ಪಾತ್ರ ಮುಂತಾದವುಗಳನ್ನು ತಿಳಿದುಕೊಳ್ಳಲು ಈ ಅಧ್ಯಯನ ಸಹಾಯಕಾರಿಯಾಗುವುದು

7. ಸಂಶೋಧನೆಯ ಇತಿಮಿತಿಗಳು.

1. ಸಂಶೋಧನೆಯ ಅಧ್ಯಯನವು 'ಕರ್ನಾಟಕ ರಾಜ್ಯದ ವಿದ್ಯಾರ್ಥಿ ಸಂಘಟನೆಗಳ ರಾಜಕೀಯ ಸಾಮಾಜೀಕರಣ' ವಿಷಯಕ್ಕೆ ಸೀಮಿತವಾದುದಾಗಿದೆ.

2 ಸಂಶೋಧನಾ ಅಧ್ಯಯನಕ್ಕಾಗಿ ಐತಿಹಾಸಿಕ ವಿಧಾನ ಅಳವಡಿಸಿಕೊಂಡಿ ರುವುದರಿಂದ ಆನುಷಂಗಿಕ ಮಾಹಿತಿಯನ್ನು ಬಳಸಿರುವುದರಿಂದ ಸಂಗ್ರಹಿಸಿದ ಮಾಹಿತಿಗಳು ಕರಾರುವಾಕ್ಕಾಗಿರುವುದಿಲ್ಲ.

3. ವಿದ್ಯಾರ್ಥಿ ಸಂಘಟನೆಗಳು ಸಂಶೋಧನಾ ಅಧ್ಯಯನಕ್ಕೆ ಸಂಬಂಧಿಸಿದಂತೆ ಮಾಹಿತಿ ನೀಡುವಲ್ಲಿ ಕೆಲವೊಮ್ಮೆ ಸಹಕರಿಸದೆ ಇದ್ದದ್ದು.
4. ವಿದ್ಯಾರ್ಥಿಸಂಘಟನೆಗಳ ನಾಯಕರು ತಮ್ಮ ಅನುಭವಗಳನ್ನು ಹಂಚಿಕೊಳ್ಳಲು ಹಿಂಜರಿಕೆ ತೋರಿಸಿದ್ದು.

8. ಸಂಶೋಧನಾ ಅಧ್ಯಯನದ ವಿನ್ಯಾಸ.

"ಕರ್ನಾಟಕದಲ್ಲಿ ವಿದ್ಯಾರ್ಥಿ ಸಂಘಟನೆಗಳ ರಾಜಕೀಯ ಸಾಮಾಜೀಕರಣ– ಅಧ್ಯಯನ" ಶೀರ್ಷಿಕೆಯ ಅಡಿಯಲ್ಲಿ ಒಟ್ಟು 7 ಅಧ್ಯಾಯಗಳನ್ನು ಒಳಗೊಂಡಿದೆ.

ಅಧ್ಯಾಯ– 1. ಪ್ರಸ್ತಾವನೆಗೆ ಸಂಬಂಧಿಸಿದುದಾಗಿದೆ. ಈ ಅಧ್ಯಾಯದಲ್ಲಿ ಪೀಠಿಕೆ, ಸಮಸ್ಯೀಕರಣ, ಅಧ್ಯಯನದ ಉದ್ದೇಶಗಳು, ಅಧ್ಯಯನದ ಕ್ಷೇತ್ರ, ಸಂಶೋಧನೆಯ ವಿಧಾನಗಳು, ಸಂಶೋಧನೆಯ ಪ್ರಯೋಜನಗಳು, ಸಂಶೋಧನೆಯ ಇತಿಮಿತಿಗಳು, ಸಂಶೋಧನಾ ಅಧ್ಯಯನದ ವಿನ್ಯಾಸ ಇವುಗಳ ಕುರಿತು ಚರ್ಚಿಸಲಾಗಿದೆ.

ಅಧ್ಯಾಯ–2. ಈ ಅಧ್ಯಾಯದಲ್ಲಿ ಸಾಹಿತ್ಯ ಪರಾಮರ್ಶೆ ಅಂದರೆ ಸಂಶೋಧನೆಗೆ ಸಂಬಂಧಿಸಿದ ಸೈದ್ಧಾಂತಿಕ ಚೌಕಟ್ಟು ನೀಡಲಾಗಿದೆ. ಕರ್ನಾಟಕದಲ್ಲಿ ವಿದ್ಯಾರ್ಥಿ ರಾಜಕೀಯ ಕ್ರಿಯಾಶೀಲತೆಗೆ ಸಂಬಂಧಿಸಿದುದಾಗಿದೆ. ಈ ಅಧ್ಯಾಯದಲ್ಲಿ ಕರ್ನಾಟಕದಲ್ಲಿ ವಿದ್ಯಾರ್ಥಿ ರಾಜಕೀಯ ಕ್ರಿಯಾಶೀಲತೆಯ ಐತಿಹಾಸಿಕ ಬೆಳವಣಿಗೆ, ಸ್ವಾತಂತ್ರ್ಯ ಹೋರಾಟ, ರೈತ ಚಳುವಳಿ, ದಲಿತ ಚಳುವಳಿ, ಗೋಕಾಕ ಚಳುವಳಿ, ಮಂಡಲ್ ಚಳುವಳಿ, ನಕ್ಸಲ್ ಚಳುವಳಿಗಳಲ್ಲಿ ವಿದ್ಯಾರ್ಥಿಗಳ ಭಾಗವಹಿಸುವಿಕೆ, ವಿದ್ಯಾರ್ಥಿ ಸಂಘಟನೆಗಳು ಪ್ರಮುಖ ಬೇಡಿಕೆಗಳನ್ನು ಇಟ್ಟುಕೊಂಡು ಮಾಡಿದ ಹೋರಾಟಗಳನ್ನು ಈ ಅಧ್ಯಾಯದಲ್ಲಿ ವಿಸ್ತ್ರತವಾಗಿ ಚರ್ಚಿಸಲಾಗಿದೆ.

ಅಧ್ಯಾಯ– 3. ಈ ಅಧ್ಯಾಯದಲ್ಲಿ ಕ್ಷೇತ್ರ ಅಧ್ಯಯನದ ಕಿರು ಪರಿಚಯ ನೀಡಲಾಗಿದೆ. ಅಂದರೆ ಸಂಶೋಧನಾ ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ಕಲಬುರ್ಗಿ ಜಿಲ್ಲೆಯ ಭೌಗೋಳಿಕ, ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ವಿಷಯಗಳನ್ನು ವಿವರವಾಗಿ ಚರ್ಚಿಸಲಾಗಿದೆ.

ಅಧ್ಯಾಯ– 4. ಈ ಅಧ್ಯಾಯದಲ್ಲಿ ರಾಜಕೀಯ ಸಾಮಾಜೀಕರಣದ ಕುರಿತು ಚರ್ಚಿಸಲಾಗಿದೆ. ಅಂದರೆ ರಾಜಕೀಯ ಸಾಮಾಜೀಕರಣದ ಅರ್ಥ, ವ್ಯಾಖ್ಯೆ, ರಾಜಕೀಯ ಸಾಮಾಜೀಕರಣದ ನಿಯೋಗಗಳಾದ ಕುಟುಂಬ, ಶಾಲೆ, ಸಮವಯಸ್ಕರ ಗುಂಪು, ರಾಜಕೀಯ ಪಕ್ಷಗಳು, ಸಮೂಹ ಮಾಧ್ಯಮ ಈ ವಿಷಯಗಳ ಕುರಿತು ಚರ್ಚಿಸಲಾಗಿದೆ.

ಅಧ್ಯಾಯ– 5. ಈ ಅಧ್ಯಾಯದಲ್ಲಿ ವಿದ್ಯಾರ್ಥಿಸಂಘಟನೆಯ ಬಗ್ಗೆ ಅರಿವು ಮತ್ತು ರಾಜಕೀಯ ಭಾಗವಹಿಸುವಿಕೆ ಕುರಿತು ಚರ್ಚಿಸಲಾಗಿದೆ.

ಅಧ್ಯಾಯ– 6. ಈ ಅಧ್ಯಾಯದಲ್ಲಿ ಶೈಕ್ಷಣಿಕ ಮತ್ತು ರಾಜಕೀಯ ವಿಚಾರಗಳಿಗೆ ಸಂಬಂಧಿಸಿದಂತೆ ವಿದ್ಯಾರ್ಥಿಗಳ ಗ್ರಹಿಕೆ ಕುರಿತು ವಿವರಣೆಯನ್ನು ನೀಡಲಾಗಿದೆ.

ಅಧ್ಯಾಯ–7 ಈ ಅಧ್ಯಾಯವು ಸಂಶೋಧನಾ ಅಧ್ಯಯನದ ಫಲಿತಗಳು ಮತ್ತು ಸಲಹೆಗಳಿಗೆ ಸಂಬಂಧಿಸಿದೆ. ಈ ಅಧ್ಯಾಯದಲ್ಲಿ ಸಂಶೋಧನೆಯ ಸಾರಾಂಶವನ್ನು ಸಂಕ್ಷಿಪ್ತವಾಗಿ ಚರ್ಚಿಸಲಾಗಿದೆ.

10. ಪರಾಮರ್ಶನ ಗ್ರಂಥಗಳು.

01) ಎಸ್.ಎಮ್.ಲಿಪಸೆಟ್ (ಸಂ) "ಸ್ಟುಡೆಂಟ್ ಪೊಲಿಟಿಕ್ಸ್" ನ್ಯೂಯಾರ್ಕ ಬೇಸಿಕ್ ಬುಕ್ಸ್, 1967. ಪು–23–24

02) ಲಿಬ್‌ಮ್ಯಾನ್ ವಾಕರ್ ಆಂಡ್ ಗ್ಲೇಜರ್, "ಲ್ಯಾಟಿನ್ ಅಮೆರಿಕನ್ ಯುನಿವರ್ಸಿಟಿ ಸ್ಟುಡೆಂಟ್ಸ್ : ಎ ಸಿಕ್ಸ್ ನೆಷನ್ಸ್ ಸ್ಟಡಿ" ಕ್ಯಾಂಬ್ರಿಜ್, ಮೆಸ್ಸಾಚುಸೆಟ್ಸ್, ಹಾವರ್ಡ ಯುನಿವರ್ಸಿಟಿ ಪ್ರೆಸ್, 1972. ಪು–27

03) ಎಸ್.ಎಮ್.ಲಿಪಸೆಟ್ ಆಂಡ್ ಫಿಲಿಫ್ ಜಿ.ಅಲ್ತಬಷ್, "ಸ್ಟುಡೆಂಟ್ ಇನ್ ರಿವ್ಹೋಲ್ಟ್, ಇಂಟ್ರಾಡಕ್ಸನ್" ಬೇಕನ್ ಪ್ರೆಸ್, ಬೋಸ್ಟನ್, 1969. ಪು–65

04) ಆಯನ್ ರ್‍ಯಾಂಡ್ "ದಿ ನ್ಯೂ ಲೆಫ್ಟ್ : ದ ಎಂಟಿ ಇಂಡಸ್ಟ್ರಿಯಲ್ ರೆವೂಲ್ಯೂಷನ್" ದ ನ್ಯೂ ಅಮೆರಿಕನ್ ಲೈಬ್ರರಿ, ನ್ಯೂಯಾರ್ಕ 1971. ಪು–22–25

05) ಎ.ಬೆಲ್ಡನ್ ಫಿಲ್ಡ್ಸ್, "ದ ರೆವೂಲ್ಯೂಷನ್ ಬೆಟ್ರಾಯಿಡ್ : ದ ಫ್ರೆಂಚ್ ಸ್ಟುಡೆಂಟ್ ರಿವ್ಹೋಲ್ಟ್ ಆಫ್ ಮೇ–ಜೂನ್ 1968" ಇನ್ ಎಸ್.ಎಮ್.ಲಿಪಸೆಟ್ ಆಂಡ್ ಫಿಲಿಫ್ ಜಿ.ಅಲ್ತಬಷ್.

06) ಎ.ಬೆಲ್ಡನ್ ಫಿಲ್ಡ್ಸ್, "ದ ರೆವೂಲ್ಯೂಷನ್ ಬೆಟ್ರಾಯಿಡ್ : ದ ಫ್ರೆಂಚ್ ಸ್ಟುಡೆಂಟ್ ರಿವ್ಹೋಲ್ಟ್ ಆಫ್ ಮೇ–ಜೂನ್ 1968" ಇನ್ ಎಸ್.ಎಮ್.ಲಿಪಸೆಟ್ ಆಂಡ್ ಫಿಲಿಫ್ ಜಿ.ಅಲ್ತಬಷ್. ಪು–162

07) ಆರ್.ಆರ್.ಶರ್ಮಾ, "ಕ್ಯಾಂಪಸೆಸ್ ಆಫ್ ಹೈಯರ್ ಎಜುಕೇಶನ್ : ಜಿನಿಸಿಸ್ ಆಫ್ ಅನರೆಸ್ಟ್" ಜರ್ನಲ್ ಆಫ್ ಹೈಯರ್ ಎಜುಕೇಶನ್, ಯುಜಿಸಿ, ವ್ಯಾಲ್ಯೂಮ್ 11, ನಂ1&2, ನ್ಯೂ ಡೆಲ್ಲಿ, 1981. ಪು–23

08) ಜ್ವಾಯಿಸ್ ಗೆಲ್ಬ್ ಆಂಡ್ ಮ್ಯಾರಿಯನ್ ಲಿಫ್‌ಪ್ಯಾಲಿ, "ದ ಪೊಲಿಟಿಕ್ಸ ಆಫ್ ಸೋಷಿಯಲ್ ಚೇಂಜ್ : ಎ ರೀಡರ್ ಫಾರ್ ಸೆವೆಂಟೀಸ್", ಹೋಲ್ಟ್ ರಿನೆಹಾರ್ಟ ಆಂಡ್ ವಿನ್‌ಸ್ಟನ್, ನ್ಯೂಯಾರ್ಕ, 1971. ಪು–148–149

09) ಕ್ಯಾನಿಥ್ ಕೆನಿಸ್ಟನ್, "ಯು ಹ್ಯಾವ್ ಟು ಗ್ರೋ ಅಪ್ ಇನ್ ಸಿಯರ್ಸ ಡ್ಯಾಲೆ ಟು ನೋ ಹೌ ಬ್ಯಾಡ್ ಥಿಂಗ್ಸ್ ರಿಯಲಿ ಆರ್" ಇನ್ ಜ್ವಾಯಿಸ್ ಗೆಲ್ಬ್ ಆಂಡ್ ಮ್ಯಾರಿಯನ್ ಲಿಫ್‌ಪ್ಯಾಲಿ. ಪು–149

10) ಎಡ್ವರ್ಡ್ ಶಿಲ್ಸ್, "ಡ್ರಿಮ್ಸ ಆಫ್ ಪ್ಯಾನಿಟ್ಯೂಡ್, ನೈಟ್‌ಮೇರ್ಸ್ ಆಫ್ ಸ್ಕೇರ್ಸಿಟಿ" ಇನ್ ಎಸ್.ಎಮ್.ಲಿಪಸೆಟ್ ಆಂಡ್ ಫಿಲಿಫ್ ಜಿ.ಅಲ್ತಬಷ್. (ಸಂ) ಟರ್ಮಾಯಿಲ್ ಆಂಡ್ ಟ್ರಾನ್ಸಿಷನ್, ಲಾಲವಾಣಿ ಪಬ್ಲಿಷಿಂಗ್ ಹೌಸ್, ಬಾಂಬೆ, 1968. 20–25

11) ಅಮರಜೀತ್ ಕೌರ್ "ಸ್ಟುಡೆಂಟ್ ಮೂವ್‌ಮೆಂಟ್ಸ ಥ್ರೂ ದಿ ಇಯರ್ಸ್", ನ್ಯೂ ಏಜ್, ಮಾರ್ಚ 9, 1986. ಪು–33–36

12) ತಾರಾಚಂದ್, "ಹಿಸ್ಟರಿ ಆಫ್ ದಿ ಫ್ರೀಡಮ್ ಮೂವ್‌ಮೆಂಟ್ ಇನ್ ಇಂಡಿಯಾ" ಗವ್ಹರ್ನಮೆಂಟ್ ಆಫ್ ಇಂಡಿಯಾ, ನ್ಯೂ ಡೆಲ್ಲಿ, 1972, ವ್ಯಾಲ್ಯೂಮ್–3, ಪು–322

13) ಅಲ್ತ್‌ಬಷ್ ಫಿಲಿಫ್ ಜಿ, "ಸ್ಟುಡೆಂಟ್ ಪೋಲಿಟಿಕ್ಸ್: ಹಿಸ್ಟಾರಿಕಲ್ ಪರ್ಸಪೆಕ್ಟಿವ್ ಆಂಡ್ ಚೇಂಜಿಂಗ್ ಸಿನ್", ವಿಕಾಸ ಪಬ್ಲಿಷಿಂಗ್ ಹೌಸ್ ಪ್ರೈವ್ಹೇಟ್ ಲಿಮಿಟೆಡ್, ನ್ಯೂ ಡೆಲ್ಲಿ, 1974. ಪು–139–166

14) ಸುನೀತ್ ಚೋಪ್ರಾ, "ಪೊಲಿಟಿಕಲ್ ಕಾನ್ಸಿಯಸ್‌ನೆಸ್ ಆಫ್ ದಿ ಸ್ಟುಡೆಂಟ್ ಮೂವ್‌ಮೆಂಟ್ ಇನ್ ಇಂಡಿಯಾ", ಸೋಶಿಯಲ್ ಸೈಂಟಿಸ್ಟ್, ಮೇ 1977. ಪು–61

15) ಅಲ್ತಬಷ್ ಫಿಲಿಫ್ ಜಿ "ಸ್ಟುಡೆಂಟ್ಸ್, ಪೊಲಿಟಿಕ್ಸ ಆಂಡ್ ಹೈಯರ್ ಎಜುಕೇಶನ್ ಇನ್ ಎ ಡೆವಲಪಿಂಗ್ ಏರಿಯಾ : ದಿ ಕೆಸ್ ಆಫ್ ಬಾಂಬೆ, ಇಂಡಿಯಾ (ಥಿಸಿಸ್) ಚಿಕಾಗೋ 1966. ಪು–198

16) ಅಲ್ತಬಷ್, ಪಿ.ಜಿ. "ಸ್ಟುಡೆಂಟ್ಸ್, ಪೊಲಿಟಿಕ್ಸ ಆಂಡ್ ಹೈಯರ್ ಎಜುಕೇಶನ್ ಇನ್ ಇಂಡಿಯಾ" ಇನ್ ಪಿ.ಜಿ.ಅಲ್ತಬಷ್ (ಸಂ), ದ ಸ್ಟುಡೆಂಟ್ ರೆವಲ್ಯೂಷನ್: ಎ ಗ್ಲೋಬಲ್ ಅನಾಲಿಸಿಸ್" ವಿಕಾಸ ಪಬ್ಲಿಕೇಷನ್, ನ್ಯೂ ಡೆಲ್ಲಿ, 1968. ಪು–256

17) ಹಜಾರೆ ಎಸ್.ಸಿ., "ಪ್ರೋಟೆಸ್ಟ್ ಪೊಲಿಟಿಕ್ಸ ಆಫ್ ಸ್ಟುಡೆಂಟ್ ಯುಥ್ ಇನ್ ಇಂಡಿಯಾ", ದ ಇಂಡಿಯನ್ ಜರ್ನಲ್ ಆಫ್ ಪೊಲಿಟಿಕಲ್ ಸೈನ್ಸ್, ವ್ಯಾಲ್ಯೂಮ್, 49, ನಂ.1, 1988. ಪು–115–118

18) ಜವಾಹರಲಾಲ ನೆಹರು, "ಯುಥ್ ಆಂಡ್ ದ ಫ್ಯೂಚರ್" ಇನ್ ಸೆಲೆಕ್ಟೆಡ್ ವರ್ಕ್ಸ್ ಆಫ್ ಜವಾಹರಲಾಲ ನೆಹರು, ವ್ಯಾಲ್ಯೂಮ್ 14, ಎ ಪ್ರೋಜೆಕ್ಟ್

ಆಫ್ ನೆಹರು ಫೌಂಡೇಷನ್ ಓರಿಯಂಟ್ ಲಾಂಗಮನ್ ಲಿಮಿಟೆಡ್, ನ್ಯೂ ಡೆಲ್ಲಿ, 1982. ಪು–501

19) ಅಲ್ತಬಷ್, ಪಿ.ಜಿ. "ದ ಟ್ರಾನ್ಸ್‌ಫಾರಮೇಶನ್ ಆಫ್ ದಿ ಇಂಡಿಯನ್ ಸ್ಟುಡೆಂಟ್ ಮೂವ್‌ಮೆಂಟ್" ಏಷಿಯನ್ ಸರ್ವೆ, ವ್ಯಾಲ್ಯೂಮ್ 6 ನಂ–8 1966. ಪು–448–460

20) ಓಂದತ್ತ ತ್ರಿಪಾಠಿ, "ಎ ಸರ್ವೆ ಆಫ್ ಸ್ಟುಡೆಂಟ್ ಎಕ್ಟಿವಿಜಮ್ ಇನ್ ಯುನಿವರ್ಸಿಟಿ (ಥಿಸಿಸ್ ಸಬ್‌ಮಿಟೆಡ್ ಟು ಎಮ್.ಎಸ್. ಯುನಿವರ್ಸಿಟಿ, ಬರೋಡಾ), ಜುಲೈ 1981. ಪು–31–32

21) ಆಶೀಸ್ ರಾಯ್, "ಎಕ್ಸ್‌ಟ್ರಿಮಿಸ್ಟ್ ಪೊಲಿಟಿಕ್ಸ್ ಆಂಡ್ ಯೂಥ್ ರಿವೋಲ್ಟ್ ಇನ್ ವೆಸ್ಟ್ ಬೆಂಗಾಲ್, 1967–72", ಇನ್ ಮುಖರ್ಜಿ (ಸಂ), ಯೂಥ್ ಚೇಂಜ್ ಆಂಡ್ ಚ್ಯಾಲೆಂಜ್, ಕಲ್ಕತ್ತಾ, ಫಿರಮಾ ಕೆ.ಎಲ್.ಎಮ್, 1971. ಪು–13–14

22) ಅನಿಲ ಬಾರನ್ ರಾಯ್, " ಸ್ಟುಡೆಂಟ್ಸ್ ಆಂಡ್ ಪೊಲಿಟಿಕ್ಸ್ ಇನ್ ಇಂಡಿಯಾ" ಮನೋಹರ ಪಬ್ಲಿಕೆಷನ್, ಡೆಲ್ಲಿ, 1977. ಪು–25–26

23) ಜೋಸೆಫ್ ಡಿ.ಬೋನಾ, "ಇನ್‌ಡಿಸಿಪ್ಲಿನ್ ಆಂಡ್ ಸ್ಟುಡೆಂಟ್ ಲೀಡರ್‌ಶಿಪ್ ಇನ್ ಆನ್ ಇಂಡಿಯನ್ ಯುನಿವರ್ಸಿಟಿ" ಇನ್ ಎಸ.ಎಮ್.ಲಿಪ್‌ಸೆಟ್ (ಸಂ), ಸ್ಟುಡೆಂಟ್ ಪೊಲಿಟಿಕ್ಸ್, ಬೇಸಿಕ್ ಬುಕ್ಸ್, ನ್ಯೂಯಾರ್ಕ 1967. ಪು–372–393

24) ಎ.ಕೆ.ಸಿಂಗ್, "ಅಕಾಡೆಮಿಕ್ ಪೊಲಿಟಿಕ್ಸ್ ಆಂಡ್ ಸ್ಟುಡೆಂಟ್ ಅನ್‌ರೆಸ್ಟ್ : ದ ಕೇಸ್ ಆಫ್ ರಾಂಚಿ ಯುನಿವರ್ಸಿಟಿ", ಇನ್ ಪಿ.ಜಿ. ಅಲ್ತಬಷ್ (ಸಂ), ಟರ್ಮಾಯಿಲ್ ಆಂಡ್ ಟ್ರಾನ್ಸಿಷನ್, ಲಾಲವಾಣಿ, ಬಾಂಬೆ, 1968. ಪು–208

25) ಹಿಂಗೋರಾಣಿ ಆರ್.ಸಿ. "ಸ್ಟುಡೆಂಟ್ ಅನ್‌ರೆಸ್ಟ್ ಇನ್ ಬಿಹಾರ, 1974" ಇನ್ ಜಿ.ಎಸ್.ಮನ್ಸುಖಾನಿ (ಸಂ), ಸ್ಟುಡೆಂಟ್ ಪಾವರ್ ಇನ್ ಇಂಡಿಯಾ, ಆಕ್ಸ್‌ಫರ್ಡ ಆಂಡ್ ಐ.ಬಿ.ಹೆಚ್. ನ್ಯೂ ಡೆಲ್ಲಿ, 1975. ಪು–45–46

26) ಯುಸುಫ್ ಎಸ್.ಎಮ್. "ಡೈಮೆನ್‌ಷನ್ ಆಫ್ ಸ್ಟುಡೆಂಟ್ ಎಕ್ಟಿವಿಜಮ್ ಇನ್ ಬಿಹಾರ", ಜರ್ನಲ್ ಆಫ್ ಸೋಶಿಯಲ್ ಆಂಡ್ ಎಕೋನೊಮಿಕ್ ಸ್ಟಡಿ, ವ್ಯಾಲ್ಯೂಮ್ 7(1) ಮಾರ್ಚ 1979. ಪು–38

27) ಅರವಿಂದ ನಾರಾಯನ್ ದಾಸ, "ಪಾರ್ಶಾಲಿಟಿ ಆಫ್ ಎ ಟೋಟಲ್ ರೆವ್ಯೂಲುಷನ್", ಮೆನ್‌ಸ್ಟ್ರಿಮ್, ಎನಿವಲ್ ನಂಬರ್, 1977. ಪು–31

28) ಸಿನ್ಹಾ ಡಿ. "ಡೈಮೆನ್‌ಷನ್ಸ್ ಆಫ್ ಸ್ಟುಡೆಂಟ್ ಎಜಿಟೆಷನ್ಸ್ ಇನ್ ಇಂಡಿಯಾ", ಜರ್ನಲ್ ಆಫ್ ಸೋಷಿಯಲ್ ಆಂಡ್ ಎಕೋನೊಮಿಕ್ ಸ್ಟಡೀಸ್, ವ್ಯಾಲ್ಯೂಮ್ 3, ಸೆಪ್ಟೆಂಬರ್ 1975, ನಂ 3. ಪು–207–210

29) ಥಕ್ಕರನ್ ಪಿ.ಕೆ. ಮೈಕಲ್, "ದ ಸ್ಟುಡೆಂಟ್ ಸಿಚುವೆಷನ್ ಇನ್ ಇಂಡಿಯಾ, 1968–78", ರಿಲಿಜಿಯನ್ ಆಂಡ್ ಸೊಸೈಟಿ, ಸೆಪ್ಟೆಂಬರ್ 1978, ವ್ಯಾಲ್ಯೂಮ್ 25 ನ. 3. ಪು–48

30) ಜಯರಾಮ್ ಎನ್. "ಸಾಧುಸ್ ನೋ ಲಾಂಗರ್ : ರಿಸೆಂಟ್ ಟ್ರೆಂಡ್ಸ್ ಇನ್ ಇಂಡಿಯನ್ ಸ್ಟುಡೆಂಟ್ ಎಕ್ಟಿವಿಜಮ್", ಹೈಯರ್ ಎಜುಕೇಶನ್ (8), 1979. ಪು–690

31) ಸಂಜೀಬ್ ಬರುವಾ, "ಇಮಿಗ್ರೇಷನ್, ಎಥಿನಿಕ್ ಕಾನ್‌ಪ್ಲಿಕ್ಟ್ ಪೊಲಿಟಿಕಲ್ ಟರ್ಮಾಯಿಲ್ ಇನ್ ಆಸ್ಸಾಂ, 1979–1985", ಎಷಿಯನ್ ಸರ್ವೆ, ನವೆಂಬರ್ 1986 ವ್ಯಾಲ್ಯೂಮ್ 26, ನಂ. 11. ಪು–18

32) ಎಮ್. ಚಂದ್ರ ಪೂಜಾರಿ, "ರಾಜಕೀಯ ಬಡತನ" ಸಿದ್ಧಾರ್ಥ ಪ್ರಕಾಶನ, ಹೊಸಪೇಟೆ, 2008. ಪು–122

33) ಬಿ.ವಿ.ವೀರಭದ್ರಪ್ಪ, ಧರ್ಮ–ಮೀಸಲಾತಿ–ಸಾಮಾಜಿಕ ನ್ಯಾಯ–ಸಮಾನತೆ–ಆರ್ಥಿಕ ಹಕ್ಕು–ಅಂಬೇಡ್ಕರ್ ಚಿಂತನೆಯ ನೆಲೆಯಲ್ಲಿ, ದಲಿತ ಅಧ್ಯಯನ,(ಸಂ) ಟಿ.ಆರ್.ಚಂದ್ರಶೇಖರ್, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

34) ಅಸ್ಗರ್ ಅಲಿ ಎಂಜಿನೀಯರ್, "ಮಂಡಲ್ ಕಮೀಷನ್ ಕಾಂಟ್ರಾವರ್ಸಿ" ಅಜಂತಾ ಪಬ್ಲಿಕೇಷನ್, 1991. ಪು–22

35) ಅಲ್ತಬಷ್ ಫೀಲಿಪ್ ಜಿ, "ಇಂಡಿಯನ್ ಕ್ಯಾಂಪಸ್ ಪೊಲಿಟಿಕ್ಸ್" ಇನ್ ಪವನ ಅಗರವಾಲ (ಸಂ) ಸೇಜ್ ಪಬ್ಲಿಕೇಷನ್, ನ್ಯೂ ಡೆಲ್ಲಿ, 2012. ಪು–414

36) ಫೀಷರ್ ಜೊಸೆಫ್, "ದಿ ಯುನಿವರ್ಸಿಟಿ ಸ್ಟುಡೆಂಟ್ ಇನ್ ಸೌಥ್ ಆಂಡ್ ಸೌಥ್‌ಇಸ್ಟ್ ಏಷಿಯಾ", ಮಿನೆರ್ವ್ವಾವಾಲ್ಯೂಮ್ 2,ನಂ,1, ಅಟಮನ್,1973. ಪು–44–46

37) ಹಜಾರೆ.ಎಸ್.ಸಿ., "ಪ್ರೊಟೆಸ್ಟ್ ಪೊಲಿಟಿಕ್ಸ್ ಆಫ್ ಸ್ಟುಡೆಂಟ್ ಯೂಥ್ ಇನ್ ಇಂಡಿಯಾ", ದಿ ಇಂಡಿಯನ್ ಜರ್ನಲ್ ಆಫ್ ಪೊಲಿಟಿಕಲ್ ಸೈನ್ಸ್", ವಾಲ್ಯೂಮ್. 49, ನಂ, 1, 1988. 115–118

38) ನಂದಿ ಆಶಿಸ್, "ಸ್ಟುಡೆಂಟ್ಸ್ ಆಂಡ್ ಪೊಲಿಟಿಕ್ಸ್ ಇನ್ ಇಂಡಿಯಾ", ಇನ್ ಡಿ. ಮುಖರ್ಜಿ (ಸಂ), ಯೂಥ್: ಚೇಂಜ್ ಆಂಡ್ ಚಾಲೆಂಜ್, ಆಶಿಶ್ ಪಬ್ಲಿಷಿಂಗ್ ಹೌಸ್, ನ್ಯೂ ಡೆಲ್ಲಿ, 1987. ಪು–22–25

39) ಹಜಾರೆ.ಎಸ್.ಸಿ. "ಸ್ಟುಡೆಂಟ್ ಪೊಲಿಟಿಕ್ಸ್ ಇನ್ ಇಂಡಿಯಾ", ಆಶಿಶ್ ಪಬ್ಲಿಷಿಂಗ್ ಹೌಸ್, ನ್ಯೂ ಡೆಲ್ಲಿ, 1987. ಪು–41–42

40) ಬೋನಾ ಜೋಸೆಫ್, "ಎಲೀಟ್ ಆಂಡ್ ಮಾಸ್ ಇನ್ ಇಂಡಿಯನ್ ಹೈಯರ್ ಎಜುಕೇಶನ್ : ದಿ ಕೇಸ್ ಆಫ್ ಅಲಹಾಬಾದ ಯುನಿವರ್ಸಿಟಿ", ಇನ್ ಪಿ.ಜಿ. ಅಲ್ತ್‌ಬಷ್ (ಸಂ), ಟರ್ಮಾಯಿಲ್ ಆಂಡ್ ಟಾನ್ಸಿಶನ್, ಬಾಂಬೆ, ಲಾಲವಾಣಿ,1968. ಪು–168

41) ಕುಮಾರ ಪ್ರಮೋದ, "ಸರ್ಟನ್ ಪರ್ಸನಲ್ ಫ್ಯಾಕ್ಟರ್ಸ ಇನ್ ಸ್ಟುಡೆಂಟ್ ಲೀಡರ್‌ಶಿಪ್", ಜರ್ನಲ್ ಆಫ್ ಸೈಕಾಲೋಜಿಕಲ್ ರಿಸರ್ಚಸ್, ವ್ಯಾಲ್ಯೂಮ್ 10, ನಂ.1, 1966. ಪು–37

42) ರಾಬರ್ಟ ಸಿ.ಶಹಾ, "ಸ್ಟುಡೆಂಟ್ ಪಾಲಿಟಿಕ್ಸ್ ಆಂಡ್ ಸ್ಟುಡೆಂಟ್ ಲೀಡರ್‌ಶಿಪ್ ಇನ್ ಇಂಡಿಯನ್ ಯುನಿವರ್ಸಿಟಿ :ದಿ ಕೇಸ್ ಆಫ್ ಉಸ್ಮಾನಿಯಾ" ಇನ್ ಪಿ.ಜಿ. ಅಲ್ತ್‌ಬಷ್ (ಸಂ), ಟರ್ಮಾಯಿಲ್ ಆಂಡ್ ಟ್ರಾನ್ಸಿಶನ್, ಬಾಂಬೆ, ಲಾಲವಾಣಿ, 1968. ಪು–131

43) ಎಸ್.ಎಮ್.ಸೈಯಿದ್, "ಪೊಲಿಟಿಸೈಜೇಶನ್ ಆಫ್ ದಿ ಸ್ಟುಡೆಂಟ್ ಲೀಡರ್ಸ್ : ಎ ಕೇಸ್ ಸ್ಟಡಿ ಆಫ್ ಲಕ್ನೋ ಯುನಿವರ್ಸಿಟಿ ಯುನಿಯನ್ ಸಿನ್ಸ್ ಇಂಡಿಪೆಂಡೆನ್ಸ್", ಇಂಡಿಯನ್ ಜರ್ನಲ್ ಆಫ್ ಪೊಲಿಟಿಕಲ್ ಸೈನ್ಸ್ ವ್ಯಾಲ್ಯೂಮ್ 34, (1), 1973. ಪು–86

44) ಸೈಯದ್ ರಶೀದ್ ಅಲಿ, "ಸ್ಟುಡೆಂಟ್ ಲೀಡರ್‌ಶಿಪ್ ಇನ್ ಲಕ್ನೋ", ಸೋಶಿಯಲ್ ಸೈಂಟಿಸ್ಟ್, ವ್ಯಾಲ್ಯೂಮ್ 3, ನಂ.9, ಏಪ್ರಿಲ್ 1975. ಪು–45–46

45) ಸೈಯದ್ ರಶೀದ್ ಅಲಿ, "ಅಕಾಡೆಮಿಕ್ ಬ್ಯಾಕ್‌ಗ್ರೌಂಡ್ ಆಫ್ ಸ್ಟುಡೆಂಟ್ ಲೀಡರ್‌ಶಿಪ್", ಈಸ್ಟರ್ನ ಆಂಥ್ರೋಪೊಲೊಜಿಸ್ಟ್, ವ್ಯಾಲ್ಯೂಮ್ 30(4), ಅಕ್ಟೋಬರ್-ಡಿಸೆಂಬರ್, 1977. ಪು-419

46) ಟಿ.ಕೆ.ಓಮೆನ್, "ಸ್ಟುಡೆಂಟ್ ಪೊಲಿಟಿಕ್ಸ್ ಇನ್ ಇಂಡಿಯಾ : ಎ ಕೇಸ್ ಆಫ್ ದೆಹಲಿ ಯುನಿವರ್ಸಿಟಿ" ಏಶಿಯನ್ ಸರ್ವೆ, ಸೆಪ್ಟೆಂಬರ್ 1974, ವ್ಯಾಲ್ಯೂಮ್ 14, 09. ಪು-777

47) ಅಲ್ಟ್‌ಬಷ್ ಫಿಲಿಫ್, "ಸ್ಟುಡೆಂಟ್ಸ್, ಪೊಲಿಟಿಕ್ಸ್ ಆಂಡ್ ಹೈಯರ್ ಎಜುಕೇಶನ್ ಇನ್ ಎ ಡೆಪವಲಪಿಂಗ್ ಎರಿಯಾ: ದಿ ಕೇಸ್ ಆಫ್ ಬಾಂಬೆ(ಥಿಸಿಸ್), ಚಿಕಾಗೋ, 1966. ಪು- 438

48) ಆರ್.ಎನ್.ಶರ್ಮಾ, "ಪವರ್ ಮೆಂಟೆನನ್ಸ್ ಇನ್ ಸ್ಟುಡೆಂಟ್ ಯುನಿಯನ್ ಲೀಡರ್‌ಶಿಪ್", ಜರ್ನಲ್ ಆಫ್ ಸೋಶಿಯಲ್ ಆಂಡ್ ಇಕೋನೋಮಿಕ್ ಸ್ಟಡೀಸ್, ಮಾರ್ಚ,1981, ವ್ಯಾಲ್ಯೂಮ್.9(1). ಪು-45-47

49) ಎಸ್.ಕೆ. ಪಟ್ನಾಯಕ್, "ಏ ಸೈಕೋ-ಸೋಶಿಯಲ್ ಪ್ರೊಫೈಲ್ ಆಫ್ ಏಲಿಯೆನೆಟೆಡ್ ಸ್ಟುಡೆಂಟ್ಸ್: ಏ ಕೇಸ್ ಸ್ಟಡಿ ಆಫ್ ಜೆ.ಎನ್.ಯು. ಥಿಸಿಸ್ ಸಬಮಿಟೆಡ್ ಟು ಜೆ.ಎನ್.ಯು. ಫಾರ ದಿ ಡಿಗ್ರಿ ಆಫ್ ಪಿಹೆಚ್.ಡಿ. ಇನ್ ಸೈಕೋಲೋಜಿ ಆಫ್ ಎಜುಕೇಶನ್, ನ್ಯೂ ಡೆಲ್ಲಿ, 1983. ಪು-18-19

50) ಚಿತ್ರಾ ಶಿವುಕುಮಾರ, "ಹೀರೋಸ್ ಆಫ್ ದಿ ಫ್ಯೂಚರ್", ಸೆಮಿನಾರ್, ನ್ಯೂ ಡೆಲ್ಲಿ, ಜುಲೈ, 1984 ವ್ಯಾಲ್ಯೂಮ್ 299. ಪು-34

51) ಎಸ್.ಸಿ.ಹಜಾರೆ, "ಸ್ಟುಡೆಂಡ್ ಪೊಲಿಟಿಕ್ಸ್ ಇನ್ ಇಂಡಿಯಾ", ದಿ ಇಂಡಿಯನ್ ಜರ್ನಲ್ ಆಫ್ ಪೋಲಿಟಿಕಲ್ ಸೈನ್ಸ್, ವ್ಯಾಲ್ಯೂಮ್ 49,ನಂ.1 1988. ಪು-108-110

52) ಎ.ಬಿ.ರೇ, "ಸ್ಟುಡೆಂಟ್ಸ್ ಆಂಡ್ ಪೊಲಿಟಿಕ್ಸ್ ಇನ್ ಇಂಡಿಯಾ" ಮನೋಹರ್ ಪಬ್ಲಿಕೇಶನ್ ನ್ಯೂ ಡೆಲ್ಲಿ, 1977. ಪು-184

53) ದುರ್ಗಾನಂದ್ ಸಿನ್ಹಾ, "ಡೈಮೆನ್‌ಶನ್ಸ್ ಆಫ್ ಸ್ಟುಡೆಂಟ್ ಎಜಿಟೇಶನ್ ಇನ್ ಇಂಡಿಯಾ", ಜರ್ನಲ್ ಆಫ್ ಸೋಶಿಯಲ್ ಆಂಡ್ ಇಕೋನೋಮಿಕ್ ಸ್ಟಡಿಸ್, ವ್ಯಾಲ್ಯೂಮ್ 3, ಸೆಪ್ಟೆಂಬರ್ 1975. ಪು-193

54) ಪ್ರದೀಪ್ ಸಿಂಗ್, "ಲೀಡರ್‌ಶಿಪ್", ಸೆಮಿನಾರ (176), ಏಪ್ರೀಲ್ 1974. ಪು-24-26

55) ರಾಬರ್ಟ ಗಾಡಿನ್ನೋ, "ದಿ ಇಂಡಿಯನ್ ಯುನಿವರ್ಸಿಟಿ", ಬಾಂಬೆ 1967. ಪು–6

56) ಎಸ್.ಎಲ್.ಶರ್ಮಾ, "ಪೊಲಿಟಿಕಲ್ ಓರಿಯಂಟೇಷನ್ ಆಂಡ್ ಪ್ರೋಟೆಸ್ಟ್ ಪಾರ್ಟಿಸಿಪೇಷನ್ : ಎ ಕಂಪೆರಿಟಿವ್ ಸ್ಟಡಿ ಆಫ್ ರವಿಶಂಕರ ಯುನಿವರ್ಸಿಟಿ ರಾಯಪೂರ ಅಂಡ್ ಪಂಜಾಬ ಯುನಿವರ್ಸಿಟಿ ಚಂಡಿಗಡ" 1971. ಪು–13–14

57) ಡಿ.ಕೆ.ಮೊಹಾಂತಿ, "ಹೈಯರ್ ಎಜುಕೇಶನ್ ಆಂಡ್ ಸ್ಟುಡೆಂಟ್ ಪೊಲಿಟಿಕ್ಸ್ ಇನ್ ಇಂಡಿಯಾ", ಅನ್‌ಮೊಲ್ ಪಬ್ಲಿಕೇಶನ್ಸ್ ಪ್ರಾವ್ಹೆಟ್ ಲಿಮಿಟೆಡ್ ನ್ಯೂ ಡೆಲ್ಲಿ, 1999. ಪು–66–84

58) ಎಸ್.ಕೆ.ಪಟ್ನಾಯಕ್, "ಸ್ಟುಡೆಂಟ್ ಪೊಲಿಟಿಕ್ಸ್ ಆಂಡ್ ವ್ಹೋಟಿಂಗ್ ಬಿಹೆವಿಯರ್", ಕನ್ಸೆಪ್ಟ್ ಪಬ್ಲಿಷಿಂಗ್ ಕಂಪನಿ ನ್ಯೂ ಡೆಲ್ಲಿ, 1982. ಪು–2–12

59) ಎಮ್. ಚಂದ್ರಪೂಜಾರಿ, "ಸಂಶೋಧನೆ ಏನು? ಏಕೆ? ಹೇಗೆ?" ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ. 2009. ಪು–1–15

60) ಕಿಶೋರ ಗಾಂಧಿ, "ಇಶ್ಯೂಸ್ ಆಂಡ್ ಚಾಯ್ಸಸ್ ಇನ ಹೈಯರ್ ಎಜುಕೇಶನ್, ಏ ಸೋಶಿಂಯಾಲೋಜಿಕಲ್ ಅನಾಲಿಸಿಸ್, ಬಿ.ಆರ್.ಪಬ್ಲಿಷಿಂಗ್ ಕಾರ್ಪೋರೇಶನ್, ನ್ಯೂ ಡೆಲ್ಲಿ, 1977. ಪು–13

61) ನಾಟ್ ಪಾಲ್, ಡಿ: ಸ್ಟುಡೆಂಟ್ ಎಕ್ಟಿವಿಜಮ್, ಡಬ್ಲ್ಯೂ.ಎಮ್.ಸಿ. ಬ್ರೌನ್ ಕಂಪನಿ ದೆಬಕ್, ಲೋವಾ, 1971. ಪು–18

62) ಎಸ್.ಎಮ್.ಲಿಪ್‌ಸೆಟ್, ಆಂಡ್ ಫಿಲಿಫ್ ಜಿ. ಅಲ್ತಬಷ್: ಸ್ಟುಡೆಂಟ್ಸ್ ಇನ್ ರಿವೋಲ್ಟ್, ಬೇಕನ್ ಪ್ರೇಸ್, ಬೋಸ್ಟನ್, 1969. ಪು–15–16

63) ಜಿ.ಎಸ್.ಮನುಸುಖಾನಿ, : ಕ್ರೈಸಿಸ್ ಇನ್ ಇಂಡಿಯನ್ ಯುನಿವರ್ಸಿಟಿಸ್, ಆಕ್ಸ್‌ಫರ್ಡ ಆಂಡ್ ಐ.ಬಿ.ಹೆಚ್. ಪಬ್ಲಿಷಿಂಗ್ ಕಂಪನಿ ನ್ಯೂ ಡೆಲ್ಲಿ, 1972. ಪು–8–10

64) ಅವೋಲ್ ಕುಮಾರ ಮುಖ್ಯೋಪಾಧ್ಯಾಂಯು, "ಪೋಲಿಟಿಕಲ್ ಸೋಶಿಯಾಲೊಜಿ, ಆನ್ ಇಂಟ್ರೊಡುಕ್ಟರಿ ಅನಾಲಿಸಿಸ್", ಕೆ.ಪಿ.ಬಾಗಚಿ ಆಂಡ್ ಕಂಪನಿ, ಕಲ್ಕತ್ತಾ, 1987. ಪು– 117

65) ವೇಣುರಾಜನ್ ಪಿಳ್ಳೈ, "ಸ್ಟುಡೆಂಟ್ ಆರ್ಗನೈಜೆಶನ್ ಇನ್ ಕೇರಳ: ಎ ಕೇಸ್ ಸ್ಟಡಿ ಆಫ್ ಎಸ.ಎಫ್.ಐ., ಎಮ್.ಎ.ಥಿಸಿಸ್" ಡಿಪಾರ್ಟಮೆಂಟ ಆಫ್ ಪೊಲಿಟಿಕ್ಸ್, ಯುನಿವರ್ಸಿಟಿ ಆಫ್ ಕೇರಳ, ತ್ರಿವೇಂದ್ರಂ, 1973. ಪು–12–13

66) ಬಿ.ಕೆ.ಶರ್ಮಾ "ಪೊಲಿಟಿಕಲ್ ಇನ್‌ಸ್ಟಬಿಲಿಟಿ ಇನ್ ಇಂಡಿಯಾ" ಮಿತ್ತಲ ಪಬ್ಲಿಕೇಶನ್ಸ್, ನ್ಯೂ ಡೆಲ್ಲಿ, 1989. ಪು–25–27

67) ರೂಡೊಲ್ಫ ಎಸ್.ಹೆಚ್., ಎಲ್.ಐ.ರೂಡೊಲ್ಫ, (ಸಂ): "ಎಜುಕೇಶನ್ ಆಂಡ್ ಪೊಲಿಟಿಕ್ಸ ಇನ್ ಇಂಡಿಯಾ" ಆಕ್ಸಫರ್ಡ ಯುನಿವರ್ಸಿಟಿ ಪ್ರೇಸ್, ನ್ಯೂ ಡೆಲ್ಲಿ, 1972. ಪು–8–10

68) ಸರಸ್ವತಿ ಎಸ್.: "ಯುಥ್ ಇನ್ ಇಂಡಿಯಾ" ಇಂಡಿಯನ್ ಕೌನ್ಸಿಲ್ ಆಫ್ ಸೋಶಿಯಲ್ ಸೈನ್ಸ್ ರಿಸರ್ಚ, ನ್ಯೂ ಡೆಲ್ಲಿ, 1988. ಪು–18–21

69) ಸುಭೇಂದ್ ಎನ್., "ಸ್ಟುಡೆಂಟ್ ಪೊಲಿಟಿಕ್ಸ ಇನ್ ಕೇರಳ, ವಿಥ್ ಸ್ಪೆಷಿಯಲ್ ರೆಫ್ರೆನ್ಸ್ ಟು ತ್ರಿವೇಂದ್ರಂ ಡಿಸ್ಟ್ರಿಕ್ಟ್ ಎಮ್.ಎ. ಥಿಸಿಸ್", ಡಿಪಾರ್ಟಮೆಂಟ ಆಫ್ ಪೊಲಿಟಿಕ್ಸ್, ಕೇರಳ ಯುನಿವರ್ಸಿಟಿ, ತ್ರಿವೇಂದ್ರಂ, 1982. ಪು–20–22

70) ಎಸ್.ಪಿ.ವರ್ಮಾ, "ಮಾಡರ್ನ ಪೊಲಿಟಿಕಲ್ ಥಿಯರಿ" ವಿಕಾಸ ಪಬ್ಲಿಷಿಂಗ್ ಹೌಸ್, ನ್ಯೂ ಡೆಲ್ಲಿ, 1980. ಪು–58–57

71) ಎಮ್. ಚಂದ್ರಪೂಜಾರಿ, "ಸಮಾಜ ಸಂಶೋಧನೆ" ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ, 2005. ಪು–31–36

72) ಎಸ್. ಜಿ. ಹಿರೇಮಠ, "ಸಾಮಾಜಿಕ ಸಂಶೋಧನೆಯ ವಿಧಾನಗಳು ಮತ್ತು ತಂತ್ರಗಳು", ಸುರೇಶ ಪಬ್ಲಿಕೇಷನ್, ಗದಗ, 1968. ಪು–76–77

ಅಧ್ಯಾಯ- 2

ಕರ್ನಾಟಕದಲ್ಲಿ ವಿದ್ಯಾರ್ಥಿ ರಾಜಕೀಯ ಕ್ರಿಯಾಶೀಲತೆ

(ಸಾಹಿತ್ಯ ಪರಾಮರ್ಶೆ)

ವಿದ್ಯಾರ್ಥಿ ಸಮುದಾಯಕ್ಕೆ ರಾಜಕೀಯ ಪ್ರಜ್ಞೆ ಬೇಡವೆಂದು ವಿಶ್ವವಿದ್ಯಾಲಯಗಳು ವಿದ್ಯಾರ್ಜನೆಗೆ ಹೊರತು ರಾಜಕಾರಣಕ್ಕೆ ಅಲ್ಲ ಹಾಗೂ ರಾಜಕೀಯ ಪ್ರಜ್ಞೆಯು ಶಿಕ್ಷಣದ ಮೌಲ್ಯವನ್ನು ಕುಸಿತ ಮಾಡುತ್ತದೆ. ಆದುದರಿಂದ ವಿದ್ಯಾರ್ಥಿ ಹೋರಾಟಗಳು ಬೇಡವೆಂಬ ವಾದಗಳು ಹುಟ್ಟಿಕೊಳ್ಳುತ್ತಿವೆ. ಭಾರತದಲ್ಲಿ ವಿಭಿನ್ನವಾದ ರಾಜಕೀಯ, ಆರ್ಥಿಕ, ಸಾಮಾಜಿಕ ವಿಷಯಗಳ ಬಗ್ಗೆ ನಡೆಯುತ್ತಿರುವ ಚರ್ಚೆಗಳು ಇಂದು ಸಹ ಮುಂದುವರೆಯುತ್ತಿವೆ. ಸಂಪ್ರದಾಯ ಮತ್ತು ಆಧುನಕತೆ, ಪ್ರತಿಗಾಮಿತನ ಮತ್ತು ಬದಲಾವಣೆ ಮುಂತಾದ ವೈರುಧ್ಯಗಳ ಸಂಘರ್ಷ ನಡೆಯುತ್ತಲೆ ಬಂದಿದೆ. ಜಾತ್ಯಾತೀತ ರಾಷ್ಟ್ರೀಯತೆ ಹಾಗೂ ಧಾರ್ಮಿಕ ರಾಷ್ಟ್ರೀಯತೆಗಳ ತಾಕಲಾಟಗಳು ಇಂದು ಗಂಭೀರ ಸ್ವರೂಪ ಪಡೆದುಕೊಳ್ಳುತ್ತಿವೆ. ಸಾಮಾಜಿಕ ಮತ್ತು ಆರ್ಥಿಕ ಸ್ವಾತಂತ್ರ್ಯ ಮತ್ತು ಸಮಾನತೆಗಳು ಇಲ್ಲದೆ ಕೇವಲ ರಾಜಕೀಯ ಸ್ವಾತಂತ್ರಕ್ಕೆ ಯಾವುದೇ ಅರ್ಥವಿಲ್ಲವೆಂಬ ವಾದಗಳು ನಡೆಯುತ್ತಲೆ ಇವೆ. ಗಾಂಧಿವಾದ, ಸಮಾಜವಾದ, ಮಾರ್ಕ್ಸವಾದ ಮತ್ತು ಮಾವೋವಾದಗಳು ಜನತೆಯ ಮತ್ತು ಯುವಜನರ ಮನಸ್ಸನ್ನು ಇಂದಿಗೂ ಕಾಡುತ್ತಿವೆ. ಹಿಂದಿನ ಹಲವಾರು ಸಮಸ್ಯೆಗಳು ಇಂದಿಗೂ ಸಹ ಮುಂದುವರೆಯುತ್ತಿವೆ. ವಿದ್ಯಾರ್ಥಿಗಳ ನಡುವೆ ಪ್ರಜಾಪ್ರಭುತ್ವ, ಸಮಾಜವಾದ ಹಾಗೂ ಇತರ ಸಿದ್ಧಾಂತಗಳು ಪ್ರಭಾವ ಬೀರಿವೆ. ಹಲವಾರು ರಾಜಕೀಯ, ಸಾಮಾಜಿಕ ಮತ್ತು ಆರ್ಥಿಕ ಪ್ರಶ್ನೆಗಳು ಬಹುಸಂಖ್ಯಾತ ಜನರ ಮೇಲೆ ಪ್ರಭಾವ ಬೀರುತ್ತಿವೆ. ಆದ್ದರಿಂದ ಈ ಚಿಂತನೆಗಳ ಪ್ರಭಾವವನ್ನು ಯಾವ ಪೂರ್ವಾಗ್ರಹಗಳಿಲ್ಲದೆ ಸಮಗ್ರವಾಗಿ ಚಿಂತಿಸುವುದು, ಚರ್ಚಿಸುವುದು ಅಗತ್ಯವಾಗಿದೆ.

ವಿದ್ಯಾರ್ಥಿಗಳು ವ್ಯಾಸಂಗದ ಜೊತೆಗೆ ಪ್ರಜಾಪ್ರಭುತ್ವ ಹಾಗೂ ಸ್ವಾತಂತ್ರ್ಯ ರಕ್ಷಣೆಯ ಹೋರಾಟದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದಾರೆ. ವಿದ್ಯಾರ್ಥಿ ಸಮಸ್ಯೆಗಳಾದ ಪಠ್ಯವಿಷಯ, ಹಾಸ್ಟೆಲ್ಲುಗಳು, ತರಗತಿ ಶುಲ್ಕ, ವಿದ್ಯಾರ್ಥಿ ವೇತನ, ಕಲಿಕೆಯ ಸಾಧನಗಳು, ಶಿಕ್ಷಣದ ಪ್ರಜಾಪ್ರಭುತ್ವಿಕರಣ ಇವುಗಳ ಜೊತೆಗೆ ಸಾಮಾಜಿಕ ಹಿತಕ್ಕಾಗಿ ಸಾರ್ವಜನಿಕರೊಡನೆ ಸ್ಪಂದಿಸುವ ಕೀರ್ತಿ ಸಹ ವಿದ್ಯಾರ್ಥಿ ಸಮುದಾಯಕ್ಕೆ ಸಲ್ಲುತ್ತದೆ. ಹಲವಾರು ನಾಗರಿಕ ಹಕ್ಕುಗಳು, ಶೈಕ್ಷಣಿಕ ವಿಷಯಗಳು, ಬೆಲೆಯೆರಿಕೆ, ಗಡಿ ಸಮಸ್ಯೆ, ರಾಷ್ಟ್ರದ ಸಮಗ್ರತೆ, ಸಾಮಾಜಿಕ ಸಮಾನತೆ, ನಿರುದ್ಯೋಗ, ಅವಕಾಶಗಳ ಕೊರತೆ, ಅಭದ್ರತೆ ಹೀಗೆ ಹಲವಾರು ವಿಷಯಗಳನ್ನು ಅದು ಕೈಗೆತ್ತಿಕೊಂಡಿದೆ. ಶಿಕ್ಷಣವು ದುಬಾರಿಯಲ್ಲದೆ ಹಾಗೂ ಸಾಮಾಜಿಕವಾಗಿ ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳಿಗೆ ಸುಲಭವಾಗಿ ನ್ಯಾಯಯುತ ಸೌಲಭ್ಯಗಳು ದೊರಕುವಂತೆ

ಪ್ರತಿಪಾದಿಸುವುದು ಅದರ ರಾಜಕೀಯ ಪ್ರಭುದ್ಧತೆಯ ದ್ಯೋತಕವಾಗಿದೆ. ಆದ್ದರಿಂದ ವಿದ್ಯಾರ್ಥಿಗಳ ಸಮಸ್ಯೆಗಳು ಜನಸಾಮಾನ್ಯರ ಸಮಸ್ಯೆಗಳಿಂದ ಪ್ರತ್ಯೇಕವಾಗಿಲ್ಲ. ಹಸಿವು, ದಾರಿದ್ರ್ಯ, ರೋಗ, ಅಜ್ಞಾನ, ಅವಕಾಶಗಳ ಕೊರತೆ ಮುಂತಾದವುಗಳು ಕೇವಲ ಜನಸಮೂಹದ ಸಮಸ್ಯೆಗಳಲ್ಲ. ವಿದ್ಯಾರ್ಥಿಗಳ ಸಮಸ್ಯೆಗಳೂ ಕೂಡ. ಆದ್ದರಿಂದ ಬದಲಾಗುತ್ತಿರುವ ಸಮಾಜದಲ್ಲಿ ವಿದ್ಯಾರ್ಥಿಗಳ ಚಳುವಳಿಗಳ ಪಾತ್ರ ಬದಲಾಗಬೇಕಾಗಿದೆ. ವಿದ್ಯಾರ್ಥಿ ಸಂಘಟನೆಗಳು ವಿಶ್ವವಿದ್ಯಾಲಯ, ಕಾಲೇಜುಗಳ ಅಧ್ಯಾಪಕ ಸಂಘಗಳು, ರಾಜಕೀಯ ಪಕ್ಷಗಳು ಮತ್ತು ಪತ್ರಿಕೆಗಳು ಈ ವಲಯವು ಅನುಭವಿಸುತ್ತಿರುವ ಸಮಸ್ಯೆಗಳನ್ನು ಕುರಿತು ಹೆಚ್ಚು ಗಮನ ನೀಡಬೇಕಿದೆ.

ವಿದ್ಯಾರ್ಥಿ ರಾಜಕೀಯ ಕ್ರಿಯಾಶೀಲತೆ ಕುರಿತು ಚರ್ಚಿಸುವಾಗ ಉದ್ಭವವಾಗುವ ಮೊದಲ ಪ್ರಶ್ನೆಯೆಂದರೆ ವಿದ್ಯಾರ್ಥಿಗಳು ರಾಜಕೀಯದಲ್ಲಿ ಭಾಗವಹಿಸಬೇಕೆ ಅಥವಾ ಬೇಡವೇ ? ಈ ವಿಷಯಕ್ಕೆ ಸಂಬಂಧಿಸಿದಂತೆ ಎರಡು ಪಂಥಗಳಿವೆ. ಮೊದಲನೆಯ ಪಂಥದ ಅಭಿಪ್ರಾಯವೇನೆಂದರೆ ವಿದ್ಯಾರ್ಥಿಗಳ ಮೊದಲ ಆದ್ಯತೆ ಅಧ್ಯಯನ. ಆದ್ದರಿಂದ ವಿದ್ಯಾರ್ಥಿಗಳು ಅಧ್ಯಯನದಲ್ಲಿ ನಿರತರಾಗಬೇಕು. ಆ ಮೂಲಕ ತಮ್ಮ ವ್ಯಕ್ತಿತ್ವವನ್ನು ರೂಪಿಸಿಕೊಳ್ಳಬೇಕು ಎಂದು ವಾದಿಸುತ್ತಾರೆ. ಎರಡನೆ ಪಂಥವು ವಿದ್ಯಾರ್ಥಿಗಳೂ ಜನ ಸಮೂಹದ ಭಾಗವಾಗಿರುವುದರಿಂದ, ರಾಜಕೀಯ ಸಮಾಜ ಬಿಟ್ಟು ಇಲ್ಲವಾದ್ದರಿಂದ, ರಾಜಕೀಯ ನಿರ್ಧಾರಗಳು ವಿದ್ಯಾರ್ಥಿಗಳ ಮೇಲೂ ಪ್ರಭಾವ ಬೀರುವುದರಿಂದ ವಿದ್ಯಾರ್ಥಿಗಳು ರಾಜಕೀಯದಲ್ಲಿ ಭಾಗವಹಿಸಬೇಕು ಎಂಬ ವಾದ ಮಂಡಿಸುತ್ತಾರೆ. ವಿದ್ಯಾರ್ಥಿಗಳು ರಾಜಕೀಯದಲ್ಲಿ ಏಕೆ ಭಾಗವಹಿಸಬೇಕು ಎಂಬ ವಾದಕ್ಕೆ ಪ್ರಬಲ ಕಾರಣಗಳನ್ನು ಇಲ್ಲಿ ಚರ್ಚಿಸಲಾಗಿದೆ.

ಮೇಲೆ ವಿವರಿಸಿದ ಹಾಗೆ ವಿದ್ಯಾರ್ಥಿಗಳು ಕೂಡ ಜನ ಸಮೂಹದ ಅಥವಾ ಸಮಾಜದ ಭಾಗವಾಗಿದ್ದಾರೆ. ಆದ್ದರಿಂದ ಸಾಮನ್ಯವಾಗಿ ಕೆಲವೊಂದು ಮೂಲಭೂತ ಉತ್ತರಗಳನ್ನು ಕಂಡುಕೊಳ್ಳಬೇಕಾಗುತ್ತದೆ. ರಾಜಕೀಯದಿಂದ ದೂರವಿದ್ದು ಜೀವನ ನಡೆಸಲು ಸಾಧ್ಯವೇ ? ರಾಜಕೀಯ ಮಾಡುವುದು ಅಥವಾ ಮಾಡದೇ ಇರುವುದು ಯಾರೊಬ್ಬರ ಮುಲಾಜಿಗೆ ಒಳಪಟ್ಟಿದೆಯೇ ? ನಾವು ರಾಜಕೀಯದಿಂದ ದೂರವಿದ್ದರೂ ರಾಜಕೀಯ ನಮ್ಮನ್ನು ಬಿಡುವುದೇ ? ರಾಜಕೀಯದಿಂದ ಮುಕ್ತವಾದ ಜೀವನವನ್ನು ನಡೆಸಲು ವಿದ್ಯಾರ್ಥಿಗಳಿಗಾಗಲಿ, ರೈತರಿಗಾಗಲಿ, ಕಾರ್ಮಿಕರಿಗಾಗಲಿ, ಪುರುಷರಿಗಾಗಲಿ, ಸ್ತ್ರೀಯರಿಗಾಗಲಿ ಸಾಧ್ಯವಿದೆಯೇ ? ಇದು ಸಾಧ್ಯವಿಲ್ಲ. ಏಕೆಂದರೆ ಸಮಾಜ ಹೇಗೆ ನಡೆಯುತ್ತದೆ ಎಂಬುವುದನ್ನು ನಿರ್ಧರಿಸುವುದು ರಾಜಕೀಯ. ಒಂದು ಸಾಮಾಜಿಕ ವ್ಯವಸ್ಥೆ ಇದೆಯೆಂದರೆ ಅಲ್ಲಿ ಆರ್ಥಿಕ ವ್ಯವಸ್ಥೆ ಇದೆ. ಸಾಂಸ್ಕೃತಿಕ ಮತ್ತು ಸಾಹಿತ್ಯಿಕ ವ್ಯವಸ್ಥೆ ಇದೆ. ಕಾಯಿದೆ–ಕಾನೂನುಗಳಿವೆ. ಸರಕಾರ ಇದೆ.

ಶಿಕ್ಷಣ ವ್ಯವಸ್ಥೆ ಇದೆ. ರೀತಿನೀತಿಗಳು ಹಾಗೂ ಸಂಪ್ರದಾಯಗಳು ಇವೆ. ಇವುಗಳನ್ನು ಬಿಟ್ಟು ಕೃಷಿ, ಉದ್ಯೋಗ ಇವೆಲ್ಲವುಗಳು ಸೇರಿ ಸಮಾಜವಾಗಿದೆ. ಸಮಾಜದ ಪರಿಧಿಯ ಆಚೆ ಹೋಗಿ ಬದುಕಲು ಸಾಧ್ಯವಿಲ್ಲ. ಹೀಗೆ ಸಮಾಜದ ಉಪ ವ್ಯವಸ್ಥೆಗಳಾದ ಆರ್ಥಿಕ, ರಾಜಕೀಯ, ಸಾಂಸ್ಕೃತಿಕ ವ್ಯವಸ್ಥೆಗಳ ಜೊತೆಗೆ ನಿಕಟವಾದ ಸಂಬಂಧವಿದೆ. ನಮ್ಮ ಜೀವನಕ್ಕೆ ಬೇಕಾದ ದೈನಂದಿನ ಅವಶ್ಯಕತೆಗಳಾದ ಆಹಾರ, ಬಟ್ಟೆ, ವಸತಿ, ಔಷಧಿ ಮುಂತಾದವುಗಳನ್ನು ನಾವು ಮಾರುಕಟ್ಟೆಯಿಂದ ಖರೀದಿಸಬೇಕಾಗುತ್ತದೆ. ಈ ವಸ್ತುಗಳ ಬೆಲೆಯನ್ನು ನಿಗದಿ ಮಾಡುವ ಮತ್ತು ನಿಯಂತ್ರಣ ಮಾಡುವ ಅಧಿಕಾರ ರಾಜಕೀಯಕ್ಕೆ ಇದೆ. ಹೀಗಾಗಿ ವಿದ್ಯಾರ್ಥಿಗಳು ತಮ್ಮ ಕುಟುಂಬದ ಯೋಗಕ್ಷೇಮವನ್ನು ನೋಡಿಕೊಳ್ಳಬೇಕಾದರೆ, ಉದ್ಯೋಗವನ್ನು ಹಿಡಿಯಬೇಕಾಗುತ್ತದೆ. ಉದ್ಯೋಗ ಅವಕಾಶಗಳು ಹೆಚ್ಚಾಗುವುದು ಯಾವಾಗ ಎಂದರೆ ಔದ್ಯೋಗಿಕರಣಕ್ಕೆ ದೇಶ ತನ್ನನ್ನು ತಾನು ತೆರೆದುಕೊಂಡಾಗ ಹಾಗೂ ಹೆಚ್ಚು ಹೆಚ್ಚು ಕಾರ್ಖಾನೆಗಳನ್ನು ಸ್ಥಾಪಿಸಿದಾಗ, ಹೆಚ್ಚು ಹೆಚ್ಚು ಸರಕಾರಿ ಇಲಾಖೆಗಳು ಸ್ಥಾಪನೆಯಾದಾಗ ಮಾತ್ರ ಇದು ಸಾಧ್ಯವಾಗುತ್ತದೆ. ಇದು ಸಾಧ್ಯವಾಗದಿದ್ದರೆ ಉದ್ಯೋಗ ಸಿಗದೆ ವಿದ್ಯಾರ್ಥಿಗಳು ಪರದಾಡುವ ಸ್ಥಿತಿ ದೇಶದಲ್ಲಿ ನಿರ್ಮಾಣವಾಗುತ್ತದೆ. ಉದ್ಯೋಗ ಸೃಷ್ಟಿಸುವ, ಆರ್ಥಿಕ ವ್ಯವಸ್ಥೆಯನ್ನು ನಿಯಂತ್ರಣದಲ್ಲಿಡುವ, ಆರ್ಥಿಕ ವ್ಯವಸ್ಥೆ ಸದೃಢವಾಗುವಂತೆ ನೀತಿ ಧೋರಣೆಗಳನ್ನು ರಾಜಕೀಯ ಅಥವಾ ರಾಜನೀತಿ ರೂಪಿಸುತ್ತದೆ. ಅಷ್ಟೆ ಅಲ್ಲದೆ ಶಾಲೆ, ಕಾಲೇಜು ಹಾಗೂ ವಿಶ್ವವಿದ್ಯಾಲಯಗಳ ಪಠ್ಯಕ್ರಮವನ್ನು ನಿರ್ಧರಿಸುವುದು ಕೂಡ ಸರಕಾರವೆ. ಪಠ್ಯಕ್ರಮದಲ್ಲಿ ಎನಿರಬೇಕು ಎಂಬುವುದನ್ನು ಸರಕಾರವೆ ನಿರ್ಧರಿಸುತ್ತದೆ. ಪ್ರಾಥಮಿಕ ಹಂತದಲ್ಲಿ ಇಂಗ್ಲೀಷ ಇರಬೇಕೆ ? ಅಥವಾ ಬೇಡವೇ ? ಪ್ರಾಥಮಿಕ ಹಂತದಲ್ಲಿ ಉತ್ತೀರ್ಣ-ಅನುತ್ತೀರ್ಣ ಇರಬೇಕೆ ಅಥವಾ ಬೇಡವೇ ? ಮೆಡಿಕಲ್ ಮತ್ತು ಇಂಜನಿಯರಿಂಗ್ ಪಠ್ಯಕ್ರಮ ಹೇಗಿರಬೇಕು ? ವಿದ್ಯಾರ್ಥಿಗಳ ಶಿಕ್ಷಣ ಶುಲ್ಕ ಹೆಚ್ಚಿಸಬೇಕೆ ಅಥವಾ ಬೇಡವೇ ? ಸಾಮಾನ್ಯ ಶಿಕ್ಷಣ ಮತ್ತು ತಾಂತ್ರಿಕ ಶಿಕ್ಷಣ ಯಾರು ನಿಯಂತ್ರಿಸಬೇಕು? ಅಧ್ಯಾಪಕರ ಅರ್ಹತೆಗಳನ್ನು ನಿಗದಿಪಡಿಸುವುದು ಮುಂತಾದವುಗಳನ್ನು ಆ ದೇಶದ ಜನತೆ ನಿರ್ಧರಿಸುವುದಿಲ್ಲ. ಬದಲಾಗಿ ಅಲ್ಲಿನ ಸರಕಾರ ಶಿಕ್ಷಣಕ್ಕೆ ಸಂಬಂಧಿಸಿದಂತೆ ಎಲ್ಲ ನಿರ್ಧಾರಗಳನ್ನು ತೆಗೆದುಕೊಳ್ಳುತ್ತದೆ. ಆದ್ದರಿಂದ ರಾಜಕೀಯದಿಂದ ಮುಕ್ತ ಶಿಕ್ಷಣ ವ್ಯವಸ್ಥೆಯನ್ನು ರೂಪಿಸಲು ಸಾಧ್ಯವಿದೆಯೇ? ಇನ್ನೊಂದು ಕಡೆ ದೇಶದಲ್ಲಿರುವ ವ್ಯಕ್ತಿಗಳಿಗೆ ಯಾವ ಆಧಿಕಾರಗಳಿವೆ? ಯಾವ ಅಧಿಕಾರಗಳಿಲ್ಲ? ಎಂಬುವುದನ್ನು ನಿರ್ಧರಿಸುವುದು ಅಲ್ಲಿನ ಸರಕಾರ. ಒಟ್ಟಿನಲ್ಲಿ ಸಮಾಜದಲ್ಲಿನ ಪ್ರತಿಯೊಂದು ಚಟುವಟಿಕೆಗಳು ರಾಜಕೀಯ ನಿಯಂತ್ರಣಕ್ಕೆ ಒಳಪಟ್ಟಿರುತ್ತವೆ. ಆದ್ದರಿಂದ ರಾಜಕೀಯ ಇಂದು ಸರ್ವವ್ಯಾಪಿಯಾಗಿದೆ. ವಿದ್ಯಾರ್ಥಿಗಳು ಕೂಡ ಸಮಾಜದಲ್ಲಿ ವಾಸಿಸುವುದರಿಂದ ರಾಜಕೀಯ ಅಥವಾ ಸರಕಾರದ ನೀತಿ ನಿರ್ಧಾರಗಳು, ಧೋರಣೆಗಳು ವಿದ್ಯಾರ್ಥಿಗಳನ್ನು ಪ್ರಭಾವಕ್ಕೊಳಪಡಿಸುತ್ತವೆ.

ಎಲ್ಲ ಮಹಾಪುರುಷರು ವಿದ್ಯಾರ್ಥಿಗಳು ರಾಜಕೀಯದಲ್ಲಿ ಭಾಗವಹಿಸಬೇಕು ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಇತಿಹಾಸದ ಪ್ರತಿಯೊಂದು ಯುಗದ ಮಹಾಪುರುಷ ಸಾಮಾಜಿಕ ಆಂದೋಲನಗಳಲ್ಲಿ ಎಲ್ಲ ವರ್ಗದ ಜನರು, ಅದರಲ್ಲಿಯೂ ವಿದ್ಯಾರ್ಥಿಗಳು ಸಕ್ರಿಯವಾಗಿ ಭಾಗವಹಿಸಬೇಕು ಎಂದು ಕರೆ ನೀಡಿದ್ದಾರೆ. ಶರತಚಂದ್ರ ಅವರು ವಿದ್ಯಾರ್ಥಿ ಸಮುದಾಯವನ್ನು ಉದ್ದೇಶಿಸಿ ಹೀಗೆ ಹೇಳುತ್ತಾರೆ. " ವ್ಯಕ್ತಿಯ ವಯಸ್ಸು ದೇಶದ ಚಟುವಟಿಕೆಗಳಿಂದ ದೂರವಿಡಲು ಸಾಧ್ಯವಿಲ್ಲ. ವಿದ್ಯಾರ್ಥಿಗಳು ಕೂಡ ದೇಶದ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಬೇಕು. ಪರೀಕ್ಷೆಯಲ್ಲಿ ಪಾಸಾಗುವುದು ವಿದ್ಯಾರ್ಥಿಗಳಿಗೆ ಅವಶ್ಯಕವಾಗಿರಬಹುದು ಆದರೆ ದೇಶದ ಚಟುವಟಿಕೆಗಳಲ್ಲಿ ಭಾಗವಹಿಸುವುದು ಅದಕ್ಕಿಂತ ಅವಶ್ಯಕವಾಗಿದೆ". ಮಹಾತ್ಮಾ ಗಾಂಧೀಜಿಯವರು ಕೂಡ "ಸ್ವಾತಂತ್ರ್ಯ ಹೋರಾಟದ ಸಮಯದಲ್ಲಿ ಇಂಗ್ಲಿಷರು ಸ್ಥಾಪಿಸಿದ ಶಾಲೆ-ಕಾಲೇಜುಗಳನ್ನು ಬಹಿಷ್ಕರಿಸುವಂತೆ ವಿದ್ಯಾರ್ಥಿಗಳಿಗೆ" ಕರೆ ನೀಡಿದರು. ಅಷ್ಟೇ ಅಲ್ಲದೆ ಸ್ವಾತಂತ್ರ್ಯ ಹೋರಾಟದಲ್ಲಿ ವಿದ್ಯಾರ್ಥಿಗಳು ಭಾಗವಹಿಸಬೇಕು ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದರು. ನೇತಾಜಿ ಸುಭಾಷ್ಚಂದ್ರ ಭೋಸ್ ಅವರ ಪ್ರಕಾರ "ಅಧ್ಯಯನ ವಿದ್ಯಾರ್ಥಿಗಳ ಮೊದಲ ಆದ್ಯತೆಯಾಗಬೇಕು ಎಂದು ಹೇಳಿ ಅವರನ್ನು ರಾಷ್ಟ್ರ ನಿರ್ಮಾಣ ಕಾರ್ಯದಿಂದ ದೂರವಿಡಲು ಯತ್ನಿಸಲಾಗುತ್ತಿದೆ. ನನ್ನ ಅಭಿಪ್ರಾಯದಲ್ಲಿ ಅಧ್ಯಯನ ವಿದ್ಯಾರ್ಥಿ ಜೀವನದ ಮೊದಲ ಆದ್ಯತೆ ಆಗಲು ಸಾಧ್ಯವಿಲ್ಲ. ಏಕೆಂದರೆ ಅಧ್ಯಯನ ಎಂದರೆ ಕೆಲವು ಗ್ರಂಥಗಳ ಅಧ್ಯಯನ ಹಾಗೂ ಪರೀಕ್ಷೆಯಲ್ಲಿ ಹೆಚ್ಚು ಅಂಕಗಳನ್ನು ತೆಗೆದುಕೊಂಡು ಪಾಸಾಗುವುದು ಮತ್ತು ಉದ್ಯೋಗವನ್ನು ಪಡೆಯುವುದು ಇದಕ್ಕೆ ಮಾತ್ರ ಸಿಮೀತವಾಗಿದೆ. ಇದರಿಂದ ಬದುಕಿನಲ್ಲಿ ಮಾನವೀಯತೆಯನ್ನು ರೂಢಿಸಿಕೊಳ್ಳಲು ಸಾಧ್ಯವಿಲ್ಲ". ದೇಶ ಬಂಧು ಚಿತ್ತರಂಜನ್‌ದಾಸ ಹೀಗೆ ಹೇಳುತ್ತಾರೆ "ಶಿಕ್ಷಣ ನಮ್ಮನ್ನು ಕಾಯಬಹುದು ಆದರೆ ಸ್ವರಾಜ್ಯಕ್ಕಾಗಿ ನಡೆಯುತ್ತಿರುವ ಸಂಘರ್ಷ ನಮ್ಮನ್ನು ಕಾಯುವುದಿಲ್ಲ". ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ಖುದಿರಾಮ ಅವರು ತಮ್ಮ ಶಾಲಾ ಹಂತದಲ್ಲಿಯೇ ವಿದ್ಯಾಭ್ಯಾಸ ಬಿಟ್ಟು ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದರು. ಭಗತ್‌ಸಿಂಗ್ ಅವರೂ ಕೂಡ ವಿದ್ಯಾರ್ಥಿ ಜೀವನದಲ್ಲಿಯೇ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದ್ದರು. ಇದು ಭಾರತ ಸ್ವಾತಂತ್ರ್ಯ ಹೋರಾಟದ ವಾಸ್ತವಿಕ ಇತಿಹಾಸವಾಗಿದೆ. ರವೀಂದ್ರನಾಥ ಅವರು ಕೂಡ ಹೀಗೆ ಹೇಳುತ್ತಾರೆ "ಯಾರು ಅನ್ಯಾಯವನ್ನು ಮಾಡುತ್ತಾರೋ, ಯಾರು ಅನ್ಯಾಯವನ್ನು ಸಹಿಸಿಕೊಳ್ಳುತ್ತಾರೋ ಇಬ್ಬರೂ ನನ್ನ ದೃಷ್ಠಿಯಲ್ಲಿ ಸಮಾನ ದೂಷಿಗಳು". ಅವರ ಈ ಮಾತು ಅತ್ಯಂತ ಅರ್ಥಪೂರ್ಣವಾದದ್ದು. ಕಣ್ಣೆದುರೆ ಅನ್ಯಾಯ ನಡೆದಾಗ ಅದನ್ನು ಪ್ರತಿಭಟಿಸದೆ ಸಹಿಸಿಕೊಳ್ಳುವುದು ಮಹಾ ಅಪರಾಧ. ರವೀಂದ್ರನಾಥ ಅವರ ಈ ಮಾತು ವಿದ್ಯಾರ್ಥಿಗಳಿಗೆ ಅನ್ವಯವಗುವುದಿಲ್ಲವೆ? ವಿದ್ಯಾರ್ಥಿಗಳು ಕೇವಲ

ಕಂಠಪಾಠ ಮಾಡುವುದು ಪರೀಕ್ಷೆಯಲ್ಲಿ ಒಳ್ಳೆಯ ಅಂಕಗಳನ್ನು ತೆಗೆದುಕೊಳ್ಳುವುದು ಅವರ ಜೀವನ ಉದ್ದೇಶವಾಗಬೇಕೇ? ಕಣ್ಣೆದುರಿಗೆ ನಡೆಯುತ್ತಿರುವ ಅನ್ಯಾಯವನ್ನು ನೋಡಿಕೊಂಡು ಸುಮ್ಮನಿರುವುದು ನ್ಯಾಯಸಮ್ಮತವೇ? ಆದ್ದರಿಂದ ಸಮಾಜದಲ್ಲಿ ನಡೆಯುತ್ತಿರುವ ಅನ್ಯಾಯಗಳನ್ನು ವಿದ್ಯಾರ್ಥಿ ಸಮುದಾಯ ಪ್ರತಿಭಟಿಸಲೇಬೇಕು. ವಿದ್ಯಾರ್ಥಿಗಳು ರಾಮಮನೋಹರ ಲೋಹಿಯಾ, ವಿದ್ಯಾಸಾಗರ, ದೇಶಬಂಧು, ಲಾಲ ಲಜಪತರಾಯ, ತಿಲಕ್, ನೇತಾಜಿಯವರ ವಾರಸುದಾರರಾಗಬೇಕು. ಸಾಮಾಜಿಕ ಆಂದೋಲನಗಳಲ್ಲಿ ವಿದ್ಯಾರ್ಥಿಗಳು ಭಾಗವಹಿಸಬೇಕು.

ಕ್ರೀಡೆ, ಸಾಹಿತ್ಯ, ಸಂಗೀತ, ಶಿಕ್ಷಣ, ಕೃಷಿ, ಕೈಗಾರಿಕೆ ಸೇರಿದಂತೆ ಎಲ್ಲ ಕ್ಷೇತ್ರಗಳಲ್ಲೂ ಸಾಧನೆ ಮಾಡಲು ಯುವಕರು ಬೇಕು. ದೇಶದ ಗಡಿ ಕಾಯಲು, ಮಠಗಳಿಗೆ ಯುವ ಪೀಠಾಧಿಕಾರಿಗಳು ಬೇಕು. ಯುವಶಕ್ತಿ ಸಾಧನೆಯಿಂದಲೇ ದೇಶ ಇಂದು ಅಂತರರಾಷ್ಟ್ರೀಯ ಮಟ್ಟದಲ್ಲಿ ಹೆಮ್ಮೆ ಪಡುವಷ್ಟು ಬೆಳೆದು ನಿಂತಿದೆ. ಭಾರತೀಯ ಯುವ ಪ್ರತಿಭೆ ವಿಶ್ವ ಮಟ್ಟದಲ್ಲಿ ವಿಶಿಷ್ಟ ಸ್ಥಾನ ಹೊಂದಿರುವುದು ಅಭಿಮಾನದ ಸಂಗತಿ. ದೇಶ ಕಟ್ಟಲು ಯುವಕರು ಬೇಕು. ಅಷ್ಟೇ ಏಕೆ ಭ್ರಷ್ಟಾಚಾರ ವಿರುದ್ಧ ಸಿಡಿದೆದ್ದು ನಿಂತಿರುವ ಅಣ್ಣಾ ಹಜಾರೆ ಹೋರಾಟಕ್ಕೆ ನಿಜವಾದ ಬಲ ಬಂದದ್ದು ವಿದ್ಯಾರ್ಥಿಗಳು ಹೋರಾಟ ಬೆಂಬಲಿಸಿ ಬೀದಿಗಿಳಿದಾಗ ಎನ್ನುವದು ಎಲ್ಲರಿಗೂ ಗೊತ್ತಿರುವ ಸಂಗತಿ. ಹಾಗಿರುವಾಗ ರಾಜಕೀಯ ಕ್ಷೇತ್ರದಲ್ಲಿ ಮಾತ್ರ ಏಕೆ ವಯಸ್ಸಾದವರು ಬೇಕು? ಎನ್ನುವ ಪ್ರಶ್ನೆಗೆ ಉತ್ತರ ಹುಡಕಬೇಕಿದೆ.

ಯುಗ ಯುಗಗಳಿಂದಲು ಮನುಷ್ಯ ತನ್ನ ಬುದ್ಧಿಶಕ್ತಿಯನ್ನು ಬಳಸಿ ಪ್ರಕೃತಿಯ ರಹಸ್ಯಗಳನ್ನು ಭೇದಿಸುವ, ಅದರ ನಿಯಮಗಳನ್ನು ಅರಿತಕೊಳ್ಳುವ ಪ್ರಯತ್ನ ಮಾಡುತ್ತಿದ್ದಾನೆ. ಪ್ರಕೃತಿಯು ಮೂಲಭೂತವಾಗಿ ಚಲನಶೀಲವಾದದ್ದು, ಅದು ನಿಂತ ನೀರಲ್ಲ. ಬದಲಾವಣೆ ಪ್ರಕೃತಿಯ ಗುಣಧರ್ಮ. ಹೀಗಾಗಿ ಪ್ರಕೃತಿ ರಹಸ್ಯಗಳನ್ನು ಭೇಧಿಸಲು ಮನುಷ್ಯ ಪ್ರಕೃತಿಯ ಜೊತೆಗೆ ಸಂಘರ್ಷಕ್ಕೆ ಇಳಿಯಬೇಕಾಗಿದೆ. ಒಬ್ಬ ವ್ಯಕ್ತಿ ಪ್ರಕೃತಿಯ ಜೊತೆ ಸಂಘರ್ಷಕ್ಕೆ ಇಳಿಯಲು ಸಾಧ್ಯವಿಲ್ಲ. ಆದ್ದರಿಂದ ಮನುಷ್ಯ ಸಮೂಹ ಜೀವನವನ್ನು ಕಟ್ಟಿಕೊಂಡ. ಸಮಾಜವನ್ನು ಸ್ಥಾಪಿಸಿಕೊಂಡ. ಪ್ರಕೃತಿಯ ಜೊತೆಗೆ ಸಂಘರ್ಷ ಹಾಗೂ ಸಮಾಜದಲ್ಲಿನ ವೈರುಧ್ಯಗಳ ವಿರುದ್ಧ ಸಂಘರ್ಷ ಮನುಷ್ಯ ಮಾಡಬೇಕಾಗುತ್ತದೆ. ಅದಕ್ಕಾಗಿ ಮನುಷ್ಯ ಜೀವನ ಸಂಘರ್ಷದಿಂದ ಕೂಡಿದೆ ಎಂದು ಹೇಳಲಾಗುತ್ತದೆ. ನಾವು ಸಂಘರ್ಷ ಬಿಟ್ಟರೂ ಸಂಘರ್ಷ ನಮ್ಮನ್ನು ಬಿಡುವುದಿಲ್ಲ. ಇಂತಹ ಸಾಮಾಜಿಕ ಸಂಘರ್ಷದಲ್ಲಿ ವಿದ್ಯಾರ್ಥಿಗಳು ಭಾಗವಹಿಸಿದರೆ ಅವರ ಭವಿಷ್ಯ ಹಾಳಾಗುತ್ತದೆ ಎನ್ನುವ ಅಭಿಪ್ರಾಯ ಎಷ್ಟರ ಮಟ್ಟಿಗೆ ಸರಿ ಎಂದು ಪ್ರಶ್ನಿಸಬೇಕಾಗುತ್ತದೆ.

ಪ್ರೇಮಶೇಖರ ಹೇಳುವ ಹಾಗೆ ತಮ್ಮ ಸುತ್ತಲ ಜಗತ್ತಿನಲ್ಲಿ ಬದಲಾವಣೆ ತರಲು ವಿದ್ಯಾರ್ಥಿ ಸಮೂಹ ಉತ್ಸುಕವಾಗುವುದಕ್ಕೆ ಎರಡು ಪ್ರಮುಖ ಕಾರಣಗಳಿವೆ. ಮೊದಲನೆಯದ್ದು ಹೊಸ ಚಿಂತನೆಗಳನ್ನು, ವಿಚಾರಧಾರೆಗಳನ್ನು ಹಳೆಯ ತಲೆಮಾರಿಗಿಂತಲೂ ಹೊಸ ತಲೆಮಾರು ಅಂದರೆ ವಿದ್ಯಾರ್ಥಿ ಸಮೂಹ ಒಪ್ಪಿಕೊಂಡು ಸ್ವಾಗತಿಸುವುದು ಸ್ವಾಭಾವಿಕ. ಎರಡನೆಯದ್ದು ವಿದ್ಯಾರ್ಥಿ ಸಮೂಹಗಳು ಸಹಜವಾಗಿಯೆ ಸಂಘಟಿತವಾಗಿರುವುದರಿಂದ ಹಾಗೂ ಪರಸ್ಪರ ನಿಕಟ ಸಂಪರ್ಕದಲ್ಲಿರುವುದರಿಂದ ಚಿಂತನೆಗಳ ಪ್ರಸಾರ ಅಲ್ಲಿ ಸುಲಭ ಹಾಗೂ ನಂಬಿದ ವಿಚಾರಧಾರೆಗಳಿಗಾಗಿ ಸಂಘಟಿತರಾಗಿ ಹೋರಾಡುವುದು ವಿದ್ಯಾರ್ಥಿಗಳಿಗೆ ಸುಲಭ. ಹೀಗಾಗಿಯೆ ಇತ್ತೀಚಿನ ಅಂದರೆ ದ್ವಿತೀಯ ಜಾಗತಿಕ ಸಮರೋತ್ತರ ಕಾಲದಲ್ಲಿಯೇ ವಿದ್ಯಾರ್ಥಿ ಸಮೂಹ ಹಲವು ದೇಶಗಳಲ್ಲಿ ರಾಜಕೀಯ, ಸಾಮಾಜಿಕ ಬದಲಾವಣೆಯ ಕೂಗೆತ್ತಿ ಮತ್ತೆ ಮತ್ತೆ ಹೊಸ ಯುಗದ ಹರಿಕಾರನಾಗಿದೆ. ಇದಕ್ಕೆ ಭಾರತವೂ ಹೊರತಾಗಿಲ್ಲ. ಕೆಲವು ಸಾಮಾಜಿಕ ನಿಯಮಗಳು ಮತ್ತವುಗಳಿಗೆ ಹೊಂದಿಕೊಂಡಂತೆ ರಚಿತವಾಗಿದ್ದ ರಾಜಕೀಯ ನಿಲುವುಗಳ ಪರ-ವಿರೋಧವಾಗಿ ಎಪ್ಪತ್ತರ ದಶಕದಲ್ಲಿ ಮೊದಲಿಗೆ ಗುಜರಾತ್‌ನಲ್ಲಿ ಆರಂಭವಾದ ವಿದ್ಯಾರ್ಥಿ ಆಂದೋಲನಗಳು ನಂತರ ಮಹಾರಾಷ್ಟ್ರಕ್ಕೆ ಹರಡಿಹೋದವು. ಅವುಗಳ ಸಾಧಕಬಾಧಕಗಳೇನೇ ಇರಲಿ ಅವು ರಾಷ್ಟ್ರಾದ್ಯಂತ ವಿದ್ಯಾರ್ಥಿಗಳಿಗೆ ತಮ್ಮ ಶಕ್ತಿಯ ಅರಿವು ಮಾಡಿಕೊಟ್ಟವು. ನಂತರ ಜಯಪ್ರಕಾಶ ನಾರಾಯಣರ ಚಿಂತನೆಗಳಿಗೆ ಸ್ಪಂದಿಸಿ ಉತ್ತರ ಭಾರತದಾದ್ಯಂತ ಚಳುವಳಿಗೆ ಧುಮಕ್ಕಿದ್ದು ಮುಖ್ಯವಾಗಿ ವಿದ್ಯಾರ್ಥಿ ಸಮೂಹ. ತೀರಾ ಇತ್ತೀಚಿಗೆ 2010ರ ಜನೆವರಿಯಲ್ಲಿ ಹೈದ್ರಾಬಾದ್‌ನ ಉಸ್ಮಾನಿಯಾ ವಿಶ್ವವಿದ್ಯಾಲಯದಲ್ಲಿ ಆಯೋಜಿಸಲ್ಪಟ್ಟ ತೆಲಂಗಾಣ ವಿದ್ಯಾರ್ಥಿ ಗರ್ಜನೆ ಪ್ರತ್ಯೇಕ ತೆಲಂಗಾಣಕ್ಕಾಗಿನ ಹೋರಾಟದ ಒಂದು ಪ್ರಮುಖ ಬೆಳವಣಿಗೆ. ಇದರಿಂದ ಸ್ಪಷ್ಟವಾಗುವ ಅಂಶವೇನೆಂದರೆ ವಿದ್ಯಾರ್ಥಿ ಆಂದೋಲನ ರಾಜಕೀಯ ಹಾಗೂ ಸಾಮಾಜಿಕ ಪಲ್ಲಟಗಳಿಗೆ ಕಾರಣವಾಗಿದೆ.

ಸಿ.ಜಿ.ಮಂಜುಳಾ ಅಭಿಪ್ರಾಯ ಪಡುವಂತೆ "ಸಮಾಜ ಬದಲಾಗುತ್ತಿದೆ. ಬದಲಾಗುತ್ತಿರುವ ಹೊಸ ಆಶೋತ್ತರಗಳ ಭಾರತದಲ್ಲಿ ನಾವಿದ್ದೇವೆ. ಆರ್ಥಿಕತೆಗೆ ಒತ್ತು ನೀಡುವ ಆಧುನಿಕೋತ್ತರ ಕಾಲ ಇದು. ಭೋಗ ಸಂಸ್ಕೃತಿಯ ವಿಜೃಂಭಣೆಯಲ್ಲಿ ಸಾಮಾಜಿಕ ವ್ಯವಸ್ಥೆ ಹಾಗೂ ಸಾಂಸ್ಕೃತಿಕ ಸಂವೇದನೆಗಳು ಶಿಥಿಲಗೊಳ್ಳುತ್ತಿರುವ ಬೆಳವಣಿಗೆಯನ್ನು ಕಾಣುತಿದ್ದೇವೆ. ನೈತಿಕತೆಯ ಗಡಿ ತೆಳುವಾಗುತ್ತಿದೆ. ಇಂತಹದೊಂದು ಪಲ್ಲಟದ ಕಾಲಘಟ್ಟದಲ್ಲಿ ವೈಯಕ್ತಿಕ ಹಾಗೂ ವೃತ್ತಿಪರ ಬದುಕಿನ ಸಂದರ್ಭಗಳಲ್ಲಿ ಮಹತ್ವಾಕಾಂಕ್ಷೆ, ದುರಾಸೆ, ಅಭದ್ರತೆ, ದ್ವೇಷದ ಸಂಗತಿಗಳ ಆರೋಗ್ಯಕರ ವಿಶ್ಲೇಷಣೆ ಸದ್ಯದ ಸಂದರ್ಭದಲ್ಲಿ ಪ್ರಸ್ತುತ. ಸ್ವಸ್ಥ ಸಮಾಜದ ಕಟ್ಟುವಿಕಿಗೆ ಇದು ಅಗತ್ಯ. ಅಂದರೆ ಆರೋಗ್ಯತಯುತ ಸಮಾಜ ನಿರ್ಮಾಣದಲ್ಲಿ ವಿದ್ಯಾರ್ಥಿಗಳ ಪಾತ್ರ" ಅತ್ಯಂತ ಮಹತ್ವದಾಗಿದೆ.

ದೇಶದಲ್ಲಿ ಇಂದಿಗೂ ಕೂಡ ಹಲವಾರು ಸಮಸ್ಯೆಗಳು ಇರುವುದನ್ನು ನಾವು ನೋಡಬಹುದು. ಜಾತಿಪದ್ಧತಿ, ಭಷ್ಟಾಚಾರ, ಕೋಮುವಾದ, ಸ್ವಜನಪಕ್ಷಪಾತ, ನಿರುದ್ಯೋಗ, ಭಯೋತ್ಪಾದನೆ ಮುಂತಾದ ಸಮಸ್ಯೆಗಳು ದೇಶವನ್ನು ಕಾಡುತ್ತಿವೆ. ಉದಾರೀಕರಣ, ಖಾಸಗೀಕರಣ ಮತ್ತು ಜಾಗತೀಕರಣದಿಂದ ರೈತರ ಬದುಕು, ಕಾರ್ಮಿಕರ ಬದುಕು, ಶೋಷಿತ ವರ್ಗಗಳ ಬದುಕು ಮೂರಾಬಟ್ಟೆಯಾಗುತ್ತಿದೆ. ರೈತರಿಂದ ಜಮೀನು ಕಸಿದುಕೊಂಡು ಒಕ್ಕಲೆಬ್ಬಿಸಲಾಗುತ್ತಿದೆ. ಈ ಸ್ಥಿತಿ ಹೀಗೆ ಮುಂದುವರೆದರೆ ಕೃಷಿಕರ, ಕಾರ್ಮಿಕರ, ದೀನದಲಿತರ, ಮಹಿಳೆಯರ ಬದುಕು ಶೋಚನಿಯ ಸ್ಥಿತಿ ತಲುಪುವದರಲ್ಲಿ ಸಂಶಯವೇ ಇಲ್ಲ. ಈ ವ್ಯವಸ್ಥೆಯನ್ನು ಯಾರು ಸರಿಪಡಿಸಬೇಕು? ರಾಜಕೀಯದಲ್ಲಿ ಭ್ರಷ್ಟಾಚಾರ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದೆ. ಅದಕ್ಕಾಗಿ ವಿದ್ಯಾಸಾಗರ "ದೇಶದ ಜನತೆ ಹಸಿವಿನಿಂದ, ರೋಗರುಜಿನಗಳಿಂದ ಬಳಲುತ್ತಿದ್ದಾಗ ನಾವು ಈಶ್ವರನ ಜಪ ಮಾಡುತ್ತಾ ಕೂಡುವುದು ಯಾವ ನ್ಯಾಯ. ಅಂತಹ ಈಶ್ವರನ ಮೇಲೆ ನನಗೆ ನಂಬಿಕೆ ಇಲ್ಲ. ನನಗೆ ಸ್ವರ್ಗ ಬೇಕಾಗಿಲ್ಲ. ಮೋಕ್ಷದ ಆಸೆ ನನಗಿಲ್ಲ. ಈ ದೀನದಲಿತರ ಸೇವೆಗಾಗಿ ಬಂಗಾಲದಲ್ಲಿಯೇ ನನ್ನ ಜನನವಾಗಲಿ" ಎಂದು ಹೇಳುತ್ತಾರೆ. ಅದಕ್ಕಾಗಿ ದೇಶ ಎದುರಿಸುತ್ತಿರುವ ಈ ಸಮಸ್ಯೆಗಳನ್ನು ಬಗೆಹರಿಸಲು ವಿದ್ಯಾರ್ಥಿಗಳು ಪ್ರಯತ್ನ ಪಡದೆ ಮೂಕ ಪ್ರೇಕ್ಷಕರಾಗಿ ಇರಬೇಕೆ? ಎನ್ನುವ ಪ್ರಶ್ನೆ ಎಲ್ಲರನ್ನು ಕಾಡುತ್ತಿದೆ.

ಇಂದಿನ ಸಮಾಜವನ್ನು ಸೂಕ್ಷ್ಮ ದೃಷ್ಟಿಯಿಂದ ವಿದ್ಯಾರ್ಥಿಗಳು ನೋಡಬೇಕಾಗಿದೆ. ಸಮಾಜದಲ್ಲಿ ಅಂತರ್ಗತವಾಗಿರುವ ಆಳವಾದ ಸಂಕಟದಲ್ಲಿ ನಾವು ಇಂದು ಮುಳುಗಿದ್ದೇವೆ. ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯ ಕ್ಷೇತ್ರದಲ್ಲಿ ಇಂದು ಒಂದು ರೀತಿಯ ಅಭಾವ ಅಥವಾ ಶೂನ್ಯ ಅಥವಾ ಹಾಹಾಕಾರ ಎದ್ದುಕಾಣುತ್ತಿದೆ. ಸಮಾಜದಲ್ಲಿ ಮಾನಸಿಕ ರೋಗಗಳು ಹೆಚ್ಚಾಗುತ್ತಿವೆ. ನಗರ ಜೀವನದಲ್ಲಿ ಇದು ಇನ್ನೂ ಹೆಚ್ಚಾಗುತ್ತಿದೆ. ಕ್ರಮೇಣವಾಗಿ ಗ್ರಾಮೀಣ ಜೀವನವನ್ನು ತನ್ನ ವ್ಯಾಪ್ತಿಗೆ ಅಥವಾ ತೆಕ್ಕೆಗೆ ತೆಗೆದುಕೊಳ್ಳುತ್ತಿದೆ. ಆರ್ಥಿಕ ಸಂಕಟ ಇನ್ನೂ ಭಯಾಯನಕವಾಗಿದೆ. ಆರ್ಥಿಕ ಸಂಕಟವೊಂದೆ ಜೀವನ ಅಲ್ಲ. ಆದರೆ ಆರ್ಥಿಕ ಸಂಕಟದ ಜೊತೆಗೆ ನೈತಿಕ ಮೌಲ್ಯಗಳ ಅಧಃಪತನವಾಗುತ್ತಿದೆ. ಕೌಟುಂಬಿಕ ಸಮಸ್ಯೆಗಳು ಹೆಚ್ಚಾಗುತ್ತಿವೆ. ಪ್ರೀತಿ, ಪ್ರೇಮ, ವಿಶ್ವಾಸ, ನಂಬಿಕೆ, ಸಹೋದರತ್ವ, ಸಹಿಷ್ಣುತೆ ಅಂತಹ ಜೀವನ ಮೌಲ್ಯಗಳು ಸಮಾಜದಿಂದ ಕಣ್ಮರೆಯಾಗುತ್ತಿರುವುದು ಆತಂಕಕಾರಿಯಾದ ವಿಷಯ. ಮನುಷ್ಯ ಬರುಬರುತ್ತಾ ಸ್ವಾರ್ಥಿಯಾಗುತ್ತಿದ್ದಾನೆ. ಈ ತರಹದ ಮಾನವ ಬಿಕ್ಕಟ್ಟುಗಳನ್ನು ಇಂದು ಸಮಾಜದಲ್ಲಿ ನಾವು ನೋಡುತ್ತಿದ್ದೆವೆ. ಈ ತರಹದ ಪರಿಸ್ಥತಿ ಯಾಕೆ ಉದ್ಭವವಾಯಿತು? ಇದಕ್ಕೆ ಕಾರಣಗಳೇನು? ಮುಂತಾದ ಪ್ರಶ್ನೆಗಳು ಇವತ್ತು ಕೇವಲ ಬೌದ್ಧಿಕ ವರ್ಗದವರನ್ನು ಮಾತ್ರ ಕಾಡುತ್ತಿಲ್ಲ. ವಿದ್ಯಾರ್ಥಿ ಸಮುದಾಯವನ್ನು ಕಾಡುತ್ತಿದೆ. ವಿಶಾಲವಾದ ಸಾಂಸ್ಕೃತಿಕ ಕ್ರಾಂತಿಯ ತತ್ವದ ಮೇಲೆ ಸರ್ವವ್ಯಾಪಿಯಾದ ಸಾಂಸ್ಕೃತಿಕ ಆಂದೋಲನದ ಅವಶ್ಯಕತೆ ಇದೆ. ಬಂಡವಾಳ

ಶಾಹಿ ವ್ಯವಸ್ಥೆಯಲ್ಲಿ ಅಮೂಲಾಗ್ರವಾದ ಬದಲಾವಣೆ ಮಾಡುವ ಅವಶ್ಯಕತೆ ಇದೆ. ಆದ್ದರಿಂದ ವಿದ್ಯಾರ್ಥಿಗಳು ಈ ಆಂದೋಲನದ ನೇತೃತ್ವವನ್ನು ವಹಿಸಬೇಕಾಗಿದೆ. ಹೊಸಕಾಲ ಘಟ್ಟದಲ್ಲಿ ಹೊಸ ಆದರ್ಶಗಳನ್ನು ವಿದ್ಯಾರ್ಥಿ ಸಮುದಾಯ ಹುಡುಕಬೇಕಾಗಿದೆ. ಆ ಕಾರಣಕ್ಕಾಗಿ ವಿದ್ಯಾರ್ಥಿ ಸಮುದಾಯ ಸಮಾಜದಲ್ಲಿ ಆಗುವ ಬೆಳವಣಿಗೆಗಳನ್ನು, ವಿದ್ಯಮಾನಗಳನ್ನು ಸೂಕ್ಷ್ಮ ದೃಷ್ಟಿಯಿಂದ ನೋಡುವ, ಪರೀಕ್ಷಿಸುವ, ವಿಶ್ಲೇಷಿಸುವ, ವೈಜ್ಞಾನಿಕ ಒರೆಗಲ್ಲಿಗೆ ಹಚ್ಚಿ ಸತ್ಯಾಸತ್ಯತೆಯನ್ನು ಕಂಡುಕೊಳ್ಳುವ ಮನೋಭಾವ ಬೆಳೆಸಿಕೊಳ್ಳಬೇಕಾಗಿದೆ.

ಸ್ಟುಡೆಂಟ್ ಫೆಡರೇಷನ್ ಆಫ್ ಇಂಡಿಯಾದ ಕರ್ನಾಟಕದ ಮಾಜಿ ರಾಜ್ಯಾಧ್ಯಕ್ಷರಾದ ಅನಂತನಾಯಕ ಎನ್. ಅಭಿಪ್ರಾಯ ಪಡುವಂತೆ "ಪ್ರಜಾತಂತ್ರ ವ್ಯವಸ್ಥೆಯಲ್ಲಿ ಎಲ್ಲಾ ವಿಷಯಗಳನ್ನು ಮುಕ್ತ ಚರ್ಚೆಗೊಳಪಡಿಸಬೇಕು. ಪ್ರಚಲಿತ ಬೆಳವಣಿಗೆಗಳ ಕುರಿತು ಸಂವಾದ, ಚರ್ಚೆ ಸಂಘಟಿಸುವುದು ಕೂಡಾ ಕಲಿಕಾ ಕ್ರಮದ ಒಂದು ಭಾಗ. ಸೈದ್ಧಾಂತಿಕ ಭಿನ್ನ ನೆಲೆಯವರು ಒಟ್ಟಿಗೆ ಕೂತು ಮುಕ್ತವಾಗಿ ಚರ್ಚಿಸುವ ಅವಕಾಶವಿರಬೇಕು. ಇವರ ವಿಚಾರಗಳಿಗೆ ಪೂರಕವಾಗಿ ನಟರಾಜ್ ಹುಳಿಯಾರ ತಮ್ಮ ಲೇಖನದಲ್ಲಿ 'ಹೊಸ ಕಾಲದ ವಿದ್ಯಾರ್ಥಿಗಳ ಹೊಸ ಎಚ್ಚರ' ಹೀಗೆ ಅಭಿಪ್ರಾಯ ಪಡುತ್ತಾರೆ. "ಇಂಡಿಯಾದ ವಿದ್ಯಾರ್ಥಿಗಳ ವಿಚಿತ್ರ ನೈತಿಕ ಶಕ್ತಿಯ ಚರಿತ್ರೆ ಗೊತ್ತಿರಲ್ಲಿಕ್ಕಿಲ್ಲ. ನಲವತ್ತು ವರ್ಷಗಳ ಕೆಳಗೆ ವಿದ್ಯಾರ್ಥಿಗಳು ಜೆ.ಪಿ. ಚಳುವಳಿಯ ಆಧಾರಸ್ತಂಭವಾಗಿದ್ದರು. ಅನಂತರ ಹಿಂದುಳಿದ ವರ್ಗಗಳಿಗೆ ಮೀಸಲಾತಿ ವಿರೋಧಿಸಿ ಐ.ಐ.ಟಿ.ಯ ವಿದ್ಯಾರ್ಥಿಗಳು ಗಲಾಟೆಯೆಬ್ಬಿಸಿದಾಗ ಹಿಂದುಳಿದ ವರ್ಗಗಳಿಗೆ ಮೀಸಲಾತಿಯನ್ನು ಉಳಿಸಿಕೊಡುವಲ್ಲಿ ದಲಿತ ಹುಡುಗರು ಪ್ರಧಾನ ಪಾತ್ರ ವಹಿಸಿದರು. ಮೊನ್ನೆ ತಾನೆ ಮುಗಿದ ತೆಲಂಗಾಣಾ ಹೋರಾಟಕ್ಕೆ ಎಂಬತ್ತು ಭಾಗ ಕೊಡುಗೆ ಕೊಟ್ಟವರು ಉಸ್ಮಾನಿಯಾ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು ಎಂದು ಈ ಚಳುವಳಿಯನ್ನು ಹತ್ತಿರದಿಂದ ಗಮನಿಸಿದ ಡಾ. ತಾರಕೇಶ್ವರ ಹೇಳಿದರು. ಇಂಡಿಯಾದ ವಿದ್ಯಾರ್ಥಿಗಳು ಕಳೆದ 40 ವರ್ಷಗಳಲ್ಲಿ ಭ್ರಷ್ಟಾಚಾರ, ಸರ್ವಾಧಿಕಾರಗಳ ವಿರುದ್ಧ ತಿರುಗಿ ಬಿದ್ದಿದ್ದಾರೆ. ವಿಕೇಂದ್ರಿಕರಣದ, ಸಾಮಾಜಿಕ ನ್ಯಾಯದ ಹೋರಾಟಗಳನ್ನು ಮುನ್ನಡೆಸಿದ್ದಾರೆ. ಇಂಡಿಯಾದಲ್ಲಿ ವಿದ್ಯಾರ್ಥಿಗಳು ಪ್ರಾಮಾಣಿಕವಾಗಿ ಸಿಟ್ಟಿಗೆದ್ದಾಗಲೆಲ್ಲ ಸರಕಾರಗಳು ಕುಸಿದು ಬಿದ್ದಿವೆ. ಕರ್ನಾಟಕದ ವಿವಿಧ ಪ್ರಗತಿಪರ ವಿದ್ಯಾರ್ಥಿ ಸಂಘಟನೆಗಳು ಒಟ್ಟಾಗಿ ಸೇರಿ ರೋಹಿತ್ ವೇಮುಲಾರ ಆತ್ಮಹತ್ಯೆಗೆ ಕಾರಣರಾದವರನ್ನು ಖಂಡಿಸಿದವು. ಜೆ.ಎನ್.ಯು. ಪ್ರಕರಣದಲ್ಲಿ ನಡೆದ ಹಲ್ಲೆಗಳನ್ನು ಒಕ್ಕೂಟ ಖಂಡಿಸಿತು. ಈಗ ಶುರುವಾಗಿರುವ ಈ ವಿಶಾಲ ಸಂಘಟನೆಯನ್ನು ತಾತ್ವಿಕ ಚೌಕಟ್ಟಿನ ಮೂಲಕ ಗಟ್ಟಿಯಾಗಿಸುವ ಅಗತ್ಯವಿದೆ. ಇಲ್ಲಿ ಸೇರಿರುವ ಎಲ್ಲ ಸಂಘಟನೆಗಳನ್ನು ಬೆಸೆಯುವ ಚಿಂತನೆಗಳು, ಕಾರ್ಯಕ್ರಮಗಳನ್ನು ರೂಪಿಸಬೇಕು. ಪ್ರಗತಿಪರ ಚಳುವಳಿಗಳ ಹಿರಿಯರೊಡನೆ ಚರ್ಚಿಸಿ ವಿಶಾಲವಾದ ಕಾರ್ಯಕ್ರಮಗಳನ್ನು ರೂಪಿಸಬೇಕು. ಈ

ಸಂಘಟನೆಯಲ್ಲಿ ಭಾಗಿಯಾಗುವ ಎಲ್ಲರೂ ಮಾರ್ಕ್ಸ್, ಅಂಬೇಡ್ಕರ್, ಜೆ.ಪಿ., ಲೋಹಿಯಾ ಮುಂತಾದವರ ಚಿಂತನೆಗಳನ್ನು ಇಂದಿನ ಸಮಾಜದ ಬಿಕ್ಕಟ್ಟುಗಳನ್ನು ಸರಳವಾಗಿಯಾದರೂ ಅರಿಯುವುದು ಮುಖ್ಯ." ಇದೀಗ ಎಲ್ಲಡೆ ಸ್ಫೋಟಗೊಳ್ಳುತ್ತಿರುವ ವಿದ್ಯಾರ್ಥಿಗಳ ಸಾತ್ವಿಕ ಸಿಟ್ಟು ಅಹಿಂಸಾವಾದಿ ಮಾರ್ಗದಲ್ಲಿ ದೃಢವಾಗಿ ಸಾಗಿದರೆ ಅದರ ಉತ್ತಮ ಫಲ ದೇಶಕ್ಕೆ ದಕ್ಕ ಬಲ್ಲದು. ಅಸಲಿ ದೇಶ ಭಕ್ತರು ಆಗ ಹುಟ್ಟಬಹುದು.

ಇವರಿಬ್ಬರ ನಿಲುವುಗಳಿಗೆ ವಿಭಿನ್ನವಾದ ಅಭಿಪ್ರಾಯವನ್ನು ಡಾ.ಬಿ.ವಿ. ವಸಂತಕುಮಾರ ಕರ್ನಾಟಕ ರಾಜ್ಯ ಅಖಿಲ ಭಾರತ ವಿದ್ಯಾರ್ಥಿ ಪರಿಷತ್ ಉಪಾಧ್ಯಕ್ಷರು'ಸಮಾಜ ದ್ರೋಹದಿಂದ ದೇಶದ್ರೋಹದೆಡೆಗೆ ಎಡಪಂಥೀಯವಾದ' ಎಂಬ ಲೇಖನದಲ್ಲಿ ವ್ಯಕ್ತಪಡಿಸುತ್ತಾರೆ. ಅವರ ಪ್ರಕಾರ "ಎಡಪಂಥೀಯರದು ಮೂಲತಃ ಪ್ರಜಾಪ್ರಭುತ್ವ ವಿರೋಧಿ ಸಿದ್ಧಾಂತ. ಅವರು ಭಾರತೀಯ ಸಂವಿಧಾನದ ಬಗ್ಗೆ ಎಂದೂ ಸಮ್ಮತಿ ಹಾಗೂ ಗೌರವ ಹೊಂದಿದವರಲ್ಲ. ಅವರಿಂದ ದೇಶಭಕ್ತಿಯನ್ನಾಗಲಿ, ರಚನಾತ್ಮಕ ದೃಷ್ಟಿಕೋನವನ್ನಾಗಲಿ, ಸಂವಿಧಾನ ಬದ್ಧ ನಡುವಳಿಕೆಯನ್ನಾಗಲಿ ನಿರೀಕ್ಷಿಸುವುದು ತಪ್ಪಾಗುತ್ತದೆ. ಏಕೆಂದರೆ ಅವರ ಸಿದ್ಧಾಂತವೇ ಅವುಗಳ ವಿರುದ್ಧವಾಗಿದೆ. ಮೆಕಾಲೆ ಭಾರತದ ಬಣ್ಣದಲ್ಲಿರುವ ಬ್ರಿಟಿಷರಂತೆ ಯೋಚಿಸುವ ವಿದ್ಯಾರ್ಥಿಗಳನ್ನು ರೂಪಿಸಬೇಕೆಂಬ ಶಿಕ್ಷಣ ನೀತಿಯನ್ನು ಹೊಂದಿದ್ದರೆ, ಮಾರ್ಕ್ಸವಾದಿಗಳು ಭಾರತದ ಬಣ್ಣದಲ್ಲಿರುವ ರಷ್ಯಾದವರಂತೆ ಯೋಚಿಸುವ ವರ್ಗ ಸಂಘರ್ಷದ ಮೂಲಕ ರಕ್ತ ಕ್ರಾಂತಿ ಮಾಡುವ ಪ್ರಜಾಪ್ರಭುತ್ವ ವಿರೋಧಿ, ಸಂವಿಧಾನ ವಿರೋಧಿ, ಒಟ್ಟಾರೆ ಭಾರತ ರಾಷ್ಟ್ರೀಯತೆ ವಿರೋಧಿಸುವ ವಿದ್ಯಾರ್ಥಿಗಳನ್ನು ರೂಪಿಸಬೇಕೆಂಬ ಶಿಕ್ಷಣ ನೀತಿಯನ್ನು ಹೊಂದಿದ್ದಾರೆ. ಸ್ವಾತಂತ್ರ್ಯ ಬಂದ ಹೊಸ ಕಾಲಘಟ್ಟದಲ್ಲಿ ನೆಹರು ಅವರ ರಷ್ಯಾ ಪ್ರೇಮದ ವಿದೇಶಾಂಗ ನೀತಿ ಮತ್ತು ಮಾರ್ಕ್ಸವಾದಿಗಳ ಸಖ್ಯದಿಂದ ಭಾರತದ ವಿಶ್ವವಿದ್ಯಾನಿಲಯಗಳು, ಶಿಕ್ಷಣ ಕ್ಷೇತ್ರ ಎಡಪಂಥದ ಬುದ್ಧಿಜೀವಿಗಳ ಇತಿಹಾಸಕಾರರ ಕೈಗೆ ಹೋಯಿತು. ಪ್ರೊ.ಎಸ್.ರಾಧಾಕೃಷ್ಣರಂಥ ಶಿಕ್ಷಣ ನೀತಿಯನ್ನು ಅಂದಿನ ಕಾಂಗ್ರೆಸ್ ನೇತ್ರತ್ವದ ಸರ್ಕಾರ ಸಂಪೂರ್ಣವಾಗಿ ಕಡೆಗಣಿಸಿತು. ಅದರ ಘೋರ ಪರಿಣಾಮವನ್ನು ಒಟ್ಟಾರೆ ಶಿಕ್ಷಣ ಕ್ರೇತ್ರದಲ್ಲಿರುವ ಮೌಲ್ಯಗಳ ಪತನದಲ್ಲಿ ಕಾಣಬಹುದು. ಆ ಬೃಹತ್ ಸ್ವರೂಪದ ಪುಟ್ಟ ಉದಾಹರಣೆಗಳೇ ಜವಾಹರ್‌ಲಾಲ್ ನೆಹರು ವಿಶ್ವವಿದ್ಯಾಲಯ ಹಾಗೂ ಹೈದ್ರಾಬಾದ್ ವಿಶ್ವವಿದ್ಯಾಲಯದಲ್ಲಿ ವಿದ್ಯಾರ್ಥಿಗಳು ದೇಶ ವಿರೋಧಿ ಭಯೋತ್ಪಾದಕರನ್ನು ಬೆಂಬಲಿಸಿ ಹೋರಾಟ ಮಾಡುವ ಮಟ್ಟಿಗೆ ಇಳಿದಿರುವುದು. ಅಂತಹ ವಿದ್ಯಾರ್ಥಿಗಳನ್ನು ಆಯಾ ವಿಶ್ವವಿದ್ಯಾಲಯಗಳಲ್ಲಿ ರೂಪಿಸಿ ಬಯಲಿಗೆ ಬಿಟ್ಟು ಮರೆಯಲ್ಲಿ ಅವಿತಿರುವ ಕೆಲ ಎಡಪಂಥೀಯ ವಿಚಾರಧಾರೆಯ ಪ್ರಾಧ್ಯಾಪಕರು ಸ್ವತಃ ಮಗುಮ್ಮಾಗಿರುತ್ತಾರೆ. ಸರಕಾರದ ಸಂಬಳ, ಸವಲತ್ತುಗಳನ್ನು ಪಡೆದು ಅದರ ಮೂಲಕವೆ ತಮ್ಮ ಖಾಸಗಿ ರಾಜಕೀಯ ಸಿದ್ಧಾಂತಗಳ

ಅಧ್ಯಯನ–ಬೋಧನೆ–ಬರವಣಿಗೆ–ಪ್ರಚೋದನೆಗಳ ಮೂಲಕ ಕುಮಾರ ಕನ್ಹಯ್ಯಾ, ರೋಹಿತ ವೆಮುಲಾರಂಥ ವಿದ್ಯಾರ್ಥಿಗಳನ್ನು ಬಲಿ ನೀಡುತ್ತಾರೆ. ಭಾರತದಲ್ಲಿರುವ ವಿಶ್ವವಿದ್ಯಾಲಯಗಳಲ್ಲಿ ದೀನರು, ದಲಿತರು, ಅಸ್ಪ್ರಶ್ಯರು, ಅಂಬೇಡ್ಕರ್‌ವಾದಿಗಳಾಗುವ ಬದಲು ಮಾರ್ಕ್ಸ್‌ವಾದಿ ಮೇಷ್ಟ್ರುಗಳೇ ಮುಖ್ಯ ಕಾರಣ. ಆದರೆ ಅವರು ದೇಶದ್ರೋಹದ ಚಟುವಟಿಕೆಗಳು ನಡೆದಾಗ ಬಚ್ಚಿಟ್ಟುಕೊಂಡು ಕಣ್ಮರೆಯಾಗುತ್ತಾರೆ. ಬಂಧಿಸಬೇಕಾಗಿರುವುದು ಕುಮಾರ ಕನ್ಹಯ್ಯಾ, ರೋಹಿತ ವೆಮುಲಾ ಮತ್ತು ಕರ್ನಾಟಕದ ಸಾಕೇತ್ ರಾಜನ್ ನಂಥ ವಿದ್ಯಾರ್ಥಿಗಳನ್ನು ತಪ್ಪುದಾರಿಗೆ ತಳ್ಳಿದವರನ್ನು. ಕಮ್ಯುನಿಸ್ಟರು ಮಾರ್ಕ್ಸ್, ಲೆನಿನ್ ಹೆಸರಲ್ಲಿ ವಿದ್ಯಾರ್ಥಿಗಳನ್ನು ಆಕರ್ಷಿಸಲು ಸೋತಿದ್ದಾರೆ. ಹಾಗಾಗಿ ಅಂಬೇಡ್ಕರ್ ಅವರ ಹೆಸರಿನಲ್ಲಿ ವಿಕಾಸ, ಪ್ರಗತಿಪರತೆ, ಜಾತ್ಯಾತೀತತೆ, ಕೋಮುವಾದ ವಿರೋಧಿ ಮೊದಲಾದ ಹೆಸರಿನಲ್ಲಿ ಸಂಘಟನೆಗಳನ್ನು ಆರಂಭಿಸಿ ಅಲ್ಲಿ ತಮ್ಮ ಕಾರ್ಯಕರ್ತರ ತಲೆಯಲ್ಲಿ ವರ್ಗ ಸಂಘರ್ಷದ ದ್ವೇಷ ತುಂಬಲಾಗುತ್ತಿದೆ. ಬುದ್ಧ, ಬಸವ, ಗಾಂಧಿ, ಅಂಬೇಡ್ಕರ್ ರವರ ಚಿಂತನೆಗೆ ವಿರುದ್ಧವಾಗಿ ಕಾರ್ಯಕರ್ತರನ್ನು ಬೆಳೆಸಲಾಗುತ್ತದೆ. ಅದರ ಪರಿಣಾಮವೇ ವಿದ್ಯಾರ್ಥಿ ಸಂಘದ ಹೆಸರಿನಲ್ಲಿ ದೇಶವನ್ನು ಧ್ವಂಸ ಮಾಡಲು ಹೊರಟ ಭಯೋತ್ಪಾದಕರನ್ನು ಬೆಂಬಲಿಸುವ ಕಾರ್ಯಕ್ರಮ ಹಾಗೂ ಹೋರಾಟಗಳು ನಡೆಯುವಂತಾಗಿದೆ".

ಮಾರ್ಕ್ಸ್‌ವಾದ ವಿದೇಶಿ ಸಿದ್ಧಾಂತವಾದ್ದರಿಂದ ನಾವೇಕೆ ಅದನ್ನು ಒಪ್ಪಿಕೊಳ್ಳಬೇಕು ಎಂಬ ಪ್ರಶ್ನೆ ಕೆಲವರು ಎತ್ತುತ್ತಾರೆ. ಈ ಪ್ರಶ್ನೆಗೆ ಸ್ಪಷ್ಟವಾದ ಉತ್ತರವನ್ನು ಕಂಡುಕೊಳ್ಳಬೇಕಾಗಿದೆ. ಭಾರತದಲ್ಲಿ ಸಂಸದೀಯ ಪ್ರಜಾಪ್ರಭುತ್ವವಿದೆ, ಸಂವಿಧಾನಾತ್ಮಕ ಆಡಳಿತವಿದೆ, ಕಾಯಿದೆಯ ಪ್ರಭುತ್ವವಿದೆ, ನ್ಯಾಯಾಂಗ ಮತ್ತು ನ್ಯಾಯಾಲಯಗಳಿವೆ, ಬಹುಪಕ್ಷ ಪದ್ಧತಿ ಇದೆ. ಇವೆಲ್ಲವುಗಳು ರಾಮಾಯಣ ಮತ್ತು ಮಹಾಭಾರತದಲ್ಲಿ ಅಸ್ತಿತ್ವದಲ್ಲಿದ್ದವೇ? ಅಷ್ಟೆ ಅಲ್ಲದೆ ಆಧುನಿಕ ಉದ್ಯೋಗ, ವಿಜ್ಞಾನದ ಆವಿಷ್ಕಾರ, ಆಧುನಕ ಶಿಕ್ಷಣ ನೀತಿ, ಕೃಷಿ ಕ್ಷೇತ್ರದಲ್ಲಿನ ಆಧುನಿಕ ಸಲಕರಣೆಗಳು ಇವೆಲ್ಲವುಗಳನ್ನು ನಾವು ಪಶ್ಚಿಮ ಜಗತ್ತಿನಿಂದ ಪಡೆದುಕೊಂಡಿದ್ದೇವೆ. ಅಂದ ಮೇಲೆ ಮಾರ್ಕ್ಸ ಸಿದ್ಧಾಂತವನ್ನು ಒಪ್ಪಿಕೊಳ್ಳುವುದರಿಂದ ಆಗುವ ಅನಾಹುತವಾದರೂ ಏನು? ಎಂದು ಕೆಲವು ಪ್ರಗತಿಪರ ವಿದ್ಯಾರ್ಥಿಗಳು ಪ್ರಶ್ನಿಸುತ್ತಿದ್ದಾರೆ.

ಎನ್.ಎಸ್.ಯು.ಐ. ಕರ್ನಾಟಕ ಘಟಕದ ಅಧ್ಯಕ್ಷರಾದ ಎಚ್.ಎಸ್.ಮಂಜುನಾಥಗೌಡ ಅವರ ಪ್ರಕಾರ "ಈ ನಮ್ಮ ಸಮಾಜವನ್ನು ಕೂಪ ಮಂಡೂಕಗಳಿಂದ ರಕ್ಷಿಸಿ, ಹೊಸ ಪೀಳಿಗೆಗೆ ಶಾಂತ ವಾತಾವರಣದಲ್ಲಿ ಅತ್ಯಾಧುನಿಕ ತಂತ್ರಜ್ಞಾನಗಳ ನೆರವಿನಿಂದ, ವಿದ್ಯೆಯ ನೆರವಿನಿಂದ ಪ್ರತಿಯೊಬ್ಬರ ಬುದ್ಧಿ ಶಕ್ತಿಯನ್ನು ಪಕ್ವಗೊಳಿಸಿ ಸರ್ವತೋಮುಖ ಬೆಳವಣಿಗೆಯನ್ನು ಅಳವಡಿಸಬೇಕಾಗಿದೆ. ಭವಿಷ್ಯದ ಬಗ್ಗೆ ಗಮನವಿರಿಸಿ ಸಾಮಾಜಿಕ, ಆರ್ಥಿಕ, ರಾಜಕೀಯ,

ಆಡಳಿತಾತ್ಮಕ, ಬೌದ್ಧಿಕ, ಕಲಾತ್ಮಕ ಮುಂತಾದ ವಿದ್ಯೆಗಳನ್ನು ಜಾತ್ಯಾತೀತ, ಮಾನವತಾವಾದಿ, ಧರ್ಮಾತೀತ ಬೌದ್ಧಿಕ ವಿಚಾರಗಳಿಂದ ತರಬೇತುಗೊಳಿಸಬೇಕಾಗಿದೆ. ಮುಂದೆ ಈ ಭವಿಷ್ಯದ ಯುವ ನೇತಾರರು ದೇಶದ ಸುಭದ್ರತೆಗೆ ಅಭಿವೃದ್ಧಿಯ ಪತಾಕೆ ಹಿಡಿದು ವಿಶ್ವಕ್ಕೆ ಮಾದರಿ ಆಗುವಂತೆ ಬೆಳೆಸಬೇಕಾಗಿದೆ. ಇದಕ್ಕೆ ಪೂರಕವಾಗಿ ಆಡಳಿತ ಪಕ್ಷಗಳಿಂದ ಹೊರತುಪಡಿಸಬೇಕಾಗಿದೆ. ಇದಕ್ಕೆ ಬೇಕಾದ ಪಠ್ಯ ಪುಸ್ತಕಗಳನ್ನು ವಿದ್ಯಾದುರಂಧರರಿಂದ ಪಡೆದಿದ್ದಾಗಿರಬೇಕೇ ಹೊರತು ದೇಶ ಭಕ್ತರಿಂದಲ್ಲ."

ಆತ್ಮಸಮ್ಮಾನ, ಸ್ವಾಭಿಮಾನ, ಮನುಷ್ಯತ್ವವಿರುವ ಪ್ರತಿಯೊಬ್ಬ ವ್ಯಕ್ತಿಯು ಕೂಡ ತನ್ನ ಕಣ್ಣೆದುರಲ್ಲಿ ನಡೆಯುವ ಅನ್ಯಾಯ, ಅತ್ಯಾಚಾರವನ್ನು ಖಂಡಿಸಬೇಕಾಗುತ್ತದೆ. ಅದನ್ನು ವಿರೋಧಿಸಬೇಕಾಗುತ್ತದೆ. ವಿವೇಕತೆ ಇರುವ ಪ್ರತಿಯೊಬ್ಬ ವ್ಯಕ್ತಿಯು ಕೂಡ ಸಮಾಜದಲ್ಲಿ ಸಂಭವಿಸುತ್ತಿರುವ ಅನಾಚಾರ, ದುರಾಚಾರ, ಅನ್ಯಾಯ, ಅತ್ಯಾಚಾರಗಳನ್ನು ಪ್ರತಿಭಟಿಸದೆ ಸುಮ್ಮನಿದ್ದರೆ ಸ್ವಾಭಿಮಾನ ಶೂನ್ಯ ಬದುಕನ್ನು ಕಳೆದಂತಾಗುತ್ತದೆ. ನನ್ನ ಒಬ್ಬನಿಂದಲೆ ಸಮಾಜದಲ್ಲಿ ಏನನ್ನು ಬದಲಾವಣೆ ಮಾಡಲು ಸಾಧ್ಯ? ಎನ್ನುವ ಪ್ರಶ್ನೆ ಉದ್ಭವವಾಗಬಹುದು. ಆದರೆ ಒಬ್ಬ ವ್ಯಕ್ತಿಯೇ ಸ್ವಾಭಿಮಾನಿಯಾಗಿದ್ದರೆ, ಆತ್ಮಸಮ್ಮಾನವುಳ್ಳ ವ್ಯಕ್ತಿಯಾಗಿದ್ದರೆ, ಅನ್ಯಾಯವನ್ನು ಎದುರಿಸುವ ಎದೆಗಾರಿಕೆ ಇದ್ದರೆ ಸಮಾಜದಲ್ಲಿ ಸಾಕಷ್ಟು ಬದಲಾವಣೆಯನ್ನು ತರಬಹುದು ಎಂಬುವುದನ್ನು ಇತಿಹಾಸದ ಪುಟಗಳನ್ನು ತಿರುವಿಹಾಕಿದಾಗ ನಮಗೆ ಗೋಚರವಾಗುತ್ತದೆ. ಅದಕ್ಕಾಗಿ ಸಮಾಜದಲ್ಲಿನ ಅನ್ಯಾಯಗಳನ್ನು ವಿರೋಧಿಸುವ, ಅವುಗಳ ವಿರುದ್ಧ ಸಂಘರ್ಷಕ್ಕಿಳಿಯುವ ಮನೋಭಾವ ಇಂದಿನ ಯುವ ಪೀಳಿಗೆ ಬೆಳೆಸಿಕೊಳ್ಳಬೇಕಾಗಿದೆ. ರಾಷ್ಟ್ರದ ಏಕತೆ, ಅಖಂಡತೆ ಹಾಗೂ ಭದ್ರತೆಗೆ ಧಕ್ಕೆ ಬಾರದಂತೆ ರಾಷ್ಟ್ರವನ್ನು ಪ್ರಗತಿಪಥದತ್ತ ಕೊಂಡೊಯ್ಯುವ ಗುರುತರವಾದ ಜವಾಬ್ದಾರಿ ಇಂದು ವಿದ್ಯಾರ್ಥಿ ಸಮುದಾಯದ ಮೇಲಿದೆ.

ಇಂದು ಬಹುಸಂಖ್ಯಾತರು ಆಲೋಚಿಸುವುದೇನೆಂದರೆ ರಾಜಕೀಯ ವ್ಯಕ್ತಿಯನ್ನು ಭ್ರಷ್ಟನನ್ನಾಗಿ ಮಾಡುತ್ತದೆ. ವ್ಯಕ್ತಿಯ ಚಾರಿತ್ರ್ಯವಧೆ ಮಾಡುತ್ತದೆ. ರಾಜಕೀಯ ಎಂದರೆ ಹಣಬಲ, ತೋಳ್ಬಲ, ಸುಳ್ಳು ಹೇಳುವುದು, ಧಗಾ, ವಂಚನೆ ಮಾಡುವುದು ಎಂದು ಅರ್ಥೈಯಿಸಿಕೊಳ್ಳಲಾಗುತ್ತಿದೆ. ಈ ಮಾತುಗಳಿಗೆ ಇಂದಿನ ರಾಜಕೀಯ ಪಕ್ಷಗಳು ಪುಷ್ಠಿ ಕೊಡುವ ರೀತಿಯಲ್ಲಿ ನಡೆದುಕೊಳ್ಳುತ್ತಿವೆ ಎನ್ನುವುದರಲ್ಲಿ ಎರಡು ಮಾತಿಲ್ಲ. ಮೌಲ್ಯಾಧಾರಿತ ರಾಜಕೀಯ, ವಿಷಯಾಧಾರಿತ ರಾಜಕೀಯ ಹಿಂದಕ್ಕೆ ಸರಿದು ಜಾತಿ ರಾಜಕೀಯ, ಹಣಬಲ, ತೋಳ್ಬಲ ರಾಜಕೀಯ ಮುನ್ನೆಲೆಗೆ ಬಂದಿದೆ. ರಾಜಕೀಯ ದೀನ ದಲಿತರ, ಬಡವರ, ರೈತರ, ಶೋಷಿತ ವರ್ಗಗಳ ಹಿತ ಕಾಯುವ ಪ್ರಬಲ ಅಸ್ತ್ರವಾಗಬೇಕಿದೆ. ಸಮಾಜಸೇವೆ, ದೇಶಸೇವೆ ಮಾಡುವುದು ರಾಜಕೀಯದಿಂದ ಮಾತ್ರ ಸಾಧ್ಯ ಎಂಬುವುದನ್ನು ನಮ್ಮ ವಿದ್ಯಾರ್ಥಿ ಸಮುದಾಯ ತಿಳಿದುಕೊಳ್ಳಬೇಕಾಗಿದೆ. ದೇಶಸೇವೆ ಮಾಡುವುದು ಅಂತಿಂಥಹ ವಿಷಯವಲ್ಲ.

ಅದು ಪವಿತ್ರವಾದ ಕೆಲಸ. ಅದು ಮನುಷ್ಯ ಜೀವನದ ಶ್ರೇಷ್ಠವಾದ ಮಾರ್ಗ. ಯಾವುದೇ ಸ್ವಾರ್ಥವಿಲ್ಲದೆ ದೇಶಸೇವೆ ಮಾಡಬೇಕಾಗಿದೆ. ದೇಶಸೇವೆ ಮಾಡುವವರೆಗೆ ಯಶಸ್ವಿ ಹಾಗೂ ಹಣದ ವ್ಯಾಮೋಹ ಇರಕೂಡದು. ಸರ್ವ ಜನರ ಕಲ್ಯಾಣವನ್ನು ಬಯಸುವುದು ಅವರ ಆದ್ಯ ಕರ್ತವ್ಯವಾಗಿರಬೇಕು. ವೈಯಕ್ತಿಕ ಹಿತಾಸಕ್ತಿಗಳಿಗಿಂತ ರಾಷ್ಟ್ರೀಯ ಹಿತಾಸಕ್ತಿಗಳಿಗೆ ಹೆಚ್ಚಿನ ಆದ್ಯತೆ ನೀಡಬೇಕು. ರಾಷ್ಟ್ರೀಯ ಹಿತಾಸಕ್ತಿಗಳಿಗಾಗಿ ವೈಯಕ್ತಿಕ ಹಿತಾಸಕ್ತಿಗಳನ್ನು ಬಲಿಕೊಡಲು ಸಿದ್ಧನಾಗಿರಬೇಕು. ದೇಶಕಟ್ಟುವ ಪವಿತ್ರ ಕೆಲಸವನ್ನು ಜಾತಿವಾದಿಗಳಿಂದ, ಭ್ರಷ್ಟಾಚಾರಿಗಳಿಂದ, ಕೋಮುವಾದಿಗಳಿಂದ, ರಾಷ್ಟ್ರದ ಏಕತೆ-ಅಖಂಡತೆಗೆ ದಕ್ಕೆ ತರುವ ಭಯೋತ್ಪಾದಕರಿಂದ ಮಾಡಲು ಸಾಧ್ಯವಿಲ್ಲ. ಇಂತಹ ಪವಿತ್ರವಾದ ಕೆಲಸವನ್ನು ಏನಿದ್ದರೂ ನಿಸ್ವಾರ್ಥಿಗಳು, ನಿಷ್ಪಕ್ಷಪಾತಿಗಳು ಹಾಗು ರಾಷ್ಟ್ರದ ಬಗ್ಗೆ ಅಭಿಮಾನ ಗೌರವ ಇರುವವರು ಮಾತ್ರ ಮಾಡಲು ಸಾಧ್ಯ. ಅಂತಹ ವಿದ್ಯಾರ್ಥಿ ಸಮುದಾಯವನ್ನು ರೂಪಿಸುವುದು ಇಂದಿನ ಅಗತ್ಯಗಳಲ್ಲಿ ಒಂದಾಗಿದೆ. ವಿದ್ಯಾರ್ಥಿಗಳು ರಾಷ್ಟ್ರ ಬಲಪಡಿಸಲು, ರಾಷ್ಟ್ರದ ಘನತೆ-ಗೌರವವನ್ನು ಅಂತರಾಷ್ಟ್ರೀಯ ಮಟ್ಟದಲ್ಲಿ ಹೆಚ್ಚಿಸುವ ಸಲುವಾಗಿಯಾದರೂ ಅವರು ರಾಜಕೀಯದಲ್ಲಿ ಆಸಕ್ತಿ ಬೆಳೆಸಿಕೊಳ್ಳಬೇಕಾಗಿದೆ. ರಾಜಕೀಯ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸಬೇಕಾಗಿದೆ.

ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಸ್ವಾತಂತ್ರ್ಯ ಹೋರಾಟಗಾರರು ಇಂದು ಯುವ ಪೀಳಿಗೆಗೆ ಆದರ್ಶರಾಗಬೇಕು. ಏಕೆಂದರೆ ದೇಶದ ಸ್ವಾತಂತ್ರ್ಯಕ್ಕಾಗಿ ತಮ್ಮ ಖಾಸಗಿ ಬದುಕನ್ನು ತ್ಯಾಗ ಮಾಡಿದರು. ತಮ್ಮ ಸರ್ವಸ್ವವನ್ನು ತ್ಯಾಗ ಮಾಡಿ ದೇಶಕ್ಕೆ ಸ್ವಾತಂತ್ರ್ಯ ತಂದು ಕೊಡುವಲ್ಲಿ ಯಶಸ್ವಿಯಾದರು. ಅವರು ಕೂಡ ನಮ್ಮ ಹಾಗೆ ಯೋಚಿಸಿದರೆ ಬ್ರಿಟಿಷರ ಸಂಕೋಲೆಗಳಿಂದ ಇಂದು ಭಾರತ ಮುಕ್ತವಾಗಲು ಸಾಧ್ಯವಿತ್ತೆ? ಖಂಡಿತ ಇಲ್ಲ. ದೇಶಕ್ಕಾಗಿ ಸ್ವಾರ್ಥತ್ಯಾಗ ಮಾಡುವ ಮನೋಭಾವವನ್ನು ಇಂದು ಯುವ ಸಮುದಾಯ ಬೆಳೆಸಿಕೊಳ್ಳಬೇಕಾಗಿದೆ. ರಾಜಕೀಯದಲ್ಲಿ ಬೇರುಬಿಟ್ಟಿರುವ ಅನಿಷ್ಟಗಳನ್ನು ಬೇರು ಸಮೇತ ಕಿತ್ತೊಗೆಯಬೇಕಾಗಿದೆ. ಇದೆಲ್ಲಾ ಸಾಧ್ಯವಾಗಬೇಕಾದರೆ ಯುವ ಸಮುದಾಯ ರಾಜಕೀಯದಲ್ಲಿ ಸಕ್ರಿಯವಾಗಿ ಭಾಗವಹಿಸಬೇಕು. ಅಂದಾಗ ಮಾತ್ರ ಸಾಮಾಜಿಕ ಅನಿಷ್ಟಗಳಾದ ಜಾತೀಯತೆ, ನಿರುದ್ಯೋಗ, ಬಡತನ, ಲಿಂಗತಾರತಮ್ಯ, ಅಸ್ಪೃಶ್ಯತೆ, ಶ್ರಿಮಂತ-ಬಡವರ ನಡುವಿನ ಅಗಾಧವಾದ ಅಂತರ, ಕೋಮುವಾದ, ಭಯೋತ್ಪಾದನೆ, ರಾಷ್ಟ್ರದ ಏಕತೆ ಅಖಂಡತೆಗೆ ಗಂಡಾಂತರಕಾರಿಯಾಗಿರುವ ಶಕ್ತಿಗಳು ಇವೆಲ್ಲವುಗಳನ್ನು ಸಮಾಜದಿಂದ ಬೇರು ಸಮೇತ ಕಿತ್ತೊಗೆದು ಒಂದು ಸುಭದ್ರವಾದ ರಾಷ್ಟ್ರವನ್ನು ಕಟ್ಟಬೇಕಾಗಿದೆ. ಇದು ಸಾಧ್ಯವಾಗುವುದು ಯುವಕರಿಂದ ಮಾತ್ರ, ಆದಕಾರಣ ವಿದ್ಯಾರ್ಥಿಗಳು ರಾಜಕೀಯದಿಂದ ದೂರ ಉಳಿಯುವುದು ನ್ಯಾಯಸಮ್ಮತವೇ? ರಾಜಕೀಯದ ನಿಯಮಗಳು, ಧೋರಣೆಗಳು ವಿದ್ಯಾರ್ಥಿಗಳ ಜೀವನವನ್ನು

ಪ್ರಭಾವಿಸುವುದರಿಂದ, ರಾಜಕೀಯ ಚಟುವಟಿಕೆಗಳ ಪರಧಿ ಆಚೆ ಇರಲು ಸಾಧ್ಯವಿಲ್ಲ. ರಾಜಕೀಯ ಕ್ಷೇತ್ರದಲ್ಲಾಗುವ ಬದಲಾವಣೆಗಳನ್ನು ತೆರೆದ ಕಣ್ಣಿನಿಂದ ನೋಡಬೇಕಾಗುತ್ತದೆ. ರಾಜಕೀಯದ ವೈರುದ್ಯಗಳು, ವಿದ್ಯಮಾನಗಳನ್ನು ಹತ್ತಿರದಿಂದ ನೋಡಿ ಅವುಗಳನ್ನು ವಿಶ್ಲೇಷಿಸಬೇಕಾಗುತ್ತದೆ. ಪ್ರತಿಯೊಂದು ರಾಜಕೀಯದಲ್ಲಾಗುವ ಬದಲಾಣೆಗಳನ್ನು ಚಿಕಿತ್ಸಕ ದೃಷ್ಟಿಯಿಂದ ನೋಡುವ ಪ್ರವೃತ್ತಿಯನ್ನು ಇಂದು ವಿದ್ಯಾರ್ಥಿ ಸಮುದಾಯ ಬೆಳೆಸಿಕೊಳ್ಳಬೇಕಾಗಿದೆ. ವಿದ್ಯಾರ್ಥಿಗಳ ಕೊಡುಗೆ ಇಲ್ಲದೆ ಒಂದು ಬಲಿಷ್ಠ ಭಾರತವನ್ನು ನೆನೆಸಿಕೊಳ್ಳುವುದು ಕನಸಿನಲ್ಲಿಯೂ ಸಾಧ್ಯವಿಲ್ಲ. ಆದ್ದರಿಂದ ವಿದ್ಯಾರ್ಥಿಗಳು ರಾಷ್ಟ್ರದ ಭವಿಷ್ಯದ ದೃಷ್ಟಿಯಿಂದ, ದೇಶದ ಪ್ರಗತಿಯ ದೃಷ್ಠಿಯಿಂದಾದರೂ ಅವರು ರಾಜಕೀಯದಲ್ಲಿ ಭಾಗವಹಿಸುವುದು ಅವಶ್ಯಕವಾಗಿದೆ.

ಇನ್ನೂ ವಿದ್ಯಾರ್ಥಿ ಸಮುದಾಯ ಸಾಮಾಜಿಕ ಜವಾಬ್ದಾರಿಗಳಿಂದ ದೂರವಿರಬೇಕೆ? ಎಂಬ ಪ್ರಶ್ನೆ ಉದ್ಭವವಾಗುತ್ತದೆ. ಸಮಾಜವನ್ನು ಕಾಡುತ್ತಿರುವ ಹಲವಾರು ಸಮಸ್ಯೆಗಳು ಕೇವಲ ಹಿರಿಯರ ಸಮಸ್ಯೆಗಳೇ? ಅವುಗಳು ವಿದ್ಯಾರ್ಥಿಗಳ ಸಮಸ್ಯೆಗಳು ಅಲ್ಲವೆ? ಉದಾಹರಣೆಗೆ ಸಮಾಜದಲ್ಲಿ ಬಡತನ, ನಿರುದ್ಯೋಗ, ಹಸಿವು, ದಾರಿದ್ರ್ಯ, ಭ್ರಷ್ಟಾಚಾರ, ಜಾತೀಯತೆ, ಕೋಮುವಾದ, ಲಿಂಗತಾರತಮ್ಯ, ದಲಿತರ ಮೇಲಿನ ಅತ್ಯಾಚಾರ ಹೀಗೆ ಹತ್ತು ಹಲವು ಸಮಸ್ಯೆಗಳನ್ನು ಇಂದು ನಮ್ಮನ್ನು ಕಾಡುತ್ತಿವೆ. ಈ ಸಮಸ್ಯೆಗಳು ಯಾರ ಸಮಸ್ಯೆಗಳು? ಈ ಸಮಸ್ಯೆಗಳಿಗೆ ಪರಿಹಾರ ಕಂಡುಹಿಡಿಯುವವರು ಯಾರು? ಇವು ಇಂದಿನ ವಿದ್ಯಾರ್ಥಿಗಳ ಸಮಸ್ಯೆಗಳಲ್ಲವೆ? ಏಕೆಂದರೆ ಇಂದು ಭಾರತದಲ್ಲಿ ಒಟ್ಟು ಜನಸಂಖ್ಯೆಯಲ್ಲಿ ಅರ್ಧಕ್ಕಿಂತ ಹೆಚ್ಚು ಯುವಕರಿದ್ದಾರೆ. ಅಂದಮೇಲೆ ಈ ಎಲ್ಲಾ ಸಮಸ್ಯೆಗಳು ಅವರ ಸಮಸ್ಯೆಗಳಲ್ಲವೇ? ಈ ಎಲ್ಲಾ ಸಮಸ್ಯೆಗಳು ವಿದ್ಯಾರ್ಥಿಗಳ ಸಮಸ್ಯೆಗಳಾಗಿರುವುದರಿಂದ ವಿದ್ಯಾರ್ಥಿಗಳನ್ನು ರಾಜಕೀಯದಿಂದ ದೂರವಿರಬೇಕು ಎಂದು ಹೇಳುವುದು ಸರಿಯಾದ ಕ್ರಮವಲ್ಲ. ವಿದ್ಯಾರ್ಥಿಗಳು ಕೂಡ ರಾಷ್ಟ್ರದ ಸಮಸ್ಯೆಗಳಿಗೆ ಸ್ಪಂದಿಸಬೇಕು. ಅವುಗಳಿಗೆ ಪರಿಹಾರಗಳನ್ನು ಹುಡುಕಬೇಕು. ಸುಖಿ ರಾಷ್ಟ್ರ ಸ್ಥಾಪನೆಗೆ ತಮ್ಮದೆ ಆದ ಯೋಗದಾನವನ್ನು ನೀಡಬೇಕು ಎಂದು ಸಮಾಜ ಬಯಸುತ್ತದೆ. ಅಷ್ಟೇ ಅಲ್ಲದೆ ಇಂದಿನ ವಿದ್ಯಾರ್ಥಿಗಳು ತರ್ಕಬದ್ಧವಾಗಿ, ವೈಜ್ಞಾನಿಕವಾಗಿ ಹಾಗೂ ವೈಚಾರಿಕವಾಗಿ ಚಿಂತಿಸುವುದರಿಂದ ಇಂದು ಸಮಾಜ ಎದುರಿಸುತ್ತಿರುವ ಸಮಸ್ಯೆಗಳಿಗೆ ನಿರ್ದಿಷ್ಟವಾದ ಪರಿಹಾರಗಳನ್ನು ಹುಡುಕುವಲ್ಲಿ ಅವರ ಕೊಡುಗೆ ನಿರ್ಲಕ್ಷಿಸುವಂತಿಲ್ಲ. ಈ ಎಲ್ಲ ಹಿನ್ನಲೆಯಲ್ಲಿ, ವಿಶಾಲವಾದ ಪರಿಪೇಕ್ಷದಲ್ಲಿ ನಾವು ನೋಡಿದಾಗ ವಿದ್ಯಾರ್ಥಿ ಸಮುದಾಯವನ್ನು ರಾಷ್ಟ್ರದ ಧೋರಣೆಗಳನ್ನು ರೂಪಿಸುವಾಗ ಅವರನ್ನು ದೂರವಿಡುವುದು ಯಾವುದೇ ರೀತಿಯಿಂದ ಸಮರ್ಥಿಸಲು ಸಾಧ್ಯವಿಲ್ಲ. ವಿದ್ಯಾರ್ಥಿಗಳು ಕೂಡ ರಾಷ್ಟ್ರ ನಿರ್ಮಾಣದಲ್ಲಿ ಭಾಗವಹಿಸಬೇಕು. ಅದು ಸಾಧ್ಯವಾಗಬೇಕಾದರೆ

ವಿದ್ಯಾರ್ಥಿಗಳು ದೈನಂದಿನ ರಾಜಕೀಯ ಕ್ಷೇತ್ರದಲ್ಲಾಗುವ ಬದಲಾವಣೆಗಳನ್ನು ಹತ್ತಿರದಿಂದ ನೋಡಬೇಕಾಗುತ್ತದೆ. ಸರಕಾರದ ಧೋರಣೆಗಳನ್ನು, ನೀತಿನಿಯಮಗಳನ್ನು, ಅದರ ವಿದೇಶಾಂಗ ನೀತಿಯನ್ನು ವಿದ್ಯಾರ್ಥಿ ವಿಮರ್ಶೆಗೆ ಒಳಪಡಿಸಬೇಕಾಗುತ್ತದೆ. ಈ ಎಲ್ಲ ಕಾರಣಗಳಿಗಾಗಿ ವಿದ್ಯಾರ್ಥಿಗಳು ರಾಜಕೀಯ ಕ್ರಿಯಾಶೀಲತೆಯನ್ನು ಬೆಳೆಸಿಕೊಳ್ಳಬೇಕಾಗುತ್ತದೆ.

ಡಾ.ಮುಜಾಫರ್ ಅಸ್ಸಾದಿ ಅವರು ಹೇಳುವ ಹಾಗೆ "ಇವತ್ತಿನ ಸಂಘರ್ಷ ಬರೇ ಘೋಷಣೆಯ ತಿಕ್ಕಾಟವಲ್ಲ. ಸಾಂಸ್ಕೃತಿಕ, ತಾತ್ವಿಕ, ಸೈದ್ಧಾಂತಿಕ ಘರ್ಷಣೆಯ ಭಾಗ. ದೇಶವನ್ನು ನಿರ್ಮಿಸುವ ಮಾದರಿಗಳ ನಡುವಿನ ಸಂಘರ್ಷ. ರಾಷ್ಟ್ರೀಯತೆಯನ್ನು ವ್ಯಾಖ್ಯಾನಿಸುವ ಸಂಘರ್ಷ". ಭಾರತದ ವೈಚಾರಿಕ ಚಿಂತನೆ, ಜಾತ್ಯಾತೀತತೆ, ತಳಸ್ತರದ ರಾಷ್ಟ್ರೀಯ ಪರಿಕಲ್ಪನೆ, ವಾಕ್ ಸ್ವಾತಂತ್ರ್ಯ ರಾಷ್ಟ್ರ ನಿರ್ಮಾಣದ ಅಡಿಪಾಯವಾಗಬೇಕು ಎಂಬುದು ಅವರ ಖಚಿತವಾದ ಅಭಿಪ್ರಾಯ. ಇವರ ಈ ವಾದಕ್ಕೆ ಪೂರಕವಾಗಿ ಪ್ರಥ್ವಿದತ್ತ ಚಂದ್ರಶೋಭಿ ಅವರು ಹೀಗೆ ಹೇಳುತ್ತಾರೆ "ವಿಶ್ವವಿದ್ಯಾಲಯಗಳಲ್ಲಿ ರಾಜಕಾರಣ ಇರಬಾರದು ಎಂಬ ವಾದ ಆಗಾಗ ಕೇಳಿಬರುತ್ತದೆ. ವಿಶ್ವವಿದ್ಯಾಲಯಗಳಲ್ಲಿ ಪಕ್ಷದ ಮತ್ತು ಅಧಿಕಾರದ ರಾಜಕಾರಣಗಳಿರಬಾರದು ಎಂಬ ಒಂದು ಸಂಕುಚಿತ ಅರ್ಥದಲ್ಲಿ ಮಾತ್ರ ಇದು ಒಪ್ಪಬಹುದಾದ ನಿಲುವು. ಆದರೆ ಜ್ಞಾನದ ಉತ್ಪಾದನೆ ಮತ್ತು ಪ್ರಸರಣ ಎರಡೂ ರಾಜಕಾರಣದೊಡನೆ ಸಂಬಂಧ ಹೊಂದಿವೆ. ಈ ಮಾತು ವಿಜ್ಞಾನ–ತಂತ್ರಜ್ಞಾನಗಳು ಮತ್ತು ಸಮಾಜ ವಿಜ್ಞಾನಗಳೆರಡಕ್ಕೂ ಸತ್ಯ. ಹಾಗಾಗಿ ವಿಶ್ವವಿದ್ಯಾಲಯದ ಆವರಣಗಳಲ್ಲಿ ರಾಜಕಾರಣದ ವಿಚಾರಧಾರೆಗಳ ಇರುವಿಕೆಯನ್ನು ತಡೆಯಲು ಸಾಧ್ಯವಿಲ್ಲ. ಇವುಗಳನ್ನು ನಿರ್ವಹಿಸುವ ಭಾರವನ್ನು ಅಧ್ಯಾಪಕರಿಗೆ, ವಿದ್ಯಾರ್ಥಿಗಳಿಗೆ ಬಿಡಬೇಕು". ಇವರ ಪ್ರಕಾರ ರಾಜಕೀಯವನ್ನು ವಿಶ್ವವಿದ್ಯಾಲಯಗಳಿಂದ ಬೇರ್ಪಡಿಸಲು ಸಾಧ್ಯವಿಲ್ಲ. ವಿದ್ಯಾರ್ಥಿಗಳು ಯಾವುದಾದರೊಂದು ವಿಚಾರಧಾರೆಯಿಂದ ಪ್ರಭಾವಿತರಾಗಿರುತ್ತಾರೆ. ಅವರು ಯಾವತ್ತು ಮುಕ್ತವಾಗಿ ಚಿಂತನೆ ಮಾಡಲು ಪ್ರಯತ್ನಿಸುವುದರಿಂದ ಅವರು ಪ್ರಚಲಿತ ರಾಜಕೀಯ ವಿದ್ಯಮಾನಗಳಿಂದ ದೂರವಿರಲು ಸಾಧ್ಯವಿಲ್ಲ. ರಾಜಕೀಯ ರಂಗದಲ್ಲಾಗುವ ಏರಿಳಿತಗಳು ವಿದ್ಯಾರ್ಥಿ ಸಮುದಾಯವನ್ನು ಪ್ರಭಾವಿಸುತ್ತವೆ. ವಿದ್ಯಾರ್ಥಿ ಸಮುದಾಯ ಅವುಗಳಿಗೆ ತೀಕ್ಷ್ಣವಾದ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸುತ್ತಾರೆ. ಹೀಗಾಗಿ ವಿಶ್ವವಿದ್ಯಾಲಯಗಳಲ್ಲಿ ರಾಜಕಾರಣವಿರಬಾರದು ಎಂದು ಹೇಳುವುದು ಎಷ್ಟರ ಮಟ್ಟಿಗೆ ಸರಿ ಎಂಬ ಪ್ರಶ್ನೆ ಉದ್ಭವವಾಗುತ್ತದೆ. ವಿದ್ಯಾರ್ಥಿಗಳು ಪ್ರಭುದ್ಧರಾಗಿರುವುದರಿಂದ ಪ್ರತಿಯೊಂದನ್ನು ಪ್ರಶ್ನಿಸುವ, ವಿಮರ್ಶಿಸುವ ಮನೋಭಾವ ಇರುತ್ತದೆ. ಅದಕ್ಕಾಗಿ ರಾಜಕೀಯ ಕ್ಷೇತ್ರವು ಕೂಡ ಅವರ ವಿಮರ್ಶೆಗೆ ಒಳಪಡುತ್ತದೆ.

ಎಸ್. ಸುರೇಶಕುಮಾರ ಅವರು ಈ ಮೇಲಿನ ಇಬ್ಬರು ವಿದ್ವಾಂಸರ ಅಭಿಪ್ರಾಯಗಳಿಗೆ ಭಿನ್ನವಾದ ನಿಲುವುವನ್ನು ವ್ಯಕ್ತಪಡಿಸುತ್ತಾರೆ. ಅವರ ಪ್ರಕಾರ "ನಮ್ಮ ದೇಶದ ಸಂವಿಧಾನ

ನಮಗೆಲ್ಲರಿಗೂ ಮಾರ್ಗದರ್ಶಕ ಗ್ರಂಥ. ಅದರ ಪ್ರಮುಖ ಆಶಯಗಳಲ್ಲಿ ಈ ದೇಶದ ಐಕ್ಯತೆ ಮತ್ತು ಸಮಗ್ರತೆ ಪ್ರಮುಖವಾದದ್ದು. ಈ ಆಶಯದ ವಿರುದ್ಧ ಚಿಂತಿಸುವವರ, ಮಾತುಗಳನ್ನು ಆಡುವವರ ಮತ್ತು ಕಾರ್ಯಾಚರಣೆಯಲ್ಲಿ ತೊಡಗುವವರ ಬಗ್ಗೆ ನಮ್ಮ ಭಾವನೆ ಏನು ಎಂಬುವುದು ಬಹಳ ಮುಖ್ಯ. ಬುದ್ಧಿವಂತರಾದ ತಕ್ಷಣ ಸಂವಿಧಾನದ ಆಶಯಗಳನ್ನು ಧಿಕ್ಕರಿಸುವ ಹಾಗೂ ಈ ದೇಶದ ಸಾಮಾನ್ಯ ಜನತೆಯ ನಂಬಿಕೆ, ವಿಶ್ವಾಸವನ್ನು ಅಲುಗಾಡಿಸುವ ಹಕ್ಕು ಇರುವುದಿಲ್ಲ ಮತ್ತು ಬುದ್ಧಿವಂತರಿಗೆ ಸ್ವಾತಂತ್ರ್ಯ ಹಾಗೂ ಸ್ವೇಚ್ಛಾಚಾರಗಳ ನಡುವಿನ ವ್ಯತ್ಯಾಸ ಚೆನ್ನಾಗಿ ತಿಳಿದಿರಬೇಕು. ವಿಶ್ವವಿದ್ಯಾಲಯಗಳಿರುವುದು ಉನ್ನತ ಶಿಕ್ಷಣಕ್ಕಾಗಿ, ಸಂಶೋಧನೆಗಳ ಮೂಲಕ ದೇಶದ ಸಾಮಾಜಿಕ, ಔದ್ಯೋಗಿಕ, ಶೈಕ್ಷಣಿಕ, ಆರ್ಥಿಕ, ನೈತಿಕ ಸಮಸ್ಯೆಗಳಿಗೆ ಪರಿಹಾರ ಹುಡುಕಲು. ಆ ಕಾರ್ಯವನ್ನು ಮಾಡಲಿಕ್ಕೆ ಭಾರತದ ಪ್ರತಿಯೊಬ್ಬ ನಾಗರಿಕ ತನ್ನಪಾಲಿನ ಕೊಡುಗೆಯನ್ನು ತೆರಿಗೆ ಮೂಲಕ ಕೊಡುತ್ತಾನೆ." ರಾಷ್ಟ್ರವಿದ್ದರೆ ನಾವು: ಅದಿಲ್ಲದಿದ್ದರೆ ನಮಗೆ ಯಾವುದೇ ಅಸ್ತಿತ್ವವಿರುವುದಿಲ್ಲ. ಹೀಗಾಗಿ ರಾಷ್ಟ್ರೀಯ ಹಿತಾಸಕ್ತಿಗಳನ್ನು ಕಾಪಾಡುವುದು ಪ್ರತಿಯೊಬ್ಬ ಭಾರತೀಯನ ಕರ್ತವ್ಯ. ಹೀಗಾಗಿ ರಾಷ್ಟ್ರೀಯ ಹಿತಾಸಕ್ತಿಗಳಿಗಾಗಿ ವೈಯಕ್ತಿಕ ಹಿತಾಸಕ್ತಿಗಳನ್ನು ಬಲಿಕೊಡಲು ನಾವು ಸಿದ್ದರಿರಬೇಕು. ಸಂವಿಧಾನದ ಆಶಯವಾದ ರಾಷ್ಟ್ರದ ಏಕತೆ ಮತ್ತು ಅಖಂಡತೆಯನ್ನು ಕಾಪಾಡಿಕೊಂಡು ಹೋಗಬೇಕು. ರಾಷ್ಟ್ರೀಯ ಮೌಲ್ಯಗಳನ್ನು ಎಳೆಯ ಮನಸ್ಸುಗಳಲ್ಲಿ ಬಿತ್ತಬೇಕು. ಅದಕ್ಕಾಗಿ ವಿಶ್ವವಿದ್ಯಾಲಯಗಳು ರಾಷ್ಟ್ರದ ಏಕತೆ ಹಾಗೂ ಅಖಂಡತೆಗೆ ದಕ್ಕೆ ಬರುವಂತಹ ವಿಚಾರಗಳನ್ನು ವಿದ್ಯಾರ್ಥಿ ಮನಸ್ಸುಗಳಲ್ಲಿ ಬಿತ್ತಬಾರದು. ರಾಷ್ಟ್ರೀಯತೆ ನಮ್ಮ ಬದುಕಿನ ಅದರಲ್ಲಿಯೂ ವಿದ್ಯಾರ್ಥಿಗಳ ಬದುಕಿನ ಅವಿಭಾಜ್ಯ ಅಂಗವಾಗಬೇಕು ಎನ್ನವುದು ಅವರ ವಾದವಾಗಿದೆ.

ಇವರ ವಾದಕ್ಕೆ ಪೂರಕವಾಗಿ ಬಿಜೆಪಿ ಯುವ ಮೋರ್ಚಾದ ರಾಜ್ಯಕಾರ್ಯದರ್ಶಿಗಳಾದ ಎನ್. ರವಿಕುಮಾರ ಈ ರೀತಿಯಾಗಿ ಅಭಿಪ್ರಾಯ ಪಡುತ್ತಾರೆ. "ರಷ್ಯಾ, ಚೀನಾದಲ್ಲಿ ಮಳೆ ಬಂದರೆ ಭಾರತದಲ್ಲಿ ಕೊಡೆ ಹಿಡಿಯುವ ಇಲ್ಲಿನ ಕಮ್ಯುನಿಷ್ಟರು ಎಂದಿಗೂ ಭಾರತದ ಧರ್ಮ, ಸಂಸ್ಕೃತಿ, ಶಾಂತಿ, ಸಹಬಾಳ್ವೆ, ಸಮನ್ವಯದ ಮೌಲ್ಯಗಳಲ್ಲಿ ನಂಬಿಕೆ ಇಟ್ಟವರೆ ಅಲ್ಲ. ಇವರು ವರ್ಗ ಸಂಘರ್ಷ ಪ್ರಿಯರು. ಅಧಿಕಾರಿಗಳನ್ನು, ಪೋಲಿಸರನ್ನು, ಮಿಲಿಟರಿಯನ್ನು ಹತ್ತಿಕ್ಕಿ ಧಿಕ್ಕರಿಸುತ್ತಾ ಹೋರಾಟಕ್ಕೆ ಮುಂದಾಗುತ್ತಾರೆ. ಅಂಬೇಡ್ಕರ್, ಗಾಂಧೀಜಿಯ ಫೋಟೊ ಹಿಡಿದು ಹೋರಾಟದ ಮುಖವಾಡಗಳನ್ನು ತೊಡುತ್ತಾರೆ. ಆದರೆ ಇವರೊಳಗೆ ಪುಟಿಯುತ್ತಿರುವುದು ಮಾತ್ರ ಮಾವೋ–ಮಾರ್ಕ್ಸ್‌ರ ಚಿಂತನೆಗಳೆ ಹೊರತು ಅಂಬೇಡ್ಕರದ್ದು ಅಲ್ಲ. ಗಾಂಧೀಜಿಯವರದ್ದೂ ಅಲ್ಲ. ಮಾತೆತ್ತಿದರೆ ಅಂಬೇಡ್ಕರ್ ಹೆಸರನ್ನು ಮುಂದೆ ತರುವ ಇವರಿಗೆ ಒಂದು ಮಾತನ್ನಂತೂ ಹೇಳಲೇಬೇಕು. ಡಾ.ಬಿ.ಆರ್.ಅಂಬೇಡ್ಕರ್ ಯಾವತ್ತೂ ಕಮ್ಯುನಿಸ್ಟ್ ಅಥವಾ ಕಾಂಗ್ರೆಸ್ಸಿನ ವಿಚಾರಗಳನ್ನು ಬೆಂಬಲಿಸಿದವರೆ ಅಲ್ಲ. ಭಾರತ ಸಮಗ್ರವಾಗಿ

ಕಲ್ಯಾಣವಾಗಬೇಕೆಂದು ಹಂಬಲಿಸಿದ ಮಹಾತ್ಮ ಅವರು. ಅದಕ್ಕಾಗಿ ಭಗವಾನ್ ಬುದ್ಧನ ದಾರಿಯನ್ನು ಹಿಡಿದವರು. ಇದೇ ಒಂದೆರಡು ದಶಕದ ಕೆಳಗೆ ಈ ಎಡಪಂಥೀಯರು ಹೀಗಿರಲಿಲ್ಲ. ಎಲ್ಲ ವಿಚಾರ ಗೋಷ್ಠಿಗಳಲ್ಲಿ ಮಾರ್ಕ್ಸ, ಲೆನಿನ್ ಎನ್ನುತ್ತಿದ್ದರು. ಹಾಗೆ ಹೇಳುತ್ತಲೇ ಭಾರತದಲ್ಲಿ ತಮ್ಮ ಸ್ಥಾನಮಾನಗಳನ್ನು ಕಳೆದು ಕೊಂಡ ಎಡಪಂಥೀಯರಿಗೆ ನಿಧಾನಕ್ಕೆ ಈಗ ಅಂಬೇಡ್ಕರ್, ಗಾಂಧಿ ನೆನೆಪಾಗುತ್ತಿದ್ದಾರೆ. ಸಮಸ್ಯೆಗಳನ್ನು ಜೀವಂತವಾಗಿ ಇಡುವುದಷ್ಟೇ ಕಮ್ಯುನಿಸ್ಟರ ಕೆಲಸ. ಅದಕ್ಕೆ ನಯಾಪೈಸೆ ಪರಿಹಾರ ಹೇಳಿದ ಒಬ್ಬನೇ ಒಬ್ಬ ಎಡಪಂಥೀಯ ಮುಖಂಡನನ್ನು ಇಡೀ ಭಾರತದಲ್ಲಿ ತೊರಿಸಿ ನೋಡಿ". ಎಂದು ಸವಾಲು ಹಾಕುತ್ತಾರೆ.

ಪ್ರೊ. ನಿವೇದಿತಾ ಮೆನನ್ ರವರ ಪ್ರಕಾರ "ಇತ್ತೀಚೆಗೆ ವಿಶ್ವವಿದ್ಯಾಲಯಗಳಲ್ಲಿ ನಡೆದ ವಿದ್ಯಮಾನಗಳನ್ನು ವಿಶಾಲವಾದ ಪರಿಪೇಕ್ಷದಲ್ಲಿ ನೋಡುವ ಅಗತ್ಯತೆ ಕುರಿತು ಅವರು ಹೇಳುತ್ತಾರೆ. ಈ ವಿದ್ಯಮಾನಗಳನ್ನು ನಾವು ತಿಳಿದುಕೊಳ್ಳಬೇಕಾದರೆ ಮೊದಲು ಮೂರು ಪ್ರಮುಖ ಸಂಗತಿಗಳನ್ನು ತಿಳಿದುಕೊಳ್ಳುವುದು ಅವಶ್ಯಕ. ಮೊದಲನೆಯದಾಗಿ ಬಹುಸಂಖ್ಯಾತ ವಿದ್ಯಾರ್ಥಿಗಳು ಎಲ್ಲ ಸಂದರ್ಭಗಳಲ್ಲಿ ತೋರಿಸಿರುವ ಅತಿಯಾದ ಜವಬ್ದಾರಿ. ಎರಡನೆಯದಾಗಿ, ದೃಶ್ಯಮಾಧ್ಯಮಗಳು ತೋರಿಸಿರುವ ಬೇಜವಬ್ದಾರಿತನ ಹಾಗೂ ಮೂರನೆಯದಾಗಿ, ಅಖಿಲ ಭಾರತ ವಿದ್ಯಾರ್ಥಿ ಪರಿಷತ್ತಿನ ಪಾತ್ರ. ವಿದ್ಯಾರ್ಥಿಗಳು ಮತ್ತು ಯುವಕರು ಪ್ರತಿಭಟನೆಯ ಮೂಂಚೂಣಿಯಲ್ಲಿರುವುದು ಸರ್ವೆಸಾಮನ್ಯ. ನವ ಉದಾರವಾದಿಗಳಿಂದ ಭೂಸ್ವಾಧೀನ, ಭ್ರಷ್ಟಾಚಾರ, ಲೈಂಗಿಕ ದೌರ್ಜನ್ಯ, ಲಿಂಗತಾರತಮ್ಯ, ಮುಂಗಡ ಪತ್ರದಲ್ಲಿ ಶಿಕ್ಷಣದ ಅನುದಾನ ಕಡಿತ, ಕಾರ್ಮಿಕ ವಿರೋಧಿ ನೀತಿಗಳು ಮತ್ತು ಜಾತಿ ಆಧಾರಿತ ತಾರತಮ್ಯಗಳ ವಿರುದ್ಧ ವಿದ್ಯಾರ್ಥಿಗಳು ಪ್ರತಿಭಟಿಸುತ್ತಾ ಬಂದಿದ್ದಾರೆ. ಈ ಪ್ರತಿಭಟನೆಗಳು ತೀವ್ರ ಸ್ವರೂಪದವುಗಳಾದರೂ ಅಹಿಂಸಾತ್ಮಕವಾದವುಗಳಾಗಿವೆ. ಈ ಪ್ರತಿಭಟನೆಯ ನೇತೃತ್ವವಹಿಸಿದ ವಿದ್ಯಾರ್ಥಿ ನಾಯಕರು ಕೆಳಸ್ತರದಿಂದ ಬಂದವರಾಗಿದ್ದಾರೆ. ಸಾಮಾಜಿಕ ಬದಲಾವಣೆಯಲ್ಲಿ ಅಚಲವಾದ ನಂಬಿಕೆ ಉಳ್ಳವರಾಗಿದ್ದಾರೆ. ಇಂತಹ ಸಮಾಜಮುಖಿ ಪ್ರತಿಭಟನೆಗಳು ಹತ್ತಿಕ್ಕುವ ಕೆಲಸ ಇಂದಿನ ಪ್ರಭುತ್ವ ಮಾಡುತ್ತಿದೆ" ಎಂದು ಅವರು ಅಭಿಪ್ರಾಯ ಪಡುತ್ತಾರೆ.

ಈ ಮೇಲಿನ ವಿದ್ವಾಂಸರ ಅಭಿಪ್ರಾಯಗಳನ್ನು ಪರೀಕ್ಷಿಸಿದಾಗ ತಿಳಿದು ಬರುವ ಸಂಗತಿಯೆನೆಂದರೆ ವಿದ್ಯಾರ್ಥಿಗಳು ಸಾಮಾಜಿಕ, ರಾಜಕೀಯ, ಆರ್ಥಿಕ ಹಾಗೂ ಸಾಂಸ್ಕೃತಿಕ ವಿಷಯಗಳಿಗೆ ಸಂಬಂಧಿಸಿದಂತೆ ತುಂಬಾ ಸಕ್ರಿಯವಾಗಿದ್ದು, ಕಾಲಕಾಲಕ್ಕೆ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುತ್ತಾ ಬಂದಿದ್ದಾರೆ. ಸಮಾಜದಲ್ಲಿ ಹೊಸ ಚರ್ಚೆ ಮತ್ತು ವಾಗ್ವಾದಗಳನ್ನು ಈ ವಿದ್ಯಾರ್ಥಿ ಸಂಘಟನೆಗಳು ಹುಟ್ಟು ಹಾಕುತ್ತಾ ಬಂದಿವೆ. ಇದಕ್ಕೆ

ಪ್ರಮುಖ ಕಾರಣವೇನೆಂದರೆ ವಿದ್ಯಾರ್ಥಿ ಸಮುದಾಯ ರಾಜಕೀಯವಾಗಿ ತುಂಬಾ ಪ್ರಜ್ಞಾವಂತರಾಗಿದ್ದಾರೆ. ಸಮಾಜದಲ್ಲಿ ಉಂಟಾಗುವ ಪ್ರತಿಯೊಂದು ಬೆಳವಣಿಗೆಗಳನ್ನು ತುಂಬಾ ಸೂಕ್ಷ್ಮವಾಗಿ ನೋಡುವ ಮನೋಭಾವವನ್ನು ಇವರು ಬೆಳೆಸಿಕೊಂಡಿದ್ದಾರೆ. ಆದ್ದರಿಂದ ಪ್ರತಿಯೊಂದು ಹೋರಾಟ ಅಥವಾ ಪ್ರತಿಭಟನೆಗಳ ಹಿಂದೆ ವಿದ್ಯಾರ್ಥಿ ಸಮುದಾಯವಿರುವುದು ಕಂಡುಬರುತ್ತದೆ. ಸಮಾಜದಲ್ಲಿ ಆಗುವ ಪ್ರತಿಯೊಂದು ಬದಲಾವಣೆಗೆ ವಿದ್ಯಾರ್ಥಿ ಸಮುದಾಯ ಬೇಗ ಪ್ರತಿಕ್ರಿಯೆಸುತ್ತದೆ.

ಸ್ವಾತಂತ್ರ್ಯ ಹೋರಾಟದಲ್ಲಿ ಯುವಕರು ಹಾಗೂ ವಿದ್ಯಾರ್ಥಿಗಳ ಪಾತ್ರ ಅಲ್ಲಗಳಿಯುವಂತಿಲ್ಲ. ಈ ಪ್ರಭಾವ ಕರ್ನಾಟಕದ ವಿದ್ಯಾರ್ಥಿಗಳ ಮೇಲೂ ಆಯಿತು. ಕರ್ನಾಟಕದ ವಿದ್ಯಾರ್ಥಿಗಳು ಅಸಹಕಾರ ಚಳುವಳಿಯಲ್ಲಿ ಭಾಗವಹಿಸಿ ತಮ್ಮ ಧೈರ್ಯ, ಸಾಹಸ ಮೆರೆದದ್ದು ಇಗ ಇತಿಹಾಸ. ಎಸ್.ನಾಗರತ್ನಮ್ಮ ಅವರ ಪ್ರಕಾರ "ಈ ಅಸಹಕಾರ ಚಳುವಳಿಯ ಘೋಷಿತ ಪಂಜಾಬಿನ ಅನ್ಯಾಯಗಳು ಹಾಗೂ ಖಿಲಾಪತ್ ಅನ್ಯಾಯಗಳನ್ನು ಸರಿಪಡಿಸುವುದು ಮತ್ತು ಸ್ವರಾಜ್ಯಗಳಿಸುವುದಾಗಿತ್ತು. ಚಳುವಳಿಯು ನಾಲ್ಕು ಹಂತಗಳಲ್ಲಿ ನಡೆಯಬೇಕೆಂದು ನಿರ್ಧರಿಸಲಾಯಿತು. ವಿದ್ಯಾರ್ಥಿಗಳು ಶಾಲಾ-ಕಾಲೇಜುಗಳನ್ನು ತ್ಯಜಿಸುವುದು, ವಕೀಲರು ತಮ್ಮ ವೃತ್ತಿಯನ್ನು ಬಿಡುವುದು, ಕೌನ್ಸಲ್ ಚುನಾವಣೆಯ ಬಹಿಷ್ಕಾರ, ಬಿರುದುಗಳ ತ್ಯಾಗ ಇವೆಲ್ಲವೂ ಮೊದಲ ಹಂತವಾದರೆ, ತಿಲಕ್ ಸ್ವರಾಜ್ಯ ನಿಧಿಗೆ ಒಂದು ಕೋಟಿ ರೂಪಾಯಿಗಳ ಧನಸಂಗ್ರಹ ವಸೂಲಿ ಮಾಡುವುದು, ಜೊತೆಗೆ ಕಾಂಗ್ರೆಸ್ಸಿನ ಸದಸ್ಯತ್ವ ಕೊಡಿಸುವುದಾಗಿತ್ತು. ಅದೇ ರೀತಿ ವಿದೇಶಿ ಬಟ್ಟೆಗಳನ್ನು ಸುಡುವುದು ಮತ್ತು ಬ್ರಿಟಿಷ್ ರಾಜಕುಮಾರನ ಭೇಟಿಯ ಬಹಿಷ್ಕಾರ ಇವು ಮೂರನೆ ಹಂತವಾದರೆ ಕೊನೆಯ ಹಂತವು ಆಯ್ದ ಪ್ರದೇಶಗಳಲ್ಲಿ ಕರ ನಿರಾಕರಣೆಯಾಗಿತ್ತು".

ಗಂಗಾಧರರಾವ ದೇಶಪಾಂಡೆ, ತಗಡೂರು ರಾಮಚಂದ್ರರಾಯರಯ, ಮೊಹರೆ ಹಣಮಂತರಾವ, ಎನ್.ಎಸ್.ಹರ್ಡಿಕರ್, ರಾಮರಾವ ಹುಕ್ಕೇರಿಕರ್, ಕರ್ನಾಡ್ ಸದಾಶಿವರಾಯರು ಕರ್ನಾಟಕದಲ್ಲಿ ಅಸಹಕಾರ ಚಳುವಳಿಯ ನೇತ್ರತ್ವ ವಹಿಸಿ, ಪ್ರಚಾರ ನಡೆಸಿದರು. ಅವರು ವಿದ್ಯಾರ್ಥಿಗಳಿಗೆ ಸರ್ಕಾರಿ ಶಾಲೆಗಳನ್ನು ಬಹಿಷ್ಕರಿಸಿ, ರಾಷ್ಟ್ರೀಯ ಶಾಲೆಗಳಿಗೆ ಸೇರಲು ಕರೆ ನೀಡಿದರು. ಇದೇ ಸಂದರ್ಭದಲ್ಲಿ ವಿದ್ಯಾರ್ಥಿ ಮುಖಂಡರಾದ ಕರಮರ್‌ಕರ್, ಭುರ್ಲಿ ಬಿಂದುಮಾಧವ, ರಾಮರಾವ ಅವರೂ ಸಹ ರಾಷ್ಟ್ರೀಯ ಶಾಲೆಗಳನ್ನು ಪ್ರೋತ್ಸಾಹಿಸಿದರು. ಪರಿಣಾಮವಾಗಿ ಕರ್ನಾಟಕದಾದ್ಯಂತ ವಿದ್ಯಾರ್ಥಿಗಳು ಸರಕಾರಿ ಶಾಲೆಗಳನ್ನು ತ್ಯಜಿಸಿ ರಾಷ್ಟ್ರೀಯ ಶಾಲೆಗಳನ್ನು ಸೇರಿದರು.

ಈ ರಾಷ್ಟ್ರೀಯ ಶಾಲೆಗಳು ಹೆಚ್ಚು ಹೆಚ್ಚು ವ್ಯಾಪಕವಾಗಿದ್ದು 1920ರ ಅಸಹಕಾರ ಚಳುವಳಿಯ ಸಂದರ್ಭದಲ್ಲಿ ವಿದ್ಯಾರ್ಥಿ ಮತ್ತು ಯುವ ಜನತೆಯನ್ನು ರಾಷ್ಟ್ರೀಯ ಚಟುವಟಿಕೆಗಳಿಂದ ದೂರವಿಡಲು ಮತ್ತು ಇವರ ಪಾತ್ರವನ್ನು ದಮನ ಮಾಡುವ ದೃಷ್ಟಿಯಿಂದ ಸರಕಾರ ಕೆಲವೊಂದು ಕ್ರಮಗಳನ್ನು ಕೈಗೊಂಡಿತ್ತು. ರಾಷ್ಟ್ರೀಯ ಚಟುವಟಿಕೆಳಲ್ಲಿ ತೊಡಗಿ ಮತ್ತು ಅಂತಹ ಚಟುವಟಿಕೆಗಳನ್ನು ಬೆಂಬಲಿಸಿ ವಿದ್ಯಾರ್ಥಿಗಳನ್ನು ಶಾಲೆಗಳಿಂದ ಹೊರಹಾಕಿದರು. ಅಂತಹ ಶಾಲೆಗಳಿಗೆ ನೀಡುತ್ತಿದ್ದ ಧನಸಹಾಯವನ್ನು ನಿಲ್ಲಿಸಿದರು. ಈ ನಿಟ್ಟಿನಲ್ಲಿ ಕೆಲವೊಂದು ಶಾಲೆಗಳನ್ನು ಮುಚ್ಚಲಾಯಿತು. ಹೀಗಾಗಿ ಅಂತಹ ಮಕ್ಕಳ ವಿದ್ಯಾಭ್ಯಾಸಕ್ಕೆ ತೊಂದರೆ ಆಗದಂತೆ ಪರ್ಯಾಯ ಕ್ರಮವಾಗಿ ರಾಷ್ಟ್ರೀಯ ಶಾಲೆಗಳನ್ನು ಸ್ಥಾಪಿಸಲು ಮುಂದಾದರು.

ಈ ಆಂದೋಲನ ಕಾಲಕ್ಕೆ ಮಹಾತ್ಮಗಾಂಧಿ, ಲಾಲಲಜಪತರಾಯ್, ರಾಜಗೋಪಾಲಚಾರಿ, ಪಂಡಿತ್ ಜವಹಾರಲಾಲ್ ನೆಹರು ಮುಂತಾದ ಪ್ರಮುಖ ರಾಷ್ಟ್ರ ನಾಯಕರ ಮತ್ತು ಎನ್.ಎಸ್.ಹರ್ಡಿಕರ್, ಶ್ರೀನಿವಾಸರಾವ, ಆರ್.ಆರ್.ದಿವಾಕರ, ಮುದವೀಡು ಕೃಷ್ಣರಾವ ಅಂತಹ ಕರ್ನಾಟಕ ಧುರೀಣರ ಆಕರ್ಷಕ ಭಾಷಣಗಳು ಅವರನ್ನು ಚಳುವಳಿಯತ್ತ ಆಕರ್ಷಿಸಿದವು. ಕರ್ನಾಟಕದ ಸ್ವಾತಂತ್ರ್ಯ ಚಳುವಳಿಯ ಉದ್ದಕ್ಕೂ ನಿಷ್ಠೆಯಿಂದ ದುಡಿಯುವಂತಹ ಯುವಕರ ತಂಡವೊಂದು ಅಸಹಕಾರ ಚಳುವಳಿಯ ಕಾಲದಲ್ಲಿ ರೂಪಗೊಂಡಿತ್ತು. ಈ ವಿದ್ಯಾರ್ಥಿ ತಂಡಗಳು ಹಳ್ಳಿ ಹಳ್ಳಿಗೂ ಹೋಗಿ ಅಸಹಕಾರ ತತ್ವಗಳು ಮತ್ತು ರಚನಾತ್ಮಕ ಕಾರ್ಯಗಳ ಬಗ್ಗೆ ಜನತೆಯಲ್ಲಿ ಅರಿವು ಮೂಡಿಸುವಲ್ಲಿ ಇವರ ಪಾತ್ರ ಶ್ಲಾಘನೀಯ. ಅಸಹಕಾರ ಚಳುವಳಿಯ ಸಂದರ್ಭದಲ್ಲಿ ಬೆಂಗಳೂರು, ಗದಗ, ಮಂಗಳೂರು, ಹುಬ್ಬಳ್ಳಿ, ಹಾವೇರಿ ಮತ್ತು ಬಿಜಾಪೂರ ಹೀಗೆ ಸುಮಾರು 48 ರಾಷ್ಟ್ರೀಯ ಶಾಲೆಗಳು ಪ್ರಾರಂಭವಾದವು.

ಸ್ವಾತಂತ್ರ್ಯ ಹೋರಾಟದಲ್ಲಿ ವಿದ್ಯಾರ್ಥಿಗಳು ಮಹತ್ವದ ಭೂಮಿಕೆಯನ್ನು ನಿಭಾಯಿಸಿದ್ದರು. ಇದರಲ್ಲಿ ಉಪ್ಪಿನ ಸತ್ಯಾಗ್ರಹವು ಸಹ ಹೊರತಾಗಿರಲಿಲ್ಲ. ಮಹಾತ್ಮಾಗಾಂಧಿಯವರು ಈ ಮಹಾ ಹೋರಾಟಕ್ಕೆ ತಮ್ಮ ಮಕ್ಕಳನ್ನು ಕಳುಹಿಸಲು ಪೋಷಕರು ಹಿಂಜರಿಯಬಾರದು ಎಂದು ಕರೆ ನೀಡಿದ್ದರು. ವಿದ್ಯಾರ್ಥಿಗಳಲ್ಲಿ ಹೆಚ್ಚಿನ ಸ್ಫೂರ್ತಿ ತುಂಬಿದಂತಾಯಿತು. ಇದರಿಂದ ವಿದ್ಯಾರ್ಥಿಗಳು ಸಹ ಹೆಚ್ಚಿನ ಸಂಖ್ಯೆಯಲ್ಲಿ ಚಳುವಳಿಯಲ್ಲಿ ಭಾಗವಹಿದರು.

ಮಂಗಳೂರಿನ ಎಡ್ವರ್ಡ್ ಹೈಸ್ಕೂಲಿನ ವಿದ್ಯಾರ್ಥಿಗಳು ಅಂಕೋಲಾದ ಕಮಲಾಕರ್ ನಾವೆಕರ್ ಎಂಬ ವಿದ್ಯಾರ್ಥಿ ನಾಯಕತ್ವದಲ್ಲಿ ಉಪ್ಪಿನ ಸತ್ಯಾಗ್ರಹದಲ್ಲಿ ಪಾಲ್ಗೊಂಡರು. ಜೂನಿ ಯರ್ ಇಂಟರ್ ಮಿಡಿಯೇಟ್ ತರಗತಿಯಲ್ಲಿನ ಒಟ್ಟು 99 ವಿದ್ಯಾರ್ಥಿಗಳಲ್ಲಿ 63 ಮಂದಿ ಗೈರು ಹಾಜರಿಯಾದರು. ಗೈರುಹಾಜರಾಗಿದ್ದ ವಿದ್ಯಾರ್ಥಿಗಳಿಗೆ ಎಂಟಾಣೆ ದಂಡವನ್ನು ವಿಧಿಸಿ

ಪೋಷಕರಿಂದ ಮುಚ್ಚಳಿಕೆಯನ್ನು ಬರೆಸಿಕೊಂಡರು. ಸರಕಾರ ಎಷ್ಟೇ ದಮನಕಾರಿ ಕಾರ್ಯಕ್ರಮಗಳನ್ನು ತೆಗೆದುಕೊಂಡರು ಸಹ ದಿನೇ ದಿನೇ ವಿದ್ಯಾರ್ಥಿಗಳು ಚಳುವಳಿಯಲ್ಲಿ ಭಾಗವಹಿಸುವ ಪ್ರಮಾಣ ಹೆಚ್ಚಾಗುತ್ತಲೇ ಇತ್ತು. ಆದ್ದರಿಂದ ಸರಕಾರ ವಿದ್ಯಾರ್ಥಿಗಳ ಚಟುವಟಿಕೆಗಳನ್ನು ಸ್ಥಗಿತಗೊಳಿಸಲು ಶಾಲೆಗಳ ವ್ಯವಸ್ಥಾಪಕರ ಸಹಕಾರವನ್ನು ಕೋರಿತು. ಮೈಸೂರು ಪ್ರಾಂತ್ಯದಲ್ಲಿ ಮೈಸೂರಿನ ವಿದ್ಯಾ ಇಲಾಖೆಯ ನಿರ್ದೇಶಕರು ವಿದ್ಯಾರ್ಥಿಗಳು ಚಳುವಳಿಯಲ್ಲಿ ಪಾಲ್ಗೊಳ್ಳುವುದನ್ನು ತಡೆಯಲೆಂದೇ ಅನೇಕ ಕ್ರಮಗಳನ್ನು ಕೈಗೊಂಡರು. ಈ ಚಳುವಳಿಯಲ್ಲಿ ಭಾಗವಹಿಸಿದ ವಿದ್ಯಾರ್ಥಿಗಳಿಗೆ ಮೊದಲು ನೀಡಲಾಗಿದ್ದ ಶುಲ್ಕ ವಿನಾಯತಿ, ವಿದ್ಯಾರ್ಥಿ ವೇತನ ಮತ್ತು ಇತರ ಸೌಲಭ್ಯಗಳನ್ನು ರದ್ದು ಮಾಡಿತು. ಹೀಗೆ ಗದಗ, ಕಾರವಾರ, ಕೊಡಗು, ಬಿಜಾಪೂರ, ಬೆಳಗಾವಿ ಮುಂತಾದ ಕಡೆ ಉಪ್ಪಿನ ಸತ್ಯಾಗ್ರಹದ ಪ್ರತಿಧ್ವನಿಗಳು ಕೇಳಿಬಂದವು. ಸಾವಿರಾರು ವಿದ್ಯಾರ್ಥಿಗಳು ಈ ಸತ್ಯಾಗ್ರಹದಲ್ಲಿ ಪಾಲ್ಗೊಂಡರು.

ಆಲ್ ಇಂಡಿಯಾ ಸ್ಟೂಡೆಂಟ್ ಫೆಡರೆಷನ್ 1936ರಲ್ಲಿ ಅಸ್ತಿತ್ವಕ್ಕೆ ಬಂದಿತು. ಇದರ ಮೊದಲ ಅಧಿವೇಶನ ಲಖನೋದಲ್ಲಿ ಆಯೋಜಿಸಲಾಗಿತ್ತು. ಪಂಡಿತ್ ಜವಹಾರಲಾಲ್ ನೆಹರು ಅಧಿವೇಶದಲ್ಲಿ ಮಾತನಾಡಿ ವಿದ್ಯಾರ್ಥಿಗಳು ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಬೇಕೆಂದು ಕರೆ ನೀಡಿದರು. ಕರ್ನಾಟಕದ ಸಾವಿರಾರು ವಿದ್ಯಾರ್ಥಿಗಳು ಇವರ ಭಾಷಣದಿಂದ ಪ್ರಭಾವಿತರಾಗಿ ರಾಷ್ಟ್ರಕಟ್ಟುವ ಕಾರ್ಯದಲ್ಲಿ ನಿರತರಾದರು.

1942ರಲ್ಲಿ ಮಹಾತ್ಮ ಗಾಂಧಿ 'ಭಾರತ ಬಿಟ್ಟು ತೊಲಗಿ' ಚಳುವಳಿ ಪ್ರಾರಂಭಿಸಿದಾಗ ಅದರ ಪ್ರಭಾವ ಕರ್ನಾಟಕದ ಮೇಲೂ ಆಯಿತು. ಲಕ್ಷಾಂತರ ಜನರು ಗಾಂಧಿಜೀಯವರ ಕರೆಗೆ ಓಗೊಟ್ಟು ಈ ಚಳುವಳಿಯಲ್ಲಿ ಭಾಗವಹಿಸಿದರು. ಕರ್ನಾಟಕದ ವಿದ್ಯಾರ್ಥಿಗಳು ಕೂಡ ಶಾಲೆಕಾಲೇಜುಗಳನ್ನು ತೊರೆದು ಈ ಚಳುವಳಿಯಲ್ಲಿ ಭಾಗವಹಿಸಿದರು. ಕರ್ನಾಟಕದ ಗದಗ, ಹಾವೇರಿ, ಬಿಜಾಪೂರ, ಬೆಳಗಾವಿ, ಕೊಡಗು, ಮೈಸೂರು ಜಿಲ್ಲೆಗಳಲ್ಲಿ ವಿದ್ಯಾರ್ಥಿಗಳು ಬ್ರಿಟಿಷರ ದಮನಕಾರಿ ಆಡಳಿತದ ವಿರುದ್ಧ ಬೀದಿಗಿಳಿದು ಹೋರಾಟ ಮಾಡಿದರು. ರೇಲ್ವೆ, ಟೆಲಿಫೋನ್ ಸಂಪರ್ಕಗಳನ್ನು ಕಡೆದು ಹಾಕಿದರು.

ಸ್ವಾತಂತ್ರ್ಯ ನಂತರ ಮೈಸೂರು ಚಳುವಳಿ ಪ್ರಾರಂಭವಾಯಿತು. ಆಗ ಜಯಚಾಮರಾಜೇಂದ್ರ ಮೈಸೂರಿನ ಅರಸರಾಗಿದ್ದರು. ಭಾರತೀಯ ಒಕ್ಕೂಟಕ್ಕೆ ಸೇರಲು ಮೈಸೂರಿನ ಅರಸರು ವಿರೋಧಿಸಿದರು. ಈ ಸಂದರ್ಭದಲ್ಲಿ ಕಾಂಗ್ರೆಸ್ ಪಕ್ಷ ದೇಶಿಯ ಸಂಸ್ಥಾನಗಳ ಅರಸರ ವಿರುದ್ಧ ಪ್ರತಿಭಟನೆ ರ್‍ಯಾಲಿ ಆಯೋಜಿಸುವಂತೆ ಕರೆ ನೀಡಿತು. ಸೆಪ್ಟೆಂಬರ್ 14, 1947ರಂದು ಸಾವಿರಾರು ಜನರು ಅದರಲ್ಲಿಯೂ ವಿಶೇಷವಾಗಿ ವಿದ್ಯಾರ್ಥಿಗಳು ಚಳುವಳಿಯಲ್ಲಿ ಪಾಲ್ಗೊಂಡಿದ್ದರು. ಪ್ರೌಢಶಾಲೆಯ ವಿದ್ಯಾರ್ಥಿಯಾಗಿದ್ದ ರಾಮಸ್ವಾಮಿ ಪೋಲೀಸ್ ಗುಂಡಿನಂದ

ಹುತಾತ್ಮರಾದರು. ಮೈಸೂರಿನ ಜೆ.ಎಲ್.ಬಿ. ಸರ್ಕಲ್‌ನ್ನು ರಾಮಸ್ವಾಮಿ ಸರ್ಕಲ್ ಎಂದು ಪುನರ್ ನಾಮಕರಣ ಮಾಡಲಾಯಿತು. ಮತ್ತೊಬ್ಬ ವಿದ್ಯಾರ್ಥಿ ಚಂದ್ರಶೇಖರ ಅರಮನೆ ಮೇಲೆ ರಾಷ್ಟ್ರೀಯ ಕಾಂಗ್ರೆಸ್ ಧ್ವಜವನ್ನು ಹಾರಿಸುವಲ್ಲಿ ಯಶಸ್ವಿಯಾದನು. ಆದ್ದರಿಂದ ರಾಮಸ್ವಾಮಿಯವರನ್ನು ಕರ್ನಾಟಕದ ಮೊದಲ ಸ್ಟೂಡೆಂಟ್ ಆ್ಯಕ್ಟಿವಿಸ್ಟ್ ಎಂದು ಗುರುತಿಸಬಹುದಾಗಿದೆ.

ಸ್ವಾತಂತ್ರ್ಯ ನಂತರ ವಿದ್ಯಾರ್ಥಿಗಳು ಕರ್ನಾಟಕದಲ್ಲಿ ನಡೆದ ಹಲವಾರು ಹೋರಾಟ, ಪ್ರತಿಭಟನೆಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದಾರೆ. ದಲಿತ ಚಳುವಳಿ, ರೈತ ಚಳುವಳಿ, ಗೋಕಾಕ್ ಚಳುವಳಿ, ಮಂಡಲ್ ಚಳುವಳಿ, ನಕ್ಸಲ್ ಚಳುವಳಿ, ಮಹಿಳಾ ಚಳುವಳಿ, ಕೈಗಾ ಇವುಗಳಲ್ಲಿ ವಿದ್ಯಾರ್ಥಿಗಳು ಸಕ್ರಿಯವಾಗಿ ಭಾಗವಹಿಸಿದ್ದಾರೆ.

ವಿದ್ಯಾರ್ಥಿಗಳನ್ನು ರೈತಾಪಿ ಬದುಕಿನ ಜೊತೆ ಬೆಸೆಯುವ ವಿನೂತನ ವಿಧಾನವೊಂದನ್ನು ಆಂಧ್ರದ ರ್‍ಯಾಡಿಕಲ್ ಸ್ಟೂಡೆಂಟ್ ಯೂನಿಯನ್ ಪ್ರಾರಂಭಿಸಿತು. ಬೇಸಿಗೆ ರಜೆಯಲ್ಲಿ ವಿದ್ಯಾರ್ಥಿಗಳನ್ನು 'ಹಳ್ಳಿಗಳಿಗೆ ಹೋಗೋಣ' ಎಂಬ ಕರೆಯ ಮೇರೆಗೆ ಸಂಘಟಿಸಿ ಒಂದು ವಾರದ ಕಾಲ ಅವರಿಗೆ ದೇಶದ ರೈತಾಪಿಯ ಪರಿಸ್ಥಿತಿ, ಅವರು ಎದುರಿಸುತ್ತಿರುವ ಸಮಸ್ಯೆಗಳು, ಇದಕ್ಕೆ ಬೇಕಾಗಿರುವ ಕ್ರಾಂತಿಕಾರಿ ಪರಿಹಾರ ಇತ್ಯಾದಿ ವಿಚಾರಗಳ ಮೇಲೆ ತರಬೇತಿ ಶಿಬಿರಗಳನ್ನು ನಡೆಸಿ ನಂತರ ತಂಡ ತಂಡವಾಗಿ ಹಳ್ಳಿಗಳಿಗೆ ಕಳುಹಿಸಲಾಗುತ್ತಿತ್ತು. ಈ ತಂಡಗಳು ಹಳ್ಳಿಗಳಲ್ಲಿ ಕ್ರಾಂತಿಕಾರಿ ರಾಜಕೀಯವನ್ನು ಪ್ರಚಾರ ಮಾಡುತ್ತಾ ಹಳ್ಳಿಯ ಯುವಕರನ್ನು ಮತ್ತು ರೈತಾಪಿ ಜನರನ್ನು ಸಂಘಟಿತಗೊಳ್ಳುವಂತೆ ಹುರಿದುಂಬಿಸುತ್ತಿದ್ದವು.

ಆಂಧ್ರದ ಆರ್.ಎಸ್.ಯು. ಮೂಲಕ ಕರ್ನಾಟಕದಲ್ಲಿಯೂ ಕೆಲವು ಯುವಕರು ಕ್ರಾಂತಿಕಾರಿ ಚಟುವಟಿಕೆಗಳನ್ನು ಪ್ರಾರಂಭಿಸಿದರು. ನಕ್ಸಲ್ಬರಿ ಹೋರಾಟದಿಂದ ಸ್ಫೂರ್ತಿ ಪಡೆದು ಕರ್ನಾಟಕದಲ್ಲೂ ಕ್ರಾಂತಿಕಾರಿ ಚಳುವಳಿಯನ್ನು ಕಟ್ಟುವ ಕೆಲಸದಲ್ಲಿ ತನ್ಮಯತೆಯೊಂದಿಗೆ ಕೆಲವು ವಿದ್ಯಾರ್ಥಿಗಳು ತೊಡಗಿಸಿಕೊಂಡಿದ್ದರು. ಪ್ರಗತಿಪರ ವಿದ್ಯಾರ್ಥಿ ಕೇಂದ್ರದ ಚಟುವಟಿಕೆಯನ್ನು ಪ್ರಾರಂಭಿಸುವ ಮೂಲಕ ಸಾಮಾಜಿಕ ರಂಗಕ್ಕೆ ಕಾಲಿಟ್ಟರು. ಹಲವಾರು ಚಟುವಟಿಕೆಗಳನ್ನು, ಹೋರಾಟಗಳನ್ನು ಪ್ರಗತಿಪರ ವಿದ್ಯಾರ್ಥಿ ಕೇಂದ್ರ ನಡೆಸಿತು. "ಹಳ್ಳಿಗಳಿಗೆ ಹೋಗೋಣ" ಕಾರ್ಯಕ್ರಮ ಹೊಸ ಶಕ್ತಿಯನ್ನೇ ಅವರಲ್ಲಿ ಹುಟ್ಟುಹಾಕಿತು. ಪ್ರತಿ ಹೆಜ್ಜೆಯಲ್ಲೂ ಶೋಷಿತರನ್ನು ಪ್ರೀತಿಸುವುದನ್ನು , ಶೋಷಣೆಯುನ್ನು ವಿರೋಧಿಸುವುದನ್ನು ಕಲಿಯತೊಡಗಿದರು. ಅದೇ ವೇಳೆಗೆ ಕೈಗಾ ಅಣುಸ್ಥಾವರದ ವಿರುದ್ಧ ಕಾರವಾರದಲ್ಲಿ ಹೋರಾಟ ಪ್ರಾರಂಭ ಮಾಡಿತು. ಪ್ರಗತಿಪರ ವಿದ್ಯಾರ್ಥಿ ಕೇಂದ್ರ ಅಲ್ಲಿಗೆ ಹೋಗಿ ಕೆಲಸ ಮಾಡಲು ಪ್ರಾರಂಭಿಸಿತು. ಈ ಸಂಘಟನೆಯು ರಾಯಚೂರು ಮತ್ತು ಮಲೆನಾಡನ್ನು ತನ್ನ

ಚಟುವಟಿಗಳ ಕೇಂದ್ರ ಸ್ಥಾನವನ್ನಾಗಿ ಮಾಡಿಕೊಂಡಿತು. ಮಲೆನಾಡಿನಲ್ಲಿ ಸಶಸ್ತ್ರ ಹೋರಾಟ ತೀವ್ರಗೊಳಿಸಿತು. ಆದರೆ ಪೋಲೀಸ್ ಎನ್‌ಕೌಂಟರ್‌ಗಳಲ್ಲಿ ಸಶಸ್ತ್ರ ಹೋರಾಟದ ಪ್ರಮುಖ ರೂವಾರಿಯಾಗಿದ್ದ ಕಾಮ್ರೇಡ್ ಸಾಕೇತ್ ರಾಜನ್‌ರನ್ನು ಒಳಗೊಂಡಂತೆ, ಪಾರ್ವತಿ, ಹಾಜಿಮಾ, ಶಿವಲಿಂಗು, ಉಮೇಶ, ಅಜೀತ್ ಕುಸುಬಿ, ಚನ್ನಪ್ಪ, ಮನೋಹರ್, ದಿನಕರ್, ಆನಂದ ಮುಂತಾದ ಹೋರಾಟಗಾರರು ತಮ್ಮ ಜೀವ ಕಳೆದುಕೊಂಡರು. ಹಲವಾರು ಸಂಗಾತಿಗಳು ಸೆರೆವಾಸಕ್ಕೆ ಗುರಿಯಾದರು. ಇವರು ನಿರೀಕ್ಷಿಸಿದ್ದಂತೆ ಮಲೆನಾಡಿನಲ್ಲಿ ಜನರ ಸಮಸ್ಯೆಗಳನ್ನು ಕೈಗೆತ್ತಿಕೊಂಡು ಹೋರಾಟಗಳನ್ನು ರೂಪಿಸಲು ಸಾಧ್ಯವಾಗಲಿಲ್ಲ. ವಿಶಾಲ ಜನ ಸಮೂಹವನ್ನು ಸಂಘಟಿಸಲು ಸಾಧ್ಯವಾಗಲಿಲ್ಲ. ಹೊರಗೆ ನಗರ-ಪಟ್ಟಣಗಳಲ್ಲಿದ್ದ ಸಮೂಹ ಸಂಘಟನೆಗಳೂ ಕುಸಿದು ಬಿದ್ದವು. ಹಲವಾರು ಹೋರಾಟಗಳಲ್ಲಿ ಇದುವರೆಗೆ ಜೊತೆಗೂಡಿದ್ದ ಹಲವು ಪ್ರಗತಿಪರ ಸಂಘಟನೆಗಳು ಮತ್ತು ಹೋರಾಟಗಾರರು ಸಹ ಈ ಸಂಘಟನೆಯಿಂದ ದೂರವಾಗತೊಡಗಿದರು.

ಡಾ.ಮಜಾಫರ್ ಅಸ್ಸಾದಿಯವರು ಕರ್ನಾಟಕದಲ್ಲಿ ರೈತರ ಹೋರಾಟ ಕುರಿತು ತುಂಬಾ ಚೆನ್ನಾಗಿ ವಿಶ್ಲೇಷಣೆ ಮಾಡಿದ್ದಾರೆ. ಅವರು ಹೇಳುವ ಹಾಗೆ "ಭಾರತದ ಸಂದರ್ಭದಲ್ಲಿ 1980ರ ದಶಕ ಬಹಳ ಪ್ರಮುಖವಾದುದು. ಈ ಕಾಲದಲ್ಲಿ ಭಾರತದ ವಿವಿಧ ಭಾಗಗಳಲ್ಲಿ ನಡೆದ ರೈತ ಹೋರಾಟಗಳು- ಮಹಾರಾಷ್ಟ್ರದಲ್ಲಿ ಶೇತ್ಕಾರಿ ಸಂಘಟನ, ಪಂಜಾಬಿನಲ್ಲಿ ಖೇತಬಾರಿ ಯೂನಿಯನ್, ಉತ್ತರ ಪ್ರದೇಶದಲ್ಲಿ ಭಾರತೀಯ ಕಿಸಾನ್ ಯೂನಿಯನ್ ಹಾಗೂ ನಮ್ಮಲ್ಲಿ ಕರ್ನಾಟಕ ರಾಜ್ಯ ರೈತ ಸಂಘದಡಿಯಲ್ಲಿ ನಡೆದ ಹೋರಾಟಗಳು ಅತ್ಯಂತ ಪ್ರಮುಖವಾದವು. ಈ ಹೋರಾಟಗಳನ್ನು "ನವ ರೈತ ಹೋರಾಟ"ವೆಂದು ಕರೆಯುತ್ತಾರೆ. ಇದರ ಕುರಿತು ಸಾಕಷ್ಟು ಜಿಜ್ಞಾಸೆಗಳಿವೆ. ಎಡಪಂಥೀಯ ಚಿಂತಕರು ಇವುಗಳನ್ನು ಶ್ರೀಮಂತ ರೈತ ಹೋರಾಟವೆನ್ನುತ್ತಾರೆ. ಆರಂಭದಿಂದಲೂ ಕರ್ನಾಟಕದ ರೈತ ಹೋರಾಟ ತೌಲನಿಕ ಬೆಲೆಗಳ ಕುರಿತು, ಸಾಲಮನ್ನಾ ಕುರಿತು, ಕೈಗಾರಿಕಾ ಬಂಡವಾಳ, ಅಂತರರಾಷ್ಟ್ರೀಯ ಬಂಡವಾಳ ಕುರಿತು ಪ್ರಶ್ನೆಗಳನ್ನು ಎತ್ತಿತ್ತೇ ಹೊರತು ತಳಮಟ್ಟದ ವೈರುಧ್ಯಗಳ ಕುರಿತಲ್ಲ. ಕೃಷಿ ಕೂಲಿಕಾರರ ಪ್ರಶ್ನೆಗಳ ಬಗ್ಗೆ ಅಲ್ಲ ಅಥವಾ ಬರಗಾಲದ ರೈತರ ಕುರಿತಾಗಿರಲಿಲ್ಲ. ಅಥವಾ ಅತ್ಯಂತ ಚಿಕ್ಕ ಹಿಡುವಳಿದಾರರ ಬದುಕಿನ ಪರಿಸ್ಥಿತಿ ಕುರಿತಾಗಿರಲಿಲ್ಲ. ಬಹುಶಃ ಈ ಪ್ರಶ್ನೆಗಳನ್ನು ಹಾಗೂ ಅದರಿಂದ ಉದ್ಭವಿಸಿದ ವೈರುಧ್ಯಗಳನ್ನು ಆರಂಭದಿಂದಲೂ ಎತ್ತಿದ್ದರೆ ಅಥವಾ ಪರಿಹರಿಸಿದ್ದರೆ 'ರೈತ ಹೋರಾಟ' ಕರ್ನಾಟಕದ ಸಂದರ್ಭದಲ್ಲಿ ಅತ್ಯಂತ ನಿರ್ಣಾಯಕ ಪಾತ್ರ ವಹಿಸುತ್ತಿತ್ತೋ ಏನೋ? ಜಾಗತೀಕರಣವನ್ನು ವಿರೋಧಿಸುವ ಎಲ್ಲಾ ವರ್ಗಗಳು ನಗರದ, ಮಧ್ಯಮವರ್ಗ,ಬುದ್ಧಿಜೀವಿಗಳು ಈ ರೈತ ಹೋರಾಟದಲ್ಲಿ ಭಾಗವಾಗಿತ್ತಿದ್ದರೋ ಏನೋ? ಅಲ್ಲದೆ ಜಾಗತೀಕರಣದ ಸಂರ್ಭದಲ್ಲಿ 'ಜಾಗತೀಕರಣ

ವಿರೋಧಿ' ಹೋರಾಟದ ನಿರ್ಣಾಯಕರಾಗುತ್ತಿದ್ದರೋ? ಎಂಬ ಜಿಜ್ಞಾಸೆ ಉದ್ಭವಿಸುವುದು ಸಹಜ. ಅದೇನೇ ಇದ್ದರೂ ಭಾರತದ ಚಾರಿತ್ರಿಕ ಸಂದರ್ಭದಲ್ಲಿ ರೈತರನ್ನು ದಾಖಲಿಸಿದ್ದು ಈ ರೈತ ಚಳುವಳಿಗಳ ದೊಡ್ಡ ಕಾಣಿಕೆ ಎಂದೇ ಹೇಳಬೇಕು.

ಕರ್ನಾಟಕದಲ್ಲಿ ವಿದ್ಯಾರ್ಥಿ ಸಂಘಟನೆಗಳು ಹಲವಾರು ವಿಷಯಗಳನ್ನು ಇಟ್ಟುಕೊಂಡು ಹೋರಾಟ ಮಾಡುತ್ತಾ ಬಂದಿವೆ. ವಿದ್ಯಾರ್ಥಿ ಸಮುದಾಯದ ಒಂದು ಪ್ರಮುಖ ವಿಶೇಷತೆ ಎಂದರೆ ಕೇವಲ ತಮ್ಮ ಹಿತಾಸಕ್ತಿಗಳಿಗಾಗಿ ಹೋರಾಟ ಮಾಡದೆ ಇಡಿ ಸಮಷ್ಠಿಯ ಅಭಿವೃದ್ಧಿಗಾಗಿ ಹೋರಾಟ ಮಾಡುತ್ತಾ ಬಂದಿದೆ. ಬೇರೆ ಯಾವ ಗುಂಪು ಈ ರೀತಿ ಹೋರಾಟ ಮಾಡುವುದನ್ನು ನಾವು ನೋಡುವುದಿಲ್ಲ. ಉದಾಹರಣೆಗೆ ಕಾರ್ಮಿಕ ಸಂಘಟನೆಗಳು ಕೇವಲ ಕಾರ್ಮಿಕರ ಹಿತಾಸಕ್ತಿಗಾಗಿ ಹೋರಾಟ ಮಾಡುತ್ತವೆ. ರೈತ ಸಂಘಟನೆಗಳು ರೈತರ ಹಿತ ಕಾಪಾಡುವುದಕ್ಕಾಗಿ ಹೋರಾಟದ ರೂಪುರೇಷಗಳನ್ನು ಸಿದ್ದಪಡಿಸುತ್ತವೆ. ಹಾಗೆಯೇ ನೌಕರರ ಸಂಘ ಕೇವಲ ಸರಕಾರಿ ನೌಕರರ ಹಿತಾಸಕ್ತಿ ಕಾಪಾಡುವುದರಗೊಸ್ಕರ ಹೋರಾಟ ಮಾಡುತ್ತದೆ. ಆದರೆ ವಿದ್ಯಾರ್ಥಿ ಸಂಘಟನೆಗಳು ಮಾತ್ರ ದೇಶದ ಜ್ವಲಂತ ಸಮಸ್ಯೆಗಳನ್ನು ಮುಂದಿಟ್ಟುಕೊಂಡು ಹೋರಾಟಮಾಡುತ್ತವೆ. ನಿರುದ್ಯೋಗ, ಹಸಿವು, ಬಡತನ, ಕೋಮುವಾದ, ಪ್ರಾಂತಿಯತೆ, ಜಾತಿಯತೆ, ವಿದೇಶಿಯರ ಒಳನುಸುಳುವಿಕೆ, ರಾಷ್ಟ್ರೀಯತೆ ಮುಂತಾದ ವಿಷಯಗಳನ್ನು ಇಟ್ಟುಕೊಂಡು ಸರ್ಕಾರದೊಂದಿಗೆ ಸಂಘರ್ಷಕ್ಕೆ ಇಳಿಯುತ್ತವೆ. ಕರ್ನಾಟಕದಲ್ಲಿ ವಿದ್ಯಾರ್ಥಿ ಸಂಘಟನೆಗಳು ಹಲವಾರು ಪ್ರಮುಖ ಬೇಡಿಕೆಗಳನ್ನು ಇಟ್ಟುಕೊಂಡು ಹೋರಾಟ ಮಾಡಿರುವುದನ್ನು ಇಲ್ಲಿ ಸಂಕ್ಷಿಪ್ತವಾಗಿ ಚರ್ಚಿಸಲಾಗಿದೆ.

ಶಿಕ್ಷಣ :

ಮೂಲತಃ ಬ್ರಿಟಿಷ್ ವಸಹಾತುಶಾಹಿಗಳು ಬಿಟ್ಟುಹೋಗಿರುವ ಇಂದಿನ ಶಿಕ್ಷಣ ಪದ್ಧತಿ ಯುವ ಪೀಳಿಗೆಯನ್ನು ರಾಷ್ಟ್ರೀಯ ಮತ್ತು ಸಾಂಸ್ಕೃತಿಕ ವಾಹಿನಿಯಿಂದ ಬೇರ್ಪಡಿಸಿ, ಅವರ ಮನದಲ್ಲಿ ಆತ್ಮಹೀನತೆ, ಕೀಳರಮೆಯ ಭಾವನೆ ಬೆಳೆಸುತ್ತದೆ. ಶಿಕ್ಷಣ ಯೋಜನೆ ವ್ಯವಸ್ಥೆಯಲ್ಲಿ ಭಾರತೀಯತೆಯ ಅಭಾವದಿಂದಾಗಿ ಇಂದಿನ ಸುಶಿಕ್ಷಿತ ಯುವಕರು ದಿಕ್ಕುದಿಸೆಯಿಲ್ಲದೆ, ವಿಭ್ರಾಂತ ಸ್ಥಿತಿಯ ಬಲಿಪಶುಗಳಂತಾಗಿದ್ದಾರೆ. ಮನುಷ್ಯನ ಶರೀರ, ಬುದ್ಧಿ, ಮನಸ್ಸು ಮತ್ತು ಆತ್ಮವಿಕಾಸವಾಗುವಂಥ ಶಿಕ್ಷಣ ನೀಡಬೇಕು. ಅಂಥ ಶಿಕ್ಷಣ ಪದ್ಧತಿ ರೂಪಿಸಬೇಕು ಎಂದು ಪಂಡಿತರು, ಶಿಕ್ಷಣತಜ್ಞರು ಪ್ರತಿಪಾದಿಸುತ್ತಲೇ ಬಂದಿದ್ದಾರೆ. ಶಿಕ್ಷಣವು ವ್ಯಕ್ತಿಯ ಜೀವನದ ಗುರಿ ಸ್ಪಷ್ಟಪಡಿಸಿಕೊಳ್ಳಲು ನೆರವಾಗಬೇಕು ಮತ್ತು ಆತ ರಾಷ್ಟ್ರದ ಪುನರ್ನಿರ್ಮಾಣದಲ್ಲಿ ಮಂಚೂಣಿಯಲ್ಲಿರಬೇಕು. ಈ ದೃಷ್ಟಿಯಿಂದ –

ಶೈಕ್ಷಣಿಕ ಯೋಜನೆ ರೂಪಿಸುವಾಗ ಭಾರತೀಯ ಚಿಂತನೆಯು ಆಧಾರದ ಮೇಲೆ ರೂಪಿಸಲಾಗಿದೆ ಎನ್ನುವ ಸಂಗತಿ ಅನುಭವಕ್ಕೆ ಬರುವಂತಾಗಬೇಕು. ಅಂದರೆ ಶಿಕ್ಷಣದಿಂದ ವ್ಯಕ್ತಿಯು ಸರ್ವಾಂಗೀಣ ವಿಕಾಸವಾಗಬೇಕು. ವಿದ್ಯಾರ್ಥಿಗಳಲ್ಲಿ ರಾಷ್ಟ್ರಭಕ್ತಿಯ ಸಂಸ್ಕಾರವಾಗಬೇಕು ಹಾಗೆಯೇ ಶ್ರಮಕ್ಕೆ ಗೌರವ ದೊರೆಯಬೇಕು. ದೇಶದ ಅವಶ್ಯಕತೆಗಳನ್ನು ಪೂರೈಸಲು ಸಹಾಯವಾಗಬೇಕು.

ವಿದ್ಯಾರ್ಥಿಗಳಲ್ಲಿ ಆತ್ಮವಿಶ್ವಾಸ, ಆತ್ಮಗೌರವ ಹುಟ್ಟಿಸಲು ಇಲ್ಲ ವಿಷಯಗಳಪಠ್ಯಕ್ರಮದಲ್ಲೂ ಆಯಾ ವಿಷಯಗಳ ಭಾರತೀಯ ಇತಿಹಾಸ ಅಥವಾ ಹಿನ್ನಲೆ ನೀಡಬೇಕು.

ಶಿಕ್ಷಣದಲ್ಲಿ ಭಾರತೀಯ ಜ್ಞಾನ ವಿಜ್ಞಾನಗಳನ್ನು ಸೇರಿಸಬೇಕು ಮತ್ತು ಸಮಕಲಿತ ಜ್ಞಾನಾಧ್ಯಾಯನ ಮತ್ತು ನೂತನ ಅನುಸಂಧಾನಗಳ ವ್ಯವಸೆಯ ಅರಿವೂ ಆಗಬೇಕು. ಈ ದೃಷ್ಟಿಯಿಂದ ಉಚ್ಚಸ್ಥರೀಯ ಸಂಶೋಧನೆ ಪರಿಣತಿ ಕೇಂದ್ರಗಳು (ಸೆಂಟರ್ ಫಾರ್ ರಿಸರ್ಚ ಆಂಡ್ ಎಕ್ಸೆಲನ್ಸ್) ಸ್ಥಾಪನೆಯಾಗಬೇಕು.

ಭಾರತೀಯ ಸಾಂಸ್ಕೃತಿಕ ಪರಂಪರೆಯ ಅಧ್ಯಯನ ಪಠ್ಯಕ್ರಮದ ಒಂದು ಭಾಗವಾಗಬೇಕು.

ಭಾರತೀಯ ಭಾಷೆಗಳಲ್ಲಿಯೇ ಶಿಕ್ಷಣ ನೀಡಬೇಕು. ಸಂಪರ್ಕ ಭಾಷೆ ಹಿಂದಿಯ ಜೊತೆ ಜೊತೆಗೇ ಎಲ್ಲ ರಾಷ್ಟ್ರೀಯ ಭಾಷೆಗಳ ಅಧ್ಯಯನ ಮತ್ತು ಸಂಶೋಧನಕ್ಕೆ ಪ್ರೋತ್ಸಾಹ ನೀಡಬೇಕು. ಶಿಕ್ಷಣದಲ್ಲಿ ಇಂಗ್ಲಿಷ್‌ನ ಅನಿವಾರ್ಯತೆ ಸಮಾಪ್ತಿಗೊಳಿಸಿ ಅದರ ಪ್ರಭುತ್ವ ತೊಡೆದು ಹಾಕಬೇಕು. ಅಧ್ಯಾಪನ ಮತ್ತು ಎಲ್ಲ ಆಡಳಿತ ಕಾರ್ಯಗಳಲ್ಲಿ ಇಂಗ್ಲಿಷ್ ಸ್ಥಾನದಲ್ಲಿ ಭಾರತೀಯ ಭಾಷೆಗಳು ಸ್ಥಾಪನೆಗೊಳ್ಳಬೇಕು. ಸಂಪರ್ಕ ಭಾಷೆಯಾಗಿ ಹಿಂದಿ ಇರಬೇಕು.

ಸಂಸ್ಕೃತದಲ್ಲಿ ನಮ್ಮ ಜ್ಞಾನ–ವಿಜ್ಞಾನದ ಬೃಹತ್ ಭಂಡಾರವೇ ಇದೆ. ಹಾಗೆಯೇ ಸಂಸ್ಕೃತ ಎಲ್ಲಾ ಭಾಷೆಗಳ ಪೋಷಕವೂ ಹೌದು. ಆದ್ದರಿಂದ ಸಂಸ್ಕೃತ ಅಧ್ಯಯನ ಕಡ್ಡಾಯಗೊಳಿಸಬೇಕು.

ಶಿಕ್ಷಣದ ಮೂಲಕ ನಮ್ಮ ಪ್ರಜಾತಾಂತ್ರಿಕ ವ್ಯವಸ್ಥೆಯ ಬಗ್ಗೆ ಆಸ್ಥೆ, ಅಧಿಕಾರ ಮತ್ತು ಕರ್ತವ್ಯದ ದರ್ಶನ, ಸಮುದಾಯಿಕ ಜೀವನ, ಶಿಕ್ಷಕ – ವಿದ್ಯಾರ್ಥಿ ಸಂಬಂಧದ ಪಾವಿತ್ರ್ಯ, ಹಾಗೆಯೇ ಕುಟುಂಬ ಜೀವನದ ಮೌಲ್ಯಗಳಲ್ಲಿ ನಿಷ್ಠೆ ಹುಟ್ಟಬೇಕು.

ಭಾರತೀಯ ಅವಶ್ಯಕತೆಗಳಿಗೆ ಅನುಗುಣವಾಗಿ ಪಠ್ಯರಚನೆಯಲ್ಲಿ ವಿಷಯ ವಸ್ತುಗಳ ಸಂಯೋಜನೆ ಇರಬೇಕು.

ಪ್ರಸ್ತುತ ಪ್ರಾಥಮಿಕ, ಮಾಧ್ಯಮಿಕ ಮತ್ತು ಉನ್ನತ ಶಿಕ್ಷಣ ವಿಭಾಗಗಳನ್ನು ಸಮನ್ವಯಗೊಳಿಸುವ ಯಾವುದೇ ವ್ಯವಸ್ಥೆ ಇಲ್ಲ. ಬೇರೆ ಬೇರೆ ರಾಷ್ಟ್ರೀಯ ಶಿಕ್ಷಣ ಸಂಸ್ಥೆಗಳು ಅಥವಾ ಸಂಘಟನೆಗಳು

ಪ್ರತ್ಯೇಕ–ಪ್ರತ್ಯೇಕವಾಗಿ ಯೋಚಿಸುತ್ತಿವೆ ಮತ್ತು ಅವುಗಳ ಆಧಾರದ ಮೇಲೆ ಶೈಕ್ಷಣಿಕ ಯೋಜನೆ ರೂಪಿಸುತ್ತಿವೆ. ಆದುದರಿಂದ ಶಿಕ್ಷಣದ ದಿಕ್ಕು ಸ್ಪಷ್ಟವಾಗಿರುವುದಿಲ್ಲ. ಸಂಪೂರ್ಣ ಶಿಕ್ಷಣದಲ್ಲಿ ಸಮಗ್ರ ಮತ್ತು ಏಕಾತ್ಮ ದೃಷ್ಟಿಯಿಂದ ಪರಿಗಣಿಸುವ ಸಲುವಾಗಿ ಒಂದು ಸ್ವಾಯತ್ತ, ಸಂಪೂರ್ಣ ಅಧಿಕಾರವುಳ್ಳ ರಾಷ್ಟ್ರೀಯ ಶಿಕ್ಷಣ ಆಯೋಗದ ಸ್ಥಾಪನೆ ಆಗಬೇಕು. ಇದರ ಮೂಲಕ ಶೈಕ್ಷಣಿಕ ನೀತಿ ನಿರ್ಧಾರ, ಯೋಜನೆ, ನೀತಿನಿಯಮ ನಿರೂಪಣೆ ಹಾಗೂ ಶಿಕ್ಷಣದಲ್ಲಿ ಸಮನ್ವಯತೆ ಪುನರ್ವಿಮರ್ಶೆಗೆ ಅವಕಾಶವಾಗುವಂತಾಗಬೇಕು.

ಶಿಕ್ಷಣವನ್ನು ವ್ಯಾಪಾರಿ ಸರಕನ್ನಾಗಿ ನೋಡುವ ದೃಷ್ಟಿಕೋನ ವೈಶ್ವೀಕರಣದ ಮೂಲಕ ಬಂದಿದೆ. ಇದು ಭಾರತೀಯ ಶೈಕ್ಷಣಿಕ ಕಲ್ಪನೆಗೆ ವ್ಯತಿರಿಕ್ತವಾಗಿದೆ. ಆದ್ದರಿಂದ ಶಿಕ್ಷಣದ ವ್ಯಾಪಾರ ನಿಲ್ಲಿಸಲು ತ್ವರಿತ ಉಪಾಯ ಕೈಗೊಳ್ಳಬೇಕು. ಈ ದೃಷ್ಟಿಯಿಂದ ಶಿಕ್ಷಣವನ್ನು 'ಗ್ಯಾಟ್' ಪರಿಧಿಯಿಂದ ಹೊರಗೆ ಉಳಿಸಿಕೊಳ್ಳುವ ಸರ್ವಪ್ರಯತ್ನ ಮಾಡಬೇಕು.

ವಿಶ್ವವಿದ್ಯಾಲಯಗಳು ಸಾಮಾಜಿಕ ಅವಶ್ಯಕತೆಯೊಂದಿಗೆ ಹೆಜ್ಜೆ ಹಾಕುವಂತಾಗಬೇಕು. ಕ್ಷೇತ್ರದ ವಿಕಾಸದಲ್ಲಿ ಹಾಗೂ ಸಮಾಜದ ಜೀವನಸ್ತರ ಮೇಲೆತ್ತುವುದರಲ್ಲಿ ಅವುಗಳ ಸಕ್ರಿಯ ಪಾಲ್ಗೊಳ್ಳುವಿಕೆ ಇರಬೇಕು. ಶೈಕ್ಷಣಿಕ ಯೊಜನೆ ಮತ್ತು ಕ್ಷೇತ್ರಿಯ ಯೋಜನೆಗಳ ನಡುವೆ ಪರಸ್ಪರ ಸಂಬಂಧವಿರಬೇಕು.

ಸಮಾಜ ಮತ್ತು ವ್ಯಕ್ತಿಗಳ ಜೀವನದಲ್ಲಿ ಹೆಚ್ಚುತ್ತಿರುವ ನಕರಾತ್ಮಕ ಧೋರಣೆಗಳನ್ನು ತಡೆಗಟ್ಟಿ ರಾಷ್ಟ್ರೀಯ ಜವಾಬ್ದಾರಿಯ ಭಾವನೆ ಮತ್ತು ಸಾಮಾಜಿಕ ಚೇತನ ಬಡಿದೆಬ್ಬಿಲು ಶಿಕ್ಷಣದಲ್ಲಿ ಮೌಲ್ಯಗಳ ಸಮಾವೇಶವಾಗಬೇಕು. ಪಠ್ಯಸಾಮಾಗ್ರಿಗಳಲ್ಲಿ ಮೌಲ್ಯ ಶಿಕ್ಷಣವನ್ನು ಅಳವಡಿಸಬೇಕು ಶಿಕ್ಷಕರ ಜೀವನ ಮತ್ತು ನಡತೆ ಕೂಡ ನೈತಿಕ ಶಿಕ್ಷಣದ ವಿಷಯದಲ್ಲಿ ಪ್ರಭಾವಶಾಲಿಯಾಗಿರುತ್ತದೆ. ಆದ್ದರಿಂದ ಶಿಕ್ಷಕ ಸಮುದಾಯದ ಪ್ರಶಿಕ್ಷಣದಲ್ಲಿ ನೈತಿಕತೆ, ವೃತ್ತಿನಿಷ್ಠೆ ಮತ್ತು ಮೌಲ್ಯಗಳನ್ನು ಬೆಳೆಸುವ ಪ್ರಯತ್ನ ಆಗಬೇಕು.

ಶಿಕ್ಷಣದ ವಿತ್ತ ವ್ಯವಸ್ಥೆ :

ನಮ್ಮ ದೇಶದಲ್ಲಿ ಸಮಾಜ ಆಧಾರಿತ ಶಿಕ್ಷಣ ವ್ಯವಸ್ಥೆಯಿದೆ. ಹಾಗೂ ಅದೇ ಸರಿಯಾದ ವ್ಯವಸ್ಥೆ ಕೂಡ. ಶಿಕ್ಷಣ ವ್ಯವಸ್ಥೆಯಲ್ಲಿ ಸಾಮಾಜಿಕ ಸಹಭಾಗಿತ್ವದ ದೃಷ್ಟಿಯಿಂದ ಖಾಸಗೀ ಸಂಸ್ಥೆಗಳ ಪಾತ್ರ ಸ್ವಾಗತಾರ್ಹ. ಆದರೆ ಸದ್ಯದ ಸ್ಥಿತಿಯಲ್ಲಿ ಖಾಸಗೀಕರಣ ವ್ಯಾಪಾರಕ್ಕೆ ಎಡೆಮಾಡಿಕೊಟ್ಟಿದೆ. ಶಿಕ್ಷಣದ ಸಮರ್ಪಕ ವಿತ್ತವ್ಯವಸ್ಥೆಯ ದೃಷ್ಟಿಯಿಂದ ಈ ಕೆಳಗಿನ ಕ್ರಮಗಳನ್ನು ಕೈಗೊಳ್ಳುವುದು ಅಗತ್ಯ.

ಎಲ್ಲರಿಗೂ ಶಿಕ್ಷಣ ದೊರೆಯುವಂತೆ ಮಾಡುವುದು ಸಮಾಜದ ಹೊಣೆಗಾರಿಕೆ. ಸಮಾಜದ ಅತ್ಯಂತ ಪ್ರಮುಖ ಮತ್ತು ಪ್ರಾತಿನಿಧಿಕ ಸಂಸ್ಥೆಯಾಗಿರುವ ಕಾರಣ, ಈ ನಿಟ್ಟಿನಲ್ಲಿ ರಾಜ್ಯದ ಹೊಣೆಗಾರಿಕೆ ಅತ್ಯಂತ ಪ್ರಮುಖವಾದದ್ದು. ಈ ದೃಷ್ಟಿಯಿಂದ ಅವಶ್ಯಕ ವ್ಯವಸ್ಥೆಯನ್ನು ಕೈಗೊಳ್ಳಬೇಕು. ಸಕಲ ರಾಷ್ಟ್ರೀಯ ಉತ್ಪಾದನೆಯ ಕನಿಷ್ಠ ಶೇ.6ರಷ್ಟನ್ನು ಶಿಕ್ಷಣಕ್ಕಾಗಿ ಮೀಸಲಾಗಿಡಬೇಕು. ಸರಕಾರ ಇದನ್ನು 'ಖರ್ಚು' ಎಂದು ಭಾವಿಸದೆ ನಿಯೋಜನೆಯೆಂದು ಭಾವಿಸಬೇಕು.

ಕೇಂದ್ರ ಸರಕಾರವು ಉನ್ನತ ಶಿಕ್ಷಣಕ್ಕೆ ವ್ಯಯಿಸುತ್ತಿರುವ ಮೊತ್ತವನ್ನು ಕಡಿಮೆಗೊಳಿಸುತ್ತಿದೆ. ರಾಜ್ಯ ಸರ್ಕಾರಗಳೂ ಉನ್ನತ ಶಿಕ್ಷಣ ಬಜೆಟ್‌ನಲ್ಲಿ ಕಡಿತಗೊಳಿಸುತ್ತಿವೆ. ವಿಶ್ವವಿದ್ಯಾಲಯ ಅನುದಾನ ಆಯೋಗದ ಮೂಲಕ ನೀಡುತ್ತಿರುವ ಅನುದಾನವನ್ನೂ ಕಡಿತಗೊಳಿಸಲಾಗಿದೆ. ಈ ಪ್ರವೃತ್ತಿ ನಿಲ್ಲಿಸಬೇಕು. ಹಾಗೇಯೆ ಶಿಕ್ಷಣ ಬಜೆಟ್‌ನ ಯಾವ ವಿಭಾಗಕ್ಕಾಗಿ ಹಣವನ್ನು ನಿಗದಿಪಡಿಸಲಾಗಿದೆಯೋ ಅದೇ ವಿಭಾಗದಲ್ಲಿ ಖರ್ಚು ಮಾಡಬೇಕು. ಅನವಶ್ಯಕ ವೆಚ್ಚಗಳಿಗೆ ಕಡಿವಾಣ ಹಾಕಬೇಕು.

ಪ್ರಾಥಮಿಕ ಶಿಕ್ಷಣಕ್ಕೆ ಅಗತ್ಯವಾಗಿ ಆದ್ಯತೆ ನೇಡಬೇಕು ಆದರೆ ಉನ್ನತ ಶಿಕ್ಷಣದ ಉಪೇಕ್ಷೆ ಖಂಡಿತಾ ಸಲ್ಲದು. ಉಚ್ಚಶಿಕ್ಷಣ ಸದೃಢಗೊಳಿಸಲು ಮತ್ತು ಅದರ ಗುಣಮಟ್ಟ ಹೆಚ್ಚಿಸಲು ಯೋಗ್ಯ ಹಣಕಾಸು ವ್ಯವಸ್ಥೆ ಮಾಡಬೇಕು.

ಖಾಸಗಿ ಸಹಭಾಗಿತ್ವದ ಹೆಸರಿನಲ್ಲಿ ಶಿಕ್ಷಣದ ವ್ಯಾಪಾರಕ್ಕೆ ಕಟ್ಟುನಿಟ್ಟಾದ ತಡೆ ಹಾಕಬೇಕು.

ಹೊಸ ಹೊಸ ವೃತ್ತಿಪರ ವಿಷಯಗಳ ಪಠ್ಯಕ್ರಮಗಳನ್ನು ಪ್ರಾರಂಭಿಸಲಾಗುತ್ತಿದೆ. ಬಹುಶ: ಇದು ಕಾಲದ ಅವಶ್ಯಕತೆಯೂ ಹೌದು. ಆದರೆ ಹೆಚ್ಚಿನ ವೃತ್ತಿಪರ ಪಠ್ಯಕ್ರಮ ಸ್ವವಿತ್ತಪೋಷಿತ ಆಧಾರದ ಮೇಲೆ ತೆರೆಯಲಾಗುತ್ತದೆ. ಇವುಗಳಲ್ಲಿನ ಶುಲ್ಕ ವಿಧಿಸಲು ಯಾವುದೇ ನಿಶ್ಚಿತ ಮಾನದಂಡವಿಲ್ಲ. ಪ್ರವೇಶ ಮತ್ತು ಶುಲ್ಕ ಆಕರಣೆಗೆ ತಾರ್ಕಿಕ ಹಾಗೂ ನ್ಯಾಯ ಸಮ್ಮತ ವ್ಯವಸ್ಥೆ ಜಾರಿಗೆ ಬರಬೇಕು. ಉನ್ನತ ಶಿಕ್ಷಣ ಪ್ರವೇಶದಲ್ಲಿ ಫ್ರೀ ಸೀಟ್ ಮತ್ತು ಪೇಮೆಂಟ್ ಸೀಟುಗಳ ವ್ಯವಸ್ಥೆಯ ಬಗ್ಗೆಯೂ ಸಮೀಕ್ಷೆ ಆಗಬೇಕು.

ಹಿಂದಿನ ವರ್ಷದಲ್ಲಿ ಸಾಮಾನ್ಯ ಪಠ್ಯಕ್ರಮಗಳ ಶುಲ್ಕದಲ್ಲೂ ಭಾರಿ ಹೆಚ್ಚಳವಾಗಿದೆ. ದೂರಶಿಕ್ಷಣ ಶುಲ್ಕದಲ್ಲೂ ಅನಿಯಂತ್ರಿತ ಹೆಚ್ಚಳವಾಗಿದೆ. ವೆಚ್ಚಕ್ಕೆ ಸಮಾನ ಅನುಪಾತದಲ್ಲಿ ಯೋಗ್ಯ ಪ್ರಮಾಣದಲ್ಲಿ ಶುಲ್ಕ ವಿಧಿಸವಹುದು. ಆದರೂ ಶುಲ್ಕ ಭರಿಸಲು ಅಶಕ್ತರಾದ ಅರ್ಹ ವಿದ್ಯಾರ್ಥಿಯೊಬ್ಬ ಉನ್ನತ ಶಿಕ್ಷಣದಿಂದ ವಂಚಿತನಾಗಬಾರದು. ಈ ಎಲ್ಲ ನಿರ್ಧಾರಗಳನ್ನು

ಜಾರಿಗೊಳಿಸುವ ಬಗ್ಗೆ ನಿಗಾ ಇಡಲು ವಿಶ್ವವಿದ್ಯಾಲಯ ಅನುದಾನ ಆಯೋಗದ ಅಡಿ ಉನ್ನತ ಅಧಿಕಾರವುಳ್ಳಸಮಿತಿಯೊಂದನ್ನು ರಚಿಸಬೇಕು.

ಬಡ ವಿದ್ಯಾರ್ಥಿಗಳಿಗೆ ಮತ್ತು ಶಿಕ್ಷಣ ಸಂಸ್ಥೆಗಳಿಗೆ ಧನಸಹಾಯ ಮಾಡಲು ವಿಭಿನ್ನ ರೀತಿಯ ವಿದ್ಯಾರ್ಥಿ ವೇತನ ನೀಡಿಕೆಗಾಗಿ ಮತ್ತು ಹಣಕಾಸು ನೆರವಿಗಾಗಿ ರಾಷ್ಟ್ರೀಯ ಶಿಕ್ಷಣ ವಿಕಾಸ ಕೋಶ ಸ್ಥಾಪಿಸಬೇಕು.

ಹೆಚ್ಚಿನ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ವಿದ್ಯಾರ್ಥಿಗಳ ವಿದ್ಯಾರ್ಥಿನಿಲಯಗಳ ಸ್ಥಿತಿ ಅತ್ಯಂತ ದಯನೀಯವಾಗಿದೆ. ಇವುಗಳ ವ್ಯವಸ್ಥೆಯಲ್ಲಿ ಶೀಘ್ರ ಸುಧಾರಣೆ ತರಲು ಕಠಿಣ ಕ್ರಮ ಕೈಗೊಳ್ಳಬೇಕು. ಹಾಗೆಯೇ ಅವಶ್ಯಕ ಹಣ ಹಣಕಾಸು ವ್ಯವಸ್ಥೆ ಮಾಡಬೇಕು.

ಎಲ್ಲ ಪ್ರಕಾರದ ವಿದ್ಯಾರ್ಥಿವೇತನವನ್ನು ಮೌಲ್ಯಸೂಚಕಾಂಕದೊಂದಿಗೆ ಜೋಡಿಸಬೇಕು.

ಪ್ರವೇಶ ಫಾರಂಗಳು, ವಿಭಿನ್ನ ಪ್ರಕಾರಗಳ ಪ್ರವೇಶ ಪರೀಕ್ಷೆಗಳ ಶುಲ್ಕವನ್ನು ಆಯಾ ಬಾಬಿನ ವೆಚ್ಚಕ್ಕೆ ಅನುಗುಣವಾಗಿ ನಿಗದಿಪಡಿಸಬೇಕು.

ವಿಶ್ವವಿದ್ಯಾಲಯಗಳ ಸ್ವಾಯತ್ತತೆ :

ವಿಶ್ವವಿದ್ಯಾಲಯ ಹಾಗೂ ಮಹಾವಿದ್ಯಾಲಯಗಳ ಲೋಕತಾಂತ್ರಿಕ ಕಾರ್ಯಪದ್ಧತಿ ಸರಿಯಾಗಿ ಕಾರ್ಯನಿರ್ವಹಿಸುತ್ತಿಲ್ಲ. ವಿಭಿನ್ನ ಶೈಕ್ಷಣಿಕ ಮಂಡಳಿಗಳ ರಚನೆ ಪ್ರಜಾತಾಂತ್ರಿಕ ಪದ್ಧತಿಯಿಂದ ಆಗುತ್ತಿಲ್ಲ. ಅಥವಾ ಅವುಗಳಿಗೆ ಆ ರೀತಿ ಕಾರ್ಯ ನಿರ್ವಹಿಸಲು ಆಗುತ್ತಿಲ್ಲ. ಇದರಿಂದ ವಿಶ್ವವಿದ್ಯಾಲಯದ ಆಡಳಿತ ಕುಸಿಯುತ್ತಿದ್ದು ಅರಾಜಕತೆ ತಾಂಡವವಾಡುತ್ತಿದೆ. ಕುಲಪತಿಯ ನೇಮಕಾತಿ ರಾಜಕೀಯ ಆಧಾರದ ಮೇಲೆ ನಡೆಯುತ್ತಿರುವುದು ಸರ್ವ ಸಾಮಾನ್ಯವಾಗಿದೆ. ಮಂಡಳಿಗಳಲ್ಲಿ ಸರ್ಕಾರದಿಂದ ನಾಮಕರಣಗೊಂಡ ಸದಸ್ಯರ ಸಂಖ್ಯೆ ಹೆಚ್ಚುತ್ತಿದೆ. ವಿದ್ಯಾರ್ಥಿ ಮತ್ತು ಶಿಕ್ಷಕ ಪ್ರತಿನಿಧಿಗಳ ಸಂಖ್ಯೆ ಕಡಿಮೆಯಾಗುತ್ತಿದೆ. ಶೈಕ್ಷಣಿಕ ಆಡಳಿತವು ರಾಜಕೀಯದಿಂದ ಮುಕ್ತರಾಗಿ ಹಾಗೂ ಪ್ರಜಾತಂತ್ರ ಪದ್ಧತಿಯಲ್ಲಿ ಕಾರ್ಯನಿರ್ವಹಿಸುವಂತೆ ಮಾಡುವುದು ಅತ್ಯಂತ ಅವಶ್ಯಕವಾಗಿದೆ. ಆದ್ದರಿಂದ –

ವಿಶ್ವವಿದ್ಯಾಲಯಗಳ ಸೆನೆಟ್, ಸಿಂಡಿಕೇಟ್‌ನಂಥ ಅಂಗಸಂಸ್ಥಗಳ ರಚನೆ ಅಗತ್ಯವಾಗಿ ಪ್ರಜಾಸತ್ತಾತ್ಮಕ ರೀತಿಯಲ್ಲಿ ನಡೆಯಬೇಕು. ಈ ಅಂಗಸಂಸ್ಥೆಗಳು ಕ್ರಮಬದ್ಧವಾಗಿ ಮುಕ್ತ ಚರ್ಚೆಯ ಮೂಲಕ ನಿರ್ಣಯ ಕೈಗೊಳ್ಳಬೇಕು.

ವಿದ್ಯಾರ್ಥಿ ಸಂಘಟನೆಗಳ ಚುನಾವಣೆಯನ್ನು ಕಡ್ಡಾಯಗೊಳಿಸಬೇಕು. ಇದರಿಂದ ಭ್ರಷ್ಟಾಚಾರ ಮತ್ತು ಲಂಚ ಪ್ರವೃತ್ತಿಗೆ ಕಡಿವಾಣ ಹಾಕುವದರೊಂದಿಗೇ ರಾಷ್ಟ್ರ ಜೀವನದ ವಿಭಿನ್ನ

ಕ್ಷೇತ್ರಗಳಲ್ಲಿ ನೇತೃತ್ವ ವಹಿಸುವ ಸಾಮರ್ಥ್ಯವೂ ವಿಕಾಸವಾಗುತ್ತದೆ. ವಿದ್ಯಾರ್ಥಿ ಸಂಘಟನೆಗಳ ಚುನಾವಣೆ ಮತ್ತು ಕಾರ್ಯ ಪ್ರಣಾಳಿಕೆಗಳ ಸಲುವಾಗಿ ಯೋಗ್ಯ ನೀತಿ ಸಂಹಿತೆ ರಚಿಸಬೇಕು.

ವಿಶ್ವವಿದ್ಯಾಲಯಗಳಿಗೆ ಸ್ವಾಯತ್ತತೆ ಜೊತೆಗೆ ಜವಾಬ್ದಾರಿಯ ಭಾವನೆಯೂ ಅರಳುವಂತೆ ನೋಡಿಕೊಳ್ಳಬೇಕು.

ಪಠ್ಯಕ್ರಮ ಪುನಾರಚನೆ :

ಉನ್ನತ ಶಿಕ್ಷಣದ ಪಠ್ಯಕ್ರಮದಲ್ಲಿನ ಬದಲಾವಣೆ ಇಂದು ಹಿಂದೆಂದಿಗಿಂತಲೂ ಹೆಚ್ಚು ಅವಶ್ಯವಾಗಿದೆ. ಕೆಲವು ವಿಷಯಗಳ ಪಠ್ಯಕ್ರಮ ಸೈದ್ಧಾಂತಿಕ ಪ್ರವಚನಗಳಿಗಷ್ಟೇ ಸೀಮಿತವಾಗಿವೆ. ಅನೇಕ ವರ್ಷಗಳಿಂದ ಪಠ್ಯಕ್ರಮದಲ್ಲಿ ಬದಲಾವಣೆ ಇಲ್ಲದೇ, ಆ ಪಠ್ಯಕ್ರಮ ಇಂದಿನ ಅವಶ್ಯಕತೆಗೆ ಅನುಗುಣವಾಗಿಲ್ಲ. ಹಾಗೆಯೇ ವ್ಯಕ್ತಿಯ ಸಮಾಜದ ಹೊಂದಾಣಿಕೆಯನ್ನು ರೂಪಿಸುವಲ್ಲಿ ವಿಫಲವಾಗಿವೆ. ಆದ್ದರಿಂದ –

ಒಂದು ನಿಶ್ಚಿತ ಕಾಲಾವಧಿಯಲ್ಲಿ ಸಮಾಜದ ಅವಶ್ಯಕತೆಗೆ ಅನುಗುಣವಾಗಿ, ಆಯಾ ಕ್ಷೇತ್ರದಲ್ಲಿನ ಸಂಭಾವ್ಯತೆಗಳನ್ನು ಆಧರಿಸಿ ವ್ಯಾಪಕ ವಿಚಾರ ವಿಮರ್ಶೆಯ ಎಲ್ಲ ವಿಷಯಗಳ ಪಠ್ಯಕ್ರಮ ಪುನಾರಚನೆ ನಿರಂತರವಾಗಿ ಆಧಾರದ ಮೇಲೆ ನಡೆಯುವಂತಾಗಬೇಕು.

ಪಠ್ಯಕ್ರಮದಲ್ಲಿ ಸೈದ್ಧಾಂತಿಕ ತಿಳುವಳಿಕೆಯ ಜೊತೆ ಜೊತೆಗೇ ವ್ಯಾವಹಾರಿಕ ಅನುಭವಕ್ಕೂ ಪ್ರಾಧಾನ್ಯತೆ ದೊರೆಯಬೇಕು. ಹಾಗೆಯೇ ನಾಗರಿಕ ಸುರಕ್ಷಿತತೆ ಮತ್ತು ಸಾಮಾಜಿಕ ಕಾರ್ಯಗಳ ಸೈದ್ಧಾಂತಿಕ ಅಧ್ಯಯನ ಹಾಗೂ ಪ್ರತ್ಯಕ್ಷ ಅನುಭವಗಳಿಕೆಯನ್ನು ಕಡ್ಡಾಯಗೊಳಿಸಬೇಕು.

ಇತ್ತೀಚಿನ ದಿನಗಳಲ್ಲಿ ತಾಂತ್ರಿಕ ಮತ್ತು ವೃತ್ತಿಪರ ಶಿಕ್ಷಣಕ್ಕೆ ಅಧಿಕ ಮಹತ್ವ ದೊರೆಯುತ್ತಿದೆ. ಅದರ ಮಹತ್ವವನ್ನು ಕಡೆಗಣಿಸಲಾಗದಿದ್ದರೂ ನಮ್ಮ ಸಾಮಾಜಿಕ ಮತ್ತು ಸಾಂಸ್ಕೃತಿಕ ಜೀವನದ ಗುಣಾತ್ಮಕ ವಿಕಾಸಕ್ಕಾಗಿ ಮಾನವೀಯ, ಸಾಹಿತ್ಯಕ, ದಾರ್ಶನಿಕ ಹಾಗೂ ವೈಜ್ಞಾನಿಕ ವಿಷಯಗಳಿಗೆ ಸೂಕ್ತ ಮಹತ್ವ ಕೊಡಬೇಕು.

ಎಲ್ಲಾ ವಿಷಯಗಳ ಪಠ್ಯಸಾಮಗ್ರಿ ಭಾರತೀಯ ಭಾಷೆಯಲ್ಲಿಯೂ ದೊರೆಯುವಂತೆ ನೋಡಿಕೊಳ್ಳಬೇಕು. ದೇಶಾದ್ಯಂತ ಎಲ್ಲಾ ವಿಷಯಗಳಲ್ಲಿ ಸಂಸ್ಕೃತ ಆಧರಿತ ತಾಂತ್ರಿಕ ಪದಗಳ ರಚನೆ ಆರಂಭಿಸಬೇಕು. ಪಠ್ಯಕ್ರಮದಲ್ಲಿ ಅವಶ್ಯಕತೆಗೆ ಅನುಸಾರವಾಗಿ ವಿಷಯ ಸಮೂಹಗಳ ನಿಬಂಧನೆಯನ್ನು ಸಡಿಲಗೊಳಿಸಬೇಕು.

ಇತಿಹಾಸ ಅಧ್ಯಯನ ಶಿಕ್ಷಣದ ಅವಿಭಾಜ್ಯ ಅಂಗ. ಇತಿಹಾಸ ಮನುಷ್ಯನ ಭೂತ ಮತ್ತು ವರ್ತಮಾನ ಕಾಲಗಳನ್ನು ಭವಿಷ್ಯದೊಂದಿಗೆ ಜೋಡಿಸುತ್ತದೆ. ಆದರೆ ಭಾರತದಲ್ಲಿ ತಿರುಚಿದ

ಇತಿಹಾಸವನ್ನೇ ವರ್ಷಾನುಗಟ್ಟಲೆಯಿಂದ ಕಲಿಸಿಕೊಡಲಾಗುತ್ತಿದೆ. ಈ ವಿಷಯದಲ್ಲಿ ತಥಾಕಥಿತ ಸಂಪ್ರದಾಯ ನಿರಪೇಕ್ಷವಾದಿಗಳು ಮತ್ತು ಸಾಮ್ಯವಾದಿಗಳು ಅತ್ಯಂತ ನೀಚತನದ ಪಾತ್ರವನ್ನು ವಹಿಸುತ್ತಿದ್ದಾರೆ. ತಿರುಚಿದ ಇತಿಹಾಸವನ್ನು ರಾಷ್ಟ್ರೀಯ ದೃಷ್ಟಿಕೋನದಿಂಧ ಸರಿಪಡಿಸಲು ದೃಢವಾದ ಕ್ರಮ ಕೈಗೊಳ್ಳಬೇಕು. ವಿದ್ಯಾರ್ಥಿಗಳ ಸಂಪೂರ್ಣ ವ್ಯಕ್ತಿತ್ವ ವಿಕಾಸದ ದೃಷ್ಠಿಯಿಂದ ಕ್ರೀಡೆ ಅದರಲ್ಲೂ ಭಾರತೀಯ ಕ್ರೀಡೆಗಳು, ಯೋಗ, ಸಂಗೀತ ಮತ್ತು ಕಲೆಗಳಿಗೆ ಪಠ್ಯಕ್ರಮದಲ್ಲಿ ಸೂಕ್ತ ಪ್ರಾಮುಖ್ಯತೆಯ ಸ್ಥಾನ ದೊರೆಯುಂತಾಗಬೇಕು.

ಉದ್ಯೋಗ :

ಯುವಜನಾಂಗಕ್ಕೆ ಉದ್ಯೋಗ ಒದಗಿಸುವ ದೃಷ್ಟಿಯಿಂದ ದೇಶದ ಅವಶ್ಯಕತೆ, ಲಭ್ಯ ಪ್ರಾಕೃತಿಕ ಸಂಪನ್ಮೂಲಗಳನ್ನು ಗಮನದಲ್ಲಿ ಇರಿಸಿಕೊಂಡು ಸೂಕ್ತವಾದ ಉದ್ಯೋಗ ನೀತಿ ರಚಿಸಬೇಕು. ಸರಕಾರವೇ ರಚಿಸಿದ ಮೊಂಟೆಕ್‌ಸಿಂಗ್ ಅಹ್ಲುವಾಲಿಯ ಉದ್ಯೋಗ ಕಾರ್ಯದಳವು ಸೇವಾಕ್ಷೇತ್ರದಲ್ಲಿ ಶೇ.70 ಉದ್ಯೋಗಾವಕಾಶಕ್ಕೆ ಶಿಫಾರಸ್ಸು ಮಾಡಿತ್ತು. ಸೇವಾಕ್ಷೇತ್ರದ ಉದ್ಯೋಗಾವಕಾಶ ಸಾಮಾನ್ಯವಾಗಿ ಅಸ್ಥಾಯೀ ಸ್ವರೂಪದ್ದಾರುತ್ತದೆ ಮತ್ತು ನಮ್ಮ ದೇಶದ ಸ್ಥಾಯೀ ಉದ್ಯೋಗಾವಕಾಶಗಳನ್ನು ಕೃಷಿ ಹಾಗೂ ಔದ್ಯೋಗಿಕ ಕ್ಷೇತ್ರದಲ್ಲಿ ಗುರುತಿಸಬೇಕೆನ್ನುವ ಮಹತ್ವದ ಅಂಶವನ್ನು ಈ ಕಾರ್ಯದಳ ಅಲಕ್ಷಿಸಿತ್ತು. ಇಂಥ ಶಿಫಾರಸ್ಸುಗಳನ್ನು ತಿರಸ್ಕರಿಸಬೇಕು. ದೇಶದ ಯುವಜನತೆಯನ್ನು ಭಯಾನಕ ನಿರುದ್ಯೋಗದ ಪಿಡುಗಿನಂದ ಮುಕ್ತರನ್ನಾಸಗಿಲು ಮತ್ತು ಅವರ ಸಾಮರ್ಥ್ಯವನ್ನು ಸಮಾಜದ ಅಭಿವೃದ್ಧಿಗೆ ಬಳಸಿಕೊಳ್ಳಲು ತುರ್ತಾಗಿ ಪರಿಣಾಮಕಾರಿ ಕ್ರಮ ಕೈಗೊಳ್ಳಬೇಕು ಆದ್ದರಿಂದ –

ದೇಶದ ಮಾನವ ಸಂಪನ್ಮೂಲದ ಕ್ಷಮತೆ ಮತ್ತು ಇಂದಿನ ಸಮಾಜದ ಅವಶ್ಯಕತೆ ಮನಗಾಣಲು ಸರಿಯಾದ ಸಂಸ್ಥೆಯ ಮೂಲಕ ಸರ್ವೆಕ್ಷಣೆಯನ್ನು ಕೈಗೊಳ್ಳಬೇಕು. ಈ ರೀತಿಯ ಸರ್ವೆಕ್ಷಣೆಯ ಆಧಾರದ ಮೇಲೆ ಶೈಕ್ಷಣಿಕ ಪಠ್ಯಕ್ರಮ, ಉದ್ಯೋಗ ನೀತಿ ಹಾಗೆಯೇ ಆರ್ಥಿಕ ನೀತಿಯ ದಿಸೆಯನ್ನು ನಿರ್ಧರಿಸುವಂತಾಗಬೇಕು.

ಉದ್ಯೋಗವಕಾಶಗಳ ಲಭ್ಯತೆಯ ಅಧ್ಯಯನಕ್ಕಾಗಿ ನಿಯುಕ್ತಿಗೊಳಿಸಿದ ಶ್ರೀ ಎಸ್.ಪಿ.ಗುಪ್ತಾ ವಿಶೇಷ ಆಯೋಗದ ಶಿಫಾರಸ್ಸುಗಳನ್ನು ತಕ್ಷಣ ಜಾರಿಗೆ ತರಬೇಕು.

ಕೃಷಿ ಆಧಾರಿತ ಗ್ರಾಮೀಣ ಉದ್ಯೋಗ ಹಾಗೂ ಕುಟೀರ ಮತ್ತು ಲಘು ಉದ್ಯೋಗಗಳೊಂದಿಗೆ ಯುವಕರನ್ನು ಜೋಡಿಸುವ ಮತ್ತು ಉದ್ಯೋಗವಕಾಶಗಳನ್ನು ಒದಗಿಸಿಕೊಡುವ ಸಲುವಾಗಿ ಬಂಡವಾಳ, ತಾಂತ್ರಿಕ ಮಾಹಿತಿ ಮತ್ತು ಮಾರುಕಟ್ಟೆ ವ್ಯವಸ್ಥೆಗೆ ಸಂಬಂಧಿಸಿದಂತೆ ಸಮರ್ಪಕ ನೀತಿಯನ್ನು ರೂಪಿಸಬೇಕು. ಈ ದೃಷ್ಟಿಯಿಂದ ಪಠ್ಯಕ್ರಮಗಳಲ್ಲೂ ಸೂಕ್ತ ತಿಳುವಳಿಕೆ ಮತ್ತು ಪ್ರಶಿಕ್ಷಣ ನೀಡುವ ವ್ಯವಸ್ಥೆ ಆಗಬೇಕು.

ಯಂತ್ರಕೇಂದ್ರಿತ ಉದ್ಯೋಗಕ್ಕಿಂತ ಶ್ರಮಕೇಂದ್ರಿತ ಉದ್ಯೋಗಕ್ಕೆ ಹೆಚ್ಚು ಮಹತ್ವ ಕೊಡಬೇಕು. ಹಾಗೆಯೇ ಉದ್ಯೋಗ ಸ್ಥಾಪನೆಯೊಂದಿಗೆ ಉದ್ಯೋಗವಕಾಶದ ಯೋಗ್ಯ ಅನುಪಾತವನ್ನು ನಿಗದಿಗೊಳಿಸಬೇಕು. ಅಧಿಕ ಉದ್ಯೋಗ ಸೃಷ್ಟಿಸುವ ಕ್ಷೇತ್ರಗಳಲ್ಲಿಯೇ ಆರ್ಥಿಕ ನಿಯೋಜನೆಗೆ ಆದ್ಯತೆ ನೀಡಬೇಕು.

ಜಾಗತೀಕರಣದ ಹೆಸರಿನಲ್ಲಿ ವಿಶ್ವವ್ಯಾಪಾರ ಸಂಘಟನೆಯ ಒಪ್ಪಂದಗಳಲ್ಲಿ ಅಡಕವಾಗಿರುವ ಉದ್ಯೋಗ ವಿರೋಧಿ ನೀತಿಯಲ್ಲಿ ಬದಲಾವಣೆ ತರಲು ಅಗತ್ಯ ಉಪಕ್ರಮಕ್ಕಾಗಿ ಭಾರತ ಸರಕಾರ ಒತ್ತಡ ತರಬೇಕು. ನಮ್ಮಲ್ಲಿನ ಕರಕುಶಲ ವಸ್ತುಗಳು, ಕೃಷಿ, ಗ್ರಾಮೀಣ ಮತ್ತು ಸಣ್ಣ ಉದ್ದಿಮೆಗಳ ಉತ್ಪನ್ನಗಳಿಗೆ ವಿದೇಶದಲ್ಲಿ ಮಾರುಕಟ್ಟೆ ದೊರಕಿಸಿಕೊಡುವ ಪ್ರಯತ್ನ ಮಾಡಬೇಕು. ಬಂಡವಾಳ ಮತ್ತು ಉತ್ಪಾದನೆಗಳಲ್ಲಿ ಚಲನ ಶೀಲತೆಗೆ ಅವಕಾಶವಿರುವುದಾದರೆ ಶ್ರಮದ ಚಲನ ಶೀಲತೆಯ ಮೇಲೆ ನಿರ್ಬಂಧ ವಿಧಿಸಕೂಡದು. ಹಾಗಿಲ್ಲದಿದ್ದರೆ ಬಂಡವಾಳ ಹೂಡಿಕೆ ಮತ್ತು ಉತ್ಪಾದನೆಯ ಚಲನಶೀಲತೆಯ ಮೇಲೂ ನಿರ್ಬಂಧ ವಿಧಿಸಬೇಕು.

ದೇಶದಲ್ಲಿ ಪಾರಂಪರಿಕ ಉದ್ಯೋಗ ಲಭ್ಯವಿದ್ದರೂ ಕುಶಲ ಕರ್ಮಿಗಳಿಗೆ ಔಪಚಾರಿಕ ಪ್ರಮಾಣಪತ್ರ ಇಲ್ಲದುದರಿಂದ ಅವರಿಗೆ ಕೆಲವೆಡೆ ಮಾನ್ಯತೆ ದೊರೆಯುತ್ತಿಲ್ಲ ಮತ್ತು ಅವರು ಸೇವೆಯ ಅವಕಾಶದಿಂದ ವಂಚಿತರಾಗುತ್ತಿದ್ದಾರೆ. ಕುಶಲ ಕರ್ಮಿಗಳಿಗೆ ಔಪಚಾರಿಕ ಪ್ರಮಾಣಪತ್ರ ನೀಡುವ ವ್ಯವಸ್ಥೆಯಾಗಬೇಕು. ಹಾಗೆಯೇ ಯುವಕರಲ್ಲಿ ಉದ್ಯಮಶೀಲತೆ ಮತ್ತು ಕೌಶಲ್ಯದ ಸಂರಕ್ಷಣೆ, ಸಂವರ್ಧನೆಯ ಪ್ರಯತ್ನ ಮಾಡಬೇಕು.

ಶಿಕ್ಷಣ, ಆರೋಗ್ಯ ಮತ್ತು ಅಭಿವೃದ್ಧಿ ಕಾರ್ಯಗಳಲ್ಲಿ ಕಾಲ ಕಾಲಕ್ಕೆ ಕೈಗೊಳ್ಳುವ ಯೋಜನೆಗಳಲ್ಲಿ ನಿರುದ್ಯೋಗಿ ಯುವಕರನ್ನು ತೊಡಗಿಸಿಕೊಳ್ಳಬೇಕು.

ಆರೋಗ್ಯ ಮತ್ತು ಶಿಕ್ಷಣ ಕ್ಷೇತ್ರಗಳ ಖಾಲಿ ಹುದ್ದೆಗಳನ್ನು ತಕ್ಷಣ ಭರ್ತಿ ಮಾಡಬೇಕು.

ಕೃಷಿಯೋಗ್ಯ ಜಮೀನಿನ ಅತಿದೊಡ್ಡ ಭಾಗ ವಿದ್ಯುತ್, ನೀರು ಮತ್ತು ಯೋಜನೆಗಳ ಕೊರತೆಯಿಂದ ಅನುಪಯುಕ್ತವಾಗಿ ಬಿದ್ದಿದೆ. ಅಸಂಪ್ರದಾಯಿಕ ಶಕ್ತಿಮೂಲಗಳ ವಿಕಾಸದ ಮೂಲಕ ಜಮೀನನ್ನು ಕೃಷಿಗೆ ಬಳಸಬಹುದು. ಇದರಿಂದ ಹೆಚ್ಚಿನ ಜನರಿಗೆ ಉದ್ಯೋಗ ದೊರೆಯುತ್ತದೆ.

ಇತರೆ :

ಪ್ರಾಥಮಿಕ ಶಿಕ್ಷಣಕ್ಕೆ ಆದ್ಯತೆ ನೀಡಿದ ಹೊರತಾಗಿಯೂ ವ್ಯವಹಾರದಲ್ಲಿ ಪ್ರಾಥಮಿಕ ಶಿಕ್ಷಣದ ಗುರಿಯನ್ನು ಸಾಧಿಸಲು ಆಗಿಲ್ಲ. ಈ ದೃಷ್ಟಿಯಿಂದ ಅಡೆತಡೆ ತೊಡೆದುಹಾಕಿ ಅವಶ್ಯಕ ಸೌಲಭ್ಯಗಳನ್ನು ಒದಗಿಸಿ ವಿವಿಧ ಕ್ಷೇತ್ರಗಳಲ್ಲಿ ಕೆಲಸ ಮಾಡುವ ಜನರ ಜೀವನದ ಸ್ಥಿತಿಗತಿ

ಅನುಸರಿಸಿ ಪ್ರಯತ್ನ ಹೆಚ್ಚಿಸಬೇಕು. ಪ್ರಾಥಮಿಕ ಶಿಕ್ಷಣ ಹಂತದಲ್ಲಿ ಒಂದು ಕಡೆ ಸ್ವವಿತ್ತ ಪೋಷಿತ ಆಂಗ್ಲಮಾಧ್ಯಮದ ಶಾಲೆಗಳು ಮತ್ತು ಇನ್ನೊಂದು ಕಡೆ ಸೌಲಭ್ಯ ರಹಿತ ಸರಕಾರಿ ಶಾಲೆಗಳು ಇವುಗಳ ಕಾರಣದಿಂದ ಉತ್ಪನ್ನವಾಗಿರುವ ದ್ವಿವಿಧ ಶಿಕ್ಷಣ ವ್ಯವಸ್ಥೆ ಮತ್ತು ಪರಿಣಾಮ ರೂಪವಾಗಿ ನಿರ್ಮಾಣವಾಗುತ್ತಿರುವ ವರ್ಗ ಬೇಧವನ್ನು ತಡೆಗಟ್ಟಿ ಎಲ್ಲರಿಗೂ ಸಮಾನ ಶಿಕ್ಷಣದ ವ್ಯವಸ್ಥೆಯನ್ನು ಜಾರಿಗೆ ತರಲು ದೃಢವಾದ ಪ್ರಯತ್ನಗಳನ್ನು ಕೈಗೊಳ್ಳಬೇಕು.

ಇಂದಿನ ಪರೀಕ್ಷೆ ಮತ್ತು ಮೌಲ್ಯ ಮಾಪನ ಪದ್ಧತಿಯು ಯೇನಕೇನ ಪ್ರಕಾರದಿಂದ ಪದವಿಯನ್ನು ಪಡೆಯುವ ಎಂಬ ಪ್ರವೃತ್ತಿಗೆ ಉತ್ತೇಜನ ನೀಡುತ್ತದೆ. ಇದರಿಂದ ಭಾರಿ ಪ್ರಮಾಣದಲ್ಲಿ ಭ್ರಷ್ಟಾಚಾರ ನಡೆಯಲು ಕಾರಣವಾಗಿದೆ. ಕೇವಲ ಕೆಲವೇ ಅಂಕಗಳಿಂದಾಗಿ ಯೋಗ್ಯ, ಮುಗ್ಧವಿದ್ಯಾರ್ಥಿಗಳು ಜೀವತೆತ್ತ ಉದಾಹರಣೆಗಳು ಇವೆ. ಪರೀಕ್ಷೆ ಹಾಗೂ ಮೌಲ್ಯ ಮಾಪನ ಪದ್ಧತಿಯಲ್ಲಿ ಅಮೂಲಾಗ್ರ ಬದಲಾವಣೆ ಅವಶ್ಯವಾಗಿ ಆಗಬೇಕು.

ಪಿ.ಯು.ಸಿ. ಹಂತದಲ್ಲಿ ವೃತ್ತಿ ಶಿಕ್ಷಣದ ಮಹತ್ವ ಶಿಕ್ಷಣ ನೀತಿಯಲ್ಲಿ ಪ್ರಸ್ತಾಪಿತವಾಗಿದ್ದರೂ ಪರಿಣಾಮಕಾರಿಯಾಗಿ ಜಾರಿಗೆ ಬಂದಿಲ್ಲ. ಇದು ಸಾಧ್ಯವಾದರೆ ಉನ್ನತ ಶಿಕ್ಷಣದ ಮೇಲಿನ ಒತ್ತಡ ಕಡಿಮೆಯಾಗುತ್ತದೆ. ಮತ್ತು ಸ್ವ-ಉದ್ಯೋಗಕ್ಕೆ ಬೇಕಾದ ಕುಶಲತೆ ಹೆಚ್ಚುತ್ತದೆ. ಆದ್ದರಿಂದ ವೃತ್ತಿಶಿಕ್ಷಣಕ್ಕೆ ಸಾಕಷ್ಟು ಆದ್ಯತೆ ನೀಡಿ ಅದರ ಮೌಲ್ಯ ಹೆಚ್ಚಿಸುವ ಉಪಾಯವನ್ನು ತ್ವರಿತವಾಗಿ ಮಾಡಬೇಕು.

ವಿದೇಶಿ ವಿಶ್ವವಿದ್ಯಾಲಯಗಳು ಮತ್ತು ವಿದೇಶಿ ಶಿಕ್ಷಣ ಸಂಸ್ಥೆಗಳ ಪ್ರವೇಶವನ್ನು ತಡೆಯುವ ದೃಷ್ಟಿಯಿಂದ ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು.

ಮಹಾವಿದ್ಯಾಲಯಗಳಲ್ಲಿ ಶಾಸನ, ಪ್ರಶಾಸನ ಮತ್ತು ಪ್ರಬಂಧಕ ಸಮಿತಿಗಳ ಕಡೆಯಿಂದ ಶಿಕ್ಷಕ ಮತ್ತು ವಿದ್ಯಾರ್ಥಿಗಳ ಪ್ರಜಾತಾಂತ್ರಿಕ ಹಕ್ಕುಗಳನ್ನು ಹತ್ತಿಕ್ಕುವ ಪ್ರಯತ್ನ ನಡೆಯುತ್ತಿದೆ. ಶಿಕ್ಷಕರ ಮತ್ತು ವಿದ್ಯಾರ್ಥಿಗಳ ಸಾಮಾಜಿಕ ಹಾಗೂ ಪ್ರಜಾತಾಂತ್ರಿಕ ಚಟುವಟಿಕೆಗಳಿಗೆ ಮುಕ್ತ ಅವಕಾಶ ಇರುವಂತಾಗಬೇಕು. ಶಿಕ್ಷಣ ಕ್ಷೇತ್ರದಲ್ಲಿನ ವಿಭಿನ್ನ ಆಡಳಿತಾತ್ಮಕ ಹುದ್ದೆಗಳಿಗೆ ನೇಮಕ ಹಾಗೂ ತರಬೇತಿ ನೀಡಲು ಭಾರತೀಯ ಶಿಕ್ಷಣ ಸೇವೆ ಸ್ಥಾಪನೆ ಮಾಡಬೇಕು. ಜಾಗತೀಕರಣದ ಹೆಸರಿನಲ್ಲಿ ವಿಶ್ವವ್ಯಾಪಾರ ಸಂಘಟನೆಯ ಒಪ್ಪಂದದನ್ವಯ ನಡೆಯುತ್ತಿರುವ ಉದ್ಯೋಗ ವಿರೋಧಿ ನೀತಿಯನ್ನು ಸರಕಾರವು ಶೀಘ್ರ ಪುನರ್ ವಿಮರ್ಶಿಸಬೇಕು. ಶಿಕ್ಷಣದಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆಯ ಮೌಲ್ಯಗಳ ಬಗ್ಗೆ ಮಾಹಿತಿ ನೀಡಬೇಕು. ವ್ಯಕ್ತಿಯ ಹಕ್ಕು ಮತ್ತು ಕರ್ತವ್ಯಗಳ ತಿಳುವಳಿಕೆ, ಸಮುದಾಯ ಜೀವನ, ಅಧ್ಯಾಪಕ-ವಿದ್ಯಾರ್ಥಿಗಳ ಸಂಬಂಧ ಮತ್ತು ಕೌಟುಂಬಿಕ ಕಲ್ಪನೆಯ ಜ್ಞಾನವು ಲಭ್ಯವಾಗಬೇಕು. ಎಲ್ಲ ವಿದ್ಯಾರ್ಥಿಗಳಿಗೂ ವಿಶೇಷವಾಗಿ ದೇಶದಿಂದ ಹೊರಹೋಗುವ ವಿದ್ಯಾರ್ಥಿಗಳಿಗಾಗಿ ಭಾರತೀಯ ಇತಿಹಾಸ, ಸಂಸ್ಕೃತಿ, ದರ್ಶನ, ವಿಭಿನ್ನ ಮತಗಳ ತುಲನಾತ್ಮಕ ಅಧ್ಯಯನದ ಪ್ರಾಥಮಿಕ ಜ್ಞಾನ ನೀಡಲು ಪಠ್ಯಕ್ರಮ ರೂಪಿಸಬೇಕು.

ಪರಾಮರ್ಶನ ಗ್ರಂಥಗಳು

01) ಸಿದ್ದಲಿಂಗಸ್ವಾಮಿ 'ವಿದ್ಯಾರ್ಥಿಗಳು, ಉನ್ನತ ಶಿಕ್ಷಣ ಹಾಗೂ ಸಾಮಾಜಿಕ ಚಳುವಳಿಗಳು' ಹೊಸತು, ಸಂಪುಟ 16, ಸಂಚಕೆ–6 ಜನವರಿ 2015. ಪುಟ–171.

02) ಸೌರಭ ಮುಖರ್ಜಿ, "ಕ್ಯಾ ಛಾತ್ರೋಂ ಕೋ ರಾಜನೀತಿ ಕರನಿ ಚಾಹಿಯೆ?", ಛಾತ್ರ ಸಂಕಲ್ಪ ಪ್ರಕಾಶನ, ಕಲ್ಕತ್ತಾ 2009. ಪುಟ–4

03) ಅದೇ, ಪುಟ–5

04) ಅದೇ, ಪುಟ–6

05) ಅದೇ, ಪುಟ–7

06) ಅದೇ, ಪುಟ–7

07) ಅದೇ, ಪುಟ–7

08) ಅದೇ, ಪುಟ–8

09) ಅದೇ, ಪುಟ–9

10) ಅದೇ, ಪುಟ–9

11) ವಿಠಲ ಆರ್. ಬಲಕುಂದಿ 'ರಾಜಕೀಯಕ್ಕೆ ಬೇಕಿದೆ ವಿದ್ಯಾವಂತ ಯುವ ಪಡೆ', ವಿಜಯ ಕರ್ನಾಟಕ, 22 ಅಕ್ಟೋಬರ್, 2014

12) ಪ್ರೇಮಶೇಖರ, 'ವಿದ್ಯಾರ್ಥಿಗಳು ಮತ್ತು ರಾಜಕೀಯ ಬದಲಾವಣೆ' ವಿಜಯವಾಣಿ, ಅಕ್ಟೋಬರ್ 2014

13) ಸಿ.ಜಿ.ಮಂಜುಳಾ 'ಪ್ರೇಮ, ಯುದ್ಧ, ಸುದ್ದಿ ಸ್ಫೋಟದಲ್ಲಿ ಎಲ್ಲಾ ಸರಿ' ಪ್ರಜಾವಾಣಿ, ಸೆಪ್ಟಂಬರ್ 2016

14) ಸೌರಭ ಮುಖರ್ಜಿ "ಕ್ಯಾ ಛಾತ್ರೋಂ ಕೋ ರಾಜನೀತಿ ಕರನಿ ಚಾಹಿಯೇ?" ಛಾತ್ರ ಸಂಕಲ್ಪ ಪ್ರಕಾಶನ, ಕಲ್ಕತ್ತಾ-2009 ಪುಟ-14

15) ಅನಂತ ನಾಯಕ ಎನ್. ಕನ್ನಡ ಪ್ರಭ 17 ಫೆಬ್ರುವರಿ 2016

16) ನಟರಾಜ್ ಹುಳಿಯಾರ್, 'ಹೊಸ ಕಾಲದ ವಿದ್ಯಾರ್ಥಿಗಳ ಹೊಸ ಎಚ್ಚರ' ಪ್ರಜಾವಾಣಿ ಫೆಬ್ರುವರಿ 17, 2016

17) ಬಿ.ವಿ.ವಸಂತಕುಮಾರ 'ಸಮಾಜ ದ್ರೋಹದಿಂದ ದೇಶದ್ರೋಹದೆಡೆ ಎಡಪಂಥೀಯವಾದ' ಕನ್ನಡ ಪ್ರಭ,18 ಫೆಬ್ರುವರಿ 2016

18) ಸೌರಭ ಮುಖರ್ಜಿ, "ಕ್ಯಾ ಛಾತ್ರೋಂ ಕೋ ರಾಜನೀತಿ ಕರನಿ ಚಾಹಿಯೆ?", ಛಾತ್ರ ಸಂಕಲ್ಪ ಪ್ರಕಾಶನ, ಕಲ್ಕತ್ತಾ 2009. ಪುಟ-10

19) ಮುಜಾಫರ್ ಅಸ್ಸಾದಿ 'ಜೆಎನ್‌ಯು ಸಂಸ್ಕೃತಿ ಸಂಕಥನ', ಪ್ರಜಾವಾಣಿ, 24 ಫೆಬ್ರುವರಿ 2016

20) ಪ್ರಥ್ವಿದತ್ತ ಚಂದ್ರಶೋಭಿ 'ಜೆಎನ್‌ಯು; ಮಾನವ ಪ್ರೇಮದ ಮೂಲಸೆಲೆ', ಪ್ರಜಾವಾಣಿ ಫೆಬ್ರುವರಿ 26 2016

21) ಎಸ್.ಸುರೇಶಕುಮಾರ 'ದೇಶವನ್ನು ನಾಶ ಮಾಡುವ ಮನಸ್ಥಿತಿಗೆ ದೊರಕುತ್ತಿರುವ ಮನ್ನಣೆ', ಕನ್ನಡ ಪ್ರಭ, ಫೆಬ್ರುವರಿ 20, 2016

22) ಎನ್.ರವಿಕುಮಾರ 'ಕಮುಯನಿಸಂ ಸಮಸ್ಯೆ ಸೃಷ್ಟಿಸುತ್ತದೆ, ಎಂದೂ ಪರಿಹಾರ ಹೇಳುವುದಿಲ್ಲ', ಕನ್ನಡ ಪ್ರಭ, ಫೆಬ್ರುವರಿ 22, 2016

23) ನಿವೇದಿತಾ ಮೆನನ್ 'ವೈ ಅವರ್ ಯುನಿವರ್ಸಿಟೀಜ್ ಆರ್‌ಇರ್ನ ಫಾರಮೆಂಟ್', ದಿ ಹಿಂದೂ ಫೆಬ್ರುವರಿ 15, 2016

24) ಎಸ್.ನಾಗರತ್ನಮ್ಮ "ಕರ್ನಾಟಕದಲ್ಲಿ ಅಸಹಕಾರ ಮತ್ತು ನಾಗರಿಕ ಕಾನೂನು ಭಂಗ ಚಳುವಳಿ" ದೇಸಿ ಪುಸ್ತಕ, ವಿಜಯನಗರ ಬೆಂಗಳೂರು, 2009 ಪುಟ-28

25) ಅದೇ, ಪುಟ–29

26) ಅದೇ, ಪುಟ–30

27) ಅದೇ, ಪುಟ–30

28) ಅದೇ, ಪುಟ–31

29) ಅದೇ, ಪುಟ–100

30) ಅನೀಲ ರಜಿಮ್ವಾಲೆ "ಹಿಸ್ಟರಿ ಆಫ್ ಸ್ಟೂಡೆಂಟ್ ಮೂವ್‌ಮೆಂಟ್ ಇನ್ ಇಂಡಿಯಾ" ಮನಕ ಪಬ್ಲಿಕೇಷನ್ಸ್, ದೆಹಲಿ, 2001 ಪುಟ–

31) ಶ್ರೀಧರ "ಭಾರತದ ಕ್ರಾಂತಿ ಮತ್ತು ಮಾವೋವಾದಿ ಚಳುವಳಿ", ಚಾರು ಪ್ರಕಾಶನ, ಬೆಂಗಳೂರು, 2012. ಪುಟ–150

32) ಅದೇ, ಪುಟ–11

33) ಮುಜಾಫರ್ ಅಸ್ಸಾದಿ 'ಕರ್ನಾಟಕದಲ್ಲಿ ಐಡೆಂಟಿಟಿ ರಾಜಕೀಯ, ರೈತ, ರೈತ ಹೋರಾಟ ಹಾಗೂ ಸಾಮಾಜಿಕ ಚಳುವಳಿ" ಪ್ರಗತಿ ಗ್ರಾಫಿಕ್ಸ್, ಬೆಂಗಳೂರು, 2009. ಪುಟ 97 ಮತ್ತು 99

34) 'ಶೈಕ್ಷಣಿಕ ಪರಿವರ್ತನೆ–ದೇಶವ್ಯಾಪಿ ಆಂದೋಳನ' ಬೇಡಿಕೆ ಪತ್ರ, ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್, ಕರ್ನಾಟಕ

ಅಧ್ಯಾಯ–3
ಕ್ಷೇತ್ರ ಅಧ್ಯಯನದ ಕಿರುಪರಿಚಯ

ದೇಶದ ಅನೇಕ ಸುಂದರ ರಾಜ್ಯಗಳಲ್ಲಿ ನಮ್ಮ ಕರ್ನಾಟಕವೂ ಒಂದು. ಎರಡು ಸಹಸ್ರ ವರ್ಷಗಳಿಗೂ ಹೆಚ್ಚಿನ ಇತಿಹಾಸ ಹೊಂದಿರುವ ರಾಜ್ಯ ಕರ್ನಾಟಕ, ಬನವಾಸಿ,ಕದಂಬರು, ತಲಕಾಡಿನ ಗಂಗರು, ಬಾದಾಮಿ ಚಾಲುಕ್ಯರು, ಮಳಖೇಡದ ರಾಷ್ಟ್ರಕೂಟರು, ವಿಜಯ ನಗರದ ಅರಸರು, ಮೈಸೂರಿನ ಒಡೆಯರು ಆಳಿದ ನಾಡಿದು. ಕಲೆ, ಸಾಹಿತ್ಯ ಸಂಸ್ಕೃತಿಯ ಬೆಳವಣಿಗೆಗೆ ಈ ಅರಸರು ಕೊಟ್ಟ ಕೊಡುಗೆ ಅಪಾರ.ಪೇಶ್ವೆ ಮತ್ತು ಟಿಪ್ಪು ಪತನದ ನಂತರ ಈ ನಾಡು ಬ್ರಿಟಿಷರ ಆಳ್ವಿಕೆಗೊಳಪಟ್ಟಿತು. ಸ್ವಾತಂತ್ರ್ಯ ಚಳುವಳಿಯ ಬೆನ್ನಲ್ಲೇ ಕರ್ನಾಟಕ ಏಕೀಕರಣ ಆಂದೋಲನವೂ ನಡೆಯಿತು. 1956 ರ ನವೆಂಬರ 1 ರಂದು ಹೊಸ ಏಕೀಕೃತ ಮೈಸೂರು ರಾಜ್ಯ ಉದಯವಾಯಿತು. 1973 ರಲ್ಲಿ ಅಂದಿನ ಮುಖ್ಯಮಂತ್ರಿ ದೇವರಾಜ ಅರಸರ ಕಾಲದಲ್ಲಿ ಮೈಸೂರು ರಾಜ್ಯಕ್ಕೆ "ಕರ್ನಾಟಕ" ಎಂದು ಪುನರ್ ನಾಮಕರಣ ಮಾಡಲಾಯಿತು. (ಕರ್ನಾಟಕ ರೋಡ ಅಟ್ಲಾಸ್, ಪಾರು ಪ್ರಕಾಶನ, ಸ್ಟೇಷನ್ ರೋಡ, ಗದಗ)

ಸ್ವತಂತ್ರ ಭಾರತದ 29 ರಾಜ್ಯಗಳಲ್ಲಿ ಕರ್ನಾಟಕವೂ ಒಂದು, ಇದು ಭಾರತದ ದಕ್ಷಿಣಕ್ಕಿದ್ದು ಆಂಧ್ರ ಪ್ರದೇಶ, ಮಹಾರಾಷ್ಟ್ರ, ತಮಿಳು ನಾಡು, ಕೇರಳ ಹಾಗೂ ಗೋವಾ ರಾಜ್ಯಗಳು ಕರ್ನಾಟಕದ ಮೇರೆಗಳು. ರಾಜ್ಯದ ಪಶ್ಚಿಮದಲ್ಲಿ ಕರಾವಳಿ ಇದೆ. ಕರ್ನಾಟಕವನ್ನು ಮುಖ್ಯವಾಗಿ ಬಯಲು ಪ್ರದೇಶ, ಕರಾವಳಿ ಪ್ರದೇಶ ಹಾಗೂ ಮಲೆನಾಡು ಪ್ರದೇಶವೆಂದು ಸ್ಥೂಲವಾಗಿ ವಿಂಗಡಿಸಲಾಗಿದೆ. ಕರ್ನಾಟಕದ ಬಯಲು ಪ್ರದೇಶದಲ್ಲಿರುವ ಉತ್ತರ ಬಯಲೇ ಹೈದ್ರಾಬಾದ–ಕರ್ನಾಟಕ. ಹೈದ್ರಾಬಾದ – ಕರ್ನಾಟಕದ ಗಡಿಗಳೆಂದರೆ ಬಿಜಾಪೂರ, ಬಳ್ಳಾರಿ, ಬಾಗಲಕೋಟ, ಗದಗ ಜಿಲ್ಲೆಗಳು ಜೊತೆಗೆ ಆಂಧ್ರಪ್ರದೇಶ ಮತ್ತು ಮಹಾರಾಷ್ಟ್ರ ರಾಜ್ಯಗಳು. ಹೈದ್ರಾಬಾದ ನಿಜಾಮನು ಆಳಿದ ಕೊಪ್ಪಳ, ರಾಯಚೂರ, ಗುಲಬರ್ಗಾ ಮತ್ತು ಬೀದರ ಜಿಲ್ಲೆಗಳಿಗೆ ಹೈದ್ರಾಬಾದ–ಕರ್ನಾಟಕ ಎಂದು ಹೆಸರು.

1947 ಅಗಸ್ಟ 15 ರಂದು ಇಡೀ ದೇಶ ಸ್ವತಂತ್ರವಾದರೂ ನಮಗೆ ಸ್ವಾತಂತ್ರ್ಯ ಲಭಿಸಿದ್ದು 13 ತಿಂಗಳ ನಂತರ, ವಿಶಾಲ ಕರ್ನಾಟಕದಲ್ಲಿ ನಾವು ಒಂದಾದದ್ದು 1956 ರಲ್ಲಿ. ಹೀಗಾಗಿ ನಿಜಾಮನ ಆಳ್ವಿಕೆಯಲ್ಲಿ ಒಳಪಟ್ಟ ನಮ್ಮ ಈ 5 ಜಿಲ್ಲೆಗಳ (ಬೀದರ, ಗುಲ್ಬರ್ಗ, ಯಾದಗಿರಿ, ರಾಯಚೂರು ಮತ್ತು ಕೊಪ್ಪಳ) ಭಾಗವನ್ನು ಹೈದ್ರಾಬಾದ ಕರ್ನಾಟಕ ಎಂದು ಗುರುತಿಸಿದರು. ಅಷ್ಟೇ ಅಲ್ಲದೆ ಇಂದಿಗೂ ಇದು ಕರ್ನಾಟಕದ ಇತರ ಭಾಗಗಳಿಗಿಂತ ಭಿನ್ನವಾಗಿದೆ. ಗುಲಬರ್ಗಾ ಜಿಲ್ಲೆ ಹೈದ್ರಾಬಾದ ಕರ್ನಾಟಕದ ಮುಖ್ಯ ವಿಭಾಗೀಯ ಕೇಂದ್ರವಾಗಿ.

ಈ ಕೇಂದ್ರದಡಿ ಗುಲಬರ್ಗಾ, ಬೀದರ, ರಾಯಚೂರ ಮತ್ತು ಕೊಪ್ಪಳ ಜಿಲ್ಲೆಗಳು ಬರುತ್ತವೆ. ಈ ಜಿಲ್ಲೆಯನ್ನು ಕಲಬುರಗಿ ಎಂದು ಕರೆಯುತ್ತಾರೆ. ಇದು ಕನ್ನಡ ಸಾಹಿತ್ಯದ ತವರು ಜಿಲ್ಲೆ. ಹೇಗೆಂದರೆ "ಕವಿರಾಜ ಮಾರ್ಗ" ರಚಿತವಾದದ್ದು ಇಲ್ಲಿಯೆ ಮತ್ತು ವಚನ ಸಾಹಿತ್ಯದ ಪ್ರಥಮ ದಾಖಲಾತಿಯು ಈ ಜಿಲ್ಲೆಗೆ ಸೇರಿದೆ. ಈ ಜಿಲ್ಲೆಯ ಸಮತಟ್ಟಾದ ಪ್ರದೇಶವು $76^0.04$ ಮತ್ತು 77^0 42^0 ಪೂರ್ವ ರೇಖಾಂಶ ಹಾಗು 16^0 12^0 ಮತ್ತು 17^0 46^0 ಉತ್ತರ ಅಕ್ಷಾಂಶ ಇವುಗಳ ನಡುವೆ ಹರಡಿಕೊಂಡಿದೆ. ಈ ಜಿಲ್ಲೆಯ ವಾಯುವ್ಯ ಭಾಗದಲ್ಲಿ ಮಹಾರಾಷ್ಟ್ರ ರಾಜ್ಯದ ಸೊಲ್ಲಾಪೂರ ಮತ್ತು ಉಸ್ಮಾನಾಬಾದ ಜಿಲ್ಲೆಗಳ ಪ್ರದೇಶವು ಬರುತ್ತದೆ. ಪೂರ್ವ ಭಾಗದಲ್ಲಿ ಆಂಧ್ರ ಪ್ರದೇಶದ ಮೇದಕ ಮತ್ತು ಮಹಬೂಬ್ ನಗರ ಜಿಲ್ಲೆಗಳ ಗಡಿಯನ್ನು ಪಡೆದಿದೆ. ಉತ್ತರದಲ್ಲಿ ಬೀದರ ಜಿಲ್ಲೆ ಇದೆ . ದಕ್ಷಿಣದಲ್ಲಿ ರಾಯಚೂರು ಜಿಲ್ಲೆ ಇದೆ. ಮತ್ತು ಪಶ್ಚಿಮದಲ್ಲಿ ವಿಜಾಪುರ ಜಿಲ್ಲೆ ಸುತ್ತುವರೆದಿದೆ. ದಕ್ಷಿಣ ಭಾಗದಲ್ಲಿ ಕೃಷ್ಣಾನದಿಯು ಗುಲಬರ್ಗಾ ಮತ್ತು ರಾಯಚೂರು ಜಿಲ್ಲೆಗಳ ಎಲ್ಲೆಯಾಗಿ ಪ್ರವಹಿಸುತ್ತದೆ. ಪಶ್ಚಿಮ ಭಾಗದಲ್ಲಿ ಭೀಮಾ ನದಿಯು ಸ್ವಲ್ಪ ದೂರದವರೆಗೆ ಗುಲಬರ್ಗಾ ಹಾಗೂ ಬಿಜಾಪೂರ ಜಿಲ್ಲೆಗಳ ಮಧ್ಯ ವರ್ತಿಯಾಗಿ ಹರಿಯುತ್ತದೆ. ಗುಲಬರ್ಗಾ ಮಹಾನಗರವು ಬೆಂಗಳೂರಿನಿಂದ ಉತ್ತರಕ್ಕೆ ರಸ್ತೆ ಮಾರ್ಗವಾಗಿ 612 ಕಿ.ಮೀ ರೈಲು ಮಾರ್ಗವಾಗಿ 643 ಕಿ.ಮೀ ದೂರದಲ್ಲಿದೆ. ಇದು ಬೆಂಗಳೂರು ಮುಂಬಯಿ ಮಾರ್ಗದ ಮಧ್ಯದಲ್ಲಿದ್ದು ದಿನಾಲೂ ಸುಮಾರು 18 ರಿಂದ 22 ರೈಲುಗಳು ಸಂಚಾರವಿದೆ. ಹೀಗಾಗಿ ಇದು ವ್ಯಾಪಾರ ಕೇಂದ್ರವೂ ಹೌದು. ಜೊತೆಗೆ ಶಿಕ್ಷಣ ಕೇಂದ್ರವೂ ಹೌದು. ಈ ಜಿಲ್ಲೆಯಲ್ಲಿ ರಾಷ್ಟ್ರಕೂಟರು, ಬಹಮನಿ ಸುಲ್ತಾನರು, ಸುರಪುರದ ನಾಯಕರು ಹೀಗೆ ಅನೇಕ ರಾಜಮನೆತನಗಳು ಆಳಿ ಹೋಗಿದ್ದಾರೆ. ಸಾಮಾಜಿಕವಾಗಿ, ಐತಿಹಾಸಿಕವಾಗಿ, ಸಾಂಸ್ಕೃತಿಕವಾಗಿ ಈ ಜಿಲ್ಲೆಯು ತುಂಬಾ ಶ್ರೀಮಂತವಾಗಿದೆ.

ಐತಿಹಾಸಿಕ :

ಇತಿಹಾಸ ಪೂರ್ವ:

ಈ ಜಿಲ್ಲೆಯಲ್ಲಿ ಹರಿಯುವ ಕೃಷ್ಣಾ ಮತ್ತು ಭೀಮಾ ನದಿಯು ಪುರಾಣ ಕಾಲದಿಂದಲೂ ಪವಿತ್ರ ನದಿಗಳಾಗಿದ್ದು ಅನೇಕ ಘಟನೆಗಳಿಗೆ ಕಾರಣವಾಗಿವೆ. ನರೋನಾ ಎಂಬ ಊರಿಗೆ ಅಗಸ್ತ್ಯ ಮುನಿಯೂ, ಅಯೋಧ್ಯೆಯ ಶ್ರೀ ರಾಮಚಂದ್ರನೂ ಬಂದಿದ್ದರೆಂದು ಐತಿಹ್ಯಗಳಿವೆ. ಜೇವರ್ಗಿ ತಾಲೂಕು, ಭೀಮಾ ದಂಡೆಯ ಅನೇಕ ಸ್ಥಳಗಳಲ್ಲಿ ಹಾಗೂ ಶೋರಾಪುರ ತಾಲೂಕಿನ ರಾಜನ ಕೊಲ್ಲೂರು ಗ್ರಾಮಗಳಲ್ಲಿ ಶಿಲಾಯುಗದ ಮಾನವನು ವಾಸಿಸುತ್ತಿದ್ದ ಬಗ್ಗೆ ಕುರುಹುಗಳಿವೆ.

ಇತಿಹಾಸ:

ಈ ಜಿಲ್ಲೆಗೆ ಮೊದಲು " ಕಲುಬುರಿಗೆ" (12–13 ನೇ ಶತಮಾನದ ಚಿನಮಳ್ಳಿ ಶಿಲಾಶಾಸನ), "ಕಲಬುರಗೆ" ಹಾಗೂ ಕಲಬುರಿಗೆ (1537 ರ ಶಿರವಾಳದ ಶಿಲಾಶಾಸನ) ಎಂದಿದ್ದು, ವಿಜಯನಗರಕ್ಕೆ ಬಂದಿದ್ದ ಪರ್ಷಿಯನ್ ರಾಯಭಾರಿ ದಾಖಲಿಸಿದಂತೆ "ಕಲ್‌ಬುರ್ಗ್" ಎಂದು ರೂಢಿಯಲ್ಲಿ ಬಂದಿತು. ಮುಂದೆ ಅದೇ ಗುಲ್ಬರ್ಗಾ, ಆಗಿರುವ ಸಾಧ್ಯತೆ ಇದೆ. ಮೌರ್ಯರ ಅರಸೊತ್ತಿಗೆ ಈ ಜಿಲ್ಲೆಯಲ್ಲಿತ್ತು ಎಂದು ನಂಬಬಹುದಾದ ಕೆಲವು ಸಾಕ್ಷಾಧಾರಗಳಿವೆ. ಸನ್ನತಿಯ ಶಿಲಾಶಾಸನದ ಪ್ರಕಾರ ಈ ಜಿಲ್ಲೆಯು ಮೌರ್ಯರ ನಂತರ ಶಾತವಾಹನರ ಅಧೀನದಲ್ಲಿತ್ತು. ಸುಮಾರು 200ನೇ ಇಸ್ವಿಯ ಹೊತ್ತಿಗೆ ವಾಕಾಟಕರು ಇಲ್ಲಿ ಪ್ರಭುಗಳಾದರು. ಮುಂದೆ ಬಾದಾಮಿ ಚಾಲುಕ್ಯರು (5ನೇ ಶತಮಾನ ಕಾಲ) ಈ ನಾಡಿಗೆ ಅಧಿಪತಿಗಳಾದರು. 744 ರ ಸುಮಾರಿಗೆ ರಾಷ್ಟ್ರಕೂಟ ದಂತಿದುರ್ಗನು ಈ ಜಿಲ್ಲಾ ಪ್ರಾಂತವನ್ನು ಆಕ್ರಮಿಸಿದನು. ಜಿಲ್ಲೆಯಲ್ಲಿನ ಮಾನ್ಯ ಖೇಟವು (ಈಗಿನ ಮಳಖೇಡ) ರಾಷ್ಟ್ರಕೂಟರ ರಾಜಧಾನಿ ಆಗಿತ್ತು. 973 ರಲ್ಲಿ ಚಾಲುಕ್ಯ ತೈಲಪನು ರಾಷ್ಟ್ರಕೂಟರನ್ನು ಸೋಲಿಸಿ ಈ ಪ್ರದೇಶಕ್ಕೆ ಅಧಿಪತಿಯಾದನು. ಅವರ ರಾಜಧಾನಿ ಬಸವ ಕಲ್ಯಾಣವಾಗಿತ್ತು. ಇವರ ಆಳಿಕೆಯ ಮಧ್ಯದಲ್ಲಿ ಕಲಚೂರಿ ಅರಸರು ರಾಜ್ಯವನ್ನು ವಶಪಡಿಸಿಕೊಂಡಿದ್ದರು. ಸೇಮಣರು (ದೇವಗಿರಿ ಯಾದವರು) ಈ ಜಿಲ್ಲೆಯನ್ನು ಅಂಕಿತದಲ್ಲಿಟ್ಟುಕೊಂಡಿದ್ದರು. 14ನೇ ಶತಮಾನದಲ್ಲಿ ದೆಹಲಿಯ ಅಲ್ಲಾವುದ್ದೀನ್ ಖಿಲ್ಜಿಯ ಸೇನಾ ನಾಯಕ ಮಲ್ಲಿಕ್ ಕಾಫರನು ದಕ್ಷಿಣ ಭಾರತದ ಭಾಗಗಳನ್ನು ಹಿಡಿದುಕೊಂಡನು. ಗುಲ್ಬರ್ಗಾ ಜಿಲ್ಲೆಯು ಇದರಲ್ಲಿ ಸೇರಿದ್ದು (1294–1347) ಮುಸ್ಲಿಮರ ಆಡಳಿತಕ್ಕೆ ಒಳಪಟ್ಟಿತು. ಸ್ಥಳೀಯ ಸರದಾರ ಹಸನ ಗಂಗು ಬಹಮನಿ ಎಂಬುವವರು ದೌಲತಾಬಾದಿನ (ದೇವಗಿರಿ) ನಾಸಿರ–ಉದ್–ದೀನ್ ದೊರೆಯನ್ನು ಧೀಕ್ಕರಿಸಿ ತಾನೇ ಜಾಫರಖಾನ್ ಎಂಬ ಹೆಸರಿನಿಂದ ಸ್ವತಂತ್ರನಾದನು. ಹೀಗೆ ಬಹಮನಿ ಸಾಮ್ರಾಜ್ಯ ಆರಂಭವಾಯಿತು. (1347) 1424 ರವರೆಗೆ ಗುಲ್ಬರ್ಗಾ ನಗರವು ಬಹಮನಿ ರಾಜ್ಯದ ರಾಜಧಾನಿಯಾಗಿತ್ತು. ನಂತರ, ಜಿಲ್ಲೆಯ ಬಿಜಾಪೂರದ ಆದಿಲಶಾಹಿ, ಆ ಮೇಲೆ ಮೊಘಲರ ಆಡಳಿತದಲ್ಲಿರುತ್ತದೆ. 1724 ರಲ್ಲಿ ಹೈದ್ರಾಬಾದಿನ ನಿಜಾಮ್ ಅವರ ಆಡಳಿತಕ್ಕೆ ಒಳಪಟ್ಟಿತು. 1947 ರಲ್ಲಿ ನಡೆದ ಪೋಲಿಸ್ ಕಾರ್ಯಾಚರಣೆಯ ಫಲವಾಗಿ ನಿಜಾಮನ ರಾಜ್ಯವನ್ನು ಭಾರತದ ಗಣರಾಜ್ಯದಲ್ಲಿ ಸೇರಿಸಲಾಯಿತು. 1956 ರ ರಾಜ್ಯಗಳ ಪುನರಾರಚನೆಯ ಕಾಲದಲ್ಲಿ ಜಿಲ್ಲೆಯು ಕರ್ನಾಟಕದ ಭಾಗವಾಯಿತು. (ತ್ರಿಭುವನ್ ಸ್ಕೂಲ್ ಅಟ್ಲಾಸ್, ಪ್ರಕಾಶಕರು–ಪ್ರೋಟಾನ್ ಸೆಲ್ಯೂಕ್ಷನ್ಸ್ ಲಿಮಿಟೆಡ್ 666, 1 ನೇ ಮಹಡಿ, 38 ನೇ ಅಡ್ಡರಸ್ತೆ, 15ನೇ ಮುಖ್ಯರಸ್ತೆ, ಜಯನಗರ 4ನೇ 'ಟಿ' ಬಡಾವಣೆ ಬೆಂಗಳೂರು–560041) ಸ್ವಾತಂತ್ರ್ಯ ಹೋರಾಟದಲ್ಲೂ ಕೂಡ ಈ ಭಾಗದ ಅನೇಕ ಜನರು ಹೋರಾಟ ಮಾಡಿದ್ದಾರೆ ಅವರಲ್ಲಿ

ವೆಂಕಟಪ್ಪ ನಾಯಕ ಸುರಪುರ (ಬ್ರಿಟಿಷರ ಮತ್ತು ನಿಜಾಮನ ವಿರುದ್ಧ) ರಮಾನಂದ ತೀರ್ಥ, ಸರ್ದಾರ್ ಶರಣಗೌಡ, ಚನ್ನಬಸಪ್ಪ ಕುಳಗೇರಿ, ದೇವಿಂದ್ರಪ್ಪ ಮಾಸ್ತರ್ ಸಿಂದಗಿ(ಬಿ) (ನಿಜಾಮನ ವಿರುದ್ದ) ಕರಬಸಪ್ಪ ಹರಸೂರ/ಶ್ರೀ ಸರಡಗಿ (ನಿಜಾಮನ ವಿರುದ್ಧ) ಮುಂತಾದವರು ಹೋರಾಟ ಮಾಡಿ ಹೈದರಾಬಾದ ನಿಜಾಮರ ವಿರುದ್ಧ ಹಾಗೂ ಬ್ರಿಟಿಷರ ವಿರುದ್ಧ ಜಯ ಸಾಧಿಸಿದ್ದಾರೆ. ಕಾರಣ ಈ ಭಾಗ ಬಹುದಿನಗಳ ಕಾಲ ನಿಜಾಮನ ಆಡಳಿತಕ್ಕೆ ಒಳಪಟ್ಟಿತ್ತು. ಹೈದರಾಬಾದ ಕರ್ನಾಟಕದಲ್ಲಿ ಜರುಗಿದ ವಿಮೋಚನಾ ಇತಿಹಾಸವನ್ನು ಮೊದಲ ಬಾರಿಗೆ ಸಂಶೋಧನೆ ಮಾಡಿ ಡಾ.ಬಿ.ಸಿ. ಮಹಾಬಲೇಶ್ವರಪ್ಪ ಅವರು ಮಹದುಪಕಾರ ಮಾಡಿದ್ದಾರೆ. ಅನಂತರ ಇಲ್ಲಿ ಪ್ರತಿವರ್ಷ ಸೆಪ್ಟೆಂಬರ 17 ರಂದು ವಿಮೋಚನಾ ದಿನವನು ಆಚರಿಸಲಾಗುತ್ತದೆ. (ಕೃಪೆ –ಅಂತರ್ಜಾಲ)

ಭೌಗೋಳಿಕ ಸ್ಥಿತಿಗತಿ :

ವಿಸ್ತೀರ್ಣದಲ್ಲಿ ಅತ್ಯಂತ ದೊಡ್ಡ ಜಿಲ್ಲೆ ಕಲಬುರಗಿ 16.224 ಚದರ ಕಿ.ಮೀ ಹೊಂದಿರುವ ಗುಲಬರ್ಗಾ ಜಿಲ್ಲೆಯು ಗುಲ್ಬರ್ಗಾವನ್ನು ಜಿಲ್ಲಾ ಕೇಂದ್ರವಾಗಿರಿಸಿಕೊಂಡಿದೆ. ರಾಜ್ಯದ ಒಟ್ಟು ವಿಸ್ತೀರ್ಣದಲ್ಲಿ ಶೇ. 8.46 ಪ್ರದೇಶವನ್ನು ಈ ಜಿಲ್ಲೆ ಹೊಂದಿದೆ. ತೊಗರಿ ಬೆಳೆಗೆ ಹೆಸರಾದ ಜಿಲ್ಲೆ ರಾಜ್ಯಗಳ ಪುನರ್ವಿಂಗಡನೆಗೆ ಮುನ್ನ ಹಿಂದಿನ ಹೈದರಾಬಾದ ರಾಜ್ಯದ ಭಾಗವಾಗಿತ್ತು. ಇದು ಸಿಮೆಂಟ ಸ್ಥಾವರ, ತೊಗರಿಯ ಕಣಜ, ಶಿಲಾ ನಿಕ್ಷೇಪ, ಗುಲಬರ್ಗಾ ಜಿಲ್ಲೆಯಲ್ಲಿ ಒಂದು ವಿಶ್ವವಿದ್ಯಾಲಯ, ದೂರದರ್ಶನ ಕೇಂದ್ರ, ಆಕಾಶವಾಣಿ ಕೇಂದ್ರ, ವಿಜ್ಞಾನ ಕೇಂದ್ರ ಮತ್ತು ಕೃಷಿ ಸಂಶೋಧನಾ ಕೇಂದ್ರವೂ ಇದೆ. ಇದು ಹಲವಾರು ದೃಷ್ಟಿಕೋನದಿಂದ ಅತ್ಯಂತ ಶ್ರೇಷ್ಠ ಜಿಲ್ಲೆಯೆಂದು ಪರಿಗಣಿಸಬೇಕಾಗಿದೆ. ಈ ಜಿಲ್ಲೆಯಲ್ಲಿ ಒಟ್ಟು 10 ತಾಲೂಕುಗಳಿವೆ. ಯಾದಗೀರಿ ಕೂಡ ಕಲಬುರಗಿ ಜಿಲ್ಲೆಯ ಒಂದು ತಾಲೂಕು ಆಗಿತ್ತು. ಆದರೆ 10 ಎಪ್ರಿಲ್ 2010 ಕ್ಕೆ ಯಾದಗೀರ್, ಜಿಲ್ಲೆಯಾಗಿ ಘೋಷಿತವಾಯಿತು. ಯಾದಗಿರ್ ಜಿಲ್ಲೆಯಲ್ಲಿ ಸುರಪುರ ಹಾಗೂ ಶಹಾಪುರ ತಾಲೂಕುಗಳನ್ನು ಕೂಡಿಸಲಾಯಿತು. ಡೆಕ್ಕನ್ ಟ್ರಾಪು ಶಿಲೆಗಳಿಂದಾಗಿ ಜಿಲ್ಲೆಯು ಬಹುತೇಕ ಸಮತಟ್ಟಾದ ಪ್ರದೇಶವಾಗಿದೆ. ಮಹಾರಾಷ್ಟ್ರದಿಂದ ಜಿಲ್ಲೆಯನ್ನು ಪ್ರವೇಶಿಸುವ ಬಾಲಘಾಟ ಶ್ರೇಣಿಗಳು ಆಗ್ನೇಯದ ಕಡೆ ಹೋಗುತ್ತವೆ. ಶಹಾಪುರದ ಹತ್ತಿರ ಮಹಮದಪುರ ಬೆಟ್ಟವಿದೆ. ಸುರಪುರ, ಯಾದಗಿರ, ಸೇಡಂ ತಾಲ್ಲೂಕುಗಳಲ್ಲಿ ಹೆಚ್ಚು ಎತ್ತರವಿಲ್ಲದ ಬೆಟ್ಟ, ಗುಡ್ಡಗಳಿವೆ. ಈ ಜಿಲ್ಲೆಯು ಸಾಮಾನ್ಯವಾಗಿ ಉತ್ತರದಿಂದ ದಕ್ಷಿಣದ ಕಡೆಗೆ ಇಳಿಜಾರಾಗಿದೆ.

ಪರಿಸರ ಮತ್ತು ಮಳೆ:

ಈ ಜಿಲ್ಲೆಯು ಶುಷ್ಕ ಇದ್ದು ಕಡಿಮೆ ಮಳೆಯಾಗುವ ಪ್ರದೇಶವಾಗಿದೆ. ಬರಗಾಲ ಪೀಡಿತವಿದ್ದು, ನೈರುತ್ಯ ಮಾನ್ಸೂನ್ ಮಳೆಯನ್ನೇ ಅವಲಂಬಿಸಿರುವ ಜಿಲ್ಲೆಯಾಗಿದೆ. ವಾರ್ಷಿಕ ಸರಾಸರಿ

ಮಳೆ 712.6 ಮಿ.ಮೀ ಇರುವುದು. ಸುಮಾರು 80% ಪ್ರಮಾಣದಷ್ಟು ಮಳೆ ಜೂನ್-ಸಪ್ಟೆಂಬರ್ ಅವಧಿಯಲ್ಲಿ ಬೀಳುತ್ತದೆ. ನೈರುತ್ಯದ ಭಾಗದಲ್ಲಿ ಮಳೆ ಕಡಿಮೆ (ಶೋರಾಪುರ, ಜೇವರ್ಗಿ) ಹಾಗೂ ಈಶಾನ್ಯದ ಭಾಗಗಳಲ್ಲಿ (ಸೇಡಂ, ಚಿಂಚೋಳಿ) ಹೆಚ್ಚು ಆಗುವುದು.

ಮಳೆ:

ತಾಲ್ಲೂಕುಗಳು	ವೃಷ್ಟಿ ಮಾಪನ ಕೇಂದ್ರಗಳು		ಮಳೆ			ಮಳೆ ದಿವಸಗಳು	
	ಕಾರ್ಯ ನಿರ್ವಹಿಸುತಿರುವ	ಸ್ಥಗಿತ ಗೊಂಡಿರು	ವಾಡಿಕೆ ಮಳೆ (ಮಿ.ಮೀ (1941–90)	ಕೇಂದ್ರ ಸ್ಥಾನದ ವಾಸ್ತವಿಕ ಮಳೆ 2007	ಸರಾಸರಿ ಮಳೆ 2007	ವಾಡಿಕೆ 1941–90	ವಾಸ್ತವಿಕ (2007)
1	**108**	**109**	**110**	**111**	**111(ಎ)**	**112**	**113**
ಅಫಜಲಪುರ	4	–	667	674	725	43	46
ಆಳಂದ	8	–	813	557	522	45	43
ಚಿಂಚೋಳಿ	6	2	1003	1029	645	49	48
ಚಿತ್ತಾಪೂರ	8	1	840	828	591	47	51
ಗುಲಬರ್ಗಾ	11	–	823	689	672	48	53
ಜೇವರ್ಗಿ	6	1	853	762	655	43	44
ಸೇಡಂ	5	–	896	973	750	49	57
ಶಹಾಪುರ	7	–	873	831	576	41	42
ಸುರಪುರ	6	–	767	603	597	40	46
ಯಾದಗೀರ	6	1	855	734	766	47	52
ಒಟ್ಟು ಮೊತ್ತ	67	5	839	768	650	45	48

ಮಾಹಿತಿ ಮೂಲ: ಕಾಲಂ 108 ರಿಂದ 113 ರ ವರೆಗೆ ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ ಬೆಂಗಳೂರುರವರ 2007 ರ ವಾರ್ಷಿಕ ಮಳೆ ವರದಿ (ಗುಲಬರ್ಗಾ ಜಿಲ್ಲೆಯ ಅಂಕಿ ಅಂಶಗಳ ನೋಟ 2007–2008 ಪುಟ ಸಂ. 13)

ಉಷ್ಣತೆ:

ಹೆಚ್ಚು ಬಿಸಿಲಿನ ಜಿಲ್ಲೆಯಂದೇ ಪರಿಚಿತವಾಗಿರುವ ಈ ಜಿಲ್ಲೆಯ ಉಷ್ಣತೆ 40 ಡಿಗ್ರಿ ಸೆ. ಇದ್ದು ಕೆಲವೊಮ್ಮೆ 45 ಡಿಗ್ರಿ ಸೆ.ವರೆಗೆ ಏರುತ್ತದೆ. ರಾತ್ರಿಯ ಸಮಯದಲ್ಲಿ ಉಷ್ಣತೆ 26–28 ಡಿಗ್ರಿ ಸೆ.ವರೆಗೆ ಇಳಿಯುವುದು. ಅತಿ ಶೆಖೆಯು ಇರುವ ಫೆಬ್ರುವರಿ –ಮೇ ತಿಂಗಳುಗಳ ಅವಧಿಯಲ್ಲಿ ಉಷ್ಣತೆ ಈ ರೀತಿ ಇರುವುದು. ಅಕ್ಟೋಬರ ಕಳೆದ ಮೇಲೆ ಡಿಸೆಂಬರ, ಜನೆವರಿ ತಿಂಗಳುಗಳಲ್ಲಿ ಉಷ್ಣತೆ ಹೆಚ್ಚೆಂದರೆ 29 ಡಿಗ್ರಿ ಸೆ.ಇದ್ದು ರಾತ್ರಿಯಲ್ಲಿ 10–15 ಡಿಗ್ರಿ ಸೆ.ವರೆಗೆ ಇಳಿಯುವುದು. ಡಿಸೆಂಬರ ತಿಂಗಳು ಈ ಜಿಲ್ಲೆಗೆ ಅತಿ ಚಳಿ ಇರುವ ಕಾಲ. ಅದರಂತೆ ಮೇ ತಿಂಗಳು ಅತಿ ಉಷ್ಣವಾಗಿರುವ ತಿಂಗಳು ಆಗಿದೆ. (ರಾಜ್ಯದ ಕೆಲವು ಆಯ್ದ ಕೇಂದ್ರಗಳಲ್ಲಿ ದಾಖಲಿಸಿದ ಉಷ್ಣತೆ ಕೋಷ್ಟಕ ನೋಡಿ)

ಆರ್ದ್ರತೆ, ಗಾಳಿ

ಡಿಸೆಂಬರ–ಮೇ ತಿಂಗಳುಗಳ ಅವಧಿಯಲ್ಲಿ ಆರ್ದ್ರತೆ ಬೆಳಿಗೆ 40–6% ಮಧ್ಯಾಹ್ನ 20–30% ಇರುತ್ತದೆ. ಜೂನ್–ನವೆಂಬರ್ ತಿಂಗಳ ಅವಧಿಯಲ್ಲಿ ಆರ್ದ್ರತೆ 20–30% ಇರುತ್ತದೆ. ಸೇಡಂ, ಚಿಂಚೋಳಿ ಪ್ರದೇಶವು ಹೆಚ್ಚು ಹಿತಕರ ವಾತಾವರಣದಿಂದ ಕೂಡಿದೆ. ಜೂನ್–ಅಕ್ಟೋಬರ್ ತಿಂಗಳುಗಳಲ್ಲಿ ಆಕಾಶವು ಮೋಡಗಳಿಂದ ಕವಿದಿದ್ದು, ಉಳಿದ ಕಾಲದಲ್ಲಿ ಹೆಚ್ಚು ಶುಭ್ರವಾಗಿರುತ್ತದೆ. ಮಳೆಗಾಲದಲ್ಲಿ ಗಾಳಿಯು ತೀವ್ರವಾಗಿದ್ದು ಪಶ್ಚಿಮದ ಕಡೆಯಿಂದ ಬೀಸುತ್ತದೆ. ನಂತರ ಇದೇ ಗಾಳಿಯು ಹೆಚ್ಚು ಕಡಿಮೆ ಪೂರ್ವ ದಿಕ್ಕಿನಿಂದ ಬೀಸುವುದು. ಕೆಲವು ಸಲ ಈಶಾನ್ಯ ಹಾಗೂ ನೈರುತ್ಯ ಗಾಳಿಗಳಿಂದ ಮಳೆಯಾಗುವುದುಂಟು. ಬೇಸಿಗೆಯ ಕಾಲದಲ್ಲಿ ಗುಡುಗು ಮಿಂಚಿನ ಮಳೆಯಗುವುದುಂಟು ಚಂಡಮಾರುತದ ಹಾವಳಿ ಈ ಜಿಲ್ಲೆಗಿಲ್ಲ.

ರಾಜ್ಯದ ಕೆಲವು ಆಯ್ದ ಕೇಂದ್ರಗಳಲ್ಲಿ ದಾಖಲಿಸಿದ ಉಷ್ಣತೆ (ಡಿಗ್ರಿ ಸೆಲ್ಸಿಯಸಗಳಲ್ಲಿ)

ಕ್ರಸಂ	ವೀಕ್ಷಣಾಲಯದ ನೆಲೆ	2002		2003		2004	
		ಗರಿಷ್ಠ	ಕನಿಷ್ಠ	ಗರಿಷ್ಠ	ಕನಿಷ್ಠ	ಗರಿಷ್ಠ	ಕನಿಷ್ಠ
1	ಬೆಂಗಳೂರು ಸಿ.ಓ	36.5	12.5	38.1	13.0	37.0	13.0
2	ಬೆಂಗಳೂರು ಎಚ್.ಎ.ಎಲ್	37.1	10.0	37.3	12.0	36.1	11.6
3	ಯಲಹಂಕ ಐ.ಎ.ಎಫ್	–	–	––	–	–	–
4	ಬೆಳಗಾವಿ ನಗರ	39.4	11.6	38.9	12.4	39.9	13.2
5	ಸಾಂಬ್ರೆ (ಬೆಳಗಾವಿ)	40.0	8.9	38.	9.5	39.4	9.2
6	ಬಳ್ಳಾರಿ	42.6	13.0	43.0	13.9	43.0	10.6
7	ಬೀದರ್	48.8*	11.2*	42.8	12.4	41.4	11.6
8	ಬೀದರ ಐ.ಏ.ಎಫ್	–	–	–	–	–	–
9	ಬಿಜಾಪೂರ	41.6	12.8	42.4	13.8	42.2	14.0
10	ಬಾಗಲಕೋಟೆ	1.01	1.0	0.6	11.8	40.3	11.0
11	ಬಾಳೆಹೊನ್ನುರು	35.2	1.00	34.7	11.0	37.0	11.0
12	ಚಿಕ್ಕಮಗಳೂರು	36.0	11.6	36.2	12.6	39.4	19.1
13	ಚಿತ್ರದುರ್ಗ	38.9	12.3	39.3	12.9	39.4	19.1
14	ಬಜ್ಪೆ	8.2	18.2	7.2	17.6	37.8	18.6
15	ಪಣಂಬೂರು ಎಂ.ಎಚ್.ಸಿ	37.2	18.2	35.8	18.2	35.9	18.0
16	ಗದಗ	39.6	12.0*	39.8	12.4	40.4	11.4
17	ಗುಲಬರ್ಗಾ	44.0	10.0	44.4	9.8	42.8	9.4

ಮೂಲ: ಭಾರತೀಯ ಪವಮಾನ ಇಲಾಖೆ (ಕರ್ನಾಟಕ ಕೈಪಿಡಿ–2011) ಕರ್ನಾಟಕ ಗ್ಯಾಸೆಟಿಯರ್ ಇಲಾಖೆ ಪುಟ ಸಂಖ್ಯೆ 33

ಜಲಸಂಪತ್ತು:

ಈ ಜಿಲ್ಲೆಗೆ ಕೃಷ್ಣ ಒಂದು ದೊಡ್ಡದಾದ ಮುಖ್ಯ ನದಿಯಾಗಿದೆ. ಇದು ದಕ್ಷಿಣದ ಗಡಿಯಲ್ಲಿ ಹರಿಯುತ್ತದೆ. ಭೀಮಾ ನದಿ, ವಾಯುವ್ಯದ ಕಡಯಿಂದ ಮಧ್ಯಭಾಗದಲ್ಲಿ ಹರಿಯುತ್ತಾ ಆಗ್ನೇಯದಲ್ಲಿ ಕೃಷ್ಣಾ ನದಿಯನ್ನು ಕೂಡುತ್ತದೆ. ಭೀಮಾನದಿಗೆ ಕಾಗಿಣಾ ಉಪನದಿ, ಬೆಣ್ಣಿ ತೊರಾ, ಕಾಗಿಣ ನದಿಗೆ ಉಪನದಿ, ಅಪರ್ಣಾ ನದಿಯು ಭೀಮಾ ನದಿಗೆ ಉಪನದಿ, ಭೀಮಾ ನದಿಗೆ ಮಹಾರಾಷ್ಟ್ರದಿಂದ ಬಂದು ಸೇರುವ ಬೋರಿ ನದಿ ಇದೆ. ಈ ಜಿಲ್ಲೆಯಲ್ಲಿ ಕಾಲುವೆ, ಕೆರೆ ಮತ್ತು ಬಾವಿಗಳಿಂದ 1,22,568 ಹೆಕ್ಟೆರ್ ಭೂಮಿಗೆ ನೀರಾವರಿ ಲಾಭ ಇದೆ, ಸುಮಾರು 200 ಕೆರೆಗಳು ಜಿಲ್ಲೆಯಲ್ಲಿ ಇವೆ. ಇವುಗಳಲ್ಲಿ ಕಳೂರು ಕೆರೆ, ನಿಡಗುಂದ ಕೆರೆ, ರಾಮಕೆರೆ, ಹುಂದರಕೆರೆ, ಭೂತಪುರ ಕೆರೆ, ಅಮಲಸಾನಿ ಕೆರೆ ಮುಂತಾದವು ಮುಖ್ಯವಾಗಿವೆ.

ಮಣ್ಣುಗಳು :

ಹೆಚ್ಚು ಕಡಿಮೆ ಜಿಲ್ಲೆ ಪೂರ್ತಿ ಕಪ್ಪು ಮಣ್ಣಿನಿಂದ ಕೂಡಿದೆ ಎಂದು ಹೇಳಬಹುದು. ಚಿಂಚೋಳಿ ತಾಲೂಕಿನ ಈಶಾನ್ಯದ ಭಾಗದಲ್ಲಿ ಲೆಟರೈಟ್ ಮಣ್ಣುಗಳಿವೆ. ಜೆವರ್ಗಿ, ಅಫ್ಜಲ್‌ಪುರಗಳ ದಿಕ್ಕಿನಲ್ಲಿ ಮತ್ತು ನೈರುತ್ಯದ ಹುಣಸಗಿಯ ಪರಿಸರದಲ್ಲಿ ಆಳವಾದ ಕಪ್ಪು ಮಣ್ಣು ಹಾಗೂ ಉಳಿದೆಲ್ಲ ಭಾಗ ಮಧ್ಯಮ ತರಹದ ಕಪ್ಪು ಮಣ್ಣುಗಳಿಂದ ಕೂಡಿದೆ. ಈ ಕಪ್ಪು ಮಣ್ಣು, ಹತ್ತಿ, ಗೋದಿ, ಜೋಳ, ಹಾಗೂ ಬೆಳೆಕಾಳು ಬೆಳೆಗಳಿಗೆ ತುಂಬಾ ಅನುಕೂಲವಾಗಿರುತ್ತದೆ.

ಭೂಗರ್ಭ ಹಾಗೂ ಖನಿಜಗಳು :

ಜಿಲ್ಲೆಯ ವಾಯುವ್ಯದ ಅರ್ಧಭಾಗವು ಡೆಕ್ಕನ್ ಟ್ರಾಪ್ ಶಿಲೆಗಳಿಂದ ಆವೃತವಾಗಿದೆ. ತತ್ಪರಿಣಾಮವಾಗಿ ಈ ಜಿಲ್ಲೆಯಲ್ಲಿ ಕಪ್ಪು ಮಣ್ಣು ಕೂಡ ಬಹಳ ಇದೆ. ಜಿಲ್ಲೆಯ ದಕ್ಷಿಣದ ಭಾಗದಲ್ಲಿ ಸುಣ್ಣಕಲ್ಲು ಮತ್ತು ಕ್ಷಿಪ್ತ ಶಿಲೆಗಳಿವೆ. ದ್ವೀಪಕಲ್ಪನ ನೀಸ್ ಮತ್ತು ದಾರವಾಡ ಶಿಲೆಗಳು ಜಿಲ್ಲೆಯ ದಕ್ಷಿಣದಲ್ಲಿಯೂ ಹಾಗೂ ಪೂರ್ವದಲ್ಲಿಯೂ ದೊರಕುತ್ತದೆ. ಗುಲ್ಬರ್ಗಾ ಪ್ರದೇಶಕ್ಕೆ 'ಸಿಮೆಂಟಿನ ನಾಡು' ಎಂದು ಪರ್ಯಾಯ ಹೆಸರಿದೆ. ಸೇಡಂ, ಚಿತ್ತಾಪುರ, ಗುಲಬರ್ಗಾ, ಜೇವರ್ಗಿ ಪ್ರದೇಶದಲ್ಲಿ 1,050 ಮಿಲಿಯನ ಟನಗಳಷ್ಟು ಭಾರಿ, ಸಿಮೆಂಟಿಗೆ ಉತ್ತಮವಾದ, ಸುಣ್ಣಕಲ್ಲಿನನ ನಿಕ್ಷೇಪಗಳಿವೆ. ಶಹಾಬಾದಿನ ಚಪ್ಪಡಿ ಕಲ್ಲುಗಳು ಕೂಡ (2500 ಗಣಿಗಳು) ನೆಲಹಾಸಿಗೆಗೆ, ವಾಸ್ತುಶಿಲ್ಪಕ್ಕೆ ರಸ್ತೆಗಳಿಗೆ ಹೆಸರುವಾಸಿಯಾಗಿವೆ.

ಚಿನ್ನ : ಶಾಹಪುರ ತಾಲೂಕಿನ ಮಂಗಳೂರು ಹಾಗೂ ಮೂಕನ ಗವಿಗಳಲ್ಲಿ ಸಾಧಾರಣ ಮಟ್ಟದ ಚಿನ್ನದ ನಿಕ್ಷೇಪಗಳಿವೆ

ಜಿಪ್ಸಮ್ : ಗುಂಡಗುರ್ತಿ, ಪೇಠಶಿರೂರ್, ಮರತೂರಗಳಲ್ಲಿ ಸಣ್ಣ ಪ್ರಮಾಣ ನಿಕ್ಷೇಪಗಳಿವೆ

ಬಿಳುಚು ಮಣ್ಣು: ಒಂದು ತರಹದ ಜೇಡಿಮಣ್ಣು, ಶುದ್ಧೀಕರಣಕ್ಕಾಗಿ ಉಪಯೋಗವಾಗುತ್ತದೆ. ಚಿಂಚೋಳಿ ತಾಲೂಕಿನ ಸುಲೇಪೇಟ, ಕೊರವಿ ಮುಂತಾದ ಸ್ಥಳಗಳಲ್ಲಿ ಇದು ದೊರೆಯುತ್ತದೆ

ಇಟ್ಟಿಗೆ ಮಣ್ಣು : ಚಿಂಚೋಳಿ ತಾಲೂಕಿನಲ್ಲಿ ಹೇರಳವಾಗಿದೆ.

ಪ್ರಾಣಿ ಪಕ್ಷಿಗಳು :

ಅರಣ್ಯ ಹೆಚ್ಚಾಗಿರದ ಜಿಲ್ಲೆಯಾದುದರಿಂದ ಪ್ರಾಣಿ ಸಂಪತ್ತು ಇಲ್ಲಿ ಹೆಚ್ಚಾಗಿಲ್ಲ. ಕಾಡುಗಳಿರುವಲ್ಲಿ (ಚಿಂಚೋಳಿ) ಕತ್ತೆ, ಕಿರುಬ, ತೋಳ, ಕಾಡುನಾಯಿ, ಜಿಂಕೆ, ನರಿಗಳು ಕಂಡು ಬರುತ್ತವೆ. ಪಕ್ಷಿಗಳಲ್ಲಿ ಮೈನಾ ಗೂಬೆ, ಹದ್ದು, ಪಾರಿವಾಳಗಳು, ನವಿಲು, ಮರಕುಟಿಗೆಗಳು ಕಂಡು ಬರುತ್ತವೆ. ನಾಗರಹಾವು, ಚೇಳು, ಚಿಪ್ಪು ಹಂದಿ, ಗೋಸುಂಬೆ, ಮಂಡಲದ ಹಾವು ಮುಂತಾದವುಗಳು ಇಲ್ಲಿ ಜೀವಿಸುವ ಇತರ ಪ್ರಾಣಿಗಳಾಗಿವೆ.

ಸಸ್ಯ ಸಂಪತ್ತು : ಜಿಲ್ಲೆಯಲ್ಲಿ 16,224 ಚ.ಕಿ.ಮೀ ವಿಸ್ತಾರದ (7%ರಷ್ಟು) ಭೂಭಾಗ ಅರಣ್ಯವಾಗಿದೆ. ಹೆಚ್ಚಾಗಿ ಚಿಂಚೋಳಿ ತಾಲೂಕಗಳಲ್ಲಿ ಕಾಡುಗಳಿವೆ. ಉಳಿದೆಲ್ಲ ಭಾಗವು ಕುರುಚಲು ಕಾಡಾಗಿದೆ. ಉರುವಲಕ್ಕೆ ಉಪಯೋಗವಾಗುವ ಸಸ್ಯಗಳೇ ಇಲ್ಲಿ ಕಂಡು ಬರುವುದು ಹೆಚ್ಚು ಎಂದು ಹೇಳಬಹುದು. ಗುಲ್ಬರ್ಗಾ,, ಚಿಂಚೋಳಿ, ಚಿತ್ತಾಪುರ, ಸೇಡಂ ಕಡೆ ಕಂಡು ಬರುವ ಸಾಮಾನ್ಯ ಸಸ್ಯಗಳೆಂದರೆ ನಲ್ಲಮಡ್ಡಿ, ರೋಸ್, ಮರ, ತೇಗ, ಉರಮಡ್ಡಿ, ಸೋಮಿ, ಬಿಲ್ವ, ಮಹುವಾ, ತಾಡ, ಶ್ರೀಗಂಧ ಇತ್ಯಾದಿ.

2007–08 ನೇ ಸಾಲಿನಲ್ಲಿ ಕರ್ನಾಟಕ ರಾಜ್ಯದ ಜಿಲ್ಲಾವಾರು ಅರಣ್ಯ ಪ್ರದೇಶ

(ಪುನರ್ ರಚಿತ ತಜ್ಞ ಸಮಿತಿ–1 ರ ವರದಿಯ ಮೇರೆಗೆ) (ಚದರ ಕಿ.ಮೀ ಗಳಲ್ಲಿ)

ಕ್ರಸಂ	ಜಿಲ್ಲೆಗಳು	ಭೂ ಪ್ರದೇಶ	ಅರಣ್ಯ ಪ್ರದೇಶ	ಒಟ್ಟು ಭೂ ಪ್ರದೇಶದಲ್ಲಿ ಶೇಕಡಾವಾರು ಅರಣ್ಯ ಪ್ರದೇಶ
1	ಬೆಂಗಳೂರು	2190	122.25	5.50
2	ಬೆಂಗಳೂರು ಗ್ರಾಮಾಂತರ	5815	1164.85	20.03
3	ರಾಮನಗರ	–	–	–
4	ಬೆಳಗಾವಿ	13415	2063.2	15.34
5	ಬಳ್ಳಾರಿ	8450	1378.52	16.37
6	ಬೀದರ್	5448	476.16	8.37
7	ಬಿಜಾಪುರ	10494	81.11	0.77
8	ಬಾಗಲಕೋಟೆ	6575	838.93	12.72
9	ಚಿಕ್ಕಮಗಳೂರು	7201	2756.51	38.28
10	ಚಿತ್ರದುರ್ಗ	8440	1287.18	15.35
11	ದಾವಣಗೆರೆ	5924	544.34	9.05
12	ದಕ್ಷಿಣ ಕನ್ನಡ	4560	2012.18	33.44
13	ಉಡುಪಿ	13880	1720.57	47.82
14	ಧಾರವಾಡ	4260	468.52	11.08
15	ಗದಗ	4656	333.37	7.16
16	ಹಾವೇರಿ	4823	432.8	8.92
17	ಗುಲ್ಬರ್ಗಾ/ಯಾದಗಿರಿ	16224	997.76	6.15

2007–08 ನೇ ಸಾಲಿನಲ್ಲಿ ವಿವಿಧ ವರ್ಗಗಳಲ್ಲಿ ಇರುವ ಅರಣ್ಯಪ್ರದೇಶ (ಪುನರ್ ರಚಿತ ತಜ್ಞಸಮಿತಿ–1 ರ ವರದಿಯ ಮೇರೆಗೆ) (ಚಿಸ್ತೀರ್ಣ ಚದರ ಕಿ.ಮೀ ಗಳಲ್ಲಿ)

ಕ್ರ.ಸಂ	ಜಿಲ್ಲೆಗಳು	ಮೀಸಲು ಅರಣ್ಯ	ರಕ್ಷಿತ ಅರಣ್ಯ	ವರ್ಗೀಕರಿಸಿದ ಅರಣ್ಯ	ಗ್ರಾಮಾಂತರ ಅರಣ್ಯ	ಖಾಸಗಿ ಅರಣ್ಯ	ಮೊತ್ತ
1	ಬೆಂಗಳೂರು	24.62	2.74	94.59	–	–	122.25
2	ಬೆಂಗಳೂರು ಗ್ರಾ.	980.51	83.04	101.30	–	–	1164.85
3	ರಾಮನಗರ						
4	ಬೆಳಗಾವಿ	1890.97	10.3	159.60	2.33	–	2063.2
5	ಬಳ್ಳಾರಿ	947.83	21.69	109.03	–	–	1378.52
6	ಬೀದರ್	54.671	24.91	274.98	–	1.60	456.16
7	ಬಿಜಾಪುರ	17.22	0.11	63.78	–	–	81.11
8	ಬಾಗಲಕೋಟೆ	790.69	0	48.24	–	–	838.93
9	ಚಿಕ್ಕಮಗಳೂರು	1277.01	348.47	1122.17	8.86	–	2756.51
10	ಚಿತ್ರದುರ್ಗ	765.11	72.59	449.48	–	–	1287.18
11	ದಾವಣಗೆರೆ	460.94	27.64	55.76	–	–	544.34
12	ದಕ್ಷಿಣ ಕನ್ನಡ	1311.74	0.15	647.82	–	52.47	2012.18
13	ಉಡುಪಿ	951.34	16.87	752.36	–	–	1720.57
14	ಧಾರವಾಡ	449.1	2.88	16.54	–	–	498.52
15	ಗದಗ	320.93	3.56	8.88	–	–	333.37
16	ಹಾವೇರಿ	346.31	9.88	76.61	–	–	432.8
17	ಗುಲ್ಬರ್ಗಾ/ಯಾದಗಿರಿ	269.26	230.5	468.00	--997.76		

ಮೂಲ: ಕರ್ನಾಟಕ ಅರಣ್ಯ ಇಲಾಖೆ ಆಡಳಿತ ವಾರ್ಷಿಕ ವರದಿ 2007–08 ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು, ಕರ್ನಾಟಕ, ಬೆಂಗಳೂರು ಕರ್ನಾಟಕ ಕೈಪಿಡಿ–2011 ಕರ್ನಾಟಕ ಗ್ಯಾಸೆಟಿಯರ್ ಇಲಾಖೆ ಪುಟ. ಸಂ 42,43

ಜನಸಂಖ್ಯೆ:

ಗುಲಬರ್ಗಾ ಜಿಲ್ಲೆಯ 7 ತಾಲೂಕುಗಳನ್ನೊಳಗೊಂಡಿದ್ದು ಭೌಗೋಳಿಕವಾಗಿ ಕರ್ನಾಟಕದ ಈಶಾನ್ಯ ಭಾಗದಲ್ಲಿ ಎತ್ತರವಾದ ವ್ಯಾಪಕ ಪ್ರದೇಶದಲ್ಲಿದೆ. ಈ ಜಿಲ್ಲೆಯು ಮಹಾರಾಷ್ಟ್ರ ಹಾಗೂ ಆಂಧ್ರಪ್ರದೇಶ ರಾಜ್ಯಗಳ ಎಲ್ಲೆಗಳಿಂದ ಸುತ್ತುವರೆದಿದ್ದು ಅಲ್ಲಿಯ ಜನಜೀನವದ ಮೇಲೆ ತನ್ನದೇ ಆದ ಪ್ರಭಾವವನ್ನು ಬೀರಿದೆ. ಒಂದು ಪ್ರದೇಶದ ಸಮಗ್ರ ಅಧ್ಯಯನಕ್ಕೆ ಅಲ್ಲಿಯ ಜನಸಂಖ್ಯಾ ಬೆಳವಣಿಗೆ ಹಾಗೂ ಸಾಮಾಜಿಕ ಲಕ್ಷಣಗಳು ಅವಿಭಾಜ್ಯ ಅಂಗವಾಗಿದ್ದು ಇವು ಪ್ರದೇಶದಿಂದ ಪ್ರದೇಶಕ್ಕೆ ವಿಭಿನ್ನವಾಗಿರುತ್ತದೆ. ರಾಜ್ಯದ ಇತರೆ ಜಿಲ್ಲೆಗಳಂತೆ ಈ ಜಿಲ್ಲೆಯಲ್ಲಿಯೂ ಸಹ ವಿವಿಧ ಜಾತಿ, ಮತ, ಧರ್ಮ, ಭಾಷೆ, ಆಚಾರ–ವಿಚಾರಗಳು, ನಂಬಿಕೆಗಳು, ಆಹಾರಾಭ್ಯಾಸ, ಬಾಷೆ, ವೇಷ–ಭೂಷಣಗಳು ಇವೇ ಮೊದಲಾದ ವೈವಿದ್ಯತೆಯಿಂದ ಕೂಡಿದ ಸಾಮಾಜಿಕ ಲಕ್ಷಣಗಳು ಕಂಡು ಬರುತ್ತವೆ. (ಗುಲಬರ್ಗಾ ಜಿಲ್ಲೆ– ಭಾರತದ ಗ್ಯಸೆಟಿಯರ್ ಕರ್ನಾಟಕ ರಾಜ್ಯ ಪುಟ–112) ಕಲಬುರ್ಗಿ ಕರ್ನಾಟಕದ

ಎರಡನೆ ಅತಿ ದೊಡ್ಡ ಜಿಲ್ಲೆ. ರಾಜ್ಯದ ಜಿಲ್ಲೆಗಳಲ್ಲಿ ಅತಿ ಹೆಚ್ಚು ವಿಸ್ತೀರ್ಣವಿರುವ ಗುಲಬರ್ಗಾ ಜಿಲ್ಲೆಯ ಜನಸಂಖ್ಯೆಯು 2011 ರ ಜನಗಣತಿಯಂತೆ 25,64,892 ಹೊಂದಿದೆ. ಅದರಲ್ಲಿ ಪುರುಷರು –13,07,061 ಮತ್ತು ಮಹಿಳೆಯರು 12,27,831 ಇದ್ದಾರೆ. ಇಲ್ಲಿಯ ಸಾಕ್ಷರತಾ ಪ್ರಮಾಣ 67% ಇದ್ದು ಅದರಲ್ಲಿ ಪುರುಷ ಸಾಕ್ಷರತೆ 70% ಮತ್ತು ಮಹಿಳಾ ಸಾಕ್ಷರತೆ 30% ಇದೆ (ಕೃಪೆ ಅಂತರ್ಜಾಲ)

ಜಿಲ್ಲಾವಾರು ಜನಸಂಖ್ಯೆ, ದಶವಾರ್ಷಿಕ ಬೆಳವಣಿಗೆ ಪ್ರಮಾಣ, ಲಿಂಗಾನುಪಾತ ಮತ್ತು ಜನಸಾಂದ್ರತೆ

ರಾಜ್ಯ/ಜಿಲ್ಲೆಗಳು	ಒಟ್ಟು ಜನಸಂಖ್ಯೆ 2011			ಶೇಕಡಾವಾರು ದಶಕದ ಬೆಳವಣಿಗೆಯ ಪ್ರಮಾಣ		ಲಿಂಗಾನುಪಾತ ಪ್ರತಿ 1000 ಪುರುಷರಿಗೆ ಮಹಿಳೆಯರ ಪ್ರಮಾಣ		ಜನಸಾಂದ್ರತೆ (ಪ್ರತಿ ಚದರ ಕಿ.ಮೀ)	
	ಜನರು	ಪುರುಷರು	ಮಹಿಳೆಯರು	1991–01	2001–11	2001	2011	2001	2011
ಉಡುಪಿ	11,77,908	5,62,896	6,15,012714	714	590	1,130	1,093	287	304
ಚಿಕ್ಕಮಗಳೂರು	11,37,753	5,67,483	5,70,270	12.15	–0.28	984	1,005	158	158
ತುಮಕೂರು	26,81,449	13,54,770	13,26,679	12.10	3.74	9.67	9.79	244	253
ಮಂಡ್ಯ	18,08,680	9,09,441	8,99,239	726	2.55	986	989	356	365
ಹಾಸನ	17,76,221	8,85,807	8,90,414	9.68	3.17	1,004	1,005	253	261
ದಕ್ಷಿಣ ಕನ್ನಡ	20,83,625	10,32,577	10,51,048	14.59	9.80	1.022	1,018	416	457
ಕೊಡಗು	5,54,762	2,74,725	2,80,037	12.31	1,13	996	1,019	134	135
ಮೈಸೂರು	29,94,744	15,11,206	14,83,538	15.75	13.39	654	982	385	437
ಗುಲ್ಬರ್ಗಾ	25,64,792	13,07,061	12,57,831	21.76	17.94	958	962	198	233

ಕರ್ನಾಟಕ ಕೈಪಿಡಿ 2011 ಕರ್ನಾಟಕ ಗ್ಯಾಸೆಟಿಯರ್ ಇಲಾಖೆ ಅನುಬಂಧಗಳು – ಪುಟ ಸಂಖ್ಯೆ– 567

ಜಿಲ್ಲಾವಾರು ಶೇಕಡಾವಾರು ದಶವಾರ್ಷಿಕ ಜನಸಂಖ್ಯೆ ವ್ಯತ್ಯಾಸ ಕ್ರಮ

ರಾಜ್ಯ/ಜಿಲ್ಲೆಗಳು	ದಶವಾರ್ಷಿಕ ಜನಸಂಖ್ಯೆಯ ವ್ಯತ್ಯಾಸ										
	1901–11	1911–21	1921–31	1931–41	1941–51	1951–61	1961–71	1971–81	1981–91	1991–01	2001–11
ಚಿಕ್ಕಮಗಳೂರು	–5.79	–1.45	4.25	3.04	16.54	43.05	23.33	33.77	11.57	12.15	–0.28
ತುಮಕೂರು	9.97	5.15	11.12	10.73	20.46	18.76	19.04	21.51	16.58	12.10	3.74
ಬೆಂಗಳೂರು	8.42	12.25	22.79	25.11	69.77	19.61	46.55	59.08	38.44	35.09	46.68
ಮಂಡ್ಯ	4.42	7.59	7.27	9.09	12.90	25.49	28.38	22.85	15.96	7.26	2.55
ಹಾಸನ	1.61	0.63	2.61	5.16	13.93	25.27	23.05	23.10	15.67	9.68	3.17
ದಕ್ಷಿಣ ಕನ್ನಡ	6.04	5.83	9.20	11.71	13.34	21.18	27.17	22.72	15.98	14.59	9.80
ಕೊಡಗು	–3.12	–6.37	–0.31	3.31	35.96	40.72	18.18	22.10	5.75	12.31	1.13
ಮೈಸೂರು	3.22	2.62	8.61	16.20	23.65	16.66	28.40	25.12	24.84	15.75	13.39
ಚಾಮರಾಜನಗರ	2.91	–4.62	7.30	10.74	15.14	18.76	15.50	24.61	14.99	9.29	5.75
ಗುಲ್ಬರ್ಗಾ	9.22	–7.94	11.56	6.99	14.52	19.50	25.36	19.39	23.84	21.76	17.94

ಕರ್ನಾಟಕ ಕೈಪಿಡಿ 2011 ಕರ್ನಾಟ ಗ್ಯಾಸೆಟಿಯರ್ ಇಲಾಖೆ ಅನುಬಂಧಗಳು – ಪುಟ ಸಂಖ್ಯೆ– 569 ಸಂಪಾದನೆ–ಎಸ್.ಎನ್.ರಾಜು, ಪಿ.ಆರ್. ಶ್ರೀನಿವಾಸ್ ಮಹೇಶ ಮುತ್ತಲಗಿರಿ

ಸಾಮಾಜಿಕ ವ್ಯವಸ್ಥೆ:

ಈ ಜಿಲ್ಲೆಯಲ್ಲಿ ಜನರು ಕನ್ನಡವಲ್ಲದೇ ಉರ್ದು ಭಾಷೆಯನ್ನು ಕೂಡ ಮಾತನಾಡುತ್ತಾರೆ. ನಿಜಾಮರ ಕಾಲದಿಂದ ಬಂದ ಉರ್ದು ಭಾಷೆ ಪ್ರಭಾವ ಇದಕ್ಕೆ ಕಾರಣ ಇದಲ್ಲದೇ, ಸಂಗೀತ , ಕಲೆ, ಅನೇಕ ಆಚಾರಗಳು ಕೂಡ ನಿಝಾಮ ಕಾಲದ ಮಹಮ್ಮದೀಯ ಸಂಸ್ಕೃತಿಯಿಂದ ಪ್ರಭಾವಿತವಾಗಿವೆ. ಜನರು ಧೋತರ, ಅಂಗಿ ಗಾಂಧಿ ಟೋಪಿ ಇಲ್ಲವೇ ರುಮಾಲು ಧರಿಸುವರು. ತಂಬಾಕು ಸೇವನೆ ಇಲ್ಲಿ ಸರ್ವಸಾಮಾನ್ಯ, ಗುಲ್ಬರ್ಗಾದಲ್ಲಿ ವಿಶೇಷವಾಗಿ ಮುಸ್ಲಿಂ ವಾಸ್ತುಶಿಲ್ಪ (ಇಂಡೋ–ಸಾರಾಸೆನಿಕ್) ಎಂದು ಕಾಣುತ್ತದೆ. ಜನರು ಹೆಚ್ಚಾಗಿ ಜೋಳದ ರೊಟ್ಟಿ ಮೆಣಸಿನ ಖಾರವನ್ನು ಉಣ್ಣುವರು. ಸೇಡಂ ತಾಲೂಕಿನ ಮಳಖೇಡವು ರಾಷ್ಟ್ರಕೂಟ ಅರಸರ ರಾಜಧಾನಿಯಾಗಿತ್ತು. (753–973) ಗುಲ್ಬರ್ಗಾ ನಗರವು ಬಹಮನಿ ಅರಸರ ರಾಜಧಾನಿಯಾಗಿತ್ತು. (1347–1424) ಕಲ್ಯಾಣದಲ್ಲಿ ಕಳಚೂರಿ ವಂಶದ ಬಿಜ್ಜಳನ ಕಾಲದಲ್ಲಿ ಶ್ರೀ ಬಸವೇಶ್ವರೆಂಬ ಒಬ್ಬ ಸಮಾಜ ಸುಧಾಕರು ಜೀವಿಸಿದ್ದರು. ಮಾರ್ಚ ತಿಂಗಳ ಕಾಲದಲ್ಲಿ ಗುಲ್ಬರ್ಗಾದಲ್ಲಿ 15 ದಿನಗಳ, ಶರಣ ಬಸವೇಶ್ವರರ ಜಾತ್ರೆ ಹಾಗೂ ಬಂದೇ ನವಾಜ್ ಉತ್ಸವಗಳು ಜರುಗುತ್ತವೆ. ಆ ಸಮಯದಲ್ಲಿ ಆಯಾ ಮತಗಳ ಭಕ್ತರು ಲಕ್ಷಗಟ್ಟಲೆ ಸಂಖ್ಯೆಯಲ್ಲಿ ಭಾಗವಹಿಸುತ್ತಾರೆ (ತ್ರಿಭುವನ ಸ್ಕೂಲ್ ಅಟ್ಲಾಸ್) ಅವಿಭಕ್ತ ಕುಟುಂಬವು ಈ ಭಾಗದ ಸಾಮಾಜಿಕ ಜನಜೀವನದ ಮಹತ್ವದ ಲಕ್ಷಣವಾಗಿದೆ. ಪಿತೃ ಪ್ರಧಾನವಾದ ಕುಟುಂಬಗಳೇ ಈ ಭಾಗದಲ್ಲಿ ಹೆಚ್ಚಾಗಿ ಕಂಡು ಬರುವವು. ಸಾಂಸ್ಕೃತಿಕವಾಗಿ ಬಂದ ಸಂಪ್ರದಾಯಗಳನ್ನು ಮುಂದುವರಿಸಿಕೊಂಡು ಹೋಗುವುದರಲ್ಲಿ ಅವಿಭಕ್ತ ಕುಟುಂಬಗಳು ಮಹತ್ವದ ಪಾತ್ರ ವಹಿಸಿವೆ. ಕುಟುಂಬದ ಆಸ್ತಿಗೆ ಸಂಬಂಧಿಸಿದ ನಿಯಮಗಳಿಗೆ ಮರತೂರಿನ ವಿಜ್ಞಾನೇಶ್ವರ ಪಂಡಿತ "ಮಿತಾಕ್ಷರ" (ಹಿಂದು ಕೋಡ ಬಿಲ್)ವು ಆಧಾರವಾಗಿದೆ. ಮಿತಾಕ್ಷರ ಕಾಯ್ದೆಯ ಪ್ರಕಾರ ವ್ಯಕ್ತಿಯು ಹುಟ್ಟಿನಿಂದಲೂ ಕುಟುಂಬದ ಆಸ್ತಿಯಲ್ಲಿ ಸಂಪೂರ್ಣ ಹಕ್ಕನ್ನು ಹೊಂದುತ್ತಾನೆ. ದತ್ತಕ ಪುತ್ರನಿಗೂ ಅದೇ ಅಧಿಕಾರವಿರುತ್ತದೆ. ಪ್ರಾಚೀನ ಕರ್ನಾಟಕ ಸಾಮಾಜಿಕ ಚೌಕಟ್ಟಿನಲ್ಲಿ ವಿಷಯವನ್ನು ವಿಶ್ಲೇಷಿಸುವಾಗ ಈ ಭಾಗದಲ್ಲಿ 26 ಜಾತಿಗಳಿವೆಯೆಂದು ಸಾಹಿತ್ಯಿಕ ಮೂಲಗಳು ಶಾಸನಗಳು ದಾಖಲೆಯನ್ನು ಒದಗಿಸಿವೆ. ಈ ಜಿಲ್ಲೆಯಲ್ಲಿ ಕಂಡು ಬರುವ ಜಾತಿ ಸಮೂಹಗಳೆಂದರೆ ಬ್ರಾಹ್ಮಣ, ಲಿಂಗಾಯತ್, ಮರಾಠ, ರಜಪೂತ, ಪಂಚಾಳ, ಬೇಡ, ಭೋರಿ, ಬುರುಡ, ಧೋಬಿ, ಸಿಂಪಿಗ, ದೇವಾಂಗ, ಧನಗರ, ಗಾಳಿ, ಈಳಿಗ, ರೆಡ್ಡಿ, ವೈಶ್ಯ,

ಕುರುಬ, ಲಂಬಾಡಾ ಮಾದಿಗ, ಆಹಾರ, ಮಾಲಾ, ಮಂಗಲಾ, ತೇಲಗ, ತೇಲಿ, ಉಪ್ಪಾರ, ವಡ್ಡರ ಮುಂತಾದವು.

ಕಲಬುರ್ಗಿ ಜಿಲ್ಲೆ ಅನೇಕ ಧರ್ಮಗಳ ನೆಲೆವೀಡಾಗಿದೆ. ಬಹುತೇಕ ಜನರು ಬಾಳನ್ನು ರೂಪಿಸುವಲ್ಲಿ, ಚಟುವಟಿಕೆಗಳನ್ನು ಸಂಘಟಿಸುವಲ್ಲಿ, ಸಾಂಸ್ಕೃತಿಕ ಶ್ರೀಮಂತಿಕೆಯನ್ನು ಹೆಚ್ಚಿಸುವಲ್ಲಿ ಪ್ರತಿಯೊಂದು ಧರ್ಮವು ತನ್ನದೇ ಆದ ರೀತಿಯಲ್ಲಿ ಈ ನೆರವು ನೀಡಿದೆ. ಈ ಜಿಲ್ಲೆಯಲ್ಲಿ ವಾಸಿಸುವವರು ಬಹುಪಾಲ ಹಿಂದೂ ಧರ್ಮದ ಅನುಯಾಯಿಗಳಾಗಿದ್ದಾರೆ. ಅರಳಿ ಮರಕ್ಕೆ ಪೂಜೆ ಸಲ್ಲಿಸುವ, ನಾಗರ ಹಾವಿಗೆ ಪೂಜಿಸುವ ಮಾರಿಮಸಣಿ ಮೊದಲಾದ ಗ್ರಾಮದೇವತೆಗಳ ಹರಕ್ಕೆ ಹೊತ್ತು ಆರಾಧಿಸುವ ಮತ್ತು ಭೂತಾರಾಧನೆ ಮಾಡುವ ಮುಂತಾದ ಸಾಂಪ್ರದಾಯಿಕ ಆಚರಣೆಗಳು ಬಹಳ ಪ್ರಾಚೀನ ಕಾಲದಿಂದಲೂ ಈ ಭಾಗದಲ್ಲಿ ರೂಢಿಯಲ್ಲಿವೆ. ಅನೇಕ ಭಿನ್ನ ಮತಧರ್ಮಗಳ ಅನುಯಾಯಿಗಳು ಈ ಜಿಲ್ಲೆಯಲ್ಲಿದ್ದರೂ ಕೂಡಾ ಈ ಭಾಗವು ಮತ ಸಹಿಷ್ಣುತೆಗೆ ಹೆಸರಾಗಿದೆ. ಸರ್ವ ಧರ್ಮ ಸಮನ್ವಯ ಕ್ಷೇತ್ರವಾಗಿದೆ. ಕಲಬುರ್ಗಿ ಜಿಲ್ಲೆಯ ಒಟ್ಟು ಸಾಮಾಜಿಕ ಜನಜೀವನವು ಸಮೀಕ್ಷಿಸಿದಾಗ ತಿಳಿದು ಬರುವ ಸಂಗತಿಗಳೆಂದರೆ, ಸಮೃದ್ಧಿಯಾದ ಜನಸಂಖ್ಯೆ, ಅಲ್ಪಪ್ರಮಾಣದ ಸಾಕ್ಷರಸ್ಥರ ಸಂಖ್ಯೆ, ಕೃಷಿ ಪ್ರಧಾನ ಜನಸಮೂಹಗಳಲ್ಲಿ ಪೂರ್ಣ ಪ್ರಾಥಮಿಕ ಸಂಬಂಧಗಳು, ಪಿತೃಪ್ರಧಾನ ಕುಟುಂಬ ವ್ಯವಸ್ಥೆ, ವಿಭಿನ್ನ ಆರಚಣೆಗಳು, ಸಹಿಷ್ಣುತೆ ಭಾವನೆ ಹೀಗೆ ಹತ್ತು ಹಲವಾರು ವಿಶಿಷ್ಟ ಅಂಶಗಳು ಗಮನಕ್ಕೆ ಬರುತ್ತವೆ. ಇವೆಲ್ಲವನ್ನು ಹೊಂದಿಸಿಕೊಂಡು ಬಹುತೇಕ ಸರಳ, ಸಮಾಧಾನ ಮನಸ್ಕ ಜನಜೀವನವೇ ಕಲಬುರ್ಗಿ ಜಿಲ್ಲೆಯ ಸಾಮಾಜಿಕ ಸ್ಥಿತಿಗತಿಗೆ ಕಾರಣವಾಗಿದೆ. (ಕಲಬುರ್ಗಿ ಜಿಲ್ಲಾ ದರ್ಶನ– ಸಂಪಾದಕರು ಡಾ॥ ಟಿ.ಎಂ. ಭಾಸ್ಕರ ಶ್ರೀ ರಾಜಶೇಖರ ಹತಗುಂದಿ)

ಕಲಬುರ್ಗಿ ನಗರ ಗುಮ್ಮಟಗಳ ಬಿಡಾರವೆಂದೇ ಪ್ರಸಿದ್ಧಿ ಹೊಂದಿದೆ. ಇಲ್ಲಿ ನೋಡಲು ಅನೇಕ ಗುಮ್ಮಟುಗಳು ಮತ್ತು ಮಸೀದಿಗಳುಂಟು. ಈ ನಗರದಿಂದ ಪ್ರಯಾಣಿಸಲು ಮುಖ್ಯ ರಸ್ತೆಗಳೆಂದರೆ ಆಳಂದ ಮಾರ್ಗ, ಸೇಡಂ ರಸ್ತೆ, ಹುಮನಾಬಾದ ರಸ್ತೆ, ಜೇವರ್ಗಿ ರಸ್ತೆ ಇವು 4 ತಾಲ್ಲೂಕಾ ಕೇಂದ್ರಗಳಿಗೆ ಇನ್ನೊಂದು ಮಾರ್ಗ ಮಧ್ಯದಲ್ಲಿ ಚಿಂಚೋಳಿ ತಾಲ್ಲೂಕಿಗೆ ಹೋಗಲು ಕವಲೊಡಿಯುತ್ತದೆ. ಆಳಂದ ರಸ್ತೆ ಗುಂಟ ನೋಡಲು ಅನೇಕ ಮಸೀದಿಗಳು ಮತ್ತು ಗುಮ್ಮಟಗಳು ದೊರೆಯುತ್ತವೆ. ಇವುಗಳಲ್ಲಿ ಚೋರಗುಮ್ಮಜ ಬಹಳ ದೊಡ್ಡದಾದ ಹಾಗೂ ಭವ್ಯವಾದ ಗುಮ್ಮಟವಾಗಿದೆ. ಇದರ ಒಳಗಿಂದ ಒಂದು ಸುರಂಗ ಮಾರ್ಗ ಕೋಟೆ ಒಳಗೆ ಸೇರುತ್ತದೆ. ಇದು ಕೂಡಾ ಬಿಜಾಪೂರದ ಗೋಲಗುಮ್ಮಟ ಪ್ರತಿಧ್ವನಿಸುವಂತೆ ಕೇಳಿ ಬರುತ್ತಿರುವುದಾಗಿ ತಿಳಿದು ಬರುತ್ತದೆ. ಜೇವರ್ಗಿ ರಸ್ತೆಯು ಈಗ ವಿಶಾಲಗೊಂಡಿದೆ. ರಾಷ್ಟ್ರೀಯ ಹೆದ್ದಾರಿಯಾಗಿ ಮಾರ್ಪಟ್ಟಿದೆ. ಈ ರಸ್ತೆಗುಂಟ ಪ್ರೇಕ್ಷಣೀಯ ಸ್ಥಳಗಳೆಂದರೆ;

ರಾಮಮಂದಿರ ನಂತರ ಸಾಯಿಮಂದಿರ ಇನ್ನೂ ಮುಂದೆ ಸಾಗಲು ಈ ರಸ್ತೆಗೆ ಶಿಕ್ಷಣ ಸಂಸ್ಥೆಗಳು ಎಡಬಲದಲ್ಲಿ ರೂಪುಗೊಂಡಿವೆ. ಆಕಾಶವಾಣಿ ಕೇಂದ್ರವಿದೆ.

ಹುಮನಾಬಾದ ರಸ್ತೆಯು ರಾಷ್ಟ್ರೀಯ ಹೆದ್ದಾರಿಯಾಗಿ ಮಾರ್ಪಟ್ಟದೆ. ಈ ರಸ್ತೆಗುಂಟ ಕರ್ನಾಟಕ ಸರ್ಕಾರದಿಂದ ಮಾನ್ಯತೆ ಪಡೆದ ಕಾರ್ಖಾನೆಗಳು ತಲೆ ಎತ್ತಿವೆ. ಇವಕ್ಕೂ ಮುನ್ನ ಕೆ.ಎಮ್.ಎಫ್ ಹಾಲಿನ ಕೇಂದ್ರ ಪ್ರೇಕ್ಷಣೀಯ ಸ್ಥಳವಾಗಿದೆ. ದಿನಾಲೂ ವಿದ್ಯಾರ್ಥಿಗಳು ಈ ಕೇಂದ್ರಕ್ಕೆ ಆಗಮಿಸಿ ಹಾಲಿನಿಂದ ತಯಾರಾಗುವ ಬೆಣ್ಣೆ, ತುಪ್ಪ, ಮೊಸರು ಪೇಡೆ ಇವೆ ಮುಂತಾದ ಖಾದ್ಯ ಪದಾರ್ಥಗಳ ಸಂಸ್ಕರಣವನ್ನು ನಿರೀಕ್ಷಿಸುತ್ತಾರೆ. ದೂರದರ್ಶನ ಕೇಂದ್ರ ಇದೇ ರಸ್ತೆ ಬದಿಯಲ್ಲಿ ನಿರ್ಮಾಣಗೊಂಡಿದೆ. ನಗರದ ಕೊನೆಯಲ್ಲಿರುವ ಗಂಜ ಪ್ರದೇಶವು, ದವಸಧಾನ್ಯಗಳ ವಿಕ್ರಯಗೊಳ್ಳುತ್ತವೆ. ಹಳ್ಳಿಯಿಂದ ಆಗಮಿಸುವ ರೈತರಿಗೆ ಇದೇ ಮಾರಾಟಕೇಂದ್ರವಾಗಿದೆ. ಇಲ್ಲಿ ರೈತರಿಗಾಗಿ ತಂಗಲು ರೈತಭವನ ನಿರ್ಮಾಣಗೊಂಡಿದೆ. ಇದರ ಪಕ್ಕದಲ್ಲಿಯೇ ಹತ್ತಿ ಮಾರುಕಟ್ಟೆಯನ್ನು ವಿಶಾಲವಾಗಿ ನಿರ್ಮಿಸಲಾಗಿದೆ. ಸೇಡಂ ರಸ್ತೆ ರಾಜ್ಯದ ಹೆದ್ದಾರಿಯಾಗಿದೆ. ಈ ರಸ್ತೆಯ ಬಲಕ್ಕೆ ಸರ್ಕಾರಿ ಜಿಲ್ಲಾ ಆಸ್ಪತ್ರೆ ನಿರ್ಮಾಣಗೊಂಡಿದೆ. ಇದರ ಪಕ್ಕದಲ್ಲಿಯೇ ಸಾಲಾಗಿ ಮಹಾದೇವಪ್ಪ ರಾಂಪೂರೆ ವೈದ್ಯಕೀಯ ಕಾಲೇಜು ಹೋಮಿಯೋ ಪೆಥಿಕ್ ಕಾಲೇಜು, ಔಷಧ ವಿಜ್ಞಾನ ಕಾಲೇಜು, ಬಸವೇಶ್ವರ ಬೋಧನೆ ಹಾಗೂ ವೈದ್ಯಕೀಯ ಶಿಕ್ಷಣ ಸಂಸ್ಥೆ, ಬುದ್ಧ ವಿಹಾರ ಮತ್ತು ಶ್ರೀಮತಿ ಸೋನಿಯಾ ಗಾಂಧಿಯವರಿಂದ ಉದ್ಘಾಟನೆಗೊಂಡ ಇ.ಎಸ್.ಐ ಆಸ್ಪತ್ರೆ ಭವ್ಯವಾಗಿ ನಿರ್ಮಾಣಗೊಂಡಿವೆ. (ಗುಲಬರ್ಗಾ ಬಹಮನಿ ಕೋಟೆ– ಪ್ರೊ॥ ವೀರಣ್ಣ ಎಮ್. ಪಡಶೆಟ್ಟಿ ಪು. ಸಂ 4 & 5)

ಜಿಲ್ಲೆಯ ಆಕರ್ಷಣೆಯ ಸ್ಥಳಗಳು :

ಕಲಬುರಗಿಯ ಬಹುಮನಿ ಕೋಟೆ

ಕಲಬುರಗಿ ಕೋಟೆ 1347 ರಲ್ಲಿ ನಿರ್ಮಿಸಿದರು. ಕಲಬುರಗಿಯ ಕೋಟೆ ಕರ್ನಾಟಕ ಪ್ರಾಚೀನ ಇಸ್ಲಾಮಿಕ ವಾಸ್ತುಶಿಲ್ಪ ಅತ್ಯುತ್ತಮ ಉದಾಹರಣೆಗಳಲ್ಲಿ ಒಂದು. ಕೋಟೆ ಮೂಲತಃ ರಾಜಾ ಗುಲ್ಚಂದ್ ಕಟ್ಟಿಸಿದನು. ಕಲಬುರಗಿ ಬಹಮನಿ ರಾಜಧಾನಿಯಾಗಿ ಪ್ರಾಮುಖ್ಯತೆಯನ್ನು ಪಡೆದುಕೊಡಿತು. ಕೋಟೆ ಆಳವಾದ ಕಂದಕ ಬೃಹತ್ ಗೋಡೆಗಳೊಂದಿಗೆ ಅಲ್ಲಾವುದ್ದೀನ್ ಬಹುಮನಿ ಮೂಲಕ ಬಲಪಡಿಸಿದರು. ಕೋಟೆ ಚೆನ್ನಾಗಿದ್ದರೆ, ಶತ್ರುಗಳಿಗೆ ಕಷ್ಟ ಆಗುತ್ತದೆ. ಇದರಿಂದ ಕೋಟೆಯ ಸುತ್ತ ಕಾಲುವೆ ತಯಾರಿಸಲಾಗಿದೆ. ಕೃಷ್ಣ ನದಿ ಮತ್ತು ಭೀಮಾ ನದಿಯ ಹರಿವು ಬಹಳ ಕೋಟೆ ಹತ್ತಿರ ಇದೆ. ಕೋಟೆ 15 ಗೋಪುರಗಳು ಮತ್ತು 26 ಬಂದೂಕುಗಳು ಒಳಗೊಂಡಿತ್ತು. ಅದ್ರಲ್ಲಿ ಒಂದು 8 ಮೀಟರ್ ಉದ್ದವಾಗಿತ್ತು. ಕೋಟೆ 38.000 ಚದರ ಅಡಿ ಪ್ರದೇಶದಲ್ಲಿ ಇದೆ. ಈ ಮಸೀದಿ ಐದು ದೊಡ್ಡ ಗುಮ್ಮಟಗಳು, 75

ಸಣ್ಣ ಗುಮ್ಮಟಗಳು ಮತ್ತು ಪ್ರಸ್ತುತ 250 ಕಮಾನುಗಳು ಹೊಂದಿದೆ. ಕಲಬುರಗಿ ಕೋಟೆ ಭಾರತೀಯ ಪುರಾತತ್ವ ಇಲಾಖೆ ರಾಷ್ಟ್ರೀಯ ಸ್ಮಾರಕ ಎಂದು ಗುರುತಿಸಲಾಗಿದೆ.

ಕಲಬುರಗಿಯ ಬಂದೇ ನವಾಜ್ ದರ್ಗಾ

ಹಜ್ರತ್ ಖ್ವಾಜಾ ಬಂದಾ ನವಾಜ್ ದರಜ್(ಜುಲೈ 13,1321 ನವೆಂಬರ1, 1422) ಭಾರತದ ಒಬ್ಬ ಮಹಾನ್ ಸೂಫಿ ಸಂತ. ಅವರು ಎಲ್ಲ ಜಾತಿಯ ಬಗ್ಗೆ ತುಂಬಾ ತಿಳುವಳಿಕೆ ಹಾಗೂ ತಾಳ್ಮೆ ಹೊಂದಿದವರಾಗಿದ್ದರು. ಗೇಸು ದರಜ್ ಒಬ್ಬ ದಿಲ್ಲಿ ಪ್ರಖ್ಯಾತ ಸೂಫಿ ಸಂತ, ಹಜ್ರತ್ ನಾಸಿರುದ್ದೀನ ಚಿರಗ್ಗದೆಹ್ಳವಿ ಅವರ ಶಿಷ್ಯರಾಗಿದ್ದರು. ಗೆಸು ದರಜ್ ಅವರ ಹೆಸರು "ಸಯ್ಯದ ಮೊಹಮ್ಮದ್ ಹುಸ್ಸೈನಿ" 1336 ರಲ್ಲಿ ಇವರು ದಿಲ್ಲಿಗೆ ಹೋಗಿ ತಮ್ಮ ಶಿಕ್ಷಣ ಹಾಗೂ ತಾಲೀಮು ಪೂರ್ತಿ ಮಾಡಿದರು. ಗೆಸು ದರಜ್ ಅವರ ಗುರುಗಳು ಹಜ್ರತ್ ಕೆಡ್ಲಿ, ಹಜ್ರತ್ ತಾಜುದ್ದೀನ್ ಬಹಾದುರ್ ಮತ್ತು ಕಜಿ ಅಬ್ದುಲ್ ಮುಕ್ತದಿರ್, ದಿಲ್ಲಿ ಮೆವಾಥ್, ಗ್ವಾಲಿಯರ್, ಚತ್ರ, ಚಂದೆರಿ ಮತ್ತು ಬರೋಡ ಅಲ್ಲಿ ಪಾಠ ಮಾಡಿ 1397 ರಲ್ಲಿ ಕಲಬುರಗಿಗೆ ಬಂದರು. ಒಂದು ದಿನ ಇವರು ಮತ್ತು ಮಿತ್ರರು ಹಜ್ರತ್ ನಸೀರುದ್ದೀನವರ ಪಲಕಿಯನ್ನು ಎತ್ತಿದಾಗ ಗೆಸು ದರಜಿನ ಕೂದಲು ಪಲಕಿಯ ಕಾಲಲ್ಲಿ ಸಿಕ್ಕಿಬಿದ್ದಿತು. ಅವರಿಗೆ ಬಹಳ ನೋವು ಆಗಿತ್ತು, ಆದ್ರೆ ಗುರುವಿನ ಮೇಲೆ ಪ್ರೀತಿ ಹಾಗೂ ಮರ್ಯಾದೆಯಿಂದ ಅವನು ಯಾರಿಗೂ ಹೇಳಲಿಲ್ಲ. ಈ ಪ್ರೀತಿ ಹಾಗೂ ಮರ್ಯಾದೆ ನೋಡಿ ಹಜ್ರತ್ ನಾಸಿರುದ್ದೀನ್ ಅವನನ್ನು "ಗೆಸು ದರಜ್" ಅಂತ ಘೋಷಿಸಿದರು. ಎಲ್ಲ ಜನರು ಗೆಸು ದರಜಿಗೆ "ಖ್ವಾಜಾ ಬಂದಾ ನವಾಜಗೆಸು ದರಾಜ್" ಹೆಸರಿನಿಂದ ಕರೆಯುತ್ತಾರೆ. ಉರಸ್: ಇದು "ಖ್ವಾಜಾ ಬಂದಾ ನವಾಜ್ ಗೆಸು ದರಜ್" ರ ಪುಣ್ಯತಿಥಿಯ ದಿನದಂದು ಆಚರಿಸುತ್ತಾರೆ. ಈ ದಿನ ಉಲ್–ಅ ದಃ ಮುಸ್ಲಿಂ ಕ್ಯಾಲೆಂಡರ 15 ನೆ ದಿನಕ್ಕೆ ಆಚರಿಸುತ್ತಾರೆ. ಈ ದಿನ ಹಲವಾರು ಜನ ವಿಭನ್ನ ಸ್ಥಳದಿಂದ ಇಲ್ಲಿ ಗೆಸು ದರಜರ ಆಶಿರ್ವಾದ ಪಡೆಯಲು ಬರುತ್ತಾರೆ. ಈಗ ಇಲ್ಲಿನ ಮುಖ್ಯಸ್ಥರು "ಸೈದಶಾಹ್ ಖುಸ್ರೋ ಹುಸ್ಸೈನಿ"ಯಾಗಿದ್ದಾರೆ.

ಕಲಬುರಗಿಯ ಶರಣ ಬಸವೇಶ್ವರ ದೇವಸ್ಥಾನ

ಶರಣ ಬಸವೇಶ್ವರ ದೇವಸ್ಥಾನ ಕಲಬುರಗಿಯ ಮಧ್ಯದಲ್ಲಿದೆ. ಈ ದೇವಸ್ಥಾನ ಶರಣ ಶ್ರೀ ಬಸವೇಶ್ವರರ ನೆನಪಿಗೆ ಹೋಲಿಸಲಾಗಿದೆ. ಈ ದೇವಸ್ಥಾನ 12 ಶತಮಾನದ ಹಿಂದೆ ಸ್ಥಾಪಿಸಲಾಗಿತ್ತು. ಇಲ್ಲಿ ನೀವು ಪಂಚಲೋಹ ಕಲಶವನ್ನು ನೋಡಬಹುದು. ಈ ದೇವಸ್ಥಾನದ ವಾಸ್ತುಕಲೆ 12ನೇ ಶತಮಾನದಿಂದ ಇದೆ. ಗರ್ಭಗೃಹ: ಶರಣ ಬಸವೇಶ್ವರ ಸಮಾಧಿ ಇದೆ. ದೇವಸ್ಥಾನದ ಸುತ್ತಮುತ್ತ ಬಹಳಷ್ಟು ಸ್ಥಂಭಗಳಿವೆ ಮತ್ತೆ ಸಭಾ ಮಂಟಪ ಹಾಗೂ ಪ್ರದಕ್ಷಿಣಾಪಥವಿದೆ. ಗುಡಿಯ ಸುತ್ತ ಆನೆ, ನವಿಲು ಗಿಳಿ, ಗರಡು, ನಾಗ ಹಾಗೂ ಹೂವಿನ ಶಿಲ್ಪಗಳಿವೆ. ಇದು ತುಂಬ ಸುಂದರವಾಗಿ ಕಾಣಿಸುತ್ತದೆ.

ಕಲಬುರಗಿಯ ಬುದ್ಧ ವಿಹಾರ :

ಬುದ್ಧವಿಹಾರ ವಿಸ್ತಾರವಾದ 70 ಎಕರೆ ಭೂಮಿಯಲ್ಲಿ ನೆಲೆಸಿದೆ. ಇದು ರಾಷ್ಟ್ರದ ಅತಿ ದೊಡ್ಡ ವಿಹಾರಗಳಲ್ಲಿ ಒಂದು. ಇದು ನಗರದಿಂದ ದೂರದಲ್ಲಿದೆ. ಕಲಬುರಗಿ ವಿಶ್ವವಿದ್ಯಾಲಯ ರೂ 8 ಕೋಟಿ ಹೆಚ್ಚು ವೆಚ್ಚದಲ್ಲಿ ಸಿದ್ಧಾರ್ಥ ವಿಹಾರ ಟ್ರಸ್ಟ್ ನಿರ್ಮಿತಗೊಂಡಿದೆ. ಇದು ಇಡೀ ದಕ್ಷಿಣ ಭಾರತದಲ್ಲೇ ದೊಡ್ಡದೆಂದು ಪರಿಗಣಿಸಲಾಗುತ್ತದೆ. ಸಿಮೆಂಟ್ ಸುಮಾರು 1500 ಟನ್, ಉಕು 250 ಟನ್,5 ಲಕ್ಷ ಇಟ್ಟಿಗೆಗಳನ್ನು ಮತ್ತು ಮರಳು 200 ಘನ ಮೀಟರ ನಷ್ಟು ಉಪಯೋಗಿಸಿ ನಿರ್ಮಿಸಿದ, ಇದು ಒಂದು ಸುಂದರ ರಚನೆಯಾಗಿ ಕುಶಲಕರ್ಮಿಗಳಿಂದ ಪರಿವರ್ತಿಸಲ್ಪಟ್ಟಿದೆ. ಇಲ್ಲಿ ಪ್ರತಿಯೊಂದು ಕಲೆ, ಅಜಂತಾ ಮತ್ತು ಎಲ್ಲೋರ ಶಿಲ್ಪಕಲೆಗಳನ್ನು ಪ್ರತಿಬಿಂಬಿಸುತ್ತವೆ. ವಿಹಾರ್ ಮೈದಾನದಲ್ಲಿ ಮೊದಲ ಮಹಡಿಯಲ್ಲಿ ಗೌತಮ ಬುದ್ಧನ ಎರಡು ಮನೋಹರವಾದ ಕೆತ್ತಿದ ಮೂರ್ತಿಗಳನ್ನು ಪ್ರತಿಷ್ಠಾಪಿಸಲಾಗಿದೆ (ಅಂತರ್ಜಾಲ)

ರಾಜಕೀಯ:

ಭೌಗೋಳಿಕವಾಗಿ, ದಖನ್ ಪ್ರಸ್ತಭೂಮಿಯಲ್ಲಿರುವ ಕರ್ನಾಟಕದ ಉತ್ತರ ಭಾಗದ ಕಲಬುರ್ಗಿ ಜಿಲ್ಲೆಯು ಮಹಾರಾಷ್ಟ್ರ ಹಾಗೂ ಆಂಧ್ರ ಪ್ರದೇಶಗಳ ಗಡಿಯಂಚಿಗೆ ಹೊಂದಿಕೊಂಡಿದೆ. ಬೀದರ, ಕಲಬುರ್ಗಿ, ರಾಯಚೂರು, ಕೊಪ್ಪಳ ಹಾಗೂ ಬಳ್ಳಾರಿ ಜಿಲ್ಲೆಗಳನ್ನೊಳಗೊಂಡ ವಿಭಾಗೀಯ ಕೇಂದ್ರವಾಗಿರುವ ಕಲಬುರ್ಗಿ ಜಿಲ್ಲೆಯು ಸುಧೀರ್ಘವಾದ ಐತಿಹಾಸಿಕ ಹಿನ್ನೆಲೆಯನ್ನು ಹಾಗೂ ಪರಂಪರೆಯನ್ನು ಹೊಂದಿದೆ. ಕರ್ನಾಟಕ ಇತಿಹಾಸದುದ್ದಕ್ಕು ಪ್ರಮುಖ ಪಾತ್ರವಹಿಸಿರುವ ಈ ಜಿಲ್ಲೆಯನ್ನು ಶಾತವಾಹನರು, ಬಾದಾಮಿ ಚಾಲುಕ್ಯರು, ರಾಷ್ಟ್ರಕೂಟರು, ಕಲ್ಯಾಣದ ಚಾಲುಕ್ಯರು, ಕಳಚೂರರು, ಬಹಮನ ಶಾಹಿಗಳು ಹಾಗೂ ಬಿಜಾಪೂರದ ಆದಿಲಶಾಹಿಗಳು ಸತತವಾಗಿ ಆಳ್ವಿಕೆ ಮಾಡಿರುವರು. ರಾಷ್ಟ್ರಕೂಟರು ಗುಲಬರ್ಗಾ ಸಮೀಪದಲ್ಲಿರುವ ಮಳಖೇಡವನ್ನು ತಮ್ಮ ರಾಜಧಾನಿಯನ್ನಾಗಿ ಮಾಡಿಕೊಂಡಿದ್ದರೆಂಬ ಅಭಿಪ್ರಾಯವಿದೆ. ಅನಂತರ ಕರ್ನಾಕಟವನ್ನು ಆಳಿದ ಚಾಲುಕ್ಯ ಸೋಮೇಶ್ವರನು ಆಗ ಇದೇ ಪ್ರಾದೇಶಿಕ ವ್ಯಾಪ್ತಿಯಲ್ಲಿದ್ದ ಕಲ್ಯಾಣವನ್ನು ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡಿದ್ದರೆಂಬ ಅಭಿಪ್ರಾಯವಿದೆ. ಅನಂತರ ಕರ್ನಾಟಕವನ್ನು ಆಳಿದ ಚಾಲುಕ್ಯ ಸೋಮೇಶ್ವರನು ಆಗ ಇದೇ ಪ್ರಾದೇಶಿಕ ವ್ಯಾಪ್ತಿಯಲ್ಲಿದ್ದ ಕಲ್ಯಾಣವನ್ನು ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡನು. ಬಹಮನ ಶಾಹಿಗಳ ಆಳ್ವಿಕೆಯ ಸಂಸ್ಥಾಪಕನಾದ ಅಲ್ಲಾವುದ್ದೀನ ಬಹುಮನ್ ಶಾ ಕಲಬುರ್ಗಿ ಕಲಬುರ್ಗಿಯಿಂದ 1347 ರಿಂದ 1424 ರ ವರೆಗೆ ಪ್ರಬಲವಾಗಿ ಆಳ್ವಿಕೆ ಮಾಡಿದರು. ಅನಂತರ ಅಹಮದ ಷಾವಲಿ (1422–1436) ಯ ಆಡಳಿತಾವಧಿಯಲ್ಲಿ ಬಹಮನ ಶಾಹಿಗಳು ತಮ್ಮ ರಾಜಧಾನಿಯನ್ನು ಕಲಬುರ್ಗಿಯಿಂದ

ಬೀದರಗೆ ವರ್ಗಾಹಿಸಿದರು. ಈ ಸಾಮ್ರಾಜ್ಯವು ದಖನ್ ಪ್ರಸ್ಥಭೂಮಿಯ ಕೃಷ್ಣಾ ನದಿಯಿಂದ ತಪತಿ ನದಿಯವರೆಗೂ ಹಾಗೂ ಪಶ್ಚಿಮ ಘಟ್ಟಗಳಿಂದ ತೆಲಂಗಾಣ ಪ್ರದೇಶಗಳಲ್ಲಿ ಕೃಷ್ಣ ನದಿಯಿಂದ ತಪತಿ ನದಿಯವರೆಗೂ ಹಾಗೂ ಪಶ್ಚಿಮ ಘಟ್ಟಗಲಿಂದ ತೆಲಂಗಾಣ ಪ್ರದೇಶಗಳಲ್ಲಿ ಆವೃತವಾಗಿರುವ ಪ್ರಾಂತ್ಯಗಳನ್ನು ತಮ್ಮ ಹತೋಟಿಯಲ್ಲಿಟ್ಟುಕೊಂಡಿದ್ದರು. ಈ ವಂಶದ ದೀರ್ಘ ಆಳ್ವಿಕೆಯ ಅವಧಿಯಲ್ಲಿ ಅವರು ಮಾಡಿರುವ ಸಾಂಸ್ಕೃತಿಕ ಸಾಧನೆಗಳು ಇತಿಹಾಸದಲ್ಲಿ ಅವಿಸ್ಮರಣೀಯವಾಗಿವೆ. ಬಹಮನ ಶಾಹಿಗಳ ಆಳ್ವಿಕೆ ಅವನತಿಗೊಂಡ ಮೇಲೆ ಈ ಭಾಗವು ಹೈದ್ರಾಬಾದ ನಿಜಾಮರ ಸಂಸ್ಥಾನವಾಗಿ ಮುಂದುವರೆದು ಅನಂತರ ಅಪರೋಕ್ಷವಾಗಿ ಬ್ರಿಟಿಷರ ಹತೋಟಿಯಲ್ಲಿ ಮುಂದುವರೆಯಿತು.

ಸ್ವಾತಂತ್ರ್ಯಕ್ಕೆ ಮುನ್ನ ಹೈದರಾಬಾದ ಕರ್ನಾಟಕ ಪ್ರದೇಶದಲ್ಲಿ ಪ್ರಜಾಪ್ರಭುತ್ವದ ತುಂಬ ಕ್ಷೀಣವಾಗಿತ್ತು. ಪೋಲಿಸ್ ಕಾರ್ಯಾಚರಣೆಯ ಅನಂತರ (1948) ನಿಜಾಮಶಾಹಿ ಕೊನೆಗೊಂಡ ಬಳಿಕ, ದೇಶದ ಇತರ ಪ್ರದೇಶಗಳಂತೆ ಈ ಭಾಗದಲ್ಲೂ ಪ್ರಜಾಪ್ರಭುತ್ವದ ಪರವಾಗಿ ಬಲವಾದ ಅಭಿಪ್ರಾಯ ಮೂಡಿತು. ಸ್ವಾತಂತ್ರ್ಯಾ ನಂತರದಲ್ಲಿ ದೇಶದಲ್ಲಿ ಗುಲಬರ್ಗಾ ಲೋಕಸಭಾ ಕ್ಷೇತ್ರದಿಂದ ಉಜ್ವಲ ದೇಶಪ್ರೇಮಿ ಮತ್ತು ಸ್ವಾತಂತ್ರ್ಯ ಹೋರಾಟಗಾರರಾಗಿದ್ದ ಸ್ವಾಮಿ ರಮಾನಂದ ತೀರ್ಥರು ರಾಷ್ಟ್ರೀಯ ಕಾಂಗ್ರೆಸ್ ಪಕ್ಷದಿಂದ ಸ್ಪರ್ಧಿಸಿ ವಿಜಯಶಾಲಿಯಾದರು. ವಿಧಾನ ಸಭೆಗೆ 1957 ರಲ್ಲಿ ಮೊದಲನೇ ಸಾರ್ವತ್ರಿಕ ಚುನಾವಣೆವರೆಗೆ ಬೇರೆ ಬೇರೆ ಪಕ್ಷಗಳ ನಾಯಕರುಗಳು ಆಯ್ಕೆಯಾಗಿ ರಾಜ್ಯ ವಿಧಾನಸಭೆ ಮತ್ತು ವಿಧಾನ ಪರಿಷತ್ ಪ್ರವೇಶಿಸಿದ್ದಾರೆ. ಅವರಲ್ಲಿ ಜಿಲ್ಲೆಯಿಂದ ಪ್ರಮುಖ ನಾಯಕರುಗಳೆಂದರೆ, ಸ್ವಾಮಿ ರಮಾನಂದ ತೀರ್ಥರು, ಗಂಗಾಧರ ನಮೋಶಿ, ಚಂದ್ರಶೇಖರ ಪಾಟೀಲ ಮಹಾಗಾಂವ, ಮಹಾದೇವಪ್ಪ ರಾಂಪುರೆ, ವಿರೇಂದ್ರ ಪಾಟೀಲ, ರಾಮಚಂದ್ರ ಮೀರಪ್ಪ, ಬಾಪುಗೌಡ ದರ್ಶನಾಪುರ, ಜಗನ್ನಾಥರಾವ ಚಂಡ್ರಿಕಿ, ವ್ಹಿ.ಪಿ. ದೇವುಳಗಾಂವಕರ್, ಸರದಾರ್ ಶರಣಗೌಡ ಇನಾಂದಾರ, ಡಿ.ಬಿ. ಕಲ್ಮಂಣಕರ್, ಮಲ್ಲಿಕಾರ್ಜುನ ಖರ್ಗೆ,ಧರ್ಮಸಿಂಗ ಮತ್ತು ಅನೇಕ ಮಹನೀಯರು ರಾಜಕೀಯ ಮತ್ತು ಸಾರ್ವಜನಕ ಕ್ಷೇತ್ರಗಳಲ್ಲಿ ತಮ್ಮ ಸೇವೆಯಿಂದ ಜಿಲ್ಲೆಗೆ ಮತ್ತು ರಾಜ್ಯಕ್ಕೆ ಹೆಸರು ತಂದುಕೊಟ್ಟಿದ್ದಾರೆ. ಆಧುನಿಕ ಕರ್ನಾಟಕ ಇತಿಹಾಸದಲ್ಲಿ ಕಲಬುರ್ಗಿ ಜಿಲ್ಲೆಯಿಂದ ಇಬ್ಬರು ನಾಯಕರುಗಳು ರಾಜ್ಯದ ಚುಕ್ಕಾಣಿ ಹಿಡಿಯುವ ಭಾಗ್ಯ ಪಡೆದಿರುತ್ತಾರೆ. **(ಕರ್ನಾಟಕ ರಾಜ್ಯ ಗೆಜೆಟೀಯರ್, ಗುಲಬರ್ಗಾ ಜಿಲ್ಲೆ ಕರ್ನಾಟಕ ಸರ್ಕಾರ, ಬೆಂಗಳೂರು)**

ಕಲಬುರಗಿಯ ಎರಡು ಮಾಜಿ ಮುಖ್ಯಮಂತ್ರಿಗಳ ನೆಲೆಯಾಗಿದೆ. ಅವರುಗಳೆಂದರೆ ವಿರೇಂದ್ರ ಪಾಟೀಲ(1968–1971, 1988 –1990) ಮತ್ತು ಧರ್ಮಸಿಂಗ್ (2004–2006) ಈ ಇಬ್ಬರೂ ನಾಯಕರು ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಪಕ್ಷದವರಾಗಿದ್ದರು. ಗುಲ್ಬರ್ಗ ಸಂಸತ್ತಿನ ಪ್ರಸಕ್ತ ಸದಸ್ಯರ ಶ್ರೀ ಮಲ್ಲಿಕಾರ್ಜುನ ಖರ್ಗೆಯವರಾಗಿದ್ದಾರೆ. ಅವರು ಈ

ಹಿಂದೆ ಭಾರತ ಸರ್ಕಾರದ ರೈಲ್ವೆ ಸಚಿವರಾಗಿದ್ದರು. ರಾಜ್ಯಸಭೆಯ ಸದಸ್ಯರಾಗಿ ಶ್ರೀ ಬಸವರಾಜ ಪಾಟೀಲ ಸೇಡಮ್ ಅವರಾಗಿರುತ್ತಾರೆ. ವಿಧಾನ ಸಭೆ ಸದಸ್ಯರುಗಳೆಂದರೆ ಖಮರುಲ್ ಇಸ್ಲಾಂ (ಗುಲ್ಬರ್ಗ ಉತ್ತರ) ಶ್ರೀ ದತ್ತಾತ್ರೇಯ ಪಾಟೀಲ ರೇವೂರ(ಗುಲ್ಬರ್ಗ ದಕ್ಷಿಣ) ಮತ್ತು ಶ್ರೀ ಜಿ ರಾಮಕೃಷ್ಣ (ಗುಲ್ಬರ್ಗ ಗ್ರಾಮೀಣ) (ಅಂತರ್ಜಾಲ)

ಸಚಿವ ಸಂಪುಟದಲ್ಲಿ ಪ್ರಾತಿನಿಧ್ಯ

ಕಳೆದ 40 ವರ್ಷಗಳ ಅವಧಿಯಲ್ಲಿ ಅಂದರೆ 1962 ರಿಂದ 2002 ರ ವರೆಗಿನ ಅವಧಿಯಲ್ಲಿ ದಕ್ಷಿಣ ಕರ್ನಾಟಕ ಮತ್ತು ಉತ್ತರ ಕರ್ನಾಟಕದಿಂದ ಬಂದಿರುವ ಮುಖ್ಯಮಂತ್ರಿಗಳು ಹಾಗೂ ಸಚಿವರ ಸಂಬಂಧದಲ್ಲಿ ನೀಡಲಾಗಿರುವ ಪ್ರಾತಿನಿಧ್ಯವನ್ನು ಕೆಳಗಿನ ಕೋಷ್ಟಕದಲ್ಲಿ ನಿದೇಡಲಾಗಿದೆ.

ಮುಖ್ಯಮಂತ್ರಿಗಳು (1962–2002)

ಪ್ರದೇಶ	ಮುಖ್ಯಮಂತ್ರಿಗಳು	ಶೇ	ಸಚಿವರ ಸಂಖ್ಯೆ	ಶೇ
ಉ.ಕರ್ನಾಟಕ	04	36	207	39
ದ.ಕರ್ನಾಟಕ	07	64	318	61
ಒಟ್ಟು	**11**	**100%**	**525**	**100%**

11 ಜನ ಮುಖ್ಯಮಂತ್ರಿಗಳ ಪೈಕಿ 7 ಜನ ಮುಖ್ಯಮಂತ್ರಿಗಳು ದಕ್ಷಿಣ ಕರ್ನಾಟಕ್ಕೆ ಸೇರಿದವರಾಗಿದ್ದಾರೆ (ಶೇ 64) ಉತ್ತರ ಕರ್ನಾಟಕದ 4 ಜನ ಮುಖ್ಯಮಂತ್ರಿಗಳು ಉತ್ತರ ಕರ್ನಾಟಕಕ್ಕೆ ಸೇರಿದವರಾಗಿದ್ದಾರೆ (ಶೇ.36) ಕಂಡು ಬರುತ್ತದೆ. ಕಳೆದ 40 ವರ್ಷಗಳ ಅವಧಿಯಲ್ಲಿ ನೇಮಕಗೊಂಡ ಒಟ್ಟು 525 ಸಚಿವರ ಪೈಕಿ 318 ರಷ್ಟು ಹೆಚ್ಚಿನ ಸಂಖ್ಯೆಯ ಸಚಿವರು (ಶೇ.61) ದಕ್ಷಿಣ ಕರ್ನಾಟಕ್ಕೆ ಸೇರಿದ್ದರೆ 207 ಸಚಿವರು (ಶೇ.49) ಉತ್ತರ ಕರ್ನಾಟಕ್ಕೆ ಸೇರಿದ್ದಾರೆ. (ಡಾ. ನಂಜುಡಪ್ಪನವರ ವರದಿ ಮತ್ತು ಕಲಂ 371 ಡಾ. ಬಸವರಾಜ ಟಿ. ಕುಮ್ನೂರ)

ಶೈಕ್ಷಣಿಕ ಸ್ಥಿತಿಗತಿ:

ಕಲಬುರ್ಗಿ ಜಿಲ್ಲೆಯ ಅತ್ಯಂತ ಹಳೆಯದಾದ ಶೈಕ್ಷಣಿಕ ಇತಿಹಾಸವನ್ನು ತಿಳಿಸುವ ಸ್ಥಳವೆಂದರೆ, ಇಂದಿನ ಚಿತ್ತಾಪೂರ ತಾಲೂಕಿನ ನಾಗಾಯಿ, ಹಾಳುಬಿದ್ದ ಈ ಊರಲ್ಲಿ ರಾಷ್ಟ್ರಕೂಟ ಅರಸರ ಗತವೈಭವ ಸಾರುವ ಅನೇಕ ಶಿಲಾಶಾಸನಗಳು ದೊರೆತಿವೆ. ಇದರಲ್ಲಿ ಶಿಕ್ಷಣಕ್ಕೆ ಸಂಬಂಧಿಸಿದ ವಿಷಯಗಳು ಲಭ್ಯವಾಗಿವೆ. "ನಾಗಾಯಿ ವಿಶ್ವವಿದ್ಯಾಲಯ ಮಟ್ಟದ ಜ್ಞಾನ ಪ್ರಸಾರದ ಸಂಸ್ಥೆಯಾಗಿತ್ತು. ಷಟಶಾಸ್ತ್ರಗಳ ಬೋಧನೆ ಇಲ್ಲಿ ಲಭ್ಯವಿತ್ತು. ಮಧ್ಯಯುಗದ ಮಹಮ್ಮದೀಯ ಅರಸರ ಆಳಿಕೆಯಲ್ಲಿ ಈ ಭಾಗಕ್ಕೆ ಇಸ್ಲಾಂ ಮಾದರಿಯ ಶಿಕ್ಷಣ ದೊರೆಯಿತು.

ಬೀದರಿನ 'ಮಹಮ್ಮದ ಶಾ' ಅರಸನ ಗವಾನ, ಶಿಕ್ಷಣ ಪ್ರೇಮಿಯಾಗಿದ್ದನು. ಅವನು ಈ ಪ್ರದೇಶದಲ್ಲಿ ಸಾಕಷ್ಟು 'ಮಕ್ತಬಾ' ಅಥವಾ ಪ್ರಾಥಮಿಕ ಶಿಕ್ಷಣ ಸಂಸ್ಥೆಗಳನ್ನು ಪ್ರಾರಂಭಿಸಿದನು. 1875 ರಲ್ಲಿ ಕಲಬುರ್ಗಿಯಲ್ಲಿ 'ಆಂಗ್ಲ ದೇಶೀಯ' ಮಾಧ್ಯಮದ ಶಾಲೆಯೊಂದು ತೆರೆಯಲ್ಪಟ್ಟಿತು. ಇದರಲ್ಲಿ ಉರ್ದು ಮಾಧ್ಯಮವಿದ್ದು ಆಂಗ್ಲ ಭಾಷೆಯನ್ನು ಒಂದು ವಿಷಯವನ್ನಾಗಿ ಬೋಧಿಸಲಾಗುತ್ತಿತ್ತು. 1890 ರಲ್ಲಿ ಉನ್ನತ ಪ್ರಾಥಮಿಕ ಹಂತದ ನಂತರ ವಿಶೇಷ 'ಮುಲ್ಕಿ' ಪರೀಕ್ಷೆ ನಡೆಸುವ ವ್ಯವಸ್ಥೆ ಪ್ರಾರಂಭವಾಯಿತು. ಅದೇ ವರ್ಷ ಕಲಬುರ್ಗಿ ಜಿಲ್ಲೆಯಲ್ಲಿ ಶಿಕ್ಷಕರ ತರಬೇತಿ ಒದಗಿಸುವ 'ನಾರ್ಮಲ್ ಶಾಲೆ' ಪ್ರಾರಂಭವಾಯಿತು. 20 ನೇ ಶತಮಾನದ ಪ್ರಾರಂಭದಲ್ಲಿ ವ್ಯವಸ್ಥಿತವಾದ ಖಾಸಗಿ ಶಿಕ್ಷಣವೂ ಕೂಡ ಜಾರಿಗೊಂಡಿತು. ಜಿಲ್ಲೆಯ ಜನತೆಯ ಕಳಕಳಿ ಹೊಂದಿದ ಅನೇಕ ಗಣ್ಯರಿಂದ ಹಲವಾರು ವಿದ್ಯಾ ಸಂಸ್ಥೆಗಳು ಇಲ್ಲಿ ನಿರ್ಮಾಣಗೊಂಡವು. ಶಿಕ್ಷಣದ ಗಣನೀಯ ಸೇವೆಗೆ ಸಜ್ಜಾದವು. ಅವುಗಳಲ್ಲಿ ಮುಖ್ಯವಾದ ಪ್ರಾರಂಭಿಕ ಸಂಸ್ಥೆಗಳೆಂದರೆ, ನೂತನ ವಿದ್ಯಾಲಯ ಸಂಸ್ಥೆ ಮತ್ತು ಶರಣ ಬಸವೇಶ್ವರ ವಿದ್ಯಾವರ್ಧಕ ಸಂಸ್ಥೆ. ಇವು ಸ್ವಾತಂತ್ರ್ಯ ಪೂರ್ವದಲ್ಲಿಯೇ ಈ ಭಾಗದ ಜನರಿಗೆ ಉತ್ತಮ ದೇಶಿಯ ಶಿಕ್ಷಣ ಸುಲಭವಾಗಿ ದೊರೆಯುವಂತೆ ಮಾಡಿದವು. ಪ್ರಾಥಮಿಕದಿಂದ ಪದವಿ ಹಂತದವರೆಗೆ ಇಂದು ಖಾಸಗಿ ಸಂಸ್ಥೆಗಳು ಪುಷ್ಕಳವಾಗಿ ಬೆಳೆದಿವೆ. ನೂತನ ವಿದ್ಯಾಲಯ ಸಂಸ್ಥೆ 1907 ರಲ್ಲಿ ಸ್ಥಾಪನೆಗೊಂಡು ಅದೇ ವರ್ಷ ಮರಾಠಿ ಮಾಧ್ಯಮದಲ್ಲಿ ಪ್ರಾಥಮಿಕ ಶಾಲೆಯೊಂದನ್ನು ಪ್ರಾರಂಭಿಸಿತು. ಈ ಭಾಗದಲ್ಲಿ ಖಾಸಗಿಯಾಗಿ ದೇಶಿಯ ಮಾಧ್ಯಮದಲ್ಲಿ ಪ್ರಥಮವಾಗಿ ಶಾಲೆಯನ್ನು ತೆರೆದ ಶ್ರೇಯಸ್ಸು ಈ ಸಂಸ್ಥೆಗೆ ಸಲ್ಲುತ್ತದೆ. 1918 ರಲ್ಲಿ ಶರಣ ಬಸವೇಶ್ವರ ಸಂಸ್ಥಾನದ 7ನೇ ಪೀಠಾಧಿಪತಿಯಾದ ಪೂಜ್ಯ ದೊಡ್ಡಪ್ಪ ಅಪ್ಪನ್ನವರು ಜಿಲ್ಲಾ ಕೇಂದ್ರದಲ್ಲಿನ ಸಾರ್ವಜನಕ ವಾಚನಾಲಯ ಒಂದನ್ನು ತೆರೆದರು. ಈ ಭಾಗದ ಜನತೆಯಲ್ಲಿ ಶೈಕ್ಷಣಿಕ, ರಾಜಕೀಯ ಪ್ರಜ್ಞೆ ಮೂಡಿಸುವ ಪ್ರಯತ್ನ ಮಾಡಿದರು.

ಉನ್ನತ ಶಿಕ್ಷಣ :

ನಮ್ಮ ಜಿಲ್ಲೆಯಲ್ಲಿ ಉನ್ನತ ಶಿಕ್ಷಣ ಪ್ರಸಾರ ಮಾಡಿದ ಪ್ರಥಮ ಸಂಸ್ಥೆ " ಗುಲಬರ್ಗಾ ಸರಕಾರಿ ಕಲಾ ಮತ್ತು ವಿಜ್ಞಾನ ಮಹಾವಿದ್ಯಾಲಯ" ಇದು 1932 ರಲ್ಲಿ ಪ್ರಾರಂಭವಾಯಿತು. ಶರಣಬಸವೇಶ್ವರ ವಿದ್ಯಾವರ್ಧಕ ಸಂಘದಿಂದ ಪ್ರಾರಂಭಗೊಂಡ ಶರಣ ಬಸವೇಶ್ವರ ವಿಜ್ಞಾನ ಮಹಾವಿದ್ಯಾಲಯ, 1956 ರಿಂದಲೇ ಉನ್ನತ ವಿದ್ಯಾ ಪ್ರಸಾರ ನಡೆಸುತ್ತಿದೆ. 1957 ರಲ್ಲಿ ಕಲಾ ವಿಷಯಗಳನ್ನು ಸಹ ಬೋಧಿಸಲು ಪ್ರಾರಂಭಿಸಿದ್ದರಿಂದ ಈ ಮೊದಲಿನ ಶರಣ ಬಸವೇಶ್ವರ ವಿಜ್ಞಾನ ಮಹಾವಿದ್ಯಾಲಯವು ಶರಣ ಬಸವೇಶ್ವರ ಕಲಾ ಮತ್ತು ವಿಜ್ಞಾನ ಮಹಾವಿದ್ಯಾಲಯವಾಯಿತು. ಶರಣ ಬಸವೇಶವರ ಕಲಾ ಮಹಾವಿದ್ಯಾಲಯದಲ್ಲಿ ಸ್ನಾತಕೋತ್ತರ ಲಲಿತ ಕಲಾ ವಿಭಾಗ ತೆರೆಯಲ್ಪಟ್ಟಿದೆ. ಡ್ರಾಯಿಂಗ್ ಮತ್ತು ಪೇಂಟಿಂಗ್

ವಿಷಯಗಳನ್ನು ಬೋಧಿಸುವ ರಾಷ್ಟ್ರೀಯ ಮಟ್ಟದ ಶಿಕ್ಷಕರು ಇಲ್ಲಿದ್ದಾರೆ. 1963 ರಲ್ಲಿ ಎಚ್.ಕೆ.ಇ ಸಂಸ್ಥೆಯು ಮಹಾದೇವಪ್ಪ ರಾಂಪುರೆ ಮೆಡಿಕಲ್ ಕಾಲೇಜ್ ಪ್ರಾರಂಭಿಸಿತು. ಇದರಿಂದ ವೈದ್ಯಕೀಯ ಕ್ಷೇತ್ರದ ಅಧ್ಯಯನ ಇಲ್ಲಿಯ ಜನತೆಗೆ ದೊರೆಯುವಂತಾಗಿದೆ. ವೈದ್ಯಕೀಯ ರಂಗದಲ್ಲಿ ಅನೇಕ ವೃತ್ತಿಪರ ಕೋರ್ಸುಗಳು ಇಲ್ಲಿ ನಡೆಯುತ್ತವೆ. ಪ್ರತಿವರ್ಷ ನೂರಾರು ಉತ್ತರ ಭಾರತದ ವಿದ್ಯಾರ್ಥಿಗಳೂ ಇಲ್ಲಿ ಪ್ರವೇಶ ಪಡೆಯುತ್ತಿರುವುದು ಗಮನಾರ್ಹ. ಕರ್ನಾಟಕದ ಹೆಮ್ಮೆಯ ವೈದ್ಯಕೀಯ ಸಂಸ್ಥೆಗಳಲ್ಲಿ ಇದು ಒಂದಾಗಿದೆ. ಮಹಿಳಾ ಶಿಕ್ಷಣಕ್ಕೆ ಎಚ್.ಕೆ.ಇ. ಸಂಸ್ಥೆ ವಿಶೇಷ ಗಮನ ಹರಿಸಿದೆ. 1955–56 ರಲ್ಲಿಯೇ "ವೀರಮ್ಮ ಗಂಗಸಿರಿ ಮಹಿಳಾ ಮಹಿಳಾ ಮಹಾವಿದ್ಯಾಲಯ"ವನ್ನು ಸ್ಥಾಪಿಸಿದೆ. ಇದರಿಂದ ಪ್ರತ್ಯೇಕ ಉನ್ನತ ಶಿಕ್ಷಣ ಪಡೆಯುವ ಅವಕಾಶ ಈ ಭಾಗದ ತರುಣಿಯರಿಗೆ ದೊರೆತಂತಾಗಿದೆ. 1961 ರಲ್ಲಿ ಇದೇ ಎಚ್.ಕೆ.ಇ. ಸಂಸ್ಥೆ ಜಿಲ್ಲಾ ಕೇಂದ್ರ ಸ್ಥಳಗಳಲ್ಲಿ " ಶಂಕರಲಾಲ್ ಲಾಹೋಟಿ ಕಾನೂನು ಮಹಾವಿದ್ಯಾಲಯ" ತೆರೆದು ಕಲಬುರ್ಗಿ ಜಿಲ್ಲೆಯಲ್ಲಿ ಕಾನೂನು ಅಧ್ಯಯನಕ್ಕೆ ಅವಕಾಶ ಮಾಡಿಕೊಟ್ಟಿತು. ಈ ಮಹಾವಿದ್ಯಾಲಯ ಈ ಭಾಗದ ಪ್ರಥಮ ಕಾನೂನು ಅಧ್ಯಯನದ ಸಂಸ್ಥೆ ಎನಿಸಿದೆ. ಜಿಲ್ಲೆಯ ತಾಲೂಕು ಸ್ಥಳ "ಸೇಡಂ"ನಲ್ಲಿ 1974–75 ರಲ್ಲಿ "ಶ್ರೀ ಕೊತ್ತಲ ಬಸವೇಶ್ವರ ಶಿಕ್ಷಣ ಸಂಸ್ಥೆ ಪ್ರಾರಂಭವಾಗಿದೆ. ಅತ್ಯಂತ ಉತ್ತಮ ರೀತಿಯ ಶಿಕ್ಷಣ ವ್ಯವಸ್ಥೆಯನ್ನು ಆ ಭಾಗದ ಜನತೆಗೆ ಒದಗಿಸುತ್ತಿದೆ.

ಶಿಕ್ಷಣ ಮಹಾವಿದ್ಯಾಲಯಗಳು :

ಮಾಧ್ಯಮಿಕ ಶಿಕ್ಷಕರಿಗೆ ಒದಗಿಸುವದಕ್ಕೆಂದು ಹೈದ್ರಾಬಾದ ಸರ್ಕಾರದಿಂದ 1955 ರಲ್ಲಿ ಕಲಬುರ್ಗಿಯಲ್ಲಿ "ಸರಕಾರಿ ಶಿಕ್ಷಣ ಮಹಾವಿದ್ಯಾಲಯ" ಸ್ಥಾಪನೆಯಾಗಿದೆ. ಇದರಿಂದ ಜಿಲ್ಲೆಯಲ್ಲಿ ಬಹುದಿನಗಳ ಹಿಂದೆಯೇ ಶಿಕ್ಷಕರ ತರಬೇತಿಯ ಅವಕಾಶ ಉತ್ತಮ ಮಟ್ಟದಲ್ಲಿ ದೊರೆಯುವಂತೆ ಸಾಧ್ಯವಾಗಿದೆ.

ಗುಲಬರ್ಗಾ ವಿಶ್ವವಿದ್ಯಾಲಯ :

ಹೈದ್ರಾಬಾದ ಕರ್ನಾಟಕ ಪ್ರದೇಶಕ್ಕೆ 1969–70 ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯ ಸ್ನಾತಕೋತ್ತರ ಕೇಂದ್ರ ಕಲಬುರ್ಗಿಯಲ್ಲಿ ಪ್ರಾರಂಭಗೊಂಡಿತು. ಕಲಬುರ್ಗಿ ವಿಶ್ವವಿದ್ಯಾಲಯ ಸ್ಥಾಪನೆಯಾದ ಮೇಲೆ ಬಹಳಷ್ಟು ಮಹಾವಿದ್ಯಾಲಯಗಳು ಅಸ್ತಿತ್ವದಲ್ಲಿ ಬಂದಿವೆ. ಇಂದು ಈ ಜಿಲ್ಲೆ ಸುಮಾರು 42 ಪದವಿ ಮಹಾವಿದ್ಯಾಲಯಗಳನ್ನು ಹೊಂದಿದೆ. ಇತ್ತೀಚೆಗೆ ಕಲಬುರ್ಗಿಯ ಆಳಂದ ರಸ್ತೆಯ ಕಡಗಂಚಿಯಲ್ಲಿ ಕೇಂದ್ರೀಯ ವಿಶ್ವವಿದ್ಯಾಲಯ ಸ್ಥಾಪನೆ ಮಾಡಲಾಗಿದೆ (ಶ್ರೀಮತಿ ನಿಂಗಮ್ಮ ಪತಂಗಿ, ಕಲಬುರ್ಗಿ ಜಿಲ್ಲಾ ದರ್ಶನ) ಕರ್ನಾಟಕದಲ್ಲಿ 1961 ರಲ್ಲಿ ಸಾಕ್ಷರತೆ ಪ್ರಮಾಣ ಕೇವಲ 29.80 ಇತ್ತು ಅದು 2001 ರಲ್ಲಿ 67.04 ಕ್ಕೆ ಏರಿದೆ.

ಆದರೆ ಗುಲಬರ್ಗಾ ವಿಭಾಗದ ಜಿಲ್ಲೆಗಳಾದ ಬೀದರ, ಗುಲಬರ್ಗಾ, ರಾಯಚೂರು ಮತ್ತು ಬಳ್ಳಾರಿಗಳಲ್ಲಿ ಸಾಕ್ಷರತೆ ಪ್ರಮಾಣವು ರಾಜ್ಯದ ಸರಾಸರಿಗಿಂತ ಕಡಿಮೆಯಿದೆ. ಬೀದರನಲ್ಲಿ 61.98, ಗುಲಬರ್ಗಾದಲ್ಲಿ 50.65, ರಾಯಚೂರಿನಲ್ಲಿ 51.83 ಹಾಗೂ ಬಳ್ಳಾರಿ ಜಿಲ್ಲೆಯಲ್ಲಿ 57.81 ರಷ್ಟು ಸಾಕ್ಷರತೆ ಪ್ರಮಾಣ ಇದೆ. ಸಾಕ್ಷರತೆಯಲ್ಲಿ ದಕ್ಷಿಣ ಕನ್ನಡ ಮೊದಲನೆಯ ಸ್ಥಾನ, ಬೆಂಗಳೂರು ಎರಡನೇಯ ಸ್ಥಾನ, ಗುಲಬರ್ಗಾ ಕೊನೆಯ ಸ್ಥಾನ, ರಾಯಚೂರು ಕೊನೆಯಿಂದ ಎರಡನೇಯದು. ದಕ್ಷಿಣ ಕರ್ನಾಟಕದ 3 ಜಿಲ್ಲೆಗಳು ಹಾಗೂ ಉತ್ತರ ಕರ್ನಾಟಕದ 6 ಜಿಲ್ಲೆಗಳಲ್ಲಿ ಸಾಕ್ಷರತಾ ಪ್ರಮಾಣವು ರಾಜ್ಯದ ಸರಾಸರಿಗಿಂತ ಕಡಿಮೆಯಿದೆ. ಇತ್ತೀಚಿನ 2011 ರ ಜನಗಣತಿ ಪ್ರಕಾರ ಯಾದಗಿರಿ ಜಿಲ್ಲೆ ಕಡಿಮೆ ಸಾಕ್ಷರತೆ ದಾಖಲಾಗಿದೆ. ತದ ನಂತರ ರಾಯಚೂರು ಶೇ(52.36) 60.44 ಸಾಕ್ಷರತೆ ಪ್ರಮಾಣ ಹೊಂದಿ 29ನೇ ರ್‍ಯಾಂಕ ಪಡೆದಿದೆ 28ನೇ ರ್‍ಯಾಂಕು ಚಾಮರಾಜ ನಗರ ಶೇ (61.12%) ಹೊಂದಿದೆ. ಗುಲಬರ್ಗಾ 27ನೇ ಸ್ಥಾನ ಶೇ 65.65 ಸಾಕ್ಷರತೆ ಪ್ರಮಾಣವಿದೆ. ಬೀದರ ಜಿಲ್ಲೆಯ ಸಾಕ್ಷರತೆ ಪ್ರಮಾಣ 71.01 ರಷ್ಟಿದೆ. ಹೀಗೆ ಗುಲ್ಬರ್ಗ ವಿಭಾಗದ ಸಾಕ್ಷರತೆ ಪ್ರಮಾಣ ರಾಜ್ಯದ ಸಾಕ್ಷರತೆ ಪ್ರಮಾಣಕ್ಕಿಂತ (75.60) ಕಡಿಮೆ ಇದೆ.

ಶಿಕ್ಷಣ/Education 31.03.2008

ತಾಲ್ಲೂಕ್ಕುಗಳು	ಪ್ರಾಥಮಿಕ ಶಾಲೆಗಳು			ಪ್ರೌಢ ಶಾಲೆಗಳು			ಪದವಿ ಪೂರ್ವ		
	ಶಾಲೆಗಳು	ಹುಡುಗರು	ಹುಡಗಿಯರು	ಶಾಲೆಗಳು	ಹುಡುಗರು	ಹುಡಗಿಯರು	ಶಾಲೆಗಳು	ಹುಡುಗರು	ಹುಡಗಿಯರು
1	310	311	312	313	314	315	316	317	318
ಅಫಜಲಪೂರ	179	19174	17.210	38	4.283	3.068	9	2684	570
ಆಳಂದ	32	29033	26.672	69	5.822	5.055	14	3055	901
ಚಿಂಚೋಳಿ	273	20612	19.058	37	3.496	3.348	7	1442	599
ಚಿತ್ತಾಪೂರ	325	32673	30.571	91	6.181	5.771	18	2171	1215
ಗುಲಬರ್ಗಾ	499	65978	62.412	198	14.031	14.50	84	10440	4360
ಜೇವರ್ಗಿ	247	25634	24.491	53	4.442	2.885	8	1155	356
ಸೇಡಂ	235	19648	18.881	31	4.526	3.640	7	1492	532
ಶಹಾಪೂರ	373	27466	23001	47	4.940	3.256	11	2592	911
ಸುರಪುರ	390	31915	26.333	53	5.074	4.035	12	2820	871
ಯಾದಗೀರ	327	28422	25.470	49	4.158	3.230	17	2866	998
ಒಟ್ಟು	3084	300555	274.099	666	56.953	48.738	187	30717	11313

ಮಾಹಿತಿ ಮೂಲ :

1) ಕಾಲಂ 310 ರಿಂದ 315 ರ ವರೆಗೆ ಉಪನಿರ್ದೇಶಕರು ಸಾರ್ವಜನಕ ಶಿಕ್ಷಣ ಇಲಾಖೆ, ಗುಲ್ಬರ್ಗಾ/ಯಾದಗೀರಿ

2) ಕಾಲಂ 316 ರಿಂದ 318 ರ ವರೆಗೆ ಜಂಟಿ ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ ಗುಲಬರ್ಗಾ (ಗುಲಬರ್ಗಾ ಜಿಲ್ಲೆಯ ಅಂಕಿ ಅಂಶಗಳ ನೋಟ 2008–08)

ತಾಲ್ಲೂಕುಗಳು	ಸಾಮಾನ್ಯ ಪದವಿ ಕಾಲೇಜುಗಳು			ಮೆಡಿಕಲ್ ಕಾಲೇಜು (ಅಲೋಪತಿ, ಹೋಮಿಯೋಪತಿ, ನ್ಯಾಚುರೋಪತಿ, ಆಯುರ್ವೇದ, ಯುನಾನಿ)		
	ಶಾಲೆಗಳು	ಹುಡುಗರು	ಹುಡಗಿಯರು	ಶಾಲೆಗಳು	ಹುಡುಗರು	ಹುಡಗಿಯರು
1	319	320	321	322	323	324
ಅಫಜಲಪೂರ	2	226	82	0	–	–
ಆಳಂದ	3	401	268	0		–
ಚಿಂಚೋಳಿ	3	595	401	0	–	–
ಚಿತ್ತಾಪೂರ	3	409	158	0	–	–
ಗುಲಬರ್ಗಾ	16	4694	3284	2	570	422
ಜೇವರ್ಗಿ	1	350	146	0	–	–
ಸೇಡಂ	2	284	271	0	–	–
ಶಹಾಪೂರ	1	388	129	0		–
ಸುರಪುರ	3	772	288	0	–	–
ಯಾದಗೀರ	2	450	328	0	–	–
ಒಟ್ಟು	36	8569	5355	2	570	422

ಮಾಹಿತಿ ಮೂಲ : 1) ಕಾಲಂ 319 ರಿಂದ 321 ರ ವರೆಗೆ ಜಂಟಿ ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ ಗುಲಬರ್ಗಾ

2) ಕಾಲಂ 322 ರಿಂದ 324 ರ ವರೆಗೆ ಉಪನಿರ್ದೇಶಕರು ಸಾರ್ವಜನಿಕ ಶಿಕ್ಷಣ ಇಲಾಖೆ, ಗುಲ್ಬರ್ಗಾ/ಯಾದಗೀರಿ

ತಾಲ್ಲೂಕುಗಳು	ಪಾಲಿಟೆಕ್ನಿಕಗಳು 31.03.2008			ಇಂಜನೀಯರಿಂಗ 31.03.2008			ದಂತವೈದ್ಯ ಕಾಲೇಜುಗಳು 31.03.2008			ಗ್ರಂಥಾಲಯ
	1	325	326	327	328	329	330	331	332	333
334	–	–	–	–	–	–	–	–	–	24
ಆಳಂದ	–	–	–	–	–	–	–	–	–	40
ಚಿಂಚೋಳಿ	–	–	–	–	–	–	–	–	–	33
ಚಿತ್ತಾಪೂರ	–	–	–	–	–	–	–	–	–	38
ಗುಲಬರ್ಗಾ	7	865	515	4	3662	1355	2	65	135	55
ಜೇವರ್ಗಿ	1	216	68	–	–	–	–	–	–	36
ಸೇಡಂ	–	–	–	–	–	–	–	–	–	24
ಶಹಾಪೂರ	–	–	–	–	–	–	–	–	–	38
ಸುರಪುರ	–	–	–	–	–	–	–	–	–	44
ಯಾದಗೀರ	1	185	59	–	–	–	–	–	–	42
ಒಟ್ಟು	9	1266	642	4	3662	1355	2	65	135	374

ಮಾಹಿತಿ ಮೂಲ : 1) ಕಾಲಂ 328 ರಿಂದ 330 ರ ವರೆಗೆ ಕುಲಸಚಿವರು ವಿಶ್ವೇಶ್ವರಯ್ಯಾ ತಾಂತ್ರಿಕ ವಿಶ್ವವಿದ್ಯಾಲಯ, ಬೆಳಗಾಂವ ಹಾಗೂ ಎಲ್ಲಾ ತಾಂತ್ರಿಕ & ವೈದ್ಯಕೀಯ ಕಾಲೇಜುಗಳಿಂದ ಮಾಹಿತಿ ಪಡೆಯಲಾಗಿದೆ

2) ಕಾಲಂ 331 ರಿಂದ 333 ರ ವರೆಗೆ ಕುಲಸಚಿವರು, ರಾಜೀವ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ ಬೆಂಗಳೂರು, ಕರ್ನಾಟಕ

3) ಕಾಲಂ 334 ಮುಖ್ಯ ಗ್ರಂಥಪಾಲರು ಜಿಲ್ಲಾ /ನಗರ ಗುಲಬರ್ಗಾ

ಶೈಕ್ಷಣಿಕ ಮೂಲ ಸೌಕರ್ಯ ಪ್ರತಿ ಲಕ್ಷ ಜನಸಂಖ್ಯೆಗೆ ಪ್ರಾಥಮಿಕ ಶಾಲೆಗಳ ಸಂಖ್ಯೆ

ಪ್ರದೇಶ	1958	1999–2000
ಉತ್ತರ ಕರ್ನಾಟಕ	91 ಪ್ರಾಥಮಿಕ ಶಾಲೆಗಳು	84 ಪ್ರಾಥಮಿಕ ಶಾಲೆಗಳು
ದಕ್ಷಿಣ ಕರ್ನಾಟಕ	99 ಪ್ರಾಥಮಿಕ ಶಾಲೆಗಳು	102 ಪ್ರಾಥಮಿಕ ಶಾಲೆಗಳು
ರಾಜ್ಯ	96 ಪ್ರಾಥಮಿಕ ಶಾಲೆಗಳು	94 ಪ್ರಾಥಮಿಕ ಶಾಲೆಗಳು

1958 ರಲ್ಲಿ ರಾಜ್ಯದಲ್ಲಿ ಪ್ರತಿಲಕ್ಷ ಜನಸಂಖ್ಯೆಗೆ 96 ಪ್ರಾಥಮಿಕ ಶಾಲೆಗಳಿದ್ದವು. ಉತ್ತರ ಕರ್ನಾಟಕದಲ್ಲಿ ಪ್ರತಿ ಲಕ್ಷ ಜನಸಂಖ್ಯೆಗೆ 91 ಪ್ರಾಥಮಿಕ ಶಾಲೆಗಳಿವೆ. ದಕ್ಷಿಣ ಕರ್ನಾಟಕದಲ್ಲಿ ಪ್ರತಿಲಕ್ಷ ಜನಸಂಖ್ಯೆಗೆ 99 ಪ್ರಾಥಮಿಕ ಶಾಲೆಗಳಿವೆ. 1999–2000 ದಲ್ಲಿ ರಾಜ್ಯದ ಸರಾಸರಿಯ ಸ್ವಲ್ಪಮಟಿಗೆ ಅಂದರೆ 94 ಕ್ಕೆ ಇಳಿಯಿತು. ಆದರೆ ದಕ್ಷಿಣ ಕರ್ನಾಟಕದಲ್ಲಿ ಅವುಗಳ ಸರಾಸರಿ 99 ರಿಂದ 102 ಕ್ಕೆ ಏರಿತು. ಉತ್ತರ ಕರ್ನಾಕಟದ ಏಳು ಜಿಲ್ಲೆಗಳು ಬೆಳಗಾಂ, ಬಿಜಾಪೂರ, ಬಳ್ಳಾರಿ, ಬೀದರ, ಧಾರವಾಡ, ಗುಲಬರ್ಗಾ ಮತ್ತು ರಾಯಚೂರು ರಾಜ್ಯ ಸರಾಸರಿಗಿಂತ ಕಡಿಮೆ ಇದೆ ಜನಸಂಖ್ಯೆ ಬೆಳವಣಿಗೆಯೊಡನೆ ಪ್ರಾಥಮಿಕ ಶಾಲೆಗಳ ಸಂಖ್ಯೆಯಲ್ಲಿ ಬದಲಾವಣೆ ಆಗಿಲ್ಲ. ಕರ್ನಾಟಕದ 6 ಜಿಲ್ಲೆಗಳು ಅತಿ ವಂಚಿತ ಪ್ರವರ್ಗದಲ್ಲಿ ಬರುತ್ತವೆ. ಅವುಗಳಲ್ಲಿ ಗುಲಬರ್ಗಾ ವಿಭಾಗದ ನಾಲ್ಕು ಜಿಲ್ಲೆಗಳಾದ ರಾಯಚೂರು, ಗುಲಬರ್ಗಾ, ಕೊಪ್ಪಳ ಮತ್ತು ಬಳ್ಳಾರಿ ಹಾಗೂ ಬೆಳಗಾಂ ವಿಭಾಗದ ಎರಡು ಜಿಲ್ಲೆಗಳಾದ ಬಿಜಾಪುರ ಮತ್ತು ಬೆಳಗಾಂ ಜಿಲ್ಲೆಗಳು ಬರುತ್ತವೆ. ಶಾಲೆಯಿಂದ ಹೊರಗುಳಿದ ಮಕ್ಕಳ ಸಂಖ್ಯೆಗನುಗುಣವಾಗಿ ಬೀದರಗೆ 21 ಸ್ಥಾನ ಕೊಪ್ಪಳ 25, ಗುಲಬರ್ಗಾ26, ರಾಯಚೂರುಗೆ 27 ಸ್ಥಾನ ಹೊಂದಿದೆ. ಆದ್ದರಿಂದ ಪರಿಹಾರಾತ್ಮಕ ಕ್ರಮಗಳು ಇಲ್ಲಿ ಕೈಗೊಳ್ಳಬೇಕು. ಒಟ್ಟಾರೆ ಜಿಲ್ಲೆಯ ಶೈಕ್ಷಣಿಕ ಪ್ರಗತಿಗೆ ಸರ್ಕಾರದ ಪ್ರಯತ್ನ ಇದ್ದೇ ಇದೆ. ಅದರಂತೆ ಖಾಸಗಿ ಸಂಸ್ಥೆಗಳ ಪ್ರಯತ್ನ ತೀರಾ ಎದ್ದು ಕಾಣುವಂತಿದೆ ಖಾಸಗಿ ಸಂಸ್ಥೆಗಳ ಶಿಕ್ಷಣ ಸೇವೆ ನಿಜಕ್ಕೂ ಶ್ಲಾಘನೀಯವಾದದ್ದು. (ಡಾ॥ ನಂಜುಡಪ್ಪನವರ ವರದಿ ಮತ್ತು ಕಲಂ 371 ಡಾ॥ಬಸವರಾಜ ಟಿ ಕಮ್ಮಾರ)

ಸಾಹಿತ್ಯ

ಹೈದ್ರಾಬಾದ ಕರ್ನಾಟಕದ ಭೌಗೋಳಿಕ ಚೌಕಟ್ಟಿನಲ್ಲಿ ಬೆಳೆದು ನಿಂತ ಕಾದಂಬರಿ ಸಾಹಿತ್ಯದ ಹಿಂದಿನ ಸಾಂಸ್ಕೃತಿಕ ಒತ್ತಡಗಳನ್ನು ಗುರುತಿಸುವುದು ಅಗತ್ಯ. ಈ ಪ್ರದೇಶದ ಪ್ರಮುಖ ಜಿಲ್ಲೆ ಕಲಬುರ್ಗಿ ಇಲ್ಲಿಯ ಸಾಹಿತ್ಯ ಸಂಸ್ಕೃತಿಗಳೆಂದರೆ, ಅದು ಕನ್ನಡ ಸಾಹಿತ್ಯವೆಂದು

ಬೇರೆ ಹೇಳಬೇಕಾಗಿಲ್ಲ. ಸಾಹಿತ್ಯಿಕವಾಗಿ ಪ್ರಪ್ರಥಮ ಕೃತಿಯಾದ 'ಕವಿರಾಜ ಮಾರ್ಗ' 'ವಡ್ಡಾರಾಧನೆ', ವಿಜ್ಞಾನೇಶ್ವರನ 'ಮಿತಾಕ್ಷಿ' ಶರಣರ ವಚನ, ದಾಸರ ಹಾಡು, ತತ್ವಪದ ಹೀಗೆ ಕಾಲಕಾಲಕ್ಕೆ ಸಾಹಿತ್ಯ ಬೆಳೆಯುತ್ತ, ವಿಸ್ತರಿಸುತ್ತ, ಬದಲಾಗುತ್ತ ನಡೆದು ವೈಚಾರಿಕ ಸಂಘರ್ಷಕ್ಕೆ ತನ್ನದೇ ಆದ ವಿಶಿಷ್ಟ ಕೊಡುಗೆ ಕೊಟ್ಟಿದೆ. ಹೊಸಗನ್ನಡ ಸಾಹಿತ್ಯದ ಪ್ರಕಾರಗಳಾದ ಕಥೆ, ಕಾವ್ಯ, ನಾಟಕ, ಕಾದಂಬರಿ, ಲಲಿತ ಪ್ರಬಂಧ, ಅಂಕಣ ಬರಹ ಮೊದಲಾದ ಸಂಶೋಧನೆಗಳ ಸೃಷ್ಠಿ ಇಲ್ಲಿ ನಡೆದಿದೆ. ಕಲಬುರ್ಗಿ ಜಿಲ್ಲೆಯ ಕಾದಂಬರಿಗಳನ್ನು ಐತಿಹಾಸಿಕ, ಸಾಮಾಜಿಕ, ರಾಜಕೀಯ ಹಾಗೂ ಧಾರ್ಮಿಕವಾಗಿ ವರ್ಗೀಕರಿಸಿ ಅಧ್ಯಯನದ ಮೂಲಕ ಅವಲೋಕಿಸುವುದು ಸೂಕ್ತ. ಹೈದ್ರಾಬಾದ ಕರ್ನಾಟಕದ ಅತ್ಯಂತ ಪ್ರಸಿದ್ಧ ಕವಿ ಎನ್ನಿಸಿಕೊಂಡಿರುವ ಸಿದ್ದಯ್ಯ ಪುರಾಣಿಕರು ಮೂಲತಃ ಕೊಪ್ಪಳದವರಾಗಿದ್ದರೂ ಅವರ ಸಾಹಿತ್ಯಿಕ ಕೃಷಿ ಮಾತ್ರ ಕಲಬುರ್ಗಿ ಜಿಲ್ಲೆಯಲ್ಲಿಯೇ ಗಟ್ಟಿಗೊಂಡಿದೆ. ಈ ಜಿಲ್ಲೆಯ ಹಿರಿಯ ಸಾಹಿತಿ, ಕತೆ, ಕಾದಂಬರಿ, ಕವನ ಅಸಂಗತ ನಾಟಕಗಳ ಮೂಲಕ ತಮ್ಮನ್ನು ಗುರುತಿಸಿಕೊಂಡವರು ಚಂದ್ರಕಾಂತ ಕುಸುನೂರರು, ನಾಗರಿಕತೆಯೊಂದಿಗೆ ಸಮಾಜ ಹೇಗೆ ಒಂದಾಗಿ ಮುನ್ನಡೆದಿದೆ ಎಂಬುದನ್ನು ಬದುಕಿನ ಅನೇಕ ಮಜಲುಳಲ್ಲಿ ಪರಿಚಯ ಮಾಡಿಕೊಟ್ಟಿರುವ ಶ್ರೇಯಸ್ಸು ಇವರ ಕಾದಂಬರಿಗಳದ್ದು. ಈ ಜಿಲ್ಲೆಯ ದೈತ್ಯ ಪ್ರತಿಭೆಯ ಕಾದಂಬರಿಕಾರರೆಂದರೆ ಡಾ॥ ಚೆನ್ನಣ್ಣ ವಾಲೀಕಾರರು. ಈ ಜಿಲ್ಲೆಯಲ್ಲಿ ದಲಿತ ಬಂಡಾಯ ಸಾಹಿತ್ಯವನ್ನು ಹುಟ್ಟು ಹಾಕಿದವರು ಇವರೇ. ಈ ಸಾಹಿತ್ಯಿಕ ಘಟ್ಟದ ರೂಪುರೇಷೆಗಳನ್ನು ನಿಚ್ಚಳವಾಗಿಸಿದವರಲ್ಲಿ ವಾಲೀಕಾರರೇ ಮೊದಲಿಗರು. ಕಲಬುರ್ಗಿಯನ್ನೇ ತಮ್ಮ ಕಾರ್ಯಕ್ಷೇತ್ರವನ್ನಾಗಿಸಿಕೊಂಡು ಇಲ್ಲಿಯವರೇ ಆಗಿರುವ ಗವೀಶ ಹಿರೇಮಠರು ನಾಟಕ ಕ್ಷೇತ್ರದಲ್ಲಿ ಹೆಸರುಗಳಿಸಿಕೊಂಡಿದ್ದಾರೆ. (ಶ್ರೀಮತಿ ಗೀತಾ ನಾಗಭೂಷಣ– ಕಲಬುರ್ಗಿ ಜಿಲ್ಲಾ ದರ್ಶನ) ಸಾಹಿತ್ಯ ಕ್ಷೇತ್ರಕ್ಕೆ ಕಲಬುರಗಿ ಜಿಲ್ಲೆಯ ಕೊಡಗೆ ಅಪಾರ. ಕಲಬುರಗಿಯ ಹೆಮ್ಮೆಯ ಸಾಹಿತಿಯಾದ ಡಾ.ಗೀತಾ ನಾಗಭೂಷಣ ಅವರ 'ಬದುಕು' ಎಂಬ ಮಹಾನ್ ಕಾದಂಬರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ಲಭಿಸಿದೆ. ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ಪಡೆದ ಕನ್ನಡ ಪ್ರಪ್ರಥಮ ಮಹಿಳಾ ಸಾಹಿತಿ ಎಂಬ ಹೆಗ್ಗಳಿಕೆ ಡಾ.ಗೀತಾ ನಾಗಭೂಷಣ ಅವರದು. ಡಾ.ಗೀತಾ ನಾಗಭೂಷಣ ಅವರು ಸಾಹಿತ್ಯ ಕ್ಷೇತ್ರಕ್ಕೆ ಸಲ್ಲಿಸಿದ ಸೇವೆಗೆ 2011–12 ನೇ ಸಾಲಿನ ಸಮಗ್ರ ರಚನಾ ಪುರಸ್ಕಾರ ನೀಡಿದೆ. "ನಾಡೋಜ" ಪ್ರಶಸ್ತಿ ಪಡೆದ ಕನ್ನಡದ ಪ್ರಪ್ರಥಮ ಮಹಿಳಾ ಸಾಹಿತಿ ಎಂಬ ಹೆಗ್ಗಳಿಕೆ ಕಲಬುರಗಿಯ ಡಾ. ಗೀತಾ ನಾಗಭೂಷಣ ಅವರದು. ಗದಗದಲ್ಲಿ 2010 ರಲ್ಲಿ ನಡೆದ 76ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು (ಅಂತರ್ಜಾಲ)

ಆರ್ಥಿಕ ವ್ಯವಸ್ಥೆ

ಒಂದು ಪ್ರದೇಶದ ಆರ್ಥಿಕ ಪ್ರಗತಿಯನ್ನಾಗಲೀ, ಆರ್ಥಿಕ ಪ್ರವೃತ್ತಿಯನ್ನಾಗಲೀ ಅಭ್ಯಸಿಸಬೇಕಾಗದಲ್ಲಿ ಅಲ್ಲಿನ ನೈಸರ್ಗಿಕ ಮತ್ತು ಆರ್ಥಿಕ ಸಂಪನ್ಮೂಲಗಳು, ಮಾನವ ಶಕ್ತಿಯ ಬಳಕೆ, ಕೈಗಾರಿಕಣದ ಸಾಧ್ಯತೆಗಳು, ವ್ಯಾಪಾರ, ವಾಣಿಜ್ಯದ ಪ್ರಗತಿ, ಮಾರುಕಟ್ಟೆಗಳ ಸೌಲಭ್ಯ, ಉದ್ಯೋಗಾವಕಾಶಗಳು ಮೊದಲಾದವುಗಳ ಜೊತೆಗೆ ಸಾರಿಗೆ ಸೌಲಭ್ಯ ಮುಂತಾದವುಗಳ ಸೌಲಭ್ಯವನ್ನು ಅವಲೋಕಿಸಬೇಕಾಗುತ್ತದೆ. ಕಲಬುರ್ಗಿ ಜಿಲ್ಲೆಯ ರಾಜ್ಯದಲ್ಲಿ ಬಿಜಾಪುರದ ನಂತರ ಎರಡನೆಯ ದೊಡ್ಡ ಜಿಲ್ಲೆಯಾಗಿದೆ.

ಜೀವನ ಮಟ್ಟ :

ಅಂದಿನ ಹೈದ್ರಾಬಾದ ಸರ್ಕಾರದ 1948 ರ ಒಂದು ಪ್ರಕಟಣೆಯಲ್ಲಿ ಗುಲಬರ್ಗಾವೂ ಸೇರಿದಂತೆ ಇದ್ದ ಹೈದ್ರಾಬಾದ ರಾಜ್ಯದ ಆರ್ಥಿಕ ನೈತಿಕತೆಗಳನ್ನು ಕುರಿತಂತೆ ಈ ರೀತಿ ಉಲ್ಲೇಖಿಸಲಾಗಿದೆ. ಹೈದ್ರಾಬಾದಿನ ಆರ್ಥಿಕ ಪರಿಸ್ಥಿತಿ ಹೆಚ್ಚು ಕಡಿಮೆ ಊಳಿಗಮಾನ್ಯ ಪದ್ದತಿಯಾಗಿದ್ದಿತು. ರಾಜ್ಯ ಸುಮಾರು ಶೇ 45 ಭಾಗ ಜಾಗೀರದಾರರು ಮತ್ತು ಜಮೀನುದಾರರ ಆಳ್ವಿಕೆಯಲ್ಲಿತ್ತು. ಜನಸಂಖ್ಯೆಯು ಬಡತನ ಮತ್ತು ಜಿಪುಣತನವನ್ನು ಹೆಚ್ಚಿಸುವುದು ವೇಗದಲ್ಲಿ ಬೆಳೆಯುತ್ತಿತ್ತು. ಅನಕ್ಷರತೆ ಮತ್ತು ಮೂಢತೆ ಹೆಚ್ಚಾಗಿತ್ತು. ಸರಾಸರಿ ತಲಾ ಆದಾಯ, ಸರಾಸರಿ ಜೀವನಮಟ್ಟ ಕೆಲಸದ ಸರಾಸರಿ ಮೌಲ್ಯಗಳು ಬಡಜನತೆ ಜೀವನ ಸಾಗಿಸಲು ಅಸಾಧ್ಯವಾಗುವಷ್ಟು ಕಡಿಮೆ ಪ್ರಮಾಣದಲ್ಲಿತ್ತು. (ಗುಲಬರ್ಗಾ ಜಿಲ್ಲೆ – ಆರ್ಥಿಕ ಪ್ರವೃತ್ತಿ ಪುಟ ಸಂ: 351,352, 353 ಭಾರತದ ಗ್ಯಾಸೆಟಿಯರ್ ಕರ್ನಾಟಕ ರಾಜ್ಯ)

ಉದ್ಯೋಗ ವಿನಿಮಯ ಕೇಂದ್ರ :

ಗುಲಬರ್ಗಾ ಜಿಲ್ಲೆಯಲ್ಲಿ ಉದ್ಯೋಗ ವಿನಿಮಯ ಕೆಂದ್ರವು 1959 ನೇ ಫೆಬ್ರುವರಿಯಲ್ಲಿ ಪ್ರಾರಂಭವಾಯಿತು. ವಿನಿಮಯ ಕೇಂದ್ರದಲ್ಲಿ ನೋಂದಣಿ ಮಾಡಿಸಿ ಉದ್ಯೋಗವನ್ನು ಪಡೆಯುವ ಕ್ರಮ ಪ್ರಾರಂಭದಲ್ಲಿ ಅಂದರೆ ಸುಮಾರು 1990–95 ರಲ್ಲಿ ಅನುಚಾನವಾಗಿ ಇದ್ದಿತು. ಉದ್ಯೋಗವನ್ನು ಪಡೆದವರೆಲ್ಲರೂ ವಿನಿಮಯ ಕೇಂದ್ರದಿಂದಲೇ ಪಡೆದವರೆಂದು ಹೇಳಲಾಗುವುದಿಲ್ಲ. ನೇರವಾಗಿ ಅರ್ಜಿಯನ್ನು ಹಾಕಿ ಅಥವಾ ಬೇರೆ ವಿಧಾನಗಳಿಂದ ಉದ್ಯೋಗವನ್ನು ಪಡೆಯುತ್ತಿದ್ದರು (ಪುಟ ಸಂಖ್ಯೆ –370) ಜಿಲ್ಲಾ ಉದ್ಯೋಗ ವಿನಿಮಯ ಕಛೇರಿ, ಗುಲಬರ್ಗಾ ನಗರದಲ್ಲಿ ಕಾರ್ಯನಿರ್ವಹಿಸುತ್ತಿದ್ದು 31–03–2008 ಅಂತ್ಯದವರೆಗೆ 79279 ಉದ್ಯೋಗಾರ್ಥಿಗಳು ಜೀವಂತ ದಾಖಲೆಯಲ್ಲಿದ್ದಾರೆ. ಒಟ್ಟು ನೊಂದಣಿಯ 79279 ಅಭ್ಯರ್ಥಿಗಳಲ್ಲಿ 6865 ಅಭ್ಯರ್ಥಿಗಳು, ಮಾಧ್ಯಮಿಕ ಶಾಲೆ ಪಾಸು ಮತ್ತು ಅಕ್ಷರ, ಅನಕ್ಷರಸ್ಥ ವಿದ್ಯಾರ್ಹತೆಯುಳ್ಳವರು 33181 ಅಭ್ಯರ್ಥಿಗಳು ಮೆಟ್ರಿಕ್ ಮತ್ತು ಪಿಯುಸಿ

ವಿದ್ಯಾರ್ಹತೆಯುಳ್ಳವರು 696 ಅಭ್ಯರ್ಥಿಗಳು ವಿಜ್ಞಾನ ಪದವೀಧರರು2061 ಅಭ್ಯರ್ಥಿಗಳು ಕಲಾ ಪದವೀಧರರು, 787 ಅಭ್ಯರ್ಥಿಗಳು ವಾಣಿಜ್ಯ ಪದವೀಧರರು, 1288 ಇಂಜಿನಿಯರಿಂಗ್ ಡಿಪ್ಲೋಮಾ ಪಾಸಾದವರು, 2940 ಅಭ್ಯರ್ಥಿಗಳು ಐ.ಟಿ.ಐ ವಿದ್ಯಾರ್ಹತೆ ಹೊಂದಿದವರು ಹಾಗೂ 3598 ಅಭ್ಯರ್ಥಿಗಳು ಬಿ.ಎಡ್, ಬಿ.ಪಿ.ಇಡ್, ಪಾಸಾದವರು. ಸಿಪಿಇಡ್, ಟಿಸಿಎಚ್, ನರ್ಸರಿ ತರಬೇತಿ ಹೊಂದಿದವರು 5080 ಶೀಘ್ರಲಿಪಿಗಾರರು 167, ಬೆರಳಚ್ಚುಗಾರರು 2241, ಇತರೆ ನೊಂದಣಿ ಮಾಡಿಕೊಂಡವರು 11664, ಒಟ್ಟು ನೋಂದಣಿ ದಾಖಲೆಯಲ್ಲಿ 79279 ಇದ್ದಾರೆ (ಗುಲಬರ್ಗಾ ಜಿಲ್ಲೆಯ ಅಂಕಿ ಅಂಶಗಳ ನೋಟ 2007–08 ಪ್ರಕಟಣೆ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಕಚೇರಿ ಪುಟ ಸಂ. 63,64)

ತೋಟಗಾರಿಕೆ :

ಈ ಜಿಲ್ಲೆಯಲ್ಲಿ ತೋಟಗಾರಿಕೆಯ, ಸರ್ಕಾರಿ ಇಲಾಖೆಯ ವತಿಯಿಂದ 1960 ರಲ್ಲಿ ಪ್ರಾರಂಭವಾಯಿತು. ಈ ಇಲಾಖೆಯ ಮುಖ್ಯವಾಗಿ ಸಲಹಾತ್ಮಕ ಕರ್ತವ್ಯವನ್ನೇ ಮಾಡಿದರೂ ಹೂವು, ಹಣ್ಣು, ತರಕಾರಿಗಳ ಬೀಜ ಮತ್ತು ಸಸಿಗಳನು ಯೋಗ್ಯ ಬೆಲೆಯಲ್ಲಿ ಪೂರೈಸುವ ಕೆಲಸವನ್ನೂ ಮಾಡುತ್ತದೆ. ಜಿಲ್ಲೆಯಲ್ಲಿ 8 ತೋಟಗಾರಿಕೆ ಫಾರ್ಮಗಳು, 7 ತೋಟಗಾರಿಕೆ ನರ್ಸರಿಗಳು ಇವೆ. ಈ ಜಿಲ್ಲೆಯು ತೋಟಗಾರಿಕೆಗೆ ಹೆಚ್ಚು ಅನುಕೂಲಕರವಲ್ಲದ ಜಿಲ್ಲೆಯಾಗಿದೆ. ನೀರಾವರಿವು ಹೆಚ್ಚಿಲ್ಲವಾದುದರಿಂದಲೂ, ಆಗಾಗ್ಗೆ ಉಂಟಾಗುವ " ಬರ" ದಿಂದಲೂ, ತೋಟಗಾರಿಕೆ ಚಟುವಟಿಕೆ ಈ ಜಿಲ್ಲೆಯಲ್ಲಿ ಇನ್ನೂ ಅಭಿವೃದ್ಧಿ ಆಗಬೇಕಾಗಿದೆ. ಜಿಲ್ಲೆಯ ಹೆಚ್ಚಿನ ಭಾಗ ಮಳೆ ಆಧಾರದ ಪ್ರದೇಶವಾಗಿದ್ದು, ಘೋರ ಬರ ಪರಿಸ್ಥಿತಿ ಉಂಟಾಗುವ ಪ್ರದೇಶಗಳಾಗಿರುವ ಕಾರಣ ತೋಟಗಾರಿಕೆ ಬೆಳೆಗಳು ಬೆಳೆಯುವ ವಿಸ್ತೀರ್ಣ ಕಡಿಮೆಯಾಗಿದೆ. ಆಹಾರ ಧಾನ್ಯಗಳನ್ನು ಬೆಳೆಸುವ ಬಗ್ಗೆ ನಿರಾವರಿಯ ಮೂಲಕ ಹೆಚ್ಚು ಒತ್ತು ಕೊಡುವ ಕಾರ್ಯಕ್ರಮಗಳ ಬಗ್ಗೆ ಚಟುವಟಿಕೆಗಳನ್ನು ಹೆಚ್ಚಾಗಿದ್ದರೂ ಕೆಲವು ಆಯ್ದ ಪ್ರದೇಶಗಳಲ್ಲಿ ತೋಟಗಾರಿಕೆ ಬೆಳೆಗಳನ್ನು ಬೆಳೆಯುವುದು ಕಂಡು ಬಂದಿದೆ.ಸುಮಾರು ಮೂರು ಲಕ್ಷ ಕುಟುಂಬಗಳು ತೋಟಗಾರಿಕೆಗೆ ಅವಲಂಬಿತರಾಗಿದ್ದಾರೆ. ನೀರಾವರಿಗಾಗಿ ತಗಲುವ ವೆಚ್ಚವು ಹೆಚ್ಚಾಗಿರುವುದರಿಂದಲೂ ತೋಟದ ಬೆಳಗಳ ಶೇಖರಣೆ ಮತ್ತು ವ್ಯಾಪಾರ ಸೌಲಭ್ಯದ ಕೊರತೆ ಇರುವುದರಿಂದಲೂ ತೋಟಗಾರಿಕೆಯ ಮಟ್ಟ ಜಿಲ್ಲೆಯಲ್ಲಿ ಇಳಿಮುಖವಾಗುತ್ತಿದೆ. ಗ್ರಾಮೀಣ ಆರ್ಥಿಕ ಪರಿಸ್ಥಿತಿಯಲ್ಲಿ ಸುಧಾರಣೆಯಾಗದೆ ಇರುವುದರಿಂದ ತೊಟಗಾರಿಕೆಯ ಪ್ರಗತಿದಾಯಕವಾಗಿರುವುದಿಲ್ಲ. ಆದರೆ ಮುಂಬರುವ ದಿನಗಳಲ್ಲಿ ಈ ಕ್ಷೇತ್ರದಲ್ಲಿ ಹೆಚ್ಚಿನ ಬೆಳವಣಿಗೆಯನ್ನು ಊಹಿಸಲಾಗಿದೆ.

ಹೈನು ಅಭಿವೃದ್ಧಿ :

ಹೈನುಗಾರಿಕೆಯಲ್ಲಿ ತೊಡಗಿಸಿಕೊಂಡಿರುವ ರೈತರಿಗೆ ನಿಶ್ಚಿತವಾದ ಹಾಗೂ ಲಾಭದಾಯಕವಾದ ಬೆಲೆಯನ್ನು ನೀಡುವುದರ ಜೊತೆಗೆ ನಗರದಲ್ಲಿನ ಗ್ರಾಹಕರಿಗೆ ಶುದ್ಧವಾದ ಹಾಗೂ ಸ್ವಚ್ಛವಾದ ಹಾಲು ಮತ್ತು ಹಾಲಿನ ಉತ್ಪನ್ನಗಳನ್ನು ಪೂರೈಸಲು ಕ್ಷೀರ ಕ್ರಾಂತಿ ಯೋಜನೆಯಡಿಯಲ್ಲಿ ಹೈನು ಅಭಿವೃದ್ಧಿ ಕಾರ್ಯಕ್ರಮಗಳು ರಾಜ್ಯದಲ್ಲಿ ಜಾರಿಯಲ್ಲಿವೆ. ಕರ್ನಾಟಕ ಸಹಕಾರಿ ಹಾಲು ಮಹಾ ಮಂಡಳಿ ನಿಯಮಿತ (ಕೆ.ಎಮ್.ಎಫ್) ಅನ್ನು ಕ್ಷೀರಕ್ರಾಂತಿ ಯೋಜನೆಯನ್ನು ಅನುಷ್ಠಾನಗೊಳಿಸುವ ಪ್ರಾಧಿಕಾರವನ್ನಾಗಿ ನಿಯಮಿಸಲಾಗಿದೆ. ಜಿಲ್ಲಾ ಹಾಲು ಉತ್ಪಾದಕರ ಸಹಕಾರ ಸಂಘಗಳಿಗೆ ಅವಶ್ಯಕವಿರುವ ಬಂಡವಾಳವು ರಾಷ್ಟ್ರೀಯ ಹೈನು ಅಭಿವೃದ್ಧಿ ಮಂಡಳಿಯಿಂದ ಹಣಕಾಸಿನ ನೆರವಿನ ರೂಪದಲ್ಲಿ ದೊರೆಯುತ್ತಿದೆ. (ಕರ್ನಾಟಕ ಕೈಪಿಡ 2011 ಕೃಷಿ ಮತ್ತು ಸಂಬಂಧಿತ ಚಟುವಟಿಕೆಗಳು ಪು ಸಂಖ್ಯೆ 235) ಮೂರನೇ ಪಂಚವಾರ್ಷಿಕ ಯೋಜನೆಯಲ್ಲಿ ಗುಲಬರ್ಗಾದ ಸರಕಾರಿ ಹಾಲು ಸರಬರಾಜು ಯೋಜನೆಗೆ ಮಂಜೂರಾತಿ ಸಿಕ್ಕಿತು. ಆಗ ಗುಲಬರ್ಗಾದ ಸುತ್ತಮುತ್ತಲಿನ ಪ್ರದೇಶದಲ್ಲಿ ಹಾಲು ಸಿಗುವ ಸಾಧ್ಯಾಸಾಧ್ಯತೆಗಳನ್ನು ಪರಿಶೀಲಿಸಿ ವಾರ್ಷಿಕ 30,000 ಲೀಟರ್ ಹಾಲು ಸಿಗಬಹುದೆಂದು ಅಂದಾಜು ಮಾಡಲಾಗಿತ್ತು. ನಂತರ 1966 ರಲ್ಲಿ ಹಾಲು ಸರಬರಾಜು ಮಾಡುವ ಮಾರ್ಗದರ್ಶಕ ಯೋಜನೆಯನ್ನು ಕಾರ್ಯಗತಗೊಳಿಸಲ ಾಯಿತು. ಇಲ್ಲಿನ ಹಾಲಿನ ಕೇಂದ್ರವು ದಿನಂಪ್ರತಿ ಕಾರ್ಯಗತಗೊಳಿಸಲಾಯಿತು. ಇಲ್ಲಿನ ಹಾಲಿನ ಕೇಂದ್ರವು ದಿನಂಪ್ರತಿ 1000 ಲಿಟರ್ ಹಾಲನ್ನು ಪೂರೈಸುವ ಸಾಮರ್ಥ್ಯವನ್ನು ಪಡೆಯಿತು. (ಗುಲಬರ್ಗಾ ಜಿಲ್ಲೆ ಭಾರತದ ಗ್ಯಾಸೆಟಿಯರ್ ಕರ್ನಾಟಕ ರಾಜ್ಯ ಪುಟ ಸಂಖ್ಯೆ373)

ಡೈರಿಗಳಿಂದ ಸಂಗ್ರಹಿಸಲಾದ ಹಾಲಿದ ವಿವರ (ಸಾವಿರ ಟನ್ನುಗಳಲ್ಲಿ)

ಕ್ರಸಂ	ವಿವರ	96–97	97–98	98–99	99–2000	2000–01
1	ಅ) ಬೆಂಗಳೂರು ಡೈರಿ					
	ಆ) ಮದರ ಡೈರಿ, ಬೆಂಗಳೂರು	144	148	155	181	165
2	ಮೈಸೂರು	35	35	35	41	45
3	ಮಂಡ್ಯ ಉತ್ಪಾದನಾ ಡೈರಿ(ಗೆಜ್ಜಲಗೆರೆ)	43	45	51	58	55
4	ಕೂಡಿಗೆ (ಕೊಡಗು)					
5	ಹಾಸನ	26	31	34	38	38
6	ತುಮಕೂರು	23	27	26	30	31
7	ಧಾರವಾಡ	20	22	24	22	22
8	ಬೆಳಗಾವಿ	17	18	18	21	19
9	ಗುಲಬರ್ಗಾ	9	10	7	7	7

ಮೂಲ: ಕರ್ನಾಟಕ ಹಾಲು ಉತ್ಪಾದಕರ ಸಹಕಾರ ಸಂಘಗಳ ಒಕ್ಕೂಟ ನಿಯಮಿತ (ಕರ್ನಾಟಕ ಕೈಪಿಡಿ ಪುಟ ಸಂಖ್ಯೆ 236)

ಮೀನುಗಾರಿಕೆ :

ಗುಲಬರ್ಗಾ ಜಿಲ್ಲೆಯಲ್ಲಿ ಮೀನುಗಾರಿಕೆ ಇಲಾಖೆಯು ಅಮರಜಾ ಮತ್ತು ಕಾಗಿಣಾ ನದಿಗಳು 414 ಕೆರೆಗಳು ಮೀನಿನ ಬೇಸಾಯಕ್ಕೆ ಅನುಕೂಲವಾಗಿದೆ.

ಗುಲಬರ್ಗಾ ಜಿಲ್ಲೆಯು ಬರಪೀಡಿತ ಪ್ರದೇಶವಾಗಿದೆ. ಜಿಲ್ಲೆಯಲ್ಲಿ 7109 ಹೆಕ್ಟೇರು ನೀರಿನ ಪ್ರದೇಶವಿದ್ದು ಇದರಲ್ಲಿ 1200 ಹೆಕ್ಟೇರು ನೀರಾವರಿ ಪ್ರದೇಶವು ಮೀನುಗಾರಿಕೆ ಅಭಿವೃದ್ಧಿಗೆ ಯೋಗ್ಯವಾಗಿದೆ. ಒಟ್ಟು 250 ಕೆರೆಗಳಿದ್ದು, ಅವುಗಳಲ್ಲಿ 60 ಕೆರೆಗಳಲ್ಲಿ ವರ್ಷದ ಎಲ್ಲಾ ಕಾಲದಲ್ಲೂ ನೀರು ಇರುತ್ತದೆ. ಮೀನು ಅಭಿವೃದ್ದಿಗೆ ಕೃಷ್ಣಾ, ಭೀಮಾ, ಬೆಣಿತೊರಾ, ಕಾಗಿಣಾ ಮತ್ತು ಅಮಜಾನ ನದಿಗಳು ಸಹಾಯಕವಾಗಿವೆ. ಜಿಲ್ಲೆಯಲ್ಲಿ 21 ಮೀನುಗಾರಿಕೆ ಸಹಕಾರ ಸಂಘಗಳು ಕಾರ್ಯನಿರತವಾಗಿವೆ. ಈ ಸಂಘಗಳು ಕೆರೆ, ನದಿ ಹಾಗೂ ಜಲಾಶಯಗಳನ್ನು ಗುತ್ತಿಗೆ ಆಧಾರದ ಮೇಲೆ ಪಡೆದು ಮೀನುಗಾರಿಕೆಯನ್ನು ಅಭಿವೃದ್ಧಿಪಡಿಸುತ್ತವೆ. ಜಿಲ್ಲೆಯಲ್ಲಿನ 10 ತಾಲೂಕುಗಳಲ್ಲಿ ಆರು ತಾಲೂಕು ಮಟ್ಟದ ಅಧಿಕಾರಿಗಳು ಮೀನುಗಾರಿಕೆ ಚಟುವಟಿಕೆಗಳ ಬಗ್ಗೆ ಸರಕಾರ ಯೋಜನೆಗಳನ್ನು ಅನುಷ್ಠಾನಗೊಳಿಸಲು ಕಾರ್ಯವನ್ನು ಮಡುತ್ತಿದ್ದಾರೆ. ಇವುಗಳ ಉಸ್ತುವಾರಿಯನ್ನು ಇಲಾಖೆಯ ಜಿಲ್ಲಾ ಕಛೇರಿಯು ಹೊಂದಿದೆ.

1994–95 ರಲ್ಲಿ ಜಿಲ್ಲೆಯಲ್ಲಿ ತಾಲೂಕಾವಾರು ಮೀನು ಹಿಡಿದಿರುವ ವಿವರ (ಟನ್ನುಗಳಲ್ಲಿ)

ಅಫಜಲಪೂರ	–130	ಜೇವರ್ಗಿ	–30
ಆಳಂದ	–32	ಸೇಡಂ	–70
ಚಿಂಚೋಳಿ	–150	ಶಹಾಪುರ	–150
ಚಿತ್ತಾಪೂರ	–60	ಸುರಪುರ	–90
ಗುಲಬರ್ಗಾ	–160	ಯಾದಗೀರ	–90

ಒಟ್ಟು 962 ಟನ್

(ಕಲಬುರ್ಗಿ ಜಿಲ್ಲೆ ಭಾರತದ ಗ್ಯಾಸೆಟಿಯರ್ ಪುಟ ಸಂಖ್ಯೆ 374375)

ರಾಜ್ಯದಲ್ಲಿ ಜಿಲ್ಲಾವಾರು ಮೀನುಗಾರರ ಹಾಗೂ ಕಾರ್ಯನಿರತ ಮೀನುಗಾರರ ಜನಸಂಖ್ಯೆ

ಕ್ರ.ಸಂ	ಜಿಲ್ಲೆ	ಮೀನುಗಾರರ ಜನಸಂಖ್ಯೆ			ಕಾರ್ಯನಿರತ ಮೀನುಗಾರರು		
		ಪುರುಷ	ಸ್ತ್ರೀ	ಒಟ್ಟು	ಪುರುಷ	ಸ್ತ್ರೀ	ಒಟ್ಟು
1	ಬೆಂಗಳೂರು	2839	2488	5327	1412	515	1927
2	ಬೆಂಗಳೂರು(ಗ್ರಾ)/ ರಾಮನಗರ	22732	13232	35964	8482	404	12886
3	ಬಾಗಲಕೋಟೆ	2096	2063	41559	1227	114	1341
4	ಬೆಳಗಾವಿ	2837	2043	4880	1513	104	1707
5	ಬಳ್ಳಾರಿ	23076	19965	43041	11260	3080	14340
6	ಬೀದರ್	1473	1349	2822	448	144	592
7	ಬಿಜಾಪುರ	3811	293	4104	2302	122	2424
8	ಚಾಮರಾಜನಗರ	11847	5975	17822	5193	4017	9210
9	ಚಿಕ್ಕಮಗಳೂರು	4735	2170	6905	1005	342	1347
10	ಚಿತ್ರದುರ್ಗ	2743	2091	4834	696	128	824
11	ದಕ್ಷಿಣ ಕನ್ನಡ	36615	21603	582118	13524	14073	27597
12	ದಾವಣಗೆರೆ	8901	8510	17411	1867	247	2114
13	ಧಾರವಾಡ	619	243	862	506	114	620
14	ಗದಗ	1349	788	2137	1349	788	2137
15	ಗುಲಬರ್ಗಾ/ಯಾದಗಿರಿ	3271	1678	4949	2684	1253	3937

ಮೂಲ: Statistical Bulletion of Fisheries 2008-09 Directorate of Fisheries, Bangalore -560001 Page No. 250 ಕರ್ನಾಟಕ ಕೈಪಿಡಿ

ರೇಷ್ಮೆ ಕೃಷಿ :

ಇತ್ತೀಚಿನ ವರ್ಷಗಳವರೆಗೂ ಈ ಜಿಲ್ಲೆಯಲ್ಲಿ ರೇಷ್ಮೆ ಕೃಷಿ ರೂಢಿಯಲ್ಲಿರಲಿಲ್ಲ. ಮಳೆ ಪ್ರದೇಶದಲ್ಲಿ ಕೃಷಿಯಿಂದ ವರಮಾನವನ್ನು ಹೆಚ್ಚಿಸುವ ಕಾರ್ಯಕ್ರಮದ ಅಡಿಯಲ್ಲಿ ರೇಷ್ಮೆ ಕೃಷಿಯನ್ನು ಹಮ್ಮಿಕೊಳ್ಳಲಾಗಿದೆ. ಹಾಗೆಯೇ ಕುಟುಂಬದಲ್ಲಿನ ಸದಸ್ಯರನ್ನು ಗಳಿಸುವ ಉದ್ಯಮದಲ್ಲಿ ತೊಡಗಿಸುವ ಉದ್ದೇಶವೂ ಸಹ ಇದಕ್ಕೆ ಪೂರಕವಾಗಿದೆ. ಕೆಲವು ತಾಲೂಕುಗಳಲ್ಲಿ ಈ ಕೃಷಿಯು ಅಭಿವೃದ್ಧಿಯಾಗುತ್ತಿದೆ. 1990 ರ ಹೊತ್ತಿಗೆ ಸುಮಾರು 1504 ಹೆಕ್ಟೇರ್ ಪ್ರದೇಶದಲ್ಲಿ ಹಿಪ್ಪುನೇರಳೆ ಬೆಳೆಯುತ್ತಿದ್ದು, ಅವುಗಳಲ್ಲಿ 1266 ಹೆಕ್ಟೇರಗಳಷ್ಟು ನೀರಾವರಿ ಪ್ರದೇಶವಾಗಿದೆ. ಜಿಲ್ಲೆಯಲ್ಲಿ ಸುಮಾರು 2950 ರೇಷ್ಮೇ ಕೃಷಿಕರಿದ್ದು 1500 ಜನರಿಗೆ ಉದ್ಯೋಗ ಲಭಿಸಿದೆ. ಇತ್ತೀಚಿನ ವರ್ಷಗಳಲ್ಲಿ ಕೇಂದ್ರ ರೇಷ್ಮೆ ಮಂಡಳಿಯ ತಾಂತ್ರಿಕ ಸಿಬ್ಬಂದಿಯವರಿಂದ ತರಬೇತಿ, ಕಾರ್ಯಾಗಾರ ಮೊದಲಾದವುಗಳಿಂದ ಈ ಕೃಷಿಗೆ ಒತ್ತು ಕೊಟ್ಟಂತಾಗಿದೆ. ಈ ಕ್ಷೇತ್ರದ ಆರ್ಥಿಕ ಉತ್ಪಾದನೆ ರೂ 38.83 ಲಕ್ಷಗಳಿದ್ದು, ಗುರಿಯು 128.50 ಲಕ್ಷ ರೂ ಗಿಂತ ಕಡಿಮೆ ಇದ್ದಿತು. ರೇಷ್ಮೆ ಕೃಷಿಕರು ಜಿಲ್ಲೆಯ ಜೆವರ್ಗಿಯಲ್ಲಿ, ರೇಷ್ಮೆಗೂಡಿನ ಮಾರುಕಟ್ಟೆ ಇದ್ದರೂ ಸಹ ಉತ್ತಮ ಬೆಲೆಯನ್ನು ಪಡೆಯುವ ಸಲುವಾಗಿ

ರಾಮನಗರ, ಚನ್ನಪಟ್ಟಣಗಳಲ್ಲಿರುವ ಮಾರುಕಟ್ಟೆಗಳಲ್ಲಿ ತಮ್ಮ ರೇಷ್ಮೆ ಗೂಡುಗಳನ್ನು ಮಾರಾಟ ಮಾಡಿರುವುದು ಕಂಡು ಬರುತ್ತದೆ.. (ಗುಲಬರ್ಗಾ ಜಿಲ್ಲೆ-ಭಾರತದ ಗ್ಯಾಸೆಟಿಯರ್ ಪುಟ ಸಂ 376)

ರೇಷ್ಮೆ 31.03.2008

ತಾಲ್ಲೂಕುಗಳು	ಹಿಪ್ಪ ನೇರಳೆ ಬೆಳೆ ವಿಸ್ತೀರ್ಣ	ರೇಷ್ಮೆ ಗೂಡು ಉತ್ಪಾದನೆ	ಕಸುಬು ಕೈಗೊಂಡ ರೈತರ ಸಂಖ್ಯೆ	ಉತ್ಪಾದಿಸಿದ ರೇಷ್ಮೆಯ ಮೌಲ್ಯ ಲಕ್ಷ ರೂ ಗಳಲ್ಲಿ
1	178	179	180	181
ಅಫಜಲಪುರ	27.20	15583	34	21.05
ಆಳಂದ	60.20	19934	66	26.93
ಚಿಂಚೋಳಿ	25.20	8.892	27	12.01
ಗುಲಬರ್ಗಾ	74.80	35.256	69	47.64
ಜೇವರ್ಗಿ	55.12	12.693	97	17.15
ಸೇಡಂ	1.00	–	1	–
ಶಹಾಪುರ	102.20	39.183	140	52.95
ಸುರಪುರ	13.40	2.667	18	3.60
ಯಾದಗೀರ	20.20	3.237	23	4.37
ಒಟ್ಟು ಮೊತ್ತ	397.32	143.37	491.00	193.70

ಮಾಹಿತಿ ಮೂಲ : ಕಾಲಂ 178 ರಿಂದ 181 ರ ವರೆಗೆ ಉಪ ನಿರ್ದೇಶಕರು, ರೇಷ್ಮೆ ಇಲಾಖೆ, ಗುಲಬರ್ಗಾ (ಗುಲಬರ್ಗಾ ಜಿಲ್ಲೆಯ ಅಂಕಿ ಅಂಶಗಳ ನೋಟ 2007-08 ಪುಟ ಸಂ 21)

ಬ್ಯಾಂಕುಗಳು :

ಒಂದು ಪ್ರದೇಶದ ಆರ್ಥಿಕ ವ್ಯವಸ್ಥೆಯನ್ನು ರೂಪಿಸುವಲ್ಲಿ ಮತ್ತು ಅಭಿವೃದ್ಧಿ ಪಡಿಸುವಲ್ಲಿ ಕೃಷಿ ಮತ್ತು ಕೈಗಾರಿಕಾ ವಲಯಗಳು ಬಹು ಪ್ರಮುಖ ಪಾತ್ರ ವಹಿಸುತ್ತವೆ. ಈ ವಲಯಗಳ ಉತ್ಪಾದನಾ ಸಾಮರ್ಥ್ಯವನ್ನು ಹೆಚ್ಚಿಸಲು ಬೇಕಾಗುವ ಬಂಡವಾಳ, ಹಣಕಾಸಿನ ನೆರವು ಒದಗಿಸುವ ಸಂಘಟಿತ ಮತ್ತು ಅಸಂಘಟಿತ ವಲಯದ ಸಾಂಸ್ಥಿಕ ಹಣಕಾಸು ಸಂಸ್ಥೆಗಳು, ಗ್ರಾಮೀಣ ಪ್ರದೇಶಗಳಲ್ಲಿ ವ್ಯವಸಾಯ ಮತ್ತು ವ್ಯವಸಾಯೇತರ ಚಟುವಟಿಕೆಗಳನ್ನು ಉತ್ತೇಜಿಸುತ್ತಿರುವ ಸಹಕಾರಿ ವಲಯ, ಮಾರಾಟ ವ್ಯವಸ್ಥೆ ಮತ್ತು ಇನ್ನಿತರ ಆರ್ಥಿಕ ಚಟುವಟಿಕೆಗಳು ಆಯಾ ಪ್ರದೇಶಗಳ ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಜೀವನದ ಮೇಲೆ ತಮ್ಮದೇ ಆದ ಪ್ರಭಾವ ಬೀರುತ್ತದೆ.

ಸ್ವಾತಂತ್ರ್ಯಾ ನಂತರದ ದಶಕಗಳಲ್ಲಿ ತೀವ್ರ ಗತಿಯಿಂದ ಬದಲಾಗುತ್ತಿರುವ ಆರ್ಥಿಕ, ಸಾಮಾಜಿಕ, ವಾಣಿಜ್ಯ ಮತ್ತು ರಾಜಕೀಯ ಚಟುವಟಿಕೆಗಳಿಗೆ ಅನುಗುಣವಾಗಿ ಇತ್ತೀಚಿನ ದಶಕಗಳಲ್ಲಿ ಸಂಘಟಿತ ವಲಯದ ಬ್ಯಾಂಕಿಂಗ್ ವ್ಯವಸ್ಥೆ ತನ್ನದೇ ಆದ ರೀತಿಯಲ್ಲಿ ಸ್ಪಂದಿಸುತ್ತಿದೆ. ಗ್ರಾಮಮಟ್ಟದಲ್ಲಿ ಆರ್ಥಿಕ ಮತ್ತು ಸಾಮಾಜಿಕ ಪರಿವರ್ತನೆಯನ್ನು ತರುವಲ್ಲಿ, ಹೊಸ ಆಯಾಮಗಳನ್ನು ಅಳವಡಿಸಿಕೊಂಡು ಸರ್ಕಾರದ ಆರ್ಥಿಕ ನೀತಿ ನಿರೂಪಣೆಗಳನ್ನು, ಆದ್ಯತೆಗಳನ್ನು ಕಾರ್ಯರೂಪದಲ್ಲಿ ತರಲು ಬ್ಯಾಂಕಿಂಗ ವ್ಯವಸ್ಥೆ ಸಹಾಯಕವಾಗುತ್ತಿದೆ. ರಾಜ್ಯದ ಇತರೇ ಭಾಗಗಳಲ್ಲಿ ಕಾಣುತ್ತಿರುವಂತೆ ಹೈದರಾಬಾದ್ ಕರ್ನಾಟಕದ ಈ ಜಿಲ್ಲೆಯಲ್ಲಿಯೂ ಈ ಬದಲಾವಣೆಯನ್ನು ಕಾಣಬಹುದು. (ಗುಲಬರ್ಗಾ ಜಿಲ್ಲೆ- ಭಾರತದ ಗ್ಯಾಸೆಟಿಯರ್ ಪು ಸಂ 272)

ಬ್ಯಾಂಕುಗಳು 31.03.2008

ತಾಲ್ಲೂಕುಗಳು	ವಾಣಿಜ್ಯ ಬ್ಯಾಂಕುಗಳು	ಗ್ರಾಮೀಣ ಬ್ಯಾಂಕುಗಳು	ಒಟ್ಟು ಠೇವಣಿಗಳು	ಒಟ್ಟು ಸಾಲಗಳು	ಠೇವಣಿ ಸಾಲದ ಅನುಪಾತ
1	250	251	252	253	254
ಅಫಜಲಪುರ	8	8	7684	12953	168
ಆಳಂದ	5	10	4416	8166	185
ಚಿಂಚೋಳಿ	4	7	6823	7223	106
ಚಿತ್ತಾಪುರ	11	6	5147	7944	154
ಗುಲಬರ್ಗಾ	42	11	68171	50803	75
ಜೇವರ್ಗಿ	4	8	4965	9710	195
ಸೇಡಂ	5	5	7173	7006	98
ಶಹಾಪುರ	8	5	9490	12222	129
ಸುರಪುರ	9	9	9011	17544	194
ಯಾದಗೀರ	7	7	10935	11705	107
ಒಟ್ಟು ಮೊತ್ತ	103	76	133815	145276	108

ಮಾಹಿತಿ ಮೂಲ: ಕಾಲಂ 250 ರಿಂದ 254 ರವರೆಗ – ಲೀಡ್ ಬ್ಯಾಂಕ ಅಧಿಕಾರಿಗಳು ಗುಲಬರ್ಗಾ (ಗುಲಬರ್ಗಾ ಜಿಲ್ಲೆಯ ಅಂಕಿ ಅಂಶಗಳ ನೋಟ 2007–08 ಪುಟ ಸಂಖ್ಯೆ 29)

ಸಾರಿಗೆ ಮತ್ತು ಸಂಪರ್ಕ

ಒಂದು ಪ್ರದೇಶದ ಆರ್ಥಿಕ ಮತ್ತು ವಾಣಿಜ್ಯದ ಬೆಳವಣಿಗೆಯಲ್ಲಿ ಸಂಪರ್ಕ ಸಾಧನಗಳು ಬಹು ಮುಖ್ಯ ಪಾತ್ರವನ್ನು ವಹಿಸುತ್ತವೆ. ವಿಜ್ಞಾನ ಮತ್ತು ತಾಂತ್ರಿಕ ಆವಿಷ್ಕಾರಗಳಿಂದ ಸಂಪರ್ಕ ಸಾಧನಗಳಲ್ಲಿ ಸಾಕಷ್ಟು ಸುಧಾರಣೆ ಆಗಿರುವುದನ್ನು ನಾವು ಕಾಲದ ಉದ್ದಕ್ಕೂ

ಗಮನಿಸಬಹುದು. ಗುಲಬರ್ಗಾವು (ಕಲಬುರಗಿ) ಚರಿತ್ರೆಯಲ್ಲಿ ಮಹತ್ವದ ಸ್ಥಾನಗಳಿಸಲು ಸಂಪರ್ಕ ವ್ಯವಸ್ಥೆಯು ಒಂದು ಬಹು ಮುಖ್ಯ ಕಾರಣವಾಗಿದ್ದಿರಬಹುದು. ಇದನ್ನು ಪುಷ್ಠೀಕರಿಸುವ ಸಾಕಷ್ಟು ಆಧಾರಗಳು ಜಿಲ್ಲೆಯಲ್ಲಿ ಲಭಿಸಿವೆ. ಶಾತವಾಹನರ ಕಾಲದ ನಾಣ್ಯಗಳು ಜಿಲ್ಲೆಯಲ್ಲಿ ದೊರಕಿದ್ದು ಇದು ಅಂದಿನ ವಾಣಿಜ್ಯ ವ್ಯವಹಾರಕ್ಕೆ ಸಂಬಂದಿಸಿದಂತೆ ಬೆಳಕು ಚೆಲ್ಲಲುವುದರೊಂದಿಗೆ ಜಿಲ್ಲೆಯಲ್ಲಿ ಹಿಂದೆ ವಿಸ್ತೃತ ಸಾರಿಗೆ ಸಮಪರ್ಕ ವ್ಯವಸ್ಥೆ ಇತ್ತೆಂಬುದರ ಬಗ್ಗೆ ದೃಢಪಡಿಸಿದೆ.

19ನೇ ಶತಮಾನದ ಉತ್ತರಾರ್ಧದಲ್ಲಿ ಜಿಲ್ಲೆಯ ಮೂಲಕ ಎರಡು ಮುಖ್ಯವಾದ ರೈಲು ಮಾರ್ಗಗಳು

ತಾಲ್ಲೂಕುಗಳು	ಮೋಟಾರ ವಾಹನಗಳು 31-03-2008 ಕ್ಕೆ									
	ಮೋಟಾರ ಸೈಕಲ್	ಕಾರು ಗಳು	ಬಾಡಿಗೆ ಕಾರುಗಳು	ಆಟೋ ರಿಕ್ಷಾಗಳು	ಓಮ್ನಿ ಬಸ್ಸುಗಳು	ಟ್ರ್ಯಾಕ್ಟರ್ಸ್ & ಟ್ರೈಲರ್ಸ್	ಅಂಬು ಲೆನ್ಸ್	ಸರಕು ಸಾಗಿಸುವ ವಾಹನಗಳು	ಇತರೆ	ಒಟ್ಟು
1	278	279	280	281	282	283	284	285	286	287
ಅಫಜಲಪುರ	5179	138	35	248	139	1391	1	171	368	7670
ಆಳಂದ	7495	195	55	217	203	1891	–	692	542	11290
ಚಿಂಚೋಳಿ	5307	110	42	237	121	1162	1	130	421	7531
ಚಿತ್ತಾಪುರ	10661	455	66	418	277	2253	4	899	696	15729
ಗುಲಬರ್ಗಾ	76753	5169	1975874	1607	3364	30	3290	5041	101325	
ಜೇವರ್ಗಿ	5186	129	39	261	135	1475	–	241	380	7846
ಸೇಡಂ	9489	306	58	633	231	1720	2	480	617	13536
ಶಹಾಪುರ	8139	349	30	958	295	2969	1	394	396	13831
ಸುರಪುರ	6907	272	22	448	279	4013	1	502	417	12861
ಯಾದಗೀರ	7588	308	54	1648	298	1999	6	315	772	12988
ಒಟ್ಟು ಮೊತ್ತ	142704	7431	598	10942	3585	22237	46	7114	9650	204307

ನಿರ್ಮಿಸಲ್ಪಟ್ಟು (ರಾಯಚೂರು–ಮುಬೈ ಮತ್ತು ವಾಡಿ–ಸಿಕಿಂದರಾಬಾದ್ ನಡುವೆ) ಜಿಲ್ಲೆಯ ಅನೇಕ ಭಾಗಗಳಿಗೆ ಸಂಪರ್ಕ ಕಲ್ಪಿಸಲಾಯಿತು. ಇತ್ತೀಚಿನ ದಶಕಗಳಲ್ಲಿ ಆಕಾಶವಾಣಿ ಹಾಗೂ ದೂರದರ್ಶನ ಕೇಂದ್ರಗಳ ಸ್ಥಾಪನೆಯಿಂದಾಗಿ ಹೈದರಾಬಾದ ಕರ್ನಾಟಕ ಭಾಗದ ಕಲೆ, ಸಂಸ್ಕೃತಿ ಹಾಗೂ ಸಾಹಿತ್ಯ ಪ್ರಸಾರಕ್ಕೆ ತುಂಬಾ ಪ್ರೋತ್ಸಾಹ ದೊರೆಯಿತು. ತಂತಿ ಹಾಗೂ ದೂರದರ್ಶನಗಳ ಸಂಪರ್ಕದಿಂದ ವಾಣಿಜ್ಯ ಮತ್ತು ಉದ್ದಿಮೆಗಳ ಅಭಿವೃದ್ಧಿಗೆ ತುಂಬಾ ಅನುಕೂಲವಾಯಿತು (ಗುಲಬರ್ಗಾ ಜಿಲ್ಲೆ– ಭಾರತದ ಗ್ಯಾಸೆಟಿಯರ್) ಪುಟ ಸಂ. 326, 327)

ಸಾರಿಗೆ ಮತ್ತು ಸಂಪರ್ಕಗಳು

ಮಾಹಿತಿ ಮೂಲ: ಕಾಲಂ 278 ರಿಂದ 287 ರವರೆಗೆ ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಛೇರಿ ಗುಲಬರ್ಗಾ/ಯಾದಗೀರ (ಗುಲಬರ್ಗಾ ಜಿಲ್ಲೆಯ ಅಂಕಿ ಅಂಶಗಳ ನೋಟ ಪುಟ ಸಂ–33)

ತಾಲ್ಲೂಕುಗಳು	ರೈಲು ಮಾರ್ಗಗಳ ಉದ್ದಳತ			
	ಬ್ರಾಡ್ ಗೇಜ್	ಮೀಟರ್ ಗೇಜ್	ಒಟ್ಟು	ರೈಲ್ವೆ ನಿಲ್ದಾಣ
1	**288**	**289**	**290**	**291**
ಅಫಜಲಪುರ	31	–	31	3
ಆಳಂದ	–	–	–	–
ಚಿಂಚೋಳಿ	–	–	–	–
ಚಿತ್ತಾಪುರ	66	–	66	6
ಗುಲಬರ್ಗಾ	38	–	38	6
ಜೇವರ್ಗಿ	–	–	–	0
ಸೇಡಂ	32	–	32	3
ಶಹಾಪುರ	–	–	–	0
ಸುರಪುರ	–	–	–	0
ಯಾದಗೀರ	58	58	5	
ಒಟ್ಟು ಮೊತ್ತ	225	–	225	23

ಮಾಹಿತಿ ಮೂಲ: ಕಾಲಂ 288 ರಿಂದ 291 ರವರೆಗೆ ಸ್ಟೇಷನ ಮಾಸ್ಟರರು, ರೈಲ್ವೆ ಸ್ಟೇಷನ, ಗುಲಬರ್ಗಾ (ಗುಲಬರ್ಗಾ ಜಿಲ್ಲೆಯ ಅಂಕಿ ಅಂಶಗಳ ನೋಟ2007–08 ಪುಟ ಸಂ–34)

ತಾಲ್ಲೂಕುಗಳು	ರಸ್ತೆ ಉದ್ದಳತ 31.03.2008 ಕ್ಕೆ										
	ರಾಷ್ಟ್ರೀಯ ಹೆದ್ದಾರಿ	ರಾಜ್ಯ ಹೆದ್ದಾರಿ	ಮುಖ್ಯ ಜಿಲ್ಲೆ ರಸ್ತೆಗಳು	ಇತರ ಜಿಲ್ಲೆ ರಸೆಗಳು	ಹಳ್ಳಿ ರಸ್ತೆಗಳು	ಟಿಡಿಬಿ ರಸ್ತೆಗಳು	ಮುನಸೀ ಪಾಲಟೀಸ್ ರಸ್ತೆಗಳು	ನೀರಾವರಿ ಇಲಾಖೆ ರಸ್ತೆಗಳು	ಅರಣ್ಯ ರಸ್ತೆಗಳು	ಪಂಚಾಯತ ರಸ್ತೆಗಳು	ಒಟ್ಟು
1	**292**	**293**	**294**	**295**	**296**	**297**	**298**	**299**	**300**	**301**	**302**
ಅಫಜಲಪುರ	0	137.80	160.13	–	602.40	–	25	4.1	–	–	929.43
ಆಳಂದ	0	245.50	126.35	–	703.20	–	24	17.4	–	–	116.45
ಚಿಂಚೋಳಿ	0	194.26	95.90	–	582.85	–	12	24.6	–	–	909.61
ಚಿತ್ತಾಪುರ	0	201.96	354.13	–	693.35	–	45	25.3	–	–	1319.74
ಗುಲಬರ್ಗಾ	0	244.45	137.62	–	648.79	–	604	28.2	–	–	1662.63
ಜೇವರ್ಗಿ	0	36.35	242.15	–	1038.20	–	24	5.7	–	–	1346.40
ಸೇಡಂ	0	156.70	61.30	–	390.95	–	21	21.24	–	–	651.19
ಶಹಾಪುರ	0	123.74	230.29	–	1014.70	–	56	–	–	–	1424.88
ಸುರಪುರ	0	128.56	280.25	–	781.60	–	54	1.5	–	–	1245.91
ಯಾದಗೀರ	0	209.57	267.00	–	601.70	–	98	40.85	–	–	1217.12
ಒಟ್ಟು ಮೊತ್ತ	0	1.678.89	1955.12	–	7057.74	–	963	169	–	–	11823.36

ಮಾಹಿತಿ ಮೂಲ: ಕಾಲಂ 292 ರಿಂದ 302 ರವರೆಗೆ ಕಾರ್ಯನಿರ್ವಾಹಕ ಅಭಿಯಂತರರು ಜಿ.ಪಂ ಲೋಕೋಪಯೋಗಿ ಇಲಾಖೆ, ಗುಲಬರ್ಗಾ/ಯಾದಗೀರ, ಅಧೀಕ್ಷಕ ಅಭಿಯಂತರರು ಗುಲಬರ್ಗಾ ಮಹಾನಗರ ಪಾಲಿಕೆ ಹಾಗೂ ಜಿಲ್ಲೆಯ ಎಲ್ಲ ಪುರಸಭೆಗಳು (ಗುಲಬರ್ಗಾ ಜಿಲ್ಲೆಯ ಅಂಕಿ ಅಂಶಗಳ ನೋಟ2007–08 ಪುಟ ಸಂ–35)

ವಾಯು ಸಾರಿಗೆ:

ವಾಯುಯಾನ ಮಾರ್ಗದ ಸಂದರ್ಭದಲ್ಲಿ ಉತ್ತರ ಕರ್ನಾಟಕ ಬಹಳ ಹಿಂದುಳಿದ ಗುಲ್ಬರ್ಗ ನಗರ ವಿಮಾನ ಪೂರೈಸಲು ಕಟ್ಟಲಾಗುತ್ತದೆ. ಇದರ ಪ್ರಾಜೆಕ್ಟ್ ಸೈಟ್ ಶ್ರೀನಿವಾಸ ಸರಡಗಿ ಹಳ್ಳಿಯ ಬಳಿ ರಾಜ್ಯ ಹೆದ್ದಾರಿ 10(ಸೇಡಂ ರಸ್ತೆ) ನಗರದ 15 ಕಿ.ಮೀ ದಿಕ್ಕಿನಲ್ಲಿದೆ. 120 ಕೋಟಿ ರೂ. ತಾಂತ್ರಿಕ ನೆರವು ಲೋಕೋಪಯೋಗಿ ಇಲಾಖೆ ಮೂಲಕ ರಾಜ್ಯ ಸರ್ಕಾರ ಪೂರ್ಣಗೊಳಿಸುತ್ತಿದೆ. ಇದು ಭಾರತದ ವಿಮಾನ ನಿಲ್ದಾಣಗಳ ಪ್ರಾಧಿಕಾರಕ್ಕೆ (ಎಎಐ) ಸೇರಿದ್ದು, ಇದು ಹೈದರಾಬಾದ್ ಅಂತರಾಷ್ಟ್ರೀಯ ವಿಮಾನ ನಿಲ್ದಾಣ ನಗರದಿಂದ 220 ಕಿ.ಮೀ ದೂರದಲ್ಲಿದೆ.

ಕೈಗಾರಿಕೆಗಳು

ಗುಲಬರ್ಗಾ ಜಿಲ್ಲೆಯು ಕೈಗಾರಿಕೆಯಲ್ಲಿ ರಾಜ್ಯದಲ್ಲಿ ಹಿಂದುಳಿದಿರುವ ಜಿಲ್ಲೆಗಳಲ್ಲಿ ಒಂದಾಗಿದೆ. ಕೈಗಾರಿಕಾ ಬೆಳವಣಿಗೆಗೆ ಸಂಬಂಧಿಸಿದಂತೆ ಇದು ರಾಜ್ಯದಲ್ಲಿ 12ನೇಯ ಸ್ಥಾನದಲ್ಲಿದೆ. ಜಿಲ್ಲೆಯಲ್ಲಿ ಕಚ್ಚಾ ಸರಕು ಹಾಗೂ ಆಂತರಿಕ ಸಾಧನ ಸೌಲಭ್ಯಗಳ ಕೊರತೆ ಇಲ್ಲದಿದ್ದರೂ ಕೈಗಾರಿಕಾಭಿವೃದ್ಧಿಯಲ್ಲಿ ನಿರೀಕ್ಷಿತ ಮಟ್ಟವನ್ನು ತಲುಪದಿರುವುದಕ್ಕೆ ಬಹುಮಟ್ಟಿನ ಕಾರಣ ಕೈಗಾರಿಕೋದ್ಯಮಿಗಳ ಕೊರತೆ ಎಂದು ತೋರುವುದು. ಜಿಲ್ಲೆಯಲ್ಲಿ ಸ್ವಾಭಾವಿಕ ಸಂಪನ್ಮೂಲಗಳಾದ ನದಿಗಳು, ಅರಣ್ಯಗಳು, ಖನಿಜಗಳು ಮತ್ತು ವ್ಯವಸಾಯಕ್ಕೆ ಯೋಗ್ಯವಾದ ಭೂಮಿಗಳಿದ್ದರೂ ಜಿಲ್ಲೆಯ ಆರ್ಥಿಕ ಪ್ರಗತಿಯ ಬೆನ್ನೆಲುಬು. ಜಿಲ್ಲೆಯಲ್ಲಿ ದೊರಕುವ ಸುಣ್ಣದಕಲಟ್ಟು, ರೆಡ್‌ಅಕರ್, ಕ್ವಾರ್ಟ್ಸ, ಫಲ್ಲರ್ಸ ಅರ್ಥ, ಜೇಡಿಮಣ್ಣು ಬಳಪದ ಕಲ್ಲು ಮೊದಲಾದ ಪ್ರಮುಖ ಖನಿಜಗಳು ಕೈಗಾರಿಕಾ ಬೆಳವಣಿಗೆಗೆ ನೆರವನ್ನೊದಗಿಸಿವೆ. ಸುಣ್ಣದ ಕಲ್ಲಿನ ಗಣಿಗಳು ಜಿಲ್ಲೆಯ ಚಿತ್ತಾಪೂರ, ಜೇವರ್ಗಿ, ಚಿಂಚೋಳಿ, ಶಹಾಪುರ, ಸುರಪುರ, ನಾಲವಾರ, ವಾಡಿ, ಶಹಾಬಾದ್, ಸೇಡಂ, ಮಳಖೇಡ್ ಮೊದಲಾದ ಕಡೆಯಲ್ಲಿ ಹೇರಳವಾಗಿದ್ದು ಸುಮಾರು 4000 ಚ.ಕಿ.ಮೀ ಪ್ರದೇಶವನ್ನು ಆಕ್ರಮಿಸಿಕೊಂಡಿವೆ. ದೊಡ್ಡ ಪ್ರಮಾಣದಲ್ಲಿ ಸಿಮೆಂಟ್ ಕಾರ್ಖಾನೆಗಳು ಪ್ರಾರಂಭಗೊಂಡು ಸಿಮೆಂಟ್ ಉತ್ಪಾದನೆಯಲ್ಲಿ ಜಿಲ್ಲೆಗೆ ಪ್ರಥಮ ಸ್ಥಾನ ದೊರಕುವಂತಾಗಿದೆ. (ಗುಲಬರ್ಗಾ ಜಿಲ್ಲೆ– ಭಾರತದ ಗ್ಯಾಸೆಟಿಯರ್ ಕರ್ನಾಕಟ ರಾಜ್ಯ ಪುಟ ಸಂಖ್ಯೆ –224) ಉದ್ಯಮದ ದೃಷ್ಟಿಯಿಂದ ಕಲಬುರಗಿ ಹಿಂದುಳಿದ ಜಿಲ್ಲೆ, ಶಹಾಬಾದ್, ವಾಡಿ, ಮಳಖೇಡಗಳಲ್ಲಿ ಸಿಮೆಂಟ ಉದ್ಯಮಗಳಿವೆ. ಜಿಲ್ಲೆಯಾದ್ಯಂತ ದಾಲ್ ಮಿಲಗಳು ಇವೆ. ಆದರೆ ಹಳೆಯ ತಂತ್ರಜ್ಞಾನ ಮತ್ತು ಪದ್ಧತಿಯನ್ನು ಬಳಸುತ್ತಿರುವುದರಿಂದ ಅನೇಕ ದಾಲ್‌ಮಿಲಗಳು ನಷ್ಟದಲ್ಲಿವೆ. ನೌಕರರ ಸಮಸ್ಯೆಯಿಂದಾಗಿ ಹಲವಾರು ಉದ್ಯಮಗಳು ಬಂದಾಗಿವೆ. ಖಾಸಗಿ ಕ್ಷೇತ್ರದ ಇಂಜಿನಿಯರಿಂಗ್, ವೈದ್ಯಕೀಯ, ನರ್ಸಿಂಗ, ಪಾಲಿಟೆಕ್ನಿಕ್ ಕಾಲೇಜು, ಮ್ಯಾನೇಜಮೆಂಟ ಕಾಲೇಜುಗಳು ಮತ್ತು ಕಾನ್ವೆಂಟ

ಶಾಲೆಗಳು, ಈ ಜಿಲ್ಲೆಯಲ್ಲಿರುವ ಅತ್ಯಂತ ಯಶಸ್ವಿ ವ್ಯಾಪಾರ ಕೇಂದ್ರಗಳಾಗಿವೆ. ರಾಜ್ಯ ಸರ್ಕಾರ, ಕಲಬುರಗಿಯಲ್ಲಿ ಐಟಿ ಪಾರ್ಕ ಸ್ಥಾಪಿಸುವುದಾಗಿ ಹೇಳಿದೆ. ಕಲಬುರಗಿ–ಬೀದರ ರೈಲು ಮಾರ್ಗವಾದರೆ, ಬೆಂಗಳೂರು–ದೆಹಲಿ ಪ್ರಯಾಣದಲ್ಲಿ ಹಲವಾರು ಗಂಟೆಗಳ ಉಳಿತಾಯವಾಗುವುದು ಮತ್ತು ಕಲಬುರಗಿ–ಬೀದರ ಅಭಿವೃದ್ಧಿಯಾಗುವುದು. ಆದರೆ ಕಳೆದ 5 ದಶಕಗಳಿಂದ ಈ ಬೇಡಿಕೆ ಹಾಗೆಯೇ ಉಳಿದಿದೆ. (ಅಂತರ್ಜಾಲ) ಜಿಲ್ಲೆಯಲ್ಲಿ ಸುಮಾರು 19 ದೊಡ್ಡ ಹಾಗೂ ಮಧ್ಯಮ ಪ್ರಮಾಣದ ಕಾರ್ಖಾನೆಗಳಿವೆ. ಅವುಗಳಲ್ಲಿ ಸಿಮೆಂಟ ಉತ್ಪಾದನೆಯು ಕಾರ್ಖಾನೆಗಳೇ ಬಹುಮುಖ್ಯ ಎಂದು ಹೇಳಬಹುದು. ಮುಖ್ಯವಾಗಿ ಎ.ಸಿ.ಸಿ (ವಾಡಿ) ಮತ್ತು ಇತರ ಕಂಪನಿಗಳು ಅನೇಕ ಸುಣ್ಣ ಕಲ್ಲಿನ ಗಣಿಗಳು, ಹತ್ತಿಬೀಜ ಬಿಡಿಸುವ ಕಾರ್ಖಾನೆಗಳು, ಬೀಡಿ ಕಾರ್ಖಾನೆಗಳು ಸಿಪ್ಪೆ ತೆಗೆಯುವ ಕಾರ್ಖಾನೆ ಹೀಗೆ, ಕೈಗಾರಿಕೆಯಲ್ಲಿ ಈ ಜಿಲ್ಲೆ ಸಾಕಷ್ಟು ನಿರತವಾಗಿದೆ. ಸಣ್ಣ ಪ್ರಮಾಣದ ಕಾರ್ಖಾನೆಗಳು 5000 ಕ್ಕೂ ಮೇಲ್ಪಟ್ಟಿವೆ. ಮುಖ್ಯವಾಗಿ ಆಹಾರ ಸಂಸ್ಕರಣೆ, ರಾಸಾಯನಿಕ ಪದಾರ್ಥಗಳು, ಚರ್ಮದ ವಸ್ತುಗಳು, ಮುದ್ರಣ, ರಬ್ಬರ್ ವಸ್ತುಗಳು, ಪ್ಲಾಸ್ಟಿಕ್ ವಸ್ತುಗಳು ಇತ್ಯಾದಿ ಈ ಕಾರ್ಖಾನೆಗಳಲ್ಲಿ ತಯಾರಾಗುತ್ತವೆ. 449 ಖಾದಿ ಗ್ರಾಮೋದ್ಯಮ ಘಟಕಗಳಿವೆ 2500 ಕ್ಕೆ ಮಗ್ಗಗಳಿವೆ (ತ್ರಿಭುವನ ಸ್ಕೂಲ್ ಅಟ್ಲಾಸ್)

ವಿಭಾಗವಾರು ಕೈಗಾರಿಕಾ ಅಭಿವೃದ್ಧಿ

ವಿಭಾಗಗಳು	ಸಣ್ಣ ಪ್ರಮಾಣ ಕೈಗಾರಿಕೆ		ಮಧ್ಯಮ ಮತ್ತು ಭಾರಿ ಕೈಗಾರಿಕೆಗಳು	
	ಘಟಕ	ಉದ್ಯೋಗ	ಘಟಕ	ಉದ್ಯೋಗ
ಗುಲಬರ್ಗಾ	35764	182752	138	39690
ಬೆಳಗಾಂ	62525	340004	117	63133
ಬೆಂಗಳೂರು	1093686	737173	620	293443
ಮೈಸೂರು	61568	331695	209	52017
ಉತ್ತರ ಕರ್ನಾಟಕ	98289	522756	255	102823
ದಕ್ಷಿಣ ಕರ್ನಾಟಕ	170936	1068808	829	345450
ರಾಜ್ಯ ಮಟ್ಟದ್ದು	269225	1591624	1084	448273

ವಿಭಾಗೀಯ ಶೇಕಡಾವಾರು ಕೈಗಾರಿಕಾ ಅಭಿವೃದ್ಧಿ

ವಿಭಾಗಗಳು	ಸಣ್ಣ ಪ್ರಮಾಣ ಕೈಗಾರಿಕೆ		ಮಧ್ಯಮ ಮತ್ತು ಭಾರಿ ಕೈಗಾರಿಕೆಗಳು	
	ಘಟಕ	ಉದ್ಯೋಗ	ಘಟಕ	ಉದ್ಯೋಗ
ಗುಲಬರ್ಗಾ	13.28	11.48	12.73	8.85
ಬೆಳಗಾಂ	23.22	21.36	10.79	14.08
ಬೆಂಗಳೂರು	40.62	46.32	57.20	65.46
ಮೈಸೂರು	22.88	22.84	19.28	11.61
ಉತ್ತರ ಕರ್ನಾಟಕ	36.51	32.84	23.52	22.94
ದಕ್ಷಿಣ ಕರ್ನಾಟಕ	63.49	67.16	76.48	77.06
ರಾಜ್ಯ ಮಟ್ಟದ್ದು	100.00	100.00	100.00	100.00

ಮೇಲಿನ ಕೋಷ್ಟಕದಿಂದ ವಿಶ್ಲೇಷಿಸುವದೇನೆಂದರೆ, ಗುಲಬರ್ಗಾ ವಿಭಾಗದಲ್ಲಿ ಸಣ್ಣ ಪ್ರಮಾಣದ ಕೈಗಾರಿಕೆ ಹಾಗೂ ಮಧ್ಯಮ ಮತ್ತು ಭಾರಿ ಕೈಗಾರಿಕೆಗಳ ಶೇಕಡಾ ಪ್ರಮಣ 13 ರಷ್ಟಿದೆ. ಹಾಗೂ ಉದ್ಯೋಗ ಮಟ್ಟವು ಸಣ್ಣ ಪ್ರಮಾಣದ ಕೈಗಾರಿಕೆಗಳಲ್ಲಿ ಶೇ. 11.48 ಇದ್ದರೆ, ಮಧ್ಯಮ ಮತ್ತು ಭಾರಿ ಕೈಗಾರಿಕೆಗಳಲ್ಲಿ ಕೇವಲ ಶೇ 8.55 ರಷ್ಟಿದೆ. ಹೀಗೆ ಉಳಿದ ವಿಭಾಗಕ್ಕೆ ತುಲನೆ ಮಾಡಿದರೆ ಗುಲಬರ್ಗಾ ವಿಭಾಗ ತೀರಾ ಹಿಂದುಳಿದಿರುವುದು ಕಂಡು ಬರುತ್ತದೆ. ಮತ್ತು ಬೆಂಗಳೂರು ವಿಭಾಗ ಸಿಂಹಪಾಲು ಪಡೆದಿರುವುದು ಸ್ಪಷ್ಟವಾಗುತ್ತದೆ. (ಡಾ॥ ನಂಜುಡಪ್ಪನವರ ವರದಿ ಮತ್ತು ಕಲಂ–371 ಲೇಖಕರು– ಡಾ॥ ಬಸವರಾಜ ಟಿ. ಕುಮ್ನೂರ) ಜಿಲ್ಲೆಯಲ್ಲಿ ಸಿಮೆಂಟ್ ಉತ್ಪಾದನೆಗೆ ಬೇಕಾದ ಕಚ್ಚಾವಸ್ತುಗಳು ಸಾಕಷ್ಟು ಸಿಗುವುದರಿಂದ ಸಿಮೆಂಟ ಉತ್ಪಾದನೆ ಒಂದು ಪ್ರಮುಖ ಕೈಗಾರಿಕೆಯಾಗಿದೆ. ಜಿಲ್ಲೆಯ ಅನೇಕ ಪ್ರದೇಶಗಳಲ್ಲಿ ಚಿತ್ತಾಪುರ, ಸೇಡಂ, ವಾಡಿ, ಶಹಾಬಾದ, ಕುರಕುಂಟಾ ಹಾಗೂ ಮಳಖೇಡಗಳಲ್ಲಿರುವ ಕಾರ್ಖಾನೆಗಳು ಅಧಿಕವಾಗಿ ಸಿಮೆಂಟ ಉತ್ಪಾದಿಸುವ ಪ್ರಮುಖ ಕಾರ್ಖಾನೆಗಳಾಗಿವೆ. ಇದಲ್ಲದೆ ಜಿಲ್ಲೆಯಲ್ಲಿ ಹಾಸುಗಲ್ಲು ಹೇರಳವಾಗಿ ಸಿಗುರುವದರಿಂದ ಕಲ್ಲು ಚಪ್ಪಡಿಗಳನ್ನು ತಯಾರಿಸುವ ಅನೇಕ ಸಣ್ಣ ಕಾರ್ಖಾನೆಗಳು ಸಹ ಇವೆ. (ಗುಲಬರ್ಗಾ ಜಿಲ್ಲೆಯ ಅಂಕಿ ಅಂಶಗಳ ನೋಟ 2007–08 ಪುಟ ಸಂಖ್ಯೆ –63)

ಜಿಲ್ಲೆವಾರು ಬೃಹತ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕೆಗಳು (ರೂ. ಕೋಟಿಗಳಲ್ಲಿ)

ಕ್ರಸಂ	ಜಿಲ್ಲೆ	ಘಟಕಗಳ ಸಂಖ್ಯೆ	ಬಂಡವಾಳ ಹೂಡಿಕೆ	ಉದ್ಯೋಗಿಗಳ ಸಂಖ್ಯೆ
1	ಬೆಂಗಳೂರು	375	1132615	202248
2	ಬೆಂಗಳೂರು(ಗ್ರಾಂ)	74	157715	27941
3	ಬಾಗಲಕೋಟೆ	14	88976	4380
4	ಬೀದರ್	07	22939	2554
5	ಬಳ್ಳಾರಿ	48	2477578	21941
6	ಬೆಳಗಾವಿ	26	193253	17863
7	ಬಿಜಾಪೂರ	02	14641	874
8	ಚಾಮರಾಜನಗರ	04	18292	353
9	ಚಿಕ್ಕಮಗಳೂರು	02	1071	302
10	ಚಿತ್ರದುರ್ಗ	04	11168	557
11	ಚಿಕ್ಕಬಳ್ಳಾಪೂರ	02	1547	117
12	ದಕ್ಷಿಣ ಕನ್ನಡ	17	760268	5083
13	ದಾವಣಗೆರೆ	07	29497	1506
14	ಧಾರವಾಡ	19	75438	3791
15	ಗದಗ	02	4998	159116
16	ಗುಲಬರ್ಗಾ	07	168395	4960

ಕರ್ನಾಟಕ ಕೈಪಿಡಿ ಪುಟ ಸಂ. 289

ಆರೋಗ್ಯ ಮತ್ತು ವೈದ್ಯಕೀಯ ಸೇವೆಗಳು

ಸಾಮಾನ್ಯವಾಗಿ ಒಣ ಹಾಗೂ ಆರೋಗ್ಯಕರವಾದ ಹವಾಮಾನ ಹೊಂದಿರುವ ಗುಲಬರ್ಗಾ ಜಿಲ್ಲೆಯ ರಾಜ್ಯ ಪುನರ್ಘಟನೆ ಪೂರ್ವದಲ್ಲಿ ಹಿಂದಿನ ಹೈದರಾಬಾದ ರಾಜ್ಯದ ಒಂದು ಭಾಗವಾಗಿದ್ದು ಅಂದು ಲಭ್ಯ ಇದ್ದ ಆರೋಗ್ಯ ಹಾಗೂ ವೈದ್ಯಕೀಯ ಸೇವೆಗಳ ಬಗೆಗಿನ ಮಾಹಿತಿ ತೀರ ಅಲ್ಪವಾಗಿದೆ. ಗೃಹ ವೈದ್ಯ, ನಾಟಿ ವೈದ್ಯ, ದೇಶಿ ವೈದ್ಯ ಪದ್ಧತಿ ಯುನಾನಿ ಹಾಗೂ ಆಯುರ್ವೇದ ಮುಂತಾದ ವೈದ್ಯ ಪದ್ಧತಿಗಳು ಪ್ರಚಲಿತದಲ್ಲಿದ್ದು ಅವು ಜನರಿಗೆ ಅವರ ಶಾರೀರಿಕ ಮತ್ತು ಇತರೇ ರೋಗ ರುಜಿನಗಳ ನಿವಾರಣೆಗೆ ಸಹಕಾರಿಯಾಗಿದ್ದವು. ಈಸ್ಟ್ ಇಂಡಿಯಾ ಕಂಪನಿಯ ಬ್ರಿಟಿಷ್ ಆಡಳಿತಾಧಿಕಾರಿಗಳ ಸಹಯೋಗದಿಂದ ಆಧುನಿಕ ವೈದ್ಯ ಪದ್ಧತಿ (ಅಲೋಪಥಿ) 19ನೇ ಶತಮಾನದ ಉತ್ತರಾರ್ಧದಲ್ಲಿ ಎಲ್ಲೆಡೆಯಂತೆ ಸಾಮಾನ್ಯವಾಗಿ ಇಲ್ಲಿಯೂ ಬಳಕೆಗೆ ಬಂದಿತು. 6ನೇ ನಿಜಾಮ ದೊರೆಯಾದ ನಾಸೀರ ಉದ್ ದೌಲನು ಮೊಟ್ಟ ಮೊದಲು ಈ ಪ್ರದೇಶದಲ್ಲಿ ಅಲೋಪಥಿ ವೈದ್ಯ ಪದ್ಧತಿ ಬಳಕೆಗೆ ತಂದನಲ್ಲದೆ ಅದರ ಅಭಿವೃದ್ಧಿಗೆ ಅನುವು ಮಾಡಿಕೊಟ್ಟನು. ಗುಲಬರ್ಗಾದಲ್ಲಿ ಸಿವಿಲ್ ಆಸ್ಪತ್ರೆಯು 1896 ರಲ್ಲಿ ಪ್ರಾರಂಭಗೊಂಡು, ಜಿಲ್ಲೆಯಲ್ಲಿ ವೈದ್ಯಕೀಯ ಸಂಸ್ಥೆಗಳ ಸ್ಥಾಪನೆ ಹಾಗೂ ಅಭಿವೃದ್ಧಿಗೆ ಅನುವು ಮಾಡಿಕೊಟ್ಟಿತು. ನಂತರ ತಾಲೂಕು ಕೇಂದ್ರಗಳಲ್ಲಿ ಸಿವಿಲ್ ಆಸ್ಪತ್ರೆ (ದವಾಖಾನೆ)ಗಳು ಪ್ರಾರಂಭಗೊಂಡವು. ಆಯುರ್ವೇದ, ಯುನಾನಿ, ದವಾಖಾನೆಗಳು ನಗರಗಳ ಹೊರವಲಯದಲ್ಲಿ ಸ್ಥಾಪನೆಗೊಂಡವು. 1956 ರ ನಂತರದ ದಶಕದಲ್ಲಿ ಬದಲಾದ ಆಡಳಿತ ವ್ಯವಸ್ಥೆ ಮತ್ತು ಜನರ ಬೇಡಿಕೆಗೆ ಸ್ಪಂದಿಸುವಂತಹ ಗ್ರಾಮೀಣ ಆರೋಗ್ಯ ಹಾಗೂ ವೈದ್ಯಕೀಯ ಸೇವೆಗಳು ವ್ಯಾಪಕಗೊಳ್ಳುತ್ತಾ ಹೋದವು. ಪರಿಣಾಮಕಾರಿಯಾದ ಜನಾರೋಗ್ಯ ಶಿಕ್ಷಣ, ಚಿಕಿತ್ಸಾ ಸೌಲಭ್ಯಗಳ ಹೆಚ್ಚಳ ವಿವಿಧ ಯೋಜನೆಗಳ ಅನುಷ್ಠಾನ ಹೀಗೆ ಹತ್ತು ಹಲವು ಕಾರ್ಯಕ್ರಮಗಳನ್ನು ಪಂಚವಾರ್ಷಿಕ ಯೋಜನೆಗಳಲ್ಲಿ ಅಳವಡಿಸಿ ಪ್ರತಿಯೋಜನೆಯಲ್ಲೂ ಸಾಕಷ್ಟು ಸಾಧನೆಯನ್ನು ಮಾಡಲಾಯಿತು.

ಆರೋಗ್ಯ 31.03.2008

ತಾಲ್ಲೂಕುಗಳು	ಅಲೋಪತಿ ಆಸ್ಪತ್ರೆಗಳು 31.03.2008		ಭಾರತೀಯ ವೈದ್ಯ ಪದ್ಧತಿ ಆಸ್ಪತ್ರೆಗಳು 31.03.2008		ಪ್ರಾಥಮಿಕ ಆರೋಗ್ಯ ಕೇಂದ್ರಗಳು			
					Centres		Unit	
	ಸಂಖ್ಯೆ	ಹಾಸಿಗೆಗಳು	ಸಂಖ್ಯೆ	ಹಾಸಿಗೆಗಳು	ಸಂಖ್ಯೆ	ಹಾಸಿಗೆಗಳು	ಸಂಖ್ಯೆ	ಹಾಸಿಗೆಗಳು
1	**335**	**336**	**337**	**338**	**339**	**340**	**341**	**342**
ಅಫಜಲಪುರ	1	100	2	16	8	48	–	–
ಆಳಂದ	1	100	0	0	14	84	–	–
ಚಿಂಚೋಳಿ	1	100	0	0	9	54	–	–
ಚಿತ್ತಾಪುರ	1	100	1	10	9	54	–	–
ಗುಲಬರ್ಗಾ	1	100	2	31	12	72	–	–
ಜೇವರ್ಗಿ	1	100	0	0	11	66	–	–
ಸೇಡಂ	1	100	1	6	7	42	–	–
ಶಹಾಪುರ	1	100	1	6	10	60	–	–
ಸುರಪುರ	1	100	1	6	12	72	–	–
ಯಾದಗೀರ	1	100		6	15	90	–	–
ಒಟ್ಟು ಮೊತ್ತ	10	1750	9	81	107	642	–	–

ಮಾಹಿತಿ ಮೂಲ : 1) ಕಾಲಂ 335 ರಿಂದ 342 ರ ವರೆಗೆ –ಜಿಲ್ಲಾ ಆರೋಗ್ಯ ಮತ್ತು ಕುಟುಂಬದ ಕಲ್ಯಾಣ ಅಧಿಕಾರಿಗಳು, ಗುಲಬರ್ಗಾ/ಯಾದಗೀರ (ಗುಲಬರ್ಗಾ ಜಿಲ್ಲೆಯ ಅಂಕಿ ಅಂಶಗಳ ನೋಟ 2007–2008 ಪುಟ ಸಂ– 40)

ತಾಲ್ಲೂಕುಗಳು	ಸಮುದಾಯ ಆರೋಗ್ಯ ಕೇಂದ್ರಗಳು		ಚಿಕಿತ್ಸಾಲಯಗಳು		ಕುಟುಂಬ ಕಲ್ಯಾಣ		ಸಂತಾನ ಹರಣ ಶಸ್ತ್ರ ಚಿಕಿತ್ಸೆ		ಔಷಧಿ ಅಂಗಡಿ ಗಳು	ರಕ್ತ ನಿಧಿಗಳು
	ಸಂಖ್ಯೆ	ಹಾಸಿಗೆ ಗಳು	ಅಲೋಪತಿ	ಭಾರತೀಯ ವೈದ್ಯ ಪದ್ಧತಿ	ಕೇಂದ್ರ ಗಳು	ಉಪ ಕೇಂದ್ರಗಳು	Vasectomy	Tubectomy		
1	343	344	345	346	347	348	349	350	351	352
ಅಫಜಲಪುರ	2	60	1	5	–	42	–	1532	41	–
ಆಳಂದ	3	90	1	4	1	57	–	1698	49	–
ಚಿಂಚೋಳಿ	2	60	1	3	–	42	–	1449	48	–
ಚಿತ್ತಾಪುರ	5	150	1	7	1	54	–	2614	66	–
ಗುಲಬರ್ಗಾ	0	0	1	5	2	52	–	3199	509	4
ಜೇವರ್ಗಿ	2	60	1	6	–	44	–	1590	52	–
ಸೇಡಂ	2	60	1	3	–	33	–	1072	40	–
ಶಹಾಪುರ	2	60	1	6	–	55	–	2237	85	–
ಸುರಪುರ	1	30	1	1	1	59	–	3255	104	–
ಯಾದಗೀರ	3	90	1	10	–	56	–	2422	74	–
ಒಟ್ಟು ಮೊತ್ತ	22	660	10	50	5	494	–	21068	1068	4

ಮಾಹಿತಿ ಮೂಲ : 1) ಕಾಲಂ 343 ರಿಂದ 350 ರ ವರೆಗೆ –ಜಿಲ್ಲಾ ಆರೋಗ್ಯ ಮತ್ತು ಕುಟುಂಬದ ಕಲ್ಯಾಣ ಅಧಿಕಾರಿಗಳು, ಗುಲಬರ್ಗಾ/ಯಾದಗೀರ

2) ಕಾಲಂ 351 ರಿಂದ 352 ರವರೆಗೆ – ಸಹಾಯಕ ಔಷಧ ನಿಯಂತ್ರಕರು ಗುಲಬರ್ಗಾ (ಪುಟ ಸಂ– 41)

ತಾಲ್ಲೂಕುಗಳು	ಲಸಿಕೆ 31.03.2008				
	ಡಿ.ಪಿ.ಟಿ	ಪೋಲಿಯೋಬಿ.ಸಿ.ಜಿ	ಬಿ.ಸಿ.ಜಿ	ಧಡಾರ	ಟಿ.ಟಿ
1	353	354	355	356	357
ಅಫಜಲಪುರ	492	4972	5452	4871	5287
ಆಳಂದ	7659	7659	7747	4219	7733
ಚಿಂಚೋಳಿ	6016	6016	5959	5874	6425
ಚಿತ್ತಾಪುರ	9042	9042	9806	8706	10236
ಗುಲಬರ್ಗಾ	17083	17493	19187	15563	14351
ಜೇವರ್ಗಿ	6955	6955	6949	6855	7542
ಸೇಡಂ	4841	4841	5172	4756	5170
ಶಹಾಪುರ	9012	8972	9272	9243	9586
ಸುರಪುರ	9611	9783	9887	9776	10905
ಯಾದಗೀರ	9566	9566	9532	9363	10337
ಒಟ್ಟು ಮೊತ್ತ	84757	85299	88963	8226	87572

ಮಾಹಿತಿ ಮೂಲ: ಕಾಲಂ 353 ರಿಂದ 357 ರ ವರೆಗೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು, ಗುಲಬರ್ಗಾ/ಯಾದಗೀರ ಪುಟ ಸಂ 42

ತಾಲ್ಲೂಕುಗಳು	Aids Control Programme 31.03.2006			Leprosy Control Programme 31.03.2008		
	No of Aids Patients Identified	Patient Cured	Deaths Occurred	No of Aids Patients Identified	Patient Cured	Deaths Occurred
1	358	359	360	361	362	363
ಅಫಜಲಪುರ	20	–	5	7	10	–
ಆಳಂದ	22	–	12	29	17	–
ಚಿಂಚೋಳಿ	7	–	–	23	26	–
ಚಿತ್ತಾಪುರ	16	–	9	34	30	–
ಗುಲಬರ್ಗಾ	94	–	26	74	46	–
ಜೇವರ್ಗಿ	34	–	2	12	7	–
ಸೇಡಂ	13	–	2	34	24	–
ಶಹಾಪುರ	47	–	10	18	17	–
ಸುರಪುರ	49	–	10	26	23	–
ಯಾದಗೀರ	14	–	1	48	49	–
ಒಟ್ಟು ಮೊತ್ತ	316	–	77	305	249	–

ಮಾಹಿತಿ ಮೂಲ : 1) ಕಾಲಂ 358 ರಿಂದ 360 ರ ವರೆಗೆ ಸರಕಾರಿ ಆಸ್ಪತ್ರೆ (ಏಡ್ಸ್ ಕಂಟ್ರೋಲ್) ಗುಲ್ಬರ್ಗಾ 2) ಕಾಲಂ 361 ರಿಂದ 363 ರ ವರೆಗೆ ಜಿಲ್ಲಾ ಕುಷ್ಠರೋಗ ಅಧಿಕಾರಿಗಳು, ಗುಲಬರ್ಗಾ ಪುಟ ಸಂಖ್ಯೆ –43

ತಾಲ್ಲೂಕುಗಳು	T.B. Control Programme 31.03.2008			Malaria & Eradiation programme 31.03.2008			Cancer 31.03.2008		
	No of Patients Identified	Patient Cured	Deaths Occured	No of Patients Identified	Patient Cured	Deaths Occured	No of Patients Identified	Patient Cured	Deaths Occured
1	364	365	366	367	368	369	370	371	372
ಅಫಜಲಪುರ	139	73	7	61	60	–	8	–	–
ಆಳಂದ	139	73	7	128	119	–	34	–	–
ಚಿಂಚೋಳಿ	158	162	21	146	145	–	12	–	–
ಚಿತ್ತಾಪುರ	158	162	21	565	560	–	35	–	–
ಗುಲಬರ್ಗಾ	295	197	27	1264	1261	–	96	–	–
ಜೇವರ್ಗಿ	191	101	14	360	334	–	22	–	–
ಸೇಡಂ	153	–	–	637	605	–	17	–	–
ಶಹಾಪುರ	233	156	9	993	984	–	36	–	–
ಸುರಪುರ	233	156	9	970	961	–	16	–	–
ಯಾದಗೀರ	231	127	17	70	69	–	21	–	–
ಒಟ್ಟು ಮೊತ್ತ	1400	816	95	5194	5098	–	297	–	–

ಮಾಹಿತಿ ಮೂಲ : 1) ಕಾಲಂ 364 ರಿಂದ 369 ರ ವರೆಗೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು ಗುಲಬರ್ಗಾ/ಯಾದಗೀರ 2) ಕಾಲಂ 370 ರಿಂದ 372 ರ ವರೆಗೆ ಕ್ಯಾನ್ಸರ್ ಆಸ್ಪತ್ರೆ, ಗುಲಬರ್ಗಾ (ಗುಲಬರ್ಗಾ ಜಿಲ್ಲೆಯ ಅಂಕಿ ಅಂಶಗಳನೋಟ 2007–2008) ಪುಟ ಸಂ. 44)

ಉಪಸಂಹಾರ :

ಇಷ್ಟೆಲ್ಲಾ ಭವ್ಯ ಪರಂಪರೆ ಹೊಂದಿದ್ದರೂ ನಾವು ಹಿಂದುಳಿದ ಪ್ರದೇಶ ಎನ್ನುವ ಭಾವನೆಯಿಂದ ಬದುಕುತ್ತಿರುವುದು ದುರಂತ. 1947 ರಲ್ಲಿ ಸ್ವಾತಂತ್ರ್ಯ ಸಿಕ್ಕರೂ, ನಮ್ಮ ಹೈದ್ರಾಬಾದ ಕರ್ನಾಟಕದ 4ಜಿಲ್ಲೆಗಳಾದ ಗುಲಬರ್ಗಾ, ಬೀದರ, ರಾಯಚೂರ, ಕೊಪ್ಪಳಗಳಿಗೆ ಸ್ವಾತಂತ್ರ್ಯ ಸಿಗದೆ ಹೈದ್ರಾಬಾದಿನ ನಿಜಾಮನ ದುರಾಡಳಿತದಲ್ಲಿಯೇ ತೊಳಲಾಡುವ ಸ್ಥಿತಿ ನಮ್ಮದಾಗಿತ್ತು. ಈ ದುರಂತದಿಂದ ನಮ್ಮನ್ನು 1948 ಸೆಪ್ಟೆಂಬರ 17 ರಂದು ಮುಕ್ತ ಮಾಡಿದ ಉಕ್ಕಿನ ಪುರುಷರೆಂದೇ ಕರೆಯಿಸಿಕೊಳ್ಳುವ ಸರ್ದಾರ ವಲ್ಲಭಾಯಿ ಪಟೇಲರು. ಅಂತಹ ಪುಣ್ಯ ಪುರುಷ ಈ ಮಹತ್ಕಾರ್ಯ ಮಾಡಿದರೂ ಈ ಭಾಗದ ಜನರು ಇಂದೂ ಕೂಡ ಹೈದ್ರಾಬಾದ– ಕರ್ನಾಟಕ ಪ್ರದೇಶವೆಂಬ ಕಳಂಕದಿಂದ ಹಿಂದುಳಿದವರೆಂಬ ಹಣೆಪಟ್ಟಿ ಕಟ್ಟಿಕೊಂಡು ಬದುಕುತ್ತಿರುವುದೊಂದು ಈ ಭಾಗದ ಜನರಲ್ಲಿಯ ಆಲಸ್ಯ ಮತ್ತು ಹಿಂದಿನ ಭವ್ಯ ಪರಂಪರೆಯಿಂದ ಪ್ರೇರಣೆ ಪಡೆಯದೇ ಇರುವುದಕ್ಕೆ ಕಾರಣವೆನ್ನಬಹುದು. ಇದನ್ನು ಅರಿತು ನಮ್ಮ ಭಾಗ ಹಿಂದುಳಿದ ಪ್ರದೇಶ ಎನ್ನುವ ಹಣೆಪಟ್ಟಿ ತೆಗೆಯುಲು ನಾವು ಪ್ರಯತ್ನಿಸಬೇಕು. ಸಹಸ್ರ ವರ್ಷಗಳ ಗುಲಾಮಗಿರಿ, ವಿಶೇಷತಃ 200 ವರ್ಷಗಳ ನಿಜಾಮನ ಮುಖಾಂತರ ಆದ ಬ್ರಿಟಿಷರ ಆಳ್ವಿಕೆಯಲ್ಲಿ ನಾವು ಬೆಂದು ಬೆಂಡಾದದ್ದು ನಿಜ. ನಾವು ಹಿಂದುಳಿದವರೂ ಅಲ್ಲ ಬಡವರೂ ಅಲ್ಲ. ನಮ್ಮ ಭಾಗದಲ್ಲಿ ಆಧುನಿಕತೆಯ ಗಾಳಿ ಬೀಸುವಲ್ಲಿ ಕೆಲವು ತೊಂದರೆಗಳು, ಇನ್ನೂ ಕೆಲವು ಪಟ್ಟಭದ್ರ ಹಿತಾಸಕ್ತಿಗಳ ಮಧ್ಯಸ್ತಿಕೆ ಮತ್ತು ಅಹಿತಕರ ಅನುಕೂಲವಲ್ಲದ ವಿಷಪೂರಿತ ಹವಾಮಾನ ಮತ್ತು ನೈಸರ್ಗಿಕ ವಿಪತ್ತುಗಳು ಬಂದಡರಿದವು. ಕಾರಣಗಳೇನೇ ಇರಲಿ, ನಾವು ಬಡವರೆಂದು ಒಪ್ಪಿಕೊಂಡು ಸ್ವಾತಂತ್ರ್ಯದ ನಂತರವೂ ಆನಂದದಿಂದ ಅರ್ಧ ಶತಮಾನ ಕಳೆದೆವು. ಒಟ್ಟಿನಲ್ಲಿ ಈ ಭಾಗದ ಮಾನಸಿಕ, ಆರ್ಥಿಕ ಹಾಗೂ ಶೈಕ್ಷಣಿಕ ಕೀಳರಿಮೆಯನ್ನು ತೊಲಗಿಸಿ ಬರಲಿರುವ ಮುಂದಿನ ಯವ ಜನಾಂಗಕ್ಕೆ ಮುಕ್ತ, ಮೂಲ ಸಮಾಜೋ ಆರ್ಥಿಕ ನೆಲೆಗಟ್ಟಿನ ನಿರ್ಮಾಣಕ್ಕೆ ನಾಂದಿ ಹಾಡಬೇಕಾಗಿದೆ.

ಪರಾಮರ್ಶನ ಗ್ರಂಥಗಳು

1. ವಾಸುದೇವ ಅಗ್ನಿಹೋತ್ರಿ, "ಹೈದ್ರಾಬಾದ ಕರ್ನಾಟಕದ ನೋಡುವ ಬೀಡುಗಳು", ಶ್ರೀ ಕೊತ್ತಲ ಬಸವೇಶ್ವರ ಭಾರತೀಯ ಶಿಕ್ಷಣ ಸಮಿತಿ, ಸೇಡಂ, 2006. ಪು–1–3
2. ಸಿ. ಆರ್. ಗೋವಿಂದ ರಾಜು, "ಮೂವ್ಮೆಂಟ್ ಫಾರ್ ಯುನೈಟೇಡ್ ಕರ್ನಾಟಕ", ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2009. ಪು–14–18
3. ಕೆ. ರಾಘವೇಂದ್ರರಾವ್, " ಕರ್ನಾಟಕ ಯುನಿಫಿಕೇಶನ್– ಎ ಪೊಲಿಟಿಕಲ್ ಇಂಟರ್ ಪ್ರಿಟೇಶನ್", ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2010. ಪು–35–37
4. ಗೋಪಾಲರಾವ್ ಹೇಜೀಬ್, "ಹೈದ್ರಾಬಾದ ಮುಕ್ತಿ ಸಂಘರ್ಷ", ರಾಷ್ಟ್ರೋತ್ಥಾನ ಸಾಹಿತ್ಯ, ಬೆಂಗಳೂರು, 2001. ಪು–8–9
5. ಗುಲಬರ್ಗಾ ಜಿಲ್ಲೆಯ ಅಂಕಿ ಅಂಶಗಳ ನೋಟ 2007–2008. ಪು– 13
6. ಭಾರತೀಯ ಪವಮಾನ ಇಲಾಖೆ (ಕರ್ನಾಟಕ ಕೈಪಿಡಿ–2011) ಕರ್ನಾಟಕ ಗ್ಯಾಸೆಟಿಯರ್ ಇಲಾಖೆ. ಪು –33
7. ಕರ್ನಾಟಕ ಹಾಲು ಉತ್ಪಾದಕರ ಸಹಕಾರ ಸಂಘಗಳ ಒಕ್ಕೂಟ ನಿಯಮಿತ (ಕರ್ನಾಟಕ ಕೈಪಿಡಿ ಪು–236)
8. ಕರ್ನಾಟಕ ಕೈಪಿಡಿ 2011 ಕರ್ನಾಟಕ ಗ್ಯಾಸೆಟಿಯರ್ ಇಲಾಖೆ ಅನುಬಂಧಗಳು – ಪು– 569
9. ಗುಲಬರ್ಗಾ ಜಿಲ್ಲೆ– ಭಾರತದ ಗ್ಯಾಸೆಟಿಯರ್, ಪು– 326, 327)
10. ಗುಲಬರ್ಗಾ ಜಿಲ್ಲೆಯ ಅಂಕಿ ಅಂಶಗಳನೋಟ 2007–2008 ಪು– 44
11. Website; http:// en.wikipedia.org/wiki/Gulbarga_district

ಅಧ್ಯಾಯ– 4

ರಾಜಕೀಯ ಸಾಮಾಜೀಕರಣ

ಕೆಲವು ವ್ಯಕ್ತಿಗಳಿಗೆ ಹುಟ್ಟಿನಿಂದಲೇ ನಾಯಕತ್ವದ ಗುಣಗಳು ಬಂದಿರುತ್ತವೆ. ಆದರೆ ಹಲವು ವ್ಯಕ್ತಿಗಳು ತಮ್ಮ ಸತತ ಪ್ರಯತ್ನದಿಂದ ಹಾಗೂ ದೃಡ ಸಂಕಲ್ಪದ ಪರಿಣಾಮವಾಗಿ ನಾಯಕರಾಗಿ ಬೆಳೆಯುತ್ತಾರೆ. ಒಂದು ರಾಜಕೀಯ ವ್ಯವಸ್ಥೆಯ ಕುರಿತು ಅವರು ತಮ್ಮ ವಿದ್ಯಾರ್ಥಿ ಜೀವನದಲ್ಲಿ ಬೆಳಸಿಕೊಳ್ಳುವ ನಂಬಿಕೆಗಳು, ನಡವಳಿಕೆಗಳು ಹಾಗು ಬದ್ದತೆಗಳು ಮುಂದೆ ಅವರ ಬದುಕಿನಲ್ಲಿ ಬಹು ಪ್ರಮುಖವಾದ ಪಾತ್ರವಹಿಸುತ್ತವೆ. ಈ ಹಿನ್ನೆಲೆಯಿಂದ ನಾವು ನೋಡಿದಾಗ ರಾಜಕೀಯ ಸಾಮಾಜೀಕರಣವು ವಿದ್ಯಾರ್ಥಿ ನಾಯಕರಲ್ಲಿ ಅತ್ಯಂತ ಪ್ರಮುಖವಾದ ಪಾತ್ರ ವಹಿಸುತ್ತದೆ ಎಂದು ಹೇಳಬಹುದು. ರಾಜಕೀಯ ಸಾಮಾಜೀಕರಣವೆಂದರೆ ಒಬ್ಬ ವ್ಯಕ್ತಿಯು ರಾಜಕೀಯ ವ್ಯವಸ್ಥೆಯ ಬಗ್ಗೆ ಅವನು ಇಟ್ಟುಕೊಂಡ ನಂಬಿಕೆಗಳು ಹಾಗು ನಡಾವಳಿಗಳು ಎಂದು ಹೇಳಬಹುದು. ಅಂದರೆ ಒಂದು ರಾಜಕೀಯ ವ್ಯವಸ್ಥೆ ಪರಿಪಾಲಿಸುವ ಸಂಪ್ರದಾಯಗಳು, ನಿಯಮಗಳು, ನಡವಳಿಕೆಗಳು ಹಾಗೂ ವರ್ತನೆಗಳನ್ನು ಕಲಿಯುವ ನಿರಂತರ ಪ್ರಕ್ರಿಯೇ ರಾಜಕೀಯ ಸಾಮಾಜೀಕರಣವೆಂದು ಹೇಳಬಹುದು. ರಾಜಕೀಯ ಸಾಮಾಜೀಕರಣದ ಮುಖಾಂತರ ವ್ಯಕ್ತಿಯ ರಾಜಕೀಯ ಸಂಸ್ಕೃತಿ ರೂಪುಗೊಳ್ಳುತ್ತದೆ ಹಾಗೂ ಇದು ಒಂದು ತಲೆಮಾರಿನಿಂದ ಇನ್ನೊಂದು ತಲೆಮಾರಿಗೆ ವರ್ಗಾವಣೆಯಾಗುತ್ತದೆ. ಇದು ರಾಜಕೀಯ ಸಂಸ್ಕೃತಿಯನ್ನು ಸೃಷ್ಟಿಸುವ, ಅದನ್ನು ಕಾಪಾಡುವ ಹಾಗೂ ಮುಂದಿನ ತಲೆಮಾರಿಗೆ ವರ್ಗಾಯಿಸುವ ಪ್ರಮುಖ ಕಾರ್ಯನಿರ್ವಹಿಸುತ್ತದೆ. ಬಾಲ್ಯಜೀವನದಲ್ಲಿ ಅಳವಡಿಸಿಕೊಂಡ ಜ್ಞಾನ, ಮೌಲ್ಯಗಳು ಹಾಗೂ ವಿಚಾರಧಾರೆ ಒಬ್ಬ ವ್ಯಕ್ತಿಯ ಬದುಕ್ಕಿನುದ್ದಕ್ಕೂ ಪ್ರಭಾವ ಬೀರುತ್ತವೆ. ಈ ಪ್ರಕ್ರಿಯೇಯಲ್ಲಿ ರಾಜಕೀಯ ಸಾಮಾಜೀಕರಣವು ಅತ್ಯಂತ ಪ್ರಮುಖವಾದ ಪಾತ್ರವಹಿಸುತ್ತದೆ. ರಾಜಕೀಯ ಸಾಮಾಜೀಕರಣದ ಪ್ರಮುಖ ಮೂಲಾಂಶಗಳಾದ ಕುಟುಂಬ, ಸಮವಯಸ್ಕರ ಗುಂಪು, ಶೈಕ್ಷಣಿಕ ಸಂಸ್ಥೆಗಳು, ಮಾಧ್ಯಮಗಳು, ಸರಕಾರ ಹಾಗೂ ರಾಜಕೀಯ ಪಕ್ಷಗಳು– ಇವುಗಳ ಮುಖಾಂತರ ಒಬ್ಬ ವ್ಯಕ್ತಿಯು ಸಾಮಾಜೀಕರಣದ ಪ್ರಕ್ರಿಯೆಗೆ ಒಳಗಾಗುತ್ತಾನೆ. ಹೀಗಾಗಿ, ವಿದ್ಯಾರ್ಥಿಗಳು ಅಥವಾ ಯುವ ಸಮುದಾಯ ಹೇಗೆ ರಾಜಕೀಯ ಸಾಮಾಜೀಕರಣದ ಪ್ರಭಾವಕ್ಕೆ ಒಳಗಾಗುತ್ತದೆ ಹಾಗೂ ಅದು ವಹಿಸುವ ಮಹತ್ವದ ಪಾತ್ರವನ್ನು ಗುರುತಿಸಿ, ವಿಶ್ಲೇಷಣೆಗೆ ಒಳಪಡಿಸುವುದು ಅವಶ್ಯಕವಾಗಿದೆ.

ಜಗತ್ತಿನ ಹಲವು ರಾಷ್ಟ್ರಗಳು ಪ್ರಜಾಪ್ರಭುತ್ವವನ್ನು ಅಳವಡಿಸಿಕೊಂಡ ನಂತರ ರಾಜಕೀಯ ಕೇವಲ ಶ್ರಿಮಂತರಿಗೆ, ಬಂಡವಾಳಶಾಹಿಗಳಿಗೆ ಹಾಗು ಕೈಗಾರಿಕೋದ್ಯಮಿಗಳಿಗೆ ಸೀಮಿತವಾಗದೆ, ಜನ ಸಾಮಾನ್ಯರು ರಾಜಕೀಯ ಚಟುವಟುಕೆಗಳಲ್ಲಿ ಸಕ್ರಿಯವಾಗಿ

ಪಾಲ್ಗೊಳ್ಳುತ್ತಿದ್ದಾರೆ. ಪ್ರಜಾಪ್ರಭುತ್ವ ವ್ಯವಸ್ಥೆ ಯಶಸ್ವಿಯಾಗಿ ಕಾರ್ಯನಿರ್ವಹಿಸಬೇಕಾದರೆ ಕೆಲವೊಂದು ಸೂಕ್ತ ಸನ್ನಿವೇಶಗಳ ಅವಶ್ಯಕತೆ ಇರುತ್ತದೆ. ಅದರಲ್ಲಿ ಜನರನ್ನು ಸಾಮಾಜೀಕರಣಗೊಳಿಸುವುದು ಒಂದಾಗಿದೆ. ರಾಜಕೀಯ ಸಾಮಾಜೀಕರಣದಿಂದ ಮಾತ್ರ ಒಂದು ಸುಭದ್ರವಾದ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಸ್ಥಾಪಿಸಲು ಹಾಗೂ ಜನರಲ್ಲಿ ಪ್ರಜಾಸತ್ತಾತ್ಮಕ ಮೌಲ್ಯಗಳನ್ನು ಬೆಳೆಸಲು ಸಾಧ್ಯವಿದೆ. ಏಕೆಂದರೆ ರಾಜಕೀಯ ಸಾಮಾಜೀಕರಣ ಪ್ರಕ್ರಿಯೆಯ ಮುಖಾಂತರ ಒಬ್ಬ ವ್ಯಕ್ತಿಯನ್ನು ರಾಜಕೀಯ ಸಂಸ್ಕೃತಿಗೆ ಒಳಪಡಿಸಬಹುದಾಗಿದೆ.

ರಾಜಕೀಯ ಸಾಮಾಜೀಕರಣವು ಇತೀಚಿನ ಪರಿಕಲ್ಪನೆಯಾಗಿದ್ದು, ರಾಜ್ಯಶಾಸ್ತ್ರ ಅಧ್ಯಯನದ ಮಹತ್ವವಾದ ವಸ್ತುವಿಷಯವಾಗಿದೆ. ರಾಜ್ಯಶಾಸ್ತ್ರಜ್ಞರು ರಾಜಕೀಯ ಸಾಮಾಜೀಕರಣವನ್ನು ಇತ್ತೀಚಿಗೆ ವೈಜ್ಞಾನಿಕವಾಗಿ ಅಧ್ಯಯನ ಮಾಡಲು ಪ್ರಾರಂಭಿಸಿದ್ದಾಗಿನಿಂದ ಈ ಪರಿಕಲ್ಪನೆಗೆ ಹೆಚ್ಚಿನ ಮಹತ್ವ ಬಂದಿತು. ಸಾಮಾಜೀಕರಣವೆಂಬ ಪದವನ್ನು ಇಂಗ್ಲಿಷ್ ಸಾಹಿತ್ಯದಲ್ಲಿ ಕ್ರಿ.ಶ. 1828 ರಲ್ಲಿ ಮೊದಲ ಬಾರಿಗೆ ಬಳಸಲಾಯಿತು. ಸ್ಕಾಲರ್ ಹೇಮನ್ ಎಂಬ ರಾಜಕೀಯ ತಜ್ಞರು ರಾಜಕೀಯ ಸಾಮಾಜಿಕರಣದ ಅಧ್ಯಯನಕ್ಕೆ ಹೆಚ್ಚಿನ ಉತ್ತೇಜನ ನೀಡಿದರು. ಹೇಮನ್‌ರವರ ಗ್ರಂಥ ಬರುವದಕ್ಕಿಂತ ಮುಂಚೆ ಅಭಿವೃದ್ಧಿ ಹೊಂದಿದ ರಾಷ್ಟ್ರಗಳು ವಿದ್ಯಾರ್ಥಿಗಳ ರಾಜಕೀಯ ಸಾಮಾಜೀಕರಣವನ್ನು ತಮ್ಮ ಅಧ್ಯಯನದಲ್ಲಿ ಸಾಕಷ್ಟು ಬಳಸಿರುವುದನ್ನು ಕಂಡು ಬರುತ್ತದೆ. ರಾಜಕೀಯ ಸಾಮಾಜೀಕರಣವು ರಾಜಕೀಯ ಸಂಸ್ಕೃತಿಯನ್ನು ಒಳಗೊಂಡ ಒಂದು ಪ್ರಕ್ರಿಯೆ ಎಂದು ಸಾಮಾನ್ಯವಾಗಿ ವ್ಯಾಖ್ಯಾನಿಸಲಾಗುತ್ತದೆ. ಹೆಮನ್‌ರವರ ಪ್ರಕಾರ ಸಮಾಜದ ವಿವಿಧ ನಿಯೋಗಗಳ ಮುಖಾಂತರ ತನ್ನ ಸಮಾಜದ ಸ್ಥಾನಮಾನಕ್ಕನುಗುಣವಾಗಿ ಸಮಾಜದ ವಿವಿಧ ಮಾದರಿಗಳನ್ನು ಕಲಿಯುವ ಪ್ರಕ್ರಿಯೆ ರಾಜಕೀಯ ಸಾಮಾಜೀಕರಣವೆಂದು ಅಭಿಪ್ರಾಯಪಟ್ಟಿದ್ದಾರೆ. ವಿಲಿಯಂ ಎಫ್. ಆಗ್‌ಬರ್ನ್‌ರವರ ಪ್ರಕಾರ "ಸಮಾಜದ ನಿಯಮಗಳಿಗೆ ಅನುಸಾರವಾಗಿ ತನ್ನ ನಡತೆಯನ್ನು ರೂಪಿಸಿಕೊಳ್ಳುವ ಪ್ರಕ್ರಿಯೆಯೇ ಸಾಮಾಜೀಕರಣ" ಪೀಟರ್ ವರ್ಸ್ಲೆ ರವರ ಪ್ರಕಾರ "ಸಾಮಾಜೀಕರಣವು ಸಾಂಸ್ಕೃತಿಕ ಸಂಚರಣೆಯ ಪ್ರಕ್ರಿಯೆಯಾಗಿದ್ದು ಇದರ ಮೂಲಕ ಜನರು ಸಾಮಾಜಿಕ ಸಮೂಹಗಳ ನಿಯಮ ಮತ್ತು ಆಚರಣೆಗಳನ್ನು ಕಲಿತುಕೊಳ್ಳುವರು." ಅಲ್ಮಂಡ್ ಮತ್ತು ವರ್ಬ್‌ರವರು " ರಾಜಕೀಯ ಸಂಸ್ಕೃತಿಯನ್ನು ಸಂರಕ್ಷಿಸುವ ಮತ್ತು ಮಾರ್ಪಡಿಸುವ ಒಂದು ಪ್ರಕ್ರಿಯೆಗೆ ರಾಜಕೀಯ ಸಾಮಾಜೀಕರಣವೆಂದು ಕರೆದಿದ್ದಾರೆ. "ರಾಜಕೀಯ ಪದ್ದತಿಯ ಬಗ್ಗೆ ನಂಬಿಕೆಗಳನ್ನು ಅಥವಾ ಅನಿಸಿಕೆಗಳನ್ನು ಸ್ಥಾಪಿಸಿ ಬೆಳೆಸಿಕೊಳ್ಳುವುದೇ ರಾಜಕೀಯ ಸಾಮಾಜೀಕರಣ" ವೆಂದು ಆರ್ ಬಾಲ್ ರವರು ವ್ಯಾಖ್ಯಾನಿಸಿದ್ದಾರೆ. ಸಾಮನ್ಯ ಅರ್ಥದಲ್ಲಿ ರಾಜಕೀಯ ಸಾಮಾಜೀಕರಣವೆಂದರೆ ಒಂದು ರಾಜಕೀಯ ವ್ಯವಸ್ಥೆಯ ಬಗ್ಗೆ ಹೊಂದಿರುವ ಧೋರಣೆಗಳು, ಮೌಲ್ಯಗಳು ಮತ್ತು ಅನಿಸಿಕೆಗಳು

ಹಾಗೂ ರಾಜಕೀಯ ಘಟನೆಗಳಿಗೆ ಅವರ ಪ್ರತಿಕ್ರಿಯನ್ನು ನಿರ್ಧರಿಸುವ ವಿಧಾನವೇ ರಾಜಕೀಯ ಸಾಮಾಜೀಕರಣವೆಂದು ಹೇಳಬಹುದು. ಒಟ್ಟಿನಲ್ಲಿ ಗ್ರಹಿಸುವುದಾದರೆ 'ರಾಜಕೀಯ ಮೌಲ್ಯಗಳನ್ನು, ಧೋರಣೆಗಳನ್ನು, ನಂಬಿಕೆಗಳನ್ನು, ಅಭಿರುಚಿ, ನಿಷ್ಠೆ, ಭಾವನೆಗಳನ್ನು ವ್ಯಕ್ತಿಗಳಲ್ಲಿ ರೂಪಿಸಿ, ಅವುಗಳನ್ನು ಪರಂಪರೆಯ ರೂಪದಲ್ಲಿ ಮುಂದಿನ ಪೀಳಿಗೆಗೆ ರವಾನಿಸುವ ಒಂದು ವಿಧಾನವೇ ರಾಜಕೀಯ ಸಾಮಾಜೀಕರಣವಾಗಿದೆ.' ರಾಜಕೀಯ ಸಾಮಾಜೀಕರಣವೆಂಬುವುದು ಪ್ರತ್ಯಕ್ಷವಾಗಿ ಪರೋಕ್ಷವಾಗಿ ವ್ಯಕ್ತಿಯ ಜೀವನದ ಅವಧಿಯ ಉದ್ದಕ್ಕೂ ಆತನನ್ನು ವಿವಿಧ ರೀತಿಯಲ್ಲಿ ಪ್ರಭಾವಿಸುತ್ತಿರುತ್ತದೆ. ಬಹುಮುಖ್ಯವಾಗಿ ಕುಟುಂಬ, ಶೈಕ್ಷಣಿಕ ಸಂಸ್ಥೆಗಳು, ಒತ್ತಡ ಗುಂಪುಗಳು, ಹಿತಾಸಕ್ತಿ ಗುಂಪುಗಳು, ಸಂವಹನ ಮಾಧ್ಯಮಗಳು, ಅನುಷಂಗಿಕ ಗುಂಪುಗಳು, ರಾಜಕೀಯ ಪಕ್ಷಗಳು, ಸಾಮಾಜಿಕ ಸಂಸ್ಥೆಗಳು, ಧಾರ್ಮಿಕ ಸಂಸ್ಥೆಗಳು ಇವು ರಾಜಕೀಯ ಸಾಮಾಜೀಕರಣದ ಪ್ರಕ್ರಿಯೆಯಲ್ಲಿ ಪರಿಣಾಮಕಾರಿ ಪಾತ್ರವಹಿಸುವ ನಿಯೋಗಗಳಾಗಿವೆ.

ಈ ಪ್ರತಿಯೊಂದು ನಿಯೋಗಗಳು ರಾಜಕೀಯ, ಸಾಮಾಜಿಕ ಮತ್ತು ಆಡಳಿತಾತ್ಮಕ ಅಭಿಪ್ರಾಯ ರೂಪಿಸಿವಲ್ಲಿ ಅಂತರ್ ಸಂಬಂಧವನ್ನು ಹೊಂದಿವೆ. ಉದಾ: ರಾಜಕೀಯ ಪಕ್ಷಗಳು ನಿರ್ದಿಷ್ಟ ಆಡಳಿತ ಧೋರಣೆಯನ್ನು ರೂಪಿಸಿ ಅನುಷ್ಠಾನಕ್ಕೆ ತರಲು ಪ್ರಯತ್ನಿಸುತ್ತವೆ. ಆ ಮೂಲಕ ದೇಶದ ಅಭಿವೃದ್ಧಿಗೆ ಶ್ರಮಿಸುತ್ತವೆ. ಇಂತಹ ಅಭಿವೃದ್ಧಿ ಕಾರ್ಯಗಳನ್ನು ಪತ್ರಿಕೆಗಳು ರೇಡಿಯೋ, ದೂರದರ್ಶನದಂತಹ ಮಾಧ್ಯಮಗಳು ಸಾರ್ವಜನಿಕರಿಗೆ ತಲುಪಿಸುವಲ್ಲಿ, ಸಾರ್ವಜನಿಕ ಅಭಿಪ್ರಾಯವನ್ನು ರೂಪಿಸುವಲ್ಲಿ ಪ್ರಮುಖ ಪಾತ್ರವಹಿಸುತ್ತವೆ. ಹೀಗೆ ಪರಸ್ಪರ ಒಟ್ಟಾಭಿಪ್ರಾಯವನ್ನು ರೂಪಿಸವುದರ ಮೂಲಕ ಪರಿಣಾಮಾತ್ಮಕವಾಗಿ ರಾಜಕೀಯ ಸಾಮಾಜೀಕರಣದಲ್ಲಿ ಪಾಲ್ಗೊಳ್ಳುತ್ತವೆ. ಆ ಮೂಲಕ ವ್ಯಕ್ತಿಯ ರಾಜಕೀಯ ಭಾಗವಹಿಸುವಿಕೆಗೆ ಉತ್ತಮ ಪ್ರೇರಣೆಗಳನ್ನು ತಿಳುವಳಿಕೆಗಳನ್ನು ಇವು ನೀಡುತ್ತವೆ.

ಮಗುವಿನ ಬೆಳವಣಿಗೆ ಮತ್ತು ನಡುವಳಿಕೆಯ ಮಾದರಿಗಳು ನಿರಂತರವಾಗಿದ್ದು, ಮಗು ಪ್ರಾಪ್ತ ವಯಸ್ಸಿಗೆ ಬರುವವರಿಗೂ ಇದು ಮುಂದುವರಿಯುತ್ತದೆ. ಈ ಸಂದರ್ಭದಲ್ಲಿ ಮಗು ತನ್ನ ದೈಹಿಕ, ಮಾನಸಿಕ ಹಾಗೂ ಮನೋಭಾವನೆಗಳನ್ನು ಬೆಳೆಸಿಕೊಳ್ಳುವುದರ ಜೊತೆಗೆ ಸಾಮಾಜಿಕ ಕಾರ್ಯಗಳು ಹಾಗೂ ವ್ಯಕ್ತಿತ್ವವನ್ನು ಬೆಳೆಸಿಕೊಳ್ಳುತ್ತದೆ. ಕುಟುಂಬ, ಶಾಲೆ, ಚರ್ಚ್, ಮಾದ್ಯಮಗಳು, ರಾಜಕೀಯ ಪಕ್ಷಗಳು ಮತ್ತು ವಿವಿಧ ಸಾಮಾಜಿಕ ಮತ್ತು ರಾಜಕೀಯ ವಯಸ್ಕ ಗುಂಪುಗಳು ರಾಜಕೀಯ ಸಾಮಾಜೀಕರಣ ಪ್ರಕ್ರಿಯೆಯಲ್ಲಿ ಅತ್ಯಂತ ಮಹತ್ವವಾದ ಪಾತ್ರವನ್ನು ವಹಿಸುತ್ತವೆ.

ರಾಜಕೀಯ ಸಾಮಾಜೀಕರಣ ಮತ್ತು ರಾಜಕೀಯ ಸಂಸ್ಕೃತಿ:

ರಾಜಕೀಯ ಸಾಮಾಜೀಕರಣ ಮತ್ತು ರಾಜಕೀಯ ಸಂಸ್ಕೃತಿ ನಿಕಟವಾದ ಅಂತರಸಂಬಂಧವನ್ನು ಹೊಂದಿವೆ. ರಾಜಕೀಯ ಸಾಮಾಜೀಕರಣವು ಮಾನಸಿಕ ಪರಿಕಲ್ಪನೆಯಾದರೆ, ರಾಜಕೀಯ ಸಂಸ್ಕೃತಿಯು ಸಾಮಾಜಿಕ ಪರಿಕಲ್ಪನೆಯಾಗಿದೆ. ಒಂದು ರಾಜಕೀಯ ವ್ಯವಸ್ಥೆಯ ಸದಸ್ಯರುಗಳಲ್ಲಿ ರಾಜಕೀಯದ ಕುರಿತು ಒಬ್ಬ ವ್ಯಕ್ತಿಯ ನಡತೆಯ ಮಾದರಿಯನ್ನು ರಾಜಕೀಯ ಸಂಸ್ಕೃತಿ ಎಂದು ಕರೆಯಬಹುದಾಗಿದೆ. ಅಂದರೆ ಒಂದು ರಾಷ್ಟ್ರದ ರಾಜಕೀಯ ಸಂಸ್ಕೃತಿಯು ಆ ರಾಷ್ಟ್ರದ ರಾಜಕೀಯ ವ್ಯವಸ್ಥೆಯ ಕುರಿತು ಜನರ ನಡತೆ ಹಾಗೂ ಅಭಿಪ್ರಾಯಗಳನ್ನು ಒಳಗೊಂಡಿರುತ್ತದೆ.

ರಾಜಕೀಯ ಸಂಸ್ಕೃತಿಯು ರಾಜಕೀಯ ಪದ್ಧತಿಯ ಸದಸ್ಯರು, ದೇಶದ ರಾಜಕಾರಣದ ಬಗ್ಗೆ ಹೊಂದಿರುವ ವೈಯಕ್ತಿಕ ಪ್ರವೃತ್ತಿಗಳು ಹಾಗೂ ದೃಷ್ಟಿಕೋನಗಳ ಸ್ವರೂಪವೆಂದು ಹೇಳಬಹುದು. ಒಂದು ರಾಷ್ಟ್ರದ ರಾಜಕೀಯ ಪದ್ಧತಿ ಮತ್ತು ರಾಜಕೀಯ ಕ್ರೀಯೆಗಳ ಬಗ್ಗೆ ಆ ರಾಷ್ಟ್ರದ ಜನತೆ ಹೊಂದಿರುವ ನಂಬಿಕೆಗಳು, ಧೋರಣೆಗಳು, ಭಾವನೆಗಳು, ಮೌಲ್ಯಗಳು ಮತ್ತು ಆ ಜನರ ನಡುವಳಿಕೆಗಳ ಸಂಗ್ರಹವೇ ರಾಜಕೀಯ ಸಂಸ್ಕೃತಿ ಎಂದು ಹೇಳಬಹುದು.

ಆಲ್ಮಂಡ್ ಮತ್ತು ಪೂವೆಲ್ ರವರ ಪ್ರಕಾರ " ರಾಜಕೀಯ ಸಂಸ್ಕೃತಿಯು ಪ್ರಸಕ್ತ ಜನತೆಯಲ್ಲಿ ಕಂಡುಬರುವ ಧೋರಣೆಗಳು , ನಂಬಿಕೆಗಳು, ಮೌಲ್ಯಗಳು ಮತ್ತು ಕೌಶಲಗಳಿಂದ ಕೂಡಿದೆ." ರಾಜಕೀಯ ಸಂಸ್ಕೃತಿಯು ರಾಜಕೀಯ ಧ್ಯೇಯಗಳ ಬಗ್ಗೆ ಇರುವ ಪ್ರವೃತಿ ಅಥವಾ ಒಲವು ಎಂದು ಟಾಲ್ಕಾಟ ಪಾರಸನ್ ಅಭಿಪ್ರಾಯ ಪಡುತ್ತಾರೆ. ಒಟ್ಟಿನಲ್ಲಿ ಒಂದು ರಾಜಕೀಯ ವ್ಯವಸ್ಥೆಯಲ್ಲಿ ಜನರು ಆ ವ್ಯವಸ್ಥೆಯ ಬಗ್ಗೆ ಹೊಂದಿರುವ ರಾಜಕೀಯ ಆದರ್ಶಗಳು, ಧ್ಯೇಯಗಳು ಮತ್ತು ಅವರ ನಡವಳಿಕೆಯ ಮಟ್ಟವನ್ನು ತಿಳಿದುಕೊಳ್ಳಲು ರಾಜಕೀಯ ಸಂಸ್ಕೃತಿಯ ಅಧ್ಯಯನ ತುಂಬಾ ಪ್ರಯೋಜನಕಾರಿಯಾಗಿದೆ.

ರಾಜಕೀಯ ಸಂಸ್ಕೃತಿಯನ್ನು ಪ್ರಮುಖವಾಗಿ ಮೂರು ವಿಧಗಳಾಗಿ ವಿಂಗಡಿಸಲಾಗಿದೆ. ಅವುಗಳೆಂದರೆ ಸಂಕುಚಿತ ರಾಜಕೀಯ ಸಂಸ್ಕೃತಿ, ಪರಾಧೀನತೆಯ ರಾಜಕೀಯ ಸಂಸ್ಕೃತಿ ಮತ್ತು ಸಕ್ರಿಯ ರಾಜಕೀಯ ಸಂಸ್ಕೃತಿ.

ಸಂಕುಚಿತ ರಾಜಕೀಯ ಸಂಸ್ಕೃತಿಯಲ್ಲಿ ಜನರು ತಮ್ಮ ರಾಷ್ಟ್ರದ ರಾಜಕೀಯ ವ್ಯವಸ್ಥೆಗಳ ಬಗ್ಗೆ ರಾಜಕೀಯ ಉದ್ದೇಶಗಳ ಅರಿವನ್ನು ಹೊಂದಿರುವದಿಲ್ಲ. ಇಂತಹ ಪ್ರಜ್ಞಾರಹಿತ ವ್ಯಕ್ತಿಗಳು ಪ್ರತಿ ಸಮಾಜದಲ್ಲಿಯೂ ಕಂಡುಬರುತ್ತಾರೆ. ಅಂತಹವರ ಸಂಖ್ಯೆ ಸಂಪ್ರದಾಯಬದ್ಧ ಅಥವಾ ಹಿಂದುಳಿದ ಸಮಾಜದಲ್ಲಿಯೇ ಹೆಚ್ಚಾಗಿರುತ್ತದೆ. ಅಲ್ಲದೆ ಅಂತಹ ವ್ಯಕ್ತಿಗಳು

ರಾಜಕೀಯ ಪದ್ಧತಿಯಿಂದ ಯಾವುದೇ ನಿರೀಕ್ಷೆ ಇಟ್ಟುಕೊಂಡಿರುವದಿಲ್ಲ. ಉದಾ: ಆಫ್ರಿಕಾದ ರಾಷ್ಟ್ರಗಳ ರಾಜಕೀಯ ಸಂಸ್ಕೃತಿಯು ಸಂಕುಚಿತ ರಾಜಕೀಯ ಸಂಸ್ಕೃತಿಗೆ ತಕ್ಕ ಉದಾಹರಣೆಯಾಗಿದೆ.

ಪರಾಧೀನತೆಯ ರಾಜಕೀಯ ಸಂಸ್ಕೃತಿಯಲ್ಲಿ ರಾಜಕೀಯ ವ್ಯವಸ್ಥೆ ಮತ್ತು ವ್ಯಕ್ತಿಗಳ ನಡುವಿನ ಸಂಬಂಧವು ಉದಾಸೀನತೆಯ ಸಂಬಂಧವಾಗಿರುತ್ತದೆ. ಇಂತಹ ರಾಜಕೀಯ ಸಂಸ್ಕೃತಿಯಲ್ಲಿ ಸಾಮನ್ಯವಾಗಿ ವ್ಯಕ್ತಿಗಳು ರಾಜಕೀಯ ವ್ಯವಸ್ಥೆಗೆ ವಿಧೇಯರಾಗಿರುತ್ತಾರೆ. ಪ್ರಜೆಗಳಿಗೆ ರಾಜಕೀಯ ವ್ಯವಸ್ಥೆಯ ಬಗ್ಗೆ ಒಲವಿದ್ದರೂ ರಾಜಕೀಯ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸದೆ ಇರಬಹುದು. ಅಂದರೆ ರಾಜಕೀಯ ಚಟುವಟಿಕೆಗಳ ಬಗ್ಗೆ ಉದಾಸೀನ ಮನೋಭಾವನೆಯನ್ನು ಹೊಂದಿರಬಹುದು. ಅಂತಹ ವ್ಯಕ್ತಿಗಳು ಸರ್ಕಾರದ ಪಾತ್ರದ ಬಗ್ಗೆಯಾಗಲಿ ಅಥವಾ ರಾಜಕೀಯ ವ್ಯವಸ್ಥೆಯ ಮೇಲೆ ಬೀರುವ ಪ್ರಭಾವದ ಬಗ್ಗೆಯಾಗಲ್ಲಿ ನಿರ್ದಿಷ್ಟ ಹಾಗೂ ಸ್ಪಷ್ಟ ತಿಳುವಳಿಕೆಯನ್ನು ಹೊಂದಿರುವುದಿಲ್ಲ. ಪೂರ್ವ ಯೂರೋಪಿನ ರಾಷ್ಟ್ರಗಳಲ್ಲಿ ಇಂತಹ ರಾಜಕೀಯ ಸಂಸ್ಕೃತಿಯನ್ನು ಕಾಣಬಹುದಾಗಿದೆ.

ಸಕ್ರಿಯ ರಾಜಕೀಯ ಸಂಸ್ಕೃತಿಯನ್ನು ಅಭಿವೃದ್ಧಿ ಹೊಂದಿದ ರಾಷ್ಟ್ರಗಳಲ್ಲಿ ಅಥವಾ ಸಮಾಜಗಳಲ್ಲಿ ಕಾಣಬಹುದಾಗಿದೆ. ಸಕ್ರಿಯ ರಾಜಕೀಯ ಸಂಸ್ಕತಿಯಲ್ಲಿ ಜನರು ರಾಜಕೀಯ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಾರೆ. ಇಂತಹ ರಾಜಕೀಯ ಸಂಸ್ಕೃತಿಯಲ್ಲಿ ಪ್ರಜೆಗಳು ತಮ್ಮ ರಾಷ್ಟ್ರದ ರಾಜಕೀಯ ವ್ಯವಸ್ಥೆಯ ರಚನೆ ಹಾಗೂ ರಾಜಕೀಯ ಚಟುವಟಿಕೆಗಳ ಬಗ್ಗೆ ಸ್ಪಷ್ಟವಾದ ತಿಳುವಳಿಕೆಯನ್ನು ಹೊಂದಿದ್ದು ತಮ್ಮ ಬೇಡಿಕೆಗಳನ್ನು ಮಂಡಿಸುವಲ್ಲಿ ಮತ್ತು ತೀರ್ಮಾನ ಕೈಕೊಳ್ಳುವ ಕ್ರಿಯೆಯಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಾರೆ. ಸರ್ಕಾರದ ಪ್ರತಿಯೊಂದು ಗುರಿ, ಉದ್ದೇಶ, ಧೋರಣೆಗಳ ಬಗ್ಗೆ ಜನ ಸದಾ ಜಾಗರೂಕರಾಗಿರುತ್ತಾರೆ. ಸರಕಾರದ ಪ್ರತಿಯೊಂದು ಚಟುವಟಿಕೆಗಳಲ್ಲಿ ಜನರು ಸಕ್ರಿಯವಾಗಿ ಭಾಗವಹಿಸಿ ತಮ್ಮ ಸಲಹೆ ಸೂಚನೆಗಳನ್ನು ನೀಡುತ್ತಾರೆ. ಇಂತಹ ರಾಜಕೀಯ ಸಂಸ್ಕೃತಿಯನ್ನು ಅಭಿವೃದ್ಧಿ ಹೊಂದಿದ ರಾಷ್ಟ್ರಗಳಲ್ಲಿ ಕಾಣಬಹುದಾಗಿದೆ.

ಒಂದು ರಾಷ್ಟ್ರದ ರಾಜಕೀಯ ಸಂಸ್ಕೃತಿಯನ್ನು ರೂಪಿಸುವಲ್ಲಿ ಹಲವಾರು ಅಂಶಗಳು ಪ್ರಮುಖ ಪಾತ್ರವಹಿಸುತ್ತವೆ. ಅವುಗಳೆಂದರೆ ಜನಾಂಗೀಯ ಭಿನ್ನತೆ, ಸಾಮಾಜಿಕ–ಆರ್ಥಿಕ ರಚನೆ, ಧಾರ್ಮಿಕ ಭಿನ್ನತೆಗಳು, ಭೌಗೋಳಿಕ ಅಂಶ, ವಸಹಾತು ಪ್ರಾಬಲ್ಯ ಹಾಗೂ ರಾಜಕೀಯ ನಿರಂತತೆ.

ಜನಾಂಗೀಯ ಭಿನ್ನತೆಗಳು ರಾಜಕೀಯ ಸಂಸ್ಕೃತಿಯನ್ನು ನಿರ್ಧರಿಸುವ ಒಂದು ಪ್ರಮುಖ ಅಂಶವಾಗಿದೆ. ಹಾಗೆಯೇ ಅಮೇರಿಕಾದಲ್ಲಿ ಕಪ್ಪು ಜನರಾದ ನೀಗ್ರೋಗಳು ಇಲ್ಲದಿದ್ದರೆ ಅದರ ರಾಜಕೀಯ ಸಂಸ್ಕೃತಿಯೇ ಬೇರೆಯಾಗಿರುತ್ತಿತ್ತು. ಜರ್ಮನಿಯಲ್ಲಿ ಆರ್ಯನ್ ಬುಡಕಟ್ಟಿನ

ಶ್ರೇಷ್ಠತೆಯ ಭಾವನೆ ಅಲ್ಲಿನ ರಾಜಕೀಯ ಸಂಸ್ಕೃತಿಗೆ ಒಂದು ಹೊಸ ಆಯಾಮವನ್ನು ನೀಡಿದೆ. ಹಾಗೆಯೇ ಆಫ್ರಿಕಾದ ಬುಡಕಟ್ಟುಗಳ ಭಿನ್ನತೆ ಇಲ್ಲದಿದ್ದರೆ ಅದರ ರಾಜಕೀಯ ಸಂಸ್ಕೃತಿಯೇ ಬೇರೆಯಾಗಿರುತ್ತಿತ್ತು.

ಧಾರ್ಮಿಕ ಏಕತೆಯು ರಾಜಕೀಯ ಸಂಸ್ಕೃತಿಯ ಬೆಳವಣಿಗೆಗೆ ತುಂಬಾ ಸಹಾಯಕಾರಿಯಾದರೆ, ಧಾರ್ಮಿಕ ವಿಭಿನ್ನತೆಗಳು ರಾಜಕೀಯ ಸಂಸ್ಕೃತಿಯ ಬೆಳವಣಿಗೆಗೆ ಅಡ್ಡಿಯಾಗುತ್ತವೆ. ಉದಾ: ಭಾರತದಲ್ಲಿ ಹಿಂದೂ-ಮುಸ್ಲಿಮ್‌ರ ವೈಷಮ್ಯ ಭಾರತೀಯರಲ್ಲಿ ಅನೈಕ್ಯತೆಯನ್ನುಂಟು ಮಾಡಿ ಅಂತಿಮವಾಗಿ ರಾಷ್ಟ್ರದ ವಿಭಜನೆಯಲ್ಲಿ ಅಂತ್ಯಗೊಂಡಿತು. ಇಂದಿಗೂ ಸಹ ಭಾರತದ ರಾಜಕೀಯ ಸಂಸ್ಕೃತಿಯ ಮೇಲೆ ಧಾರ್ಮಿಕ ಭಿನ್ನತೆಯ ಭಾವನೆಗಳು ಅಗಾಧ ರೀತಿಯಲ್ಲಿ ಪರಿಣಾಮ ಬೀರಿವೆ. ಒಂದು ಉತ್ತಮವಾದ ರಾಜಕೀಯ ಸಂಸ್ಕೃತಿಯ ಬೆಳವಣಿಗೆಗೆ ಧಾರ್ಮಿಕ ಏಕತೆ ಅವಶ್ಯಕವಾಗಿದೆ.

ರಾಜಕೀಯ ನಿರಂತರತೆಯು ರಾಜಕೀಯ ಸಂಸ್ಕೃತಿಯನ್ನು ನಿರ್ಧರಿಸುವ ಒಂದು ಪ್ರಮುಖ ಅಂಶವಾಗಿದೆ. ಬ್ರಿಟನ್ನಿನ ರಾಜಕೀಯ ಸಂಸ್ಕೃತಿಯು ಆ ದೇಶದ ಅವಿರತವಾದ ರಾಜಕೀಯ ಪದ್ಧತಿಯಿಂದ ಪ್ರಭಾವಿತವಾಗಿದೆ. ಬ್ರಿಟನ್ನಿನಲ್ಲಿ ನಿರಂತರವಾಗಿ ರಾಜಕೀಯ ಪದ್ಧತಿಯು ಬೆಳೆದು ಬಂದಿದ್ದರಿಂದಲೇ ಅನೇಕ ಶತಮಾನಗಳಿಂದ ಬ್ರಿಟನ್ನಿನ ಕೆಲವು ಮೌಲ್ಯಗಳು ಹಾಗೂ ನಂಬಿಕೆಗಳನ್ನು ರಾಜಕೀಯದಲ್ಲಿ ಬೆಳೆಸಿಕೊಂಡು ಬರಲು ಸಾದ್ಯವಾಗಿದೆ. ಬ್ರಿಟಿಷ್ ಜನತೆಯ ರಾಜಕೀಯ ಒಲವು ಮತ್ತು ಭಾವನೆಗಳು ಬದಲಾದ ಪರಿಸ್ಥಿತಿಗೆ ಹೊಂದಿಕೊಂಡಿವೆ.

ವಸಾಹತು ಪ್ರಾಬಲ್ಯ ಮತ್ತು ಸಾಮ್ರಾಜ್ಯಶಾಹಿ ನಿಯಂತ್ರಣವು ಸಹ ರಾಜಕೀಯ ಸಂಸ್ಕೃತಿಯ ಮೇಲೆ ಪ್ರಭಾವ ಬೀರುವ ಅಂಶಗಳಾಗಿವೆ. ಭಾರತ, ಬರ್ಮಾ, ಇಂಡೋನೇಷಿಯಾ, ಆಫ್ರಿಕಾ ಮೊದಲಾದ ರಾಷ್ಟ್ರಗಳ ರಾಜಕೀಯ ಸಂಸ್ಕೃತಿಯನ್ನು ರೂಪಿಸುವದರಲ್ಲಿ ವಿದೇಶಿ ವಸಾಹತುಶಾಹಿಯ ಪ್ರಾಬಲ್ಯ ಮತ್ತು ಸಾಮ್ರಾಜ್ಯಶಾಹಿ ಆಳ್ವಿಕೆಗಳು ಮುಖ್ಯ ಪಾತ್ರವಹಿಸಿವೆ. ಭಾರತದ ರಾಜಕೀಯ ಸಂಸ್ಕೃತಿಯು ಬ್ರಿಟನ್ನಿನ 200 ವರ್ಷಗಳ ಆಳ್ವಿವಿಕೆ ಹಾಗೂ ಬ್ರಿಟಿಷ್ ಮಾದರಿ ಸಂಸದೀಯ ಪದ್ಧತಿಯ ಸರ್ಕಾರದ ಅನುಸರಣೆಗಳಿಂದ ಪ್ರಭಾವಿತವಾಗಿವೆ.

ಒಂದು ರಾಷ್ಟ್ರದ ರಾಜಕೀಯ ಸಂಸ್ಕೃತಿಯ ಮೇಲೆ ಅಲ್ಲಿನ ಸಾಮಾಜಿಕ ಮತ್ತು ಆರ್ಥಿಕ ಸ್ವರೂಪ, ರಚನೆ ಮುಂತಾದವುಗಳು ಪ್ರಭಾವ ಬೀರುತ್ತವೆ. ಜಪಾನ ಔದ್ಯೋಗಿಕರಣ ರಾಷ್ಟ್ರವಾಗಿದ್ದು ಅಲ್ಲಿನ ಪ್ರಜಾಸತ್ತಾತ್ಮಕ ಸಮಾಜ ಹೆಚ್ಚು ಸ್ವಾತಂತ್ರ್ಯ ಮತ್ತು ಸಮಾನತೆಯನ್ನು ಹೊಂದಿದೆ. ಭಾರತವು ಕೃಷಿ ಪ್ರಧಾನ ರಾಷ್ಟ್ರವಾಗಿದ್ದು ಇಲ್ಲಿನ ಸಮಾಜವು ಜಾತಿ, ಧರ್ಮ, ಭಾಷೆ ಮತ್ತು ಪ್ರಾದೇಶಿಕ ಭಿನ್ನತೆಗಳಿಂದ ಕೂಡಿದೆ. ಜಪಾನ ಭಾರತಕ್ಕಿಂತ ರಾಜಕೀಯ

ಸಂಸ್ಕೃತಿಯಲ್ಲಿ ಮುಂದುವರೆದ ರಾಷ್ಟ್ರವಾಗಿದೆ. ಅಲ್ಲಿನ ಸಾಮಾಜಿಕ ಹಾಗೂ ಆರ್ಥಿಕ ರಚನೆಯು ಇದಕ್ಕೆ ಮುಖ್ಯ ಕಾರಣವಾಗಿದೆ.

ಭೌಗೋಳಿಕ ಅಂಶವು ರಾಜಕೀಯ ಸಂಸ್ಕೃತಿಯನ್ನು ಪ್ರಭಾವಿಸುವ ಪ್ರಮುಖ ಅಂಶವಾಗಿದೆ. ಉದಾ: ಭೌಗೋಳಿಕವಾಗಿ ದ್ವೀಪಕಲ್ಪವಾಗಿರುವ ಬ್ರಿಟನ್ನಿನ ರಾಜಕೀಯ ಸಂಸ್ಕೃತಿಯು ಇತರೆ ಯೂರೋಪಿನ ರಾಷ್ಟ್ರಗಳ ರಾಜಕೀಯ ಸಂಸ್ಕೃತಿಯಿಂದ ಭಿನ್ನವಾಗಿದೆ. ಭೌಗೋಳಿಕವಾಗಿ ಬ್ರಿಟನ್ನಿಗೂ ಹಾಗೂ ಭಾರತಕ್ಕೂ ಇರುವ ರಕ್ಷಣಾ ವ್ಯವಸ್ಥೆಯು ಇವುಗಳು ವಿಶಿಷ್ಟ ರೀತಿಯ ರಾಜಕೀಯ ಸಂಸ್ಕೃತಿಯನ್ನು ಹೊಂದಲು ಸಾಧ್ಯವಾಯಿತು. ವಿಶಾಲ ಭೂಪ್ರದೇಶ ಮತ್ತು ಹೇರಳವಾದ ನೈಸರ್ಗಿಕ ಸಂಪನ್ಮೂಲಗಳನ್ನು ಹೊಂದಿರುವ ಅಮೇರಿಕಾದ ರಾಜಕೀಯ ಸಂಸ್ಕೃತಿಯು ಬ್ರಿಟನ್ನಿನ ರಾಜಕೀಯ ಸಂಸ್ಕೃತಿಯಿಂದ ಭಿನ್ನವಾಗಿದೆ. ಆದ್ದರಿಂದ ಭೌಗೋಳಿಕ ಅಂಶಗಳಾದ ಭೂವಿಸ್ತಾರ, ನೆಲೆ, ವಾಯುಗುಣ, ಸಂಪನ್ಮೂಲ ಮುಂತಾದವುದಳು ಗಣನೀಯ ಪ್ರಭಾವ ಬೀರುತ್ತವೆಂಬುದು ಸ್ಪಷ್ಟ.

ರಾಜಕೀಯ ಸಾಮಾಜೀಕರಣ ಮತ್ತು ರಾಜಕೀಯ ಪಾಲ್ಗೊಳ್ಳುವಿಕೆ:

ರಾಜಕೀಯ ಭಾಗವಹಿಸುವಿಕೆ ರಾಜಕೀಯ ಸಾಮಾಜೀಕರಣದ ಒಂದು ಪ್ರಮುಖ ಭಾಗವಾಗಿದೆ. ರಾಜಕೀಯ ಸಾಮಾಜೀಕರಣದ ಪರಿಕಲ್ಪನೆ ಸರಿಯಾಗಿ ನಾವು ತಿಳಿದುಕೊಳ್ಳಬೇಕಾದರೆ ರಾಜಕೀಯ ಭಾಗವಹಿಸುವಿಕೆ ಕುರಿತು ತಿಳಿದುಕೊಳ್ಳುವುದು ಅವಶ್ಯಕವಾಗಿದೆ. ರಾಜಕೀಯದಲ್ಲಿ ಪಾಲ್ಗೊಳ್ಳುವುದು ಪ್ರತಿಯೊಂದು ರಾಜಕೀಯ ಪದ್ಧತಿಯ ಲಕ್ಷಣವಾಗಿದೆ. ಸಾಂಪ್ರದಾಯಿಕ ಮತ್ತು ಅರಸೊತ್ತಿಗೆಯ ರಾಜಕೀಯ ವ್ಯವಸ್ಥೆಯಲ್ಲಿ ರಾಜಕೀಯದಲ್ಲಿ ಪಾಲ್ಗೊಳ್ಳುವಿಕೆಯು ಶ್ರೀಮಂತ ವರ್ಗಕ್ಕೆ ಮಾತ್ರ ಸೀಮಿತವಾಗಿತ್ತು. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪಾಲ್ಗೊಳ್ಳುವ ಹಕ್ಕು ಪ್ರತಿಯೊಬ್ಬರಿಗೂ ಲಭ್ಯವಾಗಿರುತ್ತದೆ. ಕಾರಣವೆಂದರೆ ಪ್ರಜಾಸತ್ತಾತ್ಮಕ ವ್ಯವಸ್ಥೆಯೊಂದೆ ಜನತೆಯ ಇಚ್ಛೆಯ ಮೇಲೆ ಆಧಾರಿತವಾದ ವ್ಯವಸ್ಥೆಯಾಗಿದೆ. ಪ್ರಜಾಪ್ರಭುತ್ವದಲ್ಲಿ ಜನರು ತಮ್ಮ ಸಮ್ಮತಿಯನ್ನು ನೀಡಲು ಅಥವಾ ನಿರಾಕರಿಸಲು ಹಾಗೂ ಆಡಳಿತಗಾರರನ್ನು ಜನತೆಗೆ ಹೊಣೆಗಾರರನ್ನಾಗಿ ಮಾಡಲು ರಾಜಕೀಯದಲ್ಲಿ ಪಾಲ್ಗೊಳ್ಳುವಿಕೆಯು ಒಂದು ಪ್ರಮುಖ ಸಾಧನವಾಗಿದೆ.

ರಾಜಕೀಯದಲ್ಲಿ ಪಾಲ್ಗೊಳ್ಳುವಿಕೆಯು ಎಂಬ ಪದವು ಸ್ವಯಂ ಚಟುವಟಿಕೆಗಳಿಂದ ಸಮಾಜದ ಸದಸ್ಯರು ಆಡಳಿತಗಾರರ ಆಯ್ಕೆಯಲ್ಲಿ ಮತ್ತು ನೇರವಾಗಿ ಅಥವಾ ಪರೋಕ್ಷವಾಗಿ ನೀತಿನಿರೂಪಣೆಯಲ್ಲಿ ಭಾಗವಹಿಸುವದು ಎಂಬ ಅರ್ಥ ಕೊಡುತ್ತದೆ. ರಾಜಕೀಯದಲ್ಲಿ ಭಾಗವಹಿಸಲು ವ್ಯಕ್ತಿಗಳು ಕೈಗೊಳ್ಳುವ ಚಟುವಟಿಕೆಗಳು ಅಥವಾ ಕಾರ್ಯಗಳು ಯಾವುವೆಂದರೆ, ಮತ ಹಾಕುವುದು, ಮಾಹಿತಿ ಪಡೆಯುವುದು, ಚರ್ಚಿಸುವುದು, ಸಭೆಗಳಿಗೆ ಹಾಜರಾಗುವುದು,

ಮುಷ್ಕರ ಮತ್ತು ಪ್ರದರ್ಶನಗಳನ್ನು ನಡೆಸುವುದು, ಶಾಸಕರು ಮತು ಇತರೆ ಮುಖಂಡರೊಡನೆ ಸಂಪರ್ಕ ಹೊಂದುವುದು ಇವೇ ಮುಂತಾದವುಗಳಾಗಿವೆ. ರಾಜಕೀಯದಲ್ಲಿ ಪಾಲ್ಗೊಳ್ಳುವಿಕೆಯ ಅತ್ಯಂತ ಸಕ್ರಿಯ ವಿಧಾನಗಳೆಂದರೆ ಔಪಚಾರಿಕವಾಗಿ ರಾಜಕೀಯ ಪಕ್ಷದ ಸದಸ್ಯತ್ವದ ದಾಖಲಾತಿ, ಚುನಾವಣಾ ಪ್ರಚಾರ ಮಾಡುವುದು, ಚುನಾವಣೆಗಳಲ್ಲಿ ಮತಗಳನ್ನು ನೊಂದಾಯಿಸುವುದು, ಭಾಷಣಗಳ ಲೇಖನ, ಭಾಷಣ ಮಾಡುವುದು, ಸಾರ್ವಜನಿಕ ಮತ್ತು ಪಕ್ಷದ ಹುದ್ದೆಗಳಿಗಾಗಿ ಪ್ರಚಾರ ಮಾಡುವುದು ಇತ್ಯಾದಿ. ವ್ಯಕ್ತಿಯ ರಾಜಕೀಯ ಪದ್ಧತಿಯಲ್ಲಿನ ವಿವಿಧ ಹಂತಗಳಲ್ಲಿ ತನ್ನನ್ನು ತಾನು ತೊಡಗಿಸಿಕೊಳ್ಳುವುದೆ ರಾಜಕೀಯದಲ್ಲಿ ಪಾಲ್ಗೊಳ್ಳುವಿಕೆಯಾಗಿದೆ.

ರಾಜಕೀಯದಲ್ಲಿ ಭಾಗವಹಿಸುವಿಕೆಯು ಹಲವಾರು ಅಂಶಗಳನ್ನು ಅವಲಂಬಿಸಿದೆ. ಮೊದಲನೆಯದಾಗಿ ಒಂದು ರಾಷ್ಟ್ರದಲ್ಲಿನ ರಾಜಕೀಯದಲ್ಲಿ ಪಾಲ್ಗೊಳ್ಳುವಿಕೆಯ ಪ್ರಮಾಣವನ್ನು ಜನತೆಯ ಶಿಕ್ಷಣ, ವೃತ್ತಿ, ವಯಸ್ಸು, ಬುಡಕಟ್ಟು, ಲಿಂಗ, ನೆಲೆ ಮುಂತಾದ ಅಂಶಗಳ ಹಿನ್ನೆಲೆಯಲ್ಲಿ ಅಧ್ಯಯನ ಮಾಡಬೇಕು. ಜನರ ಶೈಕ್ಷಣಿಕ ಮಟ್ಟ ಮತ್ತು ವೃತಿ ಮಟ್ಟ ಅತ್ಯಂತ ಉನ್ನತವಾಗಿರುವ ಬ್ರಿಟನ್ ಮತ್ತು ಅಮೇರಿಕಾ ರಾಷ್ಟ್ರಗಳಲ್ಲಿ ರಾಜಕೀಯದಲ್ಲಿ ಪಾಲ್ಗೊಳ್ಳುವಿಕೆಯು ಹೆಚ್ಚು ವೈಶಾಲ್ಯತೆ ಹೊಂದಿರುತ್ತದೆ. ಇಂತಹ ರಾಷ್ಟ್ರಗಳಲ್ಲಿ ಧರ್ಮ, ಮತ, ಲಿಂಗ ಮುಂತಾದ ಅಂಶಗಳು ರಾಜಕೀಯದಲ್ಲಿ ಪಾಲ್ಗೊಳ್ಳುವುದನ್ನು ಸೀಮಿತಗೊಳಿಸುವದಿಲ್ಲ. ಅಲ್ಲದೆ, ಇಲ್ಲಿ ರಾಜಕೀಯ ಉದಾಸೀನತೆ, ಗಲಭೆಗಳು, ಹಿಂಸೆ ಮುಂತಾದವುಗಳ ಬಳಕೆ ಅತಿ ವಿರಳವಾಗಿರುವುದರಿಂದ ರಾಜಕೀಯದಲ್ಲಿ ಭಾಗವಹಿಸುವಿಕೆಯು ಮುಕ್ತವಾಗಿರುತ್ತದೆ.

ಎರಡನೆಯದಾಗಿ, ರಾಜಕೀಯ ವ್ಯವಹಾರಗಳಲ್ಲಿ ತೊಡಗುವುದರಿಂದ ಕೆಲವು ಪ್ರತಿಫಲಗಳು ದೊರಕುತ್ತವೆ ಎಂಬ ಮನೋಭಾವನೆಯನ್ನು ರಾಜಕೀಯದಲ್ಲಿ ಪಾಲ್ಗೊಳುವಿಕೆಯನ್ನು ನಿರ್ಧರಿಸುತ್ತದೆ. ಪ್ರತಿಫಲಗಳನ್ನು ಹೊಂದುವುದು ಮಾನವನ ಸಹಜ ಪ್ರವೃತ್ತಿಯಾಗಿದೆ. ಅಧಿಕಾರಾಪೇಕ್ಷೆ, ಸ್ಪರ್ಧೆ, ಸಾಧನೆ, ಒಗ್ಗೂಡುವಿಕೆ, ಹಣ, ಪ್ರತಿಷ್ಠೆ, ಸ್ಥಾನಮಾನ, ಮನ್ನಣೆ, ಪ್ರಭಾವ ಹೊಂದುವುದು, ಕರುಣೆ ಮತ್ತು ಮಾನವನ ವರ್ತನೆಯನ್ನು ಪ್ರಚೋದಿಸುವ ಪ್ರತಿಯೊಂದು ಪ್ರವೃತ್ತಿಯು ರಾಜಕೀಯದಲ್ಲಿ ಭಾಗವಹಿಸುವಿಕೆಯನ್ನು ನಿರ್ಧರಿಸುತ್ತದೆ.

ಮೂರನೆಯದಾಗಿ, ರಾಜಕೀಯ ಪರಿಸರವು ರಾಜಕೀಯದಲ್ಲಿ ಭಾಗವಹಿಸುವಿಕೆಯನ್ನು ನಿರ್ಧರಿಸುವ ಪ್ರಮುಖ ಅಂಶವಾಗಿದೆ. ಒಂದು ರಾಷ್ಟ್ರದ ರಾಜಕೀಯ ವಾತಾವರಣವು ಆ ರಾಷ್ಟ್ರದ ಪ್ರಜೆಗಳ ರಾಜಕೀಯದಲ್ಲಿ ಪಾಲ್ಗೊಳ್ಳುವಿಕೆಯನ್ನು ನಿರ್ಧರಿಸುತ್ತದೆ. ಗಾತ್ರ, ಆಧುನಿಕ ರಾಜಕೀಯ ಪದ್ಧತಿಯ ಸಂಕೀರ್ಣತೆ, ಚುನಾವಣೆಗಳ ಪುನರಾವರ್ತನೆ, ಭರ್ತಿ ಮಾಡಬೇಕಾದ

ಹುದ್ದೆಗಳು, ರಾಜಕೀಯ ಪಕ್ಷಗಳ ಸಂಖ್ಯೆ ಮುಂತಾದ ರಾಜಕೀಯ ಅಂಶಗಳು ರಾಜಕೀಯದಲ್ಲಿ ಪಾಲ್ಗೊಳ್ಳುವುದನ್ನು ನಿರ್ಧರಿಸುತ್ತವೆ.

ಜನರು ತಮ್ಮ ರಾಷ್ಟ್ರದ ರಾಜಕೀಯ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳುತ್ತಾರೆಂಬುದು ನಿಜವಾದರೂ, ಪಾಲ್ಗೊಳ್ಳುವಿಕೆಯ ಮಟ್ಟ ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೂ, ಒಂದು ಕಾಲದಿಂದ ಇನ್ನೊಂದು ಕಾಲಕ್ಕೂ ಮತ್ತು ಒಂದು ವರ್ಗದ ಜನರಿಂದ ಮತ್ತೊಂದು ಜನರಿಗೂ ಭಿನ್ನವಾಗಿರುತ್ತದೆ.

ರಾಜಕೀಯ ಭಾಗವಹಿಸುವಿಕೆಯನ್ನು ಮೂರು ವಿಭಾಗಗಳಾಗಿ ವಿಂಗಡಿಸಿ ಅಧ್ಯಯನ ಮಾಡಬಹುದಾಗಿದೆ.

ಅತಿಯಾದ ಕ್ರಿಯಾಶೀಲ ಮಟ್ಟದಲ್ಲಿ ಶಾಸನೀಯ ಮತ್ತು ಆಡಳಿತಾತ್ಮಕ ಕ್ಷೇತ್ರಗಳಲ್ಲಿ ಉನ್ನತ ಸ್ಥಾನಗಳನ್ನು ಹೊಂದಿರುವ ಮುಖಂಡರನ್ನು ಉಲ್ಲೇಖಿಸಬಹುದು. ಅಂದರೆ ಇವರು ಅಧಿಕಾರವನ್ನು ಹೊಂದಿದವರಾಗಿರುತ್ತಾರೆ. ಹೆಚ್ಚಿನ ಸಂಖ್ಯೆಯ ಮುಖಂಡರು ಈ ವರ್ಗಕ್ಕೆ ಸೇರಿದವರಾಗಿದ್ದು, ರಾಜಕೀಯ ಪಕ್ಷಗಳಲ್ಲಿ ತಮ್ಮ ಸ್ಥಾನವನ್ನು ಹೊಂದಿ, ರಾಜಕೀಯ ಚಾಲನೆಯಲ್ಲೂ ಮತ್ತು ಸಂಘಟನೆಯಲ್ಲೂ ಪ್ರಮುಖ ಪಾತ್ರ ವಹಿಸುತ್ತಾರೆ.

ಪ್ರಾಸಂಗಿಕ ಕ್ರಿಯಾಶೀಲ ಮಟ್ಟದಲ್ಲಿ ಜನರು ತಮ್ಮ ದೇಶದ ರಾಜಕೀಯ ಪ್ರಕ್ರಿಯೆಯಲ್ಲಿ ಪ್ರಾಸಂಗಿಕವಾಗಿ ಹಾಗೂ ಅನೌಪಚಾರಿಕವಾಗಿ ಪಾಲ್ಗೊಳ್ಳುತ್ತಾರೆ. ಜನರು ತಮ್ಮ ಸಾಮಾಜಿಕ ಮತ್ತು ಆರ್ಥಿಕ ಹಿತಾಸಕ್ತಿಗಳಿಗೆ ಸಂಬಂಧಿಸಿದ ವಿಷಯಗಳಲ್ಲಿ ಆಸಕ್ತಿ ತಾಳುತ್ತಾರೆ. ಉದಾ: ವಿದ್ಯಾರ್ಥಿಗಳು ತಮ್ಮ ಹಿತಾಸಕ್ತಿಗಳಿಗೆ ವಿರುದ್ಧವಾಗಿ ಸರ್ಕಾರ ತೀರ್ಮಾನ ಕೈಗೊಂಡಾಗ ಅವರು ರಾಜಕೀಯ ಸಂಘರ್ಷಕ್ಕೆ ಇಳಿಯುತ್ತಾರೆ. ಹಾಗೆಯೇ, ಕಾರ್ಮಿಕರು ತಮ್ಮ ಹಿತಾಸಕ್ತಿಗಳಿಗೆ ವಿರುದ್ಧವಾಗಿ ಸರ್ಕಾರ ತೀರ್ಮಾನ ಕೈಗೊಂಡಾಗ ಅವರು ರಾಜಕೀಯ ಸಂಘರ್ಷಕ್ಕೆ ಇಳಿಯುತ್ತಾರೆ. ರೈತರು ತಮ್ಮ ಹಿತಾಸಕ್ತಿಗಳಿಗೆ ವಿರುದ್ಧವಾಗಿ ಸರ್ಕಾರ ತೀರ್ಮಾನ ಕೈಗೊಂಡಾಗ ಅವರು ರಾಜಕೀಯ ಕಲಹಕ್ಕೆ ಇಳಿಯುತ್ತಾರೆ. ಬೇರೆಯವರು ಆ ಬಗ್ಗೆ ಆಸಕ್ತಿ ತಾಳುವುದಿಲ್ಲ.

ರಾಜಕೀಯದಲ್ಲಿ ನಿರುತ್ಸಾಹ, ಪರಾಧೀನತೆ, ಹಿಂಸೆ ಇವೇ ಮುಂತಾದವುಗಳು ಕ್ರಿಯಾಶೂನ್ಯ ಮಟ್ಟದ ಅಂಶಗಳಾಗಿವೆ. ಈ ಅಂಶಗಳು ರಾಜಕೀಯದಲ್ಲಿ ಪಾಲ್ಗೊಳ್ಳುವಿಕೆಯನ್ನು ಸೀಮಿತಗೊಳಿಸುತ್ತವೆ. ಬಹುತೇಕ ಜನರು ಚುನಾವಣೆಗಳಲ್ಲಿ ಮತಚಲಾವಣೆ ಮುಂತಾದ ರಾಜಕೀಯ ಪ್ರಕ್ರಿಯೆಗಳಲ್ಲಿ ಪಾಲ್ಗೊಳ್ಳುವುದಿಲ್ಲ. ಏಕೆಂದರೆ ಮತ ಚಲಾವಣೆಯಿಂದ ಯಾವ ಪ್ರಯೋಜನವೂ ಇಲ್ಲವೆಂಬ ಭಾವನೆ ಅಥವಾ ರಾಜಕೀಯದಲ್ಲಿ ಸಕ್ರಿಯವಾಗಿ ಭಾಗವಹಿಸುವದಕ್ಕಿಂತ ರಾಜಕೀಯದಿಂದ ದೂರವಿರುವದರಿಂದ ಹೆಚ್ಚಿನ ತೃಪ್ತಿಯನ್ನು

ಹೊಂದಬಹುದೆಂಬ ಅನಿಸಿಕೆ. ಈ ಕಾರಣಗಳಿಂದಾಗಿ ಜನರು ರಾಜಕೀಯದಲ್ಲಿ ಕ್ರಿಯಾಶೂನ್ಯರಾಗಿರುತ್ತಾರೆ.

ರಾಜಕೀಯ ಸಾಮಾಜೀಕರಣ ಮತ್ತು ರಾಜಕೀಯ ಸಂಪರ್ಕ:

ರಾಜಕೀಯ ಸಾಮಾಜೀಕರಣದ ನಿಯೋಗಗಳು ಮತ್ತು ರಾಜಕೀಯ ಸಂಪರ್ಕ ಒಂದಕ್ಕೊಂದು ನಿಕಟ ಸಂಬಧವನ್ನು ಹೊಂದಿವೆ. ರಾಜಕೀಯ ಸಂಪರ್ಕವು ರಾಜಕೀಯ ಸಾಮಾಜೀಕರಣಕ್ಕೆ ಚಾಲನೆ ನೀಡುತ್ತದೆ. ರಾಜಕೀಯ ಸಾಮಾಜೀಕರಣವನ್ನು ಪೋಷಿಸುವುದು ರಾಜಕೀಯ ಸಂವಹನ ಎಂಬುವುದು ನಮ್ಮೆಲ್ಲರಿಗೂ ಗೊತ್ತಿರುವ ವಿಷಯ. ರಾಬರ್ಟ್ ವಿಯನರ್ ಎಂಬುವರು ರಾಜಕೀಯ ಸಂಪರ್ಕ ಸಿದ್ಧಾಂತದ ಮೂಲ ಪ್ರವರ್ತಕರಾಗಿದ್ದಾರೆ. ರಾಜಕೀಯ ಸಂಪರ್ಕವೆಂದರೆ "ಉದ್ದೇಶಿತ ಗುರಿಗಳನ್ನು ತಲುಪಲು ಮಾನವನ ಪ್ರಯತ್ನಗಳ ಚಾಲನೆಗೆ ಮತ್ತು ಸಂಘಟನೆಗೆ ಸರಕಾರ ಮತ್ತು ರಾಜಕೀಯ ವ್ಯವಸ್ಥೆಯು ಅನುಸರಿಸುವ ಕಾರ್ಯವಿಧಾನವಾಗಿದೆ." ಸಂವಹನ ಎಂಬ ಪದದ ಅರ್ಥವೇನೆಂದರೆ ಒಬ್ಬ ವ್ಯಕ್ತಿಯಿಂದ ಇನ್ನೊಬ್ಬ ವ್ಯಕ್ತಿಗೆ ಅಥವಾ ವ್ಯಕ್ತಿಗಳ ಗುಂಪಿಗೆ ಸಂದೇಶದ ರವಾನೆಯೇ ಆಗಿದೆ. ಸಮಾಜದಿಂದ ರಾಜ್ಯಕ್ಕೂ ಮತ್ತು ಒಂದು ರಾಜಕೀಯ ರಚನೆಯಿಂದ ಇನ್ನೊಂದಕ್ಕೂ ಮಾಹಿತಿಯು ಮುಕ್ತವಾಗಿ ಹರಿಯಲು ಸಂವಹನ ಮಾಧ್ಯಮಗಳು ಪ್ರಮುಖ ಪಾತ್ರ ವಹಿಸುತ್ತವೆ. ರಾಜಕೀಯ ಪಕ್ಷಗಳು, ಶಾಸಕಾಂಗಗಳು, ಅಧಿಕಾರಶಾಹಿ ಮುಂತಾದ ನಾನಾ ವ್ಯವಸ್ಥೆಗಳಿಂದ ಹಿತಾಸಕ್ತಿಗಳನ್ನು ಅಭಿವ್ಯಕ್ತಿಗೊಳಿಸುವುದಕ್ಕೂ ಅದು ಸಹಕಾರಿಯಾಗಿದೆ.

ಇಂದು ರಾಜಕೀಯ ವ್ಯವಸ್ಥೆಯಲ್ಲಿ ಸಂಪರ್ಕವು ಅತ್ಯಂತ ಪ್ರಮುಖ ಸ್ಥಾನವನ್ನು ಹೊಂದಿದೆ. ಸರಿಯಾದ ಸಂಪರ್ಕ ಇಲ್ಲದೆ ಸಾಮಾಜಿಕ ಮತ್ತು ರಾಜಕೀಯ ಪಾರಸ್ಪರಿಕ ಕ್ರಿಯೆ ಸಾಧ್ಯವಿಲ್ಲ. ರಾಜಕೀಯ ಜೀವನವು ಒಂದು ರೀತಿಯ ಸಾಮಾಜಿಕ ವರ್ತನೆಯಾಗಿದ್ದು, ಎಲ್ಲ ಸಾಮಾಜಿಕ ಚಟುವಟಿಕೆಗಳು ವ್ಯಕ್ತಿಗಳ ನಡುವಿನ ಮಾಹಿತಿ ಸಂಪರ್ಕ ವ್ಯವಸ್ಥೆಯನ್ನು ಅವಲಂಬಿಸಿದೆ. ರಾಜಕೀಯ ಪದ್ಧತಿಯಲ್ಲಿ ಎಲ್ಲ ಕಾರ್ಯಗಳನ್ನು ಸಂವಹನದ ಮೂಲಕ ನೆರವೇರಿಸಲಾಗುತ್ತದೆ. ಉದಾ: ಕುಟುಂದ ಮುಖ್ಯಸ್ಥರು, ಶಾಲೆ ಹಾಗೂ ಕಾಲೇಜು ಅಧ್ಯಾಪಕರು ಮತ್ತು ಧಾರ್ಮಿಕ ನಾಯಕರುಗಳು ಜನರಲ್ಲಿ ಮೌಲ್ಯಗಳನ್ನು ರೂಢಿಸುವ ಕೆಲಸವನ್ನು ನೆರವೇರಿಸುತ್ತಾರೆ. ಹಿತಾಸಕ್ತ ಗುಂಪುಗಳ ಮತ್ತು ರಾಜಕೀಯ ಪಕ್ಷಗಳ ನಾಯಕರು ಬೇಡಿಕೆಗಳನ್ನು ಮತ್ತು ಧೋರಣೆಗಳನ್ನು , ಶಿಫಾರಸ್ಸುಗಳನ್ನು ಸಂವಹಿಸುವ ಕಾರ್ಯವನ್ನು ಮಾಡುತ್ತಾರೆ.

ಮಾನವರಲ್ಲಿನ ಎಲ್ಲ ಬಗೆಯ ಪರಸ್ಪರ ಕ್ರಿಯೆಗಳಲ್ಲಿ ಸಂವಹನ ವ್ಯವಸ್ಥೆಯು ಮೂಲಭೂತವಾದುದು. ಆಧುನಿಕ ಸಮಾಜದಲ್ಲಿ ರೇಡಿಯೋ, ದೂರದರ್ಶನದಂತಹ ಸಮೂಹ ಮಾಧ್ಯಮಗಳು ವೈಶಿಷ್ಟ್ಯವುಳ್ಳ ಸಂಪರ್ಕ ರಚನೆಗಳಾಗಿವೆ. ಸಂಪರ್ಕ ರಚನೆಗಳನ್ನು

ಆಲ್ಮಂಡ್ ಐದು ಬಗೆಗಳಾಗಿ ವಿಂಗಡಿಸಿದ್ದಾರೆ. ಮೊದಲನೆಯದಾಗಿ, ಸ್ನೇಹಿತರ, ನೆರೆ-ಹೊರೆಯವರ ಮತ್ತು ಸಹೋದ್ಯೋಗಿಗಳ ಜೊತೆ ಅನೌಪಚಾರಿಕ, ಮುಖಾಮುಖಿ ವೈಯಕ್ತಿಕ ಸಂಪರ್ಕ. ಎರಡನೆಯದಾಗಿ, ಕುಟುಂಬ ಮತ್ತು ಧಾರ್ಮಿಕ ಸಂಘಗಳಂತಹ ಸಾಂಪ್ರದಾಯಿಕ ಸಾಮಾಜಿಕ ರಚನೆಗಳು. ಮೂರನೆಯದಾಗಿ, ಹಿತಾಸಕ್ತಿ ಗುಂಪುಗಳು, ಒತ್ತಡ ಗುಂಪುಗಳು, ಕಾರ್ಮಿಕ ಸಂಘಗಳು ಮತ್ತು ರಾಜಕೀಯ ಪಕ್ಷಗಳನ್ನು ಒಳಗೊಂಡಿರುವ ರಾಜಕೀಯ ರಚನೆಗಳು. ಶಾಸಕಾಂಗಗಳು ಮತ್ತು ನೌಕರಶಾಹಿಯಂತಹ ರಾಜಕೀಯ ನಿರ್ಗಮನದ ರಚನೆಗಳು. ಐದನೆಯದಾಗಿ, ಸಮೂಹ ಮಾಧ್ಯಮಗಳು. ಮೊದಲಿನ ಎರಡು ವಿಧಾನಗಳು ರಾಜಕೀಯ ಸಂಪರ್ಕದ ಅನೌಪಚಾರಿಕ ರಚನೆಗಳಾದರೆ, ಉಳಿದವುಗಳು ಔಪಚಾರಿಕ ರಚನೆಗಳಾಗಿವೆ. ಔಪಚಾರಿಕ ರಚನೆಗಳು ಒಟ್ಟಾಗಿ ಬೇಡಿಕೆಗಳನ್ನು ತೀರ್ಮಾನ ತೆಗೆದುಕೊಳ್ಳುವವರಿಗೆ ಸಲ್ಲಿಸಿ ಮತ್ತು ಅವರ ತೀರ್ಮಾನಗಳು, ನಿಯಮಗಳು ಮತ್ತು ಧೋರಣೆಗಳನ್ನು ಜನರಿಗೆ ರವಾನಿಸುತ್ತವೆ.

ರಾಜಕೀಯ ಸಾಮಾಜೀಕರಣ ಮತ್ತು ಅಭಿಪ್ರಾಯ ರೂಪಿಸುವುದು;

ರಾಜಕೀಯ ಸಾಮಾಜೀಕರಣವು ನಡವಳಿಕೆಗಳು, ನಿಯಮಗಳು ಹಾಗೂ ಜ್ಞಾನಗಳ ಸಂವಹನಕ್ಕೆ ಸಂಬಂಧಿಸಿದೆ. ಆದ್ದರಿಂದ ಅಭಿಪ್ರಾಯ ರೂಪಿಸುವ ಪ್ರಮುಖ ಮೂಲಾಂಶವಾಗಿದೆ. ಇದು ಅಭಿಪ್ರಾಯ ರೂಪಿಸುವ ಆರಂಭಿಕ ಹಂತವಾಗಿರುತ್ತದೆ. ಈ ಅವಸ್ಥೆಯಲ್ಲಿ ಒಬ್ಬ ರಾಜಕೀಯ ವ್ಯವಸ್ಥೆ ಕುರಿತು ಜ್ಞಾನ, ಮೌಲ್ಯಗಳು ಹಾಗೂ ನಡವಳಿಕೆಗಳನ್ನು ತಿಳಿದುಕೊಳ್ಳುತ್ತಾನೆ. ರಾಜಕೀಯ ಆದ್ಯತೆ ಕುರಿತು ಅರಿತುಕೊಳ್ಳುತ್ತಾನೆ. ರಾಜಕೀಯ ಪ್ರಕ್ರಿಯೆಯಲ್ಲಿ ವ್ಯಕ್ತಿಯು ಹಲವಾರು ರೀತಿಯಲ್ಲಿ ನಟಿಸಲು ರಾಜಕೀಯ ಸಾಮಾಜೀಕರಣ ಮತ್ತು ಅಭಿಪ್ರಾಯ ರೂಪಿಸುವುದು ಅತ್ಯಂತ ಸಹಾಯಕಾರಿಯಾಗಿದೆ. ರಾಜಕೀಯ ವ್ಯವಸ್ಥೆಗೆ ಮಾಹಿತಿ ಒದಗಿಸುವ ಪರಿಸರದ ಅತ್ಯಂತ ಮಹತ್ವವಾದ ಅಂಗವೆಂದರೆ ಅದು ರಾಜಕೀಯ ಸಾಮಾಜೀಕರಣ. ಆದ್ದರಿಂದ ರಾಜಕೀಯ ಸಾಮಾಜೀಕರಣವು ರಾಜಕೀಯ ಚಟುವಟಿಕೆಗಳನ್ನು ಹಾಗೂ ಸಾರ್ವಜನಿಕ ಅಭಿಪ್ರಾಯವನ್ನು ನಿರ್ಧರಿಸುವ ಅತ್ಯಂತ ಪ್ರಮುಖ ಅಂಶವಾಗಿದೆ.

ವಿವಿಧ ನಿಯೋಗಗಳು ಮೂರು ವಿಧಾನಗಳ ಮುಖಾಂತರ ರಾಜಕೀಯ ಸಾಮಾಜೀಕರಣದ ಮೂಲಾಂಶಗಳನ್ನು ಪ್ರಸರಣಗೊಳಿಸುತ್ತವೆ. ಅವುಗಳೆಂದರೆ, ಅನುಕರಣೆ, ಸೂಚನೆ ಮತ್ತು ಪ್ರೇರೇಪಣೆ. ರಾಜಕೀಯ ಸಾಮಾಜೀಕರಣದ ಈ ವಿಧಾನಗಳು ಕಿಶೋರಾವಸ್ಥೆಯಲ್ಲಿ ಬಳಸಲಾಗುತ್ತದೆ ಎಂದು ಕೆಲವು ವಿದ್ವಾಂಸರು ಅಭಿಪ್ರಾಯಪಟ್ಟರೆ ಮತ್ತೆ ಕೆಲವು ವಿದ್ವಾಂಸರು ರಾಜಕೀಯ ಸಾಮಾಜೀಕರಣದ ಸಂಪೂರ್ಣ ಪ್ರಕ್ರಿಯೆಯಲ್ಲಿ ಬಳಸಲಾಗುತ್ತದೆ ಎಂದು ಅಭಿಪ್ರಾಯ ಪಡುತ್ತಾರೆ. ಅನುಕರಣೆ ಸಾಮನ್ಯವಾಗಿ ಮಕ್ಕಳಲ್ಲಿ

ಕಾಣುತ್ತೇವೆ. ಅನುಕರಣೆ ವಯಸ್ಕರಲ್ಲೂ ಕಾಣುತ್ತೇವೆ ಆದರೆ ಅದು ಸೂಚನೆ ಮತ್ತು ಪ್ರೇರೇಪಣೆಗಳೊಂದಿಗೆ ಮಿಶ್ರಣಗೊಂಡಿರುತ್ತದೆ. ಪ್ರೇರೇಪಣೆಯನ್ನು ಯಾವಾಗಲೂ ಅನುಭವದ ಜೊತೆಗೆ ಗುರುತಿಸಲಾಗುತ್ತದೆ. ರಾಜಕೀಯ ಸಾಮಾಜೀಕರಣದ ಎರಡು ಪ್ರಮುಖ ಅಂಶಗಳೆಂದರೆ ಅನುಭವ ಮತ್ತು ವ್ಯಕ್ತಿತ್ವ. ವ್ಯಕ್ತಿಯ ಪ್ರಸ್ತುತ ರಾಜಕೀಯ ಅನುಭವ ರಾಜಕೀಯ ಸಾಮಾಜೀಕರಣದ ಪ್ರಕ್ರಿಯೆಯ ಫಲವಾಗಿದೆ ಎಂದು ಹೇಳಬಹುದು.

ವ್ಯಕ್ತಿಯ ಮೂಲಭೂತ ನಡವಳಿಕೆಗಳನ್ನು ಪ್ರಭಾವಿಸುವ ಮೂರು ಪ್ರಮುಖ ಸಂಸ್ಥೆಗಳೆಂದರೆ ಕುಟುಂಬ, ಶಾಲೆ ಮತ್ತು ಧರ್ಮ. ಕುಟುಂಬದ ಸದಸ್ಯರು ಮಗುವಿನ ಮೇಲೆ ಅಗಾಧವಾದ ಪ್ರಭಾವವನ್ನು ಬೀರುತ್ತಾರೆ. ಮಗು ಕುಟುಂಬದ ಸದಸ್ಯರ ವಿಚಾರಧಾರೆಗಳನ್ನು ಅನುಕರಣೆ ಮಾಡಲು ಪ್ರಾರಂಭಿಸುತ್ತದೆ. ಕುಟುಂಬದ ಸದಸ್ಯರು ಯಾವುದು ಇಚ್ಛೆ ಪಡುತ್ತಾರೋ, ಯಾವುದು ಇಚ್ಛೆ ಪಡುವದಿಲ್ಲವೋ ಮಗು ವೀಕ್ಷಣೆ ಮತ್ತು ಅನುಕರಣೆಯ ಮೂಲಕ ಕಲಿಯುತ್ತದೆ. ಆದ್ದರಿಂದ ಕುಟುಂಬ ಪರಿಸರದ ಅತ್ಯಂತ ಪ್ರಮುಖವಾದ ಪರಂಪರೆ ಎಂದರೆ ಪೂರ್ವಾಗ್ರಹ. ಕುಟುಂಬ ಸದಸ್ಯರ ಹಲವಾರು ಪೂರ್ವಾಗ್ರಹಗಳನ್ನು ಮಗು ಅಪ್ರಜ್ಞಾಪೂರ್ವಕವಾಗಿ ಕಲಿತುಕೊಳ್ಳುತ್ತದೆ.

ರಾಜಕೀಯ ವ್ಯವಸ್ಥೆಯ ಬಗ್ಗೆ ತನ್ನದೆ ಆದ ಅಭಿಪ್ರಾಯ ರೂಪಿಸಿಕೊಳ್ಳುವಲ್ಲಿ ಶಾಲೆ-ಕಾಲೇಜುಗಳು ಮಗುವಿನ ಮೇಲೆ ತುಂಬಾ ಪ್ರಭಾವ ಬೀರುತ್ತವೆ. ವಿದ್ಯಾರ್ಥಿ ಜೀವನದ ಮೇಲೆ ಪ್ರಭಾವ ಬೀರುವ ಎರಡು ಪ್ರಮುಖ ಪ್ರಾಥಮಿಕ ಅಂಶಗಳೆಂದರೆ ಪಠ್ಯ ಮತ್ತು ಶಿಕ್ಷಕ. ವಿದ್ಯಾರ್ಥಿಯು ತನ್ನ ಮಾನಸಿಕ ಮತ್ತು ದೈಹಿಕ ಸಾಮರ್ಥ್ಯ ಬೆಳೆಸಿಕೊಳ್ಳುವಂತಹ ಪಠ್ಯ ರಚನೆ ಮಾಡಲಾಗಿರುತ್ತದೆ. ಇದರಿಂದ ವಿದ್ಯಾರ್ಥಿಗಳು ಹಲವಾರು ಸಂಗತಿಗಳ ಕುರಿತು ತಮ್ಮ ಅಭಿಪ್ರಾಯಗಳನ್ನು ರೂಪಿಸಿಕೊಳ್ಳಲು ಪಠ್ಯ ಅವರಿಗೆ ಸಹಾಯಕಾರಿಯಾಗುತ್ತದೆ. ಶಾಲಾ-ಕಾಲೇಜುಗಳು ಸಮಾಜದ ಸಂಸ್ಕೃತಿಯನ್ನು ಪ್ರತಿಬಿಂಬಿಸುತ್ತವೆ. ಪಠ್ಯದ ಜೊತೆಗೆ ಶಿಕ್ಷಕರ ಪ್ರಭಾವ ಕೂಡ ವಿದ್ಯಾರ್ಥಿಗಳ ಮೇಲೆ ಅಗಾಧವಾಗಿರುತ್ತದೆ. ವಿದ್ಯಾರ್ಥಿಗಳು ಪ್ರಗತಿಪರ ವಿಚಾರಗಳು ಇಲ್ಲವೆ ಪ್ರತಿಗಾಮಿ ವಿಚಾರಗಳನ್ನು ರೂಪಿಸಿಕೊಳ್ಳುವಲ್ಲಿ ಶಿಕ್ಷಕರ ಪಾತ್ರವು ತುಂಬಾ ಮಹತ್ವದಾಗಿರುತ್ತದೆ. ಹೀಗೆ ವಿದ್ಯಾರ್ಥಿಯು ಒಂದು ರಾಜಕೀಯ ವ್ಯವಸ್ಥೆಯ ಬಗ್ಗೆ ತನ್ನದೆ ಅಭಿಪ್ರಾಯ ರೂಪಿಸಿಕೊಳ್ಳುವಲ್ಲಿ ಶೈಕ್ಷಣಿಕ ಸಂಸ್ಥೆಗಳು ಅತ್ಯಂತ ಪ್ರಮುಖ ಪಾತ್ರವಹಿಸುತ್ತವೆ.

ಧಾರ್ಮಿಕ ಸಂಸ್ಥೆಗಳು ಕೂಡ ಒಬ್ಬ ವ್ಯಕ್ತಿಯ ಅಭಿಪ್ರಾಯ ರೂಪಿಸುವಲ್ಲಿ ಪ್ರಮುಖವಾದ ಭೂಮಿಕೆಯನ್ನು ನಿರ್ವಹಿಸುತ್ತವೆ. ಅಸ್ತಿತ್ವದಲ್ಲಿರುವ ರಾಜಕೀಯ ವ್ಯವಸ್ಥೆಯ ಬಗ್ಗೆ ಪರ-ವಿರೋಧ ಅಭಿಪ್ರಾಯಗಳನ್ನು ಈ ಧಾರ್ಮಿಕ ಸಂಸ್ಥೆಗಳು ರೂಪಿಸುತ್ತವೆ. ಧಾರ್ಮಿಕ ಸಂಸ್ಥೆಗಳ ಪ್ರಭಾವದಿಂದಾಗಿ ಒಬ್ಬ ವ್ಯಕ್ತಿ ಒಂದು ರಾಜಕೀಯ ವ್ಯವಸ್ಥೆ ಬಗ್ಗೆ

ತನ್ನದೇ ಆದ ಅಭಿಪ್ರಾಯವನ್ನು ರೂಪಿಸಿಕೊಳ್ಳುತ್ತಾನೆ. ಧಾರ್ಮಿಕ ಮುಖಂಡರು ಯಾವ ರಾಜಕೀಯ ವಿಚಾರಧಾರೆಗಳಿಂದ ಪ್ರಭಾವಿತರಾಗಿರುತ್ತರೋ, ಸಹಜವಾಗಿ ಅವರ ಬೆಂಬಲಿಗರು ಅದೇ ವಿಚಾರಧಾರೆಗಳಿಂದ ಅವರು ಪ್ರಭಾವಕ್ಕೊಳಗಾಗುತ್ತಾರೆ. ಚುನಾವಣೆಯ ಸಂದರ್ಭದಲ್ಲಿ ಧಾರ್ಮಿಕ ಮುಖಂಡರ ಪಾತ್ರವನ್ನು ನಾವು ಕಡೆಗಣಿಸುವಂತಿಲ್ಲ. ಮಧ್ಯಯುಗದಲ್ಲಿ ಚರ್ಚ್ ಇಡೀ ರಾಜಕೀಯ ವ್ಯವಸ್ಥೆಯನ್ನು ತನ್ನ ನಿಯಂತ್ರಣದಲ್ಲಿ ಇಟ್ಟುಕೊಂಡಿದ್ದು ಎಲ್ಲರಿಗೂ ಗೊತ್ತಿರುವ ವಿಷಯ. ಆದ್ದರಿಂದ ಧಾರ್ಮಿಕ ಸಂಸ್ಥೆಗಳು ಕೂಡ ಅಭಿಪ್ರಾಯ ರೂಪಿಸುವ ಪ್ರಮುಖ ನಿಯೋಗವಾಗಿದೆ.

ರಾಜಕೀಯ ಸಾಮಾಜೀಕರಣ ಮತ್ತು ಪ್ರಜಾಸತ್ತಾತ್ಮಕ ವ್ಯವಸ್ಥೆ:

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಎಲ್ಲರಿಗೂ ರಾಜಕೀಯ ಪ್ರಕ್ರಿಯೆಯಲ್ಲಿ ಭಾಗವಹಿಸುವ ಹಕ್ಕನ್ನು ಪಡೆದಿರುತ್ತಾರೆ. ಜನರು ಸರಕಾರಕ್ಕೆ ಸಹಕಾರ ನೀಡದಿದ್ದರೆ ಹಲವಾರು ಸಮಸ್ಯೆಗಳು ಅಥವಾ ತೊಂದರೆಗಳು ಸೃಷ್ಟಿಯಾಗುವುದು ನಿಶ್ಚಿತ. ಪ್ರಜೆಗಳು ತೆರಿಗೆಗಳನ್ನು ಕಟ್ಟಬೇಕು ಹಾಗೂ ಅಸ್ತಿತ್ವದಲ್ಲಿರುವ ಕಾಯಿದೆ, ಕಾನೂನುಗಳಿಗೆ ಗೌರವ ನೀಡಬೇಕು ಮತ್ತು ತಮ್ಮ ದೈನಂದಿನ ಜೀವನದಲ್ಲಿ ಚಾಚೂ ತಪ್ಪದೆ ಅವುಗಳನ್ನು ಪರಿಪಾಲಿಸಬೇಕು. ಆಗ ತಾನೆ ಸ್ವತಂತ್ರಗೊಂಡ ರಾಷ್ಟ್ರಗಳ ಜನರು ಸಕರಾತ್ಮಕವಾಗಿ ಸರಕಾರದ ನಿಯೋಗಗಳೊಂದಿಗೆ ಸಹಕರಿಸುವದಿಲ್ಲ ಎಂಬುದು ಸರ್ವವಿಧಿತವಾದ ಮಾತು. ಅವರು ಸರಕಾರದ ಕಾಯಿದೆಗಳಿಗೆ ಹೆಚ್ಚಿನ ಗೌರವ ಕೊಡುವದಿಲ್ಲ.

ಇಂತಹ ದೇಶಗಳ ಪ್ರಭುತ್ವದ ಜವಾಬ್ದಾರಿ ಹೊತ್ತಿರುವ ಆಡಳಿತಗಾರರು ರಾಷ್ಟ್ರನಿರ್ಮಾಣದ ಸಮಸ್ಯೆಯ ಜೊತೆಗೆ ಹೋರಾಡಬೇಕಾಗುತ್ತದೆ. ಇಂತಹ ಸನ್ನಿವೇಶದಲ್ಲಿ ಅವರು ಕಂಡುಕೊಂಡ ಮಹತ್ವವಾದ ಮಾರ್ಗವೆಂದರೆ ಶಿಕ್ಷಣ. ಜನರ ನಡತೆ ಮತ್ತು ಅಭಿಪ್ರಾಯ ರೂಪಿಸುವಲ್ಲಿ ಶಿಕ್ಷಣ ನಿರ್ಣಾಯಕ ಪಾತ್ರವಹಿಸುತ್ತದೆ. ಜನರು ತಮ್ಮ ಸ್ಥಳೀಯ ಸಂಕುಚಿತ ದೃಷ್ಟಿಕೋನಗಳನ್ನು ಬಿಟ್ಟು ರಾಷ್ಟ್ರ ನಿರ್ಮಾಣ ಕಾರ್ಯದಲ್ಲಿ ಒಟ್ಟಾಗಿ ದುಡಿಯುವಂತೆ ಶಿಕ್ಷಣ ಪ್ರೇರೇಪಿಸುತ್ತದೆ. ಇಲ್ಲಿ ರಾಷ್ಟ್ರೀಯ ಏಕತೆಯ ಸಮಸ್ಯೆ ಉದ್ಭವವಾಗುತ್ತದೆ. ಶಿಕ್ಷಣ ಮಾತ್ರ ವ್ಯಕ್ತಿಯ ಹಿತಾಸಕ್ತಿ ಮತ್ತು ಸಮಾಜದ ಹಿತಾಸಕ್ತಿ ಏಕೀಕೃತಗೊಳಿಸುವಲ್ಲಿ ತುಂಬಾ ಸಹಾಯಕಾರಿಯಾಗಿದೆ. ಅಷ್ಟೇ ಅಲ್ಲದೆ ರಾಷ್ಟ್ರೀಯ ಸಂಗತಿಗಳ ಮೇಲೆ ತಮ್ಮ ಮನಸ್ಸು ಕೇಂದ್ರಿಕರಿಸುವಂತೆ ಶಿಕ್ಷಣ ಪ್ರೇರೇಪಿಸುತ್ತದೆ.

ವಿದ್ಯಾರ್ಥಿ ಪೌರ ಜವಾಬ್ದಾರಿಗಳನ್ನು ಶಿಕ್ಷಣದಿಂದ ಮಾತ್ರ ತಿಳಿದುಕೊಳ್ಳುತ್ತಾನೆ. ಸಹಕಾರದ ಮಹತ್ವವನ್ನು ಅರಿತುಕೊಳ್ಳುತ್ತಾನೆ. ಸಮುದಾಯದಲ್ಲಿ ಬದುಕುವ ಇತರ ಕಲೆಗಳನ್ನು ಶಿಕ್ಷಣದಿಂದ ತಿಳಿದುಕೊಳ್ಳುತ್ತಾನೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಒಬ್ಬ ವ್ಯಕ್ತಿಯನ್ನು ಜವಾಬ್ದಾರಿಯುತ ನಾಗರಿಕನಾಗಿ ರೂಪಿಸುವುದು ತುಂಬಾ ಕಷ್ಟ. ಇದು ಸರ್ವಾಧಿಕಾರಿ

ವ್ಯವಸ್ಥೆಯಲ್ಲಿ ತುಂಬಾ ಸುಲಭ. ಏಕೆಂದರೆ ಪ್ರಜಾಪ್ರಭುತ್ವದಲ್ಲಿ ಸಮಾಜಕ್ಕಿಂತ ವ್ಯಕ್ತಿಗೆ ಹೆಚ್ಚಿನ ಪ್ರಾಧಾನ್ಯತೆ ನೀಡಲಾಗಿರುತ್ತದೆ. ಆದ್ದರಿಂದ ನಾಗರಿಕತ್ವದ ಶಿಕ್ಷಣ ಒಂದು ಜೀವನಪೂರ್ತಿ ಪ್ರಕ್ರಿಯೆಯಾಗಿದ್ದು, ಅದು ಕುಟುಂದಲ್ಲಿ ಪ್ರಾರಂಭಗೊಂಡು, ಶಾಲಾ-ಕಾಲೇಜುಗಳಲ್ಲಿ ಬಲಿಷ್ಠಗೊಂಡು, ರಾಷ್ಟ್ರದಲ್ಲಿ ವಿಸ್ತಾರಗೊಂಡು ಕೊನೆಗೆ ವಿಶ್ವ ನಾಗರೀಕತ್ವದಲ್ಲಿ ಒಂದಾಗುತ್ತದೆ. ಹೀಗಾಗಿ ಶಿಕ್ಷಣದ ಪ್ರಕ್ರಿಯೆ ಮತ್ತು ಸಾಮಾಜೀಕರಣದ ಪ್ರಕ್ರಿಯೆ ಕ್ಷೇತ್ರಗಳು ಇಲ್ಲಿ ಒಪ್ಪಂದಕ್ಕೆ ಒಳಪಡುತ್ತವೆ. ಆದರೆ ಸಾಮಾಜೀಕರಣವನ್ನು ಕೇವಲ ಕಲಿಕೆಯಿಂದ ಪ್ರತ್ಯೇಕಿಸಿ ಅಧ್ಯಯನ ಮಾಡಬೇಕಾಗುತ್ತದೆ. ಏಕೆಂದರೆ ಕಲಿಕೆಯು ಅಂತಹ ಸಾಮಾಜಿಕ ಪ್ರಸ್ತುತತೆಯನ್ನು ಹೊಂದಿರುವದಿಲ್ಲ. ಆದರೆ ಸಾಮಾಜೀಕರಣದ ಶಿಕ್ಷಣವು ಸಾಮಾಜಿಕ ಜೀವನದ ಪ್ರಸ್ತುತತೆಯನ್ನು ಹೊಂದಿರುತ್ತದೆ. ಇನ್ನೂ ಕಲಿಕೆಯು ಪ್ರಜ್ಞಾಪೂರ್ವಕ ಪ್ರಕ್ರಿಯೆಯಾದರೆ, ಸಾಮಾಜೀಕರಣವು ಅಪ್ರಜ್ಞಾಪೂರ್ವಕ ಪ್ರಕ್ರಿಯೆಯಾಗಿದೆ. ಅದು ತನ್ನಷ್ಟಕ್ಕೆ ತಾನೆ ಘಟಿಸುವಂತಹದು.

ರಾಷ್ಟ್ರೀಯ ಏಕತೆ ಸಾಧಿಸಲು ಶಿಕ್ಷಣವು ಸಹಾಯಕಾರಿಯಾಗಿದೆ. ಮುಂದುವರೆದ ರಾಷ್ಟ್ರಗಳು ಸಾಮಾಜಿಕ ಮೌಲ್ಯಗಳನ್ನು ಎತ್ತಿಹಿಡಿಯಲು ಶಾಲಾ-ಕಾಲೇಜುಗಳನ್ನು ತರಬೇತಿಯ ಕೇಂದ್ರಗಳನ್ನಾಗಿ ಉಪಯೋಗಿಸಲಾಗುತ್ತಿದೆ. ಜನರಲ್ಲಿ ಭಾವನಾತ್ಮಕ ಏಕತೆ ರಾಷ್ಟ್ರದ ಪ್ರಗತಿ ಅಥವಾ ಅಭಿವೃದ್ಧಿ ತರಲು ಸಹಾಯಕಾರಿಯಾಗಿದೆ. ರಾಷ್ಟ್ರದ ಏಕತೆ ಹೆಚ್ಚಿಸುವಲ್ಲಿ ಶಿಕ್ಷಣದ ಪಾತ್ರ ಕುರಿತು ಪರೀಕ್ಷಿಸಲು ಭಾರತ ಸರಕಾರ 1961ರಲ್ಲಿ ಒಂದು ಸಮಿತಿಯನ್ನು ರಚನೆ ಮಾಡಿತು.

ರಾಷ್ಟ್ರದ ಜೊತೆ ಗುರುತಿಸಿಕೊಳ್ಳುವುದು ಪ್ರತಿಯೊಬ್ಬ ವ್ಯಕ್ತಿಯ ಮೂಲಭೂತ ನಂಬಿಕೆಯಾಗಿರುತ್ತದೆ. ನಿಜ ಹೇಳಬೇಕೆಂದರೆ, ರಾಷ್ಟ್ರೀಯ ಅಸ್ಮಿತೆಯ ಪ್ರಶ್ನೆಯು ರಾಜಕೀಯ ಸಂಸ್ಕೃತಿ ಮತ್ತು ಸ್ವಯಂ ಅಸ್ಮಿತೆಯ ಪ್ರಶ್ನೆಯೂ ಆಗಿರುತ್ತದೆ. ಆದ್ದರಿಂದ ಸ್ಪಷ್ಟವಾದ ಅಸ್ಮಿತೆಯ ಬೆಳವಣಿಗೆಯಿಂದ ರಾಷ್ಟ್ರ ನಿರ್ಮಾಣ ಸಾಧ್ಯವಾಗುತ್ತದೆ. ಇಲ್ಲಿ ವ್ಯಕ್ತಿ ಮತ್ತು ರಾಷ್ಟ್ರದ ನಡುವಿನ ಭಾವನಾತ್ಮಕ ಸಂಬಂಧ ಪ್ರಮುಖ ಅಂಶವಾಗಿರುತ್ತದೆ.

ಎಲ್ಲ ಸಮಾಜಗಳು ಆಧುನೀಕರಣ ಪ್ರಕ್ರಿಯೆಗೆ ಒಳಗಾಗುತ್ತಿರುವ ಈ ಸಂದರ್ಭದಲ್ಲಿ ರಾಜಕೀಯ ಸಾಮಾಜೀಕರಣವು ಅತ್ಯಂತ ಮಹತ್ವವನ್ನು ಪಡೆದುಕೊಂಡಿದೆ. ಆಧುನಿಕ ಸಮಾಜವನ್ನು ವಿಸ್ತಾರ, ಸಂಕೀರ್ಣ, ಔದ್ಯೋಗಿಕರಣ ಹಾಗೂ ನಗರೀಕರಣ ಸಮಾಜವೆಂದು ಕರೆಯಲಾಗುತ್ತಿದೆ. ಇದು ಹಳೆಯ ಜಮೀನ್ದಾರಿ ಸಮಾಜದಿಂದ ತುಂಬಾ ಭಿನ್ನವಾಗಿದೆ. ಔದ್ಯೋಗಿಕರಣವು ಸಾಮಾಜಿಕ ಮೌಲ್ಯಗಳನ್ನು ಬುಡಮೇಲು ಮಾಡಿದೆ. ಬೇರೆ ಮಾತಿನಲ್ಲಿ ಹೇಳುವುದಾದರೆ, ಸಾಮಾಜಿಕ ಮೌಲ್ಯಗಳು , ನಿಯಮಗಳು ಬದಲಾವಣೆಯಾಗಿವೆ. ಜನರು ಔದ್ಯೋಗಿಕರಣದ ಪರಿಣಾಮದಿಂದ ಉಂಟಾದ ಹೊಸ ನಿಯಮಗಳನ್ನು

ಅಂತರ್ಗತಮಾಡಿಕೊಳ್ಳಬೇಕಾಗಿದೆ. ಮೌಲ್ಯಗಳ ಪ್ರಸರಣದಲ್ಲಿ ಸಮೂಹ ಮಾಧ್ಯಮ ಇಂದು ಶಾಲೆಗೆ ಬಹುದೊಡ್ಡ ಪ್ರತಿಸ್ಪರ್ಧಿಯಾಗಿ ಹೊರಹೊಮ್ಮಿದೆ.

ರಾಜಕೀಯ ಸಾಮಾಜೀಕರಣವು ಸಮುದಾಯದ ರಾಜಕೀಯ ಸಂಸ್ಕೃತಿಯನ್ನು ಹೆಚ್ಚಾಗಿ ಅವಲಂಬಿಸಿರುತ್ತದೆ. ಸ್ವಾತಂತ್ರ್ಯ ಪೂರ್ವದಲ್ಲಿ ನಮ್ಮ ದೇಶದ ಗ್ರಾಮೀಣ ಸಮುದಾಯವು ರಾಜಕೀಯ ಸಂಸ್ಕೃತಿಯಿಂದ ಹೊರತಾಗಿತ್ತು. ಧರ್ಮ, ಜಾತಿ, ಹಳೆಯ ಸಾಮಾಜಿಕ ಮೌಲ್ಯಗಳು ಗ್ರಾಮೀಣ ಜನರ ನಡುವಳಿಕೆಯನ್ನು ರೂಪಿಸುವಲ್ಲಿ ನಿರ್ಣಾಯಕ ಪಾತ್ರ ವಹಿಸುತ್ತಿದ್ದವು. ಅನೇಕ ಸಾಮಾಜಿಕ ಅಂಶಗಳು ಗ್ರಾಮೀಣ ಜನರು ರಾಜಕೀಯ ಸಂಸ್ಕೃತಿಯಿಂದ ದೂರ ಉಳಿಯುವಂತೆ ಮಾಡಿದವು. ಏಕ ಪಕ್ಷೀಯ ನಿರ್ಧಾರ ಮತ್ತು ಸಮೂಹ ಮಾಧ್ಯಮಗಳ ಕೊರತೆ ಇವುಗಳಲ್ಲಿ ಪ್ರಮುಖವಾದವುಗಳು, ಊಳಿಗಮಾನ್ಯ ಗ್ರಾಮೀಣ ಸಮಾಜವನ್ನು ತನ್ನ ಹಿಡಿತದಲ್ಲಿಟ್ಟುಕೊಂಡಿತು. ಈ ಕಾರಣದಿಂದಾಗಿ ಗ್ರಾಮೀಣ ಸಮುದಾಯವು ರಾಜಕೀಯ ಚಟುವಟಿಕೆಗಳ ಬಗ್ಗೆ ಅಸಡ್ಡೆ ಧೋರಣೆಯನ್ನು ಬೆಳೆಸಿಕೊಂಡಿದ್ದು. ಅಷ್ಟೇ ಅಲ್ಲದೆ ಭೂಮಾಲೀಕರು ಗ್ರಾಮೀಣ ಜನರು ರಾಜಕೀಯ ಚಟುವಟಿಕೆಗಳಲ್ಲಿ ಭಾಗವಹಿಸುವದನ್ನು ಹತ್ತಿಕ್ಕಿದರು. ಹಳ್ಳಿಯ ಕೆಲವೇ ಕೆಲವು ವ್ಯಕ್ತಿಗಳು ಹಾಗೂ ಕುಟುಂಬಗಳು ರಾಜಕೀಯ ಸಂಸ್ಕೃತಿಯೊಂದಿಗೆ ನಿಕಟ ಸಂಬಂಧ ಹೊಂದಿದ್ದವು. ಈ ಹಿನ್ನೆಲೆಯಲ್ಲಿ ರಾಜಕೀಯ ಸಾಮಾಜೀಕರಣದ ವಿವಿಧ ನಿಯೋಗಗಳ ಕುರಿತು. ಒಂದು ಸೈದ್ಧಾಂತಿಕ ಚೌಕಟ್ಟನ್ನು ನೀಡುವುದು ನನ್ನ ಅಧ್ಯಯನದ ಮೂಲ ಉದ್ದೇಶವಾಗಿದೆ. ಒಟ್ಟಿನಲ್ಲಿ ಕುಟಂಬ ಶೈಕ್ಷಣಿಕ ವ್ಯವಸ್ಥೆ, ಪ್ರಾಥಮಿಕ ಮತ್ತು ಮಾಧ್ಯಮಿಕ ಗುಂಪುಗಳು, ಮಾಧ್ಯಮಗಳು ಮತ್ತು ರಾಜಕೀಯ ಪಕ್ಷಗಳು ರಾಜಕೀಯ ಸಾಮಾಜೀಕರಣದ ಪ್ರಮುಖ ನಿಯೋಗಗಳೆಂದು ಗುರುತಿಸಲಾಗಿದೆ.

ಕುಟುಂಬ : ಕುಟುಂಬವು ರಾಜಕೀಯ ಸಾಮಾಜೀಕರಣದ ಪ್ರಾಥಮಿಕ ಮತ್ತು ಅತ್ಯಂತ ಮಹತ್ವವಾದ ನಿಯೋಗವಾಗಿದೆ. ವ್ಯಕ್ತಿಯ ವ್ಯಕ್ತಿತ್ವವನ್ನು ರೂಪಿಸುವಲ್ಲಿ ಕುಟುಂಬವು ಮಹತ್ವವವಾದ ಪಾತ್ರವಹಿಸುತ್ತದೆ. ವ್ಯಕ್ತಿಯ ಮಾನಸಿಕ ಬೆಳವಣಿಗೆಯಲ್ಲಿ ಕುಟುಂಬದ ಪಾತ್ರವನ್ನು ಕಡೆಗಣಿಸುವಂತಿಲ್ಲ. ವ್ಯಕ್ತಿಯು ತನ್ನ ಚಿಂತನೆ ಮತ್ತು ವ್ಯಕ್ತಿತ್ವನ್ನು ಕುಟುಂಬದಲ್ಲಿ ಮಾತ್ರ ಬೆಳೆಸಿಕೊಳ್ಳುತ್ತಾನೆ. ಮುಂದೆ ತನ್ನ ಚಿಂತನೆಗೆ ಅನುಗುಣವಾಗಿ ರಾಜಕೀಯ ಪ್ರಕ್ರಿಯೆಯಲ್ಲಿ ಭಾಗವಹಿಸುತ್ತಾನೆ. ಕುಟುಂಬದಲ್ಲಿ ಒಬ್ಬ ವ್ಯಕ್ತಿ ಸರಿಯಾದ ಕ್ರಮದಲ್ಲಿ ಹೇಗೆ ಆಹಾರ ಸೇವಿಸಬೇಕು ಎಂಬುವುದನ್ನು ಕಲಿಯುವುದರ ಜೊತೆಗೆ ಚಿಂತನೆಯ ಕ್ರಮ ಮಾನಸಿಕ ಉದ್ವೇಗ ಹಾಗೂ ಕ್ರಿಯೆ ಇವುಗಳನ್ನು ತನ್ನ ಬದುಕಿನಲ್ಲಿ ಅಳವಡಿಸಿಕೊಳ್ಳಲು ಪ್ರಯತ್ನಿಸುತ್ತಾನೆ. ವ್ಯಕ್ತಿಯು ಬದುಕಿನಲ್ಲಿ ಹಲವಾರು ಸವಾಲುಗಳನ್ನು ಎದುರಿಸಬೇಕಾಗುತ್ತದೆ. ಕುಟುಂಬವು ಆ ಸವಾಲುಗಳನ್ನು ಧೈರ್ಯವಾಗಿ ಎದುರಿಸುವ ಸಾಮರ್ಥ್ಯವನ್ನು ಕಲಿಸಿಕೊಡುತ್ತದೆ. ಅಷ್ಟೇ

ಅಲ್ಲದೆ ಅದು ವಿವಿಧ ನಡುವಳಿಕೆಗಳ ಕುರಿತು ಶಿಕ್ಷಣ ನೀಡುತ್ತದೆ. ಬೇರೆ ಬೇರೆ ಸಂದರ್ಭಗಳಲ್ಲಿ ವ್ಯಕ್ತಿ ಹೇಗೆ ವರ್ತಿಸಬೇಕು ಎಂಬುವದರ ಕುರಿತು ತರಬೇತಿ ನೀಡುತ್ತದೆ. ಮಗುವಿನ ಮೇಲೆ ಪಾಲಕರ ಪ್ರಭಾವ ಗುರುತರವಾಗಿರುತ್ತದೆ. ಮಗುವಿನ ರಾಜಕೀಯ ಸಾಮಾಜೀಕರಣದ ಪ್ರಕ್ರಿಯೆಯಲ್ಲಿ ಕುಟುಂಬ ಒಂದು ಪ್ರಾಥಮಿಕ ನಿಯೋಗವಾಗಿ ಕಾರ್ಯನಿರ್ವಹಿಸುತ್ತದೆ. ಈಸ್ಟನ್ ಮತ್ತು ಹೆಸ್ ರವರ ಪ್ರಕಾರ ಅಮೇರಿಕಾದಲ್ಲಿ ರಾಜಕೀಯ ಸಾಮಾಜೀಕರಣದ ಪ್ರಕ್ರಿಯೆಯಲ್ಲಿ ಮಗುವಿನ ಮೂರನೆ ವರ್ಷಕ್ಕೆ ಪ್ರಾರಂಭವಾಗಿ ಹದಿಮೂರನೆ ವರ್ಷಕ್ಕೆ ಮುಕ್ತಾಯಗೊಳ್ಳುತ್ತದೆ ಎಂದು ಹೇಳಿದ್ದಾರೆ. ಈ ಹಂತದಲ್ಲಿ ಮಗುವಿನ ಮೇಲಾದ ಪ್ರಭಾವ ಜೀವನದುದ್ದಕ್ಕೂ ಉಳಿಯುತ್ತದೆ ಎಂದಿದ್ದಾರೆ. ಇದು ರಾಜಕೀಯ ನಡುವಳಿಕೆಯ ಮೇಲೆ ಕುಟುಂಬದ ಮಹತ್ವವನ್ನು ಎತ್ತಿ ತೋರಿಸುತ್ತದೆ. ಪ್ರತಿಯೊಬ್ಬ ಮನುಷ್ಯನಿಗೆ ಕನಿಷ್ಟ ಪಕ್ಷ ನಾಲ್ಕು ಮೂಲಭೂತ ಅವಶ್ಯಕತೆಗಳು ಇವೆ. ದೈಹಿಕ ಅವಶ್ಯಕತೆಗಳಾದ ಆಹಾರ, ಬಟ್ಟೆ ಮತ್ತು ವಸತಿ, ಆರೋಗ್ಯ ಮತ್ತು ದೇಹದ ರಕ್ಷಣೆ, ಪ್ರೀತಿ ಮತ್ತು ವಾತ್ಸಲ್ಯದ ಅವಶ್ಯಕತೆ, ಮತ್ತು ತನ್ನದೆಯಾದ ವ್ಯಕ್ತಿತ್ವವನ್ನು ಸ್ಥಾಪಿಸುವುದು. ಈ ಎಲ್ಲ ಮೂಲಭೂತ ಅವಶ್ಯಕತೆಗಳನ್ನು ಕುಟುಂಬ ಪೂರೈಸುತ್ತದೆ. ಈ ಎಲ್ಲ ಅವಶ್ಯಕತೆಗಳ ತೃಪ್ತಿಗಾಗಿ ಕುಟುಂಬವು ಮೊದಲಿಗೆ ಪರಿಸರವನ್ನು ಒದಗಿಸುತ್ತದೆ.

ಪಾಲಕರು ಅಥವಾ ಕುಟುಂಬ ಮಗುವಿನ ಬೆಳವಣಿಗೆಯಲ್ಲಿ ಮಹತ್ವದ ಪಾತ್ರ ವಹಿಸುತ್ತದೆ ಎಂದು ಹೇಳಬಹುದು. ಆದರೆ ತಂದೆ ತಾಯಿಗಳ ಇತರ ವರ್ತನೆ ಮತ್ತು ನಡುವಳಿಕೆಗಳು ಮಗು ರಾಜಕೀಯದ ಬಗ್ಗೆ ತನ್ನದೆಯಾದ ದೃಷ್ಟಿಕೋನವನ್ನು ಹೊಂದಲು ಪ್ರಮುಖ ಅಂಶಗಳಾಗುತ್ತವೆ ಎಂದು ಹೇಳಬಹುದು. ಪ್ರಾಂಕ್ ಎ ಪಿನ್ನರ್ ಎಂಬುವರು ಬೆಲ್ಜಿಯಂ ಡಚ್ ಮತ್ತು ಫ್ರೆಂಚ್ ಮಾಧ್ಯಮಿಕ ಮತ್ತು ವಿಶ್ವವಿದ್ಯಾಲಯಗಳ ವಿದ್ಯಾರ್ಥಿಗಳ ತುಲನಾತ್ಮಕ ಅಧ್ಯಯನ ಮಾಡಿದ್ದು, ಬೆಲ್ಜಿಯಂ ಮತ್ತು ಫ್ರೆಂಚ್ ವಿದ್ಯಾರ್ಥಿಗಳು ಡಚ್ ವಿದ್ಯಾರ್ಥಿಗಳಿಗಿಂತ ರಾಜಕೀಯದ ಬಗ್ಗೆ ಅಪನಂಬಿಕೆ ಮತ್ತು ಅಸಡ್ಡೆ ಭಾವನೆಗಳನ್ನು ಇಟ್ಟುಕೊಂಡಿದ್ದರು. ಆದರೆ ಡಚ್ ವಿದ್ಯಾರ್ಥಿಗಳು ರಾಜಕೀಯದ ಬಗ್ಗೆ ಒಳ್ಳೆಯ ಭಾವನೆಗಳನ್ನು ಇಟ್ಟುಕೊಂಡಿದ್ದರು. ಇದಕ್ಕೆ ಕಾರಣ ಡಚ್ ವಿದ್ಯಾರ್ಥಿಗಳು ಪ್ರೆಂಚ್ ವಿದ್ಯಾರ್ಥಿಗಳಿಗಿಂತ ಕುಟುಂಬದಲ್ಲಿ ಹೆಚ್ಚಿನ ಸ್ವಾತಂತ್ರ್ಯ ಹೊಂದಿದ್ದರು.

ಮಗುವಿನ ಮಾನಸಿಕ ಸ್ಥಿತಿಯನ್ನು ರೂಪಿಸುವ ಸಂಪೂರ್ಣ ಜವಾಬ್ದಾರಿ ತಾಯಿಯ ಮೇಲೆ ಇರುತ್ತದೆ. ಪ್ರತಿಯೊಂದು ಕುಟುಂಬದಲ್ಲಿ ತಾಯಿಯು ಮಗುವಿನ ಮೇಲೆ ಹೆಚ್ಚಿನ ಪ್ರಭಾವ ಮತ್ತು ಹಿಡಿತವನ್ನು ಹೊಂದಿರುತ್ತಾಳೆ. ತಾಯಿಯಿಂದ ಮಗುವನ್ನು ಬೇರ್ಪಡಿಸಲು ಸಾಧ್ಯವಿಲ್ಲ. ಹೀಗಾಗಿ ಕುಟುಂಬ ಮಗುವಿಗೆ ಪ್ರೀತಿಯನ್ನು ನೀಡುವದರ ಜೊತೆಗೆ ಅದರ ಮೂಲಭೂತ ಅವಶ್ಯಕತೆಗಳನ್ನು ಈಡೇರಿಸುತ್ತದೆ. ಈ ಕಾರಣಕ್ಕಾಗಿ ಪ್ರತಿಯೊಬ್ಬ ವ್ಯಕ್ತಿಯು

ಕುಟುಂಬದ ಪ್ರಭಾವಕ್ಕೊಳಗಾಗಿ ಅದರ ಆದರ್ಶಗಳಿಗನುಗುಣವಾಗಿ ವಿಚಾರ ಮಾಡಲು ಪ್ರಾರಂಭಿಸುತ್ತಾನೆ.

ಹಾರ್ಲೋರವರ ಪ್ರಕಾರ ಪ್ರೀತಿ ಮತ್ತು ಮಮತೆಯಿಂದ ವಂಚಿತರಾದ ಮಕ್ಕಳ ಬದುಕಿನ ಮೇಲಾಗುವ ಪರಿಣಾಮಗಳ ಕುರಿತು ಅಧ್ಯಯನ ಮಾಡಿದ್ದಾರೆ. ಪ್ರೀತಿಯಿಂದ ವಂಚಿತವಾದ ಮಕ್ಕಳು ಸಮಾಜ ವಿರೋದಿ ಚಟುವಟಿಕೆಗಳಲ್ಲಿ ಭಾಗವಹಿಸುವ ಸಾಧ್ಯತೆ ಹೆಚ್ಚಿಗೆ ಇರುತ್ತದೆ ಎಂದು ಅವರು ಅಭಿಪ್ರಾಯಪಡುತ್ತಾರೆ. ಹಾಗೇಯೆ ಆರ್.ಎಸ್.ಸ್ಪಿಜರವರು ಸ್ವಂತ ತಾಯಿಂದಿರು ತಮ್ಮ ಮಕ್ಕಳನ್ನು ಬೆಳೆಸುವುದಕ್ಕೂ ಹಾಗೆಯೇ ಬೇರೆಯವರು ಬೆಳೆಸುವದಕ್ಕೂ ತುಂಬಾ ವ್ಯತ್ಯಾಸವಿದೆ ಎಂದು ಅವರು ಅಭಿಪ್ರಾಯಪಡುತ್ತಾರೆ. ಸ್ವಂತ ತಾಯಿಯ ಪ್ರೀತಿಯಿಂದ ವಂಚಿತವಾದ ಮಕ್ಕಳಲ್ಲಿ ಮೂರಷ್ಟು ಮಕ್ಕಳು ಮರಣ ಹೊಂದಿರುವುದನ್ನು ತಮ್ಮ ಸಂಶೋಧನಾ ಅಧ್ಯಯನದಲ್ಲಿ ತಿಳಿಸಿರುತ್ತಾರೆ. ಮಗುವಿನ ಖಿನ್ನತೆಯು ಅಥವಾ ವಿಷಣತೆಯು ಅದರ ಸಾಮಾಜೀಕರಣದ ಪ್ರಕ್ರಿಯೆಯ ಮೇಲೆ ಶಾಶ್ವತವಾಗಿ ಪರಿಣಾಮ ಬೀರುತ್ತದೆ.

ಸಾಮಾನ್ಯವಾಗಿ ಕುಟುಂಬವೆಂದರೆ ತಂದೆ-ತಾಯಿ ಮತ್ತು ಮಕ್ಕಳನ್ನು ಒಳಗೊಂಡ ಒಂದು ಘಟಕ. ಆದರೆ ಇದು ಸಾರ್ವತ್ರಿಕವಾದುದಲ್ಲ. ಏಕೆಂದರೆ ಒಂದು ಕುಟುಂಬದಲ್ಲಿ ಇದಕ್ಕಿಂತ ಜಾಸ್ತಿ ಸದಸ್ಯರು ಇರಬಹುದು, ಅಥವಾ ಕಡಿಮೆಯೂ ಇರಬಹುದು. ಒಂದು ಚಿಕ್ಕ ಕುಟುಂಬ ಘಟಕದಲ್ಲಿ ಕೇವಲ ತಾಯಿ ಮತ್ತು ಮಗುವನ್ನು ಮಾತ್ರ ಒಳಗೊಂಡಿರಬಹುದು. ಅಂದರೆ ತಂದೆಯಿಲ್ಲದ ಕುಟುಂಬ ಇರಬಹುದು. ತಂದೆಯಿಲ್ಲದ ಕುಟುಂಬದಲ್ಲಿ ಸಾಮಾನ್ಯವಾಗಿ ಮಗುವು ತಾಯಿಯ ಮೇಲೆ ಹೆಚ್ಚಿಗೆ ಅವಲಂಬನೆಯಾಗಿರುವದನ್ನು ನಾವು ನೋಡಬಹುದು.

ರಾಬರ್ಟ ಜೆ ಲಿಫ್ಟನ್‌ರವರ ಅಧ್ಯಯನದ ಪ್ರಕಾರ ಜಪಾನಿನ ಯುವಕರು ತಮ್ಮ ತಂದೆಗಿಂತ ತಾಯಿಯ ಮೇಲೆ ಹೆಚ್ಚಿಗೆ ಅವಂಬನೆಯಾಗಿರುವುದನ್ನು ಎತ್ತಿ ತೋರಿಸಿದ್ದಾರೆ. ಸಂಸ್ಕೃತಿಯ ಸಂಕ್ರಮಣ ಕಾಲದಲ್ಲಿ ಜಪಾನ ಯುವಕರ ತುಮುಲವನ್ನು ನಿಯಂತ್ರಿಸುವಲ್ಲಿ ತಂದೆಯರು ಅಸಮರ್ಥರಾಗಿದ್ದರು. ಹೀಗಾಗಿ ಅಲ್ಲಿನ ಯುವಕರು ತಮ್ಮ ಅವಶ್ಯಕತೆಗಳ ಪೂರೈಕೆಗಾಗಿ ತಮ್ಮ ತಾಯಿಂದಿರ ಮೇಲೆ ಹೆಚ್ಚು ಅವಲಂಬಿತರಾಗಿದ್ದರು. ಇದರಿಂದ ಮುಂದೆ ಜಪಾನಿನ ಯುವಕರು ರಾಜಕೀಯ ವ್ಯವಸ್ಥೆಯ ಬಗ್ಗೆ ಅತಿಯಾದ ವಿಧೇಯತೆ ಬೆಳೆಸಿಕೊಳ್ಳಲು ಕಾರಣವಾಯಿತು.

ಸಮವಯಸ್ಕರ ಗುಂಪು : ಸಮವಯಸ್ಕರ ತಂಡ ವೆಂದರೆ ಸಮಾನ ಸ್ಥಾನವುಳ್ಳ ಸಮವಯಸ್ಕರ ಸದಸ್ಯರೊಳಗೆ ಆತ್ಮಿಯ ಸಂಬಂಧವುಳ್ಳ ಪ್ರಾಥಮಿಕ ಸಮೂಹ. ಕುಟಂಬ ಹೊರತು ಪಡಿಸಿ ಸಮಾಜದಲ್ಲಿ ಇತರ ಗುಂಪುಗಳಿದ್ದು ಅವುಗಳು ಪ್ರಾಥಮಿಕ ಸಂಬಂಧಗಳ ಮೇಲೆ ಅವಲಂಬನೆಯಾಗಿದ್ದು, ಕುಟುಂಬದ ರಚನೆ ಮತ್ತು ಗುಣಲಕ್ಷಣಗಳಿಂದ ಭಿನ್ನವಾಗಿರುತ್ತದೆ.

ಬಾಲ್ಯದ ಕ್ರೀಡಾ ಗುಂಪುಗಳು, ಗೆಳೆಯರ ಬಳಗ, ಚಿಕ್ಕ ಕಾರ್ಮಿಕರ ಗುಂಪು, ಸಹೋದರರು ಮತ್ತು ಸಹೋದರಿಯರು ಮುಂತಾದ ಗುಂಪುಗಳು ಸಮವಯಸ್ಕರ ಗುಂಪಿಗೆ ಉತ್ತಮ ಉದಾಹರಣೆಗಳಾಗಿವೆ. ಇಂತಹ ಗುಂಪುಗಳನ್ನು ನಾವು ಸಾಮಾನ್ಯವಾಗಿ ಸಮವಯಸ್ಕರ ಗುಂಪುಗಳೆಂದು ಕರೆಯುತ್ತೇವೆ. ಕುಟುಂಬದ ಸದಸ್ಯರಲ್ಲಿ ಆತ್ಮೀಯ ಸಂಬಂಧವಿದ್ದಾಗಿಯು ಕೂಡಾ ಆ ಸಂಬಂಧ ಏಣಿ ಶ್ರೇಣಿಯಿಂದ ಕೂಡಿರುತ್ತದೆ. ತಂದೆ ಮತ್ತು ಮಗುವಿನ ನಡುವಿನ ಸಂಬಂಧ ಏಣಿ ಶ್ರೇಣಿಯದಾಗಿರುತ್ತದೆ. ಹೀಗಾಗಿ ಕುಟಂಬದ ಎಲ್ಲ ಸದಸ್ಯರು ಸಮಾನ ಸ್ಥಾನಮಾನಗಳನ್ನು ಪಡೆದಿರುವದಿಲ್ಲ. ಆದರೆ ಸಮವಯಸ್ಕರ ಗುಂಪು ಸಮಾನ ಮನಸ್ಕರ ಮತ್ತು ಸಮ ವಯಸ್ಸಿನವರಿಂದ ಕೂಡಿರುತ್ತದೆ. ಹೀಗಾಗಿ ಸಂಬಂಧಗಳು ಏಣಿಶ್ರೇಣಿಯಿಂದ ಕೂಡಿರುವದಿಲ್ಲ.

ಯಾವಾಗ ಮಗು ಯೌವ್ವನಾವಸ್ಥೆ ತಲುಪಿದಾಗ ರಾಜಕೀಯ ಸಾಮಾಜಿಕರಣದ ಪ್ರಕ್ರಿಯೆಯು ಹೊಸ ಆಯಾಮಗಳನ್ನು ಪಡೆದುಕೊಳ್ಳುತ್ತದೆ. ಆಗ ರಾಜಕೀಯ ಬದಲಾವಣೆಗಳನ್ನು ಹೊಂದಾಣಿಕೆ ಮಾಡಿಕೊಳ್ಳುವ ಸಮಸ್ಯೆ ಉದ್ಭವವಾಗುತ್ತದೆ. ಕುಟುಂಬದ ಪ್ರಭಾವ ಕಡಿಮೆಯಾಗಿ ಸಮವಯಸ್ಕರ ಗುಂಪಿನ ಪ್ರಭಾವ ಹೆಚ್ಚಾಗುತ್ತದೆ. ಯೌವ್ವನಾವಸ್ಥೆಯಲ್ಲಿ ಕುಟುಂಬಕ್ಕಿಂತ ಹೆಚ್ಚಾಗಿ ಸಮವಯಸ್ಕರ ಗುಂಪು ರಾಜಕೀಯ ಸಾಮಾಜೀಕರಣ ಪ್ರಕ್ರಿಯೆಯಲ್ಲಿ ಮಹತ್ವದ ಪಾತ್ರ ವಹಿಸುತ್ತದೆ. ಸಮವಯಸ್ಕರ ಗುಂಪಿನ ಸಂಪರ್ಕದಿಂದ ವ್ಯಕ್ತಿಯು ಹೆಚ್ಚಿನ ರಾಜಕೀಯ ಅನುಭವಗಳನ್ನು ಪಡೆದುಕೊಳ್ಳುತ್ತಾನೆ. ಇಂದಿನ ಪಾಲಕರು ಸಂಕೀರ್ಣ ಸಾಮಾಜಿಕ ಮತ್ತು ರಾಜಕೀಯ ಸಂರಚನೆಗಳಲ್ಲಿ ಮಕ್ಕಳನ್ನು ಭಾಗವಹಿಸುವಂತೆ ಸಿದ್ಧತೆಗೊಳಿಸುವಲ್ಲಿ ಅಸಮರ್ಥರಾಗಿದ್ದಾರೆ. ಹಾಗೆಯೇ ಸಮವಯಸ್ಕರ ಗುಂಪು ಕುಟುಂಬದ ಜೊತೆಗೆ ಸಂಘರ್ಷಕ್ಕಿಳಿಯುದಿಲ್ಲ. ಕುಟುಂಬದ ಉದಾತ್ತ ವಿಚಾರಗಳನ್ನು ರಾಜಕೀಯದಲ್ಲಿ ಅಳವಡಿಸಿಕೊಳ್ಳಲು ಪ್ರಯತ್ನಿಸುತ್ತದೆ. ಸಮವಯಸ್ಕರ ಗುಂಪುಗಳು ಯಶಸ್ವಿಯಾಗುವುದಕ್ಕೆ ಕೆಲವೊಂದು ಕಾರಣಗಳಿವೆ. ಮೊದಲನೆಯದಾಗಿ ಸದಸ್ಯರಲ್ಲಿ ಸರಾಗವಾದ ಅಂತರ್‌ಕ್ರಿಯೆ ಇರುತ್ತದೆ ಮತ್ತು ಸದಸ್ಯರಲ್ಲಿ ಭಾವನಾತ್ಮಕವಾದ ಸಂಬಂಧವಿರುತ್ತದೆ. ಎರಡನೆಯದಾಗಿ ಸಮವಯಸ್ಕರ ಗುಂಪಿನ ಸದಸ್ಯರಲ್ಲಿ ಸಂಬಂಧವು ಅತ್ಯಂತ ನಿಕಟವಾಗಿರುತ್ತದೆ. ಇದು ರಾಜಕೀಯ ಸಾಮಾಜೀಕರಣದ ಪ್ರಕ್ರಿಯೆ ಇನ್ನಷ್ಟು ಸರಳೀಕರಣಗೋಳಿಸುತ್ತದೆ. ಆದರೆ ಒಂದು ಅಂಶವನ್ನು ನಾವು ಮನಸ್ಸಿನಲ್ಲಿ ಇಟ್ಟುಕೊಳ್ಳಬೇಕು. ರಾಜಕೀಯ ಚರ್ಚೆ ಸಮವಯಸ್ಕರ ಗುಂಪಿನ ಸದಸ್ಯರಲ್ಲಿ ಬರುವ ಅವಶ್ಯಕತೆ ಇರುವದಿಲ್ಲ. ಅವರು ರಾಜಕೀಯದ ಹೊರತಾದ ಇತರ ವಿಷಯಗಳನ್ನು ಚರ್ಚಿಸುವ ಸಾಧ್ಯತೆಯು ಇರುತ್ತದೆ. ಆದರೆ ಒಂದು ಮಾತು ನಿಜ ಭವಿಷ್ಯತ್ತಿನ ರಾಜಕೀಯ ನಡುವಳಿಕೆಗಳ ಮೇಲೆ ಸಮವಯಸ್ಕರ ಗುಂಪು ಅತ್ಯಂತ ಪ್ರಭಾವ ಬೀರುತ್ತದೆ. ಗುಂಪಿನ ಪ್ರತಿಯೊಬ್ಬ ಸದಸ್ಯನು ಮನುಷ್ಯನ ಅಂತರ್‌ಕ್ರಿಯೆಗಳಲ್ಲಿ ಪರಿಣಿತಿಯನ್ನು

ಸಾದಿಸುತ್ತಾನೆ. ಗುಂಪಿನಲ್ಲಿ ನಿರ್ಣಯಗಳನ್ನು ತೆಗೆದುಕೊಳ್ಳುವ ತರಬೇತಿಯನ್ನು ಪಡೆಯುತ್ತಾನೆ. ಇದು ಮುಂದೆ ರಾಜಕೀಯ ನಿರ್ಧಾರಗಳನ್ನು ತೆಗೆದುಕೊಳ್ಳಲು ಸಹಾಯಕವಾಗುತ್ತದೆ. ಅರ್ಲಲಾತಮ್ ರವರ ಪ್ರಕಾರ ಆಧುನಿಕ ಸಮಾಜದಲ್ಲಿ ವ್ಯಕ್ತಿಗಳು ಇಚ್ಛೆಪಡುವ ಮುಖ್ಯವಾದ ಸಾಮಾಜಿಕ ಮೌಲ್ಯಗಳನ್ನು ಈ ಗುಂಪುಗಳಿಂದ ಅರಿತಕೊಳ್ಳಬಹುದು ಎಂದಿದ್ದಾರೆ. ವ್ಯಕ್ತಿಗಳು ಏನು ಬಯಸುತ್ತಾರೆಯೋ ಅವುಗಳನ್ನು ಪಡೆದುಕೊಳ್ಳಲು ಈ ಗುಂಪುಗಳು ಸಹಾಯಕವಾಗಿವೆ. ರಾಜಕೀಯ ಪುನರ ಸಾಮಾಜೀಕರಣ ಪ್ರಕ್ರೀಯೆಯಲ್ಲಿ ಕಾಲೇಜಿನ ಸಮವಯಸ್ಕರ ಗುಂಪು ಮಹತ್ವದ ಪಾತ್ರ ವಹಿಸುತ್ತದೆ. ಎಂದು ಥೀಯೋಡೋರ್ ನ್ಯೂಕಾಂಬ್ ತಮ್ಮ ಅಧ್ಯಯನದಲ್ಲಿ ತಿಳಿಸಿರುತ್ತಾರೆ. ಸಮವಯಸ್ಕರ ಗುಂಪು ಯಾವ ಸಮಾಜದ ಭಾಗವಾಗಿರುತ್ತದೆಯೋ ಆ ಸಮಾಜದ ಸಂಸ್ಕೃತಿಯನ್ನು ವರ್ಗಾಯಿಸುವ ವಾಹಕವಾಗಿ ಕಾರ್ಯನಿರ್ವಹಿಸುತ್ತದೆ. ಸಾಮಾಜಿಕ ವರ್ಗ, ಧರ್ಮ ಮತ್ತು ಜನಾಂಗೀಯ ಉಪ ಸಂಸ್ಕೃತಿಗಳನ್ನು ಈ ಗುಂಪಿನ ಮುಖಾಂತರ ವರ್ಗಾಯಿಸಲಾಗುತ್ತದೆ. ಉದಾಹರಣೆಗೆ ಕಾರ್ಮಿಕ ಕುಟುಂಬದಲ್ಲಿ ಬೆಳೆದ ಮಗು ಕಾರ್ಮಿಕ ಜೀವನ ವಿಧಾನವನ್ನು ಅಳವಡಿಸಿಕೊಳ್ಳುತ್ತದೆ. ಮುಂದೆ ಶಾಲೆಗೆ ಸೇರಿದಾಗ ತನ್ನ ವರ್ಗದ ವಿದ್ಯಾರ್ಥಿಗಳ ಗುಂಪಿನಲ್ಲಿ ಗುರುತಿಸಿಕೊಳ್ಳಲು ಇಚ್ಛೆ ಪಡುತ್ತದೆ. ಇದು ಮುಂದೆ ವಿದ್ಯಾರ್ಥಿಗಳು ವರ್ಗ ನಡುವಳಿಕೆಗಳನ್ನು ಬೆಳಸಿಕೊಳ್ಳಲು ಸಹಾಯಕವಾಗುತ್ತದೆ.

ಶಾಲೆ : ರಾಜಕೀಯ ಸಾಮಾಜೀಕರಣದ ಪ್ರಕ್ರಿಯೆಯಲ್ಲಿ ಶಾಲೆಯ ಪಾತ್ರವು ಕುಟುಂಬದ ನಂತರ ಬರುತ್ತದೆ. ಮಗುವಿಗೆ ಶಿಕ್ಷಣ ನೀಡುವುದು ಶಾಲೆಯೇ. ಶಿಕ್ಷಣ ಮಾನವನ ಅತ್ಯಂತ ಮಹತ್ವವಾದ ಕಾಳಜಿಯಾಗಿದೆ. ಶಾಲೆಯು ಮಗುವಿಗೆ ಜ್ಞಾನ ನೀಡುವ ಮಹತ್ವದ ಕಾರ್ಯವನ್ನು ನಿರ್ವಹಿಸುತ್ತದೆ. ಶಿಕ್ಷಣದ ಪ್ರಮುಖವಾದ ಕಾರ್ಯವೆಂದರೆ ಜ್ಞಾನ ನೀಡುವುದು. ತರಬೇತಿ ಸಾಮಾಜೀಕರಣ ಮತ್ತು ಕಲಿಯುವುದು ಮುಂತಾದವುಗಳಿಂದ ಶಿಕ್ಷಣ ಭಿನ್ನವಾದ ಪದವೇನಲ್ಲ. ಶಿಕ್ಷಣ ಮತ್ತು ಇವುಗಳ ನಡುವಿನ ಪ್ರಮುಖವಾದ ವ್ಯತ್ಯಾಸವೆಂದರೆ ಶಿಕ್ಷಣವು ವಿಶೇಷ ವ್ಯಕ್ತಿಯಿಂದ ಅಂದರೆ ಶಿಕ್ಷಕನಿಂದ ನಡೆಯುತ್ತದೆ. ಕೆಲವು ವಿದ್ವಾಂಸರು ಮಗುವಿನ ಸಾಮಾಜಿಕ ನಡತೆ ಮೌಲ್ಯ ವರ್ತನೆಯ ಅಭಿವೃದ್ದಿಗೆ ಹೆಚ್ಚಿನ ಮಹತ್ವ ನೀಡಿದ್ದು ರಾಜಕೀಯ ಸಾಮಾಜೀಕರಣವು ನಿಯೋಗವಾದ ಶಾಲೆ ಮತ್ತು ಶಿಕ್ಷಕರನ್ನು ನಿರ್ಲಕ್ಷಿಸಿದ್ದಾರೆ. ಉದಾಹರಣೆಗೆ ಹಿಮ್ಮಲ್ ವ್ಯಾಚ್ ಮತ್ತು ಸ್ವಿಪ್ಪ್ ಎಂಬುವರು ರಾಜಕೀಯ ಸಾಮಾಜೀಕರಣದ ಸಾಹಿತ್ಯವು ಕುಟುಂಬಕ್ಕೆ ಹೆಚ್ಚಿನ ಮಹತ್ವ ನೀಡಿದ್ದು, ಸಮಾಜದ ಪ್ರಮುಖ ಸಂಸ್ಥೆಗಳಾದ ಸಮೂಹ ಮಾಧ್ಯಮ ಮತ್ತು ಶೈಕ್ಷಣಿಕ ವ್ಯವಸ್ಥೆಯನ್ನು ನಿರ್ಲಕ್ಷಿಸಲಾಗಿದೆ ಎಂಬುವುದನ್ನು ತಮ್ಮ ಅಧ್ಯಯನದಲ್ಲಿ ಗುರುತಿಸಿರುತ್ತಾರೆ. ಶೈಕ್ಷಣಿಕ ವ್ಯವಸ್ಥೆ ಅಥವಾ ಶಾಲೆ ನಿಸ್ಸಂಕೋಚವಾಗಿಯೂ ರಾಜಕೀಯ ಸಾಮಾಜೀಕರಣದ ಪ್ರಮುಖ ನಿಯೋಗವಾಗಿದೆ. ಮಗು ಶಿಕ್ಷಕರ ಹಾಗೂ ತನ್ನ ಸಹಪಾಠಿಗಳ ಸಂಪರ್ಕದಿಂದ ಹಲವಾರು ಅಂಶಗಳನ್ನು ತಿಳಿದುಕೊಳ್ಳಲು ಹಾಗೂ

ಕಲಿಯಲು ಶಾಲೆ ಅವಕಾಶ ಮಾಡಿಕೊಡುತ್ತದೆ. ಮಗುವಿನ ರಾಜಕೀಯ ವರ್ತನೆಯನ್ನು ರೂಪಿಸುವುದು ಶಾಲೆಯೆಂದು ಪರಿಗಣಿಸಲಾಗಿದೆ. ಹಾಗೇಯೇ ರಾಜಕೀಯ ಸಾಮಾಜೀಕರಣದ ಪ್ರಮುಖ ನಿಯೋಗವೆಂದು ಪರಿಗಣಿಸಲಾಗಿದೆ. ಹೆಸ್ ಮತ್ತು ಟೋರ್ನಿ ಅಮೇರಿಕಾದಲ್ಲಿ ಪಬ್ಲಿಕ್ ಶಾಲೆಗಳು ರಾಜಕೀಯ ಸಾಮಾಜೀಕರಣದ ಅತ್ಯಂತ ಮಹತ್ವದ ಹಾಗೂ ಪ್ರಮುಖವಾದ ಉಪಕರಣವಾಗಿದೆ ಎಂದು ಹೇಳಿದ್ದಾರೆ. ಈ ಕ್ಷೇತ್ರದಲ್ಲಿ ಹಲವಾರು ವಿದ್ವಾಂಸರು ಸಂಶೋಧನೆಗಳನ್ನು ಮಾಡಿದ್ದಾರೆ. ಅವರುಗಳಲ್ಲಿ ಅಲ್ಮಂಡ್ ಮತ್ತು ಸಿಡ್ನಿ ವರ್ಬಾ ಪ್ರಮುಖರಾದವರು. ರಾಜಕೀಯ ಸಾಮಾಜೀಕರಣದ ಪ್ರಕ್ರಿಯೆಯಲ್ಲಿ ಔಪಚಾರಿಕ ಶಿಕ್ಷಣವು ಹೇಗೆ ನಿರ್ಣಾಯಕ ಪಾತ್ರ ವಹಿಸುತ್ತದೆ ಎಂಬ ವಿಚಾರಕ್ಕೆ ಅವರ ಅಧ್ಯಯನಗಳು ಹೆಚ್ಚಿನ ಒತ್ತು ನೀಡಿವೆ. ಅವರ ಪ್ರಕಾರ ಇತರ ಪರಿವರ್ತಕಗಳಿಗೆ ಹೋಲಿಸಿದಾಗ ಶೈಕ್ಷಣಿಕ ಪರಿವರ್ತಕಗಳು ರಾಜಕೀಯ ನಡುವಳಿಕೆಗಳನ್ನು ನಿರ್ಧರಿಸುವಲ್ಲಿ ಮಹತ್ವದ್ದವುಗಳಾಗಿರುತ್ತವೆ ಎಂದಿದ್ದಾರೆ. ಒಬ್ಬ ಅವಿದ್ಯಾವಂತನ ರಾಜಕೀಯ ನಟನೆಯು ಒಬ್ಬ ವಿದ್ಯಾವಂತನ ರಾಜಕೀಯ ನಟನೆಗಿಂತ ಭಿನ್ನವಾಗಿರುತ್ತದೆ.

ಶಾಲೆಯು ಮಕ್ಕಳಲ್ಲಿ ರಾಜಕೀಯ ನಂಬಿಕೆಯನ್ನು ಅಳವಡಿಸಿಕೊಳ್ಳಲು ಅವಕಾಶ ಮಾಡಿಕೊಡುತ್ತದೆ. ಮಗು ಶಾಲೆಯ ಸಹಪಾಠಿಗಳ ಸಂಪರ್ಕದಿಂದ ಹಲವಾರು ರಾಜಕೀಯ ವಿಚಾರಗಳನ್ನು ತಿಳಿದುಕೊಳ್ಳಲು ಸಹಾಯವಾಗುತ್ತದೆ. ಶಾಲೆ ಕಾಲೇಜುಗಳಲ್ಲಿ ವಿದ್ಯಾರ್ಥಿಗಳು ರಾಜಕೀಯ ಸಿದ್ಧಾಂತಗಳ ಕುರಿತು ಗಂಭೀರವಾಗಿ ಚರ್ಚಿಸುತ್ತಾರೆ. ಇದರಿಂದ ಬೇರೆ ಬೇರೆ ರಾಜಕೀಯ ವಿಚಾರಗಳಲ್ಲಿ ನಂಬಿಕೆ ಇಟ್ಟುಕೊಳ್ಳಲು ಇದು ಅವಕಾಶ ಮಾಡಿಕೊಡುತ್ತದೆ. ಒಟ್ಟಿನಲ್ಲಿ ಶಾಲೆಯು ಯುವಕರಿಗೆ ರಾಜಕೀಯ ಮೌಲ್ಯಗಳ ಬಗ್ಗೆ ತಿಳುವಳಿಕೆ ನೀಡುತ್ತದೆ. ಅಷ್ಟೆ ಅಲ್ಲದೆ ಶಾಲೆಯು ಮಗುವನ್ನು ಸಾಮಾಜೀಕರಣಗೊಳಿಸಲು ಪ್ರಯತ್ನಿಸುತ್ತದೆ.

ರಾಜಕೀಯ ಪಕ್ಷಗಳು : ರಾಜಕೀಯ ಪಕ್ಷಗಳು ರಾಜಕೀಯ ಸಾಮಾಜೀಕರಣದಲ್ಲಿ ಮಹತ್ವದ ಪಾತ್ರ ನಿರ್ವಹಿಸುತ್ತದೆ. ಜನರ ರಾಜಕೀಯ ಅಭಿಪ್ರಾಯಗಳನ್ನು ರೂಪಿಸುವಲ್ಲಿ ಪಕ್ಷಗಳು ನಿಜವಾಗಿಯೂ ಅತ್ಯಂತ ಮಹತ್ವವಾದ ಪಾತ್ರವನ್ನು ವಹಿಸುತ್ತವೆ. ಅವುಗಳು ರಾಜಕೀಯ ಸಾಮಾಜೀಕರಣದ ಅತ್ಯಂತ ಪರಿಣಾಮಕಾರಿಯಾದ ನಿಯೋಗಗಳಾಗಿವೆ. ಅದರಲ್ಲಿಯೂ ಚುನಾವಣಾ ಸಂದರ್ಭದಲ್ಲಿ ರಾಜಕೀಯ ಅಭಿಪ್ರಾಯಗಳನ್ನು ರೂಪಿಸುವ ಕಾರ್ಯವನ್ನು ನಿರ್ವಹಿಸುತ್ತವೆ. ಬಿತ್ತಿ ಪತ್ರಗಳು ಘೋಷಣೆಗಳು, ಮೆರವಣಿಗೆ, ಪ್ರಚಾರ, ಸಾರ್ವಜನಿಕ ಸಭೆಗಳು ಮುಂತಾದವುಗಳ ಮುಖಾಂತರ ಮತದಾರರಿಗೆ ಹಾಗೂ ಶಿಕ್ಷಕರ ಮುಖಾಂತರ ವಿದ್ಯಾರ್ಥಿಗಳಿಗೆ ರಾಜಕೀಯ ನೀತಿ ನಿರ್ಧಾರಗಳ ಬಗ್ಗೆ ಹಾಗೂ ರಾಜಕೀಯ ಶಿಕ್ಷಣದ ಬಗ್ಗೆ ಮಾರ್ಗದರ್ಶನ ನೀಡುತ್ತದೆ. ಈ ಎಲ್ಲ ಚಟುವಟಿಕೆಗಳಲ್ಲಿ ವಿದ್ಯಾರ್ಥಿಗಳು ಅತ್ಯಂತ ಆಸಕ್ತಿಯಿಂದ ಭಾಗವಹಿಸುತ್ತಾರೆ. ಇದು ಮುಂದೆ ರಾಜಕೀಯ ವ್ಯವಸ್ಥೆಯ ಬಗ್ಗೆ ಸ್ಪಷ್ಟ ನಿಲುವುಗಳನ್ನು ಹೊಂದಲು ವಿದ್ಯಾರ್ಥಿಗಳಿಗೆ ಅನುಕೂಲವಾಗುತ್ತವೆ.

ಸಾಮಾನ್ಯ ಸಂದರ್ಭಗಳಲ್ಲಿ ಪಕ್ಷದ ನಾಯಕರು ಮತ್ತು ಶಾಸಕಾಂಗದ ಸದಸ್ಯರು ತಮ್ಮ ಕಾರ್ಯಕ್ರಮಗಳನ್ನು ಹಾಗೂ ಧೋರಣೆಗಳನ್ನು ಪ್ರಜೆಗಳಿಗೆ ತಿಳಿಸಿ ಮನವೊಲಿಸಲು ಪ್ರಯತ್ನಿಸುತ್ತಾರೆ. ಪಕ್ಷದ ಸಭೆಗಳನ್ನು ಆಯೋಜನೆ ಮಾಡುವುದರ ಮುಖಾಂತರ ಜನರನ್ನು ಸಂಪರ್ಕಿಸಲು ಪ್ರಯತ್ನಿಸುತ್ತಾರೆ. ಅಷ್ಟೆ ಅಲ್ಲದೆ ಪಕ್ಷದ ಸಾಹಿತ್ಯವನ್ನು ಜನತೆಗೆ ಹಂಚುವುದರ ಮುಖಾಂತರ ಅವರು ಒಂದು ಸಿದ್ಧಾಂತಕ್ಕೆ ಕಟಿಬದ್ಧರಾಗಿರುವಂತೆ ನೋಡಿಕೊಳ್ಳಲು ಪ್ರಯತ್ನಿಸುತ್ತಾರೆ. ಆದ್ದರಿಂದ ಎಲ್ಲ ಹಂತಗಳಲ್ಲಿಯೂ ರಾಜಕೀಯ ಪಕ್ಷಗಳು ರಾಜಕೀಯ ಸಾಮಾಜೀಕರಣದ ಅತ್ಯಂತ ಪರಿಣಾಮಕಾರಿಯಾದ ನಿಯೋಗವಾಗಿದೆ. ರಾಜಕೀಯ ಪಕ್ಷಗಳು ಇಲ್ಲದೆ ಸಾರ್ವಜನಿಕ ಅಭಿಪ್ರಾಯವು ಪರಿಣಾಮಕಾರಿಯಾಗಿ ರೂಪಿಸುವುದು ತುಂಬಾ ಕಷ್ಟ ಸಾಧ್ಯ ಅದರಲ್ಲಿಯೂ ಪ್ರಜಾಪ್ರಭುತ್ವದಲ್ಲಿ ರಾಜಕೀಯ ಪಕ್ಷಗಳ ಪಾತ್ರ ಮಹತ್ತರವಾದುದು. ಇವುಗಳು ಪ್ರಜಾಪ್ರಭುತ್ವದ ಬೆನ್ನೆಲುಬುಗಳಿದ್ದಂತೆ. ಹಲವಾರು ವ್ಯಕ್ತಿಗಳು ಒಟ್ಟಿಗೆ ಸೇರಿ ತಮ್ಮದೆಯಾದ ರಾಜಕೀಯ ತತ್ವಗಳನ್ನು ಅಳವಡಿಸಿಕೊಂಡು ಚುಣಾವಣೆಯಲ್ಲಿ ಸ್ಪರ್ಧಿಸಿ ರಾಜಕೀಯ ಅಧಿಕಾರವನ್ನು ಪಡೆಯಲು ಪ್ರಯತ್ನಿಸುವ ಗುಂಪಿಗೆ ರಾಜಕೀಯ ಪಕ್ಷವೆಂದು ಕರೆಯಬಹುದು. ಎಡ್ಮಂಡ್ ಬರ್ಕ್‌ರವರು ಕೆಲವು ತತ್ವಗಳ ಆಧಾರದ ಮೇಲೆ ರಾಷ್ಟ್ರೀಯ ಹಿತಾಸಕ್ತಿಗಳನ್ನು ಸಂಯುಕ್ತ ಪ್ರಯತ್ನಗಳಿಂದ ವೃದ್ಧಿಗೊಳಿಸಲು ಒಟ್ಟಾಗಿ ಸೇರುವ ಅನೇಕ ವ್ಯಕ್ತಿಗಳ ಸಂಘಟನೆಯೇ ರಾಜಕೀಯ ಪಕ್ಷ ಎಂದು ಅಭಿಪ್ರಾಯ ಪಟ್ಟಿದ್ದಾರೆ. ಮುಂದು ವರಿದು ರಾಜಕೀಯ ಪಕ್ಷಗಳ ಪ್ರಮುಖ ಕರ್ತವ್ಯಗಳನ್ನು ಈ ರೀತಿಯಾಗಿ ಗುರುತಿಸಿದ್ದಾರೆ. 1. ರಾಜಕೀಯ ಸಾಮಾಜಿಕರಣ 2. ಹಿತಾಸಕ್ತಿಗಳ ಕ್ರೋಢಿಕರಣ 3. ಹಿತಾಸಕ್ತಿಗಳ ಸ್ಪಷ್ಟಿಕರಣ 4. ರಾಜಕೀಯ ಸಂಪರ್ಕ ಮತ್ತು 5. ಸಂಘಟನೆ.

ಪಾಲ್ ಆರ್. ಬ್ರಾಸ್ ಹೇಳುವಂತೆ ಆಧುನಿಕರಣ ಮತ್ತು ರಾಜಕೀಯ ಬೆಳವಣಿಗೆ ದಿಕ್ಕಿನಲ್ಲಿ ಸಾಗುತ್ತಿರುವ ಸಾಂಪ್ರದಾಂಯಿಕ ಸಮಾಜಗಳಲ್ಲಿ ಸುಭದ್ರ ಸರಕಾರವನ್ನು ನೀಡುವ ಹಾಗೂ ಪ್ರಜೆಗಳನ್ನು ರಾಜಕೀಯ ಪ್ರಕ್ರಿಯೆಯಲ್ಲಿ ತೊಡಗಿಸುವ ಎರಡು ಮುಖ್ಯ ಕರ್ತವ್ಯಗಳನ್ನು ರಾಜಕೀಯ ಪಕ್ಷಗಳು ಹೊಂದಿವೆ ಎಂದು ಹೇಳಿದ್ದಾರೆ. ಒಟ್ಟಿನಲ್ಲಿ ರಾಜಕೀಯ ಪಕ್ಷಗಳು ರಾಜಕೀಯ ಸಾಮಾಜೀಕರಣದ ಪ್ರಮುಖ ನಿಯೋಗವಾಗಿದ್ದು ಯುವಕರಲ್ಲಿ ಹಾಗೂ ವಿದ್ಯಾರ್ಥಿಗಳಲ್ಲಿ ರಾಜಕೀಯ ಅಭಿಪ್ರಾಯವನ್ನು ರೂಪಿಸುವ ಪ್ರಮುಖವಾದ ಕಾರ್ಯವನ್ನು ನಿರ್ವಹಿಸುತ್ತದೆ.

ಸಮೂಹ ಮಾಧ್ಯಮಗಳು : ವರ್ತಮಾನ ಪತ್ರಿಕೆಗಳು ರಾಜಕೀಯ ಆರ್ಥಿಕ ಸಾಮಾಜಿಕ ಮಹತ್ವದ ವಿಷಯಗಳಿಗೆ ಸಂಬಂಧಿಸಿದ ಮಾಹಿತಿಯನ್ನು ನೀಡುವುದಲ್ಲದೆ ಅವುಗಳಿಗೆ ಸಂಬಂಧಿಸಿದ ಚರ್ಚೆಗಳನ್ನು ಒಳಗೊಂಡಿರುತ್ತವೆ. ಪತ್ರಿಕೆಯು ಸರಕಾರದ ನೀತಿ ಹಾಗೂ ಆಡಳಿತ ಶೈಲಿಯನ್ನು ವಿಮರ್ಶೆಗೆ ಒಳಪಡಿಸುತ್ತವೆ. ಪತ್ರಿಕೆಗಳು ಜ್ವಲಂತ ಸಮಸ್ಯೆಗಳ

ಮೇಲೆ ಬೆಳಕು ಚಲ್ಲುತ್ತವೆ. ಪತ್ರಿಕೆಗಳು ಸಾರ್ವಜನಿಕ ಮಹತ್ವ ಪಡೆದ ವಿಷಯಗಳಿಗೆ ಸಂಬಂಧಿಸಿದ ಚರ್ಚೆ ಹಾಗೂ ಸಂಪಾದಕೀಯಗಳನ್ನು ಒಳಗೊಂಡಿರುತ್ತವೆ. ಈ ಚರ್ಚೆ ಹಾಗೂ ಸಂಪಾದಕೀಯಗಳು ವ್ಯಕ್ತಿಯ ಅಭಿಪ್ರಾಯಗಳನ್ನು ರೂಪಿಸುವಲ್ಲಿ ಗಣನೀಯ ಪಾತ್ರವನ್ನು ವಹಿಸುತ್ತದೆ.

ಇಂದಿರಾ ಅವರು ತಮ್ಮ ಲೇಖನದಲ್ಲಿ ಹೇಳಿದ ಹಾಗೆ " ಆಧುನಿಕತೆ–ನಾಗರಿಕತೆ–ವೈಜ್ಞಾನಿಕತೆ–ತಾಂತ್ರಿಕತೆ ಬೆಳೆದಂತೆ ವ್ಯಕ್ತಿ–ವ್ಯಕ್ತಿ ಮತ್ತು ವ್ಯಕ್ತಿ–ಸಮಾಜದ ನಡುವಣ ಸಂಪರ್ಕದ ರೀತಿಯೂ ಬದಲಾಗುತ್ತಾ ಬೆಳೆಯುತ್ತಾ ಸಾಗುತ್ತಿದೆ. ಸನ್ನೆ–ಸಂಕೇತ–ಭಾಷೆ ಹೀಗೆ ಸಾಗಿ ಬಂದ ಸಂಪರ್ಕ ಇಂದು ಮಾಧ್ಯಮವಾಗಿ ರೂಪುಗೊಂಡು ವೈವಿಧ್ಯಮಯವಾಗಿ ಬೆಳೆದು ನಿಂತಿದೆ. ಹತ್ತು ಹಲವು ರೀತಿಯಲ್ಲಿ ಬೆಳೆದು ನಿಂತ ಈ ಸಮೂಹ ಮಾಧ್ಯಮಗಳ ಉದ್ದೇಶ ಒಂದೇ ಆದರೂ ಅವುಗಳ ರೀತಿ ಮಾತ್ರ ಬೇರೆ ಬೇರೆ"

ನಿರಕ್ಷರತೆ ಹೆಚ್ಚಾಗಿರುವ ಭಾರತದಂತಹ ರಾಷ್ಟ್ರಗಳಲ್ಲಿ ಚಲನಚಿತ್ರ, ರೇಡಿಯೋ ಹಾಗೂ ದೂರದರ್ಶನಗಳು ರಾಜಕೀಯ ಸಾಮಾಜೀಕರಣ ಪ್ರಕ್ರಿಯೆಯಲ್ಲಿ ಪತ್ರಿಕೆಗಳಿಗಿಂತಲೂ ಪ್ರಮುಖ ಪಾತ್ರವನ್ನು ವಹಿಸುತ್ತವೆ. ಬಾನುಲಿ ಅಥವಾ ರೇಡಿಯೊ 20ನೇ ಶತಮಾನದ ಒಂದು ಮಹತ್ವದ ಆವಿಷ್ಕಾರ ಮತ್ತು ಸಂವಹನ ಕ್ಷೇತ್ರದಲ್ಲಿ ಘಟಿಸಿದ ಮಹಾನ್ ಕ್ರಾಂತಿ. ಸರ್ವವ್ಯಾಪಿಯಾಗಿರುವ ಈ ಮಾಧ್ಯಮ ಕ್ಷಣಾರ್ಧದಲ್ಲಿ ಅಪಾರ ಜನಸಂಖ್ಯೆಯನ್ನು ತಲುಪಬಲ್ಲ ಸಾಮರ್ಥ್ಯ ಪಡೆದಿದೆ. ಸ್ಥಳಿಯ ಪ್ರಸ್ತುತತೆ, ಕಡಿಮೆ ವೆಚ್ಚ, ಸರಳತೆಯಂತಹ ಈ ವಿಶಿಷ್ಟ ಗುಣಗಳಿಂದಾಗಿ ಇದು ವಿಶೇಷ ಸ್ಥಾನ ಪಡೆದಿದೆ. ಶಿಕ್ಷಣ, ಮಾಹಿತಿ, ಮನೋರಂಜನೆ ಇವನ್ನು ನೀಡುವ ಗುರುತರ ಜವಾಬ್ದಾರಿ ಹೊಂದಿರುವ ರೇಡಿಯೋ ಇಂದಿಗೂ ಸಾರ್ವಜನಿಕ ಪ್ರಸಾರಕ್ಕೆ ಮೀಸಲಾದ ಒಂದು ಪ್ರಮುಖ ಬೃಹತ ಜಾಲವಾಗಿದೆ. ನಮ್ಮ ದೇಶದ ಭೌಗೋಳಿಕ–ಸಾಮಾಜಿಕ–ಆರ್ಥಿಕ–ಸಾಂಸ್ಕೃತಿಕ ಹಿನ್ನಲೆಯಲ್ಲಿ ಬಾನುಲಿ ಜನಸಾಮನ್ಯರ ಮಿತ್ರ, ಒಡನಾಡಿ, ಮತ್ತು ಹಿತಚಿಂತಕ. ಇಂತಹ ಬಾನುಲಿಯನ್ನು ನಮ್ಮ ಸುಗಮ ಜೀವನ ನಿರ್ವಹಣೆಗೆ, ವ್ಯಕ್ತಿತ್ವ ವಿಕಾಸಕ್ಕೆ ಜೊತೆಗೆ ರಾಷ್ಟ್ರ ನಿರ್ಮಾಣದಲ್ಲಿ ಸಂಪೂರ್ಣವಾಗಿ ಬಳಸಿಕೊಳ್ಳುವುದು ಅವಶ್ಯಕ ಮಾತ್ರವಲ್ಲ, ಅನಿವಾರ್ಯ ಕೂಡ.

ಈ ಸಮೂಹ ಮಾಧ್ಯಮಗಳು ಜನರಿಗೆ ಮಾಹಿತಿಯನ್ನು ಒದಗಿಸುತ್ತವೆ. ಅಲ್ಲದೆ ಬಹುಮುಖ್ಯ ಸಾಮಾಜಿಕ, ರಾಜಕೀಯ, ಆರ್ಥಿಕ ವಿಷಯಗಳನ್ನು ಚರ್ಚೆಗೆ ಒಳಪಡಿಸುತ್ತವೆ. ಉದಾಹರಣೆಗೆ ಲಂಕೇಶರ ಅಕ್ಕ ಕಾದಂಬರಿ ಆಧಾರಿತ ದೇವಿರಿ ಚಲನಚಿತ್ರವು ಭಾಷಾ ಚಳುವಳಿ, ದಲಿತ ಚಳುವಳಿ ಹಾಗೂ ಕೊಳಗೇರಿ ನಿವಾಸಿಗಳ ಬದುಕಿನ ಬಗೆಗೆ ಸಾರ್ವಜನಿಕ ಗಮನವನ್ನು ತೀವ್ರವಾಗಿ ಸೆಳೆದಿದೆ. ಕಾಸರವಳ್ಳಿ ನಿರ್ದೇಶನದ ದ್ವೀಪ ಚಲನಚಿತ್ರವು ಯೋಜನಾ ನಿರ್ವಸತಿಗರ ಸಮಸ್ಯೆಗಳನ್ನು ಜನರ ಮುಂದೆ ಇಡುವಲ್ಲಿ ಯಶಸ್ವಿಯಾಗಿದೆ. ಮತದಾನ

ಚಿತ್ರವು ಇಂದಿನ ಚುಣಾವಣಾ ವ್ಯವಸ್ಥೆ ಮೇಲೆ ಬೆಳಕು ಚೆಲ್ಲುತ್ತದೆ. ಕಳೆದ ಎರಡು ದಶಕಗಳಲ್ಲಿ ಮಾಹಿತಿ ತಂತ್ರಜ್ಞಾನದಲ್ಲಾದ ಅದ್ಭುತ ಪ್ರಗತಿಯಿಂದಾಗಿ ಮಾಧ್ಯಮ ಕ್ಷೇತ್ರದಲ್ಲಿ ಮಿಂಚಿನಂತಹ ಬದಲಾವಣೆಗಳಾಗಿವೆ. ಜಾಗತಿಕ ಮಟ್ಟದಲ್ಲಿ ಕ್ಷಿಪ್ರ ಸಂವಹನ ಸಾದ್ಯವಾಗಿರುವ ಕಾರಣ ಸಮೂಹ ಮಾಧ್ಯಮಗಳು ರಾಷ್ಟ್ರ-ಭಾಷೆಗಳನ್ನು ಮೀರಿ ಜನರ ಮೇಲೆ ಗಾಢವಾದ ಪರಿಣಾಮವನ್ನು ಬೀರುತ್ತಿವೆ. ಇದರಿಂದ ಸಾರ್ವಜನಿಕ ನೀತಿ, ಖಾಸಗಿ ಧೋರಣೆಗಳು ಜನರ ನಡವಳಿಕೆ ಎಲ್ಲದರಲ್ಲೂ ಮಹತ್ತರ ಬದಲಾವಣೆ ಕಂಡುಬರುತ್ತಿದೆ.

ಸಮೂಹ ಮಾಧ್ಯಮವು ರೇಡಿಯೋ, ಟೆಲಿವ್ಹಿಜನ್, ಚಲನಚಿತ್ರ, ವರ್ತಮಾನ ಪತ್ರಿಕೆಗಳು ಮತ್ತು ನಿಯತಕಾಲಿಕೆಗಳನ್ನು ಒಳಗೊಂಡಿದೆ. ಸಮೂಹ ಮಾಧ್ಯಮವನ್ನು ರಾಜಕೀಯ ಸಾಮಾಜೀಕರಣದ ಅತ್ಯಂತ ಮಹತ್ವದಾದ ನಿಯೋಗವೆಂದು ಪರಿಗಣಿಸಲಾಗಿದೆ. ಹೊಸ ಮಾಹಿತಿಗಳನ್ನು ಹೊಸ ವಿಚಾರಗಳನ್ನು ಹೊಸ ನಡತೆ ಮತ್ತು ಆಶಯಗಳನ್ನು, ಹೆಚ್ಚಿನ ಜ್ಞಾನವನ್ನು ಪಡೆಯಲು ಸಹಾಯ ಮಾಡುವುದು ಮತ್ತು ಅಭಿಪ್ರಾಯವನ್ನು ರೂಪಿಸುವುದು ಸಮೂಹ ಮಾಧ್ಯಮ ಪ್ರಮುಖ ಕಾರ್ಯವಾಗಿದೆ.

ಶಿಕ್ಷಣ ಮತ್ತು ಸಮೂಹ ಮಾಧ್ಯಮಗಳು ಜ್ಞಾನ ಸಂಪಾದಿಸುವ ಮತ್ತು ರಾಜಕೀಯ ಸಾಮಾಜೀಕರಣ ನಿರ್ದರಿಸುವ ಪ್ರಮುಖ ನಿಯೋಗಗಳಾಗಿವೆ. ಬಹುಸಂಖ್ಯಾತ ಜನರಿಗೆ ಕಡಿಮೆ ಖರ್ಚಿನಲ್ಲಿ ಮಾಹಿತಿಯನ್ನು ಸಮೂಹ ಮಾಧ್ಯಮ ಒದಗಿಸುತ್ತದೆ. ಜಗತ್ತಿನ ಬಹಳಷ್ಟು ಜನರು ಸಮೂಹ ಮಾಧ್ಯಮಗಳಲ್ಲಿ ಆಗುವ ಬದಲಾವಣೆಯ ಕಡೆಗೆ ಹೆಚ್ಚಿನ ಗಮನ ನೀಡುತ್ತಿರುವುದು ಸಮೂಹ ಮಾಧ್ಯಮಗಳ ಮಹತ್ವ ಎಷ್ಟೆಂಬುದಕ್ಕೆ ಸಾಕ್ಷಿಯಾಗಿದೆ. ಸಮೂಹ ಮಾಧ್ಯಮಗಳ ಪ್ರಭಾವ ವ್ಯಕ್ತಿಗಳ ಮೇಲೆ ಹೇಗೆ ಪ್ರಭಾವ ಬೀರುತ್ತಿವೆ ಎನ್ನುವದರ ಮೇಲೆ ಇಂದು ಸಾಕಷ್ಟು ಸಂಶೋಧನೆಗಳು ನಡೆಯುತ್ತಿವೆ.

ಸಮೂಹ ಮಾಧ್ಯಮದ ಪ್ರಭಾವ ವ್ಯಕ್ತಿಯಿಂದ ವ್ಯಕ್ತಿಗೆ ಬಿನ್ನವಾಗಿರುತ್ತದೆ. ಏಕೆಂದರೆ ಸಮಾಜೋ ಆರ್ಥಿಕ ಹಿನ್ನೆಲೆ, ಶಿಕ್ಷಣ, ಉದ್ಯೋಗ, ಅನುಭವ, ನಂಬಿಕೆ ಮತ್ತು ದೃಷ್ಟಿಕೋನಗಳು ಕೂಡಾ ವ್ಯಕ್ತಿಯಿಂದ ವ್ಯಕ್ತಿಗೆ ಭಿನ್ನವಾಗಿರುವದೇ ಇದಕ್ಕೆ ಕಾರಣವಾಗಿದೆ. ಭಾರತದಲ್ಲಿ 1970ರ ಕ್ಕಿಂತ ಮುಂದೆ ರಾಜ್ಯಶಾಸ್ತ್ರಜ್ಞರು ಮತ್ತು ಸಂಶೋಧಕರು ಸಮೂಹ ಮಾಧ್ಯವನ್ನು ರಾಜಕೀಯ ಸಾಮಾಜಿಕರಣದ ಪ್ರಮುಖ ನಿಯೋಗವೆಂದು ಪರಿಗಣಿಸಿರಲಿಲ್ಲ. ಇದಕ್ಕೆ ಹಲವಾರು ಕಾರಣಗಳು ಇದ್ದವು. ಭಾರತದಲ್ಲಿ ಮಾಹಿತಿ ತಂತ್ರಜ್ಞಾನದ ಕ್ರಾಂತಿಯಾಗದೆ ಇರುವುದು ಇದಕ್ಕೆ ಪ್ರಮುಖ ಕಾರಣವಾಗಿತ್ತು. ಆದರೆ ಇತ್ತಿಚೀನ ಸಂಶೋಧನೆಗಳು ಸಮೂಹ ಮಾಧ್ಯಮ ರಾಜಕೀಯ ಸಾಮಾಜೀಕರಣದ ಅತ್ಯಂತ ಪ್ರಮುಖವಾದ ಅಂಶಗಳು ಎಂದು ಹೇಳುತ್ತಿವೆ. ಸಮೂಹ ಮಾಧ್ಯಮಗಳು ರಾಜಕೀಯ ಸಾಮಾಜಿಕ ಆರ್ಥಿಕ ಹಾಗೂ ಸಾಂಸ್ಕೃತಿಕ ವಿಷಯಗಳನ್ನು ವಿಸ್ತ್ರತವಾಗಿ ಚರ್ಚಿಸುವುದರಿಂದ ವಿದ್ಯಾರ್ಥಿಗಳು ಇವುಗಳಿಂದ

ಪ್ರಭಾವಿತರಾಗುವುದು ಸಹಜ. ಯುವಜನಾಂಗ ಹಿಂದಿಗಿಂತ ಇಂದು ಸಮೂಹ ಮಾಧ್ಯಮ ಪ್ರಭಾವಕ್ಕೆ ಒಳಗಾಗುತ್ತಾರೆ. ಸಮೂಹ ಮಾಧ್ಯಮಗಳು ಯುವಕರಿಗೆ ರಾಜಕೀಯ ಮಾಹಿತಿಯನ್ನು ನೀಡುವ ಪ್ರಾಥಮಿಕ ಸೆಲೆಗಳಾಗಿವೆ. ಪತ್ರಿಕೆಗಳು, ರೇಡಿಯೋ, ದೂರದರ್ಶನ ಮುಂತಾದವುಗಳು ಕೇವಲ ಸಮೂಹ ಮಾಧ್ಯಮಗಳ ಸಾಧನಗಳಾಗಿರದೇ ಜನತೆಗೆ ರಾಜಕೀಯ ಶಿಕ್ಷಣ ನೀಡುವ ಪ್ರಮುಖ ಸಾಧನಗಳಾಗಿವೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಸಾರ್ವಜನಿಕ ಅಭಿಪ್ರಾಯವನ್ನು ರೂಪಿಸುವ ಕೆಲಸವನ್ನು ಇವುಗಳು ನಿರ್ವಹಿಸುತ್ತವೆ.

ಮಲ್ಲಿಕಾರ್ಜುನ ಗುಮ್ಮಗೋಳ ತಮ್ಮ ಲೇಖನದಲ್ಲಿ ಹೇಳಿದ ಹಾಗೆ "ಮಾಹಿತಿ ಮತ್ತು ಸಂಪರ್ಕ ತಂತ್ರಜ್ಞಾನ ಕ್ಷೇತ್ರಗಳಲ್ಲಿ ಉಂಟಾದ ಅಭೂತಪೂರ್ವ ಕ್ರಾಂತಿಯಿಂದಾಗಿ ಪ್ರಜಾಪ್ರಭುತ್ವ ಮತ್ತು ಜನಾಭಿಪ್ರಾಯ ನಿರೂಪಣೆಯ ಪರಮೋಚ್ಚ ಸಾಧನವಾದ ಮಾಧ್ಯಮಗಳೂ ಸಹ ಜಾಗತೀಕರಣದ ಪ್ರಕ್ರಿಯೆಗೆ ಒಳಪಟ್ಟಿವೆ. ಆರ್ಥಿಕ, ಸಾಮಾಜಿಕ, ರಾಜಕೀಯ ಕ್ಷೇತ್ರದಲ್ಲಿ ಜಾಗತೀಕರಣ ಮಾಡಿದ ಪ್ರಭಾವ ಮಾಧ್ಯಮ ತಂತ್ರಜ್ಞಾನದ ಮೇಲೂ ಮಾಡಿದೆ. ಹೇಗೆ ಜಾಗತೀಕರಣದ ಈ ಸನ್ನಿವೇಶದಲ್ಲಿ ರಾಜಕೀಯ ಸಿದ್ಧಾಂತವು ಕಾಲಘಟ್ಟಗಳಲ್ಲಿ ಹಲವಾರು ಪ್ರಭಾವಗಳಿಗೆ ಒಳಗಾಗುತ್ತ ನಡೆದಿದೆ. ಅದರಲ್ಲೂ ಸಂಸದೀಯ ಪ್ರಜಾಪ್ರಭುತ್ವವು ದೇಶ, ಕಾಲ ಮತ್ತು ಸನ್ನಿವೇಶಗಳಿಗೆ ಅನುಗುಣವಾಗಿ ರೂಪಾಂತರ ಹೊಂದುತ್ತ ಬಂದಿದೆಯೋ, ಹಾಗೆಯೇ ಇಂಥ ರೂಪಾಂತರ ಮತ್ತು ಸ್ಥಿತ್ಯಂತರಗಳು ಪ್ರತಿಫಲಿಸುವ ವೇದಿಕೆಯಾಗಿ ಮಾಧ್ಯಮ ಜನಸಾಮನ್ಯರಿಗೆ ಮಾಹಿತಿ ಒಸಗಿಸುವುದರೊಂದಿಗೆ ಪ್ರಜಾಪ್ರಭುತ್ವದ ಸಂರಚನೆಗಳ ಸಂವರ್ದನೆಗೂ ಕೊಡುಗೆ ನೀಡುತ್ತಿದೆ. ಮಾಧ್ಯಮ ತನ್ನ ರಚನಾತ್ಮಕ ಬದಲಾವಣೆಯೊಂದಿಗೆ ಕ್ರಿಯಾತ್ಮಕ ಬದಲಾವಣೆಗೂ ಒಳಪಡುತ್ತಿದೆ. ಆದರೆ ಈ ಜಾಗತೀಕರಣದ ದುಷ್ಪರಿಣಾಮದ ಛಾಯೆ ಅದರ ಮೇಲೂ ಆಗಿದೆ. ಪಶ್ಚಿಮ ಮಾದರಿಯ ಸೈದ್ಧಾಂತಿಕ ಹೊರೆಯನ್ನು ಹೊತ್ತುಕೊಂಡು ಅದು ನಲುಗುತ್ತಿದೆ. ಬಹು ಸಂಸ್ಕೃತಿಯ ಈ ದೇಶದ ನೆಲಮೂಲ ಸಿದ್ಧಾಂತಗಳನ್ನು ಮಾಧ್ಯಮ ಸೃಷ್ಟಿಸಿಕೊಳ್ಳಬೇಕಾಗಿದೆ."

ಪ್ರಜಾಪ್ರಭುತ್ವದ ಮೂಲತತ್ವಗಳಾದ ಸ್ವಾತಂತ್ರ್ಯ, ಸಮಾನತೆ ಮತ್ತು ನ್ಯಾಯ ಇವುಗಳನ್ನು ಎತ್ತಿ ಹಿಡಿಯುವಲ್ಲಿ ಮತ್ತು ಅವುಗಳ ಉಲ್ಲಂಘನೆಯಾದ ಸಂದರ್ಭದಲ್ಲಿ ಮಾಧ್ಯಮದ ಪ್ರತಿಕ್ರಿಯೆ ಅತ್ಯಂತ ಗಮನಾರ್ಹವಾದುದು. ಪತ್ರಿಕಾ ಸ್ವಾತಂತ್ರ್ಯವು ಜನರ ಹಕ್ಕುಗಳನ್ನು ರಕ್ಷಿಸುವ, ರೂಪಿಸುವ ಹಾಗೂ ದಿಗ್ದರ್ಶಿಸುವ ಪ್ರಮುಖ ಅಂಶ ಎಂದು ಡಾ. ಬಿ.ಕೆ. ರವಿ ಅವರು ಹೇಳಿದ ಮಾತು ಅದಕ್ಕೆ ಪೂರಕವಾಗಿದೆ. ಆದರೆ ಸದ್ಯದ ಮಾಧ್ಯಮದ ಹಾದಿಯನ್ನು ಅವಲೋಕಿಸಿದರೆ ಅದು ಪ್ರಜಾಸತ್ತಾತ್ಮಕ ಹೋರಾಟಕ್ಕಿಂತ ಹೆಚ್ಚಾಗಿ ಲಾಭದಾಯಕ ಉದ್ಯಮ ಸ್ಥಾಪನೆಯ ದಿಕ್ಕಿನೆಡೆಗೆ ಓಡುತ್ತಿದೆ.

ಪ್ರಜಾಪ್ರಭುತ್ವದ ಆಧಾರಸ್ತಂಭಗಳಾದ ಪತ್ರಿಕೆಗಳು ಮತ್ತು ಪ್ರಜಾತಾಂತ್ರಿಕ ಸಂರಚನೆಗಳು ರಾಷ್ಟ್ರದ ನರಮಂಡಲಗಳಾಗಿವೆ. ಇವು ಜನತೆಯ ಸಹಭಾಗಿತ್ವದಿಂದಲೇ ಜೀವಂತಿಕೆಯನ್ನು ಪಡೆಯುತ್ತವೆ. ಇವುಗಳಿಂದಲೇ ಸಕ್ರಿಯಗೊಳ್ಳುವ ಪ್ರಜಾಪ್ರಭುತ್ವದ ಪ್ರಕ್ರಿಯೆವು ಕೇವಲ ಚುನಾವಣೆಯಲ್ಲಿ ಮತದಾನ ಮಾಡುವುದಕ್ಕೆ ಮತ್ತು ಸ್ಪರ್ಧಿಸುವದಕ್ಕೆ ಮಾತ್ರ ಸೀಮಿತವಾಗಿಲ್ಲ. ಪ್ರತಿನಿತ್ಯದ ರಾಜಕೀಯ ಆಗುಹೋಗುಗಳನ್ನು ಅವಲೋಕಿಸುವ ಹಾಗೂ ಜವಾಬ್ದಾರಿಯುತ ಪೌರ ಕರ್ತವ್ಯಗಳನ್ನು ನಿಭಾಯಿಸುವ ಹಕ್ಕನ್ನು ದೃಡಪಡಿಸುವ ಕಾರ್ಯದಲ್ಲಿ ನಿರತವಾಗಿರುವ ಪತ್ರಿಕೆಗಳು ಪ್ರಜಾಪ್ರಭುತ್ವದ ಸಂರಚನಾತ್ಮಕ ಪ್ರಕ್ರಿಯೆಯಲ್ಲಿ ಪ್ರಚೋದನಾತ್ಮಕ ಮತ್ತು ಸ್ಪಂದನಾತ್ಮಕ ಅಂಶಗಳಾಗಿವೆ. ಆದ್ದರಿಂದ ಪ್ರಜಾಪ್ರಭುತ್ವದ ಸಂರಚನೆಗಳನ್ನು ಪತ್ರಿಕೆಗಳ ದೃಷ್ಟಿಕೋನದಿಂದಲೂ ಮತ್ತು ಪತ್ರಿಕೆಗಳ ಪಾತ್ರವನ್ನು ಪ್ರಜಾಪ್ರಭುತ್ವದ ಸಂರಚನೆಗಳ ಸಂವರ್ಧನೆಯ ದೃಷ್ಟಿಕೋನದಿಂದಲೂ ಅವಲೋಕಿಸಬೇಕಾಗಿದೆ.

ಕೋಷ್ಟಕ–4.1 : ನಿಮ್ಮ ಪ್ರಕಾರ ವ್ಯಕ್ತಿಯಲ್ಲಿ ಸಾಮಾಜಿಕ/ ಆರ್ಥಿಕ / ರಾಜಕೀಯ ಸಾಮಾಜೀಕರಣದ ಪ್ರಕ್ರಿಯೆಗೆ ನೆರವಾಗುವ ಸಂಸ್ಥೆಗಳು ಯಾವುದು?

ಕ್ರ.ಸಂ		ಸಂಖ್ಯೆ	ಶೇಕಡ
1	ಕುಟುಂಬ	50	25.00
2	ಧಾರ್ಮಿಕ ಕೇಂದ್ರ	21	11.00
3	ಸಹಪಾಠಿಗಳು	37	19.00
4	ಶಿಕ್ಷಣ ಸಂಸ್ಥೆ	59	29.00
5	ಸಮಾಜ	33	16.00
	ಒಟ್ಟು	**200**	**100.00**

ಕೋಷ್ಟಕ 4.1 ವ್ಯಕ್ತಿಯ ಮೇಲೆ ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯ ಸಾಮಾಜೀಕರಣದ ಪ್ರಕ್ರಿಯೆಗೆ ಪ್ರಭಾವ ಬೀರುವ ಸಂಸ್ಥೆಗಳ ಕುರಿತಾದ ಅಭಿಪ್ರಾಯವನ್ನು ಹೇಳುತ್ತದೆ. ಇದು ವಿದ್ಯಾರ್ಥಿಗಳ ರಾಜಕೀಯ ಪ್ರಜ್ಞೆ ಹಾಗೂ ರಾಜಕೀಯ ಸಾಮಾಜೀಕರಣದ ಕುರಿತದ್ದಾಗಿದೆ. ಶೇ. 29 ರಷ್ಟು (59) ವಿದ್ಯಾರ್ಥಿಗಳು ಶಿಕ್ಷಣ ಸಂಸ್ಥೆಗಳು ಪ್ರಭಾವ ಬೀರಿದರೆ ಶೇ. 25 (50) ವಿದ್ಯಾರ್ಥಿಗಳು ಕುಟುಂಬ ಪ್ರಭಾವ ಬೀರುತ್ತಿದೆ ಎಂದು ಹೇಳುತ್ತಾರೆ. ಹಾಗೆಯೇ ಶೇ 19 (37) ಸಹಪಾಠಿಗಳು, ಶೇ 16 (33) ಸುತ್ತಲಿನ ಸಮಾಜ ಹಾಗೂ ಶೇ. 11 (21) ಧಾರ್ಮಿಕ ಕೇಂದ್ರಗಳು ಹೆಚ್ಚಿನ ಪ್ರಭಾವ ಬೀರುತ್ತಿವೆ ಎಂದು ಹೇಳುತ್ತಾರೆ.

ಕೋಷ್ಟಕ–4.2: ನೀವು ಅಭಿಪ್ರಾಯಿಸುವಂತೆ, ಶೈಕ್ಷಣಿಕ ವ್ಯವಸ್ಥೆಗಳು ಯಾವ ತೆರನಾದ ಮೂಲಭೂತ ರಾಜಕೀಯ ಸಾಮಾಜೀಕರಣವನ್ನು ಮಾಡಬಲ್ಲವು?

ಕ್ರ.ಸಂ		ಸಂಖ್ಯೆ	ಶೇಕಡ
1	ವಯಸ್ಸು ಆಧರಿತ ವಿಚಾರಗಳು	28	14.00
2	ಲಿಂಗಾಧಾರಿತ ವಿಚಾರಗಳು	7	4.00
3	ಜಾತಿಯಾಧಾರಿತ ವಿಚಾರಗಳು	13	7.00
4	ವರ್ಗಾಧಾರಿತ ವಿಚಾರಗಳು	18	9.00
5	ಅಲ್ಪ ಸಂಖ್ಯಾತ/ಬಹು ಸಂಖ್ಯಾತ+ಮುಂದುವರಿದ/ಹಿಂದುಳಿದ ಭೌಧಿಕ ವಿಚಾರ +ಸಾಂಪ್ರದಾಯಿಕ /ಆಧುನಿಕ+ಅಧಿಕಾರಿಶಾಹಿ /ಪ್ರಜಾಪ್ರಭುತ್ವ ವಿಚಾರಗಳು +ಮೂಲಭೂತ ವಿಚಾರಗಳು	134	66.00
ಒಟ್ಟು		200	100.00

ಕೋಷ್ಟಕ 4.2 ಹೇಳುವಂತೆ, ಶೈಕ್ಷಣಿಕ ವ್ಯವಸ್ಥೆಗಳು ಯಾವ ತೆರನಾಗಿ ರಾಜಕೀಯ ಸಾಮಾಜೀಕರಣವನ್ನು ಮಾಡಬಲ್ಲವು ಎಂದು ವಿದ್ಯಾರ್ಥಿಗಳನ್ನು ಕೇಳಲಾಗಿತ್ತು. ಶೇ. 66 (134) ಅಲ್ಪ ಸಂಖ್ಯಾತ/ಬಹು ಸಂಖ್ಯಾತ, ಮುಂದುವರಿದ/ಹಿಂದುಳಿದ ಬೌದ್ಧಿಕ ವಿಚಾರ, ಸಾಂಪ್ರದಾಯಿಕ/ಆಧುನಿಕ, ಅಧಿಕಾರಿಶಾಹಿ/ಪ್ರಜಾಪ್ರಭುತ್ವ ವಿಚಾರಗಳು, ಮೂಲಭೂತ ವಿಚಾರಗಳು ಇತ್ಯಾದಿಗಳ ಮುಖೇನ ಈ ಪ್ರಕ್ರಿಯೆಯನ್ನು ಮಾಡಬಹುದು ಎಂದು ಹೇಳುತ್ತಾರೆ. ಹಾಗೆಯೇ ಶೇ 14 (28) ವಯಸ್ಸು ಆಧಾರಿತ ವಿಷಯಗಳಲ್ಲಿ, ಶೇ. 9 (18) ವರ್ಗಾಧಾರಿತ, ಶೇ. 7 (13) ಜಾತಿಯಾಧಾರಿತ, ಶೇ. 4 (7) ಲಿಂಗಾಧಾರಿತ ವಿಷಯಗಳ ಆಧಾರದಲ್ಲಿ ಮೂಲಭೂತ ರಾಜಕೀಯ ಸಾಮಾಜೀಕರಣ ಪ್ರಕ್ರಿಯೆ ಒಳಗೊಳ್ಳಬಲ್ಲುದು ಎನ್ನುವುದನ್ನು ಹೇಳುತ್ತಾರೆ.

ಕೋಷ್ಟಕ-4.3 : ನಿಮ್ಮ ಪ್ರಕಾರ ರಾಜಕೀಯ ಸಾಮಾಜೀಕರಣ ಎಂದರೇನು?

ಕ್ರ.ಸಂ		ಸಂಖ್ಯೆ	ಶೇಕಡ
1	ಕುಟುಂಬ/ ಸಮಾಜ/ರಾಜಕೀಯ+ ನಾಯಕತ್ವ	15	8.00
2	ರಾಜಕೀಯ ಸಂಸ್ಕೃತಿಯ ರಕ್ಷಣೆ	97	49.00
3	ಪರಿಣಮಕಾರಿ ಆಡಳಿತದಲ್ಲಿ ಪ್ರತಿಯೊಬ್ಬ ನಾಗರಿಕನ ಅಭಿಪ್ರಾಯ	64	32.00
4	ಸಮಾಜದ ಒಳಿತಿಗಾಗಿ ದೈನಂದಿನ ಚಟುವಟಿಕೆಯಲ್ಲಿ ಮಾಡುವ ತೀರ್ಮಾನ	24	11.00
ಒಟ್ಟು		200	100.00

ವಿದ್ಯಾರ್ಥಿಗಳನ್ನು ರಾಜಕೀಯ ಸಾಮಾಜೀಕರಣದ ಕುರಿತು ಪ್ರಶ್ನೆ ಕೇಳಲಾಗಿತ್ತು. ಶೇ. 49 (97) ರಷ್ಟು ವಿದ್ಯಾರ್ಥಿಗಳು ರಾಜಕೀಯ ಸಂಸ್ಕೃತಿಯ ರಕ್ಷಣೆ, ಶೇ 32 (64) ಪರಿಣಮಕಾರಿ ಆಡಳಿತದಲ್ಲಿ ಪ್ರತಿಯೊಬ್ಬ ನಾಗರಿಕನ ಅಭಿಪ್ರಾಯ, ಶೇ 11 (24) ಸಮಾಜದ ಒಳಿತಿಗಾಗಿ ದೈನಂದಿನ ಚಟುವಟಿಕೆಯಲ್ಲಿ ಮಾಡುವ ತೀರ್ಮಾನ ಹಾಗೂ ಶೇ. 8 (15) ಕುಟುಂಬ/ ಸಮಾಜ/ರಾಜಕೀಯ, ನಾಯಕತ್ವಗಳಂತಹ ಅಂಶಗಳು ರಾಜಕೀಯ ಸಾಮಾಜೀಕರಣವನ್ನು ಬೆಂಬಲಿಸುವ ಅಂಶಗಳು ಎಂದು ಕೋಷ್ಟಕ 4.3ರಲ್ಲಿ ಹೇಳುತ್ತಾರೆ.

ಕೋಷ್ಟಕ–4.4 : ನಿಮ್ಮ ಶೈಕ್ಷಣಿಕ ವ್ಯವಸ್ಥೆಯಲ್ಲಿ ರಾಜಕೀಯ ಸಾಮಾಜೀಕರಣದ ಪ್ರಜ್ಞೆ ಹೇಗೆ ಕಂಡು ಬರುತ್ತದೆ?

ಕ್ರ.ಸಂ		ಸಂಖ್ಯೆ	ಶೇಕಡ
1	ಪಾಠ ಪುಸ್ತಕಗಳಲ್ಲಿ+ತರಗತಿಗಳಲ್ಲಿ+ಶಾಲೆಯ ಕ್ಲಬ್‌ಗಳಲ್ಲಿ +ವಿದ್ಯಾರ್ಥಿ ಚುನಾವಣೆ ಮತ್ತು ನಾಯಕತ್ವ	155	78.00
2	ಶಿಕ್ಷಕರು/ಆಡಳಿತ ವರ್ಗ ಮತ್ತು ವಿದ್ಯಾರ್ಥಿಗಳ ಚರ್ಚೆಗಳಲ್ಲಿ	45	22.00
	ಒಟ್ಟು	**200**	**100.00**

ಕೋಷ್ಟಕ 4.4 ವಿವರಿಸುವಂತೆ, ಶೇ. 78 ವಿದ್ಯಾರ್ಥಿಗಳು (155) ಪಾಠ ಪುಸ್ತಕಗಳಲ್ಲಿ, ತರಗತಿಗಳಲ್ಲಿ, ಶಾಲೆಯ ಕ್ಲಬ್‌ಗಳಲ್ಲಿ, ವಿದ್ಯಾರ್ಥಿ ಚುನಾವಣೆ ಮತ್ತು ನಾಯಕತ್ವ ಮುಖಾಂತರ ರಾಜಕೀಯ ಸಾಮಾಜೀಕರಣ ಕಂಡುಬರುತ್ತಿದೆ ಎಂದು ವಿವರಿಸಿದರೆ, ಶೇ 22 (45) ರಷ್ಟು ವಿದ್ಯಾರ್ಥಿಗಳು ಶಿಕ್ಷಕರು/ಆಡಳಿತ ವರ್ಗ ಮತ್ತು ವಿದ್ಯಾರ್ಥಿಗಳ ಚರ್ಚೆಗಳಲ್ಲಿ ಈ ಅಂಶಗಳನ್ನು ಕಾಣಬಹುದು ಎಂದು ಹೇಳುತ್ತಾರೆ.

ಕೋಷ್ಟಕ–4.5: ನಿಮ್ಮ ಕುಟುಂಬದ ಸಾಮಾಜಿಕ ಮನೋಭಾವ, ಮೌಲ್ಯಗಳ ಬದ್ಧತೆಯನ್ನು ಹೇಗೆ ಅರ್ಥೈಸುವಿರಿ?

ಕ್ರ.ಸಂ		ಸಂಖ್ಯೆ	ಶೇಕಡ
1	ತೀವ್ರಗಾಮಿ	10	5.00
2	ಉದಾರವಾದ	101	51.00
3	ಸಂಪ್ರದಾಯಶೀಲ	89	44.00
	ಒಟ್ಟು	**200**	**100.00**

ಕೋಷ್ಟಕ 4.5 ವಿದ್ಯಾರ್ಥಿಗಳ ಕುಟುಂಬದ ಮನೋಭಾವನೆಯನ್ನು ಹೇಳುತ್ತದೆ. ಶೇ. 51 ವಿದ್ಯಾರ್ಥಿಗಳ (101) ಕುಟುಂಬವು ಉದಾರವಾದವನ್ನು ಪ್ರೋತ್ಸಾಹಿಸಿದರೆ, ಶೇ. 44 (89) ಸಂಪ್ರದಾಯಶೀಲ ಕುಟುಂಬಗಳಾಗಿವೆ. ಹಾಗೆಯೇ ಶೇ. 5 (10) ಕುಟುಂಬಗಳು ತೀವ್ರಗಾಮಿ ನಿಲುವುಗಳನ್ನು ಪ್ರತಿಪಾದಿಸುತ್ತವೆ ಎನ್ನುವುದು ತಿಳಿದುಬರುತ್ತದೆ.

ಕೋಷ್ಟಕ–4.6: ವಿದ್ಯಾರ್ಥಿ ರಾಜಕೀಯದಲ್ಲಿನ ನಿಮ್ಮ ಆಸಕ್ತಿಯ ಬಗ್ಗೆ ಪಾಲಕ/ಪೋಷಕರ ಪ್ರತಿಕ್ರಿಯೆ ಏನು?

ಕ್ರ.ಸಂ		ಸಂಖ್ಯೆ	ಶೇಕಡ
1	ಸಂಪೂರ್ಣ ಪರ	40	20.00
2	ಸಂಪೂರ್ಣ ವಿರೋಧ	25	13.00
3	ತಟಸ್ಥ	56	28.00
4	ಪ್ರೋತ್ಸಾಹ	79	39.00
	ಒಟ್ಟು	**200**	**100.00**

ಕೋಷ್ಟಕ 4.6 ವಿದ್ಯಾರ್ಥಿಗಳ ಆಸಕ್ತಿಗಳ ಬಗ್ಗೆ ಪೋಷಕರ ನಿಲುವುಗಳನ್ನು ಹೇಳುತ್ತದೆ. ಶೇ. 39 ರಷ್ಟು (79) ವಿದ್ಯಾರ್ಥಿಗಳಿಗೆ ಅವರ ಪೋಷಕರು ಪ್ರೋತ್ಸಾಹ ನೀಡಿದರೆ, ಶೇ. 28 (56) ವಿದ್ಯಾರ್ಥಿಗಳ ಪೋಷಕರು ತಟಸ್ಥರಾಗಿದ್ದಾರೆ ಮತ್ತು ಶೇ 13 (25) ವಿದ್ಯಾರ್ಥಿಗಳ ಪೋಷಕರು ತಮ್ಮ ಮಕ್ಕಳ ರಾಜಕೀಯ ಪ್ರವೇಶಕ್ಕೆ ಸಂಪೂರ್ಣ ವಿರೋಧ ವ್ಯಕ್ತಪಡಿಸಿದ್ದಾರೆ. ಆದರೆ ಶೇ. 20 (40) ವಿದ್ಯಾರ್ಥಿಗಳ ಪೋಷಕರು ತಮ್ಮ ಮಕ್ಕಳ ರಾಜಕೀಯ ಆಸಕ್ತಿಗಳ ಕುರಿತು ಸಹಮತ ವ್ಯಕ್ತಪಡಿಸಿ ಬೆಂಬಲಿಸಿರುವುದು ಕಂಡುಬರುತ್ತದೆ.

ಕೋಷ್ಟಕ–4.7: ನೀವು ಯಾವ ವಿಚಾರಧಾರೆಯಿಂದ ಗುರಿ ನಿರ್ದೇಶಿತರಾಗಿದ್ದೀರಿ?

ಕ್ರ.ಸಂ		ಸಂಖ್ಯೆ	ಶೇಕಡ
1	ಎಡಪಂಥೀಯ	17	9.00
2	ಬಲಪಂಥೀಯ	17	9.00
3	ತಟಸ್ಥ	12	6.00
4	ಜಾತ್ಯಾತೀತ	154	76.00
	ಒಟ್ಟು	**200**	**100.00**

ಕೋಷ್ಟಕ 4.7 ವಿವರಿಸುವಂತೆ ಶೇ. 76 ರಷ್ಟು (154) ವಿದ್ಯಾರ್ಥಿಗಳು ಜಾತ್ಯಾತೀತ ಧೋರಣೆಗಳಿಂದ ಪ್ರಭಾವಿತರಾದರೆ, ಶೇ. 9 ರಷ್ಟು (17) ವಿದ್ಯಾರ್ಥಿಗಳು ಕ್ರಮವಾಗಿ ಎಡಪಂಥೀಯ ಹಾಗೂ ಬಲಪಂಥೀಯ ವಿಚಾರಧಾರೆಗಳಿಂದ ಪ್ರಭಾವಿತರಾಗಿದ್ದಾರೆ. ಆದರೆ ಶೇ. 6 (12) ರಷ್ಟು ವಿದ್ಯಾರ್ಥಿಗಳು ತಟಸ್ಥ ಧೋರಣೆಯೊಂದಿಗೆ ಯಾವುದೇ ವಿಚಾರಧಾರೆಗಳಿಂದ ಪ್ರಭಾವಿತಗೊಳ್ಳದಿರುವುದು ತಿಳಿದುಬಂದಿದೆ.

ಪ್ರಸ್ತುತ ನನ್ನ ಅಧ್ಯಯನವು ಸೈದ್ಧಾಂತಿಕ ಚೌಕಟ್ಟಿನಲ್ಲಿ ವಿಭಿನ್ನ ವಿದ್ವಾಂಸರು ಮತ್ತು ಸಂಶೋಧಕರು ಪ್ರಸ್ತುತ ಪಡಿಸಿರುವ ರಾಜಕೀಯ ಸಾಮಾಜೀಕರಣ ವಿವಿಧ ನಿಯೋಗಗಳ ಪಾತ್ರ ಅಥವಾ ಮಹತ್ವವನ್ನು ಚರ್ಚಿಸುವ ಪ್ರಯತ್ನ ಮಾಡಲಾಗಿದೆ. ಎರಡನೆಯದಾಗಿ

ಮಾಹಿತಿ ಸಂಗ್ರಹಿಸುವ ವ್ಯಕ್ತಿಗಳ ಮೇಲೆ ಈ ಎಲ್ಲ ನಿಯೋಗಗಳ ಪ್ರಭಾವವನ್ನು ಮಾಪನ ಮಾಡಲಾಗಿದೆ. ವಯಕ್ತಿಕವಾಗಿ ಮತ್ತು ಸ್ವತಂತ್ರವಾಗಿ ಪ್ರತಿಯೊಂದು ನಿಯೋಗದ ಪ್ರಭಾವವನ್ನು ಮಾಪನ ಮಾಡಲು ಇಲ್ಲಿ ಪ್ರಯತ್ನಿಸಲಾಗಿದೆ. ಇಲ್ಲಿ ನಮಗೆ ಮಾಹಿತಿ ನೀಡುವ ವ್ಯಕ್ತಿಗಳ ಮೇಲೆ ನಿಯೋಗಗಳ ಪ್ರಭಾವ ಪ್ರಸ್ತುತವಾಗಿದೆಯೋ ಇಲ್ಲವೋ ಎಂಬುವದನ್ನು ಕಂಡುಕೊಳ್ಳಲಾಗಿದೆ. ಸಂಶೋಧನೆಯ ಫಲಿತಾಂಶದಿಂದ ಕುಟುಂಬ, ಶಾಲೆ, ಸಮವಯಸ್ಕರ ಗುಂಪು, ರಾಜಕೀಯ ಪಕ್ಷಗಳು, ಸಮೂಹ ಮಾಧ್ಯಮಗಳು, ಕರ್ನಾಟಕದಲ್ಲಿ ವಿದ್ಯಾರ್ಥಿ ಸಮುದಾಯುವನ್ನು ರಾಜಕೀಯುವಾಗಿ ಸಾಮಾಜೀಕರಣಗೊಳೀಸುವಲ್ಲಿ ಎಷ್ಟು ಪರಿಣಾಮಕಾರಿಯಾಗಿ ಪಾತ್ರ ನಿರ್ವಹಿಸುತ್ತದೆ ಎನ್ನುವದರ ಕಡೆಗೆ ಹೆಚ್ಚಿನ ಗಮನ ನೀಡಲಾಗಿದೆ. ಪ್ರಸ್ತುತ ನನ್ನ ಅಧ್ಯಯನದ ಫಲಿತಗಳು ಸಾಮಾನ್ಯ ಜನ ಸಮೂಹದ ಹವ್ಯಾಸಗಳು, ವರ್ತನೆಗಳು, ನಡುವಳಿಕೆಗಳನ್ನು ಮತ್ತು ಮನೋಭಾವನೆಗಳನ್ನು ರೂಪಿಸುವಲ್ಲಿ ರಾಜಕೀಯ ಸಾಮಾಜಿಕರಣ ನಿಯೋಗಗಳು ನಿರ್ವಹಿಸುವ ನಿರ್ಣಾಯಕ ಪಾತ್ರವನ್ನು ಈ ಹಿಂದೆ ನಡೆದಿರುವ ಅಧ್ಯಯನಗಳ ಫಲಿತಗಳೊಂದಿಗೆ ತಾಳೆ ನೋಡುವುದರ ಮೂಲಕ ಸೈದ್ಧಾಂತಿಕ ಚೌಕಟ್ಟಿಗೆ ಒಂದು ಸ್ಪಷ್ಟ ಸ್ವರೂಪವನ್ನು ನೀಡಲು ಪ್ರಯತ್ನಿಸಲಾಗಿದೆ.. ಕುಟುಂಬ, ಸಮವಯಸ್ಕರ ಗುಂಪು ಮತ್ತು ಶಾಲೆಗಳಂತಹ ರಾಜಕೀಯ ಸಾಮಾಜೀಕರಣದ ನಿಯೋಗಗಳು ಬಾಲ್ಯಾವಸ್ಥೆಯಿಂದಲೆ ಪ್ರಮುಖ ಪಾತ್ರ ವಹಿಸಿದ್ದರೆ, ರಾಜಕೀಯ ಸಾಮಾಜೀಕರಣದ ಅವಲಂಬಿತ ನಿಯೋಗಗಳಾದ ರಾಜಕೀಯ ಪಕ್ಷಗಳು, ಸಮೂಹ ಮಾಧ್ಯಮಗಳು ಹಾಗೂ ಸರ್ಕಾರ ವ್ಯಕ್ತಿಯು ಪ್ರೌಢಾವಸ್ಥೆ ತಲುಪಿದ ನಂತರ ಅವನ ಹವ್ಯಾಸಗಳು ಮನೋಭಾವನೆಗಳು ನಡುವಳಿಕೆಗಳನ್ನು ರೂಪಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. ವಿದ್ಯಾರ್ಥಿಗಳು ರಾಜಕೀಯ ನಿಲುವುಗಳನ್ನು ರೂಪಿಸುವಲ್ಲಿ ರಾಜಕೀಯ ಸಾಮಾಜೀಕರಣದ ಪ್ರಾಥಮಿಕ ನಿಯೋಗಗಳಾದಂತಹ ಕುಟುಂಬ, ಶಾಲೆ, ಹಾಗೂ ಸಮವಯಸ್ಕರ ಗುಂಪು, ಅವಲಂಬಿತ ರಾಜಕೀಯ ಸಾಮಾಜೀಕರಣ ನಿಯೋಗಗಳಾದ ಸಮೂಹ ಮಾಧ್ಯಮ, ಸರಕಾರಗಳು ಹೆಚ್ಚಿನ ಪ್ರಭಾವ ಬಿರುತ್ತವೆಯೋ ಎಂಬುವುದನ್ನು ಪರೀಕ್ಷಿಸಲು ಈ ಅಧ್ಯಾಯದಲ್ಲಿ ಪ್ರಯತ್ನಿಸಲಾಗಿದೆ.

ಪರಾಮರ್ಶನ ಗ್ರಂಥಗಳು

1. ನೀನಾ ಶರ್ಮಾ, "ಪೊಲಿಟಿಕಲ್ ಸೋಶಿಯಲೈಜೇಶನ್ ಆಂಡ್ ಅಟಿಟ್ಯುಡನಲ್ ಚೇಂಚ್ ಟುವರ್ಡ್ಸ್ ಸೋಶಿಯಲ್ ಆಂಡ್ ಪೊಲಿಟಿಕಲ್ ಸಿಸ್ಟಮ್", ಇಂಟರ್-ಇಂಡಿಯಾ ಪಬ್ಲಿಕೇಷನ್, ನ್ಯೂ ಡೆಲ್ಲಿ, 1985. ಪುಟ-40-55

2. ವ್ಹಿ. ಡಿ. ಮಹಾಜನ್, " ಪೊಲಿಟಿಕಲ್ ಥಿಯರಿ", ಎಸ್. ಚಾಂದ್ ಅಂಡ್ ಕಂಪನಿ ಲಿಮಿಟೆಡ್, ನ್ಯೂ ಡೆಲ್ಲಿ, 1992. ಪು-197-201

3. ಬಿ.ಕೆ. ಗೋಖಲೆ, "ಎ ಸ್ಟಡಿ ಆಫ್ ಪೊಲಿಟಿಕಲ್ ಥಿಯರಿ" ಹಿಮಾಲಯ ಪಬ್ಲಿಷಿಂಗ್ ಹೌಸ್, ಬಾಂಬೆ, 1982. ಪು- 370-375

4. ಡಿ. ಕೆ. ಮೊಹಂತಿ, "ಹೈಯರ್ ಎಜ್ಯುಕೇಶನ್ ಅಂಡ್ ಸ್ಟುಡಂಟ್ ಪಾಲಿಟಿಕ್ಸ್ ಇನ್ ಇಂಡಿಯಾ", ಅನ್‌ಮೊಲ್ ಪಬ್ಲಿಕೇಷನ್ಸ್ ಪ್ರೈವ್ಹೇಟ್ ಲಿಮಿಟೆಡ್, ನ್ಯೂ ಡೆಲ್ಲಿ, 1999. ಪು- 137-138

5. ಡಿ. ಮೀನಾಕ್ಷಿ, "ನಿರ್ಣಯ ಪ್ರಕ್ರಿಯೆಯಲ್ಲಿ ಚುನಾಯಿತ ಮಹಿಳೆಯರ ಪಾತ್ರ", ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ, 2010. ಪು- 9-10

6. ಎನ್. ಹಾಲಪ್ಪ, "ರಾಜ್ಯಶಾಸ್ತ್ರ" ನವಿತಾ ಪ್ರಕಾಶನ, ಮೈಸೂರು, 1997. ಪು-85

7. ಅದೆ, ಪು- 144

8. ಅದೆ, ಪು- 145

9. ಮಲ್ಲಿಕಾರ್ಜುನ ಗುಮ್ಮಗೋಳ, 'ಮಾಧ್ಯಮದ ಪಲ್ಲಟನ ಮತ್ತು ಪ್ರಜಾತಾಂತ್ರಿಕ ರಾಜಕಾರಣ', ಹೊಸತು, ಸಂಪುಟ-16, ಸಂಚಿಕೆ-3, ನವಕರ್ನಾಟಕ ಪ್ರಕಾಶನ, ಬೆಂಗಳೂರು, ಅಕ್ಟೋಬರ್ 2015. ಐ.ಎಸ್.ಎಸ್.ಎನ್.-2319-7307. ಪು-60-62

10. ಇಂದಿರಾ, 'ಸಮೂಹ ಮಾಧ್ಯಮ-ಸವಾಲುಗಳು ಮತ್ತು ಸಾಧ್ಯತೆಗಳು', ಹೊಸತು, ಸಂಪುಟ-16, ಸಂಚಿಕೆ-5, ನವಕರ್ನಾಟಕ ಪ್ರಕಾಶನ, ಬೆಂಗಳೂರು, ಡಿಸೆಂಬರ್ 2015. ಐ.ಎಸ್.ಎಸ್.ಎನ್.-2319-7307. ಪು-45-46

ಅಧ್ಯಾಯ–5

ವಿದ್ಯಾರ್ಥಿ ಸಂಘಟನೆಯ ಬಗ್ಗೆ ಅರಿವು ಮತ್ತು ರಾಜಕೀಯ ಭಾಗವಹಿಸುವಿಕೆ

ಕರ್ನಾಟಕದ ರಾಜಕೀಯ ಇತಿಹಾಸವನ್ನು ಅವಲೋಕಿಸಿದಾಗ, ರಾಜಕೀಯ ಪಕ್ಷಗಳಷ್ಟೇ ಪ್ರಭಾವಶಾಲಿಯಾಗಿ ಆಂದೋಲನಗಳು, ಚಳುವಳಿಗಳು ಕಂಡುಬರುತ್ತವೆ. ಉದಾಹರಣೆಗೆ, ರೈತ ಚಳುವಳಿ, ಭಾಷೆಯ ಉಳಿವಿಗಾಗಿ ನಡೆದಂತಹ ಗೋಕಾಕ್ ಚಳುವಳಿ, ಕಾಸರಗೋಡು ಉಳಿಸಿ ಚಳುವಳಿ, ಪರಿಸರ ಉಳಿಸಿ ಚಳುವಳಿ, ಕಾವೇರಿ – ಮಹದಾಯಿ ನದಿ ನೀರಿನ ಕುರಿತಾದ ಚಳುವಳಿ, ಉತ್ತರ ಕರ್ನಾಟಕ–ಹೈದ್ರಾಬಾದ್ ಕರ್ನಾಟಕದ ಅಭಿವೃದ್ಧಿಗಾಗಿನ ಆಂದೋಲನ ಇತ್ಯಾದಿ. ಇದೇ ಹಿನ್ನೆಲೆಯನ್ನು ಆಧರಿಸಿದ ವಿದ್ಯಾರ್ಥಿ ಸಮೂಹದ ಆಂದೋಲನಗಳೂ ರಾಜ್ಯದ ರಾಜಕೀಯದ ಸ್ಥಿತಿಗತಿಗಳನ್ನು ನಿರ್ಧರಿಸುವ ಒಂದು ಅಂಶವಾಗಿ ಕಂಡುಬಂದಿದೆ. ಪ್ರತಿ ರಾಜಕೀಯ ಪಕ್ಷಗಳು ತಮ್ಮ ಪಕ್ಷದ ನೆಲೆಯ ವಿಸ್ತಾರಕ್ಕೆ ಮತ್ತು ರಾಜಕೀಯ ಸಿದ್ಧಾಂತಗಳ ಗಟ್ಟಿಗೊಳಿಸುವಿಕೆಗೆ ವಿದ್ಯಾರ್ಥಿ ಸಮೂಹವನ್ನು ಆಕರ್ಷಿಸುತ್ತವೆ. ಉದಾಹರಣೆಗೆ ನ್ಯಾಷನಲ್ ಸ್ಟೂಡೆಂಟ್ ಯೂನಿಯನ್ ಕಾಂಗ್ರೆಸ್ ಪ್ರಣೀತ ವಿದ್ಯಾರ್ಥಿ ಸಂಘಟನೆಯಾದರೆ, ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ ಭಾರತೀಯ ಜನತಾ ಪಕ್ಷಕ್ಕೆ ಪೂರಕವಾಗಿ ಯುವಜನತೆಯಲ್ಲಿ ರಾಜಕೀಯ ಪ್ರಜ್ಞೆಯನ್ನು ಮೂಡಿಸುತ್ತಿದೆ. ಉದ್ದೇಶಗಳು ಪ್ರಜಾಪ್ರಭುತ್ವವನ್ನು ಗಟ್ಟಿಗೊಳಿಸುವುದಾದರೂ, ಹೆಚ್ಚಿನ ರಾಜಕೀಯ ಪಕ್ಷಗಳು ಯುವ ಸಮುದಾಯ ಅದರಲ್ಲೂ ಮುಖ್ಯವಾಗಿ ವಿದ್ಯಾರ್ಥಿಗಳನ್ನು ರಾಜಕೀಯದ ಋಣಾತ್ಮಕ ಬೆಳವಣಿಗೆಯಲ್ಲಿ ತೊಡಗಿಸಿಕೊಳ್ಳುತ್ತಿವೆ ಎಂಬ ಆರೋಪವೂ ಇದೆ. ಅದರೆ ರಾಜಕೀಯ ಸಿದ್ಧಾಂತದ ಹಿನ್ನೆಲೆಯಲ್ಲಿ, ವಿದ್ಯಾರ್ಥಿ ಸಂಘಟನೆಗಳ ರಾಜಕೀಯ ಸಾಮಾಜೀಕರಣವು ಹೆಚ್ಚಿನ ಮಹತ್ವವನ್ನು ಪಡೆದುಕೊಳ್ಳುತ್ತಿದೆ ಮತ್ತು ಅಧ್ಯಯನ ಸೂಕ್ತವಾದ ಕುತೂಹಲವನ್ನು ಹುಟ್ಟುಹಾಕಿದೆ.

ಈ ಮೇಲಿನ ಹಿನ್ನೆಲೆಯ ಆಧಾರದಲ್ಲಿ ಮತ್ತು ರಾಜಕೀಯ ಸಿದ್ಧಾಂತಗಳು ಯುವ ಸಮುದಾಯದಲ್ಲಿ ಬೀರುತ್ತಿವ ಪ್ರಭಾಗಳ ಕುರಿತು, ಕರ್ನಾಟಕ ರಾಜ್ಯದ ವಿದ್ಯಾರ್ಥಿ ಸಂಘಟನೆಗಳ ಕಾರ್ಯವೈಖರಿಯನ್ನು ಅಧ್ಯಯನ ಮಾಡಲಾಗಿದೆ. ಕ್ಷೇತ್ರಕಾರ್ಯಕ್ಕೆ ಆರಿಸಲ್ಪಟ್ಟ ವಿದ್ಯಾರ್ಥಿ ಸಂಘಟನೆಗಳನ್ನು ಮತ್ತು ತತ್ಸಂಬಧಿ ಕಾಲೇಜುಗಳ ವಿವರಗಳನ್ನು ಒಳಗೊಂಡಂತೆ, ವಿಸ್ತೃತ ವರದಿಯನ್ನು ಈ ಅಧ್ಯಾಯದಲ್ಲಿ ನೀಡಲಾಗಿದೆ.

ಪ್ರತಿಯೊಬ್ಬ ವ್ಯಕ್ತಿಯು ತಾನು ಹುಟ್ಟಿ ಬೆಳೆದ ಪರಿಸರದಿಂದ ಪ್ರಭಾವಿತನಾಗುವುದು ಸಹಜ ಮತ್ತು ಸ್ವಾಭಾವಿಕವಾಗಿದೆ. ಅವನ ನಡವಳಿಕೆಗಳು ಮತ್ತು ದೃಷ್ಟಿಕೋನಗಳು ಅವನ ಸಮಾಜೋ–ಆರ್ಥಿಕ ಹಿನ್ನಲೆ ಪ್ರಭಾವಗೊಳಿಸಿರುತ್ತದೆ. ವಿದ್ಯಾರ್ಥಿ ನಾಯಕರುಗಳು ಮನುಷ್ಯರೇ

ಆಗಿದ್ದು, ಇತರ ಮನುಷ್ಯರೊಂದಿಗೆ ಸಂಬಂಧಗಳನ್ನು ಹೊಂದಿರುತ್ತಾರೆ. ಹೀಗಾಗಿ ಮಾಹಿತಿದಾರರ ಸಾಮಾಜಿಕ-ಆರ್ಥಿಕ ಹಿನ್ನಲೆಯನ್ನು ಅಭ್ಯಸಿಸುವುದು ಅವಶ್ಯಕವಾಗಿದೆ. ಇತ್ತೀಚಿನ ಸಂಶೋಧನೆಗಳಲ್ಲಿ ಮಾಹಿತಿದಾರರ ವಯಸ್ಸು,ಆದಾಯ, ಉದ್ಯೋಗ, ಜಾತಿ, ಧರ್ಮ, ವೈವಾಹಿಕ ಅಂತಸ್ತು, ಹುಟ್ಟಿದ ಸ್ಥಳ, ರಾಜಕೀಯದೊಂದಿಗೆ ಗುರುತಿಸಿಕೊಳ್ಳುವಿಕೆ ಮೊದಲಾದ ಮಾಪನಗಳು ಪ್ರಮುಖ ಪಾತ್ರವಹಿಸುತ್ತಿವೆ. ಆದ್ದರಿಂದ ಈ ಅಧ್ಯಾಯದಲ್ಲಿ ವಿದ್ಯಾರ್ಥಿಗಳ ಸಮಾಜೋ-ಅರ್ಥಿಕ ಹಿನ್ನೆಲೆ ಹಾಗೂ ರಾಜಕೀಯ ಭಾಗವಹಿಸುವಿಕೆಯನ್ನು ವಸ್ತುನಿಷ್ಠವಾಗಿ ಅಧ್ಯಯನ ಮಾಡಲು ಪ್ರಯತ್ನಿಸಲಾಗಿದೆ.

ರಾಜಕೀಯ ಪ್ರಜ್ಞೆ ಮತ್ತು ರಾಜಕೀಯ ಭಾಗವಹಿಸುವಿಕೆ:

ಪ್ರಜಾಪ್ರಭುತ್ವ ವ್ಯವಸ್ಥೆ ವ್ಯವಸ್ಥಿತವಾಗಿ ಕಾರ್ಯನಿರ್ವಹಿಸುವಲ್ಲಿ ರಾಜಕೀಯ ಪ್ರಜ್ಞೆ ಹಾಗೂ ರಾಜಕೀಯ ಭಾಗವಹಿಸುವಿಕೆ ಅತ್ಯಂತ ಮಹತ್ವವಾದ ಪಾತ್ರ ವಹಿಸುತ್ತವೆ. ಪ್ರಜಾಪ್ರಭುತ್ವವು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಬೇಕಾದರೆ ಪ್ರಜೆಗಳು ರಾಜಕೀಯವಾಗಿ ಪ್ರಜ್ಞಾವಂತರಾಗಿರಬೇಕು. ಒಂದು ವೇಳೆ ಜನರು ರಾಜಕೀಯ ವ್ಯವಸ್ಥೆಯಲ್ಲಿ ಪಾಲ್ಗೊಳ್ಳುವುದರಿಂದ ದೂರ ಸರಿದರೆ ಪ್ರಜಾಪ್ರಭುತ್ವ ವ್ಯವಸ್ಥೆ ಬೇಜವಾಬ್ದಾರಿಯಿಂದ ಕಾರ್ಯನಿರ್ವಹಿಸಲು ಪ್ರಾರಂಭಿಸುತ್ತದೆ. ಈ ದೃಷ್ಟಿಯಿಂದ ನೋಡಿದಾಗ ರಾಜಕೀಯ ಪ್ರಜ್ಞೆ ಮತ್ತು ರಾಜಕೀಯ ಭಾಗವಹಿಸುವಿಕೆ ಪ್ರಜಾಪ್ರಭುತ್ವದಲ್ಲಿ ಮಹತ್ವದಾದ ಭೂಮಿಕೆಯನ್ನು ನಿಭಾಯಿಸಬೇಕಾಗುತ್ತದೆ.

ಮೂಲಭೂತವಾಗಿ ರಾಜಕೀಯ ಪ್ರಜ್ಞೆ ಎಂದರೇನು? ಈ ಪ್ರಶ್ನೆಗೆ ನಾವು ಉತ್ತರವನ್ನು ಕಂಡುಕೊಳ್ಳಬೇಕಾಗಿದೆ. ರಾಜಕೀಯ ಪ್ರಜ್ಞೆ ಎಂದರೆ ಜನರಿಗೆ ರಾಜ್ಯದ ಅವಶ್ಯಕತೆ ಮತ್ತು ಅದರ ಉಪಯುಕ್ತತೆಯ ಅರಿವು ಇರುತ್ತದೆ. ಅದರ ಜೊತೆಗೆ ರಾಜ್ಯವು ಜನರಿಗೆ ಭದ್ರತೆಯನ್ನು ನೀಡುತ್ತದೆ. ಜನರ ಜೀವ, ಆಸ್ತಿಪಾಸ್ತಿಗಳ ರಕ್ಷಣೆ ಮಾಡುತ್ತದೆ. ಜನರ ಹಕ್ಕು, ಸ್ವಾತಂತ್ರ್ಯಗಳನ್ನು ರಕ್ಷಣೆ ಮಾಡುತ್ತದೆ. ಬಾಹ್ಯ ಆಕ್ರಮಣದಿಂದ ರಾಜ್ಯವನ್ನು ರಕ್ಷಿಸುತ್ತದೆ. ಅಲ್ಲದೆ, ಜನರ ಸಾಮಾಜಿಕ, ಆರ್ಥಿಕ, ರಾಜಕೀಯ ಹಾಗೂ ನೈತಿಕ ಪ್ರಗತಿಗೆ ರಾಜ್ಯ ಸಹಾಯಕಾರಿಯಾಗಿದೆ. ಆದ್ದರಿಂದ ರಾಜ್ಯದ ಕಾಯಿದೆ ಕಾನೂನುಗಳು ನ್ಯಾಯಬದ್ಧವಾಗಿದ್ದು, ಅವುಗಳಿಗೆ ವಿಧೇಯತೆಯನ್ನು ತೋರಿಸುವುದು ಪ್ರಜೆಗಳ ಆದ್ಯ ಕರ್ತವ್ಯ ಎಂಬ ಭಾವನೆ ಜನರಲ್ಲಿ ಇರುತ್ತದೆ. ಈ ಭಾವನೆಯನ್ನು ನಾವು ರಾಜಕೀಯ ಪ್ರಜ್ಞೆ ಎಂದು ಕರೆಯುತ್ತೇವೆ. ಸಾಮನ್ಯವಾಗಿ ನಾವು ಅರಾಜಕತೆ ಮತ್ತು ರಾಜ್ಯ ಇವುಗಳ ನಡುವಿನ ಆಯ್ಕೆಯ ಪ್ರಶ್ನೆಯನ್ನು ಜನರಿಗೆ ಬಿಟ್ಟರೆ ಖಂಡಿತವಾಗಿಯೂ ಜನರು ರಾಜ್ಯವನ್ನು ಆಯ್ಕೆ ಮಾಡಿಕೊಳ್ಳುತ್ತಾರೆ. ಏಕೆಂದರೆ ರಾಜ್ಯವು ಪ್ರಜೆಗಳಿಗೆ ಭದ್ರತೆಯನ್ನು ನೀಡುತ್ತದೆ. ಅವರ ಜೀವ ಮತ್ತು ಆಸ್ತಿಯನ್ನು ರಕ್ಷಣೆ ಮಾಡುತ್ತದೆ.

ರಾಜಕೀಯದಲ್ಲಿ ಭಾಗವಹಿಸುವಿಕೆ ಎಂದರೆ ಜನರು ದೇಶದ ರಾಜಕೀಯ ವಿದ್ಯಮಾನಗಳಲ್ಲಿ ಚಟುವಟಿಕೆಯಿಂದ ಭಾಗವಹಿಸುವುದು ಎಂದು ಅರ್ಥ. ಸಾಮನ್ಯವಾಗಿ ಪ್ರಜಾಪ್ರಭುತ್ವದಲ್ಲಿ ರಾಜಕೀಯ ಭಾಗವಹಿಸುವಿಕೆಯನ್ನು ಭಾಗಗಳಾಗಿ ವಿಂಗಡಿಸಬಹುದು. ಅತಿಯಾದ ಕ್ರಿಯಾಶೀಲ ಮಟ್ಟ, ಪ್ರಾಸಂಗಿಕ ಕ್ರಿಯಾಶೀಲ ಮಟ್ಟ ಮತ್ತು ಕ್ರಿಯಾಶೂನ್ಯ ಮಟ್ಟ. ಡಿ. ಮೀನಾಕ್ಷಿ ಅವರು ತಮ್ಮ ಗ್ರಂಥ "ನಿರ್ಣಯ ಪ್ರಕಿಯೆಯಲ್ಲಿ ಚುನಾಯಿತ ಮಹಿಳೆಯರ ಪಾತ್ರ" ರಾಜಕೀಯ ಭಾಗವಹಿಸುವಿಕೆಯ ಕುರಿತು ಈ ರೀತಿಯಾದ ವಿವರಣೆಯನ್ನು ನೀಡಿದ್ದಾರೆ. "ಯಾವುದೇ ರಾಜಕೀಯ ಪಕ್ಷಗಳ ಸದಸ್ಯತ್ವ ಹೊಂದುವುದು, ಪಕ್ಷದ ಬೆಳವಣಿಗೆ, ಸಂಘಟನೆಯಲ್ಲಿ ತೊಡಗುವುದು, ಹೊಸ ಪಕ್ಷ ಕಟ್ಟುವುದು, ಚುನಾವಣೆಯಲ್ಲಿ ಸ್ಪರ್ಧಿಸುವುದು, ನಾಮಪತ್ರ ಸಲ್ಲಿಸುವುದು, ಪಕ್ಷದ ಪರವಾಗಿ ಚುನಾವಣಾ ಪ್ರಚಾರ ಮಾಡುವುದು. ಮತ ಚಲಾಯಿಸುವುದು, ಚುನಾವಣೆ ಬಗ್ಗೆ ಮಾಹಿತಿ ಪಡೆಯುವುದು, ಚರ್ಚಿಸುವುದು, ರಾಜಕೀಯ ಪಕ್ಷಗಳ ಸಭೆಗಳಿಗೆ ಹಾಜರಾಗುವುದು, ಸಭೆ ನಡೆಸುವುದು, ರಾಜಕೀಯ ಪಕ್ಷಗಳಿಗೆ ಆರ್ಥಿಕವಂತಿಕೆ ನೀಡುವುದು, ರಾಜಕೀಯ ಒತ್ತಡ ಗುಂಪುಗಳ ಸದಸ್ಯತ್ವ ಹೊಂದುವುದು, ಶಾಸಕರು ಅಥವಾ ರಾಜಕೀಯ ಮುಖಂಡರೊಡನೆ ರಾಜಕೀಯ ಸಂಪರ್ಕ ಹೊಂದುವುದು, ಅಲ್ಲದೆ ಪಕ್ಷದ ಮೂಲಕ ಪ್ರದರ್ಶನ ಮತ್ತು ಮುಷ್ಕರ ನಡೆಸುವುದು, ಕರಪತ್ರ ಹಂಚುವುದು, ಲೇಖನ ಬರೆಯುವುದು, ಭಾಷಣ ಮಾಡುವುದು, ರಾಜಕೀಯ ಪಕ್ಷದ ವಕ್ತಾರರಾಗಿ ಕಾರ್ಯನಿರ್ವಹಿಸುವುದು, ರಾಜಕೀಯ ನೀತಿ ನಿರ್ಣಯಗಳ ಕುರಿತು ಅಭಿಪ್ರಾಯ ವ್ಯಕ್ತಪಡಿಸುವುದು". ಇವೆಲ್ಲವು ವ್ಯಕ್ತಿಯ ರಾಜಕೀಯ ಭಾಗವಹಿಸುವಿಕೆಯನ್ನು ನಿರ್ಧರಿಸುವ ಸಂಗತಿಗಳಾಗಿವೆ.

ಕೋಷ್ಟಕ–5.1: ಲಿಂಗವಾರು ಮಾಹಿತಿದಾರರು

ಕ್ರ.ಸಂ	ಲಿಂಗ	ಸಂಖ್ಯೆ	ಶೇಕಡ (%)
1	ಗಂಡು	182	91.00
2	ಹೆಣ್ಣು	18	9.00
	ಒಟ್ಟು	**200**	**100.00**

ಕೋಷ್ಟಕ 5.1 ವಿವರಿಸುವಂತೆ, ಒಟ್ಟು 200 ವಿದ್ಯಾರ್ಥಿಗಳನ್ನು ಸಮೀಕ್ಷಿಸಲಾಗಿದ್ದು, ಅವರಲ್ಲಿ ಶೇ. 91 (182) ಗಂಡು ಮತ್ತು ಶೇ. 9 (18) ಹೆಣ್ಣು ಆಗಿದ್ದಾರೆ. ಈ ಅಂಕಿ–ಅಂಶವು ಮಹಿಳೆಯರಿಗಿಂತಲೂ ಪುರುಷರು ಹೆಚ್ಚು ಹೆಚ್ಚು ಸಾರ್ವಜನಿಕವಾಗಿ ಸಂಘಟನೆಯಲ್ಲಿ ತೊಡಗಿಸಿಕೊಳ್ಳುತ್ತಾರೆ ಎನ್ನುವುದನ್ನು ಪ್ರತಿಫಲಿಸುತ್ತದೆ. ವಿದ್ಯಾರ್ಥಿ ಸಮೂಹದಲ್ಲಿಯೂ ಈ ರೀತಿಯ ತೊಡಗಿಸಿಕೊಳ್ಳುವಿಕೆ ಅವರ ಭವಿಷ್ಯದ ನಡೆಯನ್ನು ಪರೋಕ್ಷವಾಗಿ ಪ್ರತಿನಿಧಿಸುತ್ತದೆ. ಮಹಿಳೆಯರ ಪ್ರಾತಿನಿಧ್ಯ ಪುಷರಿಗಿಂತ ತುಂಬಾ ಕಡಿಮೆ ಇರುವುದಕ್ಕೆ

ಎರಡು ಪ್ರಮುಖ ಕಾರಣಗಳನ್ನು ಗುರುತಿಸಬಹುದಾಗಿದೆ. ಮೊದಲನೆಯದು ಸಾಮನ್ಯವಾಗಿ ಉನ್ನತ ಶಿಕ್ಷಣ ಪಡೆಯಲು ಮಹಿಳೆಯರು ಬರುವುದು ಕಡಿಮೆಯೇ. ಅದಕ್ಕಾಗಿ ಅವರ ಸಂಖ್ಯೆ ಕಡಿಮೆ ಇರುವುದು. ಎರಡನೆಯ ಪ್ರಮುಖ ಕಾರಣವೆಂದರೆ ಮಹಿಳೆಯರು ವಿದ್ಯಾರ್ಥಿ ರಾಜಕೀಯ ಕ್ರಿಯಾಶೀಲತೆಯಲ್ಲಿ ಆಸಕ್ತಿ ಕಡಿಮೆ ಇರುವುದು. ಎಸ್. ಸಿ. ಹಜಾರೆಯವರ ಪ್ರಕಾರ " ಸಾಮನ್ಯವಾಗಿ ಮಹಿಳೆಯರು ರಾಜಕೀಯದಲ್ಲಿ ಆಸಕ್ತಿಯನ್ನು ತೋರಿಸುವುದಿಲ್ಲ. ಅವರಿಗೆ ರಾಜಕೀಯ ವಿದ್ಯಮಾನಗಳ ಕುರಿತು ಕಡಿಮೆ ಜ್ಞಾನ ಇರುತ್ತದೆ. ಹೀಗಾಗಿ ಪುರಷರಿಗೆ ಹೋಲಿಸಿದಾಗ ಮಹಿಳೆಯರು ರಾಜಕೀಯದಲ್ಲಿ ಸಕ್ರಿಯವಾಗಿ ಭಾಗವಹಿಸುವುದು ಕಡಿಮೆ" ಎಂದು ಅಭಿಪ್ರಾಯಪಡುತ್ತಾರೆ. ಡೋನಾಲ್ಡ್ ಕೆ. ಎಮರ್‌ಸನ್ ಅವರು ಕೂಡ ಇದೇ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ. ಅವರ ಪ್ರಕಾರ " ಮಹಿಳೆಯರಿಗಿಂತ ಪುರುಷರು ರಾಜಕೀಯವಾಗಿ ತುಂಬಾ ಕ್ರಿಯಾಶೀಲರಾಗಿರುತ್ತಾರೆ." ಹೀಗಾಗಿ ವಿದ್ಯಾರ್ಥಿಗಳು ಕೂಡ ಇದಕ್ಕೆ ಹೊರತಾಗಿಲ್ಲವೆಂದು ಹೇಳಬಹುದು.

ಕೋಷ್ಟಕ –5.2: ಮಾಹಿತಿದಾರರ ವಯಸ್ಸು

ಕ್ರ.ಸಂ	ವಯಸ್ಸು	ಸಂಖ್ಯೆ	ಶೇಕಡ (%)
1	15 ರಿಂದ 25	200	100.00
2	26 ರಿಂದ 35	0	0.00
3	36 ರಿಂದ 45	0	0.00
4	46 ರಿಂದ 55	0	0.00
5	56 ರಿಂದ 65	0	0.00
6	65ಕ್ಕಿಂತ ಹೆಚ್ಚು	0	0.00
	ಒಟ್ಟು	**200**	**100.00**

ಬಿನೋದಾನಂದ ಝಾ ಅಭಿಪ್ರಾಯ ಪಡುವಂತೆ " ವ್ಯಕ್ತಿಯ ದೈಹಿಕ ಮತ್ತು ಮಾನಸಿಕ ಪ್ರೌಢಿಮೆಯನ್ನು ವಯಸ್ಸು ನಿರ್ಧರಿಸುತ್ತದೆ". ಪಾತ್ರ ನಿರ್ವಹಣೆಯಲ್ಲಿ ವಿದ್ಯಾರ್ಥಿ ನಾಯಕರುಗಳಿಗೆ ಅನುಭವ ಮತ್ತು ಪ್ರೌಢಿಮೆ ತುಂಬಾ ಅವಶ್ಯಕವಾದ ಅಂಶಗಳಾಗಿವೆ. ಹೀಗಾಗಿ ಸಾಮನ್ಯವಾಗಿ ವಿದ್ಯಾರ್ಥಿಗಳು ಯುವಕರಾಗಿದ್ದು, ಅತಿ ಉತ್ಸಾಹದಿಂದ ಪ್ರತಿಯೊಂದು ಚಟುವಟಿಕೆಗಳಲ್ಲಿ ಭಾಗವಹಿಸುವ ಸಾಮರ್ಥ್ಯವನ್ನು ಹೊಂದಿರುತ್ತಾರೆ. ಆದ್ದರಿಂದ ಇಲ್ಲಿ ಯಾವ ವಯಸ್ಸಿನ ವಿದ್ಯಾರ್ಥಿ ಗುಂಪು ರಾಜಕೀಯ ಚಟುವಟಿಕೆಗಳಲ್ಲಿ ಸಕ್ರಿಯವಾಗಿದೆ ಎಂಬುದನ್ನು ತಿಳಿದುಕೊಳ್ಳಲು ಪ್ರಯತ್ನಿಸಲಾಗಿದೆ. ಕೋಷ್ಟಕ 3 ಮಾಹಿತಿದಾರರ ವಯಸ್ಸನ್ನು ವಿವರಿಸುತ್ತದೆ. ಸಂಘಟನೆಯಲ್ಲಿ ತೊಡಗಿಸಿಕೊಳ್ಳುವ ವ್ಯಕ್ತಿಯ ವಯಸ್ಸು ಆತ ಅಥವಾ ಆಕೆಯ ಪಾಲ್ಗೊಳ್ಳುವಿಕೆಯ ಮೇಲೆ ಪ್ರಭಾವ ಬೀರುತ್ತದೆ. ಕೋಷ್ಟಕ ಹೇಳುವಂತೆ, 200 ವಿದ್ಯಾರ್ಥಿಗಳೂ 15 ರಿಂದ 25 ವಯಸ್ಸಿನ ಗುಂಪಿಗೆ ಸೇರಿದ್ದು, ಹೆಚ್ಚು ಕ್ರಿಯಾಶೀಲತೆಯಿಂದ

ಕಾರ್ಯವೆಸಗುತ್ತಿರುವ ಸಂಭವ ಹೆಚ್ಚು. ಇದು ಈ ಗುಂಪಿನ ವಿಶೇಷತೆಯೂಹೌದು.

ಕೋಷ್ಟಕ – 5.3: ಮಾಹಿತಿದಾರರ ವಿದ್ಯಾರ್ಹತೆ

ಕ್ರ.ಸಂ	ವಿದ್ಯಾರ್ಹತೆ	ಸಂಖ್ಯೆ	ಶೇಕಡ (%)
1	1ಬಿಎ	43	22.00
2	2ಬಿಎ	62	30.00
3	3ಬಿಎ	40	20.00
4	1ಬಿಕಾಂ	26	12.00
5	2ಬಿಕಾಂ	7	4.00
6	3 ಬಿಕಾಂ	0	0.00
7	1ಬಿಎಸ್ಸಿ	12	6.00
8	2ಬಿಎಸ್ಸಿ	3	2.00
9	3ಬಿಎಸ್ಸಿ	0	0.00
10	ಪಿಯುಸಿ	2	1.00
11	ಎಂ.ಕಾಂ	5	3.00
	ಒಟ್ಟು	**200**	**100.00**

ಯಾವುದೇ ಸಂಘಟನೆ ಹೆಚ್ಚು ಕ್ರಿಯಾಶೀಲತೆಯಿಂದಿರಲು ವಯಸ್ಸಿನೊಡನೆ ವಿದ್ಯಾರ್ಹತೆಯೂ ಮುಖ್ಯವಾಗುತ್ತದೆ. ಕೋಷ್ಟಕ 4 ವಿವರಿಸುವಂತೆ, ದ್ವಿತೀಯ ಬಿ.ಎ. ಯಲ್ಲಿ (ಶೇ. 30) ಓದುತ್ತಿರುವ ವಿದ್ಯಾರ್ಥಿಗಳು ಹೆಚ್ಚಾಗಿ ತಮ್ಮನ್ನು ಸಂಘಟನೆಗಳಲ್ಲಿ ತೊಡಗಿಸಿಕೊಂಡಿರುವುದನ್ನು ಗಮನಿಸಬಹುದು. ಈ ಅವಧಿಯು ವಿದ್ಯಾರ್ಥಿಗಳಿಗೆ ಉತ್ತಮ ವಾತಾವರಣವನ್ನು ಕಾಲೇಜುಗಳಲ್ಲಿ ದೊರಕುವಂತೆ ಮಾಡಿದ್ದು, ಸಂಘಟನೆಯನ್ನು ಹೆಚ್ಚು ಅರ್ಥ ಮಾಡಿಕೊಳ್ಳುವಲ್ಲಿ ವಿದ್ಯಾರ್ಥಿ ಸಮೂಹ ಸಫಲವಾಗಿದೆ. ಕಲಾ ನಿಕಾಯದ ವಿದ್ಯಾರ್ಥಿಗಳು ಇಂತಹ ಸಂಘಟನೆಯಲ್ಲಿ ಹೆಚ್ಚಾಗಿ ತೊಡಗಿಸಿಕೊಂಡಿರುವುದು ಇದರ ಇನ್ನೊಂದು ಆಯಾಮ. ವಿಜ್ಞಾನ ಮತ್ತು ವಾಣಿಜ್ಯ ನಿಕಾಯಗಳಿಗೆ ಹೋಲಿಸಿದರೆ, ಶೇ. 72ರಷ್ಟು ವಿದ್ಯಾರ್ಥಿಗಳು ಕಲಾ ನಿಕಾಯುದವರಾಗಿದ್ದಾರೆ. ಉನ್ನತ್ತ ವ್ಯಾಸಂಗದವರು ಸಂಘಟನೆಯಲ್ಲಿ ತೊಡಗಿಸಿಕೊಂಡಿರುವ ಪ್ರಮಾಣ ಶೇ. 3.

ಕೋಷ್ಟಕ –5.4: ಮಾಹಿತಿದಾರರ ಧರ್ಮ

ಕ್ರಸಂ	ಧರ್ಮ	ಸಂಖ್ಯೆ	ಶೇಕಡ (%)
1	ಹಿಂದು	188	94.00
2	ಮುಸ್ಲಿಂ	12	6.00
	ಒಟ್ಟು	**200**	**100.00**

ಕೋಷ್ಟಕ 5 ವಿವರಿಸುವಂತೆ, ಆಯ್ದ ವಿದ್ಯಾರ್ಥಿ ಸಂಘಟನೆಗಳಲ್ಲಿ ಶೇ. 94ರಷ್ಟು (188) ಹಿಂದೂ ಸಮುದಾಯಕ್ಕೆ ಸೇರಿದವರಾಗಿದ್ದು, ಶೇ. 6 ರಷ್ಟು (12) ಮುಸ್ಲಿಂ ಸಮುದಾಯಕ್ಕೆ ಒಳಪಟ್ಟವರಾಗಿದ್ದಾರೆ. ಇದು ಆಯ್ದ ಕಾಲೇಜುಗಳ ಪರಿಸರದಲ್ಲಿ ವಾಸಿಸುತ್ತಿರುವ ಸಮುದಾಯ ಮತ್ತು ಅಲ್ಲಿಯ ಸಾಮಾಜಿಕ ಹಿನ್ನೆಲೆಯನ್ನು ಪ್ರತಿನಿಧಿಸುತ್ತದೆ.

ಕೋಷ್ಟಕ –5.5: ಮಾಹಿತಿದಾರರ ವೈವಾಹಿಕ ಸ್ಥಾನಮಾನ

ಕ್ರ.ಸಂ	ವೈವಾಹಿಕ ಸ್ಥಾನ	ಸಂಖ್ಯೆ	ಶೇಕಡ (%)
1	ಅವಿವಾಹಿತ	200	100.00
2	ವಿವಾಹಿತ	0	0.00
3	ವಿಧವೆ/ವಿಧುರ	0	0.00
4	ವಿಚ್ಚೇಧಿತ	0	0.00
5	ಪರಿತ್ಯಾಗ	0	0.00
6	ಇತರೆ	0	0.00
	ಒಟ್ಟು	**200**	**100.00**

ವಿದ್ಯಾರ್ಥಿಗಳ ವೈವಾಹಿಕ ಸ್ಥಾನಮಾನದ ಕುರಿತು ಅವಲೋಕಿಸಿದಾಗ ಕಂಡುಬಂದ ಸತ್ಯವೆನೆಂದರೆ ಬಹುಸಂಖ್ಯಾತ ವಿದ್ಯಾರ್ಥಿಗಳು ಅವಿವಾಹಿತರಾಗಿದ್ದಾರೆ ಮತ್ತು ಅವರು ರಾಜಕೀಯ ಚಟುವಟಿಕೆಗಳಲ್ಲಿ ಸಕ್ರಿಯರಾಗಿದ್ದಾರೆ. ಇದಕ್ಕೆ ಪ್ರಮುಖ ಕಾರಣವೆಂದರೆ ಶಿಕ್ಷಣ ಹೆಚ್ಚಿಗೆ ಪ್ರಸಾರವಾದಂತೆ ವಿದ್ಯಾವಂತರು ತಡವಾಗಿ ಮದುವೆಯಾಗಲು ಪ್ರಾರಂಭಿಸಿದ್ದು ಇದಕ್ಕೆ ಪ್ರಮುಖ ಕಾರಣವಾಗಿದೆ. ಇನ್ನೂ ಸರಕಾರವೇ ಮದುವೆ ವಯಸ್ಸು 21 ವರ್ಷಗಳು ಎಂದು ನಿಗದಿಪಡಿಸಿರುವುದರಿಂದ ವಿದ್ಯಾರ್ಥಿಗಳು ಕೂಡ ಸಾಮನ್ಯವಾಗಿ ಅದೇ ವಯಸ್ಸಿನ ಗುಂಪಿನವರಾಗಿದ್ದರಿಂದ ಬಹುಸಂಖ್ಯಾತ ವಿದ್ಯಾರ್ಥಿಗಳು ಅವಿವಾಹಿತರಾಗಿರುವುದು ಸಹಜವಾಗಿದೆ.

ಸಾಮಾನ್ಯ ತಿಳುವಳಿಕೆ ಮತ್ತು ಜ್ಞಾನ ಹೇಳುವಂತೆ, ವಿದ್ಯಾರ್ಥಿ ಸಮುದಾಯವು ಹೆಚ್ಚಾಗಿ ಅವಿವಾಹಿತರಾಗಿರುತ್ತಾರೆ. ಇದೇ ಪ್ರಕಾರ, ಕೋಷ್ಟಕ 6 ಮಾಹಿತಿದಾರರ ವೈವಾಹಿಕ ಸ್ಥಾನಮಾನದ ಕುರಿತು ಹೇಳುತ್ತದೆ. ಶೇ. 100ರಷ್ಟು ವಿದ್ಯಾರ್ಥಿಗಳು ಅವಿವಾಹಿತರಾಗಿದ್ದು, ಅವರು ವಿದ್ಯಾರ್ಥಿ ಸಂಘಟನೆಯಲ್ಲಿ ತೊಡಗಿಸಿಕೊಂಡಿದ್ದಾರೆ. ಇದು ಸಾರ್ವಜನಕ ಮತ್ತು ಸಾಮಾಜಿಕವಾಗಿ ವಿದ್ಯಾರ್ಥಿಗಳಿಗೆ ಹೆಚ್ಚಿನ ಪ್ರೋತ್ಸಾಹವನ್ನು ಕೊಡುತ್ತದೆ. ಈ ಮೂಲಕ ರಾಜಕೀಯ, ಸಾಮಾಜೀಕರಣದ ಮೌಲ್ಯಗಳು ಹೆಚ್ಚು ಗಟ್ಟಿಗೊಳ್ಳುವುದಕ್ಕೆ ಅವಕಾಶ ಸಿಗುತ್ತದೆ.

ಕೋಷ್ಟಕ–5.6: ಮಾಹಿತಿದಾರರ ವಾಸಸ್ಥಾನ

ಕ್ರ.ಸಂ		ಸಂಖ್ಯೆ	ಶೇಕಡ (%)
1	ನಗರ ಪ್ರದೇಶ	170	85.00
2	ಅರೆನಗರ ಪ್ರದೇಶ	2	1.00
3	ಗ್ರಾಮೀಣ ಪ್ರದೇಶ	24	12.00
4	ಹಾಸ್ಟೇಲ್	4	2.00
5	ಇತರೆ	0	0.00
	ಒಟ್ಟು	**200**	**100.00**

ಉನ್ನತ ಶಿಕ್ಷಣ ಸಂಸ್ಥೆಗಳು ಸಾಮನ್ಯವಾಗಿ ನಗರ ಪ್ರದೇಶದಳಲ್ಲಿ ಸ್ಥಾಪನೆಯಾಗಿರುವುದರಿಂದ ಹೆಚ್ಚಿನ ಸಂಖ್ಯೆಯ ವಿದ್ಯಾರ್ಥಿಗಳು ನಗರ ಪ್ರದೇಶದವರಾಗಿರುತ್ತಾರೆ ಎಂಬ ಅಭಿಪ್ರಾಯವನ್ನು ಬಿನೋದಾನಂದ ಝಾ ಅವರು ತಮ್ಮ ಅಧ್ಯಯನದಲ್ಲಿ ವ್ಯಕ್ತಪಡಿಸಿರುತ್ತಾರೆ. ಇವರ ಅಭಿಪ್ರಾಯಕ್ಕೆ ಪೂರಕವಾಗಿ ನಮ್ಮ ಫಲಿತಗಳು ಇರುವುದನ್ನು ನಾವು ಇಲ್ಲಿ ನೋಡಬಹುದಗಿದೆ. ಸಮೀಕ್ಷೆಗೆ ಒಳಪಡಿಸಿದ ಕಾಲೇಜುಗಳ ವಿದ್ಯಾರ್ಥಿಗಳು ಹೆಚ್ಚಾಗಿ ನಗರ ಪ್ರದೇಶದಿಂದ ಬಂದಿರುವವರು. ಕೋಷ್ಟಕ 7 ಮತ್ತು ರೇಖಾಚಿತ್ರ 3 ವಿವರಿಸುವಂತೆ, ಶೇ 85ರಷ್ಟು (170) ವಿದ್ಯಾರ್ಥಿಗಳು ನಗರದ ಸುತ್ತಮುತ್ತ ವಾಸಮಾಡುತ್ತಿದ್ದು, ಶೇ. 1ರಷ್ಟು (2) ಅರೆನಗರ ಮತ್ತು ಶೇ. 12 ರಷ್ಟು (24) ಗ್ರಾಮೀಣ ಪ್ರದೇಶಗಳಲ್ಲಿ ವಾಸಮಾಡುತ್ತಿದ್ದಾರೆ. ವಿದ್ಯಾರ್ಥಿ ಸಂಘಟನೆಯಲ್ಲಿ ತೊಡಗಿಸಿಕೊಂಡಿರುವ ಶೇ. 2ರಷ್ಟು (4) ವಿದ್ಯಾರ್ಥಿಗಳು ವಸತಿ ನಿಲಯಗಳಲ್ಲಿ ವಾಸಮಾಡಿಕೊಂಡಿರುವುದನ್ನೂ ಗಮನಿಸಬಹುದು. ನಗರ ಪ್ರದೇಶದ ವಿದ್ಯಾರ್ಥಿಗಳಿಗೆ ಹೆಚ್ಚಾಗಿ ಆಧುನಕ ಸೌಲಭ್ಯಗಳು ಸುಲಭವಾಗಿ ಎಟಕುತ್ತವೆ. ಉದಾಹರಣೆಗೆ, ಮೊಬೈಲ್, ಇಂಟರ್‌ನೆಟ್, ಪತ್ರಿಕೆಗಳು, ಕಂಪ್ಯೂಟರ್ ಹಾಗೂ ಇತರೇ ಸಾಮಾಜಿಕ ಜಾಲತಾಣಗಳು ಯುವ ಸಮುದಾಯವನ್ನು ಆಕರ್ಷಿಸುತ್ತವೆ. ಇದರ ಪ್ರಭಾವದಿಂದಾಗಿ, ವಿದ್ಯಾರ್ಥಿಗಳು ಕಾಲೇಜುಗಳ ಸಂಘಟನೆಗಳಲ್ಲಿ ತೊಡಗಿಸಿಕೊಳ್ಳುತ್ತಾರೆ.

ಕೋಷ್ಟಕ –5.7: ಮಾಹಿತಿದಾರರ ಪೋಷಕರ ಶೈಕ್ಷಣಿಕ ಮಟ್ಟ

ಕ್ರ.ಸಂ	ತರಗತಿ	ಸಂಖ್ಯೆ	ಶೇಕಡ (%)
1	1 ರಿಂದ 7	14	7.00
2	8 ರಿಂದ 10	33	17.00
3	11 ರಿಂದ 12	43	21.00
4	13 ರಿಂದ 15	37	18.00
5	15 ಕ್ಕಿಂತ ಹೆಚ್ಚು	21	11.00
6	ವೃತ್ತಿಪರ	37	18.00
7	ವಿದ್ಯಾಭ್ಯಾಸ ಇಲ್ಲ	15	8.00
	ಒಟ್ಟು	**200**	**100.00**

ಪೋಷಕರ ಶಿಕ್ಷಣ, ಉದ್ಯೋಗ ಮತ್ತು ಆದಾಯಗಳು ಅತ್ಯಂತ ಮಹತ್ವದ ಮಾಪನಗಳಾಗಿದ್ದು ಅವು ವಿದ್ಯಾರ್ಥಿಗಳ ಸಾಮಾಜಿಕ ಮತ್ತು ಆರ್ಥಿಕ ಸ್ಥಾನಮಾನವನ್ನು ನಿರ್ಧರಿಸುತ್ತವೆ. ಪೋಷಕರ ಶಿಕ್ಷಣ ಮಟ್ಟ ಹೆಚ್ಚಾಗಿದ್ದರೆ ಸಹಜವಾಗಿ ವಿದ್ಯಾರ್ಥಿಗಳು ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯ ಪ್ರಜ್ಞೆವುಳ್ಳವರಾಗಿರುತ್ತಾರೆ. ಸಮಾಜದಲ್ಲಾಗುವ ಬದಲಾವಣೆಗಳನ್ನು ಹಾಗೂ ಬೆಳವಣಿಗೆಗಳನ್ನು ಸೂಕ್ಷ್ಮದೃಷ್ಟಿಯಿಂದ ಅವಲೋಕಿಸುತ್ತಾರೆ. ಎಸ್. ಸಿ. ಹಜಾರೆಯವರು " ವಿದ್ಯಾವಂತ ಪೋಷಕರ ಮಕ್ಕಳು ಅವಿದ್ಯಾವಂತ ಪೋಷಕರ ಮಕ್ಕಳಗಿಂತ ರಾಜಕೀಯದಲ್ಲಿ ತುಂಬಾ ಸಕ್ರಿಯರಾಗಿರುತ್ತಾರೆ." ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ.

ವಿದ್ಯಾರ್ಥಿಗಳ ಸಾಮಾಜಿಕ ಹಿನ್ನೆಲೆಯಲ್ಲಿ ಅವರ ಪೋಷಕರ ಶೈಕ್ಷಣಿಕ ಮಟ್ಟ ಪ್ರಭಾವವನ್ನು ಬೀರುತ್ತದೆ. ಶೇ. 21 ರಷ್ಟು (43) ಪೋಷಕರ ವಿದ್ಯಾಭ್ಯಾಸ ಮಟ್ಟ ಪಿ.ಯು.ಸಿ. ಆಗಿದ್ದು, ಶೇ. 17ರಷ್ಟು (33) ಪೋಷಕರು ತಮ್ಮ ಪ್ರೌಢ ಶಿಕ್ಷಣವನ್ನು ಮುಗಿಸಿದ್ದಾರೆ. ಶೇ. 18ರಷ್ಟು (37) ಪೋಷಕರು ತಮ್ಮ ಪದವಿಯನ್ನು ಮುಗಿಸಿದ್ದರೆ, ಶೇ. 11 ರಷ್ಟು (21) ಉನ್ನತ ವ್ಯಾಸಂಗವನ್ನು ಪಡೆದುಕೊಂಡಿದ್ದಾರೆ. ಹಾಗೆಯೇ ಶೇ. 7 ರಷ್ಟು (14) ಪೋಷಕರು ತಮ್ಮ ಪ್ರಾಥಮಿಕ ಶಿಕ್ಷಣವನ್ನು ಪೂರೈಸಿದ್ದಾರೆ. ಶೇ. 18ರಷ್ಟು (37) ಪೋಷಕರು ವೃತಿಪರ ಶಿಕ್ಷಣವನ್ನು ಪಡೆದುಕೊಂಡಿದ್ದರೆ, ಶೇ. 8 ರಷ್ಟು (15) ಪೋಷಕರು ಔಪಚಾರಿಕ ಶಿಕ್ಷಣವನ್ನೇ ಪಡೆದುಕೊಳ್ಳಲು ಸಾಧ್ಯವಾಗಿಲ್ಲ. ಆದರೆ ಅವರ ಮಕ್ಕಳು ಕಾಲೇಜುಗಳ ಸಂಘಟನೆಗಳಲ್ಲಿ ತೊಡಗಿಸಿಕೊಂಡಿರುವುದು ಗಮನಾರ್ಹ. ಕೌಟುಂಬಿಕ ಮತ್ತು ಸಾಮಾಜಿಕವಾಗಿ ವಿದ್ಯಾರ್ಥಿ ಸಮೂಹವು ಅವರ ಪೋಷಕರ ಶೈಕ್ಷಣಿಕ ಹಿನ್ನೆಲೆಗಳಿಂದ ಪ್ರಭಾವಕ್ಕೆ ಒಳಪಡುತ್ತಾರೆ ಎಂಬುದು ಮುಖ್ಯವಾಗುತ್ತದೆ.

ಕೋಷ್ಟಕ –5.8: ಮಾಹಿತಿದಾರರ ಪೋಷಕರ ಉದ್ಯೋಗ

ಕ್ರ.ಸಂ		ಸಂಖ್ಯೆ	ಶೇಕಡ (%)
1	ಕೂಲಿ	26	13.00
2	ಒಕ್ಕಲುತನ	27	14.00
3	ಅರೆಕಾಲಿಕ	21	11.00
4	ವ್ಯವಹಾರ	47	23.00
5	ವ್ಯವಸಾಯ	26	12.00
6	ಇತರ	53	27.00
	ಒಟ್ಟು	**200**	**100.00**
ಇತರ: ಶಿಕ್ಷಕ, ಉಪನ್ಯಾಸಕ, ನ್ಯಾಯವಾದಿ, ಪೊಲೀಸ್, ಸೆಕ್ಯುರಿಟಿ, ಸರಕಾರಿ			

ಕೋಷ್ಟಕ 9 ವಿವರಿಸುವಂತೆ, ಮಾಹಿತಿದಾರರ ಶೇ. 27 ರಷ್ಟು (53) ಪೋಷಕರು ವಿವಿಧ ವೃತ್ತಿಯನ್ನು ಮಾಡುತ್ತಿದ್ದಾರೆ. ಉದಾಹರಣೆಗೆ ಶಿಕ್ಷಕ, ಉಪನ್ಯಾಸಕ, ನ್ಯಾಯವಾದಿ, ಪೊಲೀಸ್,

ಸೆಕ್ಯುರಿಟಿ ಇತ್ಯಾದಿ ವೃತ್ತಿಯಲ್ಲಿ ಅವರು ತೊಡಗಿಸಿಕೊಂಡಿದ್ದಾರೆ. ಶೇ. 13ರಷ್ಟು (26) ಪೋಷಕರು ಕೂಲಿ ಮಾಡಿದರೆ, ಶೇ. 26 ರಷ್ಟು (53) ಪೋಷಕರು ಒಕ್ಕಲುತನ ಮತ್ತು ವ್ಯವಸಾಯ ವೃತ್ತಿಯನ್ನು ಮಾಡುತ್ತಿದ್ದಾರೆ. ಶೇ 23ರಷ್ಟು (47) ಪೋಷಕರು ಸಣ್ಣ ವ್ಯವಹಾರಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ವಿದ್ಯಾರ್ಥಿಗಳ ಆರ್ಥಿಕ ಸಂಪನ್ಮೂಲಗಳೂ ಅವರ ಪೋಷಕರ ವೃತ್ತಿ ಅಥವಾ ಉದ್ಯೋಗದ ಮೇಲೆ ಅವಲಂಭಿತವಾಗಿರುವುದು ಸಾಮಾನ್ಯವಾಗಿ ಕಂಡುಬರುವ ಅಂಶ.

ಬಹುಸಂಖ್ಯಾತ ವಿದ್ಯಾರ್ಥಿಗಳು ಬಡ ಮತ್ತು ಮಧ್ಯಮ ವರ್ಗದ ಕುಟುಂಬದಿಂದ ಬಂದವರಾಗಿದ್ದಾರೆ. ನಮ್ಮ ಸಮೀಕ್ಷೆಯು ಎಸ್.ಎಮ್.ಲಿಪಸೆಟ್ ಮತ್ತು ಟಿ.ಕೆ. ಓಮೆನ್‌ರವರಿಂದ ಭಿನ್ನವಾಗಿದೆ. ಎಸ್.ಎಮ್. ಲಿಪಸೆಟ್ ರವರ ಪ್ರಕಾರ " ಎಡಪಂಥಿಯ ವಿದ್ಯಾರ್ಥಿ ನಾಯಕರುಗಳು ಶ್ರೀಮಂತ ಕುಟುಂಬದಿಂದ ಬಂದವರಾಗಿದ್ದಾರೆ ಎಂದು ತಿಳಿಸಿರುತ್ತಾರೆ." ಹಾಗೆಯೇ ಟಿ.ಕೆ. ಓಮೆನ್ ರವರ ಪ್ರಕಾರ " ದೆಹಲಿ ವಿಶ್ವವಿದ್ಯಾಲಯದ ಬಹುಸಂಖ್ಯಾತ ವಿದ್ಯಾರ್ಥಿನಾಯಕರುಗಳು ವ್ಯಾಪಾರಸ್ಥ ಕುಟುಂಬದಿಂದ ಬಂದವರಾಗಿದ್ದಾರೆ" ಎಂದು ತಿಳಿಸಿರುತ್ತಾರೆ. ಆದರೆ ಎಸ್.ಸಿ. ಹಜಾರೆಯವರು ಬಹುಸಂಖ್ಯಾತ ವಿದ್ಯಾರ್ಥಿಗಳು ಮಧ್ಯಮ ವರ್ಗದ ಕುಟುಂಬದಿಂದ ಬಂದವರಾಗಿದ್ದಾರೆ" ಎಂದು ಹೇಳಿದ್ದರೆ. ನಮ್ಮ ಅಧ್ಯಯನವು ಎಸ್. ಸಿ. ಹಜಾರೆಯವರ ಅಭಿಪ್ರಾಕ್ಕೆ ಹತ್ತಿರವಾಗಿದೆ.

ಕೋಷ್ಟಕ –5.9: ಮಾಹಿತಿದಾರರ ಕುಟುಂಬದ ವಾರ್ಷಿಕ ಆದಾಯ

ಕ್ರಸಂ	ಆದಾಯ	ಸಂಖ್ಯೆ	ಶೇಕಡ (%)
1	5000 ರಿಂದ 15000	62	31.00
2	15001 ರಿಂದ 25000	44	22.00
3	25001 ರಿಂದ 50,000	68	34.00
4	50,001 ರಿಂದ 1,00,000	4	2.00
5	1,00,001 ರಿಂದ 3,00,000	10	5.00
6	3,00,001 ರಿಂದ 10,00,000	12	6.00
	ಒಟ್ಟು	**200**	**100.00**

ಯಾವ ಆರ್ಥಿಕ ಮತ್ತು ಸಾಮಾಜಿಕ ಹಿನ್ನೆಲೆಯುಳ್ಳ ವಿದ್ಯಾರ್ಥಿ ಸಮೂಹವನ್ನು ಸಂದರ್ಶಿಸಲಾಯಿತು ಎನ್ನುವ ಮಾಹಿತಿಯನ್ನು ಕೋಷ್ಟಕ 10 ಮತ್ತು ರೇಖಾಚಿತ್ರ 6 ವಿವರಿಸುತ್ತದೆ. ಶೇ. 34 ರಷ್ಟು (68) ವಿದ್ಯಾರ್ಥಿಗಳ ಕುಟುಂಬದ ಆದಾಯ ವಾರ್ಷಿಕ ಆದಾಯ ರೂ. 25001 ರಿಂದ ರೂ 50000 ಆಗಿದೆ. ಶೇ. 31 ರಷ್ಟು (62) ಕುಟುಂಬಗಳು ರೂ 5000 ದಿಂದ ರೂ 15000 ವಾರ್ಷಿಕ ಆದಾಯವನ್ನು ಹೊಂದಿದೆ. ರೂ 3

ಲಕ್ಷದಿಂದ 10 ಲಕ್ಷದವರೆಗಿನ ವಾರ್ಷಿಕ ಆದಾಯ ಹೊಂದಿದ ಕುಟುಂಬಗಳ ಪ್ರಮಾಣ ಶೇ. 6 (12). ಅಂತೆಯೇ ರೂ 15,001 ರಿಂದ 25,000 ದವರೆಗಿನ ವಾರ್ಷಿಕ ಆದಾಯ ಹೊಂದಿದ ಕುಟುಂಬದ ಪ್ರಮಾಣ ಶೇ. 22 (44). ಈ ವಾರ್ಷಿಕ ಆದಾಯವು ಮಾಹಿತಿದಾರರ ಆರ್ಥಿಕ ಸ್ಥಿತಿಗತಿಗಳನ್ನು ತುಲನೆ ಮಾಡಲು ಸಹಾಯವಾಗಿದೆ ಮತ್ತು ಅವರು ಸಾಮಾಜಿಕವಾಗಿ ತೊಡಗಿಸಿಕೊಳ್ಳುವಲ್ಲಿ ಪೂರಕವಾಗಿ ಅದು ಹೇಗೆ ಸಹಕರಿಸಬಹುದು ಎಂಬುದನ್ನು ಅಂದಾಜಿಸಲಾಗಿದೆ.

ಕೋಷ್ಟಕ –5. 10: ವಿದ್ಯಾರ್ಥಿಯಾಗಿ ತಮಗೆ ಹಣಕಾಸಿನ ಮೂಲ ಯಾವುದು?

ಕ್ರ.ಸಂ		ಸಂಖ್ಯೆ	ಶೇಕಡ (%)
1	ವಿದ್ಯಾರ್ಥಿ ವೇತನ	9	5.00
2	ತಂದೆ/ ಪೋಷಕರು	189	94.00
3	ಅರೆಕಾಲಿಕ ಕೆಲಸ	2	1.00
4	ಇತರ	0	0.00
	ಒಟ್ಟು	**200**	**100.00**

ಆಯ್ದ ಕಾಲೇಜುಗಳ ವಿದ್ಯಾರ್ಥಿ ಸಂಘಟನೆಗಳನ್ನು ಸಮೀಕ್ಷೆಗೊಳಪಡಿಸಿದಾಗ, ಶೇ. 94 ರಷ್ಟು (189) ವಿದ್ಯಾರ್ಥಿಗಳಿಗೆ ತಂದೆ ತಾಯಿ ಹಾಗೂ ಪೋಷಕರು ಹಣಕಾಸಿನ ನೆರವನ್ನು ನೀಡುತ್ತಿದ್ದಾರೆ ಎನ್ನುವುದನ್ನು ಕೋಷ್ಟಕ 11 ಮತ್ತು ರೇಖಾಚಿತ್ರ 7 ವಿವರಿಸುತ್ತದೆ. ಅಂದರೆ ವಿದ್ಯಾಭ್ಯಾಸಕ್ಕೆ ನೀಡುವ ಹಣವನ್ನು ವಿದ್ಯಾರ್ಥಿಗಳು ಸಂಘಟನೆಯಲ್ಲಿ ತೊಡಗಿಸಿಕೊಳ್ಳುವ ಸಂದರ್ಭದಲ್ಲಿಯೂ ಬಳಸಿಕೊಳ್ಳುತ್ತಿದ್ದಾರೆ. ಶೇ. 5ರಷ್ಟು (9) ವಿದ್ಯಾರ್ಥಿಗಳು ವಿದ್ಯಾರ್ಥಿವೇತನ ಬಳಸಿಕೊಂಡರೆ, ಶೇ. 1 ರಷ್ಟು (2) ವಿದ್ಯಾರ್ಥಿಗಳು ಅರೆಕಾಲಿಕ ಕೆಲಸಗಳಲ್ಲಿ ತಮ್ಮನ್ನು ತೊಡಗಿಸಿಕೊಂಡು, ಅದರಲ್ಲಿ ಬರುವ ಆದಾಯದಿಂದ ಶೈಕ್ಷಣಿಕ ಮತ್ತು ಸಂಘಟನೆಯಲ್ಲಿ ಬರಬಹುದಾದ ಖರ್ಚು–ವೆಚ್ಚವನ್ನು ಸರಿದೂಗಿಸಿಕೊಳ್ಳುತ್ತಿದ್ದಾರೆ.

ಕೋಷ್ಟಕ –5.11. ಮಾಹಿತಿದಾರರು ಯಾವುದಾದರೂ ರಾಜಕೀಯ ಪಕ್ಷದ ಸದಸ್ಯರೆ?

ಕ್ರ.ಸಂ		ಸಂಖ್ಯೆ	ಶೇಕಡ
1	ಹೌದು	0	0
2	ಇಲ್ಲ	200	100
	ಒಟ್ಟು	**200**	**100**

ವಿದ್ಯಾರ್ಥಿ ಸಮೂಹದ ಸದಸ್ಯರು ಹೆಚ್ಚಾಗಿ ತಮ್ಮ ಕಾರ್ಯಚಟುವಟಿಕೆಗಳನ್ನು ಆಯಾ ಕಾಲೇಜುಗಳಿಗೆ ಸೀಮಿತವಾಗಿ ಸೀಮಿತಗೊಳಿಸಿಕೊಂಡಿರುತ್ತವೆ. ಆದರೆ ಪ್ರಾದೇಶಿಕ ಅಥವಾ ಸ್ಥಳೀಯವಾಗಿ ಹೆಚ್ಚು ಚರ್ಚಿತವಾಗುವ ವಿಷಯಗಳಲ್ಲಿ ಈ ಸಂಘಟನೆಗಳು ತಮ್ಮನ್ನು

ಚಳುವಳಿ, ಹೋರಾಟಗಳ ಮೂಲಕ ತೊಡಗಿಸಿಕೊಳ್ಳುತ್ತವೆ. ಹೀಗೆ ಪರೋಕ್ಷವಾಗಿ ರಾಜಕೀಯ ಪಕ್ಷದ ಪ್ರಭಾವಗಳಿಗೆ ಒಳಗಾಗುತ್ತವೆ. ಕೋಷ್ಟಕ 12 ವಿವರಿಸುವಂತೆ ಶೇ. 100ರಷ್ಟು (200) ವಿದ್ಯಾರ್ಥಿಗಳು ಯಾವುದೇ ರಾಜಕೀಯ ಪಕ್ಷದ ಅಧಿಕೃತ ಸದಸ್ಯರಾಗಿಲ್ಲ.

ಕೋಷ್ಟಕ–12: ಇದಕ್ಕೂ ಮುಂಚೆ ಯಾವುದಾದರೂ ಸಂಘಟನೆಯ ಜೊತೆಗೆ ನಿಕಟ ಸಂಬಂಧ ಹೊಂದಿದ್ದೀರಾ?

ಕ್ರಸಂ		ಸಂಖ್ಯೆ	ಶೇಕಡ (%)
1	ಹೌದು	10	5.00
2	ಇಲ್ಲ	190	95.00
	ಒಟ್ಟು	**200**	**100.00**
ಹೌದಾದರೆ, ಸಂಘಟನೆಯ ಹೆಸರು			
1	ಎನ್. ಎಸ್. ಎಸ್+ಕರ್ನಾಟಕ ರಕ್ಷಣಾ ವೇದಿಕೆ+ಎಐಡಿಎಸ್‌ಬಿ+ಎಬಿವಿಪಿ	10	5.00
	ಒಟ್ಟು	**10**	**5.00**

ಕೋಷ್ಟಕ 12 ಹೇಳುವಂತೆ, ವಿದ್ಯಾರ್ಥಿ ಸಂಘಟನೆಯ ಸದಸ್ಯರಾಗುವುದಕ್ಕೆ ಮುಂಚಿತವಾಗಿ ಯಾವುದಾದರೂ ಇತರ ಸಂಘಟನೆಗಳ ಸದಸ್ಯರಾಗಿದ್ದರೇ ಎನ್ನುವ ಪ್ರಶ್ನೆಯನ್ನು ಮಾಹಿತಿದಾರರಿಗೆ ಕೇಳಲಾಗಿತ್ತು. ಕೇವಲ ಶೇ. 5 ರಷ್ಟು (10) ಮಾತ್ರ ಹೌದು ಎಂದು ಹೇಳಿದರೆ, ಶೇ 95 (190) ರಷ್ಟು ಮಾಹಿತಿದಾರರು ಇಲ್ಲ ಎಂದು ಉತ್ತರಿಸಿದ್ದಾರೆ. ಹೀಗೆ ಪೂರ್ವ ಅನುಭವ ಹೊಂದಿದ ಶೇ. 5 ರಷ್ಟು ವಿದ್ಯಾರ್ಥಿಗಳು ಕರ್ನಾಟಕ ರಕ್ಷಣಾ ವೇದಿಕೆ, ರಾಷ್ಟ್ರೀಯ ಸೇವಾ ಯೋಜನೆ, ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ ಇತ್ಯಾದಿ ಸಂಘಟನೆಗಳಲ್ಲಿ ಸದಸ್ಯರಾಗಿದ್ದರು. ಇದು ಸಾಮಾಜಿಕ ಮತ್ತು ರಾಜಕೀಯ ಪ್ರಭಾವಿತ ಸಂಘಟನೆಗಳು ವಿದ್ಯಾರ್ಥಿ ಸಮೂಹದ ಮೇಲೆ ಪ್ರಭಾವವನ್ನು ತಿಳಿಸುತ್ತದೆ ಹಾಗೂ ಈ ಮೂಲಕ ಯುವಜನತೆಯಲ್ಲಿ ರಾಜಕೀಯ ಪ್ರಜ್ಞೆಯನ್ನು ಸಂಘಟನೆಗಳಲ್ಲಿ ಭಾಗವಹಿಸುವ ಮುಖಾಂತರ ಹೆಚ್ಚಿಸುತ್ತಿದೆ.

ಕೋಷ್ಟಕ –5.13: ಮಾಹಿತಿದಾರರ ತಂದೆ/ತಾಯಿ ಯಾವುದಾದರೂ ರಾಜಕೀಯ ಪಕ್ಷದ ಸಕ್ರಿಯ ಸದಸ್ಯರೇ?

ಕ್ರ.ಸಂ		ಸಂಖ್ಯೆ	ಶೇಕಡ (%)
1	ಹೌದು	16	8.00
2	ಇಲ್ಲ	184	92.00
	ಒಟ್ಟು	**200**	**100.00**
ಹೌದಾದರೆ ಪಕ್ಷ ಮತ್ತು ಪಾತ್ರವನ್ನು ಬರೆಯಿರಿ?			
ಕ್ರ.ಸಂ	ಪಕ್ಷ	ಸಂಖ್ಯೆ	ಶೇಕಡ (%)
1	ಕಾಂಗ್ರೆಸ್+ಜೆಡಿಎಸ್+ಬಿಜೆಪಿ (ಸದಸ್ಯರು)	16	8.00
	ಒಟ್ಟು	**16**	**8.00**
ಇಲ್ಲವಾದರೆ, ನಿಮ್ಮ ಕುಟುಂಬದ ಸದಸ್ಯರಲ್ಲಿ ಯಾರಾದರೊಬ್ಬರು ರಾಜಕೀಯ ಪಕ್ಷದ ಸದಸ್ಯರೇ?			
ಕ್ರ.ಸಂ		ಸಂಖ್ಯೆ	ಶೇಕಡ (%)
1	ಹೌದು	0	0.00
2	ಇಲ್ಲ	184	92.00
	ಒಟ್ಟು	**184**	**92.00**

ವಿದ್ಯಾರ್ಥಿಗಳ ಕುಟುಂಬದ ಸದಸ್ಯರು ರಾಜಕೀಯ ಪಕ್ಷದ ಸದಸ್ಯರಾಗಿದ್ದಲ್ಲಿ, ಅವರ ಪ್ರಭಾವ ವಿದ್ಯಾರ್ಥಿಗಳ ಮೇಲೆ ಬೀರುವುದು ಸಹಜ. ಕೋಷ್ಟಕ 13 ಮತ್ತು ರೇಖಾಚಿತ್ರ 9 ಹೇಳುವಂತೆ, ಶೇ. 8 ರಷ್ಟು (16) ಪೋಷಕರು ರಾಜಕೀಯ ಪಕ್ಷಗಳಾದ ಕಾಂಗ್ರೇಸ್, ಜನತಾದಳ (ಜಾತ್ಯಾತೀತ) ಹಾಗೂ ಭಾರತೀಯ ಜನತಾ ಪಕ್ಷಗಳ ಸದಸ್ಯರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಶೇ. 92ರಷ್ಟು (184) ಪೋಷಕರು ಯಾವುದೇ ರಾಜಕೀಯ ಪಕ್ಷಗಳ ಸದಸ್ಯರಾಗಿರುವುದಿಲ್ಲ. ಅಂತೆಯೇ ಕುಟುಂಬದ ಯಾವುದಾದರೂ ಸದಸ್ಯರು ರಾಜಕೀಯ ಪಕ್ಷಗಳ ಸದಸ್ಯರಾಗಿರುವುದು ಕಂಡುಬರುವುದಿಲ್ಲ.

ಇಂದಿನ ಕಾಲೇಜುಗಳಲ್ಲಿ ವಿದ್ಯಾರ್ಥಿಗಳು ಗುಂಪಿನ ಪ್ರಭಾವಕ್ಕೊಳಗಾಗಿ ವಿದ್ಯಾರ್ಥಿ ಸಂಘಟನೆಗಳಲ್ಲಿ ತೊಡಗಿಸಿಕೊಳ್ಳುವುದನ್ನು ಗಮನಿಸಬಹುದು. ಸಂಘಟನೆಯ ಹಾದಿ ಮತ್ತು ಗುರಿಗಳ ಬಗ್ಗೆ ಸೀಮಿತ ಜ್ಞಾನವನ್ನು ಅವರು ಹೊಂದಿರುವ ಕಾರಣ ಮಾಹಿತಿದಾರರನ್ನು ಸಂಘಟನೆಯ ಬಗ್ಗೆ ಇರುವ ಅರಿವಿನ ಕುರಿತು ಪ್ರಶ್ನೆ ಮಾಡಲಾಗಿತ್ತು. ಈ ಮೂಲಕ ಅವರು ರಾಜಕೀಯವಾಗಿ ಭಾಗವಹಿಸುತ್ತಿದ್ದಾರೆಯೇ ಎನ್ನುವುದನ್ನೂ ತಿಳಿದುಕೊಳ್ಳಲಾಗಿದೆ.

ಕೋಷ್ಟಕ–5.14: ರಾಜಕೀಯ ಅಭಿಪ್ರಾಯ ರೂಪಿಸುವುದು

ಕ್ರಸಂ		ಸಂಖ್ಯೆ	ಶೇಕಡ (%)
1	ಸ್ನೇಹಿತರ ಪ್ರಭಾವ	130	65.00
2	ಸ್ನೇಹಿತರ ಪ್ರಭಾವ ಇಲ್ಲದಿರುವುದು	70	35.00
	ಒಟ್ಟು	**200**	**100.00**

ರಾಜಕೀಯ ಪ್ರಭಾವ ರೂಪಿಸುವಲ್ಲಿ ಸ್ನೇಹಿತರ ಪ್ರಭಾವ ಕುರಿತು ಪ್ರಶ್ನಿಸಲಾಯಿತು. ಇದಕ್ಕೆ ಉತ್ತರವಾಗಿ ಶೇ. 65 ರಷ್ಟು ವಿದ್ಯಾರ್ಥಿಗಳು ರಾಜಕೀಯ ಅಭಿಪ್ರಾಯ ರೂಪಿಸುವಲ್ಲಿ ಸ್ನೆಹಿತರ ಪ್ರಭಾವ ಇದೆ ಎಂದು ಹೇಳುತ್ತಾರೆ. ಶೇ. 35 ರಷ್ಟು ವಿದ್ಯಾರ್ಥಿಗಳು ಸ್ನೇಹಿತರ ಪ್ರಭಾವ ಇಲ್ಲ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಇದರಿಂದ ತಿಳಿದು ಬರುವುದೇನೆಂದರೆ ರಾಜಕೀಯ ಅಭಿಪ್ರಾಯ ರೂಪಿಸಿಕೊಳ್ಳುವಲ್ಲಿ ವಿದ್ಯಾರ್ಥಿಗಳ ಮೇಲೆ ಅವರ ಸ್ನೇಹಿತರ ಪ್ರಭಾವ ಗಣನೀಯವಾಗಿರುವುದನ್ನು ಇದು ಸ್ಪಷ್ಟಪಡಿಸುತ್ತದೆ. ಎಂ. ಎಂ. ಮ್ಯಾಥ್ಯೂ ಅವರು ಕೂಡ ರಾಜಕೀಯ ಅಭಿಪ್ರಾಯ ರೂಪಿಸುವಲ್ಲಿ ಸ್ನೇಹಿತರ ಪಾತ್ರ ಶೇ. 70 ರಷ್ಟು ಇದೆ ಎಂದು ತಮ್ಮ ಅಧ್ಯಯನದಲ್ಲಿ ತಿಳಿಸಿರುತ್ತಾರೆ. ಹಾಗೆಯೇ ನೀನಾ ಶರ್ಮಾ ಅವರು ಕೂಡ ಮಹಿಳೆಯರಲ್ಲಿ ರಾಜಕೀಯ ಪ್ರಜ್ಞೆ ಬೆಳೆಸುವಲ್ಲಿ ಅವರ ಸ್ನೇಹಿತೆಯರ ಪಾತ್ರ ಇರುವುದನ್ನು ಗುರುತಿಸಿರುತ್ತಾರೆ. ಪ್ರಸ್ತುತ ಅಧ್ಯಯನವು ಎಮ್. ಎಮ್. ಮಾಥ್ಯೂ ಅವರ ಅಧ್ಯಯನಕ್ಕೆ ಹೋಲಿಕೆಯಾಗುವುದನ್ನು ನಾವು ನೋಡಬಹುದು.

ಕೋಷ್ಟಕ–5.15: ರಾಜಕೀಯ ಚರ್ಚೆಯ ಪುನರಾವರ್ತನೆ

ಕ್ರಸಂ		ಸಂಖ್ಯೆ	ಶೇಕಡ (%)
1	ನಿಯಮಿತವಾಗಿ	68	34.00
2	ಪ್ರಾಸಂಗಿಕ	120	60.00
3	ಇಲ್ಲ	12	06.00
	ಒಟ್ಟು	**200**	**100.00**

ವಿದ್ಯಾರ್ಥಿಗಳಿಗೆ ರಾಜಕೀಯ ಚರ್ಚೆಯ ಪುನರಾವರ್ತನೆ ವಿಶ್ಲೇಷಣೆ ಮಾಡುವುದಕ್ಕಾಗಿ ಈ ಪ್ರಶ್ನೆಯನ್ನು ಕೇಳಲಾಯಿತು. ಏಕೆಂದರೆ ರಾಜಕೀಯ ಚರ್ಚೆಯು ವಿದ್ಯಾರ್ಥಿಗಳಲ್ಲಿ ರಾಜಕೀಯ ಅರಿವು ಮೂಡಿಸುವಲ್ಲಿ ತುಂಬಾ ಸಹಾಯಕಾರಿಯಾಗುತ್ತದೆ. ಅಂತಹ ಚರ್ಚೆಗಳು ವಿದ್ಯಾರ್ಥಿಗಳನ್ನು ರಾಜಕೀಯ ಸಾಮಾಜೀಕರಣಗೊಳಿಸುವಲ್ಲಿ ಸಹಕರಿಸುತ್ತವೆ. ಇದರಿಂದ ವಿದ್ಯಾರ್ಥಿಗಳು ಕೆಲವೊಂದು ಕೌಶಲ್ಯಗಳು ಹಾಗೂ ಮೌಲ್ಯಗಳನ್ನು ಪಡೆದುಕೊಳ್ಳುವುದರ ಮುಖಾಂತರ ರಾಜಕೀಯದಲ್ಲಿ ಅವರು ಸಕ್ರಿಯವಾಗಿ ಭಾಗವಹಿಸಲು ಸಹಾಯಕವಾಗುತ್ತದೆ. " ರಾಜಕೀಯ ಚರ್ಚೆಯು ರಾಜಕೀಯ ಭಾಗವಹಿಸುವಿಕೆಯ ಭಾಗವಾಗಿದೆ" ಎಂದು ಮ್ಯಾಥ್ಯೂ ಅಭಿಪ್ರಾಯ ಪಡುತ್ತಾರೆ. ಈ ಪ್ರಶ್ನೆಗೆ ವಿದ್ಯಾರ್ಥಿಗಳ

ಅಭಿಪ್ರಾಯ ಈ ರೀತಿಯಾಗಿದೆ. ಶೇ. 34 ರಷ್ಟು ವಿದ್ಯಾರ್ಥಿಗಳು ರಾಜಕೀಯ ಚರ್ಚೆಯನ್ನು ನಿಯಮಿತವಾಗಿ ಮಾಡುತ್ತಾರೆ. ಶೇ. 60 ರಷ್ಟು ವಿದ್ಯಾರ್ಥಿಗಳು ರಾಜಕೀಯ ಚರ್ಚೆಯನ್ನು ಪ್ರಾಸಂಗಿಕವಾಗಿ ಮಾಡುತ್ತಾರೆ. ಇದರಿಂದ ತಿಳಿದು ಬರುವುದೇನೆಂದರೆ ಶೇ. 94 ರಷ್ಟು ವಿದ್ಯಾರ್ಥಿಗಳು ರಾಜಕೀಯ ವಿಷಯಗಳನ್ನು ಚರ್ಚಿಸುತ್ತಾರೆ. ಹೆಚ್ಚಿನ ರಾಜಕೀಯ ಅರಿವು ವಿದ್ಯಾರ್ಥಿಗಳಲ್ಲಿ ಇದೆ ಎಂಬುವುದು ಇದರಿಂದ ತಿಳಿದು ಬರುತ್ತದೆ.

ಕೋಷ್ಟಕ–5.16: ವಿದ್ಯಾರ್ಥಿಗಳಲ್ಲಿ ಚರ್ಚೆಗೆ ಬರುವ ಪ್ರಮುಖ ವಿಷಯಗಳು

ಕ್ರ.ಸಂ		ಶೇಕಡ (%)
1	ರಾಜಕೀಯ	65.00
2	ಶಿಕ್ಷಣ	43.00
3	ಧರ್ಮ	20.00
4	ಚಲನಚಿತ್ರ	30.00
5	ಕ್ರೀಡೆ	35.00

ಚರ್ಚೆಗೆ ಬರುವ ಐದು ಪ್ರಮುಖ ವಿಷಯಗಳನ್ನು ವಿದ್ಯಾರ್ಥಿಗಳಿಗೆ ನೀಡಲಾಗಿತ್ತು. ಇದರಲ್ಲಿ 65 ರಷ್ಟು ವಿದ್ಯಾರ್ಥಿಗಳು ರಾಜಕೀಯ ಚರ್ಚಿಸುವುದಾಗಿ ಹೇಳಿದರೆ, ಶೇ. 43 ರಷ್ಟು ವಿದ್ಯಾರ್ಥಿಗಳು ಶಿಕ್ಷಣದ ಕುರಿತು ಚರ್ಚಿಸುತ್ತೇವೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಹಾಗೆಯೆ, ಶೇ. 20 ರಷ್ಟು ವಿದ್ಯಾರ್ಥಿಗಳು ಧರ್ಮಕ್ಕೆ ಸಂಬಂಧಿಸಿದ ವಿಷಯಗಳ ಕುರಿತು ಚರ್ಚಿಸಿದರೆ, ಶೇ. 30 ರಷ್ಟು ವಿದ್ಯಾರ್ಥಿಗಳು ಚಲನಚಿತ್ರ ಹಾಗೂ ಶೇ. 35 ರಷ್ಟು ವಿದ್ಯಾರ್ಥಿಗಳು ಕ್ರೀಡೆಯ ಕುರಿತು ಚರ್ಚಿಸುತ್ತೇವೆ ಎಂದು ಹೇಳುತ್ತಾರೆ. ಶೇ. 65 ರಷ್ಟು ವಿದ್ಯಾರ್ಥಿಗಳು ರಾಜಕೀಯ ವಿಷಯಕ್ಕೆ ಸಂಬಂಧಿಸಿದ ವಿಷಯಗಳನ್ನು ಚರ್ಚಿಸುತ್ತೇವೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಇದರಿಂದ ತಿಳಿದು ಬರುವುದೇನೆಂದರೆ ವಿದ್ಯಾರ್ಥಿಗಳು ರಾಜಕೀಯವಾಗಿ ತುಂಬಾ ಪ್ರಜ್ಞಾವಂತರಾಗಿದ್ದಾರೆ. ಆದರೆ ಸಾಮನ್ಯವಾಗಿ ವಿದ್ವಾಂಸರು ಭಾರತದ ವಿದ್ಯಾರ್ಥಿಗಳು ರಾಜಕೀಯಕರಣಕ್ಕೆ ಒಳಗಾಗಿಲ್ಲ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿರುತ್ತಾರೆ. ಗಾಡಿನೋ ರವರು "ಭಾರತದ ವಿದ್ಯಾರ್ಥಿಗಳು ಸಮಸ್ಯಾತ್ಮಕವಾಗಿದ್ದು, ವಿದ್ಯಾರ್ಥಿ ಸಮೂದಾಯಕ್ಕೆ ಹೆಚ್ಚಿನ ಅನುಕೂಲತೆಗಳೇನನ್ನು ಮಾಡಿಲ್ಲವೆಂದು" ತಿಳಿಸಿರುತ್ತಾರೆ. ಲಿಪ್‌ಸೆಟ್ ರವರು "ಭಾರತದ ವಿದ್ಯಾರ್ಥಿಗಳು ತಲೆನೋವಾಗಿದ್ದಾರೆ" ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಆದರೆ ಪ್ರಸ್ತುತ ಅಧ್ಯಯನದಿಂದ ತಿಳಿದು ಬರುವುದೇನೆಂದರೆ ವಿದ್ಯಾರ್ಥಿಗಳು ರಾಜಕೀಯ ವಿಷಯಗಳನ್ನು ತಿಳಿದುಕೊಳ್ಳಲು ಉತ್ಸುಕರಾಗಿದ್ದಾರೆ. ಹಾಗೆಯೇ, ರಾಜಕೀಯ ವಿಷಯಗಳನ್ನು ಅವರು

ಹೆಚ್ಚಾಗಿ ಚರ್ಚೆ ಮಾಡುತ್ತಾರೆ. ಅಂದರೆ ವಿದ್ಯಾರ್ಥಿಗಳಲ್ಲಿ ರಾಜಕೀಯ ಪ್ರಜ್ಞೆ ಇದೆ ಎಂಬುವುದು ಇದರಿಂದ ತಿಳಿದು ಬರುತ್ತದೆ.

ಕೋಷ್ಟಕ–5.17: ರಾಜಕೀಯ ಕುರಿತು ವಿದ್ಯಾರ್ಥಿಗಳ ಅಭಿಪ್ರಾಯ

ಕ್ರ.ಸಂ		ಸಂಖ್ಯೆ	ಶೇಕಡ (%)
1	ವಿದ್ಯಾರ್ಥಿಗಳು ರಾಜಕೀಯದಲ್ಲಿ ಭಾಗವಹಿಸಬೇಕು	96	48.00
2	ವಿದ್ಯಾರ್ಥಿಗಳು ಕ್ಯಾಂಪಸ್ ರಾಜಕೀಯದಲ್ಲಿ ಭಾಗವಹಿಸಬೇಕು	56	28.00
3	ವಿದ್ಯಾರ್ಥಿಗಳು ಕೇವಲ ಅಧ್ಯಯನದ ಕಡೆಗೆ ತಮ್ಮ ಗಮನ ಕೆಂದ್ರಿಕರಿಸಬೇಕು	48	24.00
	ಒಟ್ಟು	**200**	**100.00**

ರಾಜಕೀಯದಲ್ಲಿ ಭಾಗವಹಿಸುವಿಕೆ ಕುರಿತು ವಿದ್ಯಾರ್ಥಿಗಳ ಅಭಿಪ್ರಾಯ ಏನು ಎಂಬ ಪ್ರಶ್ನೆಗೆ ಶೇ. 48 ರಷ್ಟು ವಿದ್ಯಾರ್ಥಿಗಳು ರಾಜಕೀಯದಲ್ಲಿ ಭಾಗವಹಿಸಬೇಕು ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿರುತ್ತಾರೆ. ಶೇ. 28 ರಷ್ಟು ವಿದ್ಯಾರ್ಥಿಗಳು ಕ್ಯಾಂಪಸ್ ರಾಜಕೀಯದಲ್ಲಿ ಭಾಗವಹಿಸಬೇಕು ಎಂಬ ಅಭಿಪ್ರಾಯವನ್ನು ನೀಡಿದರೆ ಕೇವಲ 24 ರಷ್ಟು ವಿದ್ಯಾರ್ಥಿಗಳು ಅಭ್ಯಾಸದ ಕಡೆಗೆ ತಮ್ಮ ಒಲವನ್ನು ತೋರಿಸಿದ್ದಾರೆ. ಅಂದರೆ ಬಹುಸಂಖ್ಯಾತ ವಿದ್ಯಾರ್ಥಿಗಳು ರಾಜಕೀಯದಲ್ಲಿ ಭಾಗವಹಿಸಬೇಕು ಎಂಬ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಮ್ಯಾಥ್ಯೂ ಅವರ ಅಧ್ಯಯನವು ಕೂಡ ಪ್ರಸ್ತುತ ಅಧ್ಯಯನಕ್ಕೆ ಪೂರಕವಾಗಿದೆ. ಆದ್ದರಿಂದ ಮತದಾನದ ವಯಸ್ಸು 21 ರಿಂದ 18 ವರ್ಷಗಳಿಗೆ ಕಡಿಮೆ ಮಾಡಿರುವುದನ್ನು ಅವರು ತಮ್ಮ ಅಧ್ಯಯನದಲ್ಲಿ ಸಮರ್ಥಿಸಿರುತ್ತಾರೆ. ಏಕೆಂದರೆ ಇದರಿಂದ ಯುವಕರು ರಾಜಕೀಯ ಚಟುವಟಿಕೆಯಲ್ಲಿ ಹೆಚ್ಚು ಹೆಚ್ಚು ಭಾಗವಹಿಸಲು ಸಾಧ್ಯವಾಗುತ್ತದೆ ಎಂದು ಅವರು ಅಭಿಪ್ರಾಯ ಪಟ್ಟಿರುತ್ತಾರೆ.

ವಿದ್ಯಾರ್ಥಿಗಳು ರಾಜಕೀಯದಲ್ಲಿ ಏಕೆ ಭಾಗವಹಿಸಬೇಕು ಎನ್ನುವುದಕ್ಕೆ ಡಿ. ಕೆ. ಮೊಹಂತಿ ಅವರು ತಮ್ಮ ಅಧ್ಯಯನದಲ್ಲಿ ಪ್ರಮುಖವಾಗಿ ಮೂರು ಕಾರಣಗಳನ್ನು ನೀಡುತ್ತಾರೆ. ಮೊದಲನೆಯದಾಗಿ, ವಿದ್ಯಾರ್ಥಿಗಳು ಸಮಾಜದ ಪ್ರಜ್ಞಾವಂತ, ಬುದ್ಧಿವಂತ ಮತ್ತು ಸಂವೇದನಾಶೀಲ ಸಮೂದಾಯವಾಗಿದ್ದು, ರಾಜಕೀಯದಲಿ ಭಾಗವಹಿಸಿ, ದೇಶ ಎದುರಿಸುತ್ತಿರುವ ಸಮಸ್ಯೆಗಳಿಗೆ ಪರಿಹಾರಗಳನ್ನು ಹುಡುಕಬೇಕು. ಎರಡನೆಯದಾಗಿ, ರಾಜಕೀಯದಲ್ಲಿ ಭಾಗವಹಿಸುವುದರಿಂದ ವಿದ್ಯಾರ್ಥಿಗಳಿಗೆ ಸಾರ್ವಜನಿಕ ಬದುಕಿನ ಕುರಿತು ತರಬೇತಿ ಸಿಗುತ್ತದೆ. ಇದರಿಂದ ಅವರು ಮುಂದೆ ಪ್ರಭಾವಿ ಮತ್ತು ಜವಾಬ್ದಾರಿಯುತ

ನಾಗರಿಕರಾಗಲು ಸಾಧ್ಯವಾಗುತ್ತದೆ. ಮೂರನೆಯದಾಗಿ, ಭಾರತದಂತಹ ಅಭಿವೃದ್ಧಿ ಹೊಂದುತ್ತಿರುವ ದೇಶದಲ್ಲಿ ವಿದ್ಯಾರ್ಥಿಗಳು ವಿದ್ಯಾವಂತರು, ಸುಶಿಕ್ಷಿತರು ಹಾಗೂ ರಾಜಕೀಯ ಪ್ರಜ್ಞೆ ಇರುವವರು ಆಗಿರುವುದರಿಂದ ಅವರ ಸಾಮರ್ಥ್ಯ ವ್ಯರ್ಥವಾಗದೆ ಅವರು ರಾಜಕೀಯದಲ್ಲಿ ಭಾಗವಹಿಸಿ, ರಾಜಕೀಯದಲ್ಲಿನ ಭ್ರಷ್ಟಾಚಾರ, ಅಸಮರ್ಥ ಆಡಳಿತ ಮತ್ತು ದೋಷಪೂರಿತ ಆರ್ಥಿಕ ನೀತಿಗಳನ್ನು ಹೋಗಲಾಡಿಸಲು ತಮ್ಮ ಸಮಯವನ್ನು ವ್ಯಯಗೊಳಿಸಬೇಕು. ಹಾಗೆಯೆ, ಡಿ. ಕೆ. ಮೊಹಂತಿ ಅವರ ಅಧ್ಯಯನ ವಿದ್ಯಾರ್ಥಿಗಳು ರಾಜಕೀಯದಲ್ಲಿ ಏಕೆ ಭಾಗವಹಿಸಬಾರದು ಎಂಬುವುದರ ಬಗ್ಗೆಯೂ ಬೆಳಕು ಚೆಲ್ಲುತ್ತದೆ. ಅವರು ಈ ಕೆಳಗಿನ ಮೂರು ಪ್ರಮುಖ ಕಾರಣಗಳನ್ನು ನೀಡುತ್ತಾರೆ. ಮೊದಲನೆಯದಾಗಿ, ವಿದ್ಯಾರ್ಥಿಗಳು ರಾಜಕೀಯದಲ್ಲಿ ಸಕ್ರಿಯವಾಗಿ ಭಾಗವಹಿಸುವುದರಿಂದ ಶೈಕ್ಷಣಿಕ ಸಂಸ್ಥೆಗಳು ರಾಜಕೀಯ ಅಖಾಡವಾಗಿ ಮಾರ್ಪಡುತ್ತವೆ. ಎರಡನೆಯದಾಗಿ, ಅಧ್ಯಯನ ವಿದ್ಯಾರ್ಥಿ ಜೀವನದ ಪ್ರಮುಖ ಆದ್ಯತೆ ಆಗಿರುತ್ತದೆ. ವಿದ್ಯಾರ್ಥಿಗಳು ರಾಜಕೀಯದಲ್ಲಿ ಭಾಗವಹಿಸುವುದರಿಂದ ಅವರು ಅಧ್ಯಯನದ ಕಡೆಗೆ ಗಮನ ಕೊಡಲು ಸಾಧ್ಯವಾಗುವುದಿಲ್ಲ. ಮೂರನೆಯದಾಗಿ, ರಾಜಕೀಯ ಚಟುವಟಿಕೆಗಳಲ್ಲಿ ಆಸಕ್ತಿ ಬೆಳಸಿಕೊಳ್ಳವುದರಿಂದ ವಿದ್ಯಾರ್ಥಿಗಳಿಗೆ ಪಠ್ಯ ಮತ್ತು ಪಠ್ಯೇತರ ಚಟುವಟಿಕೆಗಳಲ್ಲಿ ಭಾಗವಹಿಸಲು ಅವರಿಗೆ ಸಮಯ ಸಿಗುವುದಿಲ್ಲ ಹಾಗೂ ಇದರ ಪರಿಣಾಮವೇನೆಂದರೆ, ಅವರಲ್ಲಿ ಅಶಿಸ್ತು ಮೂಡಲು ಕಾರಣವಾಗುತ್ತದೆ. ಆದರೆ ಪ್ರಸ್ತುತ ನಮ್ಮ ಅಧ್ಯಯನವು ವಿದ್ಯಾರ್ಥಿಗಳು ರಾಜಕೀಯದಲ್ಲಿ ಭಾಗವಹಿಸಬೇಕು ಎಂದು ಹೇಳುತ್ತದೆ.

ಆರ್. ಅರುಣ್ ಕುಮಾರ್ ರವರ ಸೆವೆಂಟಿ ಇಯರ್ಸ್ ಆಫ್ ಸ್ಟುಡೆಂಟ್ ಮೂವ್‌ಮೆಂಟ್ ಎಂಬ ಲೇಖನವನ್ನು ಬಹಳ ಸೂಕ್ಷ್ಮವಾಗಿ ಅಧ್ಯಯನ ಮಾಡಲಾಯಿತು. ವಿದ್ಯಾರ್ಥಿಗಳನ್ನು ರಾಜಕೀಯದಿಂದ ದೂರವಿಡುವ ವ್ಯವಸ್ಥಿತ ತಂತ್ರಗಾರಿಕೆಯ ಬಗ್ಗೆ ತಮ್ಮ ಲೇಖನದಲ್ಲಿ ವಿವರವಾದ ವಿವರಣೆ ನೀಡುತ್ತಾರೆ. ಇದು ನವ-ಉದಾರವಾದಿಗಳ ಒಂದು ಷಡ್ಯಂತ್ರವಾಗಿದೆ ಎಂದು ಅವರು ಅಭಿಪ್ರಾಯ ಪಡುತ್ತಾರೆ. ಲಾಲ ಲಜಪತ್ ರಾಯ್ ಅಖಿಲ ಭಾರತ ವಿದ್ಯಾರ್ಥಿ ಸಮ್ಮೇಳನವನ್ನು ಉದ್ಘಾಟಿಸಿ ಅವರು ಹೇಳಿದ ವಿಚಾರಗಳನ್ನು ಅರುಣ್ ಕುಮಾರ್ ಇಲ್ಲಿ ಪ್ರಸ್ತುತಪಡಿಸಿದ್ದಾರೆ. ವಿದ್ಯಾರ್ಥಿಗಳು ರಾಜಕೀಯದಲ್ಲಿ ಭಾಗವಹಿಸಬಾರದೆಂದು ಹೇಳುವುದರಲ್ಲಿ ನನಗೆ ನಂಬಿಕೆ ಇಲ್ಲ. ನನ್ನ ಅಭಿಪ್ರಾಯದಲ್ಲಿ ಇದು ಮೂರ್ಖ ಸಿಧ್ಧಾಂತ ಮತ್ತು ಅಸಾಧ್ಯವಾದ ಸಿದ್ಧಾಂತ ಕೂಡ. ಇದನ್ನು ಹುಟ್ಟು ಹಾಕಿದವರು ಅಪ್ರಮಾಣಿಕ ಬುದ್ಧಿವಂತರು. ರಾಜಕೀಯ ಕ್ಷೇತ್ರದ ಮೇಲೆ ಏಕಸ್ವಾಮ್ಯ ಸಾಧಿಸುವುದು ಇವರ ಉಧ್ದೇಶವಾಗಿದೆ. ವಿದ್ಯಾರ್ಥಿ ಸಮುದಾಯ ಪ್ರಜ್ಞಾವಂತರ ಸಮೂಹವಾಗಿದ್ದು ರಾಜಕೀಯದಲ್ಲಿ ಅವರು ಸಕ್ರಿಯವಾಗಿ ಭಾಗವಹಿಸಲು ಪ್ರಾರಂಭಿಸಿದರೆ ಎಲ್ಲಿ ತಮ್ಮ ಅಸ್ತಿತ್ವಕ್ಕೆ ಸಂಚಕಾರ ಬರಬಹುದೆಂಬುದು ಅವರ ಲೆಕ್ಕಚಾರವಾಗಿರಬೇಕು.

ಸಮಾಜದ ಇನ್ನೊಂದು ವರ್ಗವು ವಿದ್ಯಾರ್ಥಿಗಳು ರಾಜಕೀಯದಲ್ಲಿ ಭಾಗವಹಿಸುವುದನ್ನು ವಿರೋಧಿಸುತ್ತದೆ. ಅವರ ಪ್ರಕಾರ ವಿದ್ಯಾರ್ಥಿಗಳು ರಾಜಕೀಯದಲ್ಲಿ ಭಾಗವಹಿಸಿದರೆ ಓದಿನ ಕಡೆಗೆ ಹೆಚ್ಚಿನ ಗಮನ ನೀಡುವುದಿಲ್ಲ. ಅಲ್ಲದೆ ವಿದ್ಯಾರ್ಥಿಗಳು ಸಮಾಜದ ಸಮಸ್ಯೆಗಳ ಬಗ್ಗೆ ಹೆಚ್ಚಿಗೆ ಚಿಂತಿಸದೆ ತಮ್ಮ ಅಧ್ಯಯನದ ಕಡೆಗೆ ಹೆಚ್ಚಿನ ಗಮನ ನೀಡಬೇಕು ಎಂಬುದು ಇವರ ವಾದವಾಗಿದೆ. ಒಟ್ಟಿನಲ್ಲಿ ಈ ಲೇಖನವು ವಿದ್ಯಾರ್ಥಿಗಳನ್ನು ರಾಜಕೀಯದಿಂದ ದೂರವಿಡಬೇಕು ಎಂಬ ಷಡ್ಯಂತ್ರವನು ಎಳೆ ಎಳೆಯಾಗಿ ವರ್ಣಿಸುತ್ತದೆ.

ಕೋಷ್ಟಕ–5.18: ಮುಂದೆ ರಾಜಕೀಯವನ್ನು ವೃತ್ತಿಯಾಗಿ ಮುಂದುವರಿಸುತ್ತೀರಾ?

ಕ್ರಸಂ		ಸಂಖ್ಯೆ	ಶೇಕಡ
1	ಹೌದು	32	16.00
2	ಇಲ್ಲ	145	73.00
3	ಗೊತ್ತಿಲ್ಲ	23	11.00
	ಒಟ್ಟು	**200**	**100.00**

ಕೋಷ್ಟಕ 43 ಹೇಳುವಂತೆ ಶೇ. 16 ರಷ್ಟು (32) ವಿದ್ಯಾರ್ಥಿಗಳು ರಾಜಕೀಯವನ್ನು ವೃತ್ತಿಯನ್ನಾಗಿ ಮಾಡಿಕೊಂಡರೆ, ಶೇ. 73 (145) ರಷ್ಟು ವಿದ್ಯಾರ್ಥಿಗಳು ರಾಜಕೀಯ ಎನ್ನುವುದು ವೃತ್ತಿಯಾಗಲಾರದು ಎಂದು ಹೇಳುತ್ತಾರೆ. ಹಾಗೆಯೇ ಶೇ. 11 ರಷ್ಟು (23) ಇದರ ಬಗ್ಗೆ ಏನೂ ತಿಳಿದಿಲ್ಲ ಎಂದು ವಿವರಿಸಿದ್ದಾರೆ. ಡಿ. ಕೆ. ಮೊಹೊಂತಿಯವರ ಅಧ್ಯಯನ ಕೂಡ ಬಹುಸಂಖ್ಯಾತ ವಿದ್ಯಾರ್ಥಿಗಳು ರಾಜಕೀಯವನ್ನು ಒಂದು ವೃತ್ತಿಯನ್ನಾಗಿ ಮುಂದುವರೆಸಲು ಸಿದ್ಧರಿಲ್ಲ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತದೆ. ರಾಜಕೀಯ ಅನಿಶ್ಚಿತವಾಗಿರುವುದು ಮತ್ತು ಭದ್ರತೆ ಇಲ್ಲದಿರುವುದು ಇದಕ್ಕೆ ಪ್ರಮುಖ ಕಾರಣವೆಂದು ಹೇಳಬಹುದು. ಅದರಲ್ಲಿಯೂ ಮಧ್ಯಮ ವರ್ಗದ ವಿದ್ಯಾರ್ಥಿಗಳು ಬದುಕಿಗೆ ಭದ್ರತೆ ಒದಗಿಸುವ ಉದ್ಯೋಗಳನ್ನೆ ತಮ್ಮ ವೃತ್ತಿಯಾಗಿ ಮುಂದುವರೆಸಲು ಇಷ್ಟ ಪಡುತ್ತಾರೆ. ಅಷ್ಟೆ ಅಲ್ಲದೆ, ಇಂದು ರಾಜಕೀಯದ ಬಗ್ಗೆ ವಿದ್ಯಾರ್ಥಿಗಳಲ್ಲಿ ನಕರಾತ್ಮಕ ಧೋರಣೆ ಇರುವುದನ್ನು ನಾವು ನೋಡಬಹುದು. ಬಹುಸಂಖ್ಯಾತ ವಿದ್ಯಾರ್ಥಿಗಳು ರಾಜಕೀಯ ಬುದ್ಧಿವಂತರ ಮತ್ತು ಸಂಭಾವಿತರ ಕಾರ್ಯಕ್ಷೇತ್ರವಲ್ಲ ಎಂಬ ಅಭಿಪ್ರಾಯವನ್ನು ವ್ಯಕ್ತ ಪಡಿಸುತ್ತಾರೆ. ಟಿ. ಮಲ್ಲಪ್ಪ ರವರ ಪ್ರಕಾರ " ಕೆಲವರಿಗೆ ರಾಜಕೀಯ ಎಂದ ಕೂಡಲೆ ಒಂದು ತೆರನಾದ ವಾಕರಿಕೆ. ಅವರ ದೃಷ್ಟಿಯಲ್ಲಿ ರಾಜಕೀಯ ತೀರಾ ಕ್ಷುಲಕವಾದುದು, ಸಂಪನ್ನರಲ್ಲದ ಕೆಳಮಟ್ಟದ ಜನ ಅನಿವಾರ್ಯವಾಗಿ ರಾಜಕೀಯವನ್ನು ಒಂದು ವೃತ್ತಿಯನ್ನಾಗಿ ಅಥವಾ ದಂಧೆಯನ್ನಾಗಿ ಆಶ್ರಯಿಸುತ್ತಾರೆ. ರಾಜಕೀಯದಲ್ಲಿ ಸುಳ್ಳು, ಮೋಸ, ವಂಚನೆ, ಕೊಲೆ, ಸುಲಿಗೆ, ದೊಂಬಿ ಇತ್ಯಾದಿಗಳು ಇದ್ದದೆ. ಇಲ್ಲಿ ನೀತಿ ನಿಯಮ ಲೆಕ್ಕಕ್ಕಿಲ್ಲ. ರಾಜಕೀಯ ಮಡುವುದೇ ಸ್ವಾರ್ಥಕ್ಕಾಗಿ,

ಅಧಿಕಾರ ಏನೆಲ್ಲಾ ಮಾಡಿಸುತ್ತದೆ. ಸಂಪನ್ನರು, ಪ್ರಮಾಣಿಕರೆನಿಸಿದವರಿಗೆ ಸ್ಥಾನವಿಲ್ಲ. ಎನಿದ್ದರೂ ಸಮಾಜ ಬಾಹಿರ ಕೆಲಸಗಳಲ್ಲಿ ತೊಡಗಿರುವವರು ಹತಾಶರಾಗಿ ಕೊನೆಯಲ್ಲಿ ರಾಜಕೀಯ ಬದುಕನ್ನು ಆಶ್ರಯಿಸುತ್ತಾರೆ. ಜೀವನ ನಿರ್ವಹಣೆಗೆ ಯಾವದೇ ವೃತ್ತಿ ಅಥವಾ ಉದ್ಯೋಗದಿಂದ ವಂಚಿತರಾದವರಿಗೆ ರಾಜಕೀಯ ಕೊನೆಯ ಆಶ್ರಯ ತಾಣವಾಗುತ್ತದೆ." ಹೀಗಾಗಿ ರಾಜಕೀಯದ ಬಗ್ಗೆ ಇರುವ ನಕರಾತ್ಮಕ ಧೋರಣೆಯಿಂದಾಗಿ ಬಹಸಂಖ್ಯಾತ ವಿದ್ಯಾರ್ಥಿಗಳು ರಾಜಕೀಯವನ್ನು ಒಂದು ವೃತ್ತಿಯನ್ನಾಗಿ ಮುಂದುವರೆಸಲು ಇಷ್ಟಪಡುವುದಿಲ್ಲ.

ಕೋಷ್ಟಕ–5.19: ವಿದ್ಯಾರ್ಥಿಗಳು ರಾಜಕೀಯ ಪಕ್ಷದ ಸದಸ್ಯರಾಗಿರಬೇಕೇ?

ಕ್ರಸಂ		ಸಂಖ್ಯೆ	ಶೇಕಡ
1	ಹೌದು	19	10.00
2	ಇಲ್ಲ	174	87.00
3	ಗೊತ್ತಿಲ್ಲ	3	1.00
4	ವಿದ್ಯಾರ್ಥಿಗಳ ಆಸಕ್ತಿಗೆ ಬಿಟ್ಟದ್ದು	4	2.00
	ಒಟ್ಟು	**200**	**100.00**

ಕೋಷ್ಟಕ 44 ಹೇಳುವಂತೆ ಶೇ. 10 ರಷ್ಟು (19) ವಿದ್ಯಾರ್ಥಿಗಳು ರಾಜಕೀಯ ಪಕ್ಷದ ಸದಸ್ಯತ್ವವನ್ನು ಒಪ್ಪಿಕೊಂಡಿದ್ದರೆ, ಶೇ. 87 ರಷ್ಟು (174) ವಿದ್ಯಾರ್ಥಿಗಳು ಪಕ್ಷಗಳ ಸದಸ್ಯತ್ವವಾಗಬೇಕಾಗಿಲ್ಲ ಎಂದು ಅಭಿಪ್ರಾಯ ವ್ಯಕ್ತಪಡಿಸುತ್ತಾರೆ

ಕೋಷ್ಟಕ–5.20: ವಿದ್ಯಾರ್ಥಿಗಳು ರಾಜಕೀಯ ಪಕ್ಷಗಳ ಸಹಾಯ ಕೋರಬೇಕೆ?

ಕ್ರಸಂ		ಸಂಖ್ಯೆ	ಶೇಕಡ
1	ಹೌದು	21	11.00
2	ಇಲ್ಲ	177	88.00
3	ಗೊತ್ತಿಲ್ಲ	2	1.00
	ಒಟ್ಟು	**200**	**100.00**

ಕೋಷ್ಟಕ 45 ಹೇಳುವಂತೆ ಶೇ. 11 ರಷ್ಟು (21) ವಿದ್ಯಾರ್ಥಿಗಳು ರಾಜಕೀಯ ಪಕ್ಷಗಳ ಸಹಾಯ ಯಾಚಿಸುತ್ತಿದ್ದಾರೆ. ಹಾಗೆಯೇ ಶೇ. 88 ರಷ್ಟು (177) ವಿದ್ಯಾರ್ಥಿಗಳು ಪಕ್ಷಗಳ ಸಹಾಯ ಬೇಕಾಗಿಲ್ಲ ಎಂದು ಹೇಳುತ್ತಾರೆ. ಬಹು ಸಂಖ್ಯಾತ ವಿದ್ಯಾರ್ಥಿಗಳು ಸಾರ್ವಜನಿಕ ವಿಷಯಗಳಿಗೆ ಸಂಬಂಧಿಸಿದಂತೆ ರಾಜಕೀಯ ಪಕ್ಷಗಳ ಸಹಾಯ ತಗೆದುಕೊಳ್ಳಬಾರದು ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ. ಇದರಿಂದ ಹಾನಿಯೆ ಹೊರತು ಲಾಭವಾಗುವುದಿಲ್ಲ ಎಂಬ ಅಭಿಮತ ವಿದ್ಯಾರ್ಥಿಗಳು ಹೊಂದಿದ್ದಾರೆ. ಅವರ ಪ್ರಮುಖ ವಾದವೇನೆಂದರೆ ರಾಜಕೀಯ ಪಕ್ಷಗಳ ಸಹಾಯ ಕೋರಿದರೆ ನೇರವಾಗಿ ರಾಜಕೀಯ ಹಸ್ತಕ್ಷೇಪ ಉಂಟಾಗುತ್ತದೆ.

ಇದು ಶೈಕ್ಷಣಿಕ ಸಂಸ್ಥೆಗಳಲ್ಲಿ ಶಿಕ್ಷಣದ ವಾತಾವರಣವನ್ನು ಹದಗೆಡಿಸುತ್ತದೆ. ಶಿಕ್ಷಣವನ್ನು ರಾಜಕೀಯಕರಣ ಗೊಳಿಸುವುದಕ್ಕೆ ಅನುವು ಮಾಡಿಕೊಡುತ್ತದೆ. ಇನ್ನೂ ರಾಜಕೀಯ ಪಕ್ಷಗಳ ಸಹಾಯ ತಗೆದುಕೊಳ್ಳಬೇಕು ಎಂಬ ವಿದ್ಯಾರ್ಥಿಗಳ ವಾದ ಈ ರೀತಿಯಾಗಿದೆ. ರಾಜಕೀಯ ಪಕ್ಷಗಳು ದೇಶದ ಹಲವಾರು ಪ್ರಮುಖ ವಿಷಯಗಳಿಗೆ ಸಂಬಂಧಿಸಿದಂತೆ ಸಾರ್ವಜನಿಕ ಅಭಿಪ್ರಾಯವನ್ನು ರೂಪಿಸುತ್ತವೆ. ಆದ್ದರಿಂದ ವಿದ್ಯಾರ್ಥಿಗಳು ಕೂಡ ಸಾಮಾಜಿಕ ಸಂಗತಿಗಳಿಗೆ ಸಂಬಂಧಿಸಿದಂತೆ ರಾಜಕೀಯ ಪಕ್ಷಗಳ ಸಹಾಯ ಪಡೆದರೆ ಈ ವಿಷಯಗಳ ಬಗ್ಗೆ ಆಳವಾಗಿ ತಿಳಿದುಕೊಳ್ಳಲು ಸಾಧ್ಯವಾಗುತ್ತದೆ. ಹೀಗಾಗಿ ಪ್ರಮುಖ ಸಾರ್ವಜನಿಕ ವಿಷಯಗಳಿಗೆ ಸಂಬಂಧಿಸಿದಂತೆ ರಾಜಕೀಯ ಪಕ್ಷಗಳ ಸಹಾಯ ಕೋರುವುದರಲ್ಲಿ ಯಾವುದೆ ತಪ್ಪಿಲ್ಲ ಎಂಬ ವಾದವನ್ನು ಅವರು ಮಂಡಿಸುತ್ತಾರೆ. ಆದರೆ ಬಹುಸಂಖ್ಯಾತ ವಿದ್ಯಾರ್ಥಿಗಳು ಸಾರ್ವಜನಿಕ ಸಂಗತಿಗಳಿಗೆ ಸಂಬಂಧಿಸಿದಂತೆ ರಾಜಕೀಯ ಪಕ್ಷಗಳ ಅಭಿಪ್ರಾಯ ತಗೆದುಕೊಳ್ಳುವುದರ ವಿರುದ್ಧ ತಮ್ಮ ಅಭಿಪ್ರಾಯವನ್ನು ನೀಡಿರುತ್ತಾರೆ. ಡಿ. ಕೆ. ಮೊಹಂತಿಯವರ ಅಧ್ಯಯನ ಕೂಡ ಮೇಲಿನ ಅಭಿಪ್ರಾಯವನ್ನು ಪುಷ್ಠಿಕರಿಸುತ್ತದೆ.

ಕೋಷ್ಟಕ–5.21: ರಾಜಕೀಯ ಪಕ್ಷಗಳು ಆಯೋಜಿಸುವ ವಿಚಾರ ಸಂಕಿರಣ ಮತ್ತು ಸಮಾರಂಭಗಳಿಗೆ ವಿದ್ಯಾರ್ಥಿಗಳು ಹಾಜರಾಗಬೇಕೆ?

ಕ್ರ.ಸಂ		ಸಂಖ್ಯೆ	ಶೇಕಡ
1	ಹೌದು	167	84.00
2	ಇಲ್ಲ	25	13.00
3	ಗೊತ್ತಿಲ್ಲ	8	3.00
	ಒಟ್ಟು	**200**	**100.00**

ಕೋಷ್ಟಕ 46 ಹೇಳುವಂತೆ ಶೇ. 84 ರಷ್ಟು (167) ವಿದ್ಯಾರ್ಥಿಗಳು ರಾಜಕೀಯ ಪಕ್ಷಗಳು ಆಯೋಜಿಸುವ ವಿಚಾರ ಸಂಕಿರಣ ಮತ್ತು ಸಮಾರಂಭಗಳಿಗೆ ವಿದ್ಯಾರ್ಥಿಗಳು ಹಾಜರಾಗಬೇಕು ಎಂದು ಹೇಳಿದರೆ, ಕೇವಲ ಶೇ. 13 ರಷ್ಟು (25) ವಿದ್ಯಾರ್ಥಿಗಳು ಇಂತಹ ಸಮಾರಂಭಗಳಿಗೆ ಹಾಜರಾಗಬೇಕಾಗಿಲ್ಲ ಎಂದು ಹೇಳುತ್ತಾರೆ.

ವಿದ್ಯಾರ್ಥಿಗಳು ರಾಜಕೀಯ ಪಕ್ಷಗಳು ಆಯೋಜಿಸುವ ವಿಚಾರ ಸಂಕಿರಣ ಮತ್ತು ಸಮಾರಂಭಗಳಿಗೆ ಹಾಜರಾಗುವುದರಿಂದ ವಿದ್ಯಾರ್ಥಿಗಳಲ್ಲಿ ರಾಜಕೀಯ ಅರಿವು ಮೂಡಲು ಸಾಧ್ಯವಾಗುತ್ತದೆ. ಇಂತಹ ಸಭೆ ಸಮಾರಂಭಗಳಿಗೆ ಹಾಜರಾಗುವುದರಿಂದ ರಾಜಕೀಯ ವಿದ್ಯಮಾನಗಳನ್ನು ತಿಳಿದುಕೊಳ್ಳಲು ಸಹಾಯವಾಗುತ್ತದೆ. ಹಾಗೆಯೇ, ವಿದ್ಯಾರ್ಥಿಗಳಿಗೆ ಒಂದು ರೀತಿಯ ರಾಜಕೀಯ ತರಬೇತಿ ದೊರೆಯುತ್ತದೆ. ಅಷ್ಟೇ ಅಲ್ಲದೆ, ವಿವಿಧ ರಾಜಕೀಯ

ಪಕ್ಷಗಳ ವಿಚಾರಧಾರೆಗಳನ್ನು ತಿಳಿದುಕೊಳ್ಳಬಹುದು. ಯಾವ ಪಕ್ಷ ಯಾವ ವಿಚಾರಧಾರೆ ಅಥವಾ ಸಿದ್ಧಾಂತವನ್ನು ಅನುಸರಿಸುತ್ತಿದೆ, ಇದರ ಜೊತೆಗೆ ಪಕ್ಷಗಳು ಚುನಾವಣೆಯಲ್ಲಿ ನೀಡುವ ಭರವಸೆಗಳನ್ನು ತಿಳಿದುಕೊಳ್ಳಬಹುದು. ಆದರೆ ಕಡಿಮೆ ಸಂಖ್ಯೆಯ ವಿದ್ಯಾರ್ಥಿಗಳು ರಾಜಕೀಯ ಪಕ್ಷಗಳು ಆಯೋಜಿಸುವ ವಿಚಾರ ಸಂಕಿರಣಗಳಿಗೆ ಹಾಜರಾಗುವ ಅವಶ್ಯಕತೆ ಇಲ್ಲ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ. ಅವರು ಹೇಳುವ ಪ್ರಕಾರ ವಿದ್ಯಾರ್ಥಿಗಳು ರಾಜಕೀಯ ಪಕ್ಷಗಳು ಆಯೋಜಿಸುವ ವಿಚಾರ ಸಂಕಿರಣಗಳಿಗೆ ಹಾಜರಾಗುವುದರಿಂದ ಆ ಪಕ್ಷಗಳ ವಿಚಾರಧಾರೆಗಳಿಂದ ಪ್ರಭಾವಿತರಾಗುತ್ತಾರೆ. ಇದು ಮುಂದೆ ಕ್ಯಾಂಪಸ್ ರಾಜಕೀಯಕ್ಕೆ ಅವಕಾಶ ಮಾಡಿಕೊಡುತ್ತದೆ. ವಿದ್ಯಾರ್ಥಿಗಳು ಕ್ಯಾಂಪಸ್‌ನಲ್ಲಿ ಎರಡು ಗುಂಪುಗಳಾಗಿ ವಿಭಜನೆ ಹೊಂದುವ ಸಾಧ್ಯತೆ ಇರುತ್ತದೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿರುತ್ತಾರೆ. ಡಿ. ಕೆ. ಮೊಂಹತಿಯವರ ಪ್ರಕಾರ " ವಿದ್ಯಾರ್ಥಿಗಳು ರಾಜಕೀಯ ಪಕ್ಷಗಳು ಆಯೋಜಿಸುವ ವಿಚಾರ ಸಂಕಿರಣ ಮತ್ತು ಸಮಾರಂಭಗಳಿಗೆ ಹಾಜರಾಗುವುದರಿಂದ ಹೆಚ್ಚಿನ ಲಾಭವಿದೆ". ಎಂದು ಹೇಳುತ್ತಾರೆ. ಪ್ರಸ್ತುತ ಅಧ್ಯಯನವು ಡಿ. ಕೆ. ಮೊಹಂತಿಯವರ ಅಧ್ಯಯನವನ್ನು ಸಮರ್ಥಿಸುತ್ತದೆ.

ಕೋಷ್ಟಕ–5.22: ರಾಜಕೀಯ ನಾಯಕರು ನೀಡುವ ಉಪದೇಶ/ಆದೇಶಗಳನ್ನು ವಿದ್ಯಾರ್ಥಿಗಳು ಪರಿಪಾಲಿಸಬೇಕೆ?

ಕ್ರ.ಸಂ		ಸಂಖ್ಯೆ	ಶೇಕಡ
1	ಹೌದು	18	9.00
2	ಇಲ್ಲ	171	86.00
3	ಗೊತ್ತಿಲ್ಲ	11	5.00
	ಒಟ್ಟು	**200**	**100.00**

ಕೋಷ್ಟಕ 47 ವಿವರಿಸುವಂತೆ ಶೇ. 86 ರಷ್ಟು (171) ವಿದ್ಯಾರ್ಥಿಗಳು ರಾಜಕೀಯ ನಾಯಕರು ನೀಡುವ ಉಪದೇಶ/ಆದೇಶಗಳನ್ನು ವಿದ್ಯಾರ್ಥಿಗಳು ಪರಿಪಾಲಿಸಬೇಕಾಗಿಲ್ಲ ಎಂದು ಹೇಳಿದರೆ ಶೇ. 9 ರಷ್ಟು (18) ವಿದ್ಯಾರ್ಥಿಗಳು ಪಾಲಿಸಬೇಕಾಗುತ್ತದೆ ಎಂದು ಹೇಳುತ್ತಾರೆ.

ಬಹುಸಂಖ್ಯಾತ ವಿದ್ಯಾರ್ಥಿಗಳು ರಾಜಕೀಯ ನಾಯಕರು ನೀಡುವ ಸಲಹೆ ಅಥವಾ ಉಪದೇಶ ಪರಿಪಾಲಿಸಬೇಕಾಗಿಲ್ಲ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ. ಇದಕ್ಕೆ ಪ್ರಮುಖ ಕಾರಣಗಳೆಂದರೆ ಸಾಮನ್ಯವಾಗಿ ರಾಜಕೀಯ ನಾಯಕರುಗಳು ವಿದ್ಯಾರ್ಥಿಗಳನ್ನು ತಮ್ಮ ಹಿತಾಸಕ್ತಿಗಳನ್ನು ಈಡೇರಿಸಿಕೊಳ್ಳುವುದಕ್ಕಾಗಿ ಅವರನ್ನು ಬಳಸಿಕೊಳ್ಳುತ್ತಾರೆ. ಆದ್ದರಿಂದ ವಿದ್ಯಾರ್ಥಿಗಳು ತುಂಬಾ ಎಚ್ಚರಿಕೆಯನ್ನು ವಹಿಸಬೇಕು. ರಾಜಕೀಯ ನಾಯಕರುಗಳು ನೀಡುವ ಉಪದೇಶಗಳ ಸತ್ಯಾಸತ್ಯತೆಯನ್ನು ಪರೀಕ್ಷಿಸುವ ಸಾಮರ್ಥ್ಯ ವಿದ್ಯಾರ್ಥಿಗಳಿಗೆ

ಇರುವುದಿಲ್ಲ. ಆದಕಾರಣ ರಾಜಕೀಯ ನಾಯಕರುಗಳು ನೀಡುವ ಉಪದೇಶಗಳಿಂದ ವಿದ್ಯಾರ್ಥಿಗಳು ದೂರವಿರಬೇಕು ಎಂಬ ಅಭಿಪ್ರಾಯವನ್ನು ಅವರು ವ್ಯಕ್ತಪಡಿಸುತ್ತಾರೆ.

ಕೋಷ್ಟಕ–5.23: ವಿದ್ಯಾರ್ಥಿ ಅಶಾಂತಿಗೆ ಕಾರಣವಾಗುವ ಪ್ರಮುಖ ಅಂಶಗಳು ಯಾವುದು?

ಕ್ರಸಂ		ಸಂಖ್ಯೆ	ಶೇಕಡ
1	ಶಿಕ್ಷಣದ ಗುಣಮಟ್ಟ ಕುಸಿತ+ವಿದ್ಯಾರ್ಥಿಗಳಿಗೆ ಸೂಕ್ತ ಮಾರ್ಗ ದರ್ಶನದ ಕೊರತೆ+ಶೈಕ್ಷಣಿಕ ವ್ಯವಸ್ಥೆಯಲ್ಲಿರುವ ದೋಷ+ವಿದ್ಯಾರ್ಥಿಗಳು ಮತ್ತು ಅಧ್ಯಾಪಕರುಗಳ ನಡುವಿನ ಸಂಪರ್ಕದ ಕೊರತೆ+ಕಾಲೇಜುಗಳಲ್ಲಿ ಮೂಲಭೂತ ಸೌಕರ್ಯದ ಕೊರತೆ +ಶಿಕ್ಷಣದ ಶುಲ್ಕ ಏರಿಕೆ	142	71.00
2	ರಾಜಕೀಯ ಭ್ರಷ್ಟಚಾರ+ಗುರುತಿಸಿಕೊಳ್ಳುವಿಕೆಯ ಸಮಸ್ಯೆ+ಬಡತನ+ನಿರುದ್ಯೋಗ+ವಿದ್ಯಾರ್ಥಿಗಳಿಗೆ ದೌರ್ಜನ್ಯ ಮತ್ತು ಅತ್ಯಾಚಾರ+ಮಾಧ್ಯಮಗಳ ಪ್ರಭಾವ +ಜಾತಿ ಆಧರಿತ ಗುಂಪುಗಳು ಮತ್ತು ಸೌಲಭ್ಯಗಳು	27	14.00
3	ಕಿಶೋರಾವಸ್ಥೆಯ ಮಾನಸಿಕ ಒತ್ತಡ+ಶಿಕ್ಷಣದಲ್ಲಿ ರಾಜಕೀಯ ಹಸ್ತಕ್ಷೇಪ+ಸಾಮಾಜಿಕ ಮೌಲ್ಯಗಳ ನಡುವಿನ ಸಂಗರ್ಷ +ಉತ್ತಮ ಆಡಳಿತ ಮತ್ತು ಶಿಸ್ತಿನ ಕೊರತೆ	31	15.00
ಒಟ್ಟು		**200**	**100.00**

ಕೋಷ್ಟಕ 48 ವಿವರಿಸುವಂತೆ ಶೇ. 71 ರಷ್ಟು (142) ವಿದ್ಯಾರ್ಥಿಗಳು ಶಿಕ್ಷಣದ ಗುಣಮಟ್ಟ ಕುಸಿತ, ವಿದ್ಯಾರ್ಥಿಗಳಿಗೆ ಸೂಕ್ತ ಮಾರ್ಗದರ್ಶನದ ಕೊರತೆ, ಶೈಕ್ಷಣಿಕ ವ್ಯವಸ್ಥೆಯಲ್ಲಿರುವ ದೋಷ, ವಿದ್ಯಾರ್ಥಿಗಳು ಮತ್ತು ಅಧ್ಯಾಪಕರುಗಳ ನಡುವಿನ ಸಂಪರ್ಕದ ಕೊರತೆ, ಕಾಲೇಜುಗಳಲ್ಲಿ ಮೂಲಭೂತ ಸೌಕರ್ಯದ ಕೊರತೆ, ಶಿಕ್ಷಣದ ಶುಲ್ಕ ಏರಿಕೆ ಇತ್ಯಾದಿ ಅಂಶಗಳು ವಿದ್ಯಾರ್ಥಿಗಳ ಅಶಾಂತಿಗೆ ಕಾರಣವಾಗುತ್ತಿದೆ ಎಂದು ಹೇಳುತ್ತಾರೆ. ಶೇ. 14 ರಷ್ಟು (27) ವಿದ್ಯಾರ್ಥಿಗಳು ರಾಜಕೀಯ ಭ್ರಷ್ಟಾಚಾರ, ಗುರುತಿಸಿಕೊಳ್ಳುವಿಕೆಯ ಸಮಸ್ಯೆ, ಬಡತನ, ನಿರುದ್ಯೋಗ, ವಿದ್ಯಾರ್ಥಿಗಳಿಗೆ ದೌರ್ಜನ್ಯ ಮತ್ತು ಅತ್ಯಾಚಾರ, ಮಾಧ್ಯಮಗಳ ಪ್ರಭಾವ, ಜಾತಿ ಆಧರಿತ ಗುಂಪುಗಳು ಮತ್ತು ಸೌಲಭ್ಯಗಳಂತಹ ಕಾರಣಗಳನ್ನು ನೀಡಿದರೆ, ಶೇ. 15 ರಷ್ಟು (31) ವಿದ್ಯಾರ್ಥಿಗಳು ಕಿಶೋರಾವಸ್ಥೆಯ ಮಾನಸಿಕ ಒತ್ತಡ, ಶಿಕ್ಷಣದಲ್ಲಿ ರಾಜಕೀಯ ಹಸ್ತಕ್ಷೇಪ, ಸಾಮಾಜಿಕ ಮೌಲ್ಯಗಳ ನಡುವಿನ ಸಂಗರ್ಷ, ಉತ್ತಮ ಆಡಳಿತ ಮತ್ತು ಶಿಸ್ತಿನ ಕೊರತೆಯಂತಹ ಕಾರಣಗಳನ್ನು ನೀಡುತ್ತಾರೆ.

ಎಸ್.ಸಿ.ಹಜಾರೆ ವಿದ್ಯಾರ್ಥಿ ರಾಜಕೀಯವು ವಿಭಿನ್ನ ಅರ್ಥಗಳು, ವಿಬಿನ್ನ ಆಯಾಮಗಳು ಹಾಗು ಪ್ರದರ್ಶನಗಳನ್ನು ಹೊಂದಿದೆ ಎಂದು ತಮ್ಮ ಸಂಶೋಧನಾ ಗ್ರಂಥವಾದ ಸ್ಟುಡೆಂಟ್ ಪಾಲಿಟಿಕ್ಸ್ ಇನ್ ಇಂಡಿಯಾದಲ್ಲಿ ತಿಳಿಸಿರುತ್ತಾರೆ. ವಿದ್ಯಾರ್ಥಿ ನಡುವಳಿಕೆಗಳು, ಅವರ ವರ್ತನೆ ಮತ್ತು ಅಧಿಕಾರ, ವಿದ್ಯಾರ್ಥಿ ಅಶಾಂತಿ, ವಿದಾರ್ಥಿ ಚಳುವಳಿಗಳು ಮತ್ತು

ಕ್ರಿಯಾಶೀಲತೆ, ಸಂಘಟನೆಯ ವಿಧಾನಗಳು, ವಿದ್ಯಾರ್ಥಿ ನಾಯಕತ್ವ ಮತ್ತು ವಿದ್ಯಾರ್ಥಿ ರಾಜಕೀಯ ಚಟುವಟಿಕೆಗಳು ಶೈಕ್ಷಣಿಕ ಹಾಗು ರಾಜಕೀಯ ಅಚಿತರ ಸಂಬಂಧಗಳ ಕುರಿತು ಅಧ್ಯಯನ ಮಾಡಿದ್ದಾರೆ.

ಇದಕ್ಕೆ ಪೂರಕವಾಗಿ ಖ್ಯಾತ ಶಿಕ್ಷಣತಜ್ಞ **ಹುಮಾಯುನ ಕಬೀರ** ವಿದ್ಯಾರ್ಥಿ ಅಶಾಂತಿಗೆ ಸಾಮನ್ಯ ಕಾರಣಗಳನ್ನು ಪಟ್ಟಿಮಾಡಿದ್ದಾರೆ. ಅವರ ಪ್ರಕಾರ ವಿದ್ಯಾರ್ಥಿ ಅಶಾಂತಿಗೆ ಈ ಕೆಳಗಿನ ಕಾರಣಗಳನ್ನು ನೀಡಿದ್ದಾರೆ. ಶಿಕ್ಷಕರ ನಾಯಕತ್ವದ ಕೊರತೆ, ಪ್ರಸ್ತುತ ಶೈಕ್ಷಣಿಕ ವ್ಯವಸ್ಥೆಯಲ್ಲಿನ ದೋಷ, ಹೆಚ್ಚಿನ ವಿದ್ಯಾರ್ಥಿಗಳು ಆರ್ಥಿಕ ಮುಗ್ಗಟ್ಟನ್ನು ಎದುರಿಸುತ್ತಿರುವದು, ಶಿಕ್ಷಣದ ನಂತರ ಯೋಗ್ಯವಾದ ಉದ್ಯೋಗಗಳ ಕೊರತೆ ಹಾಗು ವಿದ್ಯಾರ್ಥಿ ಸಮುದಾಯದಲ್ಲಿ ಆದರ್ಶ ಕ್ಷೀಣಿಸುತ್ತಿರುವದು ವಿದ್ಯಾರ್ಥಿ ಅಶಾಂತಿಗೆ ಪ್ರಮುಖ ಕಾರಣಗಳು ಎಂದು ಅಭಿಪ್ರಾಯಪಟ್ಟಿದ್ದಾರೆ.

ಹುಮಾಯೂನ ಕಬೀರ ರವರ ಸಂಶೋಧನೆಗೆ ಪೂರಕವಾಗಿ **ಮಾರ್ಗರೇಟ್ ಎಲ್. ಕಾರ್‌ಮಾಕ್** ಅವರು ವಿದ್ಯಾರ್ಥಿ ಅಶಾಂತಿಗೆ ಕಾರಣಗಳನ್ನು ವಿವರವಾಗಿ ತಮ್ಮ ಸಂಶೋಧನೆಯಲ್ಲಿ ಚರ್ಚಿಸಿದ್ದಾರೆ. ಅವರು ವಿದ್ಯಾರ್ಥಿ ಅಶಾಂತಿಗೆ ಮೂರು ರೀತಿಯ ಅಂತರ ಸಂಬಂಧಿ ಕ್ಷೇತ್ರಗಳನ್ನು ಗುರುತಿಸಿದ್ದಾರೆ. ಅವುಗಳೆಂದರೆ ರಾಜಕೀಯ ಸಂರಚನೆ, ವೃತ್ತಿ ಮತ್ತು ಸಮಾಜೋ–ಮಾನಸಿಕ ಕಾರಣಗಳು. ಸ್ವಜನಪಕ್ಷಪಾತ, ಪ್ರಾದೇಶಿಕತೆ, ಜಾತೀಯತೆ, ರಾಜಕೀಯ ಪಕ್ಷಗಳ ಜೊತೆಗೆ ಗುರುತಿಸಿಕೊಳ್ಳುವಿಕೆ ಮುಂತಾದವುಗಳನ್ನು ಮೊದಲನೆಯ ಗುಂಪಿಗೆ ಸೇರಿಸಿದ್ದಾರೆ. ಎರಡನೆ ಗುಂಪಿನಲ್ಲಿ ಆಡಳಿತ–ಅಧ್ಯಾಪಕರ ಸಂಬಂಧ ಹಾಗು ವಿದ್ಯಾರ್ಥಿ–ಅಧ್ಯಾಪಕರ ಸಂಬಂಧಗಳ ಬಗ್ಗೆ ವಿಮರ್ಶಾತ್ಮಕವಾಗಿ ಚರ್ಚಿಸಿದ್ದಾರೆ. ಸಮಾಜೋ–ಮಾನಸಿಕ ಗುಂಪಿನಲ್ಲಿ ಪಾಲಕರ ಪಾತ್ರ, ಅಧ್ಯಾಪಕ–ವಿದ್ಯಾರ್ಥಿಗಳ ನಡುವಿನ ಸೌಹಾರ್ದ ಸಂಬಂದಗಳ ಕೊರತೆ, ವಿದ್ಯಾಥಿ ಹಾಸ್ಟೇಲ್‌ಗಳ ಅವ್ಯವಸ್ಥೆ ಇತ್ಯಾದಿ ಇವುಗಳ ಕುರಿತು ಚರ್ಚಿಸಿದ್ದಾರೆ.

ಎಸ್.ಎನ್.ಸರಕಾರ, ಫೀಲಿಪ್ ಜಿ. ಅಲ್ತಬಕ್ ಮತ್ತು ಸುಶೀಲ್ ಮೆಹತಾ ಅವರುಗಳು ಕೂಡ ಭಾರತದಲ್ಲಿ ವಿದ್ಯಾರ್ಥಿ ಅಶಾಂತಿಗೆ ಪ್ರಮುಖ ಕಾರಣಗಳ ಕುರಿತು ತಮ್ಮ ಸಂಶೊಧನೆಯಲ್ಲಿ ಚರ್ಚಿಸಿದ್ದಾರೆ. ಸರಕಾರ ಅವರು ವಿದ್ಯಾರ್ಥಿ ಅಶಾಂತಿಗೆ ಮೂರು ಪ್ರಕಾರದ ಕಾರಣಗಳನ್ನು ಗುರುತಿಸಿದ್ದಾರೆ. ಅವುಗಳೆಂದರೆ ಸಮಾಜೋ–ಆರ್ಥಿಕ ಕ್ಷೇತ್ರ, ಶೈಕ್ಷಣಿಕ ಕ್ಷೇತ್ರ ಹಾಗೂ ಆಡಳಿತಾತ್ಮಕ ಕ್ಷೇತ್ರ. ಅಲ್ತ್ ಭಶ್‌ರವರು ವಿದ್ಯಾರ್ಥಿ ಅಶಾಂತಿಗೆ ಸಾಂಸ್ಥಿಕ ಕಾರಣಗಳನ್ನು ಗುರುತಿಸಿದ್ದಾರೆ. ಅವರ ಪ್ರಕಾರ ಶೈಕ್ಷಣಿಕ ಗುಣಮಟ್ಟ ಕಾಪಾಡಿಕೊಂಡ ಸಂಸ್ಥೆಗಳಲ್ಲಿ ಹಾಗೂ ವಿದ್ಯಾರ್ಥಿ ಶಿಕ್ಷಕರ ನಡುವಿನ ಸೌಹಾರ್ದಯುತ ಸಂಬಂಧಗಳು ವಿದ್ಯಾರ್ಥಿ ಪ್ರತಿಭಟನೆಗಳನ್ನು ತಗ್ಗಿಸುವಲ್ಲಿ ಯಶಸ್ವಿಯಾಗಿವೆ. ಎಂಬ ಅಭಿಪ್ರಾಯವನ್ನು

ಅವರು ವ್ಯಕ್ತಪಡಿಸಿದ್ದಾರೆ. ಹಾಗೆಯೇ, ಸುಶಿಲ್ ಮೆಹತಾ ಅವರು ಭಾರತದಲ್ಲಿ ವಿದ್ಯಾರ್ಥಿ ಅಶಾಂತಿಗೆ ಕಾರಣವಾಗುವ ಪ್ರಮುಖ ಅಂಶಗಳನ್ನು ಈ ರೀತಿ ಪಟ್ಟಿ ಮಾಡಿದ್ದಾರೆ. ಶಿಕ್ಷಣ ವ್ಯವಸ್ಥೆಯಲ್ಲಿನ ದೋಷ, ತಲೆಮಾರುಗಳ ನಡುವಿನ ಅಂತರ, ಸಮಾಜದಲ್ಲಾಗುತ್ತಿರುವ ಕ್ಷಿಪ್ರ ಬದಲಾವಣೆ ಹಾಗು ಪಾಶ್ಚ್ಯತ್ಯ ಸಂಸ್ಕೃತಿಯ ಪ್ರಭಾವ, ಯೋಜನೆ ಮತ್ತು ಅನುಷ್ಠಾನದ ನಡುವಿನ ಅಂತರ, ನಿರುದ್ಯೋಗ ಮತ್ತು ಯುವನೀತಿ ಇಲ್ಲದಿರುವುದು ಹಾಗೂ ರಾಜಕೀಯ ಪಕ್ಷಗಳ ಹಸ್ತಕ್ಷೇಪ ವಿದ್ಯಾರ್ಥಿ ಅಶಾಂತಿಗೆ ಕಾರಣವಗುವ ಪ್ರಮುಖ ಅಂಶಗಳು ಎಂದು ಅವರು ತಿಳಿಸಿರುತ್ತಾರೆ.

ಕೋಷ್ಟಕ–5.24: ನಿಮಗೆ ವಿದ್ಯಾರ್ಥಿ ಸಂಘಟನೆಗಳ ಬಗ್ಗೆ ತಿಳಿದಿದೆಯೇ?

ಕ್ರ.ಸಂ		ಸಂಖ್ಯೆ	ಶೇಕಡ (%)
1	ಹೌದು	185	93.00
2	ಇಲ್ಲ	15	7.00
	ಒಟ್ಟು	**200**	**100.00**
ಹೌದಾದರೆ, ಹೇಗೆ?			
1	ಟಿ.ವಿ+ಪತ್ರಿಕೆ+ವಿದ್ಯಾರ್ಥಿಗಳಿಂದ	170	85.00
2	ಶಿಕ್ಷಕರಿಂದ +ಅಂತರ್ಜಾಲ	15	8.00
	ಒಟ್ಟು	**185**	**93.00**

ಕೋಷ್ಟಕ 5.24 ವಿವರಿಸುವಂತೆ, ಶೇ. 93 ರಷ್ಟು (185) ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ಸಂಘಟನೆ ಬಗ್ಗೆ ತಿಳಿದಿದೆ. ಅಂದರೆ ವಿದ್ಯಾರ್ಥಿ ಸಂಘಟನೆಗಳ ಕಾರ್ಯಚಟುವಟಿಕೆ, ಅದರ ಉದ್ದೇಶಗಳ ಬಗ್ಗೆ ಅರಿವಿದೆ. ಇದರಲ್ಲಿ ಶೇ 85 ರಷ್ಟು (170) ವಿದ್ಯಾರ್ಥಿಗಳು ದೂರದರ್ಶನ, ಪತ್ರಿಕೆ ಹಾಗೂ ಇತರ ವಿದ್ಯಾರ್ಥಿಗಳಿಂದ ಸಂಘಟನೆಯ ಗುರಿಗಳ ಬಗ್ಗೆ ತಿಳಿದುಕೊಂಡಿದ್ದರೆ, ಶೇ. 8ರಷ್ಟು (15) ವಿದ್ಯಾರ್ಥಿಗಳು, ಅಂತರ್ಜಾಲ ಮತ್ತು ಶಿಕ್ಷಕರ ಮುಖೇನ ವಿದ್ಯಾರ್ಥಿ ಸಂಘಟನೆಯ ಬಗ್ಗೆ ತಿಳಿದುಕೊಂಡಿದ್ದಾರೆ. ಕೇವಲ ಶೇ 7 ರಷ್ಟು (15) ವಿದ್ಯಾರ್ಥಿಗಳು ಸಂಘಟನೆಯಲ್ಲಿ ಸದಸ್ಯರಾಗಿದ್ದರೂ ಇದರ ಉದ್ದೇಶಗಳ ಬಗ್ಗೆ ಅರಿವನ್ನು ಹೊಂದಿಲ್ಲ.

ಕೋಷ್ಟಕ–5.25:ಮಾಹಿತಿದಾರರು ತಮ್ಮ ಶೈಕ್ಷಣಿಕ ಅವಧಿಯ ಯಾವ ಹಂತದಲ್ಲಿ ವಿದ್ಯಾರ್ಥಿ ಸಂಘಟನೆಯ ಬಗ್ಗೆ ತಿಳಿದುಕೊಂಡಿದ್ದಾರೆ?

ಕ್ರ.ಸಂ		ಸಂಖ್ಯೆ	ಶೇಕಡ (%)
1	ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ	9	5.00
2	ಪದವಿಪೂರ್ವ	77	38.00
3	ಪದವಿ	114	57.00
4	ಸ್ನಾತಕ್ಕೋತ್ತರ	0	0.00
5	ವೃತ್ತಿ ಜೀವನ	0	0.00
	ಒಟ್ಟು	**200**	**100.00**

ಕೋಷ್ಟಕ 5.25 ವಿವರಿಸುವಂತೆ, ಶೇ. 57ರಷ್ಟು (114) ವಿದ್ಯಾರ್ಥಿಗಳು ಪದವಿ ಹಂತದ ವಿದ್ಯಾಭ್ಯಾಸದ ಅವಧಿಯಲ್ಲಿ ವಿದ್ಯಾರ್ಥಿ ಸಂಘಟನೆಯ ಬಗ್ಗೆ ತಿಳಿದುಕೊಂಡಿದ್ದರೆ, ಶೇ. 38 ರಷ್ಟು (77) ವಿದ್ಯಾರ್ಥಿಗಳು ಪದವಿಪೂರ್ವ ಹಂತದಲ್ಲಿಯೇ ಇದರ ಕುರಿತು ಮಾಹಿತಿಯನ್ನು ಪಡೆದುಕೊಂಡಿದ್ದಾರೆ. ಕೇವಲ ಶೇ. 5 ರಷ್ಟು (9) ವಿದ್ಯಾರ್ಥಿಗಳು ಮಾತ್ರ ತಮ್ಮ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣದ ಅವಧಿಯಲ್ಲಿ ಇದರ ಬಗ್ಗೆ ತಿಳಿದುಕೊಂಡಿದ್ದಾರೆ. ಪದವಿ ಹಂತದಲ್ಲಿ ವಿದ್ಯಾರ್ಥಿ ಸಮೂಹಕ್ಕೆ ಹೆಚ್ಚು ಹೆಚ್ಚು ಮಾಹಿತಿಗಳ ಅವಕಾಶಗಳು ಮತ್ತು ಸಂಪರ್ಕ ಲಭಿಸಿರುವುದು ಇದರಿಂದ ತಿಳಿದುಬರುತ್ತದೆ.

ಕೋಷ್ಟಕ – 5.26: ವಿದ್ಯಾರ್ಥಿ ಸಂಘಟನೆಗಳು ಬೇಕೇ?

ಕ್ರಸಂ		ಸಂಖ್ಯೆ	ಶೇಕಡ (%)
1	ಹೌದು	194	97.00
2	ಇಲ್ಲ	6	3.00
	ಒಟ್ಟು	**200**	**100.00**
ಹೌದಾದರೆ? ಯಾಕೆ?			
1	ವಿದ್ಯಾರ್ಥಿ ಹಿತಾಸಕ್ತಿ ಕಾಪಾಡಲು+ವೈಚಾರಿಕ ರಾಜಕೀಯ ಬೆಳೆಯಲು+ವಿದ್ಯಾರ್ಥಿ ಹಕ್ಕುಗಳನ್ನು ಮತ್ತು ಮಾಹಿತಿಗಳನ್ನು ಪೂರೈಸಲು, ವಿದ್ಯಾರ್ಥಿ ಪ್ರತಿನಿಧಿತ್ವಕ್ಕೆ	180	90.00
2	ಸಾರ್ವಜನಿಕ ಹತೋಟಿ ಮತ್ತು ಹಿತಾಸಕ್ತಿ+ಶೈಕ್ಷಣಿಕ ಸಂಸ್ಥೆಗಳ ಜವಾಬ್ದಾರಿಯುತ ಸೇವೆಗೆ+ವಿದ್ಯಾರ್ಥಿ ಸಮುದಾಯದ ಗುರುತಿಸುವಿಕೆ+ಉದ್ಯೋಗ ಚಲನಶೀಲತೆ ಹೆಚ್ಚಿಸಲು	14	7.00
	ಒಟ್ಟು	**194**	**97.00**

ಕೋಷ್ಟಕ 5.26 ಹೇಳುವಂತೆ, ಶೇ. 97 ರಷ್ಟು (194) ವಿದ್ಯಾರ್ಥಿಗಳು ವಿದ್ಯಾರ್ಥಿ ಸಂಘಟನೆಗಳ ಅಗತ್ಯತೆ ಇದೆ ಎಂದು ಹೇಳುತ್ತಾರೆ. ಅದರಲ್ಲಿ ಶೇ. 90ರಷ್ಟು (180) ವಿದ್ಯಾರ್ಥಿಗಳು, ವಿದ್ಯಾರ್ಥಿ ಹಿತಾಸಕ್ತಿ ಕಾಪಾಡಲು, ವೈಚಾರಿಕ ರಾಜಕೀಯ ಬೆಳೆಯಲು, ವಿದ್ಯಾರ್ಥಿ ಹಕ್ಕುಗಳನ್ನು ಮತ್ತು ಮಾಹಿತಿಗಳನ್ನು ಪೂರೈಸಲು, ವಿದ್ಯಾರ್ಥಿ ಪ್ರತಿನಿಧಿತ್ವಕ್ಕೆ ಇತ್ಯಾದಿ ಕಾರಣಗಳಿಗೆ ಸಂಘಟನೆ ಅಗತ್ಯ ಎಂದು ಹೇಳುತ್ತಾರೆ. ಉಳಿದ ಶೇ. 7 ರಷ್ಟು (14) ವಿದ್ಯಾರ್ಥಿಗಳು, ಸಾರ್ವಜನಿಕ ಹತೋಟಿ ಮತ್ತು ಹಿತಾಸಕ್ತಿ ಕಾಪಾಡಲು, ಶೈಕ್ಷಣಿಕ ಸಂಸ್ಥೆಗಳ ಜವಾಬ್ದಾರಿಯುತ ಸೇವೆಗೆ, ವಿದ್ಯಾರ್ಥಿ ಸಮುದಾಯದ ಗುರುತಿಸುವಿಕೆಗೆ, ಉದ್ಯೋಗ ಚಲನಶೀಲತೆ ಹೆಚ್ಚಿಸಲು ಮೊದಲಾದ ಕಾರಣಗಳಿಗಾಗಿ ಸಂಘಟನೆಯ ಅಗತ್ಯವಿದೆ ಎಂದು ಹೇಳುತ್ತಾರೆ.

ಕೋಷ್ಟಕ –5.27:ಮಾಹಿತಿದಾರರು ಯಾವುದಾದರೂ ವಿದ್ಯಾರ್ಥಿ ಸಂಘಟನೆಯ ಸದಸ್ಯರೇ?

ಕ್ರ.ಸಂ		ಸಂಖ್ಯೆ	ಶೇಕಡ (%)
1	ಹೌದು	200	100.00
2	ಇಲ್ಲ	0	0.00
	ಒಟ್ಟು	**200**	**100.00**
ಹೌದಾದರೆ, ಹೆಸರಿಸಿ?			
1	ಎಸ್.ಎಫ್.ಐ	82	41.00
2	ಎಬಿವಿಪಿ	118	59.00
	ಒಟ್ಟು	**200**	**100.00**

ಕೋಷ್ಟಕ 5.27 ಹೇಳುವಂತೆ ಶೇ 100ರಷ್ಟು (200) ವಿದ್ಯಾರ್ಥಿಗಳಲ್ಲಿ ಶೇ. 41 ರಷ್ಟು (82) ವಿದ್ಯಾರ್ಥಿಗಳು ಸ್ಟೂಡೆಂಟ್ ಫೆಡರೇಷನ್ ಆಫ್ ಇಂಡಿಯಾದ ಸದಸ್ಯರಾಗಿದ್ದರೆ, ಶೇ. 59 ರಷ್ಟು (118) ವಿದ್ಯಾರ್ಥಿಗಳು ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ ಇದರ ಸದಸ್ಯರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಈ ಎರಡೂ ಸಂಘಟನೆಗಳು ವಿದ್ಯಾರ್ಥಿ ಸಂಘಟನೆಗಳಾಗಿದ್ದು, ವಿದ್ಯಾರ್ಥಿ ಸಮೂಹದ ಹಿತಾಸಕ್ತಿಯನ್ನು ಕಾಪಾಡುವುದಕ್ಕಾಗಿ ರೂಪಿತಗೊಂಡಂತಹವು.

ಕೋಷ್ಟಕ–5.28:ಮಾಹಿತಿದಾರರ ವಿದ್ಯಾರ್ಥಿ ಸಂಘಟನೆಯ ಉದ್ದೇಶಗಳು ಯಾವುವು?

ಕ್ರ.ಸಂ		ಸಂಖ್ಯೆ	ಶೇಕಡ
1	ಶೈಕ್ಷಣಿಕ ಪ್ರಗತಿ+ಭ್ರಷ್ಟಚಾರ ಮುಕ್ತ ಸಮಾಜ+ವಿದ್ಯಾರ್ಥಿ ನ್ಯಾಯ ಮತ್ತು ಹಕ್ಕುಗಳ ರಕ್ಷಣೆ	104	52.00
2	ಅನ್ಯಾಯದ ವಿರುದ್ಧ ಹೋರಾಟ+ವಿದ್ಯಾರ್ಥಿಗಳ ಅಭಿವೃದ್ಧಿ+ಜಾತ್ಯಾತೀತ ಮೌಲ್ಯಗಳನ್ನು ಎತ್ತಿ ಹಿಡಿಯುವುದು	96	48.00
	ಒಟ್ಟು	**200**	**100.00**

ವಿದ್ಯಾರ್ಥಿಗಳಿಗೆ ಸಂಘಟನೆಯ ಉದ್ದೇಶಗಳ ಬಗ್ಗೆ ಅರಿವಿದೆಯೇ ಎನ್ನುವುದನ್ನು ಪರಿಶೀಲಿಸಿದಾಗ, ಶೇ. 52 (104) ರಷ್ಟು ವಿದ್ಯಾರ್ಥಿಗಳು ಶೈಕ್ಷಣಿಕ ಪ್ರಗತಿ, ಭ್ರಷ್ಟಚಾರ ಮುಕ್ತ ಸಮಾಜ, ವಿದ್ಯಾರ್ಥಿ ನ್ಯಾಯ ಮತ್ತು ಹಕ್ಕುಗಳ ರಕ್ಷಣೆ ಇತ್ಯಾದಿಗಳು ಸಂಘಟನೆಯ ಉದ್ದೇಶಗಳೆಂದು ವಿವರಿಸುತ್ತಾರೆ. ಉಳಿದ ಶೇ. 48 ರಷ್ಟು (96) ವಿದ್ಯಾರ್ಥಿಗಳು ಅನ್ಯಾಯದ ವಿರುದ್ಧ ಹೋರಾಟ, ವಿದ್ಯಾರ್ಥಿಗಳ ಅಭಿವೃದ್ಧಿ, ಜಾತ್ಯಾತೀತ ಮೌಲ್ಯಗಳನ್ನು ಎತ್ತಿ ಹಿಡಿಯುವುದು ಎನ್ನುವ ಬಗ್ಗೆ ವಿವರಿಸುತ್ತಾರೆ. ಇಲ್ಲಿ ವಿದ್ಯಾರ್ಥಿ ಸಮೂಹದ ಜೊತೆಗೆ ಸಾಮಾಜಿಕ, ಸಾಂವಿಧಾನಿಕ ಕಾಳಜಿಗಳ ಕುರಿತು ಸಂಘಟನೆಯು ಕಾರ್ಯನಿರ್ವಹಿಸುತ್ತಿದೆ ಎನ್ನುವುದನ್ನು ಒತ್ತಿ ಹೇಳುತ್ತದೆ.

ಕೋಷ್ಟಕ –5.29: ಮಾಹಿತಿದಾರರ ವಿದ್ಯಾರ್ಥಿ ಸಂಘಟನೆ ಯಾವ ರೀತಿಯ ಹೋರಾಟವನ್ನು ಬೆಂಬಲಿಸುತ್ತದೆ?

ಕ್ರ.ಸಂ		ಸಂಖ್ಯೆ	ಶೇಕಡ
1	ಹಿಂಸಾತ್ಮಕ	3	2.00
2	ಅಹಿಂಸಾತ್ಮಕ	4	2.00
3	ಕ್ರಾಂತಿಕಾರಕ	8	4.00
4	ಸಮಾಜವಾದಿ	59	29.00
5	ಸಾಮಾಜಿಕ ಮೌಲ್ಯಗಳನ್ನು ಎತ್ತಿ ಹಿಡಿಯುವ	71	35.00
6	ಸಾಂಪ್ರದಾಯಿಕ	4	2.00
7	ಎಡಪಂಥೀಯ	4	2.00
8	ವೈಚಾರಿಕ	47	24.00
9	ಇತರ	0	0.00
	ಒಟ್ಟು	**200**	**100.00**

ಕೋಷ್ಟಕ 5.29 ವಿವರಿಸುವಂತೆ, ಶೇ. 35 ರಷ್ಟು (71) ವಿದ್ಯಾರ್ಥಿಗಳು ಸಾಮಾಜಿಕ ಮೌಲ್ಯಗಳನ್ನು ಎತ್ತಿ ಹಿಡಿಯುವ ಕಾರ್ಯವನ್ನು ವಿದ್ಯಾರ್ಥಿ ಸಂಘಟನೆ ಮಾಡುತ್ತದೆ ಎಂದು ಅಭಿಪ್ರಾಯಿಸುತ್ತಾರೆ. ಶೇ. 29ರಷ್ಟು (59) ಸಮಾಜವಾದಿ, ಶೇ. 24 ರಷ್ಟು (47) ವೈಚಾರಿಕ, ಶೇ. 4ರಷ್ಟು (8) ಕ್ರಾಂತಿಕಾರಕ, ತಲಾ ಶೇ. 2 ರಷ್ಟು ಹಿಂಸಾತ್ಮಕ, ಅಹಿಂಸಾತ್ಮಕ ಮತ್ತು ಎಡಪಂಥೀಯ ಸಿದ್ಧಾಂತಗಳ ಆಧಾರದಲ್ಲಿ ಹೋರಾಟವನ್ನು ಮಾಡುತ್ತವೆ ಎನ್ನುವುದರ ಕುರಿತು ಹೇಳುತ್ತದೆ. ರಾಜಕೀಯ ಮತ್ತು ಸಾಮಾಜಿಕ ಮೌಲ್ಯಗಳನ್ನು ಕಾಪಾಡಲು ವಿದ್ಯಾರ್ಥಿ ಸಂಘಟನೆಗಳು ಹೋರಾಡುತ್ತವೆ ಎನ್ನುವ ಅರಿವು ವಿದ್ಯಾರ್ಥಿ ಸಮೂಹದಲ್ಲಿದೆ.

ಕೋಷ್ಟಕ –5.30: ಈ ಸಂಘಟನೆಗಳು ಯಾವ ರೀತಿ ನಿಮಗೆ ಸಹಕಾರಿಯಾಗಿದೆ?

ಕ್ರ.ಸಂ		ಸಂಖ್ಯೆ	ಶೇಕಡ (%)
1	ಸಾಮಾಜಿಕ ಪ್ರಜ್ಞೆ ಬೆಳೆಸುವಲ್ಲಿ+ರಾಜಕೀಯ ಪ್ರಜ್ಞೆ ಬೆಳೆಸುವಲ್ಲಿ+ಶೈಕ್ಷಣಿಕ ಅವ್ಯವಸ್ಥೆಗಳನ್ನು ನಿವಾರಿಸುವ ಪ್ರತಿಭಟನೆ+ ಯುವಜನತೆಯ ಕ್ರೀಯಾಶೀಲತೆ ಮತ್ತು ಒಗ್ಗಟ್ಟು+ ಸ್ವಾತಂತ್ರ್ಯ, ಸಮಾನತೆ, ಜಾತ್ಯಾತೀತ ಮೌಲ್ಯಗಳನ್ನು ಬೆಳೆಸುವಲ್ಲಿ ಸಹಕರಿಸುತ್ತದೆ	160	80.00
2	ಶಾಲಾ ಆಡಳಿತದಲ್ಲಿ ವಿದ್ಯಾರ್ಥಿಗಳಿಗೆ ಪ್ರಾತಿನಿಧ್ಯತೆ+ ಗುಣಮಟ್ಟದ ಶಿಕ್ಷಣ+ವಿದ್ಯಾರ್ಥಿ ಸಂಘಟನೆಗಳಿಗೆ ಮಾನ್ಯತೆ	18	9.00
3	ವ್ಯಕ್ತಿತ್ವ ವಿಕಸನ+ಶೈಕ್ಷಣಿಕ ಅಸಮಾನತೆ ಹೋಗಲಾಡಿಸಲು+ ಶೈಕ್ಷಣಿಕ ಶುಲ್ಕ ಕಡಿತ/ಕಡ್ಡಾಯ ಶಿಕ್ಷಣ	22	11.00
	ಒಟ್ಟು	**200**	**100.00**

ವಿದ್ಯಾರ್ಥಿ ಸಂಘಟನೆಗಳಲ್ಲಿ ಸದಸ್ಯರಾಗಿರುವುದರಿಂದ ಅವರಲ್ಲಿ ಸಾಮಾಜಿಕ – ರಾಜಕೀಯ ಪ್ರಜ್ಞೆ ಬೆಳೆಯುವಲ್ಲಿ ಸಹಕಾರಿಯಾಗುತ್ತದೆ, ಶೈಕ್ಷಣಿಕ ಅವ್ಯವಸ್ಥೆಗಳನ್ನು ನಿವಾರಿಸುವ ನಿಟ್ಟಿನಲ್ಲಿ ಪ್ರತಿಭಟನೆ ಕೈಗೊಳ್ಳಲು, ಯುವಜನತೆಯ ಕ್ರೀಯಾಶೀಲತೆ ಮತ್ತು ಒಗ್ಗಟ್ಟು ಪ್ರದರ್ಶಿಸಲು ಸ್ವಾತಂತ್ರ್ಯ, ಸಮಾನತೆ, ಜಾತ್ಯಾತೀತ ಮೌಲ್ಯಗಳನ್ನು ಬೆಳೆಸುವಲ್ಲಿ ಸಹಕರಿಸುತ್ತದೆ (80%) ಎನ್ನುವ ಅಭಿಪ್ರಾಯವನ್ನು ವಿದ್ಯಾರ್ಥಿಗಳು ಹೇಳುತ್ತಾರೆ. ಹಾಗೆಯೇ ವಿದ್ಯಾರ್ಥಿಗಳಲ್ಲಿ ಶಾಲಾ ಆಡಳಿತದಲ್ಲಿ ವಿದ್ಯಾರ್ಥಿಗಳಿಗೆ ಪ್ರಾತಿನಿಧ್ಯತೆ ದೊರಕುವಂತೆ ಮಾಡುವುದು, ಗುಣಮಟ್ಟದ ಶಿಕ್ಷಣ, ವಿದ್ಯಾರ್ಥಿ ಸಂಘಟನೆಗಳಿಗೆ ಮಾನ್ಯತೆ, ವ್ಯಕ್ತಿತ್ವ ವಿಕಸನ, ಶೈಕ್ಷಣಿಕ ಅಸಮಾನತೆ ಹೋಗಲಾಡಿಸಲು ಶ್ರಮಿಸುವುದು, ಶೈಕ್ಷಣಿಕ ಶುಲ್ಕ ಕಡಿತ, ಕಡ್ಡಾಯ ಶಿಕ್ಷಣ (20%) ಇತ್ಯಾದಿಗಳ ಬಗ್ಗೆ ಹೋರಾಟ ಮತ್ತು ಅರಿವನ್ನು ಹೆಚ್ಚಿಸುವ ನಟ್ಟಿನಲ್ಲಿಯೂ ಸಹಕಾರಿಯಾಗುತ್ತಿದೆ ಎನ್ನುವುದನ್ನು ಕೋಷ್ಟಕ 20 ವಿವರಿಸುತ್ತದೆ.

ಕೋಷ್ಟಕ–5.31. ನಿಮ್ಮ ವಿದ್ಯಾರ್ಥಿ ಸಂಘಟನೆಗೆ ಸೇರಲು ಎಷ್ಟು ಹಣವನ್ನು ಪಾವತಿಸುತ್ತೀರಿ?

ಕ್ರ.ಸಂ	ಸಂಖ್ಯೆ	ಶೇಕಡ (%)
ರೂಪಾಯಿ 10	200	100.00
ಒಟ್ಟು	**200**	**100.00**

ಕೋಷ್ಟಕ 5.31 ವಿವರಿಸುವಂತೆ ಶೇ 100 ರಷ್ಟು (200) ವಿದ್ಯಾರ್ಥಿಗಳು ಸಂಘಟನೆಗೆ ಸೇರಲು ರೂ. 10ರಷ್ಟು ಹಣವನ್ನು ಪಾವತಿಸಿಸುತ್ತಾರೆ. ಸಂಘಟನೆಯ ಸದಸ್ಯತ್ವದ ಹಣವಾಗಿ ಇದನ್ನು ಪಡೆದುಕೊಂಡು ಸಂಘಟನೆಯ ಕಾರ್ಯಚಟುವಟಿಕೆಗೆ ಬಳಸಲಾಗುತ್ತಿದೆ.

ಕೋಷ್ಟಕ–5.32: ವಿದ್ಯಾರ್ಥಿ ಸಂಘಟನೆಗಳಿಗೆ ಸೇರಿದ ನಂತರ ಯಾವ ಯಾವ ಚಟುವಟಿಕೆಗಳಲ್ಲಿ ಭಾಗವಹಿಸಿದ್ದೀರಿ?

ಕ್ರ.ಸಂ		ಸಂಖ್ಯೆ	ಶೇಕಡ (%)
1	ಸಮಾಜಪರ ಕೆಲಸಗಳ ಬಗ್ಗೆ+ಮಾಹಿತಿ ಕಾರ್ಯಗಾರ+ಶಿಬಿರ+ಮೆರವಣಿಗೆ+ವಿದ್ಯಾರ್ಥಿನ್ಯಾಯಕ್ಕಾಗಿ+ಪ್ರತಿಭಟನೆ+ಧರಣಿ	124	62.00
2	ಸಭೆ, ಸಮಾರಂಭ+ಚರ್ಚೆ+ಅರಿವಿನ ತರಗತಿ	76	38.00
	ಒಟ್ಟು	**200**	**100.00**

ಕೋಷ್ಟಕ 5.32 ವಿವರಿಸುವಂತೆ, ಶೇ. 62ರಷ್ಟು (124) ವಿದ್ಯಾರ್ಥಿಗಳು ಸಂಘಟನೆಯಲ್ಲಿ ತೊಡಗಿಸಿಕೊಂಡ ನಂತರದ ಅವಧಿಯಲ್ಲಿ ಸಮಾಜಪರ ಕೆಲಸಗಳಲ್ಲಿ, ಮಾಹಿತಿ ಕಾರ್ಯಗಾರಗಳಲ್ಲಿ, ಶಿಬಿರ, ಮೆರವಣಿಗೆ, ವಿದ್ಯಾರ್ಥಿಗಳ ನ್ಯಾಯಕ್ಕಾಗಿ ಪ್ರತಿಭಟನೆ, ಧರಣಿ ಇತ್ಯಾದಿಗಳಲ್ಲಿ ಭಾಗವಹಿಸಿದ್ದಾರೆ. ಶೇ. 38 ರಷ್ಟು (76) ವಿದ್ಯಾರ್ಥಿಗಳು ಸಭೆ ಸಮಾರಂಭ, ಚರ್ಚೆ ಇತ್ಯಾದಿಗಳಲ್ಲಿಯೂ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ವಿದ್ಯಾರ್ಥಿಗಳು ಶೈಕ್ಷಣಿಕ,

ಸಂಘಟಿತ ಪ್ರಯತ್ನದಲ್ಲಿ ತಮ್ಮನ್ನು ತೊಡಗಿಸಿಕೊಳ್ಳುವ ಜೊತೆಗೆ ಚರ್ಚೆ, ಅರಿವಿನ ತರಗತಿಗಳಲ್ಲಿ ತೊಡಗಿಸಿಕೊಂಡಿರುವುದು ಅವರ ಕ್ರಿಯಾಶೀಲತೆಯನ್ನು ತೋರಿಸುತ್ತದೆ.

ಕೋಷ್ಟಕ –5.33: ವಿದ್ಯಾರ್ಥಿ ಸಂಘಟನೆಗೆ ಸಂಬಂಧಪಟ್ಟ ಯಾವುದಾದರೂ ಗುರುತಿನ ಚೀಟಿ ಇದೆಯೇ?

ಕ್ರ.ಸಂ		ಸಂಖ್ಯೆ	ಶೇಕಡ
1	ಹೌದು	148	74.00
2	ಇಲ್ಲ	52	26.00
	ಒಟ್ಟು	**200**	**100.00**
ಇಲ್ಲದಿದ್ದರೆ ಬೇಕಾಗಿದೆಯೇ?			
1	ಹೌದು	52	26.00
	ಒಟ್ಟು	**52**	**26.00**

ಕೋಷ್ಟಕ 5.33 ವಿವರಿಸುವಂತೆ, ಶೇ 74 ರಷ್ಟು (148) ವಿದ್ಯಾರ್ಥಿಗಳು ವಿದ್ಯಾರ್ಥಿ ಸಂಘಟನೆಯ ಸದಸ್ಯತ್ವದ ಗುರುತಿನ ಚೀಟಿಯನ್ನು ಹೊಂದಿದ್ದಾರೆ. ಶೇ. 26ರಷ್ಟು ವಿದ್ಯಾರ್ಥಿಗಳು ಸಂಘಟನೆಯಲ್ಲಿ ಸದಸ್ಯರಾಗಿದ್ದರೂ ಸದಸ್ಯತ್ವದ ಗುರುತಿನ ಚೀಟಿಯನ್ನು ಹೊಂದಿರುವುದಿಲ್ಲ ಮತ್ತು ಅವರು ಸದಸ್ಯತ್ವದ ಗುರುತಿನ ಚೀಟಿ ಬೇಕಾಗಿದೆ ಎಂಬ ಆಶಯವನ್ನು ವ್ಯಕ್ತಪಡಿಸಿದ್ದಾರೆ.

ಕೋಷ್ಟಕ –5.34: ನಿಮ್ಮ ಕಾಲೇಜಿನಲ್ಲಿ ವಿದ್ಯಾರ್ಥಿ ಸಂಘಟನೆಗೆ ಸೇರಬೇಕಾದುದು ಕಡ್ಡಾಯವೇ?

ಕ್ರ.ಸಂ		ಸಂಖ್ಯೆ	ಶೇಕಡ
1	ಹೌದು	29	15.00
2	ಇಲ್ಲ	158	79.00
3	ಗೊತ್ತಿಲ್ಲ	13	6.00
	ಒಟ್ಟು	**200**	**100.00**

ಕೋಷ್ಟಕ 5.34 ಹೇಳುವಂತೆ ವಿದ್ಯಾರ್ಥಿಗಳನ್ನು ಸಂಘಟನೆಗೆ ಸೇರಬೇಕಾದುದು ಕಡ್ಡಾಯವೇ ಎಂದು ಪ್ರಶ್ನಿಸಲಾಗಿತ್ತು. ಶೇ. 15 (29) ರಷ್ಟು ವಿದ್ಯಾರ್ಥಿಗಳು ಹೌದು ಎಂದು ಉತ್ತರಿಸಿದರೆ, ಶೇ. 79 (158) ಇಲ್ಲವೆಂದೂ ಶೇ. 6 (13) ರಷ್ಟು ವಿದ್ಯಾರ್ಥಿಗಳು ತಮಗೆ ಈ ಬಗ್ಗೆ ಗೊತ್ತಿಲ್ಲ ಎಂದು ಉತ್ತರಿಸಿದ್ದಾರೆ. ಈ ಅಂಕಿ ಅಂಶವು ವಿದ್ಯಾರ್ಥಿ ಸಂಘಟನೆಯ ಕಾರ್ಯಚಟುವಟಿಕೆಗಳಲ್ಲಿ ಸಾಮಾಹಿಕವಾಗಿ ವಿದ್ಯಾರ್ಥಿಗಳು ಪಾಲ್ಗೊಳ್ಳುತ್ತಿದ್ದು, ಸದಸ್ಯತ್ವದ ಬಗ್ಗೆ ಹೆಚ್ಚಿನ ಅರಿವಿಲ್ಲದ್ದನ್ನು ಗಮನಿಸಬಹುದು.

ಕೋಷ್ಟಕ –5.34: ನಿಮ್ಮ ಸಂಘಟನೆಗಳು ಯಾವುದಾದರೂ ಕಾಯಿದೆ ಶಾಸನಗಳನ್ನು ರಾಜ್ಯ ಮತ್ತು ರಾಷ್ಟ್ರ ಮಟ್ಟದಲ್ಲಿ ರೂಪಿಸಲು ಸಹಕರಿಸಿದೆಯೇ?

ಕ್ರ.ಸಂ		ಸಂಖ್ಯೆ	ಶೇಕಡ
1	ಹೌದು	64	32.00
2	ಇಲ್ಲ	47	24.00
3	ಗೊತ್ತಿಲ್ಲ	89	44.00
	ಒಟ್ಟು	**200**	**100.00**
ಹೌದಾದರೆ, ಯಾವುದು?			
1	ಶೈಕ್ಷಣಿಕ ನೀತಿ ರೂಪಿಸುವಲ್ಲಿ ಮತ್ತು ವಿದ್ಯಾರ್ಥಿ ವೇತನ ಹೆಚ್ಚಳ+ಪ್ರತಿಭೆಗೆ ಪ್ರೋತ್ಸಾಹ	34	17.00
2	ಭ್ರಷ್ಟಚಾರ ಮುಕ್ತ ಭಾರತ ಮತ್ತು ಮುಕ್ತ ಶಿಕ್ಷಣ+ವಿದ್ಯಾರ್ಥಿ ಕಲ್ಯಾಣ	30	15.00
	ಒಟ್ಟು	**64**	**32.00**

ಕೋಷ್ಟಕ 5.34 ಹೇಳುವಂತೆ, ಶೇ 32 ರಷ್ಟು (64) ವಿದ್ಯಾರ್ಥಿಗಳು ವಿದ್ಯಾರ್ಥಿ ಸಂಘಟನೆಗಳು ರಾಜ್ಯ ಮತ್ತು ರಾಷ್ಟ್ರ ಮಟ್ಟದಲ್ಲಿ ಕಾಯಿದೆ, ಶಾಸನಗಳನ್ನು ರೂಪಿಸಲು ಸಹಕರಿಸುತ್ತಿದೆ. ಶೇ. 24 (47) ರಷ್ಟು ವಿದ್ಯಾರ್ಥಿಗಳು ಇಲ್ಲ ಎಂದು ಹೇಳಿದರೆ, ಶೇ. 44 (89) ರಷ್ಟು ವಿದ್ಯಾರ್ಥಿಗಳು ಈ ಬಗ್ಗೆ ಅರಿವಿಲ್ಲ ಎಂದು ಹೇಳುತ್ತಾರೆ. ಹೀಗೆ ಪಾಲ್ಗೊಳ್ಳುವ ಸಂಘಟನೆಗಳು ಶೈಕ್ಷಣಿಕ ನೀತಿ ರೂಪಿಸುವಲ್ಲಿ, ವಿದ್ಯಾರ್ಥಿ ವೇತನ ಹೆಚ್ಚಳ, ಪ್ರತಿಭೆಗೆ ಪ್ರೋತ್ಸಾಹ (ಶೇ. 17) ಮತ್ತು ಭ್ರಷ್ಟಚಾರ ಮುಕ್ತ ಭಾರತ, ಮುಕ್ತ ಶಿಕ್ಷಣ ಮತ್ತು ವಿದ್ಯಾರ್ಥಿ ಕಲ್ಯಾಣ (ಶೇ. 15) ಇತ್ಯಾದಿ ಚಟುವಟಿಕೆಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳುತ್ತಿದ್ದಾರೆ.

ಕೋಷ್ಟಕ–5.35: ವಿದ್ಯಾರ್ಥಿಯಾಗಿ ನಿಮ್ಮ ಸಂಘಟನೆಗಳಲ್ಲಿ ಯಾವುದಾದರೂ ತೀರ್ಮಾನವನ್ನು ಕೈಗೊಂಡಿದ್ದೀರಾ?

ಕ್ರಸಂ		ಸಂಖ್ಯೆ	ಶೇಕಡ
1	ಹೌದು	50	25.00
2	ಇಲ್ಲ	150	75.00
	ಒಟ್ಟು	**200**	**100.00**
ಹೌದಾದರೆ, ಯಾವುದು ಬರೆಯಿರಿ?			
1	ವಿದ್ಯಾರ್ಥಿ ಬಸ್ ಪಾಸ್ ಒದಗಿಸುವಿಕೆಗೆ ಸಭೆ+ಪ್ರತಿಭಟನೆಯಲ್ಲಿ ಭಾಗವಹಿಸುವ ಕುರಿತು ತೀರ್ಮಾನ	23	12.00
2	ಶೈಕ್ಷಣಿಕ ಸವಲತ್ತಿಗೆ ಸಭೆ ನಡೆಸುವ ಕುರಿತು	27	14.00
	ಒಟ್ಟು	**50**	**25.00**

ಕೋಷ್ಟಕ 5.35 ವಿವರಿಸುವಂತೆ, ವಿದ್ಯಾರ್ಥಿಗಳಾಗಿ ಮತ್ತು ಸಂಘಟನೆಯ ಸದಸ್ಯರಾಗಿ ಯಾವುದಾದರು ಮಹತ್ವದ ನಿರ್ಣಯಗಳನ್ನು ಕೈಗೊಳ್ಳಲಾಗಿದೆಯೇ ಎಂದು ಪ್ರಶ್ನಿಸಲಾಗಿತ್ತು. ಶೇ. 25 ರಷ್ಟು (50) ವಿದ್ಯಾರ್ಥಿಗಳು ಹೌದು ಮತ್ತು ಶೇ. 75 (150) ಇಲ್ಲ ಎಂಬುದಾಗಿ ಉತ್ತರಿಸಿದ್ದಾರೆ. ಶೇ. 25 ರಷ್ಟು ವಿದ್ಯಾರ್ಥಿಗಳು ವಿದ್ಯಾರ್ಥಿ ಬಸ್‌ಪಾಸ್ ಒದಗಿಸುವಿಕೆಗೆ ಸಭೆ, ಪ್ರತಿಭಟನೆಯಲ್ಲಿ ಭಾಗವಹಿಸುವ ಕುರಿತು ತೀರ್ಮಾನ, ಶೈಕ್ಷಣಿಕ ಸವಲತ್ತಿಗೆ ಸಭೆ ನಡೆಸುವ ಕುರಿತು ಇತ್ಯಾದಿಗಳ ಬಗ್ಗೆ ನಿರ್ಣಯವನ್ನು ತೆಗೆದುಕೊಳ್ಳಲಾಗಿದೆ ಎಂದು ವಿವರಿಸಿದ್ದಾರೆ.

ಕೋಷ್ಟಕ–5.36: ನಿಮ್ಮ ವಿದ್ಯಾರ್ಥಿ ಜೀವನದಲ್ಲಿ ಯಾವುದಾದರೂ ಹೋರಾಟ, ಇತ್ಯಾದಿಗಳಲ್ಲಿ ಭಾಗವಹಿಸಿದೀರಾ?

ಕ್ರಸಂ		ಸಂಖ್ಯೆ	ಶೇಕಡ
1	ಅಡ್ಮಿಶನ್‌ಗಾಗಿ + ಉತ್ತಮ ತರಗತಿಗಾಗಿ + ವಿದ್ಯಾರ್ಥಿ ಹಕ್ಕುಗಳಿಗೆ	114	57.00
2	ಶೈಕ್ಷಣಿಕ ಸವಲತ್ತುಗಳಿಗೆ + ವಿದ್ಯಾರ್ಥಿ ಏಳಿಗೆಗೆ	79	40.00
3	ಇಲ್ಲ	7	3.00
	ಒಟ್ಟು	**200**	**100.00**

ಕೋಷ್ಟಕ 5.36 ಹೇಳುವಂತೆ, ಶೇ. 57 ರಷ್ಟು (114) ವಿದ್ಯಾರ್ಥಿಗಳುಅಡ್ಮಿಶನ್, ಉತ್ತಮ ತರಗತಿ ಮತ್ತು ವಿದ್ಯಾರ್ಥಿ ಹಕ್ಕುಗಳಿಗಾಗಿ ಹೋರಾಟವನ್ನು ಮಾಡುತ್ತಾರೆ ಎಂದು ಹೇಳುತ್ತಾರೆ. ಅಂತೆಯೇ ಶೇ. 40ರಷ್ಟು (79) ವಿದ್ಯಾರ್ಥಿಗಳು ಶೈಕ್ಷಣಿಕ ಸವಲತ್ತುಗಳು ಮತ್ತು ವಿದ್ಯಾರ್ಥಿಗಳ ಏಳಿಗೆಗಾಗಿ ಹೋರಾಟ, ಪ್ರತಿಭಟನೆಗಳನ್ನು ಮಾಡುತ್ತಾರೆ ಎಂದು ವಿವರಿಸುತ್ತಾರೆ.

ಕೋಷ್ಟಕ–5.37: ಸಮಾಜದ ಒಟ್ಟು ವ್ಯವಸ್ಥೆಯ ಒಳಿತಿಗೆ ವಿದ್ಯಾರ್ಥಿ ಸಂಘಟನೆಗಳು ಬೇಕಾಗಿವೆಯೇ?

ಕ್ರಸಂ		ಸಂಖ್ಯೆ	ಶೇಕಡ
1	ಹೌದು	200	100.00
2	ಇಲ್ಲ	0	0.00
	ಒಟ್ಟು	**200**	**100.00**
ಹೌದಾದರೆ, ಹೇಗೆ ಬರೆಯಿರಿ?			
1	ಬಲಿಷ್ಠ ಮತ್ತು ಪ್ರಜಾಪ್ರಭುತ್ವ ಮಾದರಿ ವಿದ್ಯಾರ್ಥಿ ಸಮುದಾಯ ಕಟ್ಟಲು+ಸಮಾನತೆಯ ಸಮಾಜ ಸ್ಥಾಪಿಸಲು+ವಿದ್ಯಾರ್ಥಿ ಹಕ್ಕುಗಳ ರಕ್ಷಣೆಗೆ+ಶೈಕ್ಷಣಿಕ ಪ್ರಗತಿಗೆ+ಎಲ್ಲಾ ರಂಗಗಳಲ್ಲಿ ವಿದ್ಯಾರ್ಥಿಗಳ ಭಾಗವಹಿಸುವಿಕೆ	193	97.00
2	ವಿದ್ಯಾರ್ಥಿಗಳಲ್ಲಿ ನಾಯಕತ್ವ ಮನೋಭಾವನೆ ಬೆಳೆಸಲು + ನ್ಯಾಯಕ್ಕಾಗಿ ಹೋರಾಡಲು	7	3.00
	ಒಟ್ಟು	**200**	**100.00**

ಕೋಷ್ಟಕ 5.37 ವಿವರಿಸುವಂತೆ ಶೇ. 100 ರಷ್ಟು (200) ವಿದ್ಯಾರ್ಥಿಗಳು ಸಮಾಜದ ಒಳಿತಿಗಾಗಿ ವಿದ್ಯಾರ್ಥಿ ಸಂಘಟನೆಗಳು ಬೇಕಾಗಿವೆ ಎಂಬುದನ್ನು ಪ್ರತಿಪಾದಿಸಿವೆ. ಅವರಲ್ಲಿ ಶೇ. 97 ರಷ್ಟು (193) ವಿದ್ಯಾರ್ಥಿಗಳು ಬಲಿಷ್ಠ ಮತ್ತು ಪ್ರಜಾಪ್ರಭುತ್ವ ಮಾದರಿ ವಿದ್ಯಾರ್ಥಿ ಸಮುದಾಯ ಕಟ್ಟಲು, ಸಮಾನತೆಯ ಸಮಾಜ ಸ್ಥಾಪಿಸಲು, ವಿದ್ಯಾರ್ಥಿ ಹಕ್ಕುಗಳ ರಕ್ಷಣೆಗೆ, ಶೈಕ್ಷಣಿಕ ಪ್ರಗತಿಗೆ ಹಾಗೂ ಎಲ್ಲಾ ರಂಗಗಳಲ್ಲಿ ವಿದ್ಯಾರ್ಥಿಗಳ ಭಾಗವಹಿಸುವಿಕೆಗೆ ಇಂತಹ ಸಂಘಟನೆಗಳ ಅಗತ್ಯವಿದೆ ಎಂದು ಹೇಳುತ್ತಾರೆ. ಹಾಗೆಯೇ ಶೇ. 3 ರಷ್ಟು (7) ವಿದ್ಯಾರ್ಥಿಗಳು ವಿದ್ಯಾರ್ಥಿಗಳಲ್ಲಿ ನಾಯಕತ್ವ ಮನೋಭಾವನೆ ಬೆಳೆಸಲು ಮತ್ತು ನ್ಯಾಯಕ್ಕಾಗಿ ಹೋರಾಡುವ ಮುಖಾಂತರ ಸಮಾಜದ ಒಳಿತಿಗೆ ಶ್ರಮಿಸುತ್ತಿದೆ ಎಂದು ಹೇಳುತ್ತಾರೆ.

ಕೋಷ್ಟಕ–5.38.ಪ್ರಚಲಿತದಲ್ಲಿರುವ ವಿದ್ಯಾರ್ಥಿ ಸಂಘಟನೆಗಳು ಸರಿಯಾಗಿ ಕಾರ್ಯನಿರ್ವಹಿಸುತ್ತಿವೆಯೇ?

ಕ್ರಸಂ		ಸಂಖ್ಯೆ	ಶೇಕಡ
1	ಹೌದು	155	78.00
2	ಇಲ್ಲ	45	22.00
	ಒಟ್ಟು	**200**	**100.00**
ಇಲ್ಲವಾದರೆ, ಹೇಗೆ?			
1	ವಿದ್ಯಾರ್ಥಿ ಸಂಘಟನೆಗಳಲ್ಲಿ ಜಗಳ+ನಾಯಕತ್ವದ ಕೊರತೆ+ತರಗತಿ ಭಹಿಷ್ಕಾರ+ಬಂದ್/ರಸ್ತೆ ತಡೆ+ರಾಜಕೀಯ ಪ್ರವೇಶ	40	20.00
2	ಶೈಕ್ಷಣಿಕ ಮೌಲ್ಯಗಳ ಕಡೆಗಣನೆ+ಕ್ಯಾಂಪಸ್ ರಾಜಕೀಯ	5	3.00
	ಒಟ್ಟು	**45**	**23.00**

ಕೋಷ್ಟಕ 5.38 ವಿವರಿಸುವಂತೆ, ಶೇ. 78 ರಷ್ಟು (155) ವಿದ್ಯಾರ್ಥಿಗಳು ಪ್ರಸ್ತುತ ಇರುವ ವಿದ್ಯಾರ್ಥಿ ಸಂಘಟನೆಗಳು ಸರಿಯಾದ ರೀತಿಯಲ್ಲಿ ಕಾರ್ಯನಿರ್ವಹಿಸುತ್ತಿವೆ ಎಂದು ಹೇಳುತ್ತಾರೆ. ಆದರೆ ಶೇ. 22 ರಷ್ಟು (45) ವಿದ್ಯಾರ್ಥಿಗಳು ಈ ಅಭಿಪ್ರಾಯವನ್ನು ತಳ್ಳಿಹಾಕುತ್ತಾರೆ. ವಿದ್ಯಾರ್ಥಿ ಸಂಘಟನೆಗಳು ಸರಿಯಾದ ರೀತಿಯಲ್ಲಿ ಕಾರ್ಯನಿರ್ವಹಿಸುತ್ತಿಲ್ಲದಿರುವುದಕ್ಕೆ ವಿದ್ಯಾರ್ಥಿ ಸಂಘಟನೆಗಳಲ್ಲಿ ಉಂಟಾಗುವ ಜಗಳ, ನಾಯಕತ್ವದ ಕೊರತೆ, ತರಗತಿ ಭಹಿಷ್ಕಾರ, ಬಂದ್/ರಸ್ತೆ ತಡೆ, ರಾಜಕೀಯದ ಅನಗತ್ಯ ಪ್ರವೇಶ ಇತ್ಯಾದಿಗಳು (ಶೇ. 20) ಕಾರಣ ಎಂದು ಹೇಳುತ್ತಾರೆ. ಹಾಗೆಯೇ ಶೇ. 3ರಷ್ಟು (5) ವಿದ್ಯಾರ್ಥಿಗಳು ಶೈಕ್ಷಣಿಕ ಮೌಲ್ಯಗಳ ಕಡೆಗಣನೆ, ಕ್ಯಾಂಪಸ್ ರಾಜಕೀಯಗಳೂ ಕಾರಣ ಎಂದು ಹೇಳುತ್ತಾರೆ

ಕೋಷ್ಟಕ–5.39: ನಿಮ್ಮ ವಿದ್ಯಾರ್ಥಿ ಸಂಘನೆಗಳಲ್ಲಿ ಯಾವುದಕ್ಕೆ ಪ್ರಾಶಸ್ತ್ಯ ಕೊಡಲಾಗಿದೆ?

ಕ್ರಸಂ		ಸಂಖ್ಯೆ	ಶೇಕಡ
1	ಜಾತ್ಯಾತೀತ ವಿಷಯಗಳು+ಪ್ರಜಾಪ್ರಭುತ್ವ ವಿಷಯಗಳು/ಸಾಮಾಜಿಕ ಸುಧಾರಣೆ+ರಾಜಕಾರಣ, ಚುನಾವಣೆ ವಿಚಾರಗಳು	195	98.00
2	ಸಾಮಾಜಿಕ ನ್ಯಾಯ ಮತ್ತು ಬದ್ಧತೆ ವಿಷಯಗಳು	5	2.00
	ಒಟ್ಟು	**200**	**100.00**

ಶೇ. 98 ರಷ್ಟು (195) ವಿದ್ಯಾರ್ಥಿಗಳು ಅವರ ಸಂಘಟನೆಗಳಲ್ಲಿ ಜಾತ್ಯಾತೀತ, ಪ್ರಜಾಪ್ರಭುತ್ವ ಸಾಮಾಜಿಕ ಸುಧಾರಣೆ, ರಾಜಕಾರಣ, ಚುನಾವಣೆ ಇತ್ಯಾದಿ ವಿಚಾರಗಳಿಗೆ ಪ್ರಾಶಸ್ತ್ಯ ನೀಡುತ್ತಿವೆ ಎಂದು ಕೋಷ್ಟಕ 30ರಲ್ಲಿ ವಿವರಿಸಲಾಗಿದೆ. ಉಳಿದ ಶೇ. 2 ರಷ್ಟು ವಿದ್ಯಾರ್ಥಿಗಳು ಸಾಮಾಜಿಕ ನ್ಯಾಯ ಮತ್ತು ಬದ್ಧತೆಗಳ ಕುರಿತಾಗಿ ಪ್ರಾಶಸ್ತ್ಯ ನೀಡುತ್ತಿವೆ ಎಂದು ಹೇಳುತ್ತಾರೆ.

ಕೋಷ್ಟಕ–5.40: ವಿದ್ಯಾರ್ಥಿ ಸಂಘಟನೆಗಳಲ್ಲಿ ರಾಜಕೀಯ ಶಕ್ತಿಗಳು ಪಾತ್ರವಹಿಸುತ್ತವೆಯೇ?

ಕ್ರಸಂ		ಸಂಖ್ಯೆ	ಶೇಕಡ
1	ಹೌದು	71	36.00
2	ಇಲ್ಲ	129	64.00
	ಒಟ್ಟು	**200**	**100.00**
ಹೌದಾದರೆ, ಹೇಗೆ?			
1	ಪಕ್ಷದ ಲಾಭಕ್ಕಾಗಿ+ಚುನಾವಣಾ ಮತಕ್ಕಾಗಿ, ಚುನಾವಣಾ ಪ್ರಸಾರಕ್ಕಾಗಿ+ರಾಜಕೀಯ ಲಾಭಕ್ಕೆ	24	12.00
2	ಚುನಾವಣೆಯಲ್ಲಿ ವಿದ್ಯಾರ್ಥಿಗಳ ಬಳಕೆ	47	24.00
	ಒಟ್ಟು	**71**	**36.00**

ಕೋಷ್ಟಕ 31 ವಿವರಿಸುವಂತೆ ಶೇ. 36 ರಷ್ಟು ವಿದ್ಯಾರ್ಥಿಗಳು (71) ವಿದ್ಯಾರ್ಥಿ ಸಂಘಟನೆಗಳಲ್ಲಿ ರಾಜಕೀಯ ಶಕ್ತಿಗಳು ಪ್ರವೇಶ ಮಾಡಿ ಪ್ರಮುಖ ಪಾತ್ರವಹಿಸುತ್ತವೆ ಎಂದು ಹೇಳಿದರೆ, ಶೇ. 64 ರಷ್ಟು (129) ವಿದ್ಯಾರ್ಥಿಗಳು ರಾಜಕೀಯ ಪಕ್ಷಗಳ ಪಾತ್ರವಿಲ್ಲ ಎಂದು ಹೇಳುತ್ತಾರೆ. ಶೇ. 12 ರಷ್ಟು ವಿದ್ಯಾರ್ಥಿಗಳು (24) ರಾಜಕೀಯ ಪಕ್ಷಗಳು ಪಕ್ಷದ ಲಾಭಕ್ಕಾಗಿ, ಚುನಾವಣಾ ಮತಕ್ಕಾಗಿ, ಚುನಾವಣಾ ಪ್ರಸಾರಕ್ಕಾಗಿ ಹಾಗೂ ರಾಜಕೀಯ ಲಾಭಕ್ಕಾಗಿ ವಿದ್ಯಾರ್ಥಿ ಸಂಘಟನೆಗಳಲ್ಲಿ ಭಾಗವಹಿಸುತ್ತಿವೆ. ಹಾಗೆಯೇ ಶೇ. 24 ರಷ್ಟು ವಿದ್ಯಾರ್ಥಿಗಳು (47) ಚುನಾವಣೆಯಲ್ಲಿ ವಿದ್ಯಾರ್ಥಿಗಳ ಬಳಕೆ ಮಾಡುವಲ್ಲಿ ರಾಜಕೀಯ ಶಕ್ತಿಗಳು ಪಾಲ್ಗೊಳ್ಳುತ್ತಿವೆ ಎಂದು ವಿವರಿಸುತ್ತಾರೆ.

ಕೋಷ್ಟಕ–5.41: ನಿಮ್ಮ ಪ್ರಕಾರ ವಿದ್ಯಾರ್ಥಿ ಸಂಘಟನೆಗಳ ಮೂಲ ಉದ್ದೇಶ ಏನಾಗಿರಬೇಕು?

ಕ್ರ.ಸಂ		ಸಂಖ್ಯೆ	ಶೇಕಡ
1	ವಿದ್ಯಾರ್ಥಿಗಳ ಸರ್ವೋತೋಮುಖ ಕಲ್ಯಾಣ+ ಪ್ರಜಾಪ್ರಭುತ್ವ ಮೌಲ್ಯಗಳನ್ನು ಒಳಗೊಂಡಿರಬೇಕು+ವಿದ್ಯಾರ್ಥಿಗಳ ಹಕ್ಕನ್ನು ಗುರುತಿಸುವ ವೇದಿಕೆ	195	97.00
2	ಜನಸಾಮಾನ್ಯರಲ್ಲಿ ಜನ ಜಾಗೃತಿ+ ಏಕತೆ ಮತ್ತು ಸ್ವಾರ್ಥ ತ್ಯಾಗ ಸಿದ್ಧಾಂತ	5	3.00
	ಒಟ್ಟು	**200**	**100.00**

ಕೋಷ್ಟಕ 5.41 ಹೇಳುವಂತೆ ಶೇ. 97 ರಷ್ಟು ವಿದ್ಯಾರ್ಥಿಗಳು (195) ವಿದ್ಯಾರ್ಥಿಗಳ ಸರ್ವೋತೋಮುಖ ಕಲ್ಯಾಣ, ಪ್ರಜಾಪ್ರಭುತ್ವ ಮೌಲ್ಯಗಳನ್ನು ಒಳಗೊಂಡಿರುವುದು ಹಾಗೂ ವಿದ್ಯಾರ್ಥಿಗಳ ಹಕ್ಕನ್ನು ಗುರುತಿಸುವ ವೇದಿಕೆಯಾಗಿರುವುದು ವಿದ್ಯಾರ್ಥಿ ಸಂಘಟನೆಗಳ ಮೂಲ ಉದ್ದೇಶವಾಗಿದೆ ಎಂದು ಹೇಳಿದರೆ, ಶೇ. 3 ರಷ್ಟು (5) ವಿದ್ಯಾರ್ಥಿಗಳು ಜನಸಾಮಾನ್ಯರಲ್ಲಿ ಜನ ಜಾಗೃತಿ, ಏಕತೆ ಮತ್ತು ಸ್ವಾರ್ಥ ತ್ಯಾಗ ಸಿದ್ಧಾಂತಗಳು ಇಂತಹ ಸಂಘಟನೆಗಳ ಮೂಲ ಉದ್ದೇಶ ಎಂದು ಹೇಳುತ್ತಾರೆ.

ಕೋಷ್ಟಕ–5.42: ವಿದ್ಯಾರ್ಥಿ ಸಂಘಟನೆಗಳು ಯಾವ ರೀತಿಯ ರಾಜಕೀಯ ಪ್ರಜ್ಞೆಯನ್ನು ಬೆಳೆಸುತ್ತದೆ?

ಕ್ರ.ಸಂ		ಸಂಖ್ಯೆ	ಶೇಕಡ
1	ಶೈಕ್ಷಣಿಕ ಪ್ರಗತಿಗೆ ಪೂರಕವಾದ	152	76.00
2	ಶೈಕ್ಷಣಿಕ ಪ್ರಗತಿಗೆ ಪೂರಕವಲ್ಲದ	20	10.00
3	ರಾಜಕೀಯ ಹಸ್ತಕ್ಷೇಪದಿಂದ ಕೂಡಿದ	23	12.00
4	ಒಡೆದು ಆಳುವ	0	0.00
5	ಒತ್ತಡದ	5	2.00
6	ಮಾರಕವಾದ	0	0.00
	ಒಟ್ಟು	**200**	**100.00**

ಕೋಷ್ಟಕ 5.42 ವಿವರಿಸುವಂತೆ, ಶೇ. 76ರಷ್ಟು (152) ವಿದ್ಯಾರ್ಥಿಗಳು ಶೈಕ್ಷಣಿಕ ಪ್ರಗತಿಗೆ ಪೂರಕವಾದ ಪ್ರಜ್ಞೆಯನ್ನು ವಿದ್ಯಾರ್ಥಿಗಳಲ್ಲಿ ಬೆಳೆಸುತ್ತದೆ ಎಂದು ಅಭಿಪ್ರಾಯಪಡಿಸುತ್ತಾರೆ. ಅಂತೆಯೇ ಶೇ. 10 (20) ಶೈಕ್ಷಣಿಕ ಪ್ರಗತಿಗೆ ಪೂರಕವಲ್ಲದ, ಶೇ. 12 (23) ರಾಜಕೀಯ ಹಸ್ತಕ್ಷೇಪದಿಂದ ಕೂಡಿದ, ಶೇ. 2 (5) ಒತ್ತಡವನ್ನು ಹೇರುವ ಮೂಲಕ ರಾಜಕೀಯ ಪ್ರಜ್ಞೆಯನ್ನು ವಿದ್ಯಾರ್ಥಿ ಸಮೂಹದಲ್ಲಿ ಹೆಚ್ಚಿಸುತ್ತಿದೆ ಎನ್ನುವುದನ್ನು ವಿವರಿಸುತ್ತಾರೆ.

ಕೋಷ್ಟಕ–5.43: ವಿದ್ಯಾರ್ಥಿ ಸಂಘಟನೆಗಳಲ್ಲಿ ರಾಜಕೀಯ ಪ್ರಾತಿನಿಧಿತ್ವ ಇರಬೇಕೆಂದು ನೀವು ಬಯಸುತ್ತೀರಾ?

ಕ್ರ.ಸಂ		ಸಂಖ್ಯೆ	ಶೇಕಡ
1	ಹೌದು	94	47.00
2	ಇಲ್ಲ	106	53.00
	ಒಟ್ಟು	**200**	**100.00**
ಹೌದಾದರೆ, ಯಾಕೆ?			
1	ರಾಜಕೀಯ ಪ್ರಜ್ಞೆ ಬೆಳೆಸಲು+ಸಂಘಟನೆ ಸಬಲೀಕರಣ+ನಾಯಕತ್ವದ ಮಾರ್ಗದರ್ಶನ	40	20.00
2	ವಿದ್ಯಾರ್ಥಿಗಳ ಹಿತಾಸಕ್ತಿ ಕಾಪಾಡಲು+ಪ್ರಜಾಪ್ರಭುತ್ವ ಮೌಲ್ಯ ಬೆಳೆಸಲು+ಸರಕಾರದ ಸಹಕಾರಕ್ಕೆ	54	27.00
	ಒಟ್ಟು	**94**	**47.00**
ಇಲ್ಲವಾದರೆ, ಯಾಕೆ?			
1	ವಿದ್ಯಾರ್ಥಿಗಳಲ್ಲಿ ರಾಜಕೀಯ ಒತ್ತಡವನ್ನು ಮೂಡಿಸುತ್ತದೆ+ವಿದ್ಯಾರ್ಥಿಗಳ ದುರುಪಯೋಗ+ ಒಳಜಗಳ+ಗುಂಪುಗಾರಿಕೆ	62	31.00
2	ವಿದ್ಯಾರ್ಥಿ ಸಂಘಟನೆ ರಾಜಕೀಯದಿಂದ ಮುಕ್ತವಾಗಿರಬೇಕು	44	22.00
	ಒಟ್ಟು	**106**	**53.00**

ಕೋಷ್ಟಕ 5.43 ಹೇಳುವಂತೆ ಶೇ. 47 ರಷ್ಟು ವಿದ್ಯಾರ್ಥಿಗಳು (94) ವಿದ್ಯಾರ್ಥಿ ಸಂಘಟನೆಗಳಲ್ಲಿ ರಾಜಕೀಯ ಪ್ರಾತಿನಿಧಿತ್ವ ಇರಬೇಕೆಂದು ನೀವು ಬಯಸುತ್ತಾರೆ. ಅವರ ಪ್ರಕಾರ ಅದು ವಿದ್ಯಾರ್ಥಿಗಳಲ್ಲಿ ರಾಜಕೀಯ ಪ್ರಜ್ಞೆ ಬೆಳೆಸಲು, ಸಂಘಟನೆ ಸಬಲೀಕರಣಗೊಳಿಸಲು ಮತ್ತು ನಾಯಕತ್ವದ ಮಾರ್ಗದರ್ಶನವನ್ನು (ಶೇ. 20) ನೀಡಲು ಸಹಾಯ ಮಾಡುತ್ತದೆ. ಹಾಗೆಯೇ ರಾಜಕೀಯ ಪ್ರಾತಿನಿಧಿತ್ವವು ವಿದ್ಯಾರ್ಥಿಗಳ ಹಿತಾಸಕ್ತಿ ಕಾಪಾಡಲು, ಪ್ರಜಾಪ್ರಭುತ್ವ ಮೌಲ್ಯ ಬೆಳೆಸಲು ಮತ್ತು ಸರಕಾರದ ಸಹಕಾರ ಪಡೆದುಕೊಳ್ಳಲು (ಶೇ. 27) ಸಹಾಯ ಮಾಡುತ್ತದೆ. ಆದರೆ ಶೇ. 53ರಷ್ಟು (106) ವಿದ್ಯಾರ್ಥಿಗಳು ವಿದ್ಯಾರ್ಥಿ ಸಂಘಟನೆಗಳಲ್ಲಿ ರಾಜಕೀಯ ಪ್ರಾತಿನಿಧಿತ್ವ ಬೇಡವೆಂದು ಹೇಳುತ್ತಾರೆ. ಅದಕ್ಕೆ ಕಾರಣಗಳನ್ನು ನೀಡುತ್ತಾರೆ–ಅದು ವಿದ್ಯಾರ್ಥಿಗಳಲ್ಲಿ ರಾಜಕೀಯ ಒತ್ತಡವನ್ನು ಮೂಡಿಸುತ್ತದೆ, ವಿದ್ಯಾರ್ಥಿಗಳ ದುರುಪಯೋಗ, ಒಳಜಗಳ, ಗುಂಪುಗಾರಿಕೆಯನ್ನು ಹೆಚ್ಚಿಸುತ್ತದೆ (ಶೇ. 31) ಹಾಗೂ ವಿದ್ಯಾರ್ಥಿ ಸಂಘಟನೆ ರಾಜಕೀಯದಿಂದ ಮುಕ್ತವಾಗಿರಬೇಕು ಎನ್ನುವವರ ಪ್ರಮಾಣ ಶೇ. 22.

ಕೋಷ್ಟಕ–5.44: ವಿದ್ಯಾರ್ಥಿ ಸಂಘಟನೆಗಳ ಇತರ ಉಪಯೋಗಗಳು ಯಾವುದು?

ಕ್ರ.ಸಂ		ಸಂಖ್ಯೆ	ಶೇಕಡ
1	ಬೇರೆ ಬೇರೆ ಶಿಕ್ಷಣ ಸಂಸ್ಥೆಗಳ ಪರಿಚಯ+ವಿದ್ಯಾರ್ಥಿಗಳಲ್ಲಿ ಪರಿಣಾಮಕಾರಿ ಒಗ್ಗಟ್ಟು ಮೂಡಿಸುವಿಕೆ+ ಶೈಕ್ಷಣಿಕ ವಿನಿಮಯ+ವಿದ್ಯಾರ್ಥಿ ಪ್ರತಿನಿಧಿತ್ವ	183	92.00
2	ವಿದ್ಯಾರ್ಥಿಗಳ ಸಾಂಸ್ಕೃತಿಕ ಮತ್ತು ಪೂರಕ ಚಟುವಟಿಕೆಗಳ ಪ್ರಗತಿ	17	8.00
	ಒಟ್ಟು	**200**	**100.00**

ಕೋಷ್ಟಕ 5.44 ವಿವರಿಸುವಂತೆ, ಶೇ. 92 ರಷ್ಟು ವಿದ್ಯಾರ್ಥಿಗಳು (183) ವಿದ್ಯಾರ್ಥಿ ಸಂಘಟನೆಗಳ ಉಪಯೋಗಗಳ ಬಗ್ಗೆ ಹೇಳುತ್ತಾರೆ. ಬೇರೆ ಬೇರೆ ಶಿಕ್ಷಣ ಸಂಸ್ಥೆಗಳ ಪರಿಚಯ, ವಿದ್ಯಾರ್ಥಿಗಳಲ್ಲಿ ಪರಿಣಾಮಕಾರಿ ಒಗ್ಗಟ್ಟು ಮೂಡಿಸುವಿಕೆ, ಶೈಕ್ಷಣಿಕ ವಿನಿಮಯ, ವಿದ್ಯಾರ್ಥಿ ಪ್ರತಿನಿಧಿತ್ವ ಇತ್ಯಾದಿ ಉಪಯೋಗಗಳ ಬಗ್ಗೆ ಪ್ರಸ್ತಾಪಿಸಿದ್ದಾರೆ. ಹಾಗೆಯೇ ಶೇ. 8 ರಷ್ಟು (17) ವಿದ್ಯಾರ್ಥಿಗಳು ಅವರ ಸಾಂಸ್ಕೃತಿಕ ಮತ್ತು ಪೂರಕ ಚಟುವಟಿಕೆಗಳ ಪ್ರಗತಿಯ ಉಪಯೋಗವೂ ದೊರೆಯುತ್ತಿದೆ ಎಂದು ಹೇಳುತ್ತಾರೆ.

ಕೋಷ್ಟಕ–5.45: ವಿದ್ಯಾರ್ಥಿ ಸಂಘಟನೆಗಳು ಈವರೆಗೆ ಯಾವ ವಿಷಯದಲ್ಲಿ ಹೋರಾಟ ಮಾಡಿದ ಅರಿವು ನಿಮ್ಮಲ್ಲಿದೆ?

ಕ್ರ.ಸಂ		ಸಂಖ್ಯೆ	ಶೇಕಡ
1	ಭ್ರಷ್ಟಚಾರ+ಗುಣಮಟ್ಟದ ಶಿಕ್ಷಣದ ಬೇಡಿಕೆ+ದೌರ್ಜನ್ಯ ಮತ್ತು ರಾಗಿಂಗ್+ಸಮಾನ ಶಿಕ್ಷಣಕ್ಕಾಗಿ	194	97.00
2	ನಿರುದ್ಯೋಗ+ಶಿಕ್ಷಕರ ನೇಮಕಾತಿ	6	3.00
	ಒಟ್ಟು	**200**	**100.00**

ಕೋಷ್ಟಕ 5.45 ಹೇಳುವಂತೆ ಶೇ. 97 ರಷ್ಟು (194) ವಿದ್ಯಾರ್ಥಿಗಳು ಭ್ರಷ್ಟಚಾರ, ಗುಣಮಟ್ಟದ ಶಿಕ್ಷಣದ ಬೇಡಿಕೆ, ದೌರ್ಜನ್ಯ ಮತ್ತು ರಾಗಿಂಗ್, ಸಮಾನ ಶಿಕ್ಷಣಕ್ಕಾಗಿ ವಿದ್ಯಾರ್ಥಿ ಸಂಘಟನೆಗಳು ಹೋರಾಟ ಮಾಡಿವೆ ಮತ್ತು ಆ ಅರಿವನ್ನು ಹೊಂದಿವೆ ಎಂದು ಹೇಳುತ್ತಾರೆ. ಆದರೆ ಶೇ. 3 ರಷ್ಟು (6) ವಿದ್ಯಾರ್ಥಿಗಳು ನಿರುದ್ಯೋಗ ಹಾಗೂ ಶಿಕ್ಷಕರ ನೇಮಕಾತಿ ಕುರಿತು ಹೋರಾಟ ಮಾಡಿವೆ ಎನ್ನುವುದನ್ನು ಹೇಳುತ್ತಾರೆ.

ಕೋಷ್ಟಕ–5.46: ವಿದ್ಯಾರ್ಥಿ ಸಂಘಟನೆಗಳ ಬಗೆಗಿನ ಮಾಹಿತಿ ಕಾರ್ಯಗಾರದ ಅಗತ್ಯ ನಿಮಗಿದೆಯೇ?

ಕ್ರ.ಸಂ		ಸಂಖ್ಯೆ	ಶೇಕಡ
1	ಹೌದು	152	76.00
2	ಇಲ್ಲ	48	24.00
	ಒಟ್ಟು	**200**	**100.00**

ಕೋಷ್ಟಕ 5.46 ವಿವರಿಸುವಂತೆ ಶೇ. 76 ರಷ್ಟು ವಿದ್ಯಾರ್ಥಿಗಳು ಇಂತಹ ಸಂಘಟನೆಗಳ ಬಗ್ಗೆ ಮಾಹಿತಿ ಬೇಕಾಗಿದೆ ಮತ್ತು ಕಾರ್ಯಾಗಾರಗಳ ಅಗತ್ಯವಿದೆ ಎಂದು ಅಭಿಪ್ರಾಯ ಪಡುತ್ತಾರೆ. ಆದರೆ ಶೇ. 24 ರಷ್ಟು (48) ವಿದ್ಯಾರ್ಥಿಗಳು ಈ ತೆರನಾದ ಮಾಹಿತಿ ಕಾರ್ಯಾಗಾರ ಬೇಕಾಗಿಲ್ಲ ಎನ್ನುವುದರ ಬಗ್ಗೆ ಹೆಚ್ಚು ಒಲವು ತೋರಿಸುತ್ತಾರೆ.

ಕೋಷ್ಟಕ–5.47: ವಿದ್ಯಾರ್ಥಿ ಸಂಘಟನೆಗಳು ಆಯಾ ಕಾಲಕ್ಕೆ ವಿದ್ಯಾರ್ಥಿ ಸಭೆ/ ಮೀಟಿಂಗ್‌ಗಳನ್ನು ನಡೆಸುತ್ತದೆಯೇ?

ಕ್ರ.ಸಂ		ಸಂಖ್ಯೆ	ಶೇಕಡ
1	ಹೌದು	138	69.00
2	ಇಲ್ಲ	62	31.00
	ಒಟ್ಟು	**200**	**100.00**
ಹೌದಾದರೆ, ಎಲ್ಲಿ?			
1	ಕಾಲೇಜಿನ ಆವರಣ	109	55.00
2	ಸಾರ್ವಜನಿಕ ಸಭಾಂಗಣ	29	14.00
	ಒಟ್ಟು	**138**	**69.00**

ಕೋಷ್ಟಕ 5.47 ಹೇಳುವಂತೆ ಶೇ. 69 ರಷ್ಟು (138) ವಿದ್ಯಾರ್ಥಿಗಳು ವಿದ್ಯಾರ್ಥಿ ಸಂಘಟನೆಗಳು ಆಯಾ ಕಾಲಕ್ಕೆ ವಿದ್ಯಾರ್ಥಿ ಸಭೆ/ ಮೀಟಿಂಗ್‌ಗಳನ್ನು ಕಾಲೇಜಿನ ಆವರಣದಲ್ಲಿ (ಶೇ. 55) ಹಾಗೂ ಸಾರ್ವಜನಿಕ ಸಭಾಂಗಣದಲ್ಲಿ (ಶೇ. 14) ನಡೆಸುತ್ತಿವೆ ಎಂದು ವಿವರಿಸುತ್ತಾರೆ. ಅಂತೆಯೇ ಶೇ. 31 ರಷ್ಟು (62) ವಿದ್ಯಾರ್ಥಿಗಳು ಇಂತಹ ಸಭೆ ನಡೆಸಲಾಗುತ್ತಿಲ್ಲ ಎಂದು ಹೇಳುತ್ತಾರೆ.

ಕೋಷ್ಟಕ–5.48: ವಿದ್ಯಾರ್ಥಿ ಸಂಘಟನೆ ಮತ್ತು ಅದರ ಚಟುವಟಿಕೆ ನಿಮ್ಮ ಕಾಲೇಜಿನ ಕ್ಯಾಂಪಸ್ ರಾಜಕೀಯಕ್ಕೆ ಕಾರಣವಾಗಿದೆಯೇ?

ಕ್ರ.ಸಂ		ಸಂಖ್ಯೆ	ಶೇಕಡ
1	ಹೌದು	81	41.00
2	ಇಲ್ಲ	119	59.00
	ಒಟ್ಟು	**200**	**100.00**
ಹೌದಾದರೆ, ಹೇಗೆ?			
1	ವಿದ್ಯಾರ್ಥಿ ಒಳಜಗಳ, ದ್ವೇಷ ಜಾಸ್ತಿಯಾಗಿದೆ	43	22.00
2	ತರಗತಿ ಬಹಿಷ್ಕಾರ ಮತ್ತು ಮುಷ್ಕರ	38	19.00
	ಒಟ್ಟು	**81**	**41.00**

ಕೋಷ್ಟಕ 5.48 ವಿವರಿಸುವಂತೆ, ಶೇ. 41 ರಷ್ಟು (81) ವಿದ್ಯಾರ್ಥಿಗಳು ವಿದ್ಯಾರ್ಥಿ ಸಂಘಟನೆ ಮತ್ತು ಅದರ ಚಟುವಟಿಕೆ ಅವರ ಕಾಲೇಜಿನ ಕ್ಯಾಂಪಸ್ ರಾಜಕೀಯಕ್ಕೆ ಕಾರಣವಾಗಿದೆ ಎಂದು ಹೇಳಿದರೆ ಶೇ. 59 ರಷ್ಟು ವಿದ್ಯಾರ್ಥಿಗಳು (119) ಕಾರಣವಾಗಿಲ್ಲ ಎಂದು ತಿಳಿಸುತ್ತಾರೆ. ಈ ರೀತಿ ಕ್ಯಾಂಪಸ್ ರಾಜಕೀಯದಿಂದಾಗಿ ವಿದ್ಯಾರ್ಥಿ ಒಳಜಗಳ, ದ್ವೇಷ ಜಾಸ್ತಿಯಾಗಿದೆ ಮತ್ತು ತರಗತಿ ಬಹಿಷ್ಕಾರ ಮತ್ತು ಮುಷ್ಕರಗಳು ಹೆಚ್ಚುತ್ತಿವೆ ಎಂದು ವಿವರಿಸುತ್ತಾರೆ.

ಕೋಷ್ಟಕ–5.49: ವಿದ್ಯಾರ್ಥಿ ಸಂಘಟನೆಗಳಲ್ಲಿ ಭಾಗವಹಿಸಲು ನಿಮಗೆ ಇರುವ ಅಡೆತಡೆಗಳು ಯಾವುವು?

ಕ್ರ.ಸಂ		ಸಂಖ್ಯೆ	ಶೇಕಡ
1	ಕುಟುಂಬ	64	32.00
2	ಶಿಕ್ಷಕ ವರ್ಗ	19	10.00
3	ಕಾಲೇಜು ಆಡಳಿತ ವ್ಯವಸ್ಥೆ	21	11.00
4	ರಾಜಕೀಯ ವ್ಯವಸ್ಥೆ	23	11.00
5	ಸರಿಯಾದ ಮಾರ್ಗದರ್ಶನ ಕೊರತೆ	27	13.00
6	ಪಾಠ ಪ್ರವಚನಗಳ ಒತ್ತಡ	46	23.00
7	ಇತರ	0	0.00
	ಒಟ್ಟು	**200**	**100.00**

ಕೋಷ್ಟಕ 5.49 ವಿವರಿಸುವಂತೆ ಕುಟುಂಬದ ನಿರ್ವಹಣೆ (ಶೇ. 32), ಶಿಕ್ಷಕ ವರ್ಗ (ಶೇ. 10), ಕಾಲೇಜು ಆಡಳಿತ ವ್ಯವಸ್ಥೆ (ಶೇ 11), ಪ್ರಚಲಿತದ ರಾಜಕಿಯ ವ್ಯವಸ್ಥೆ (ಶೇ. 11), ಸರಿಯಾದ ಮಾರ್ಗದರ್ಶನ ಕೊರತೆ (ಶೇ. 13), ಪಾಠಪ್ರವಚನಗಳ ಒತ್ತಡ (ಶೇ. 23) ಇತ್ಯಾದಿಗಳು ವಿದ್ಯಾರ್ಥಿಗಳಿಗೆ ಅವರ ಸಂಘಟನೆಗಳಲ್ಲಿ ಭಾಗವಹಿಸಲು ಇರುವ ಅಡೆತಡೆಗಳಾಗಿವೆ.

ಕೋಷ್ಟಕ –5.50: ವಿದ್ಯಾರ್ಥಿ ಸಂಘಟನೆಯು ಇನ್ನಷ್ಟು ಪರಿಣಾಮಕಾರಿಯಾಗಿ ಬೆಳೆಯಲು ನಿಮ್ಮ ಸಲಹೆಗಳು?

ಕ್ರ.ಸಂ		ಸಂಖ್ಯೆ	ಶೇಕಡ
1	ಸಾರ್ವತ್ರಿಕ ಪ್ರಜಾಪಭುತ್ವ ಪರಿಕಲ್ಪನೆ+ಪರಿಣಾಮಕಾರಿ ತೀರ್ಮಾನ+ವಿದ್ಯಾರ್ಥಿಗಳಲ್ಲಿ ಸರಿಯಾದ ರಾಜಕೀಯ ಪ್ರಜ್ಞೆ+ಉತ್ತಮ ನಾಯಕತ್ವ	193	97.00
2	ಆರ್ಥಿಕ ಸಬಲೀಕರಣ+ಕಾನೂನು ಬದ್ಧವಾದ ರಕ್ಷಣೆ ಮತ್ತು ನೀತಿಗಳು	7	3.00
	ಒಟ್ಟು	**200**	**100.00**

ಕೋಷ್ಟಕ 5.50 ಹೇಳುವಂತೆ ಶೇ. 97 ರಷ್ಟು (193) ವಿದ್ಯಾರ್ಥಿಗಳು ಸಾರ್ವತ್ರಿಕ ಪ್ರಜಾಪಭುತ್ವ ಪರಿಕಲ್ಪನೆ, ಪರಿಣಾಮಕಾರಿ ತೀರ್ಮಾನ, ವಿದ್ಯಾರ್ಥಿಗಳಲ್ಲಿ ಸರಿಯಾದ ರಾಜಕೀಯ ಪ್ರಜ್ಞೆ, ಉತ್ತಮ ನಾಯಕತ್ವ ಇತ್ಯಾದಿ ಸಲಹೆಗಳನ್ನು ವಿದ್ಯಾರ್ಥಿ ಸಂಘಟನೆಗಳ ಪರಿಣಾಮಕಾರಿಯಾದ ಬೆಳವಣಿಗೆಗೆ ನೀಡಿರುತ್ತಾರೆ. ಹಾಗೆಯೇ ಶೇ. 3 ರಷ್ಟು (7) ವಿದ್ಯಾರ್ಥಿಗಳು ಆರ್ಥಿಕ ಸಬಲೀಕರಣ, ಕಾನೂನು ಬದ್ಧವಾದ ರಕ್ಷಣೆ ಮತ್ತು ನೀತಿಗಳನ್ನು ಈ ಸಂಘಟನೆಗಳು ಹೊಂದಿರಬೇಕು ಎಂದು ಆಶಿಸುತ್ತಾರೆ.

ಕೋಷ್ಟಕ–5.51: ವಿದ್ಯಾರ್ಥಿ ಸಮುದಾಯದ ಏಳಿಗೆಗೆ ನಿಮ್ಮ ಬೇಡಿಕೆಗಳೇನು?

ಕ್ರ.ಸಂ		ಸಂಖ್ಯೆ	ಶೇಕಡ
1	ಉತ್ತಮ ಶಿಕ್ಷಣ+ಉತ್ತಮ ತರಬೇತಿ+ವೃತ್ತಿಪರ ಶಿಕ್ಷಣ+ಭ್ರಷ್ಟಚಾರ ಮುಕ್ತ ಸಮಾಜ+ಜಾತ್ಯಾತೀತ ಸಮಾಜ+ಸರಕಾರದ ಸೌಲಭ್ಯ	93	47.00
2	ಉತ್ತಮ ಶಿಕ್ಷಕ ವೃಂದ+ ಉನ್ನತ ಶಿಕ್ಷಣ+ ಕೌಶಲ್ಯ ವೃದ್ಧಿ +ಶಿಸ್ತು+ಪ್ರೋತ್ಸಾಹ+ಉತ್ತಮ ನೀತಿ, ಶಾಸನ ಕಾಯಿದೆಗಳು+ಉಚಿತ ಶಿಕ್ಷಣ	107	53.00
	ಒಟ್ಟು	**200**	**100.00**

ಕೋಷ್ಟಕ 5.51 ಹೇಳುವಂತೆ ಶೇ. 47 ರಷ್ಟು (93) ವಿದ್ಯಾರ್ಥಿಗಳು ಈ ಸಂಘಟನೆಗಳು ಉತ್ತಮ ಶಿಕ್ಷಣ, ಉತ್ತಮ ತರಬೇತಿ, ವೃತ್ತಿಪರ ಶಿಕ್ಷಣ, ಭ್ರಷ್ಟಚಾರ ಮುಕ್ತ ಸಮಾಜ, ಜಾತ್ಯಾತೀತ ಸಮಾಜ, ಸರಕಾರದ ಸೌಲಭ್ಯ ಇತ್ಯಾದಿ ಅಂಶಗಳನ್ನು ಒದಗಿಸುವಲ್ಲಿ ಪ್ರಯತ್ನಿಸಬೇಕು ಎಂದು ಹೇಳುತ್ತಾರೆ. ಹಾಗೆಯೇ ಶೇ. 53 ರಷ್ಟು (107) ವಿದ್ಯಾರ್ಥಿಗಳು ಉತ್ತಮ ಶಿಕ್ಷಕ ವೃಂದ, ಉನ್ನತ ಶಿಕ್ಷಣ, ಕೌಶಲ್ಯ ವೃದ್ಧಿ, ಶಿಸ್ತು, ಪ್ರೋತ್ಸಾಹ, ಉತ್ತಮ ನೀತಿ, ಶಾಸನ ಕಾಯಿದೆಗಳು, ಉಚಿತ ಶಿಕ್ಷಣವನ್ನು ಒದಗಿಸುವಲ್ಲಿ ಸಂಘಟನೆ ಶ್ರಮಿಸಬೇಕು ಎಂದು ಹೇಳುತ್ತಾರೆ.

ಕೋಷ್ಟಕ–5.52: ವಿದ್ಯಾರ್ಥಿ ಜೀವನದಲ್ಲಿ ಯಾವ ಸಂಗತಿಗಳು ನಿಮ್ಮನ್ನು ಹೆಚ್ಚು ಗೊಂದಲಕ್ಕೀಡು ಮಾಡಿವೆ?

ಕ್ರ.ಸಂ		ಸಂಖ್ಯೆ	ಶೇಕಡ
1	ಪರೀಕ್ಷೆಯ ಬಗೆಗಿನ ಮನಸಿಕ ಒತ್ತಡಗಳು+ಸಂಘಟನೆಯ ಅಸ್ಥಿರತೆ+ವಿದ್ಯಾರ್ಥಿ ಸಮುದಾಯದ ಬಗ್ಗೆ ಇರುವ ಅಸಡ್ಡೆ ಮನೋಭಾವ+ಮುಂದೆ ಬರುವ ನಿರುದ್ಯೋಗ ಸಮಸ್ಯೆ+ಮಾರ್ಗದರ್ಶನದ ಕೊರತೆ+ಕನ್ನಡ ಮತ್ತು ಇಂಗ್ಲೀಷ್ ಶಿಕ್ಷಣ ಮಾದ್ಯಮದ ನಡುವಿನ ತಾರತಮ್ಯ	164	82.00
2	ಹಣಕಾಸಿನ ತೊಂದರೆ+ ವಿದ್ಯಾರ್ಥಿ ಜೀವನದ ಸಂಕ್ರಮಣ ಕಾಲ +ವೃತ್ತಿಪರತೆ ಇಲ್ಲದ ಶಿಕ್ಷಣ	36	18.00
	ಒಟ್ಟು	**200**	**100.00**

ಕೋಷ್ಟಕ 5.52 ವಿವರಿಸುವಂತೆ ಶೇ. 82 ರಷ್ಟು (164) ವಿದ್ಯಾರ್ಥಿಗಳು ಪರೀಕ್ಷೆಯ ಬಗೆಗಿನ ಮಾನಸಿಕ ಒತ್ತಡಗಳು, ಸಂಘಟನೆಯ ಅಸ್ಥಿರತೆ, ವಿದ್ಯಾರ್ಥಿ ಸಮುದಾಯದ ಬಗ್ಗೆ ಇರುವ ಅಸಡ್ಡೆ ಮನೋಭಾವ, ಮುಂದೆ ಬರುವ ನಿರುದ್ಯೋಗ ಸಮಸ್ಯೆ, ಮಾರ್ಗದರ್ಶನದ ಕೊರತೆ, ಕನ್ನಡ ಮತ್ತು ಇಂಗ್ಲೀಷ್ ಶಿಕ್ಷಣ ಮಾಧ್ಯಮದ ನಡುವಿನ ತಾರತಮ್ಯಗಳು ವಿದ್ಯಾರ್ಥಿಗಳ ಜೀವನದಲ್ಲಿ ಹೆಚ್ಚು ಗೊಂದಲಗಳನ್ನು ಉಂಟುಮಾಡುತ್ತಿವೆ ಎಂದು ಹೇಳುತ್ತಾರೆ. ಅಂತೆಯೇ ಶೇ. 18 ರಷ್ಟು (36) ವಿದ್ಯಾರ್ಥಿಗಳು ಹಣಕಾಸಿನ ತೊಂದರೆ, ವಿದ್ಯಾರ್ಥಿ ಜೀವನದ ಸಂಕ್ರಮಣ ಕಾಲ, ವೃತ್ತಿಪರತೆ ಇಲ್ಲದ ಶಿಕ್ಷಣಗಳು ಹೆಚ್ಚು ಗೊಂದಲಗಳನ್ನು ಹುಟ್ಟುಹಾಕುತ್ತವೆ ಎಂದು ಹೇಳುತ್ತಾರೆ.

ಈ ಮೇಲಿನ ಚರ್ಚೆಯಿಂದ ಸ್ಪಷ್ಟವಾಗುವ ಸಂಗತಿ ಏನೆಂದರೆ ವಿದ್ಯಾರ್ಥಿಗಳು ರಾಜಕೀಯ ಪ್ರಜ್ಞೆ ಹೊಂದಿದ್ದಾರೆ. ರಾಜಕೀಯ ವಿದ್ಯಮಾನಗಳ ಕುರಿತು ಅವರು ಅರಿವನ್ನು ಹೊಂದಿದ್ದಾರೆ. ಅವರ ರಾಜಕೀಯ ಪ್ರಜ್ಞೆ ಮತ್ತು ರಾಜಕೀಯ ಭಾಗವಹಿಸುವಿಕೆಯ ಮಟ್ಟವನ್ನು ಅರಿತುಕೊಳ್ಳಲು ಹಲವು ಪ್ರಶ್ನೆಗಳನ್ನು ಕೇಳಲಾಯಿತು. ಉದಾಹರಣೆಗೆ ರಾಜಕೀಯ ಅಭಿಪ್ರಾಯ ರೂಪಿಸುವಲ್ಲಿ ಯಾರು ಪ್ರಮುಖ ಪಾತ್ರ ವಹಿಸುತ್ತಾರೆ? ರಾಜಕೀಯ ಚರ್ಚೆಯ ಪುನರಾವರ್ತನೆ, ವಿದ್ಯಾರ್ಥಿಗಳಲ್ಲಿ ಚರ್ಚೆಗೆ ಬರುವ ಪ್ರಮುಖ ವಿಷಯಗಳು ಯಾವುವು? ರಾಜಕೀಯ ಕುರಿತು ನಿಮ್ಮ ಅಭಿಪ್ರಾಯವೇನು? ಮುಂದೆ ರಾಜಕೀಯವನ್ನು ಒಂದು ವೃತ್ತಿಯಾಗಿ ಮುಂದುವರಿಸುತ್ತೀರಾ? ವಿದ್ಯಾರ್ಥಿಗಳು ರಾಜಕೀಯ ಪಕ್ಷಗಳ ಸಹಾಯ ಕೋರಬೇಕೆ? ರಾಜಕೀಯ ಪಕ್ಷಗಳು ಆಯೋಜಿಸುವ ವಿಚಾರ ಸಂಕಿರಣ ಮತ್ತು ಸಮಾರಂಭಗಳಿಗೆ ವಿದ್ಯಾರ್ಥಿಗಳು ಹಾಜರಾಗಬೇಕೆ? ರಾಜಕೀಯ ನಾಯಕರು ನೀಡುವ ಉಪದೇಶ/ ಆದೇಶಗಳನ್ನು ವಿದ್ಯಾರ್ಥಿಗಳು ಪರಿಪಾಲಿಸಬೇಕೆ? ಈ ಎಲ್ಲ ಪ್ರಶ್ನೆಗಳಿಗೆ ವಿದ್ಯಾರ್ಥಿಗಳು ನೀಡಿರುವ ಅಭಿಪ್ರಾಯಗಳು ಅವರ ರಾಜಕೀಯ ಪ್ರಜ್ಞಾವಂತಿಕೆಯನ್ನು ಪ್ರತಿಫಲಿಸುತ್ತದೆ. ರಾಷ್ಟ್ರ ರಾಜಕಾರಣದಿಂದ ಸ್ಥಳಿಯ ರಾಜಕಾರಣದವರೆಗೆ ವಿದ್ಯಾರ್ಥಿಗಳು ಅರಿವನ್ನು ಹೊಂದಿದ್ದಾರೆ ಎಂಬುವುದು ಈ ಅಧ್ಯಯನದಿಂದ ಸ್ಪಷ್ಟವಾಗುತ್ತದೆ.

ಪರಾಮರ್ಶನ ಗ್ರಂಥಗಳು:

1. ನೀನಾ ಶರ್ಮಾ, " ಪೊಲಿಟಿಕಲ್ ಸೊಶಿಯಲೈಜೇಷನ್ ಆ್ಯಂಡ್ ಇಟ್ಸ್ ಇಂಪ್ಯಾಕ್ಟ್ ಆನ್ ಅಟಿಟ್ಯೂಡಿನಲ್ ಚೇಂಚ್ ಟುವರಡ್ಸ್ ಸೊಶಿಯಲ್ ಆ್ಯಂಡ್ ಪೊಲಿಟಿಕಲ್ ಸಿಸ್ಟಮ್", ಇಂಟರ್ ಇಂಡಿಯಾ ಪಬ್ಲಿಕೇಷನ್, ನ್ಯೂ ಡೆಲ್ಲಿ, 1985. ಪು– 128–129

2. ಡಿ. ಮೀನಾಕ್ಷಿ, " ನಿರ್ಣಯ ಪ್ರಕಿಯೆಯಲ್ಲಿ ಚುನಾಯಿತ ಮಹಿಳೆಯರ ಪಾತ್ರ", ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2010. ಪು–7–8

3. ಎಮ್. ಎಮ್. ಮ್ಯಾಥ್ಯೂ, " ಪೊಲಿಟಿಕಲ್ ಸೊಶಿಯಲೈಜೇಷನ್ ಆಫ್ ಸ್ಟುಡೆಂಟ್ ಆರ್ಗ್ನೈಜೇಷನ್ ಇನ್ ಕೇರಳ– ವಿಥ್ ಸ್ಪೇಷಲ್ ರೆಫರೆನ್ಸ್ ಟು ಮಹಾತ್ಮಾ ಗಾಂಧಿ ಯುನಿರ್ವಸಿಟಿ", ಎ ಥಿಸಿಸ್ ಸಬ್‌ಮೀಟೆಡ್ ಟು ಮಹಾತ್ಮಾ ಗಾಂಧಿ ಯುನಿರ್ವಸಿಟಿ, ಕೇರಳ, 1994. ಪು–158–161

4. ಡಿ. ಕೆ. ಮೊಹಂತಿ, " ಹೈಯರ್ ಎಜ್ಯುಕೇಷನ್ ಆ್ಯಂಡ್ ಸ್ಟುಡೆಂಟ್ ಪೊಲಿಟಿಕ್ಸ್ ಇನ್ ಇಂಡಿಯಾ", ಅನಮೋಲ್ ಪಬ್ಲಿಕೇಷನ್ ಪ್ರೈವೇಟ್ ಲಿಮಿಟೆಡ್, ನ್ಯೂ ಡೆಲ್ಲಿ, 1999. ಪು– 174–176

5. ಟಿ. ಮಲ್ಲಪ್ಪ, " ಆಧುನಿಕ ರಾಜಕೀಯ ಸಿದ್ಧಾಂತ ಮತ್ತು ರಾಜಕೀಯ ದಾರ್ಶನಿಕರು", ಶ್ರೀ ಸಿದ್ಧಲಿಂಗೇಶ್ವರ ಬುಕ್ ಡಿಪೊ ಹಾಗೂ ಪ್ರಕಾಶನ, ಗುಲಬರ್ಗಾ, 1995. ಪು–4

6. ಎಸ್.ಸಿ.ಹಜಾರೆ, "ಸ್ಟುಡೆಂಟ್ ಪಾಲಿಟಿಕ್ಸ್ ಇನ್ ಇಂಡಿಯಾ", ಆಶಿಶ್ ಪಬ್ಲಿಷಿಂಗ್ ಹೌಸ್, ನ್ಯೂ ಡೆಲ್ಲಿ, 1987. ಪು–106

7. ಹುಮಾಯುನ ಕಬೀರ, "ಸ್ಟುಡೆಂಟ್ ಅನ್‌ರೆಸ್ಟ್: ಕಾಜಸ್ ಆಂಡ್ ಕ್ಯೂರ್", ಓರಿಯಂಟ್ ಬೂಕ್ ಕಂಪನಿ, ಕಲ್ಕತ್ತಾ, 1985. ಪು–73

8. ಮಾರ್ಗರೇಟ್ ಕಾರ್‌ಮಾಕ್, ಶಿ ವ್ಹೂ ರೈಡ್ಸ್ ಎ ಪೀಕಾಕ್, "ಇಂಡಿಯನ್ ಸ್ಟುಡೆಂಟ್ಸ್ ಆಂಡ್ ಸೋಸಿಯಲ್ ಚೇಂಜ್", ಏಶಿಯಾ ಪಬ್ಲಿಷಿಂಗ್ ಹೌಸ್, ಬಾಂಬೆ, 1961. ಪು–83

9. ಎಸ್. ಎನ್. ಸರಕಾರ್, "ಸ್ಟುಡೆಂಟ್: ಎ ಸೋಶಿಯೋ– ಸೈಕಾಲೋಜಿಕಲ್ ಸ್ಟಡಿ", ಇಂಡಿಯಾ ಬೂಕ್ ಎಕ್ಸ್‌ಚೇಂಜ್, ಕಲ್ಕತ್ತಾ, 1974. ಪು–92

10. ಎಸ್.ಕೆ.ಪಟ್ನಾಯಕ್, 'ಸ್ಟುಡೆಂಟ್ ಪೊಲಿಟಿಕ್ಸ್ ಆಂಡ್ ವೋಟಿಂಗ್ ಭಿಹೇವಿಯರ್', ಕನ್ಸಪ್ಟ್ ಪಬ್ಲಿಶಿಂಗ್ ಕಂಪನಿ, ನ್ಯೂ ಡೆಲ್ಲಿ, 1981. ಪು–135

11. ಡಿ.ಕೆ.ಮೊಹಂತಿ 'ಹೈಯರ್ ಎಜುಕೇಶನ್ ಆಂಡ್ ಸ್ಟುಡಂಟ್ ಪಾಲಿಟಿಕ್ಸ್ ಇನ್ ಇಂಡಿಯಾ' ಅನಮೋಲ್ ಪಬ್ಲಿಕೇಷನ್ ಪ್ರೈವೇಟ್ ಲಿಮಿಟೆಡ್, ನ್ಯೂ ಡೆಲ್ಲಿ, 1999. ಪು–210

12. ಆರ್.ಅರುಣಕುಮಾರ, 'ಸೆವಂಟಿ ಇಯರ್ಸ್ ಆಫ್ ಆರ್ಗನೈಜಡ್ ಸ್ಟುಡೆಂಟ್ ಮೂವ್‌ಮೆಂಟ್' ಪೀಪಲ್ಸ್ ಡೆಮಾಕ್ರಸಿ, ವ್ಯಾಲ್ಯೂಮ್ 20 ನಂ 36, ಸೆಪ್ಟೆಂಬರ್ 2006.

ಅಧ್ಯಾಯ – 6

ಶೈಕ್ಷಣಿಕ, ಸಾಮಾಜಿಕ ಮತ್ತು ರಾಜಕೀಯ ವಿಚಾರಗಳಿಗೆ ಸಂಬಂಧಿಸಿದಂತೆ ವಿದ್ಯಾರ್ಥಿಗಳ ಗ್ರಹಿಕೆ

ಶೈಕ್ಷಣಿಕ, ಸಾಮಾಜಿಕ ಮತ್ತು ರಾಜಕೀಯ ಸಂಗತಿಗಳ ಬಗ್ಗೆ ವಿದ್ಯಾರ್ಥಿಗಳ ಅರಿವು, ಮನೋವೃತ್ತಿ ಮತ್ತು ಗ್ರಹಿಕೆಯ ಕುರಿತು ಈ ಅಧ್ಯಾಯದಲ್ಲಿ ಚರ್ಚಿಸಲಾಗಿದೆ. ದೇಶದ ಪ್ರಚಲಿತ ವಿದ್ಯಮಾನಗಳ ಕುರಿತು ವಿದ್ಯಾರ್ಥಿಗಳ ಗ್ರಹಿಕೆಯನ್ನು ತಿಳಿದುಕೊಳ್ಳಲು ಇಲ್ಲಿ ಪ್ರಯತ್ನಿಸಲಾಗಿದೆ. ಪ್ರಮುಖ ವಿಷಯಗಳ ಬಗ್ಗೆ ಚರ್ಚಿಸುವುದಕ್ಕಿಂತ ಮುಂಚೆ ನಾವು ಎರಡು ಪ್ರಮುಖ ಶಬ್ದಗಳಾದ ಮನೋವೃತ್ತಿ ಮತ್ತು ಗ್ರಹಿಕೆ ಇವುಗಳ ಬಗ್ಗೆ ತಿಳಿದುಕೊಳ್ಳುವುದು ಅವಶ್ಯಕ ಮತ್ತು ಅನಿವಾರ್ಯವಾಗಿದೆ. ಡೇವಿಡ್ ಮೈಯರ್ಸ್ ರವರ ಪ್ರಕಾರ "ಮನೋವೃತ್ತಿ ಎಂದರೆ ಒಂದು ವಸ್ತು ಅಥವಾ ವಿಷಯದ ಬಗ್ಗೆ ಮೊದಲೇ ಇರುವ ಅರಿವು ಎಂದು ಅರ್ಥ. ಇದು ಒಂದು ವಸ್ತು ಅಥವಾ ವಿಷಯದ ಬಗ್ಗೆ ಇರುವ ನಂಬಿಕೆ, ಭಾವನೆ ಮತ್ತು ವರ್ತನೆಯನ್ನು ಒಳಗೊಂಡಿರುತ್ತದೆ." ಸಾಮನ್ಯ ಅರ್ಥದಲ್ಲಿ ಹೇಳುವುದಾದರೆ ಮನೋವೃತ್ತಿ ಎಂದರೆ " ಒಂದು ಯೋಚನಾ ಕ್ರಮ ಅಥವಾ ವರ್ತನೆ". ಬೇರೆ ಅರ್ಥದಲ್ಲಿ ಹೇಳುವುದಾದರೆ, ಒಂದು ವಸ್ತು ಅಥವಾ ಸಂಗತಿಯ ಬಗ್ಗೆ ಮೊದಲೇ ಇರುವ ಅರಿವು ಅಥವಾ ನಂಬಿಕೆ ಎಂದು ಹೇಳಬಹುದು. ಇನ್ನೂ ಗ್ರಹಿಕೆ ಎಂದರೆ ಸಾಮನ್ಯವಾಗಿ ಜ್ಞಾನವೆಂದು ಅರ್ಥೈಯಿಸಬಹುದು. ಗ್ರಹಿಕೆಯು ತುಂಬಾ ಸಂಕೀರ್ಣವಾದ ಪದವಾಗಿದೆ. ಗ್ರಹಿಕೆಯು ಮನೋವೃತ್ತಿಗೆ ತುಂಬಾ ಹತ್ತಿರವಾಗಿದ್ದರೂ ಅರ್ಥದಲ್ಲಿ ಸ್ವಲ್ಪ ಭಿನ್ನವಾಗಿರುವುದನ್ನು ನಾವು ನೋಡಬಹುದು. ಗ್ರಹಿಕೆ ಎಂದರೆ ನೋಡುವ, ಕೇಳುವ ಮತ್ತು ತಿಳಿದುಕೊಳ್ಳುವ ಸಾಮರ್ಥ್ಯ ಎಂದು ಅರ್ಥ. ಇಲ್ಲಿ ಗ್ರಹಿಕೆಯನ್ನು ಒಂದು ಸಂಗತಿಯ ಬಗ್ಗೆ ತಿಳುವಳಿಕೆ ಎಂಬ ಅರ್ಥದಲ್ಲಿ ಬಳಸಲಾಗಿದೆ. ಹೀಗಾಗಿ, ವಿದ್ಯಾರ್ಥಿಗಳು ಸಾಮಾಜಿಕ, ರಾಜಕೀಯ ಹಾಗೂ ಶೈಕ್ಷಣಿಕ ವಿಷಯಗಳ ಅಥವಾ ಸಂಗತಿಗಳ ಬಗ್ಗೆ ಅವರ ಮನೋವೃತ್ತಿ ಮತ್ತು ಗ್ರಹಿಕೆಯನ್ನು ತಿಳಿದುಕೊಳ್ಳುವ ಪ್ರಯತ್ನ ಮಾಡಲಾಗಿದೆ.

ಕೋಷ್ಟಕ–6.1(A): ಶಿಕ್ಷಣದ ಗುರಿ/ ಉದ್ದೇಶಗಳಿಗೆ ನೀವು ಯಾವ ಪ್ರಾಶಸ್ತ್ಯ ನೀಡುತ್ತೀರಿ?

ಕ್ರ.ಸಂ		ಸಂಖ್ಯೆ	ಶೇಕಡ
1	ಗುಣಮಟ್ಟದ ಬದುಕು ನಿರ್ವಹಿಸಲು	93	47.00
2	ಸಮಾಜದ ಉಪಯುಕ್ತ ಸದಸ್ಯನಾಗಲು	59	30.00
3	ನೈತಿಕ ಚಾರಿತ್ರ್ಯ ಉತ್ತಮ ಪಡಿಸಲು	48	23.00
	ಒಟ್ಟು	**200**	**100.00**

ಕೋಷ್ಟಕ 6.1(A) ಹೇಳುವಂತೆ, ಶೇ 47 ರಷ್ಟು ವಿದ್ಯಾರ್ಥಿಗಳು (93) ಗುಣಮಟ್ಟದ ಬದುಕು ನಿರ್ವಹಿಸಲು ಶಿಕ್ಷಣ ಬೇಕಾಗಿದೆ ಮತ್ತು ಈ ನಿಟ್ಟಿನಲ್ಲಿ ಶಿಕ್ಷಣದ ಗುರಿಯನ್ನು ಅರ್ಥೈಸಿಕೊಳ್ಳಲು ಪ್ರಯತ್ನಿಸಿದ್ದಾರೆ. ಅಂತೆಯೇ ಶೇ. 30 (59) ಸಮಾಜದ ಉಪಯುಕ್ತ ಸದಸ್ಯನಾಗಲು ಮತ್ತು ಶೇ. 23 ರಷ್ಟು ವಿದ್ಯಾರ್ಥಿಗಳು (48) ನೈತಿಕ ಚಾರಿತ್ರ್ಯ ಉತ್ತಮಪಡಿಸಲು ಶಿಕ್ಷಣ ಸಹಾಯಕವಾಗಿದೆ ಎಂದು ಅಭಿಪ್ರಾಯಿಸುತ್ತಾರೆ. ಈ ಅಂಕಿ ಅಂಶಗಳು ಶಿಕ್ಷಣದ ಗುರಿ ಮತ್ತು ಉದ್ದೇಶಗಳ ಬಗ್ಗೆ ವಿದ್ಯಾರ್ಥಿಗಳ ಗ್ರಹಿಕೆ ಮತ್ತು ಮನೋಭಾವನೆಯನ್ನು ಹೇಳುತ್ತದೆ.

ಶಿಕ್ಷಣದ ಕುರಿತು ಹಲವು ಚಿಂತಕರು ಮತ್ತು ತತ್ವಜ್ಞಾನಿಗಳು ತಮ್ಮದೆ ಆದ ಅಭಿಪ್ರಾಯವನ್ನು ವ್ಯಕ್ತಪಡಿಸಿದಾರೆ. ಶಿಕ್ಷಣದ ಕುರಿತು ವ್ಯಾಖ್ಯೆಗಳನ್ನು ನೀಡಿದ್ದಾರೆ. ಶಿಕ್ಷಣದ ಗುರಿ ಉದ್ದೇಶಗಳ ಕುರಿತು ವಿವರಣೆ ನೀಡಿದ್ದಾರೆ. ಪ್ಲೇಟೋ, ಅರಿಸ್ಟಾಟಲ್, ಟ್ಯಾಗೋರ್, ಗಾಂಧಿ ಹಾಗೂ ಸ್ವಾಮಿವಿವೇಕಾನಂದ ಅವರುಗಳಲ್ಲಿ ಪ್ರಮುಖರಾಗಿದ್ದಾರೆ. ಆಧುನಿಕ ಜಗತ್ತಿನಲ್ಲಿ ಶಿಕ್ಷಣ ಎಂದರೆ ಭೌತಿಕ ಮತ್ತು ಸಾಮಾಜಿಕ ಪರಿಸರಕ್ಕೆ ವ್ಯಕ್ತಿಗಳು ಹೊಂದಿಕೊಳ್ಳುವಂತೆ ಜ್ಞಾನ ನೀಡುವುದರ ಮುಖಾಂತರ ಅವರನ್ನು ಸಿದ್ಧಗೊಳಿಸುವುದೆ ಶಿಕ್ಷಣದ ಮೂಲ ಗುರಿಯಾಗಿದೆ ಎಂದು ಹೇಳಬಹುದು. ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಲ್ಲಿ ಶಿಕ್ಷಣದ ಮೂರು ಪ್ರಮುಖ ತತ್ವಗಳು ಈ ರೀತಿಯಾಗಿರುತ್ತವೆ. ಮೊದಲನೆಯದಾಗಿ, ಆರ್ಥಿಕ ಅಭಿವೃದ್ಧಿ, ಎರಡನೆಯದಾಗಿ, ವಿವಿದ ಸಮುದಾಯಗಳ ನಡುವಿನ ಸಾಮಾಜಿಕ ಮತ್ತು ಆರ್ಥಿಕ ಅಂತರವನ್ನು ಕಡಿಮೆಮಾಡುವುದು, ಮೂರನೆಯದಾಗಿ ನಿರೀಕ್ಷಿತ ಮಟ್ಟದಲ್ಲಿ ಸಾಮಾಜಿಕ ಬದಲಾವಣೆಯನ್ನು ಮಾಡುವುದು. ಈ ನಿಟ್ಟಿನಲ್ಲಿ ಶಿಕ್ಷಣದ ಗುರಿ/ಉದ್ದೇಶಗಳ ಬಗ್ಗೆ ವಿದ್ಯಾರ್ಥಿಗಳಿಗೆ ಪ್ರಶ್ನೆಯನ್ನು ಕೇಳಲಾಯಿತು. ಬಹುಸಂಖ್ಯಾತ ವಿದ್ಯಾರ್ಥಿಗಳು ಗುಣಮಟ್ಟದ ಬದುಕು ನಿರ್ವಹಿಸಲು ಸಹಾಯವಾಗುವಂತಹ ಶಿಕ್ಷಣದ ಅವಶ್ಯಕತೆ ಇದೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ. ಇಂದು ಶಿಕ್ಷಣದ ಬಗ್ಗೆ ವಿದ್ಯಾರ್ಥಿಗಳ ಗ್ರಹಿಕೆಯಲ್ಲಿ ಬದಲಾವಣೆಯಾಗಿರುವುದು ಈ ಅಧ್ಯಯನದಿಂದ ಸ್ಪಷ್ಟವಾಗುತ್ತದೆ. ಶಿಕ್ಷಣ ಜ್ಞಾನಕ್ಕಾಗಿ ಎಂಬ ಎಂಬ ಪರಿಕಲ್ಪನೆ ತನ್ನ ಪ್ರಸ್ತುತತೆಯನ್ನು ಕಳೆದುಕೊಂಡಿದೆ. ವಿದ್ಯೆ ಉಪಜೀವನಕ್ಕಾಗಿ ಎಂಬ ಅಭಿಪ್ರಾಯ ಹೆಚ್ಚು ಮಹತ್ವವನ್ನು ಪಡೆದುಕೊಳ್ಳುತ್ತಿದೆ. ಯಾವ ಶಿಕ್ಷಣ ಉದ್ಯೋಗ ನೀಡುತ್ತದೆಯೋ, ಯಾವ ಶಿಕ್ಷಣ ಗುಣಮಟ್ಟದ ಬದುಕು ನಿರ್ವಹಿಸಲು ಅನುವು ಮಾಡಿಕೊಡುತ್ತದೆಯೋ ಅಂತಹ ಶಿಕ್ಷಣ ಇಂದು ತನ್ನ ಮಹತ್ವವನ್ನು ಪಡೆದುಕೊಳ್ಳುತ್ತಿದೆ. ಬಿನೋದಾನಂದ ಝಾ ಅವರ ಅಧ್ಯಯನದ ಫಲಿತಗಳು ಪ್ರಸ್ತುತ ಅಧ್ಯಯನಕ್ಕೆ ಹೋಲಿಕೆಯಾಗುವುದಿಲ್ಲ. ಅವರ ಪ್ರಕಾರ ಶೇ 65 ರಷ್ಟು ವಿದ್ಯಾರ್ಥಿಗಳು ನೈತಿಕ ಚಾರಿತ್ರ್ಯ ಉತ್ತಮ ಪಡಿಸುವುದು ಶಿಕ್ಷಣದ ಮೂಲ ಉದ್ದೇಶವಾಗಿರಬೇಕು ಎಂದು ಹೇಳಿದ್ದಾರೆ. ಕೇವಲ 21 ರಷ್ಟು ವಿದ್ಯಾರ್ಥಿಗಳು ಗುಣಮಟ್ಟದ ಬದುಕು ನಿರ್ವಹಿಸಲು ಸಹಾಯಕವಾಗಬೇಕು ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

ಕೋಷ್ಟಕ–6.1(B): ಪ್ರಸ್ತುತ ಶಿಕ್ಷಣ ವ್ಯವಸ್ಥೆಯು ಈ ಉದ್ದೇಶವನ್ನು ನೆರವೇರಿಸಿದೆಯೋ? ಇಲ್ಲವೋ?

ಕ್ರ.ಸಂ		ಸಂಖ್ಯೆ	ಶೇಕಡ
1	ಇಲ್ಲ	161	80.00
2	ಹೌದು	39	20.00
	ಒಟ್ಟು	**200**	**100.00**

ಕೋಷ್ಟಕ 6.1(B) ವಿವರಿಸುವಂತೆ ಶೇ. 80 ರಷ್ಟು ವಿದ್ಯಾರ್ಥಿಗಳು (161) ಪ್ರಸ್ತುತ ಶಿಕ್ಷಣ ವ್ಯವಸ್ಥೆಯು ಕೋಷ್ಟಕ 6.1 (B) ರಲ್ಲಿ ಪ್ರಸ್ತಾಪಿಸಿದ ಉದ್ದೇಶಗಳನ್ನು ಈಡೇರಿಸಿಲ್ಲ ಎಂದು ಹೇಳಿದರೆ, ಶೇ. 20ರಷ್ಟು (39) ವಿದ್ಯಾರ್ಥಿಗಳು ಈಡೇರಿಸಲು ಸಾಧ್ಯವಾಗಿದೆ ಎಂದು ತಿಳಿಸುತ್ತಾರೆ. ಶಿಕ್ಷಣದ ಉದ್ದೇಶಗಳನ್ನು ಘೋಷಿಸಿದರಷ್ಟೇ ಸಾಲದು. ವ್ಯವಸ್ಥೆ ಆ ಉದ್ದೇಶಗಳನ್ನು ಈಡೇರಿಸುವುದರ ಮೇಲೆ ಅವಲಂಬನೆಯಾಗಿರುತ್ತದೆ. ದೇಶ ಸ್ವಾತಂತ್ರ್ಯ ಹೊಂದಿದಾಗಿನಿಂದಲೂ, ಒಂದು ಉತ್ಕೃಷ್ಟ ಶಿಕ್ಷಣ ವ್ಯವಸ್ಥೆಯನ್ನು ಸ್ಥಾಪಿಸಲು ಹಲವಾರು ಪ್ರಯತ್ನಗಳು ನಡೆದಿವೆ. ಇದಕ್ಕಾಗಿ ಹಲವಾರು ವಿಚಾರ ಸಂಕಿರಣಗಳು, ಕಾರ್ಯಾಗಾರಗಳನ್ನು ನಡೆಸಿರುವುದನ್ನು ನಾವು ನೋಡಬಹುದು. ಆದರೆ ಇದರಿಂದ ಯಾವುದೇ ನಿರೀಕ್ಷಿತ ಮಟ್ಟದ ಯಶಸ್ಸು ನಮಗೆ ಸಿಕ್ಕಿಲ್ಲ. ಹೀಗಾಗಿ ವಿದ್ಯಾರ್ಥಿಗಳಿಗೆ ಪ್ರಸ್ತುತ ಶಿಕ್ಷಣ ವ್ಯವಸ್ಥೆಯು ಉದ್ದೇಶಗಳನ್ನು ನೆರವೇರಿಸಿದೆಯೇ? ಎಂಬ ಪ್ರಶ್ನೆಗೆ ಬಹುಸಂಖ್ಯಾತ ವಿದ್ಯಾರ್ಥಿಗಳು ಪ್ರಸ್ತುತ ಶಿಕ್ಷಣ ವ್ಯವಸ್ಥೆಯು ಉದ್ದೇಶಗಳನ್ನು ಇಡೇರಿಸಿಲ್ಲ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಪ್ರಸ್ತುತ ಶಿಕ್ಷಣ ವ್ಯವಸ್ಥೆಯಲ್ಲಿ ಅಮೂಲಾಗ್ರ ಬದಲಾವಣೆಯ ಅವಶ್ಯಕತೆ ಇದೆ ಎಂಬ ಅಭಿಪ್ರಾಯ ವಿದ್ಯಾರ್ಥಿ ಸಮುದಾಯದಾಗಿದೆ. ಬಿನೋದಾನಂದ ಝಾ ರವರ ಪ್ರಕಾರ "ಪ್ರಸ್ತುತ ಶಿಕ್ಷಣ ವ್ಯವಸ್ಥೆಯು ತನ್ನ ಉದ್ದೇಶವನ್ನು ಈಡೇರಿಸುವಲ್ಲಿ ವಿಫಲವಾಗಿದೆ" ಎಂದು ಹೇಳುತ್ತಾರೆ. ಶೇ 70 ರಷ್ಟು ವಿದ್ಯಾರ್ಥಿಗಳು ಶಿಕ್ಷಣ ನೈತಿಕ ಚಾರಿತ್ರ್ಯ ಉತ್ತಮ ಪಡಿಸುವಲ್ಲಿ ವಿಫಲವಾಗಿದೆ ಎಂಬ ಅಭಿಪ್ರಾಯವನ್ನು ವಿದ್ಯಾರ್ಥಿಗಳು ಅವರ ಅಧ್ಯಯನದಲ್ಲಿ ತಿಳಿಸಿರುತ್ತಾರೆ. ಯಾಸ್ಮಿನ್ ಮಲಿಕ್ ಅವರು ಕೂಡ ಇದೆ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ. ಅವರ ಪ್ರಕಾರ " ಉನ್ನತ ಶಿಕ್ಷಣ ತನ್ನ ಉದ್ದೇಶಗಳನ್ನು ಈಡೇರಿಸುವಲ್ಲಿ ಸಂಪೂರ್ಣವಾಗಿ ವಿಫಲವಾಗಿದೆ" ಎಂದು ಹೇಳಿರುತ್ತಾರೆ. ಅದಕ್ಕೆ ಅವರು ಮೂರು ಪ್ರಮುಖ ಕಾರಣಗಳನ್ನು ನೀಡುತ್ತಾರೆ. ಸರಿಯಾದ ಯೋಜನೆ ಇಲ್ಲದಿರುವುದು, ಆಡಳಿತದಲ್ಲಿ ವೈಫಲ್ಯತೆ ಮತ್ತು ಅಧ್ಯಯನದ ವಿನ್ಯಾಸ. ಪ್ರಸ್ತುತ ಅಧ್ಯಯನವು ಈ ಮೇಲಿನ ವಿದ್ವಾಂಸರ ವಿಚಾರಗಳಿಗೆ ಸಾಮ್ಯತೆ ಇರುವುದು ಕಂಡುಬರುತ್ತದೆ. ಒಟ್ಟಿನಲ್ಲಿ ಶಿಕ್ಷಣವು ತನ್ನ ಉದ್ದೇಶಗಳನ್ನು ಈಡೇರಿಸುವಲ್ಲಿ ನಿರೀಕ್ಷಿತ ಮಟ್ಟದಲ್ಲಿ ಯಶಸ್ಸು ಕಂಡಿಲ್ಲ ಎಂಬುವುದು ಈ ಅಧ್ಯಯನದಿಂದ ಸ್ಪಷ್ಟವಾಗುತ್ತದೆ.

ಕೋಷ್ಟಕ –6.1 (C): ನಿಮ್ಮ ಪ್ರಕಾರ ಶಿಕ್ಷಣದ ಉದ್ದೇಶ ಏನಾಗಿರಬೇಕು?

ಕ್ರ.ಸಂ		ಸಂಖ್ಯೆ	ಶೇಕಡ
1	ವೃತ್ತಿಪರತೆ ಮತ್ತು ಉದ್ಯೋಗ ಹೆಚ್ಚಿಸುವ ಶಿಕ್ಷಣ+ಸರ್ವೋತೋಮುಖ ಅಭಿವೃದ್ಧಿ ಮತ್ತು ವ್ಯಕ್ತಿತ್ವ ನಿರ್ಮಾಣದ ಶಿಕ್ಷಣ+ಬದುಕು ರೂಪಿಸುವ ಶಿಕ್ಷಣ	143	72.00
2	ಉತ್ತಮ ಸಮಾಜ ನಿರ್ಮಾಣ+ಸ್ವಾತಂತ್ರ್ಯ ಮತ್ತು ಸಮಾನತೆಯನ್ನು ರೂಪಿಸುವ ಶಿಕ್ಷಣ+ವಿದ್ಯಾರ್ಥಿ ಕ್ರೀಯಾಶೀಲತೆಯನ್ನು ಹೆಚ್ಚಿಸುವ ಶಿಕ್ಷಣ	57	28.00
	ಒಟ್ಟು	**200**	**100.00**

ಶೇ. 72ರಷ್ಟು (143) ವಿದ್ಯಾರ್ಥಿಗಳು ಶಿಕ್ಷಣದ ಉದ್ದೇಶವು ವೃತ್ತಿಪರತೆ ಮತ್ತು ಉದ್ಯೋಗ ಹೆಚ್ಚಿಸಿ, ಸರ್ವೋತೋಮುಖ ಅಭಿವೃದ್ಧಿ ಮತ್ತು ವ್ಯಕ್ತಿತ್ವ ನಿರ್ಮಾಣ ಹಾಗೂ ಬದುಕು ರೂಪಿಸುವ ನಿಟ್ಟಿನಲ್ಲಿ ಸಹಕರಿಸಬೇಕು ಎನ್ನುವುದನ್ನು ಕೋಷ್ಟಕ 6.1 (C) ಹೇಳುತ್ತದೆ. ಶೇ. 28 ರಷ್ಟು ವಿದ್ಯಾರ್ಥಿಗಳು (57) ಶಿಕ್ಷಣವು ಉತ್ತಮ ಸಮಾಜ ನಿರ್ಮಿಸುವ, ಸ್ವಾತಂತ್ರ್ಯ ಮತ್ತು ಸಮಾನತೆಯನ್ನು ರೂಪಿಸುವ ಹಾಗೂ ವಿದ್ಯಾರ್ಥಿ ಕ್ರಿಯಾಶೀಲತೆಯನ್ನು ಹೆಚ್ಚಿಸುವ ನಿಟ್ಟಿನಲ್ಲಿ ಉಪಯೋಗವಾಗುತ್ತಿದೆ ಎಂದು ಹೇಳುತ್ತಾರೆ.

ಕೋಷ್ಟಕ–6.1(D): ಕಾಲೇಜು/ ವಿಶ್ವವಿದ್ಯಾಲಯದ ಶಿಕ್ಷಣದ ಗುಣಮಟ್ಟ ಹೇಗಿದೆ?

ಕ್ರ.ಸಂ		ಸಂಖ್ಯೆ	ಶೇಕಡ
1	ಸುಧಾರಿಸಿದೆ	113	57.00
2	ಸುಧಾರಿಸಿಲ್ಲ	23	12.00
3	ತಕ್ಕಮಟ್ಟಿಗೆ ಸುಧಾರಿಸಿದೆ	62	30.00
4	ನಿರ್ಧರಿಸಿಲ್ಲ	2	1.00
5	ಗೊತ್ತಿಲ್ಲ	0	0.00
	ಒಟ್ಟು	**200**	**100.00**

ಕೋಷ್ಟಕ 6.1(D) ಹೇಳುವಂತೆ, ಕಾಲೇಜು / ವಿಶ್ವವಿದ್ಯಾನಿಲಯಗಳಲ್ಲಿ ಶಿಕ್ಷಣದ ಗುಣಮಟ್ಟ ಸುಧಾರಿಸಿದೆ (ಶೇ 57). ಶೇ. 22 ರಷ್ಟು ವಿದ್ಯಾರ್ಥಿಗಳು (23) ಸುಧಾರಿಸಿಲ್ಲ ಎಂದು ಹೇಳಿದರೆ ಶೇ. 30ರಷ್ಟು (62) ತಕ್ಕಮಟ್ಟಿಗೆ ಸುಧಾರಿಸಿದೆ ಎಂದು ಹೇಳುತ್ತಾರೆ. ಶಿಕ್ಷಣದ ಗುಣಮಟ್ಟವು ಸುಧಾರಣೆ ಪ್ರಕ್ರಿಯೆಯಲ್ಲಿದೆ ಎನ್ನುವುದನ್ನು ವಿದ್ಯಾರ್ಥಿ ಸಮೂಹವು ಹತ್ತಿರದಿಂದ ಗಮನಿಸುತ್ತಿದೆ ಎನ್ನುವುದು ಇಲ್ಲಿ ಗಮನಾರ್ಹ ವಿಷಯ. ಈ ವಿಷಯಕ್ಕೆ ಸಂಬಂಧಿಸಿದಂತೆ ವಿದ್ಯಾರ್ಥಿಗಳು ಗೊಂದಲದಲ್ಲಿರುವುದು ಕಂಡುಬರುತ್ತದೆ. ಸರಿ ಸುಮಾರು ವಿದ್ಯಾರ್ಥಿ ನಾಯಕರುಗಳು ಶಿಕ್ಷಣದ ಗುಣಮಟ್ಟ ಸುಧಾರಿಸಿದೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದರೆ, ಅಷ್ಟೆ ಸಂಖ್ಯೆಯ ವಿದಯಾರ್ಥಿಗಳು ಶಿಕ್ಷಣದ ಗುಣಮಟ್ಟ ನಿರೀಕ್ಷಿತ ಮಟ್ಟದಲ್ಲಿ ಸುಧಾರಿಸಿಲ್ಲ

ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಆದ್ದರಿಂದ ವಿದ್ಯಾರ್ಥಿಗಳು ಈ ವಿಷಯಕ್ಕೆ ಸಂಬಂಧಿಸಿದಂತೆ ಸ್ಪಷ್ಟ ನಿಲುವು ವ್ಯಕ್ತಪಡಿಲ್ಲ ಎಂಬುವುದು ಈ ಅಧ್ಯಯನದಿಂದ ಸ್ಪಷ್ಟವಾಗುತ್ತದೆ.

ಕೋಷ್ಟಕ–6.1.(E): ಶಿಕ್ಷಣದ ಗುಣಮಟ್ಟ ಕುಸಿಯಲು ನಿಮ್ಮ ಪ್ರಕಾರ ಯಾವುದು ಪ್ರಮುಖ ಕಾರಣ?

ಕ್ರ.ಸಂ		ಸಂಖ್ಯೆ	ಶೇಕಡ
1	ಶಿಕ್ಷಣದ ವ್ಯಾಪರೀಕರಣ +ಭ್ರಷ್ಟಚಾರ +ಶಿಕ್ಷಣಕ್ಕೆ ಸರಿ ಹೊಂದುವ ಉದ್ಯೋಗದ ಕೊರತೆ	122	61.00
2	ಹಣಕಾಸು ಮತ್ತು ಆಡಳಿತದ ಕೊರತೆ	14	7.00
3	ವಿದ್ಯಾರ್ಥಿಗಳ ಸಂಖ್ಯಯಲ್ಲಿ ಹೆಚ್ಚಳ+ಜನಸಂಖ್ಯ ಹೆಚ್ಚಳ	12	6.00
4	ವಿಶ್ವವಿದ್ಯಾಲಯ ಮತ್ತು ಕಾಲೇಜು ಶಿಕ್ಷಣದಲ್ಲಿ ಗುಣಮಟ್ಟದ ಕೊರತೆ+ಆಸಕ್ತಿ ಕುಂದಿರುವುದು	52	26.00
	ಒಟ್ಟು	**200**	**100.00**

ಕೋಷ್ಟಕ 6.1(E) ಹೇಳುವಂತೆ, ಶೇ. 61 ರಷ್ಟು ವಿದ್ಯಾರ್ಥಿಗಳು (122) ಶಿಕ್ಷಣದ ವ್ಯಾಪರೀಕರಣ, ಭ್ರಷ್ಟಚಾರ, ಶಿಕ್ಷಣಕ್ಕೆ ಸರಿ ಹೊಂದುವ ಉದ್ಯೋಗದ ಕೊರತೆಗಳು ಶಿಕ್ಷಣದ ಗುಣಮಟ್ಟ ಕುಸಿಯಲು ಕಾರಣ ಎಂದು ಹೇಳಿದರೆ, ಶೇ. 7 (14) ಹಣಕಾಸು ಮತ್ತು ಆಡಳಿತದ ಕೊರತೆ, ಶೇ. 6 (12) ವಿದ್ಯಾರ್ಥಿಗಳ ಸಂಖ್ಯೆಯಲ್ಲಿ ಹೆಚ್ಚಳ+ಜನಸಂಖ್ಯೆ ಹೆಚ್ಚಳ ಹಾಗೂ ಶೇ. 26 (52) ವಿಶ್ವವಿದ್ಯಾಲಯ ಮತ್ತು ಕಾಲೇಜು ಶಿಕ್ಷಣದಲ್ಲಿ ಗುಣಮಟ್ಟದ ಕೊರತೆ, ಆಸಕ್ತಿ ಕುಂದಿರುವುದು ಶಿಕ್ಷಣದ ಗುಣಮಟ್ಟ ಕುಸಿಯಲು ಕಾರಣ ಎಂದು ವಿವರಿಸುತ್ತಾರೆ. ಬಿನೋದಾನಂದ ಝಾ ಅವರು ಶಿಕ್ಷಣದ ಗುಣಮಟ್ಟ ಕುಸಿಯಲು ಹಲವಾರು ಕಾರಣಗಳನ್ನು ಗುರುತಿಸಿರುತ್ತಾರೆ. ಅವರ ಪ್ರಕಾರ "ಶಿಕ್ಷಣದ ರಾಜಕೀಯಕರಣ, ಪಾಶ್ಚಾತ್ಯ ವ್ಯವಸ್ಥೆಯ ನಕಲು, ಅಸಮರ್ಥ ಮತ್ತು ಅಪ್ರಬುದ್ಧ ಶಿಕ್ಷಕರು, ಭ್ರಷ್ಟ ಮತ್ತು ಶುಷ್ಕಕ ಆಡಳಿತ ವ್ಯವಸ್ಥೆ, ಶಿಕ್ಷಣ ವ್ಯವಸ್ಥೆಯ ಗುಣಮಟ್ಟ ಕುಸಿಯಲು ಪ್ರಮುಖ ಕಾರಣಗಳು" ಎಂದು ಅಭಿಪ್ರಾಯ ಪಡುತ್ತಾರೆ. ಎನ್. ಎಮ್. ಶ್ರೀವಾಸ್ತವ ಅವರ ಪ್ರಕಾರ "ಸರ್ಕಾರಗಳು ಉನ್ನತ ಶಿಕ್ಷಣವನ್ನು ಸಂಪೂರ್ಣವಾಗಿ ನಿರ್ಲಕ್ಷಿಸಿರುವುದು ಅದರ ಗುಣಮಟ್ಟ ಕುಸಿಯಲು ಪ್ರಮುಖ ಕಾರಣವಾಗಿದೆ" ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ. ಕೆ. ಕೆ. ಝಾರವರ ಪ್ರಕಾರ "ಹಣಕಾಸಿನ ಸಮಸ್ಯೆ ಶಿಕ್ಷಣದ ಗುಣಮಟ್ಟ ಕುಸಿಯಲು ಪ್ರಮುಖ ಕಾರಣವೆಂದು" ಹೇಳುತ್ತಾರೆ. ರೂಡೊಲಪ್ಸ್ ರವರ ಪ್ರಕಾರ "ಶಿಕ್ಷಣದ ರಾಜಕೀಯಕರಣವು ಶಿಕ್ಷಣದ ಗುಣಮಟ್ಟ ಕುಸಿಯಲು ಪ್ರಮುಖ ಕಾರಣವೆಂದು" ಅವರು ಅಭಿಪ್ರಾಯಪಡುತ್ತಾರೆ. ಪ್ರಸ್ತುತ ಅಧ್ಯಯನವು ಶಿಕ್ಷಣದ ವ್ಯಾಪಾರಿಕರಣ, ಭ್ರಷ್ಟಾಚಾರ, ಶಿಕ್ಷಣಕ್ಕೆ ಸರಿಹೊಂದುವ ಉದ್ಯೋಗದ ಕೊರತೆ, ಶಿಕ್ಷಣ ವ್ಯವಸ್ಥೆಯ ವಿಫಲತೆಗೆ ಪ್ರಮುಖ ಕಾರಣಗಳು ಎಂದು ಹೇಳುತ್ತದೆ.

ಕೋಷ್ಟಕ–6.1(F): ವಿದ್ಯಾರ್ಥಿಗಳಿಗೆ ಅತಿ ಸೂಕ್ತವಾದುದು?

ಕ್ರಸಂ		ಸಂಖ್ಯೆ	ಶೇಕಡ
1	ಶಿಕ್ಷಕರು ವಿದ್ಯಾರ್ಥಿಗಳ ಏಳಿಗೆಗೆ ಶ್ರಮಿಸಬೇಕು	159	80.00
2	ಪಠ್ಯೇತರ ಚಟುವಟಿಕೆಗಳಲ್ಲಿ ವಿದ್ಯಾರ್ಥಿಗಳ ಅಳವಡಿಕೆ	22	10.00
3	ವೃತ್ತಿಪರ ಶಿಕ್ಷಣಕ್ಕೆ ಹೆಚ್ಚು ಒತ್ತು ನೀಡಬೇಕು	19	10.00
	ಒಟ್ಟು	**200**	**100.00**

ಕೋಷ್ಟಕ 6.1(F) ವಿವರಿಸುವಂತೆ ಶಿಕ್ಷಕರು ವಿದ್ಯಾರ್ಥಿಗಳ ಏಳಿಗೆಗೆ ಶ್ರಮಿಸಬೇಕು (ಶೇ. 80) ಪಠ್ಯೇತರ ಚಟುವಟಿಕೆಗಳಲ್ಲಿ ವಿದ್ಯಾರ್ಥಿಗಳ ಅಳವಡಿಕೆ (ಶೇ. 10) ಹಾಗೂ ವೃತ್ತಿಪರ ಶಿಕ್ಷಣಕ್ಕೆ ಹೆಚ್ಚು ಒತ್ತು ನೀಡಬೇಕು (ಶೇ. 10) ಎನ್ನುವುದು ಅತಿ ಸೂಕ್ತವಾದುದು ಎಂದು ವಿದ್ಯಾರ್ಥಿಗಳು ಅಭಿಪ್ರಾಯ ವ್ಯಕ್ತಪಡಿಸುತ್ತಾರೆ.

ಕೋಷ್ಟಕ–:6.1(G) ಕಾಲೇಜು/ವಿಶ್ವವಿದ್ಯಾನಿಲಯಗಳ ಶಿಕ್ಷಕರ ಮುಖ್ಯ ಉದ್ದೇಶ ಯಾವುದಾಗಿರಬೇಕು?

ಕ್ರಸಂ		ಸಂಖ್ಯೆ	ಶೇಕಡ
1	ಜೀವನಾಧಾರ	0	0.00
2	ಬೋಧನಾ ಜವಾಬ್ದಾರಿಯನ್ನು ನಿರ್ವಹಿಸುವುದು	53	27.00
3	ವಿದ್ಯಾರ್ಥಿಗಳಿಗೆ ಮಾರ್ಗದರ್ಶನ	120	60.00
4	ಜೀವನ ಮತ್ತು ಭವಿಷ್ಯ ನಿರ್ವಹಿಸಲು ಮಾರ್ಗದರ್ಶನ	27	13.00
	ಒಟ್ಟು	**200**	**100.00**

ಕಾಲೇಜು ಅಥವಾ ವಿಶ್ವವಿದ್ಯಾಲಯಗಳ ಶಿಕ್ಷಕ ವರ್ಗದ ಮುಖ್ಯ ಉದ್ದೇಶ ಯಾವುದಾಗಿರಬೇಕು ಎನ್ನುವ ಪ್ರಶ್ನೆಯನ್ನು ವಿದ್ಯಾರ್ಥಿಗಳಿಗೆ ಕೇಳಲಾಗಿತ್ತು. ಶೇ. 60 ರಷ್ಟು (120) ವಿದ್ಯಾರ್ಥಿಗಳು ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡುವುದು ಅವರ ಮುಖ್ಯ ಉದ್ದೇಶವಾಗಿರಬೇಕು ಎನ್ನುವ ಆಶಯವನ್ನು ಕೋಷ್ಟಕ 6.1 (G) ರಲ್ಲಿ ವ್ಯಕ್ತಪಡಿಸುತ್ತಾರೆ. ಹಾಗೆಯೇ ಶೇ. 27 (53) ವಿದ್ಯಾರ್ಥಿಗಳು ಬೋಧನಾ ಜವಾಬ್ದಾರಿಯನ್ನು ನಿರ್ವಹಿಸುವುದು ಹಾಗೂ ಶೇ. 13 (27) ವಿದ್ಯಾರ್ಥಿಗಳು ವಿದ್ಯಾರ್ಥಿಗಳ ಜೀವನ ಮತ್ತು ಭವಿಷ್ಯ ನಿರ್ವಹಿಸಲು ಮಾರ್ಗದರ್ಶನ ನೀಡುವುದು ಶಿಕ್ಷಕರ ಪ್ರಮುಖ ಉದ್ದೇಶವಾಗಿರಬೇಕು ಎಂದು ಹೇಳುತ್ತಾರೆ. ಬಿನೋದಾನಂದ ಝಾ ರವರ ಅಧ್ಯಯನದ ಫಲಿತಗಳು ಈ ರೀತಿಯಾಗಿವೆ. ಶೇ 89 ರಷ್ಟು ಶಿಕ್ಷಕರ ಮುಖ್ಯ ಉದ್ದೇಶ ಜೀವನಾಧಾರವಾಗಿರುತ್ತದೆ. ಕೇವಲ ಹೊಟ್ಟೆಪಾಡಿಗಾಗಿ ಶಿಕ್ಷಕ ವೃತ್ತಿಯನ್ನು ಅವಲಂಬಿಸಿರುತ್ತಾರೆ. ಶೇ 13 ರಷ್ಟು ಶಿಕ್ಷಕರ ಉದ್ದೇಶ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ

ಮಾಡುವುದು, ಶೆ 12 ರಷ್ಟು ಶಿಕ್ಷಕರು ವಿದ್ಯಾರ್ಥಿಗಳು ಬದುಕು ರೂಪಿಸಿಕೊಳ್ಳುವ ಪ್ರಕ್ರಿಯೆಯಲ್ಲಿ ಸಹಾಯ ಮಾಡುವುದು ಅವರ ಉದ್ದೇಶವಾಗಿರುತ್ತದೆ ಎಂದು ಹೇಳಿರುತ್ತಾರೆ.

ಕೋಷ್ಟಕ-6.1(H): ಶಿಕ್ಷಕರ ಸಂಘಟನೆಯ ಅವಶ್ಯಕತೆ ಇದೆಯಾ?

ಕ್ರ.ಸಂ		ಸಂಖ್ಯೆ	ಶೇಕಡ
1	ಹೌದು	165	83.00
2	ಇಲ್ಲ	20	10.00
3	ಗೊತ್ತಿಲ್ಲ	15	7.00
	ಒಟ್ಟು	**200**	**100.00**

ಶೇ. 83 ರಷ್ಟು ವಿದ್ಯಾರ್ಥಿಗಳು (165) ಶಿಕ್ಷಕರ ಸಂಘಟನೆಯ ಅಗತ್ಯವಿದೆ ಎಂದು ಕೋಷ್ಟಕ 6.1 (H) ರಲ್ಲಿ ಹೇಳಿದರೆ, ಶೇ 10 ರಷ್ಟು (20) ವಿದ್ಯಾರ್ಥಿಗಳು ಅದರ ಅಗತ್ಯವಿಲ್ಲ ಎಂದು ಪ್ರತಿಪಾದಿಸುತ್ತಾರೆ. ಹಾಗೆಯೇ ಶೇ. 7 ರಷ್ಟು (15) ವಿದ್ಯಾರ್ಥಿಗಳು ಅದರ ಕುರಿತು ನಮಗೆ ಅರಿವಿಲ್ಲ ಎಂಬ ಉತ್ತರವನ್ನೂ ನೀಡಿದ್ದಾರೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಸಂಘಗಳನ್ನು ಸ್ಥಾಪಿಸಿಕೊಳ್ಳವುದು ಪ್ರತಿಯೊಬ್ಬ ವ್ಯಕ್ತಿಯ ಸಂವಿಧಾನ ಬದ್ಧವಾದ ಹಕ್ಕಾಗಿದೆ. ಭಾರತದಲ್ಲಿ ಎಲ್ಲ ತರಹದ ಉದ್ಯೋಗಿಗಳು ತಮ್ಮದೇ ಆದ ಸಂಘವನ್ನು ಸ್ಥಾಪಿಸಿಕೊಂಡಿದ್ದಾರೆ. ಉದಾಹರಣೆಗೆ, ವೈದ್ಯರುಗಳ ಸಂಘ, ಬ್ಯಾಂಕ್ ಉದ್ಯೋಗಿಗಳ ಸಂಘ, ಜೀವವಿಮೆ ಉದ್ಯೋಗಿಗಳ ಸಂಘ. ಹಾಗೆಯೇ ಶಿಕ್ಷಕರು ಕೂಡ ತಮ್ಮದೇ ಆದ ಸಂಘವನ್ನು ಸ್ಥಾಪಿಸಿಕೊಳ್ಳಬಹುದು. ಬಹುಸಂಖ್ಯಾತ ವಿದ್ಯಾರ್ಥಿಗಳು ಶಿಕ್ಷಕ ಸಂಘದ ಅವಶ್ಯಕತೆ ಇದೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿರುತ್ತಾರೆ. ಆದರೆ ಬಿನೋದಾನಂದ ಝಾ ಅವರ ಅಧ್ಯಯನವು ಶಿಕ್ಷಕ ಸಂಘಟನೆಯ ಅವಶ್ಯಕತೆ ಇಲ್ಲವೆಂದು ಹೇಳುತ್ತದೆ.

ಕೋಷ್ಟಕ-6.1(I): ಕಾಲೇಜು/ ವಿಶ್ವವಿದ್ಯಾಲಯದ ಆಡಳಿತಕ್ಕೆ ಸಂಬಂಧಿಸಿದಂತೆ ನಿರ್ಭಯದಿಂದ ಶಿಕ್ಷಕರ ಸಹಾಯ ಪಡೆಯುತ್ತಿರಾ?

ಕ್ರ.ಸಂ		ಸಂಖ್ಯೆ	ಶೇಕಡ
1	ಹೌದು	165	83.00
2	ಇಲ್ಲ	27	14.00
3	ಕೆಲವೊಮ್ಮೆ	8	3.00
	ಒಟ್ಟು	**200**	**100.00**

ಕೋಷ್ಟಕ 6.1(I) ಹೇಳುವಂತೆ ಶೇ. 83 ರಷ್ಟು (165) ವಿದ್ಯಾರ್ಥಿಗಳು ಕಾಲೇಜು/ವಿಶ್ವವಿದ್ಯಾಲಯದ ಆಡಳಿತಕ್ಕೆ ಸಂಬಂಧಿಸಿದಂತೆ ಶಿಕ್ಷಕರ ಸಹಾಯವನ್ನು ನಿರ್ಭಯತೆಯಿಂದ ಪಡೆಯುತ್ತಿದ್ದಾರೆ. ಕಡಿಮೆ ಪ್ರಮಾಣದ ವಿದ್ಯಾರ್ಥಿಗಳು (ಶೇ. 14) ಈ ರೀತಿಯ ಸಹಾಯವನ್ನು ಪಡೆದುಕೊಳ್ಳುವಲ್ಲಿ ವಿಫಲರಾಗಿದ್ದಾರೆ. ಹಾಗೆಯೇ ಶೇ. 3 ರಷ್ಟು (8) ವಿದ್ಯಾರ್ಥಿಗಳು ಕೆಲವೊಂದು ಸಂದರ್ಭದಲ್ಲಿ ಮಾತ್ರವೇ ಶಿಕ್ಷಕರ ಸಹಾಯವನ್ನು ಪಡೆದುಕೊಳ್ಳುತ್ತಿದ್ದಾರೆ.

ಕೋಷ್ಟಕ–6.1(J): ಶಿಕ್ಷಕರ ನೇಮಕಾತಿ/ಪದೋನ್ನತಿಯಲ್ಲಿ ವಿದ್ಯಾರ್ಥಿಗಳ ಅನಿಸಿಕೆಯನ್ನು ಪರಿಗಣಿಸಬೇಕೆ?

ಕ್ರ.ಸಂ		ಸಂಖ್ಯೆ	ಶೇಕಡ
1	ಹೌದು	127	64.00
2	ಇಲ್ಲ	64	32.00
3	ಗೊತ್ತಿಲ್ಲ	9	4.00
	ಒಟ್ಟು	**200**	**100.00**

ಕೋಷ್ಟಕ 6.1(J) ವಿವರಿಸುವಂತೆ ಶೇ. 64 ರಷ್ಟು ವಿದ್ಯಾರ್ಥಿಗಳು (127) ಶಿಕ್ಷಕರ ನೇಮಕಾತಿ/ಪದೋನ್ನತಿಯಲ್ಲಿ ವಿದ್ಯಾರ್ಥಿಗಳ ಅನಿಸಿಕೆಯನ್ನು ಪರಿಗಣಿಸಬೇಕು ಎಂದು ಹೇಳಿದರೆ ಶೇ. 32 (64) ವಿದ್ಯಾರ್ಥಿಗಳು ಬೇಕಾಗಿಲ್ಲ ಎಂಬ ಉತ್ತರವನ್ನು ಕೊಡುತ್ತಾರೆ. ಆದರೆ ಶೇ. 4ರಷ್ಟು ವಿದ್ಯಾರ್ಥಿಗಳು (9) ಇದರ ಬಗ್ಗೆ ಅರಿವಿಲ್ಲ ಎಂಬ ಅಭಿಪ್ರಾಯವನ್ನು ಹೇಳುತ್ತಾರೆ. ವಿದ್ಯಾರ್ಥಿಗಳು ಕೂಡ ಶಿಕ್ಷಣ ವ್ಯವಸ್ಥೆಯ ಭಾಗವಾಗಿರುವುದರಿಂದ ಶಿಕ್ಷಕರ ನೇಮಕಾತಿ/ಪದೋನ್ನತಿಯಲ್ಲಿ ಅವರ ಅನಿಸಿಕೆಯನ್ನು ಪರಿಗಣಿಸಬೇಕು ಎಂಬ ಅಭಿಪ್ರಾಯದಲ್ಲಿ ಸತ್ಯಾಂಶವಿದೆ. ಏಕೆಂದರೆ ವಿದ್ಯಾರ್ಥಿಗಳನ್ನು ಶಿಕ್ಷಣ ವ್ಯವಸ್ಥೆಯಿಂದ ಹೊರಗಿಟ್ಟು ಶಿಕ್ಷಣದಲ್ಲಿನ ಸಮಸ್ಯೆಗಳನ್ನು ಬಗೆಹರಿಸುವುದು ಅಷ್ಟು ಪರಿಣಾಮಕಾರಿಯಾದ ಕ್ರಮ ಆಗುವುದಿಲ್ಲ ಎಂಬ ಅಂಶವನ್ನು ನಾವು ತುಂಬಾ ಗಂಭೀರವಾಗಿ ಪರಿಗಣಿಸಬೇಕು

ಸಾಮಾಜಿಕ ಸಂಗತಿಗಳ ಬಗೆಗೆ ವಿದ್ಯಾರ್ಥಿಗಳ ಮನೋಭಾವನೆ ಮತ್ತು ಗ್ರಹಿಕೆ:

ಕೋಷ್ಟಕ–6.2: ನಮ್ಮ ಕೌಟುಂಬಿಕ ಪದ್ದತಿಗಳು ಮತ್ತು ಸಂಪ್ರದಾಯಗಳನ್ನು ಅನುಸರಿಸಬೇಕೆ?

ಕ್ರ.ಸಂ		ಸಂಖ್ಯೆ	ಶೇಕಡ
1	ಅನುಸರಿಸಬೇಕು	99	50.00
2	ಬದಲಾಯಿಸಬೇಕು	87	44.00
3	ಗೊತ್ತಿಲ್ಲ	14	6.00
	ಒಟ್ಟು	**200**	**100.00**

ಕೋಷ್ಟಕ 6.2 ಹೇಳುವಂತೆ ವಿದ್ಯಾರ್ಥಿಗಳ ಗ್ರಹಿಕೆ ಮತ್ತು ಮನೋಭಾವನೆಗಳ ಕುರಿತು ಅರಿತುಕೊಳ್ಳಲು ಆಯ್ದ ಪ್ರಶ್ನೆಗಳನ್ನು ಕೇಳಲಾಗಿತ್ತು. ಶೇ. 50ರಷ್ಟು (99) ವಿದ್ಯಾರ್ಥಿಗಳು ನಮ್ಮ ಕೌಟುಂಬಿಕ ಪದ್ದತಿಗಳು ಮತ್ತು ಸಂಪ್ರದಾಯಗಳನ್ನು ಅನುಸರಿಸಬೇಕು ಎಂದು ಹೇಳಿದರೆ, ಶೇ. 44 ರಷ್ಟು (87) ವಿದ್ಯಾರ್ಥಿಗಳು ಈಗಿನ ಕೌಟುಂಬಿಕ ಪದ್ಧತಿಗಳು ಹಾಗೂ ಸಂಪ್ರದಾಯಗಳಲ್ಲಿ ಬದಲಾವಣೆಗಳಾಗಬೇಕು ಎಂದು ಹೇಳುತ್ತಾರೆ. ಕೌಟುಂಬಿಕ ಪದ್ದತಿಗಳು ಮತ್ತು ಸಂಪ್ರದಾಯಗಳು ಭಾರತೀಯ ಸಂಸ್ಕೃತಿ ರಕ್ಷಣೆಯಲ್ಲಿ ಬಹುಮುಖ್ಯ ಪಾತ್ರ ವಹಿಸುತ್ತವೆ. ಆದಕಾರಣ ವಿದ್ಯಾರ್ಥಿಗಳಿಗೆ ಈ ಪ್ರಶ್ನೆಯನ್ನು ಕೇಳಲಾಯಿತು. ಬಹುಸಂಖ್ಯಾತ ವಿದ್ಯಾರ್ಥಿಗಳು ನಮ್ಮ ಕೌಟುಂಬಿಕ ಪದ್ದತಿಗಳು ಮತ್ತು ಸಂಪ್ರದಾಯಗಳನ್ನು ಅನುಸರಿಸಬೇಕು ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ. ಪಾಶ್ಚಿಮಾತ್ಯ ದೇಶಗಳ ಕುಟುಂಬ ವ್ಯವಸ್ಥೆಗಿಂತಲೂ ಭಾರತದ ಕುಟುಂಬ ವ್ಯವಸ್ಥೆ ಸುಸ್ಥಿರವಾಗಿರುವುದಕ್ಕೆ ನಮ್ಮ ಪದ್ದತಿಗಳು ಮತ್ತು ಸಂಪ್ರದಾಯಗಳೆ ಕಾರಣ ಎಂಬುದು ವಿದ್ಯಾರ್ಥಿಗಳ ಗ್ರಹಿಕೆಯಾಗಿದೆ. ಆದರೂ ಶೇ 44 ರಷ್ಟು ವಿದ್ಯಾರ್ಥಿಗಳು ಈಗಿನ ಕೌಟುಂಬಿಕ ಪದ್ದತಿಗಳಲ್ಲಿ ಬದಲಾವಣೆಯ ಅವಶ್ಯಕತೆ ಇದೆ ಎಂಬ ನಿಲುವನ್ನು ಹೊಂದಿದ್ದಾರೆ. ಬಿನೋದಾನಂದ ಝಾ ರವರು ತಮ್ಮ ಅಧ್ಯಯನದಲ್ಲಿ " ಬಹುಸಂಖ್ಯಾತ ವಿದ್ಯಾರ್ಥಿಗಳು ಕೌಟುಂಬಿಕ ಪದ್ದತಿಗಳು ಮತ್ತು ಸಂಪ್ರದಾಯಗಳನ್ನು ಅನುಸರಿಸಬೇಕು" ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿರುತ್ತಾರೆ.

ಕೋಷ್ಟಕ–6.3: ನೀವು ತೆಗೆದುಕೊಳ್ಳುವ ತೀರ್ಮಾನದಲ್ಲಿ ಯಾವುದಕ್ಕೆ ಹೆಚ್ಚು ಒತ್ತು ಕೊಡುತ್ತೀರಿ?

ಕ್ರ.ಸಂ		ಸಂಖ್ಯೆ	ಶೇಕಡ
1	ವೈಯಕ್ತಿಕ	30	15.00
2	ಕೌಟುಂಬಿಕ	123	62.00
3	ಸಾಮಾಜಿಕ	47	23.00
	ಒಟ್ಟು	**200**	**100.00**

ಕೋಷ್ಟಕ 6.3 ಹೇಳುವಂತೆ ವಿದ್ಯಾರ್ಥಿಗಳು ತಮ್ಮ ಜೀವನದಲ್ಲಿ ಯಾವು ತೀರ್ಮಾನಗಳಿಗೆ ಹೆಚ್ಚು ಒತ್ತು ನೀಡುತ್ತಿದ್ದಾರೆ ಎಂಬುದರ ಬಗ್ಗೆ ಗಮನಹರಿಸಲಾಯಿತು. ಅದರಲ್ಲಿ ಶೇ. 62 (123) ವಿದ್ಯಾರ್ಥಿಗಳು ತಮ್ಮ ಕೌಟುಂಬಿಕ ಜೀವನಕ್ಕೆ ಒತ್ತು ನೀಡಿದರೆ, ಶೇ 23 (47) ಸಾಮಾಜಿಕ ವಿಷಯಗಳಿಗೆ ಹಾಗೂ ಶೇ. 15 (30) ವೈಯಕ್ತಿಕ ವಿಷಯಗಳಿಗೆ ಹೆಚ್ಚಿನ ಮಹತ್ವ ನೀಡುತ್ತಿದ್ದಾರೆ. ಬಹುಸಂಖ್ಯಾತ ವಿದ್ಯಾರ್ಥಿಗಳು ಕೌಟುಂಬಿಕ ವಿಷಯಗಳಿಗೆ ಹೆಚ್ಚಿನ ಮಹತ್ವ ಕೊಡುತ್ತಿರುವುದು ಈ ಮೇಲಿನ ಅಂಕಿಸಂಖ್ಯೆಗಳಿಂದ ಸ್ಪಷ್ಟವಾಗುತ್ತದೆ. ಸಾಮಾಜಿಕ ಮತ್ತು ವೈಯಕ್ತಿಕ ವಿಷಯಗಳಿಗಿಂತ ಕೌಟುಂಬಿಕ ವಿಷಯಗಳು ಇಂದು ವಿದ್ಯಾರ್ಥಿಗಳ ಆದ್ಯತೆಯಾಗಿತ್ತಿರುವುದು ನಾವು ಗಮನಿಸಬೇಕಾದಂತಹ ವಿಷಯವಾಗಿದೆ.

ಕೋಷ್ಟಕ–6.4: ವಿದ್ಯಾರ್ಥಿಯಾಗಿ ಸಮಾಜದಲ್ಲಿ ನಿಮ್ಮ ಪಾತ್ರ?

ಕ್ರ.ಸಂ		ಸಂಖ್ಯೆ	ಶೇಕಡ
1	ಸಮಾಜದ ಧೋರಣೆಗಳು ಮತ್ತು ನೀತಿಗಳನ್ನು ರೂಪಿಸಲು ಸಹಾಯಮಾಡುವುದು	16	8.00
2	ಯೋಗ್ಯವಾದ ಶಿಕ್ಷಣ+ವಿದ್ಯಾರ್ಥಿ ಪ್ರತಿನಿಧಿತ್ವ ಮತ್ತು ಭಾಗವಹಿಸುವಿಕೆ	49	25.00
3	ಜವಾಬ್ದಾರಿ ನಾಗರೀಕರಾಗುವುದು	105	53.00
4	ಸಂಭವಿಸುವ ವಿದ್ಯಾಮಾನಗಳ ವಿಮರ್ಶಾತ್ಮಕ ಮೌಲ್ಯಮಾಪನ	17	8.00
5	ಪ್ರಜಾಪ್ರಭುತ್ವ ಮತ್ತು ಸಮಾನತೆಯ ಸಮಾಜಕ್ಕಾಗಿ ಶ್ರಮಿಸುವುದು	13	6.00
	ಒಟ್ಟು	**200**	**100.00**

ಕೋಷ್ಟಕ 6.4 ಹೇಳುವಂತೆ ಸಮಾಜದಲ್ಲಿ ವಿದ್ಯಾರ್ಥಿಗಳ ಪಾತ್ರ ಮಹತ್ವದ್ದಾಗಿದೆ. ಶೇ. 53 (105) ವಿದ್ಯಾರ್ಥಿಗಳು ಜವಾಬ್ದಾರಿ ನಾಗರೀಕರಾಗುವುದು, ಶೇ. 25 (49) ವಿದ್ಯಾರ್ಥಿಗಳು ಯೋಗ್ಯವಾದ ಶಿಕ್ಷಣ, ವಿದ್ಯಾರ್ಥಿ ಪ್ರತಿನಿಧಿತ್ವ ಮತ್ತು ಭಾಗವಹಿಸುವಿಕೆ, ಶೇ. 8 (16) ಸಮಾಜದ ಧೋರಣೆಗಳು ಮತ್ತು ನೀತಿಗಳನ್ನು ರೂಪಿಸಲು ಸಹಾಯಮಾಡುವುದು ಹಾಗೂ ಸಂಭವಿಸುವ ವಿದ್ಯಾಮಾನಗಳ ವಿಮರ್ಶಾತ್ಮಕ ಮೌಲ್ಯಮಾಪನ, ಶೇ. 6 (13) ವಿದ್ಯಾರ್ಥಿಗಳು ಪ್ರಜಾಪ್ರಭುತ್ವ ಮತ್ತು ಸಮಾನತೆಯ ಸಮಾಜಕ್ಕಾಗಿ ಶ್ರಮಿಸುವುದು ಈ ಅಂಶಗಳನ್ನು ಕೇಂದ್ರೀಕರಿಸಿದ ಪಾತ್ರವನ್ನು ವಿವರಿಸುತ್ತದೆ. ವಿದ್ಯಾರ್ಥಿಗಳು ಸಮಾಜದಲ್ಲಿ ಬಹು ಮುಖ್ಯ ಪಾತ್ರವನ್ನು ನಿರ್ವಹಿಸಬೇಕಾಗುತ್ತದೆ. ದೇಶ ಕಟ್ಟುವ ಅಥವಾ ಸಮಾಜ ನಿರ್ಮಿಸುವಲ್ಲಿ ವಿದ್ಯಾರ್ಥಿಗಳ ಪಾತ್ರವನ್ನು ನಾವು ಕಡೆಗಣಿಸುವಂತಿಲ್ಲ. ಸಮಾಜದಲ್ಲಿ ವಿದ್ಯಾರ್ಥಿಗಳ ಪಾತ್ರ ಕುರಿತು ಕೇಳಿದ ಪ್ರಶ್ನೆಗೆ ಬಹುಸಂಖ್ಯಾತ ವಿದ್ಯಾರ್ಥಿಗಳು ಸಮಾಜದ ಜವಾಬ್ದಾರಿಯುತ ನಾಗರಿಕನಾಗುವುದು ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ. ಇದರಿಂದ ಸ್ಪಷ್ಟವಾಗುವ ಅಂಶವೇನೆಂದರೆ ವಿದ್ಯಾರ್ಥಿಗಳು ಸಾಮಾಜಿಕ ಪ್ರಜ್ಞೆ ಉಳ್ಳವರಾಗಿದ್ದಾರೆ. ದೇಶದ ಘನತೆ ಗೌರವ ಕಾಪಾಡುವುದರಲ್ಲಿ ತಮ್ಮ ಯೋಗದಾನವಿದೆ ಎಂಬ ಅರಿವನ್ನು ಹೊಂದಿದವರಾಗಿದ್ದಾರೆ.

ಕೋಷ್ಟಕ–6.5: ನಿಮ್ಮ ಪ್ರಕಾರ ನಮ್ಮ ದೇಶದ ನಿಜವಾದ ಸಮಸ್ಯೆ ಯಾವುದು?

ಕ್ರ.ಸಂ		ಸಂಖ್ಯೆ	ಶೇಕಡ
1	ಬಡತನ	60	30.00
2	ಭ್ರಷ್ಟಚಾರ	43	22.00
3	ನಾಗರೀಕ ಜಡತ್ವ	23	11.00
4	ಜಾತಿ/ಧರ್ಮ ಸಂಪ್ರದಾಯ	32	16.00
5	ಸರಿಂಯಾದ ನಾಂಯಕತ್ವದ ಕೊರತೆ	42	21.00
	ಒಟ್ಟು	**200**	**100.00**

ವಿದ್ಯಾರ್ಥಿಗಳನ್ನು ದೇಶದ ನಿಜವಾದ ಸಮಸ್ಯೆಗಳ ಬಗ್ಗೆ ಬೆಳಕು ಚೆಲ್ಲುವ ನಿಟ್ಟಿನಲ್ಲಿ ಮತ್ತು ದೇಶದ ಬಗ್ಗೆ ಅವರಿಗಿರುವ ಧೋರಣೆಗಳ ಬಗ್ಗೆ ಪ್ರಶ್ನೆಯನ್ನು ಕೇಳಲಾಗಿತ್ತು. ಕೋಷ್ಟಕ 6.13 ಹೇಳುವಂತೆ, ಶೇ. 30 (60) ಬಡತನ, ಶೇ. 22 (43) ಭ್ರಷ್ಟಚಾರ, ಶೇ. 11 (23) ನಾಗರೀಕ ಜಡತ್ವ, ಶೇ. 16 (32) ಜಾತಿ/ಧರ್ಮ ಸಂಪ್ರದಾಯ ಹಾಗೂ ಶೇ. 21 (42) ಸರಿಯಾದ ನಾಯಕತ್ವದ ಕೊರತೆಗಳು ದೇಶ ಎದುರಿಸುತ್ತಿರುವ ಜ್ವಲಂತ ಸಮಸ್ಯೆಗಳು ಎಂದು ಹೇಳುತ್ತಾರೆ. ವಿದ್ಯಾರ್ಥಿಗಳು ಸಮಾಜದ ಪ್ರಜ್ಞಾವಂತ ಸಮುದಾಯವಾಗಿದೆ. ದೇಶ ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ ಅವರಿಗೆ ಅರಿವು ಇರುವುದು ಸಹಜ. ಸಮಾಜದ ಅಥವಾ ದೇಶದ ಸಮಸ್ಯೆಗಳಿಗೆ ಇಂದು ಯುವಕರು ಮುಖಾಮುಖಿಯಾಗುತ್ತಿದ್ದಾರೆ. ದೇಶದ ನಿಜವಾದ ಸಮಸ್ಯೆಯ ಬಗ್ಗೆ ಗಂಭೀರವಾಗಿ ಚರ್ಚಿಸುತ್ತಿದ್ದಾರೆ. ಈ ನಿಟ್ಟಿನಲ್ಲಿ ದೇಶ ಎದುರಿಸುತ್ತಿರುವ ನಿಜವಾದ ಸಮಸ್ಯೆಯ ಬಗ್ಗೆ ಅವರ ಗಮನ ಸೆಳೆಯಲಾಯಿತು. ಭಾರತದ ನಿಜವಾದ ಸಮಸ್ಯೆ ಬಡತನ ಎಂಬುದು ಬಹುಸಂಖ್ಯಾತ ವಿದ್ಯಾರ್ಥಿಗಳ ಸ್ಪಷ್ಟ ನಿಲುವಾಗಿದೆ. ತದನಂತರ ಭ್ರಷ್ಟಾಚಾರ, ನಾಗರಿಕ ಜಡತ್ವ ಮತ್ತು ಜಾತಿ–ಸಂಪ್ರದಾಯಗಳು ಭಾರತ ಎದುರಿಸುತ್ತಿರುವ ನಿಜವಾದ ಸಮಸ್ಯೆಗಳು ಎಂದು ಅವರು ಪಟ್ಟಿ ಮಾಡುತ್ತಾರೆ. ಹೀಗಾಗಿ, ಪ್ರಭುತ್ವ ಈ ಸಮಸ್ಯೆಗಳಿಗೆ ಪರಿಹಾರಗಳನ್ನು ಹುಡುಕುವುದು ಅವಶ್ಯಕವಾಗಿದೆ. ಇಲ್ಲದಿದ್ದರೆ ಯುವ ಸಮುದಾಯ ಪ್ರಭುತ್ವ ಅಥವಾ ಸರಕಾರಗಳಲ್ಲಿ ನಂಬಿಕೆಯನ್ನು ಕಳೆದುಕೊಳ್ಳುವ ಸಾಧ್ಯತೆ ಇರುತ್ತದೆ ಎಂಬುದು ಈ ಅಧ್ಯಯನದಿಂದ ಸ್ಪಷ್ಟವಾಗುತ್ತದೆ.

ಕೋಷ್ಟಕ–6.6: ನಿಮ್ಮ ಸಮಾಜದಲ್ಲಿ ಈ ಪಿಡುಗುಗಳನ್ನು ಹೋಗಲಾಡಿಸಬೇಕೇ?

ಕ್ರ.ಸಂ		ಸಂಖ್ಯೆ	ಶೇಕಡ
1	ಲಿಂಗ ತಾರತಮ್ಯ	14	7.00
2	ಜಾತಿ/ವರ್ಗ ತಾರತಮ್ಯ	22	11.00
3	ಹಳೆಯ/ಜಾತಿ ಆಧರಿತ ಸಂಪ್ರದಾಯಗಳು	34	17.00
4	ಸಾಂಸ್ಕೃತಿಕ ತಾರತಮ್ಯ	16	8.00
5	ಅತ್ಯಾಚಾರ	13	7.00
6	ಭ್ರಷ್ಟಚಾರ	101	50.00
	ಒಟ್ಟು	**200**	**100.00**

ಕೋಷ್ಟಕ 6.6 ಹೇಳುವಂತೆ ಶೇ. 50 ರಷ್ಟು (101) ವಿದ್ಯಾರ್ಥಿಗಳು ಸಮಾಜದಲ್ಲಿರುವ ಭ್ರಷ್ಟಾಚಾರವನ್ನು ತೊಡೆದು ಹಾಕಬೇಕು ಎಂದು ಹೇಳುತ್ತಾರೆ. ಹಾಗೆಯೇ ಶೇ 17 ರಷ್ಟು (34) ಹಳೆಯ/ಜಾತಿ ಆಧರಿತ ಸಂಪ್ರದಾಯಗಳನ್ನು ಬದಲಾಯಿಸಬೇಕು, ಶೇ. 11 (22) ಜಾತಿ / ವರ್ಗ ತಾರತಮ್ಯ ಹೋಗಲಾಡಿಸಬೇಕು, ಶೇ. 8 (16) ಸಾಂಸ್ಕೃತಿಕ ತಾರತಮ್ಯವನ್ನು

ಕಡಿಮೆಗೊಳಿಸಬೇಕು, ಶೇ. 7 (14) ರಷ್ಟು ವಿದ್ಯಾರ್ಥಿಗಳು ಕ್ರಮವಾಗಿ ಲಿಂಗತಾರತಮ್ಯ ಮತ್ತು ಅತ್ಯಾಚಾರದಂತಹ ಪಿಡುಗುಗಳನ್ನು ಹೋಗಲಾಡಿಸಬೇಕು ಎಂದು ಹೇಳುತ್ತಾರೆ.

ರಾಜಕೀಯ ಪ್ರಜ್ಞೆ ಮತ್ತು ರಾಜಕೀಯ ಸಾಮಾಜೀಕರಣ

ಕೋಷ್ಟಕ–6.7: ನಿಮ್ಮ ಪ್ರಕಾರ ಮೂಲ ರಾಜಕೀಯ ಪ್ರಜ್ಞೆಗಳು ಯಾವುದು?

ಕ್ರ.ಸಂ		ಸಂಖ್ಯೆ	ಶೇಕಡ
1	ನಾಗರಿಕ ಹಕ್ಕು ಮತ್ತು ಕರ್ತವ್ಯದ ಅರಿವು	74	37.00
2	ನಾಗರಿಕ ಬೇಡಿಕೆಗಳು	25	13.00
3	ಸರ್ವೋತೋಮುಖ ಪ್ರಗತಿ	67	34.00
4	ಸಾಮಾಜಿಕ ನ್ಯಾಯ	14	7.00
5	ಉತ್ತಮ ಆಡಳಿತ ವ್ಯವಸ್ಥೆ	20	9.00
	ಒಟ್ಟು	**200**	**100.00**

ಕೋಷ್ಟಕ 6.7 ವಿವರಿಸುವಂತೆ, ನಾಗರಿಕ ಹಕ್ಕು ಮತ್ತು ಕರ್ತವ್ಯದ ಅರಿವು (ಶೇ 37), ಸರ್ವೋತೋಮುಖ ಪ್ರಗತಿ (ಶೇ. 34), ನಾಗರಿಕ ಬೇಡಿಕೆಗಳು (ಶೇ. 13), ಉತ್ತಮ ಆಡಳಿತ ವ್ಯವಸ್ಥೆ (ಶೇ. 9), ಸಾಮಾಜಿಕ ನ್ಯಾಯ (ಶೇ. 7) ದಂತಹ ಅಂಶಗಳು ವಿದ್ಯಾರ್ಥಿಗಳಲ್ಲಿ ರಾಜಕೀಯ ಪ್ರಜ್ಞೆ ಬೆಳೆಸುವಲ್ಲಿ ಸಹಕಾರಿಯಾಗುತ್ತದೆ.

ಕೋಷ್ಟಕ–6.8: ವಿಶ್ವವಿದ್ಯಾನಿಲಯ/ಕಾಲೇಜು ಆಡಳಿತದ ಬಗ್ಗೆ ನಿಮ್ಮ ಅಭಿಪ್ರಾಯವೇನು?

ಕ್ರ.ಸಂ		ಸಂಖ್ಯೆ	ಶೇಕಡ
1	ಉತ್ತಮವಾಗಿದೆ	129	65.00
2	ಉತ್ತಮವಾಗಿಲ್ಲ	14	7.00
3	ಸಾಧಾರಣ	32	16.00
4	ಇನ್ನು ಸುಧಾರಿಸಬೇಕು	24	11.00
5	ಗೊತ್ತಿಲ್ಲ	1	1.00
	ಒಟ್ಟು	**200**	**100.00**

ಕೋಷ್ಟಕ 6.8 ವಿವರಿಸುವಂತೆ ಶೇ. 65 ವಿದ್ಯಾರ್ಥಿಗಳು (129) ಕಾಲೇಜು ಆಡಳಿತ ಉತ್ತಮವಾಗಿದೆ ಎಂದು ಹೇಳಿದರೆ, ಶೇ. 16 (32) ಸಾಧಾರಣ, ಶೇ. 11 (24) ಇನ್ನು ಹೆಚ್ಚಿನ ಸುಧಾರಣೆಯಾಗಬೇಕು ಹಾಗೂ ಶೇ. 7 (14) ಉತ್ತಮವಾಗಿಲ್ಲ ಎಂದು ವಿವರಿಸುತ್ತಾರೆ. ಆದರೆ ಬಿನೋದಾನಂದ ಝಾ ರವರ ಅಧ್ಯಯನವು ಪ್ರಸ್ತುತ ಅಧ್ಯಯನಕ್ಕಿಂತ ಭಿನ್ನವಾಗಿದೆ. ಅವರ ಪ್ರಕಾರ "ಶೇ 42 ರಷ್ಟು ವಿದ್ಯಾರ್ಥಿಗಳು ವಿಶ್ವವಿದ್ಯಾಲಯದ ಅಧಿಕಾರಿಗಳು ವಿದ್ಯಾರ್ಥಿ

ಕಲ್ಯಾಣದ ಬಗ್ಗೆ ಗಂಭೀರವಾದ ಆಸಕ್ತಿ ತೋರಿಸುವುದಿಲ್ಲ ಎಂದು ಹೇಳಿದರೆ, ಶೇ 56 ರಷ್ಟು ವಿದ್ಯಾರ್ಥಿಗಳು ವಿಶ್ವವಿದ್ಯಾಲಯದ ಅಧಿಕಾರಿಗಳು ವಿದ್ಯಾರ್ಥಿಗಳ ಕಲ್ಯಾಣದ ಬಗ್ಗೆ ಯಾವುದೇ ರೀತಿಯ ಆಸಕ್ತಿಯನ್ನು ತೋರಿಸುವುದಿಲ್ಲ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿರುತ್ತಾರೆ. ಇಂದಿನ ಎಲ್ಲ ಶೈಕ್ಷಣಿಕ ಸಮಸ್ಯೆಗಳಿಗೆ ಇದು ಒಂದು ಪ್ರಮುಖ ಕಾರಣವಾಗಿದೆ ಎಂದು ಅವರು ತಮ್ಮ ಅಧ್ಯಯನದಲ್ಲಿ ಸ್ಪಷ್ಟಪಡಿಸಿರುತ್ತಾರೆ. ವಿದ್ಯಾರ್ಥಿಗಳ ಸಮಸ್ಯೆಗಳಿಗೆ ಕಾಲೇಜು ಅಥವಾ ವಿಶ್ವವಿದ್ಯಾಲಯದ ಆಡಳಿತ ಗಂಭೀರವಾಗಿ ಸ್ಪಂದಿಸುವುದಿಲ್ಲ ಎಂಬುದು ಅವರ ಅಧ್ಯಯನದ ಫಲಿತವಾಗಿದೆ." ಆದರೆ ಪ್ರಸ್ತುತ ಅಧ್ಯಯನವು ವಿಶ್ವವಿದ್ಯಾಲಯದ ಅಧಿಕಾರಿಗಳು ವಿದ್ಯಾರ್ಥಿಗಳ ಸಮಸ್ಯೆಗಳಿಗೆ ಸ್ಪಂದಿಸುತ್ತಾರೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತದೆ.

ಕೋಷ್ಟಕ–6.9: ಕಾಲೇಜು/ವಿಶ್ವವಿದ್ಯಾನಿಲಯದ ಅಧಿಕಾರಿಗಳು ನಿಮ್ಮ ಸಮಸ್ಯೆಗಳಿಗೆ ಸ್ಪಂದಿಸುತ್ತಾರೆಯೇ?

ಕ್ರ.ಸಂ		ಸಂಖ್ಯೆ	ಶೇಕಡ
1	ಹೌದು	157	79.00
2	ಇಲ್ಲ	32	15.00
3	ಸಾಧಾರಣ	11	6.00
	ಒಟ್ಟು	**200**	**100.00**

ಕೋಷ್ಟಕ 6.9 ಹೇಳುವಂತೆ ಶೇ. 79 ರಷ್ಟು ವಿದ್ಯಾರ್ಥಿಗಳು (157) ಕಾಲೇಜು, ವಿಶ್ವವಿದ್ಯಾನಿಲಯದ ಅಧಿಕಾರಿಗಳು ವಿದ್ಯಾರ್ಥಿಗಳ ಸಮಸ್ಯೆಗಳಿಗೆ ಸ್ಪಂದಿಸುತ್ತಾರೆ ಎಂದು ಹೇಳುತ್ತಾರೆ. ಆದರೆ ಶೇ. 15 (32) ವಿದ್ಯಾರ್ಥಿಗಳಿಗೆ ಅವರ ಸ್ಪಂದನೆ ಸಿಗುತ್ತಿಲ್ಲ ಹಾಗೂ ಶೇ. 6 (11) ವಿದ್ಯಾರ್ಥಿಗಳು ಸಾಧಾರಣ ಮಟ್ಟದಲ್ಲಿ ಅವರ ಸ್ಪಂದನೆ ದೊರಕುತ್ತಿದೆ ಎಂದು ಹೇಳುತ್ತಾರೆ. ಬಹುಸಂಖ್ಯಾತ ವಿದ್ಯಾರ್ಥಿಗಳು ಕಾಲೇಜು/ವಿಶ್ವವಿದ್ಯಾನಿಲಯದ ಅಧಿಕಾರಿಗಳು ವಿದ್ಯಾರ್ಥಿಗಳ ಸಮಸ್ಯೆಗಳಿಗೆ ಸ್ಪಂದಿಸುತ್ತಿದ್ದಾರೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ. ಇದರಿಂದ ನಮಗೆ ತಿಳಿದು ಬರುವುದೆನೆಂದರೆ ವಿಶ್ವವಿದ್ಯಾಲಯದ ಆಡಳಿತ ಸುಧಾರಿಸಿದ್ದು ವಿದ್ಯಾರ್ಥಿಗಳ ಸಮಸ್ಯೆಗಳನ್ನು ವಿಶ್ವವಿದ್ಯಾಲಯದ ಅಧಿಕಾರಿಗಳು ಗಂಭೀರವಾಗಿ ಪರಿಗಣಿಸುವುದರ ಜೊತೆಗೆ ಅವುಗಳಿಗೆ ಪರಿಹಾರಗಳನ್ನು ಹುಡುಕುವ ಪ್ರಯತ್ನವನ್ನು ಮಾಡುತ್ತಿದ್ದಾರೆ ಎಂಬುವುದು ಈ ಅಧ್ಯಯನದಿಂದ ಸ್ಪಷ್ಟವಾಗುತ್ತದೆ.

ಕೋಷ್ಟಕ–6.10: ವಿಶ್ವವಿದ್ಯಾನಿಲಯ/ ಕಾಲೇಜು ಆಡಳಿತ ವಿದ್ಯಾರ್ಥಿಗಳ ಸಮಸ್ಯೆಗಳನ್ನು ಬಗೆಹರಿಸುವಲ್ಲಿ ವಿಫಲವಾದಾಗ ಹೇಗೆ ಬಗೆಹರಿಸುವಿರಿ?

ಕ್ರಸಂ		ಸಂಖ್ಯೆ	ಶೇಕಡ
1	ವಿದ್ಯಾರ್ಥಿಗಳ ಸಹಾಯದಿಂದ	162	81.00
2	ಹೊರಗಿನವರ ಸಹಾಯ	10	5.00
3	ವಿದ್ಯಾರ್ಥಿ ಮತ್ತು ಹೊರಗಿನವರ ಸಹಾಯ	23	12.00
4	ಪ್ರಭಾವಿ ವ್ಯಕ್ತಿಗಳ ಸಹಾಂಯ	5	2.00
	ಒಟ್ಟು	**200**	**100.00**

ವಿಶ್ವವಿದ್ಯಾನಿಲಯ ಹಾಗೂ ಕಾಲೇಜು ಆಡಳಿತ ಮಂಡಳಿ ವಿದ್ಯಾರ್ಥಿಗಳ ಸಮಸ್ಯೆಗಳನ್ನು ಬಗೆಹರಿಸುವಲ್ಲಿ ಪ್ರಮುಖ ಪಾತ್ರವಹಿಸುತ್ತವೆ. ಒಂದು ವೇಳೆ ಆಡಳಿತ ಮಂಡಳಿ ಈ ಬಗ್ಗೆ ವಿಫಲವಾದಾಗ ವಿದ್ಯಾರ್ಥಿಗಳ ಸಹಾಯದಿಂದ (ಶೇ. 81), ಹೊರಗಿನವರ ಸಹಾಯದಿಂದ (ಶೇ. 5), ಹೊರಗಿನವರು ಮತ್ತು ವಿದ್ಯಾರ್ಥಿಗಳ ಸಹಾಯದಿಂದ (ಶೇ. 12) ಹಾಗೂ ಪ್ರಭಾವಿ ವ್ಯಕ್ತಿಗಳ ಸಹಾಯದಿಂದ ತಮ್ಮ ಸಮಸ್ಯೆಗಳನ್ನು ಪರಿಹರಿಸಿಕೊಳ್ಳುತ್ತಾರೆ ಎಂಬುದನ್ನು ಕೋಷ್ಟಕ 6.10 ವಿವರಿಸುತ್ತದೆ. ವಿಶ್ವವಿದ್ಯಾಲಯ ಹಾಗೂ ಕಾಲೇಜುಗಳು ವಿದ್ಯಾರ್ಥಿಗಳ ಸಮಸ್ಯೆಗಳನ್ನು ಬಗೆಹರಿಸುವಲ್ಲಿ ವಿಫಲವಾದಾಗ ಸಾಮುನ್ಯವಾಗಿ ವಿದ್ಯಾರ್ಥಿಗಳು ಪ್ರತಿಭಟನೆಯನ್ನು ಆಯ್ಕೆ ಮಾಡಿಕೊಳ್ಳುತ್ತಾರೆ. ಪ್ರತಿಭಟಿಸುವುದು ಸಾಮನ್ಯವಾಗಿ ವಿದ್ಯಾರ್ಥಿಗಳ ಜನ್ಮಸಿದ್ಧವಾದ ಹಕ್ಕಾಗಿದೆ. ಹೀಗಾಗಿ ವಿಶ್ವವಿದ್ಯಾಲಯಗಳು ಹಾಗೂ ಕಾಲೇಜುಗಳು ವಿದ್ಯಾರ್ಥಿಗಳ ಸಮಸ್ಯೆಗಳನ್ನು ಬಗೆಹರಿಸುವಲ್ಲಿ ವಿಫಲವಾದಾಗ ವಿದ್ಯಾರ್ಥಿಗಳು ಪ್ರತಿಭಟನೆಗೆ ಇಳಿಯುವುದು ಸಹಜ. ಸಂಬಂಧ ಪಟ್ಟ ಅಧಿಕಾರಿಗಳಿಗೆ ಮೊದಲು ಮನವಿ ನೀಡುವುದರ ಮುಖಾಂತರ ಸಮಸ್ಯೆ ಬಗೆಹರಿಸಿಕೊಳ್ಳಲು ಪ್ರಯತ್ನಿಸುತ್ತಾರೆ. ಇದು ಸಾಧ್ಯವಾಗದಾಗ ವಿದ್ಯಾರ್ಥಿಗಳು ಆಡಳಿತದ ವಿರುದ್ಧ ಪ್ರತಿಭಟನೆಗೆ ಇಳಿಯುತ್ತಾರೆ. ಈ ಸಂದರ್ಭದಲ್ಲಿ ಅವರು ಬೇರೆ ಸಂಘಟನೆಗಳ ಸಹಾಯವನ್ನು ಪಡೆದುಕೊಳ್ಳುವಲ್ಲಿ ಹಿಂಜರಿಯುವುದಿಲ್ಲ. ಬೇರೆ ಸಂಘಟನೆಗಳ ಸಹಾಯವನ್ನು ಪಡೆದುಕೊಳ್ಳುವುದರ ಮುಖಾಂತರ ತಮ್ಮ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲು ಪ್ರಯತ್ನಿಸುತ್ತಾರೆ.

ಕೋಷ್ಟಕ–6.11: ನೀವು ಪ್ರತಿಭಟನೆ ನಡೆಸುತ್ತಿರುವಾಗ ಬೇರೆ ಸಂಘಟನೆಯ ಸಹಾಯ ಅಥವಾ ಬೆಂಬಲ ಪಡೆಯುತ್ತೀರಾ?

ಕ್ರಸಂ		ಸಂಖ್ಯೆ	ಶೇಕಡ
1	ಹೌದು	166	83.00
2	ಇಲ್ಲ	18	9.00
3	ಗೊತ್ತಿಲ್ಲ	16	8.00
	ಒಟ್ಟು	**200**	**100.00**
ಹೌದಾದರೆ, ಇತರ ಯಾವ ಹೊರಗಿನ ಸಂಘಟನೆಗಳು ನಿಮಗೆ ಬೆಂಬಲ ನೀಡುತ್ತವೆ?			
1	ಸ್ವಯಂ ಸೇವಾ ಸಂಘಗಳು	80	40.00
2	ವಿದ್ಯಾರ್ಥಿ ಸಂಘ	86	43.00
	ಒಟ್ಟು	**166**	**83.00**

ಕೋಷ್ಟಕ 6.11 ಹೇಳುವಂತೆ ವಿದ್ಯಾರ್ಥಿಗಳು ತಮ್ಮ ಬೇಡಿಕೆಗಳ ಈಡೇರಿಕೆಗಾಗಿ ಪ್ರತಿಭಟನೆ ನಡೆಸುತ್ತಿರುವ ಸಂದರ್ಭದಲ್ಲಿ ಬೇರೆ ಸಂಘಟನೆಗಳ ಸಹಾಯ ಅಥವಾ ಬೆಂಬಲವನ್ನು ಪಡೆದುಕೊಳ್ಳುತ್ತಾರೆ (ಶೇ. 83). ಹೆಚ್ಚಾಗಿ ಸ್ವಯಂ ಸೇವಾ ಸಂಘಗಳು ಮತ್ತು ಇತರ ವಿದ್ಯಾರ್ಥಿ ಸಂಘಗಳ ಬೆಂಬಲವನ್ನು ಪಡೆದುಕೊಳ್ಳುತ್ತವೆ. ಕೇವಲ ಶೇ 9 (18) ವಿದ್ಯಾರ್ಥಿಗಳು ಮಾತ್ರ ಇಂತಹ ಸಂಘಟನೆಗಳ ಬೆಂಬಲ ಪಡೆದುಕೊಳ್ಳುತ್ತಿಲ್ಲ ಹಾಗೂ ಶೇ. 8 (16) ವಿದ್ಯಾರ್ಥಿಗಳು ಈ ಬಗ್ಗೆ ಅರಿವಿಲ್ಲ ಎಂಬ ಉತ್ತರವನ್ನು ನೀಡಿದ್ದಾರೆ.

ಕೋಷ್ಟಕ–6.12: ವಿದ್ಯಾರ್ಥಿಗಳನ್ನು ರಾಜಕೀಯಕರಣಗೊಳಿಸುವಲ್ಲಿ ಶಿಕ್ಷಕರು ಪ್ರಮುಖ ಪಾತ್ರ ವಹಿಸುತ್ತಾರೆಯೇ?

ಕ್ರ.ಸಂ		ಸಂಖ್ಯೆ	ಶೇಕಡ
1	ಹೌದು	126	63.00
2	ಇಲ್ಲ	38	19.00
3	ಗೊತ್ತಿಲ್ಲ	36	18.00
	ಒಟ್ಟು	**200**	**100.00**

ಕೋಷ್ಟಕ 6.12 ಹೇಳುವಂತೆ ಶೇ. 63 ರಷ್ಟು ವಿದ್ಯಾರ್ಥಿಗಳು (126) ಅವರನ್ನು ರಾಜಕೀಯಕರಣಗೊಳಿಸುವಲ್ಲಿ ಶಿಕ್ಷಕರು ಪ್ರಮುಖ ಪಾತ್ರವನ್ನು ವಹಿಸುತ್ತಾರೆ ಎಂದು ಹೇಳುತ್ತಾರೆ. ಅದರೆ ಶೇ. 19ರಷ್ಟು ವಿದ್ಯಾರ್ಥಿಗಳು (38) ಈ ಪ್ರಕ್ರಿಯೆಯಲ್ಲಿ ಶಿಕ್ಷಕರ ಪಾತ್ರವಿಲ್ಲ ಎಂದರೆ ಶೇ. 18 (36) ವಿದ್ಯಾರ್ಥಿಗಳಿಗೆ ಈ ಬಗ್ಗೆ ಅರಿವಿಲ್ಲ ಎನ್ನುವುದನ್ನು ಗಮನಿಸಬಹುದು.

ಕೋಷ್ಟಕ–6.13: ಶಾಲಾ/ಕಾಲೇಜುಗಳಲ್ಲಿ ರಾಜಕೀಯ ಚಟುವಟಿಕೆಗಳಿಗೆ ಪೂರಕವಾದ ಅವಕಾಶಗಳು ಯಾವುದು?

ಕ್ರ.ಸಂ		ಸಂಖ್ಯೆ	ಶೇಕಡ
1	ವಿದ್ಯಾರ್ಥಿಯ ಕೌಟುಂಬಿಕ ಹಿನ್ನಲೆ	19	10.00
2	ಸಾಮಾಜಿಕ ಅಂತಸ್ತು	30	15.00
3	ಸ್ನೇಹಿತರ ಸಂಪರ್ಕ	82	41.00
4	ಕಾಲೇಜು ಕ್ಯಾಂಪಸ್ ಅವ್ಯವಸ್ಥೆ	14	7.00
5	ಇತರ ಸಮುದಾಯದ ಪ್ರಜ್ಞೆ ಇಲ್ಲದಿರುವುದು	55	27.00
	ಒಟ್ಟು	**200**	**100.00**

ಕೋಷ್ಟಕ 6.13 ವಿವರಿಸುವಂತೆ ಶಾಲಾ ಕಾಲೇಜುಗಳಲ್ಲಿ ರಾಜಕೀಯ ಚಟುವಟಿಕೆಗಳಿಗೆ ವಿದ್ಯಾರ್ಥಿಯ ಅನೇಕ ಅಂಶಗಳು ಕಾರಣವಾಗುತ್ತವೆ. ಶೇ. 41 (82) ವಿದ್ಯಾರ್ಥಿಗಳಿಗೆ

ಸ್ನೇಹಿತರ ಸಂಪರ್ಕವಾದರೆ, ಶೇ 27 (55) ವಿದ್ಯಾರ್ಥಿಗಳಿಗೆ ಇತರ ಸಮುದಾಯದ ಪ್ರಜ್ಞೆ ಇಲ್ಲದಿರುವುದು ಕಂಡುಬಂದಿದೆ. ಆದರೆ ಶೇ. 15 (30) ವಿದ್ಯಾರ್ಥಿಗಳಿಗೆ ಸಾಮಾಜಿಕ ಅಂತಸ್ತು ಪೂರಕ ಅಂಶವಾದರೆ, ಶೇ. 10 (19) ವಿದ್ಯಾರ್ಥಿಗಳಿಗೆ ವಿದ್ಯಾರ್ಥಿಯ ಕೌಟುಂಬಿಕ ಹಿನ್ನಲೆ ಕಾರಣವಾಗುತ್ತದೆ. ಹಾಗೆಯೇ ಶೇ. 7 (14) ವಿದ್ಯಾರ್ಥಿಗಳಿಗೆ ಕಾಲೇಜು ಕ್ಯಾಂಪಸ್ ಅವ್ಯವಸ್ಥೆಯೇ ಒಂದು ಕಾರಣವಾಗಿ ಪರಿಣಮಿಸಿದೆ.

ಕೋಷ್ಟಕ–6.14: ನಿಮ್ಮ ಶಾಲಾ/ಕಾಲೇಜುಗಳಲ್ಲಿ ವಿದ್ಯಾರ್ಥಿ ಚುನಾವಣೆಗಳನ್ನು ನಡೆಸುತ್ತಾರೆಯೇ?

ಕ್ರ.ಸಂ		ಸಂಖ್ಯೆ	ಶೇಕಡ
1	ಹೌದು	96	48.00
2	ಇಲ್ಲ	74	37.00
3	ಗೊತ್ತಿಲ್ಲ	30	15.00
	ಒಟ್ಟು	**200**	**100.00**
ಹೌದಾದರೆ, ಹೇಗೆ ನಡೆಸುತ್ತಾರೆ?			
1	ಪರೋಕ್ಷ ಚುನಾವಣೆ	94	47.00
2	ಅಪರೋಕ್ಷ ಚುನಾವಣೆ	2	1.00
	ಒಟ್ಟು	**96**	**48.00**

ಶಾಲಾ ಕಾಲೇಜುಗಳಲ್ಲಿ ವಿದ್ಯಾರ್ಥಿ ಚುನಾವಣೆಗಳನ್ನು ನಡೆಸುತ್ತಾರೆಯೇ ಮತ್ತು ಹೇಗೆ ಎನ್ನುವ ಪ್ರಶ್ನೆಗೆ ಕೋಷ್ಟಕ 6.14 ಉತ್ತರಿಸುತ್ತದೆ. ಶೇ. 48 ರಷ್ಟು (96) ವಿದ್ಯಾರ್ಥಿಗಳು ಚುನಾವಣೆಯನ್ನು ಪರೋಕ್ಷ ಹಾಗೂ ಅಪರೋಕ್ಷ ರೀತಿಯಲ್ಲಿ ನಡೆಸುತ್ತಿದ್ದಾರೆ ಎಂದು ಹೇಳುತ್ತಾರೆ. ಆದರೆ, ಶೇ. 37 (74) ವಿದ್ಯಾರ್ಥಿಗಳು ಕಾಲೇಜುಗಳಲ್ಲಿ ಚುನಾವಣೆ ನಡೆಸಲಾಗುತ್ತಿಲ್ಲ ಎಂದು ಹೇಳುತ್ತಾರೆ ಮತ್ತು ಶೇ. 15 (30) ವಿದ್ಯಾರ್ಥಿಗಳಿಗೆ ಈ ಬಗ್ಗೆ ಅರಿವಿಲ್ಲದಿರುವುದು ಗಮನಕ್ಕೆ ಬಂದಿದೆ.

ಕೋಷ್ಟಕ–6.15: ಶಾಲಾ ಕಾಲೇಜುಗಳಲ್ಲಿ ವಿದ್ಯಾರ್ಥಿ ಚುನಾವಣೆಗಳನ್ನು ಕಡ್ಡಾಯಗೊಳಿಸಬೇಕೆ?

ಕ್ರ.ಸಂ		ಸಂಖ್ಯೆ	ಶೇಕಡ
1	ಹೌದು	133	67.00
2	ಇಲ್ಲ	65	32.00
3	ಗೊತ್ತಿಲ್ಲ	2	1.00
	ಒಟ್ಟು	**200**	**100.00**

ಕೋಷ್ತಕ 6.15 ಶಾಲಾ ಕಾಲೇಜುಗಳಲ್ಲಿ ವಿದ್ಯಾರ್ಥಿ ಚುನಾವಣೆಗಳನ್ನು ಕಡ್ಡಾಯಗೊಳಿಸುವುದರ ಬಗ್ಗೆ ವಿವರಿಸುತ್ತದೆ. ಶೇ. 67 (133) ವಿದ್ಯಾರ್ಥಿಗಳು

ಚುನಾವಣೆಗಳನ್ನು ಕಡ್ಡಾಯಗೊಳಿಸಬೇಕು ಎಂದು ಹೇಳಿದರೆ ಶೇ. 32 (65) ವಿದ್ಯಾರ್ಥಿಗಳು ಬೇಕಾಗಿಲ್ಲ ಎಂದು ಹೇಳುತ್ತಾರೆ.

ಕೋಷ್ಟಕ–6.16: ನಿಮ್ಮ ಶಿಕ್ಷಕರು/ಆಡಳಿತ ನೀವು ವಿದ್ಯಾರ್ಥಿ ಸಂಘದ ಸದಸ್ಯರಾಗಲು ಒಪ್ಪಿಗೆ ಸೂಚಿಸುತ್ತಾರೆಯೇ?

ಕ್ರ.ಸಂ		ಸಂಖ್ಯೆ	ಶೇಕಡ
1	ಹೌದು	139	70.00
2	ಇಲ್ಲ	34	16.00
3	ಗೊತ್ತಿಲ್ಲ	27	14.00
	ಒಟ್ಟು	**200**	**100.00**

ಕೋಷ್ಟಕ 6.16 ಹೇಳುವಂತೆ ಶಿಕ್ಷಕ ವರ್ಗದವರು ವಿದ್ಯಾರ್ಥಿಗಳನ್ನು ಸಂಘದ ಸದಸ್ಯರಾಗಲು ಒಪ್ಪಿಗೆ ನೀಡುತ್ತಾರೆಯೇ ಎಂದು ಪ್ರಶ್ನಿಸಲಾಗಿತ್ತು. ಶೇ. 70 (139) ವಿದ್ಯಾರ್ಥಿಗಳು ಶಿಕ್ಷಕರ ಒಪ್ಪಿಗೆ ಇದೆ ಎಂದು ಹೇಳಿದರೆ ಶೇ. 16 (34) ವಿದ್ಯಾರ್ಥಿಗಳು ಅವರ ಸಮ್ಮತಿ ಇಲ್ಲ ಎಂದು ಹೇಳುತ್ತಾರೆ. ಹಾಗೆಯೇ ಶೇ 14 (27) ವಿದ್ಯಾರ್ಥಿಗಳು ಈ ವಿಚಾರ ತಮಗೆ ತಿಳಿದಿಲ್ಲ ಎಂದು ಹೇಳುತ್ತಾರೆ.

ಕೋಷ್ಟಕ–6.17: ವಿಶ್ವವಿದ್ಯಾನಿಲಯ / ಕಾಲೇಜು ಆಡಳಿತದಲ್ಲಿ ವಿದ್ಯಾರ್ಥಿಗಳ ಭಾಗವಹಿಸುವಿಕೆ ಬೇಕಾಗಿದೆಯೇ?

ಕ್ರ.ಸಂ		ಸಂಖ್ಯೆ	ಶೇಕಡ
1	ಹೌದು	173	87.00
2	ಇಲ್ಲ	25	12.00
3	ಗೊತ್ತಿಲ್ಲ	2	1.00
	ಒಟ್ಟು	**200**	**100.00**
ಹೌದಾದರೆ, ಯಾವುದರಲ್ಲಿ?			
1	ಸೆನೆಟ್+ಸಿಂಡಿಕೇಟ್+ಶಿಸ್ತು ಪರಿಪಾಲನೆ	138	69.00
2	ಪರೀಕ್ಷೆ ಮತ್ತು ಮೌಲ್ಯಮಾಪನದ ಸರಿಯಾದ ವ್ಯವಸ್ಥೆಗೆ+ಶೈಕ್ಷಣಿಕ ವೇಳಾಪಟ್ಟಿ ತಯಾರಿಕೆ+ವಿದ್ಯಾರ್ಥಿಗಳ ಹಕ್ಕುಗಳ ರಕ್ಷಣೆಗೆ	35	18.00
	ಒಟ್ಟು	**173**	**87.00**

ಕೋಷ್ಟಕ 6.17 ಹೇಳುವಂತೆ ಶೇ. 87 (173) ರಷ್ಟು ವಿದ್ಯಾರ್ಥಿಗಳು ಸೆನೆಟ್, ಸಿಂಡಿಕೇಟ್, ಶಿಸ್ತು ಪರಿಪಾಲನೆ, ಪರೀಕ್ಷೆ ಮತ್ತು ಮೌಲ್ಯಮಾಪನದ ಸರಿಯಾದ ವ್ಯವಸ್ಥೆಗಳಿಗೆ; ಶೈಕ್ಷಣಿಕ ವೇಳಾಪಟ್ಟಿ ತಯಾರಿಕೆ, ವಿದ್ಯಾರ್ಥಿಗಳ ಹಕ್ಕುಗಳ ರಕ್ಷಣೆಗಳಿಗಾಗಿ ಕಾಲೇಜು ಆಡಳಿತಗಳಲ್ಲಿ ವಿದ್ಯಾರ್ಥಿಗಳು ಭಾಗವಹಿಸಬೇಕು ಎಂದು ಹೇಳುತ್ತಾರೆ. ಕೇವಲ ಶೇ. 12 (25) ವಿದ್ಯಾರ್ಥಿಗಳು ಮಾತ್ರ ಈ ಭಾಗವಹಿಸುವಿಕೆಯ ಅಗತ್ಯವಿಲ್ಲ ಎಂದು ಹೇಳುತ್ತಾರೆ.

ಕೋಷ್ಟಕ–6.18: ನೀವು ಯಾವತ್ತಾದರೂ ಜನಾಕರ್ಷಕ ನಾಯಕನಿಂದ ಪ್ರಭಾವಿತರಾಗಿದ್ದೀರಾ?

ಕ್ರ.ಸಂ		ಸಂಖ್ಯೆ	ಶೇಕಡ
1	ಹೌದು	94	47.00
2	ಇಲ್ಲ	106	53.00
	ಒಟ್ಟು	**200**	**100.00**
ಹೌದಾದರೆ, ಯಾವ ನಾಯಕನಿಂದ?			
1	ಅಣ್ಣಾ ಹಜಾರೆ	49	25.00
2	ಡಾ. ಬಿ ಆರ್ ಅಂಬೇಡ್ಕರ್	20	10.00
3	ಡಾ. ಎ ಪಿ ಜೆ ಅಬ್ದುಲ್ ಕಲಾಂ	15	7.00
4	ಗಾಂಧೀಜಿ	10	5.00
	ಒಟ್ಟು	**94**	**47.00**

ಕೋಷ್ಟಕ 6.18 ದೇಶದ ರಾಜಕೀಯ ನೇತಾರರಿಂದ ವಿದ್ಯಾರ್ಥಿಗಳು ಪ್ರಭಾವಿತರಾಗಿದ್ದಾರೆಯೇ ಎಂಬುದರ ಬಗ್ಗೆ ಪ್ರಶ್ನೆಯನ್ನು ಕೇಳಲಾಗಿತ್ತು. ಶೇ. 47 (94) ರಷ್ಟು ವಿದ್ಯಾರ್ಥಿಗಳು ಅಣ್ಣಾ ಹಜಾರೆ, ಬಿ. ಆರ್. ಅಂಬೇಡ್ಕರ್, ಅಬ್ದುಲ್ ಕಲಾಂ ಹಾಗೂ ಗಾಂಧೀಜಿಯವರ ಆದರ್ಶಗಳಿಂದ ಪ್ರಭಾವಿತರಾಗಿದ್ದಾರೆ. ಆದರೆ ಶೇ. 53 (106)ರಷ್ಟು ವಿದ್ಯಾರ್ಥಿಗಳು ಯಾವುದೇ ನಾಯಕರಿಂದ ಪ್ರಭಾವಿತಗೊಂಡಿಲ್ಲ ಎಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಕೋಷ್ಟಕ–6.19: ನಿಮ್ಮ ಕುಟುಂಬದ ಸದಸ್ಯರು ಅಥವಾ ಸಂಬಂಧಿಕರು ಯಾವುದಾದರೂ ಚುನಾಯಿತ ಹುದ್ದೆಯನ್ನು ಅಲಂಕರಿಸಿದ್ದಾರೆಯೇ?

ಕ್ರ.ಸಂ		ಸಂಖ್ಯೆ	ಶೇಕಡ
1	ಹೌದು	8	4.00
2	ಇಲ್ಲ	192	96.00
3	ಗೊತ್ತಿಲ್ಲ	0	0.00
	ಒಟ್ಟು	**200**	**100.00**

ಕೋಷ್ಟಕ 6.19 ಹೇಳುವಂತೆ ಶೇ. 96 ರಷ್ಟು (192) ವಿದ್ಯಾರ್ಥಿಗಳ ಕುಟುಂಬ ಸದಸ್ಯರು ಚುನಾಯಿತ ಹುದ್ದೆಯನ್ನು ಅಲಂಕರಿಸಿದ್ದಾರೆ. ಕೇವಲ ಶೇ. 4 ರಷ್ಟು ವಿದ್ಯಾರ್ಥಿಗಳ ಸಂಬಂಧಿಕರು ಮಾತ್ರ ಇಂತಹ ಅನುಭವವನ್ನು ಪಡೆದುಕೊಂಡಿಲ್ಲ.

ಕೋಷ್ಟಕ–6.20: ನಿಮ್ಮ ಕಾಲೇಜು ಜೀವನದಲ್ಲಿ ಇಲ್ಲಿ ನಮೂದಿಸಿದ ಪಾತ್ರಗಳನ್ನು ನಿರ್ವಹಿಸಿದ್ದೀರಾ?

ಕ್ರ.ಸಂ		ಸಂಖ್ಯೆ	ಶೇಕಡ
1	ಸ್ನೇಹಿತರ ಜೊತೆ ರಾಜಕೀಯ ಚರ್ಚೆ	33	17.00
2	ದಿನ ಪತ್ರಿಕೆ, ಪುಸ್ತಕ ಹಾಗೂ ನಿಯತಕಾಲಿಕಗಳ ರಾಜಕೀಯ ಸುದ್ದಿಯ ಓದುವಿಕೆ ಮತ್ತು ಸ್ವಯಂ ಸೇವಾ ಸಂಘಟನೆಗಳ ಜೊತೆ ಸಮಾಜಸೇವೆ	139	69.00
3	ಶೈಕ್ಷಣಿಕ ಚರ್ಚೆಗಳಲ್ಲಿ ಭಾಗವಹಿಸುವಿಕೆ	14	6.00
4	ರಾಜಕೀಯ ಸಭೆಗಳಲ್ಲಿ ಭಾಗವಹಿಸಿರುವುದು	9	5.00
5	ವಿದ್ಯಾರ್ಥಿಗಳ ಕಲ್ಯಾಣಕ್ಕಾಗಿ ನಾಯಕತ್ವವಹಿಸಿರುವುದು	5	3.00
	ಒಟ್ಟು	**200**	**100.00**

ಕೋಷ್ಟಕ 6.20 ಹೇಳುವಂತೆ ಶೇ. 69 (139) ವಿದ್ಯಾರ್ಥಿಗಳು ದಿನ ಪತ್ರಿಕೆ, ಪುಸ್ತಕ ಹಾಗೂ ನಿಯತಕಾಲಿಕಗಳ ರಾಜಕೀಯ ಸುದ್ದಿಯ ಓದುವಿಕೆ ಮತ್ತು ಸ್ವಯಂ ಸೇವಾ ಸಂಘಟನೆಗಳ ಜೊತೆ ಸಮಾಜಸೇವೆಗಳಂತಹ ಕಾರ್ಯಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಶೇ. 17 (33) ವಿದ್ಯಾರ್ಥಿಗಳು ಸ್ನೇಹಿತರ ಜೊತೆ ರಾಜಕೀಯ ಚರ್ಚೆ, ಶೇ. 6 (14) ಶೈಕ್ಷಣಿಕ ಚರ್ಚೆಗಳಲ್ಲಿ ಭಾಗವಹಿಸುವಿಕೆ, ಶೇ. 5 (9) ರಾಜಕೀಯ ಸಭೆಗಳಲ್ಲಿ ಭಾಗವಹಿಸಿರುವುದು ಹಾಗೂ ಶೇ. 3 (5) ವಿದ್ಯಾರ್ಥಿಗಳ ಕಲ್ಯಾಣಕ್ಕಾಗಿ ನಾಯಕತ್ವವಹಿಸಿರುವ ಬಗ್ಗೆ ವಿಶ್ಲೇಷಿದ್ದಾರೆ.

ಕೋಷ್ಟಕ–6.21: ನಿಮ್ಮ ಕಾಲೇಜು ಜೀವನದಲ್ಲಿ ವಿದ್ಯಾರ್ಥಿ ರಾಜಕೀಯದಲ್ಲಿ ಹೇಗೆ ಆಸಕ್ತಿ ವಹಿಸಿದ್ದೀರಿ? ನಿಮ್ಮ ಅನುಭವಗಳನ್ನು ಹಂಚಿಕೊಳ್ಳುವಿರಾ?

ಕ್ರ.ಸಂ		ಸಂಖ್ಯೆ	ಶೇಕಡ
1	ಪ್ರಚಲಿತ ಸಮಸ್ಯೆಗಳನ್ನು ವಿದ್ಯಾರ್ಥಿ ಸಭೆಗಳಲ್ಲಿ ಚರ್ಚಿಸಿ ನ್ಯಾಯಕ್ಕಾಗಿ ಹೋರಾಡಿದ್ದೇವೆ ಮತ್ತು ವಿದ್ಯಾರ್ಥಿ ದೌರ್ಜನ್ಯ, ಅತ್ಯಾಚಾರ ತಡೆಗಟ್ಟುವ ಧರಣಿಯಲ್ಲಿ ಭಾಗವಹಿಸಿದ್ದೇವೆ	113	57.00
2	ವಿದ್ಯಾರ್ಥಿಗಳ ಹಕ್ಕನ್ನು ಕಾಪಾಡಲು ಮತ್ತು ಸಮಾಜದ ಸುಧಾರಣೆಗೆ ಒತ್ತು ಕೊಟ್ಟಿದ್ದೇವೆ, ಎನ್. ಎಸ್. ಎಸ್ ಸಮಾಜ ಸೇವೆಯಲ್ಲಿ ಮತ್ತು ವಿದ್ಯಾರ್ಥಿ ಸಂಘಗಳ ಜೊತೆಗೆ ಭಾಗವಹಿಸುವಿಕೆ	40	20.00
3	ಚುನಾವಣೆಯಲ್ಲಿ ಭಾಗವಹಿಸಿ ಉತ್ತಮ ನಾಯಕರನ್ನು ಆರಿಸುವಲ್ಲಿ ಪ್ರಯತ್ನಿಸಿದ್ದೇವೆ ಮತ್ತು ಕಾಲೇಜು ನಾಯಕತ್ವವನ್ನು ವಹಿಸಿದ್ದೇವೆ.	28	13.00
4	ಉತ್ತಮ ಶಿಕ್ಷಕ ವೃಂದ, ವ್ಯವಸ್ಥಿತ ಆಡಳಿತ ಮತ್ತು ವಿದ್ಯಾರ್ಥಿಗಳ ಪ್ರಾತಿನಿಧಿತ್ವ, ಭಾಗವಹಿಸುವಿಕೆಗೆ ಶ್ರಮಿಸಿದ್ದೇವೆ	19	10.00
	ಒಟ್ಟು	**200**	**100.00**

ಕೋಷ್ಟಕ 6.21 ವಿದ್ಯಾರ್ಥಿಗಳ ರಾಜಕೀಯ ಆಸಕ್ತಿಗಳ ಬಗ್ಗೆ ವಿವರಿಸುತ್ತದೆ. ಶೇ. 57 ರಷ್ಟು (113) ವಿದ್ಯಾರ್ಥಿಗಳು ಪ್ರಚಲಿತ ಸಮಸ್ಯೆಗಳನ್ನು ವಿದ್ಯಾರ್ಥಿ ಸಭೆಗಳಲ್ಲಿ ಚರ್ಚಿಸಿ ನ್ಯಾಯಕ್ಕಾಗಿ ಹೋರಾಟ ನಡೆಸಿರುತ್ತಾರೆ ಮತ್ತು ವಿದ್ಯಾರ್ಥಿ ದೌರ್ಜನ್ಯ, ಅತ್ಯಾಚಾರ ತಡೆಗಟ್ಟುವ ಧರಣಿಯಲ್ಲಿ ಭಾಗವಹಿಸಿರುವುದರ ಬಗ್ಗೆ ವಿವರಿಸುತ್ತಾರೆ. ಶೇ. 20 ರಷ್ಟು (40) ವಿದ್ಯಾರ್ಥಿಗಳು ವಿದ್ಯಾರ್ಥಿಗಳ

ಹಕ್ಕನ್ನು ಕಾಪಾಡಲು ಮತ್ತು ಸಮಾಜದ ಸುಧಾರಣೆಗೆ ಒತ್ತು ನೀಡಿ ಎನ್. ಎಸ್. ಎಸ್, ಸಮಾಜ ಸೇವೆ ಮತ್ತು ವಿದ್ಯಾರ್ಥಿ ಸಂಘಗಳ ಜೊತೆಗೆ ಭಾಗವಹಿಸುವಿಕೆಯಲ್ಲಿ ತೊಡಗಿಸಿಕೊಂಡಿರುತ್ತಾರೆ. ಹಾಗೆಯೇ ಶೇ 13 (28) ಚುನಾವಣೆಯಲ್ಲಿ ಭಾಗವಹಿಸಿ ಉತ್ತಮ ನಾಯಕರನ್ನು ಆರಿಸುವಲ್ಲಿ ಪ್ರಯತ್ನ ಮತ್ತು ಕಾಲೇಜು ನಾಯಕತ್ವವನ್ನು ವಹಿಸಿಕೊಂಡಿರುವುದು; ಶೇ. 10 (19) ಉತ್ತಮ ಶಿಕ್ಷಕ ವೃಂದ, ವ್ಯವಸ್ಥಿತ ಆಡಳಿತ ಮತ್ತು ವಿದ್ಯಾರ್ಥಿಗಳ ಪ್ರಾತಿನಿಧಿತ್ವ, ಭಾಗವಹಿಸುವಿಕೆಗೆ ಶ್ರಮಿಸಿದ್ದರ ಕುರಿತು ಹೇಳುತ್ತಾರೆ.

ಈ ಮೇಲಿನ ವಿಶ್ಲೇಷಣೆಯು ಶೈಕ್ಷಣಿಕ, ಸಾಮಾಜಿಕ ಮತ್ತು ರಾಜಕೀಯ ಸಂಗತಿಗಳ ಬಗ್ಗೆ ವಿದ್ಯಾರ್ಥಿಗಳ ಮನೋಸ್ಥಿತಿ ಮತ್ತು ಗ್ರಹಿಕೆಯನ್ನು ತಿಳಿಸುತ್ತದೆ. ಈ ಮೇಲಿನ ಅಂಕಿಸಂಖ್ಯೆಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿದಾಗ ಈ ಕೆಳಗಿನ ಅಂಶಗಳು ನಮ್ಮ ಗಮನಕ್ಕೆ ಬರುತ್ತವೆ. ಶೈಕ್ಷಣಿಕ ವಿಷಯಗಳಿಗೆ ಸಂಬಂಧಿಸಿದಂತೆ ವಿದ್ಯಾರ್ಥಿಗಳ ಅಭಿಪ್ರಾಯಗಳು ಈ ರೀತಿಯಾಗಿವೆ. ಗುಣಮಟ್ಟದ ಬದುಕು ನಿರ್ವಹಿಸಿವುದು, ಸಮಾಜದ ಉಪಯುಕ್ತ ಸದಸ್ಯನಾಗುವುದು, ಹಾಗೂ ನೈತಿಕ ಚಾರಿತ್ರ್ಯ ಉತ್ತಮ ಪಡಿಸುವುದು ಶಿಕ್ಷಣದ ಉದ್ದೇಶಗಳಾಗಿರಬೇಕು. ಇದರಲ್ಲಿ ಗುಣಮಟ್ಟದ ಬದುಕು ನಿರ್ವಹಿಸುವುದಕ್ಕೆ ಮೊದಲ ಪ್ರಾಶಸ್ತ್ಯ ವಿದ್ಯಾರ್ಥಿಗಳು ನೀಡಿರುತ್ತಾರೆ. ಆದರೆ ಪ್ರಸ್ತುತ ಶಿಕ್ಷಣ ವ್ಯವಸ್ಥೆಯು ಈ ಉದ್ದೇಶಗಳನ್ನು ಈಡೇರಿಸುವಲ್ಲಿ ವಿಫಲವಾಗಿದೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿರುತ್ತಾರೆ. ಶಿಕ್ಷಣದ ವ್ಯಾಪಾರಿಕರಣ, ಭ್ರಷ್ಟಾಚಾರ, ಶಿಕ್ಷಣಕ್ಕೆ ಸರಿಹೊಂದುವ ಉದ್ಯೋಗದ ಕೊರತೆ, ಹಣಕಾಸು ಮತ್ತು ಆಡಳಿತದ ಕೊರತೆ, ವಿದ್ಯಾರ್ಥಿಗಳ ಸಂಖ್ಯೆಯಲ್ಲಿ ಹೆಚ್ಚಳ ಮತ್ತು ಶಿಕ್ಷಣದ ರಾಜಕೀಯಕರಣ ಶಿಕ್ಷಣದ ಗುಣಮಟ್ಟ ಕುಸಿಯಲು ಪ್ರಮುಖ ಕಾರಣಗಳು ಎಂದು ಅವರು ಗುರುತಿಸುತ್ತಾರೆ. ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ಮಾಡುವುದು ಶಿಕ್ಷಕರ ಮುಖ್ಯ ಉದ್ದೇಶವಾಗಿರಬೇಕು. ಕೇವಲ ಜೀವನಾಧಾರದ ಸಲುವಾಗಿ ಶಿಕ್ಷಕ ವೃತ್ತಿಯನ್ನು ಆಯ್ಕೆಮಾಡಿಕೊಳ್ಳಬಾರದು ಎಂಬ ಅಭಿಪ್ರಾಯವನ್ನು ವಿದ್ಯಾರ್ಥಿಗಳು ವ್ಯಕ್ತಪಡಿಸುತ್ತಾರೆ. ಶಿಕ್ಷಕರ ನೇಮಕಾತಿ/ ಪದೋನ್ನತಿಯಲ್ಲಿ ವಿದ್ಯಾರ್ಥಿಗಳ ಅಭಿಪ್ರಾಯವನ್ನು ಪಡೆಯಬೇಕು. ಏಕೆಂದರೆ ವಿದ್ಯಾರ್ಥಿಗಳು ಕೂಡ ಶಿಕ್ಷಣದ ಭಾಗವಾಗಿರುವುದರಿಂದ ಅವರ ಅನಿಸಿಕೆ, ಅಭಿಪ್ರಾಯ ಪಡೆಯುವುದು ಸೂಕ್ತ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ.

ಇನ್ನೂ ಸಾಮಾಜಿಕ ವಿಷಯಗಳಿಗೆ ಸಂಬಂಧಿಸಿದಂತೆ ವಿದ್ಯಾರ್ಥಿಗಳು ಸ್ವಲ್ಪ ಮಟ್ಟಿಗೆ ಗೊಂದಲದಲ್ಲಿರುವುದನ್ನು ನಾವು ನೋಡಬಹುದು. ಸಂಪ್ರದಾಯಿಕ ಮತ್ತು ಆಧುನಿಕ ಇವುಗಳ ಆಯ್ಕೆಯಲ್ಲಿ ವಿದ್ಯಾರ್ಥಿಗಳ ನಿಲುವು ಸ್ಪಷ್ಟವಾಗಿಲ್ಲ. ಕೆಲವು ಸಾಮಾಜಿಕ ವಿಷಯಗಳ ಕುರಿತು ಸಂಪ್ರದಾಯಿಕ ವಿಚಾರಗಳನ್ನು ಇಟ್ಟುಕೊಂಡರೆ, ಇನ್ನೂ ಕೆಲವು ಸಾಮಾಜಿಕ ಸಂಗತಿಗಳ ಕುರಿತು ಆಧುನಿಕ ವಿಚಾರಗಳನ್ನು ಇಟ್ಟುಕೊಂಡಿರುವುದು ಈ ಅಧ್ಯಯನದಿಂದ ಸ್ಪಷ್ಟವಾಗುತ್ತದೆ. ಕೌಟಂಬಿಕ ಪದ್ದತಿಗಳು ಮತ್ತು ಸಂಪ್ರದಾಯಗಳು ಈ ವಿಷಯಕ್ಕೆ ಬಂದಾಗ

ಬಹುಸಂಖ್ಯಾತ ವಿದ್ಯಾರ್ಥಿಗಳು ಕುಟುಂಬದ ಸಂಪ್ರದಾಯಗಳನ್ನು ಪಾಲಿಸಬೇಕು ಎಂಬ ನಿಲುವನ್ನು ವ್ಯಕ್ತಪಡಿಸುತ್ತಾರೆ. ಹಾಗೆಯೇ, ಬಹುಸಂಖ್ಯಾತ ವಿದ್ಯಾರ್ಥಿಗಳು ಕೌಟುಂಬಿಕ ಜೀವನಕ್ಕೆ ಹೆಚ್ಚು ಒತ್ತು ನೀಡಿದ್ದಾರೆ. ವಿದ್ಯಾರ್ಥಿಯಾಗಿ ಸಮಾಜದಲ್ಲಿ ನಿಮ್ಮ ಪಾತ್ರದ ಕುರಿತು ಕೇಳಿದ ಪ್ರಶ್ನೆಗೆ ಬಹುಸಂಖ್ಯಾತ ವಿದ್ಯಾರ್ಥಿಗಳು ಸಮಾಜದ ಜವಾಬ್ದಾರಿ ನಾಗರಿಕನಾಗುವುದು ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ. ದೇಶದ ನಿಜವಾದ ಸಮಸ್ಯೆಗಳ ಬಗ್ಗೆ ವಿದ್ಯಾರ್ಥಿಗಳ ಗಮನಸೆಳೆದಾಗ, ಬಡತನ, ಭ್ರಷ್ಟಾಚಾರ, ನಾಗರಿಕ ಜಡತ್ವ, ಜಾತಿ, ಧರ್ಮ, ಸಂಪ್ರದಾಯ ಹಾಗೂ ಸರಿಯಾದ ನಾಯಕತ್ವದ ಕೊರತೆ ಇಂದು ದೇಶ ಎದುರಿಸುತ್ತಿರುವ ನಿಜವಾದ ಸಮಸ್ಯೆಗಳು ಎಂದು ಅವರು ಹೇಳುತ್ತಾರೆ. ಇದರ ಜೊತೆಗೆ ಸಮಾಜದ ಪಿಡುಗುಗಳಾದ ಲಿಂಗತಾರತಮ್ಯ, ಜಾತಿ–ಧರ್ಮ ತಾರತಮ್ಯ, ಜಾತಿ ಆಧಾರಿತ ಸಂಪ್ರದಾಯಗಳು, ಅತ್ಯಾಚಾರ ಇವುಗಳನ್ನು ಹೋಗಲಾಡಿಸಬೇಕು ಎಂಬ ಅಭಿಪ್ರಾಯವನ್ನು ವಿದ್ಯಾರ್ಥಿಗಳು ವ್ಯಕ್ತಪಡಿಸುತ್ತಾರೆ.

ಇನ್ನೂ ರಾಜಕೀಯ ಸಂಗತಿಗಳ ಬಗ್ಗೆ ವಿದ್ಯಾರ್ಥಿಗಳ ನಿಲುವುಗಳು ಈ ರೀತಿಯಾಗಿವೆ. ರಾಜಕೀಯ ಪ್ರಜ್ಞೆಗೆ ಸಂಬಂಧಿಸಿದಂತೆ, ನಾಗರಿಕ ಹಕ್ಕು ಮತ್ತು ಕರ್ತವ್ಯಗಳ ಅರಿವು ಮೊದಲನೆಯ ಸ್ಥಾನ ಪಡೆದುಕೊಂಡರೆ, ನಾಗರಿಕ ಬೇಡಿಕೆಗಳು, ಉತ್ತಮ ಆಡಳಿತ ವ್ಯವಸ್ಥೆ ಹಾಗೂ ಸಾಮಾಜಿಕ ನ್ಯಾಯ ಕ್ರಮವಾಗಿ ಎರಡನೆ, ಮೂರನೆ ಮತ್ತು ನಾಲ್ಕನೆಯ ಸ್ಥಾನವನ್ನು ಪಡೆದುಕೊಂಡಿವೆ. ಕಾಲೇಜು ಆಡಳಿತ ಉತ್ತಮವಾಗಿದೆ ಎಂಬ ಅಭಿಪ್ರಾಯವನ್ನು ಬಹುಸಂಖ್ಯಾತ ವಿದ್ಯಾರ್ಥಿಗಳು ತಿಳಿಸಿರುತ್ತಾರೆ. ಕಾಲೇಜು/ವಿಶ್ವವಿದ್ಯಾಲಯದ ಅಧಿಕಾರಿಗಳು ವಿದ್ಯಾರ್ಥಿಗಳ ಸಮಸ್ಯೆಗಳಿಗೆ ಸ್ಪಂದಿಸುತ್ತಾರೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ. ವಿದ್ಯಾರ್ಥಿಗಳನ್ನು ರಾಜಕೀಯಕರಣಗೊಳಿಸುವಲ್ಲಿ ಶಿಕ್ಷಕರ ಪಾತ್ರ ಮಹತ್ವದಾಗಿದೆ ಎಂದು ಬಹುಸಂಖ್ಯಾತ ವಿದ್ಯಾರ್ಥಿಗಳು ಹೇಳುತ್ತಾರೆ. ಕಾಲೇಜುಗಳಲ್ಲಿ ಸ್ನೇಹಿತರ ಸಂಪರ್ಕ ರಾಜಕೀಯ ಚಟುವಟಿಕೆಗಳಿಗೆ ಪ್ರಮುಖವಾದ ಪೂರಕ ಅಂಶವಾಗಿದೆ ಎಂಬುದು ವಿದ್ಯಾರ್ಥಿಗಳ ಅಭಿಮತವಾಗಿದೆ. ಕಾಲೇಜುಗಳಲ್ಲಿ ವಿದ್ಯಾರ್ಥಿ ಚುನಾವಣೆಗಳನ್ನು ಕಡ್ಡಾಯಗೊಳಿಸಬೇಕೆ ಎಂಬ ಪ್ರಶ್ನೆಗೆ ಬಹುಸಂಖ್ಯಾತ ವಿದ್ಯಾರ್ಥಿಗಳು ಹೌದು ಎಂಬ ಉತ್ತರವನ್ನು ನೀಡಿದ್ದಾರೆ. ಇದರಿಂದ ವಿದ್ಯಾರ್ಥಿಗಳಲ್ಲಿ ಪ್ರಜಾಸತ್ತಾತ್ಮಕ ಮೌಲ್ಯಗಳನ್ನು ಅವರಲ್ಲಿ ಬೆಳೆಸಲು ಸಾಧ್ಯವಾಗುತ್ತದೆ ಎಂದು ಅವರು ಹೇಳುತ್ತಾರೆ. ಬಹುಸಂಖ್ಯಾತ ವಿದ್ಯಾರ್ಥಿಗಳು ಜಾತ್ಯಾತೀತ ಧೋರಣೆಗಳಿಂದ ಪ್ರಭಾವಿತರಾಗಿದ್ದಾರೆ. ಕಾಲೇಜು ಜೀವನದಲ್ಲಿ ಯಾವ ಪಾತ್ರಗಳನ್ನು ನಿರ್ವಹಿಸಿದ್ದಿರಿ ಎಂಬ ವಿಷಯದ ಬಗ್ಗೆ ಅವರ ಜೊತೆ ಚರ್ಚಿಸಿದಾಗ ಸ್ನೇಹಿತರ ಜೊತೆ ರಾಜಕೀಯ ಚರ್ಚೆ, ದಿನಪತ್ರಿಕೆ, ಪುಸ್ತಕ ಹಾಗೂ ನಿಯತಕಾಲಿಕೆಗಳ ರಾಜಕೀಯ ಸುದ್ದಿಯ ಓದುವಿಕೆ, ರಾಜಕೀಯ ಸಭೆಗಳಲ್ಲಿ ಭಾಗವಹಿಸುವುದು, ಶೈಕ್ಷಣಿಕ ಚರ್ಚೆಗಳಲ್ಲಿ ಭಾಗವಹಿಸುವಿಕೆ ಇವೆ ಮೊದಲಾದ ಪಾತ್ರಗಳನ್ನು ನಿರ್ವಹಿಸಿದ್ದೇವೆ ಎಂದು ಅವರು ತಿಳಿಸುತ್ತಾರೆ.

ಪರಾಮರ್ಶನ ಗ್ರಂಥಗಳು:

1. ಡೆವಿಡ್ ಜಿ. ಮೈಯರ್ಸ್, "ಸೊಶಿಯಲ್ ಸೈಕಾಲೋಜಿ" ಇನ್ ಬಿನೋದಾನಂದ ಝಾ, " ಸ್ಟುಡೆಂಟ್ ಆರ್ಗ್ನೈಜೇಷನ್ ಆಂಡ್ ಪೊಲಿಟಿಕ್ಸ್" ಇಂಟರ್-ಇಂಡಿಯಾ ಪಬ್ಲಿಕೇಷನ್, ನ್ಯೂ ಡೆಲ್ಲಿ, 1998. ಪು-94-95

2. ಜಿ. ಡಿ. ಬೋರ್, "ಜನರಲ್ ಸೈಕಾಲೋಜಿ" ಇನ್ ಬಿನೋದಾನಂದ ಝಾ, "ಸ್ಟುಡೆಂಟ್ ಆರ್ಗ್ನೈಜೇಷನ್ ಆಂಡ್ ಪೊಲಿಟಿಕ್ಸ್" ಇಂಟರ್-ಇಂಡಿಯಾ ಪಬ್ಲಿಕೇಷನ್, ನ್ಯೂ ಡೆಲ್ಲಿ, 1998. ಪು-94-95

3. ಬಿನೋದಾನಂದ ಝಾ, " ಸ್ಟುಡೆಂಟ್ ಆರ್ಗ್ನೈಜೇಷನ್ ಆಂಡ್ ಪೊಲಿಟಿಕ್ಸ್" ಇಂಟರ್-ಇಂಡಿಯಾ ಪಬ್ಲಿಕೇಷನ್, ನ್ಯೂ ಡೆಲ್ಲಿ, 1998. ಪು-97-115

4. ಡಿ.ಕೆ.ಮೊಹಂತಿ 'ಹೈಯರ್ ಎಜುಕೇಶನ್ ಆಂಡ್ ಸ್ಟುಡಂಟ್ ಪಾಲಿಟಿಕ್ಸ್ ಇನ್ ಇಂಡಿಯಾ' ಅನಮೋಲ್ ಪಬ್ಲಿಕೇಷನ್ ಪ್ರೈವೇಟ್ ಲಿಮಿಟೆಡ್, ನ್ಯೂ ಡೆಲ್ಲಿ, 1999. ಪು-204-205

5. ಎಸ್.ಕೆ.ಪಟ್ನಾಯಕ್, 'ಸ್ಟುಡೆಂಟ್ ಪೊಲಿಟಿಕ್ಸ್ ಆಂಡ್ ವೋಟಿಂಗ್ ಭಿಹೇವಿಯರ್', ಕನ್ಸಪ್ಟ್ ಪಬ್ಲಿಶಿಂಗ್ ಕಂಪನಿ, ನ್ಯೂ ಡೆಲ್ಲಿ, 1981. ಪು-132

6. ಮನೋಜ ಫುಕಾನ್, " ಸ್ಟುಡೆಂಟ್ ಪೊಲಿಟಿಕ್ಸ್ ಇನ್ ಆಸ್ಸಾಂ" ಅನ್‌ಶಾಹ ಪಬ್ಲಿಷಿಂಗ್ ಹೌಸ್, ನ್ಯೂ ಡೆಲ್ಲಿ, 2005. ಪು- 63

7. ರಶೀದ ಅಲಿ ಸೈಯದ್, " ಕಲ್ಚರ್ ಆಫ್ ಸ್ಟುಡೆಂಟ್ ಪೊಲಿಟಿಕ್ಸ್" ಇಂಟರ್-ಇಂಡಿಯಾ ಪಬ್ಲಿಕೇಷನ್ಸ್, ನ್ಯೂ ಡೆಲ್ಲಿ, 1997. ಪು-114

8. ಹರಿದ್ವಾರ್ ಸಿಂಗ್, " ಡೆಮೊಕ್ರ್ಯಾಟಿಕ್ ಓರಿಯೆಂಟೇಷನ್ ಆಫ್ ಸ್ಟುಡೆಂಟ್ಸ್ ಇನ್ ಇಂಡಿಯಾ" ಕನ್ಸಪ್ಟ್ ಪಬ್ಲಿಶಿಂಗ್ ಕಂಪನಿ, ನ್ಯೂ ಡೆಲ್ಲಿ, 1983. ಪು-122

ಅಧ್ಯಾಯ – 7

ಅಧ್ಯಯನದ ಫಲಿತಗಳು ಮತ್ತು ಸಲಹೆಗಳು

ಮಾಹಿತಿದಾರರ ಲಿಂಗ ಕುರಿತು ಮಾಹಿತಿಯನ್ನು ಕಲೆಹಾಕಲಾಯಿತು. ಒಟ್ಟು 200 ವಿದ್ಯಾರ್ಥಿಗಳನ್ನು ಸಮೀಕ್ಷಿಸಲಾಗಿದ್ದು, ಅವರಲ್ಲಿ ಶೇ. 91 ರಷ್ಟು ಗಂಡು ಮತ್ತು ಶೇ. 9 ರಷ್ಟು (18) ಹೆಣ್ಣು ಆಗಿದ್ದಾರೆ. ಈ ಅಂಕಿ-ಅಂಶವು ಮಹಿಳೆಯರಿಗಿಂತಲೂ ಪುರುಷರು ಹೆಚ್ಚು ಹೆಚ್ಚು ಸಾರ್ವಜನಿಕವಾಗಿ ಸಂಘಟನೆಯಲ್ಲಿ ತೊಡಗಿಸಿಕೊಳ್ಳುತ್ತಾರೆ ಎನ್ನುವುದನ್ನು ಪ್ರತಿಫಲಿಸುತ್ತದೆ. ಇದರಿಂದ ತಿಳಿದುಬರುವದೇನೆಂದರೆ ಪುರುಷರ ಪ್ರಾಬಲ್ಯ ಸಾಮಾಜಿಕ, ರಾಜಕೀಯ ಹಾಗೂ ಆರ್ಥಿಕ ವಲಯಗಳಲ್ಲಿ ಮುಂದುವರೆದಿದೆ. ಇದರಿಂದ ವಿದ್ಯಾರ್ಥಿ ಸಂಘಟನೆಗಳೂ ಹೊರತಾಗಿಲ್ಲ ಎಂಬುವುದು ಅಧ್ಯಯನದಿಂದ ಸ್ಪಷ್ಟವಾಗುತ್ತದೆ. ವಿದ್ಯಾರ್ಥಿ ಸಮೂಹದಲ್ಲಿಯೂ ಈ ರೀತಿಯ ತೊಡಗಿಸಿಕೊಳ್ಳುವಿಕೆ ಅವರ ಭವಿಷ್ಯದ ನಡೆಯನ್ನು ಪರೋಕ್ಷವಾಗಿ ಪ್ರತಿನಿಧಿಸುತ್ತದೆ.

ಮಾಹಿತಿದಾರರ ವಯಸ್ಸು ಕುರಿತು ಅವಲೋಕಿಸಿದಾಗ ಕಂಡುಬಂದ ವಿವರಣೆಗಳು ಹೀಗಿವೆ. ಸಂಘಟನೆಯಲ್ಲಿ ತೊಡಗಿಸಿಕೊಳ್ಳುವ ವ್ಯಕ್ತಿಯ ವಯಸ್ಸು ಆತ ಅಥವಾ ಆಕೆಯ ಪಾಲ್ಗೊಳ್ಳುವಿಕೆಯ ಮೇಲೆ ಪ್ರಭಾವ ಬೀರುತ್ತದೆ. ಕೋಷ್ಟಕ ಹೇಳುವಂತೆ, 200 ವಿದ್ಯಾರ್ಥಿಗಳೂ 15 ರಿಂದ 25 ವಯಸ್ಸಿನ ಗುಂಪಿಗೆ ಸೇರಿದ್ದು, ಹೆಚ್ಚು ಕ್ರಿಯಾಶೀಲತೆಯಿಂದ ಕಾರ್ಯವೆಸಗುತ್ತಿರುವ ಸಂಭವ ಹೆಚ್ಚು. ಇದು ಈ ಗುಂಪಿನ ವಿಶೇಷತೆಯೂ ಹೌದು.

ಮಾಹಿತಿದಾರರ ವಿದ್ಯಾರ್ಹತೆ ಯಾವುದೇ ಸಂಘಟನೆ ಹೆಚ್ಚು ಕ್ರಿಯಾಶೀಲತೆಯಿಂದಿರಲು ಕಾರಣವಾಗುತ್ತದೆ. ವಯಸ್ಸಿನೊಡನೆ ವಿದ್ಯಾರ್ಹತೆಯೂ ಮುಖ್ಯವಾಗುತ್ತದೆ. ಅಧ್ಯಯನದಿಂದ ತಿಳಿದುಬರುವುದೇನೆಂದರೆ ಬಿ.ಎ. ಯಲ್ಲಿ (ಶೇ. 30) ಓದುತ್ತಿರುವ ವಿದ್ಯಾರ್ಥಿಗಳು ಹೆಚ್ಚಾಗಿ ತಮ್ಮನ್ನು ಸಂಘಟನೆಗಳಲ್ಲಿ ತೊಡಗಿಸಿಕೊಂಡಿರುವುದನ್ನು ಗಮನಿಸಬಹುದು. ಈ ಅವಧಿಯು ವಿದ್ಯಾರ್ಥಿಗಳಿಗೆ ಉತ್ತಮ ವಾತಾವರಣವನ್ನು ಕಾಲೇಜುಗಳಲ್ಲಿ ದೊರಕುವಂತೆ ಮಾಡಿದ್ದು, ಸಂಘಟನೆಯನ್ನು ಹೆಚ್ಚು ಅರ್ಥ ಮಾಡಿಕೊಳ್ಳುವಲ್ಲಿ ವಿದ್ಯಾರ್ಥಿ ಸಮೂಹ ಸಫಲವಾಗಿದೆ. ಕಲಾ ವಿಭಾಗದ ವಿದ್ಯಾರ್ಥಿಗಳು ಇಂತಹ ಸಂಘಟನೆಯಲ್ಲಿ ಹೆಚ್ಚಾಗಿ ತೊಡಗಿಸಿಕೊಂಡಿರುವುದು ಇದರ ಇನ್ನೊಂದು ಆಯಾಮ. ವಿಜ್ಞಾನ ಮತ್ತು ವಾಣಿಜ್ಯ ವಿಭಾಗಳಿಗೆ ಹೋಲಿಸಿದರೆ, ಶೇ. 72ರಷ್ಟು ವಿದ್ಯಾರ್ಥಿಗಳು ಕಲಾ ನಿಕಾಯದವರಾಗಿದ್ದಾರೆ. ಇದರಿಂದ ತಿಳಿದುಬರುವದೇನೆಂದರೆ ಕಲಾ ವಿಭಾಗದ ವಿದ್ಯಾರ್ಥಿಗಳು ಸಾಮಾಜಿಕ ಸಮಸ್ಯೆಗಳಿಗೆ ಸ್ಪಂದಿಸುವ, ಅವುಗಳೊಂದಿಗೆ ಮುಖಾಮುಖಿಯಾಗುವ ಮನೋಧರ್ಮವನ್ನು ಹೊಂದಿದ್ದಾರೆ. ಉನ್ನತ ವ್ಯಾಸಂಗದವರು ಸಂಘಟನೆಯಲ್ಲಿ ತೊಡಗಿಸಿಕೊಂಡಿರುವ ಪ್ರಮಾಣ ಶೇ. 3. ವೃತ್ತಿಪರ ಶಿಕ್ಷಣದಲ್ಲಿ ತೊಡಗಿಸಿಕೊಂಡ

ವಿದ್ಯಾರ್ಥಿಗಳು ಸಾಮಾಜಿಕ ಹಾಗೂ ರಾಜಕೀಯ ವಿದ್ಯಮಾನಗಳಿಂದ ದೂರವಾಗಿರುತ್ತಾರೆ ಎಂಬುವುದು ಈ ಅಧ್ಯಯನದಿಂದ ತಿಳಿದುಬರುತ್ತದೆ.

ಮಾಹಿತಿದಾರರ ಧರ್ಮ ಆಯ್ದ ವಿದ್ಯಾರ್ಥಿ ಸಂಘಟನೆಗಳಲ್ಲಿ ಶೇ. 94ರಷ್ಟು ಹಿಂದೂ ಸಮುದಾಯಕ್ಕೆ ಸೇರಿದವರಾಗಿದ್ದು, ಶೇ. 6 ರಷ್ಟು ಮುಸ್ಲಿಂ ಸಮುದಾಯಕ್ಕೆ ಒಳಪಟ್ಟವರಾಗಿದ್ದಾರೆ. ಇದು ಆಯ್ದ ಕಾಲೇಜುಗಳ ಪರಿಸರದಲ್ಲಿ ವಾಸಿಸುತ್ತಿರುವ ಸಮುದಾಯ ಮತ್ತು ಅಲ್ಲಿಯ ಸಾಮಾಜಿಕ ಹಿನ್ನೆಲೆಯನ್ನು ಪ್ರತಿನಿಧಿಸುತ್ತದೆ.

ಮಾಹಿತಿದಾರರ ವೈವಾಹಿಕ ಸ್ಥಾನಮಾನ ಸಾಮಾನ್ಯ ತಿಳುವಳಿಕೆ ಮತ್ತು ಜ್ಞಾನ ಹೇಳುವಂತೆ, ವಿದ್ಯಾರ್ಥಿ ಸಮುದಾಯವು ಹೆಚ್ಚಾಗಿ ಅವಿವಾಹಿತರಾಗಿರುತ್ತಾರೆ. ಶೇ. 100ರಷ್ಟು ವಿದ್ಯಾರ್ಥಿಗಳು ಅವಿವಾಹಿತರಾಗಿದ್ದು, ಅವರು ವಿದ್ಯಾರ್ಥಿ ಸಂಘಟನೆಯಲ್ಲಿ ತೊಡಗಿಸಿಕೊಂಡಿದ್ದಾರೆ. ಇದು ಸಾರ್ವಜನಿಕ ಮತ್ತು ಸಾಮಾಜಿಕವಾಗಿ ವಿದ್ಯಾರ್ಥಿಗಳಿಗೆ ಹೆಚ್ಚಿನ ಪ್ರೋತ್ಸಾಹವನ್ನು ಕೊಡುತ್ತದೆ. ಈ ಮೂಲಕ ರಾಜಕೀಯ, ಸಾಮಾಜೀಕರಣದ ಮೌಲ್ಯಗಳು ಹೆಚ್ಚು ಗಟ್ಟಿಗೊಳ್ಳುವುದಕ್ಕೆ ಅವಕಾಶ ಸಿಗುತ್ತದೆ. ಎರಡನೆಯದಾಗಿ ಅನಿಷ್ಟ ಪದ್ಧತಿಯಾಗಿದ್ದ ಬಾಲ್ಯವಿವಾಹ ಗಣನೀಯವಾಗಿ ಕಡಿಮೆಯಾಗಿರುವುದು ಈ ಅಧ್ಯಯನ ಸ್ಪಷ್ಟಪಡಿಸುತ್ತದೆ.

ಮಾಹಿತಿದಾರರ ವಾಸಸ್ಥಾನ ಸಮೀಕ್ಷೆಗೆ ಒಳಪಡಿಸಿದ ಕಾಲೇಜುಗಳ ವಿದ್ಯಾರ್ಥಿಗಳು ಹೆಚ್ಚಾಗಿ ನಗರ ಪ್ರದೇಶದಿಂದ ಬಂದಿರುವವರು. ಸಮೀಕ್ಷೆ ವಿವರಿಸುವಂತೆ, ಶೇ 85ರಷ್ಟು ವಿದ್ಯಾರ್ಥಿಗಳು ನಗರದ ಸುತ್ತಮುತ್ತ ವಾಸಮಾಡುತ್ತಿದ್ದು, ಶೇ. 1ರಷ್ಟು ಅರೆನಗರ ಮತ್ತು ಶೇ. 12 ರಷ್ಟು ಗ್ರಾಮೀಣ ಪ್ರದೇಶಗಳಲ್ಲಿ ವಾಸಮಾಡುತ್ತಿದ್ದಾರೆ. ವಿದ್ಯಾರ್ಥಿ ಸಂಘಟನೆಯಲ್ಲಿ ತೊಡಗಿಸಿಕೊಂಡಿರುವ ಶೇ. 2ರಷ್ಟು ವಿದ್ಯಾರ್ಥಿಗಳು ವಸತಿ ನಿಲಯಗಳಲ್ಲಿ ವಾಸಮಾಡಿಕೊಂಡಿರುವುದನ್ನೂ ಗಮನಿಸಬಹುದು. ನಗರ ಪ್ರದೇಶದ ವಿದ್ಯಾರ್ಥಿಗಳಿಗೆ ಹೆಚ್ಚಾಗಿ ಆಧುನಕ ಸೌಲಭ್ಯಗಳು ಸುಲಭವಾಗಿ ಎಟಕುತ್ತವೆ. ಉದಾಹರಣೆಗೆ, ಮೊಬೈಲ್, ಇಂಟರ್‌ನೆಟ್, ಪತ್ರಿಕೆಗಳು, ಕಂಪ್ಯೂಟರ್ ಹಾಗೂ ಇತರೇ ಸಾಮಾಜಿಕ ಜಾಲತಾಣಗಳು ಯುವ ಸಮುದಾಯವನ್ನು ಆಕರ್ಷಿಸುತ್ತವೆ. ಇದರ ಪ್ರಭಾವದಿಂದಾಗಿ, ವಿದ್ಯಾರ್ಥಿಗಳು ಕಾಲೇಜುಗಳ ಸಂಘಟನೆಗಳಲ್ಲಿ ತೊಡಗಿಸಿಕೊಳ್ಳುತ್ತಾರೆ. ಅಷ್ಟೆ ಅಲ್ಲದೆ ಸಮೂಹ ಮಾಧ್ಯಮಗಳು ವಿದ್ಯಾರ್ಥಿಗಳ ರಾಜಕೀಯ ಸಾಮಜೀಕರಣದಲ್ಲಿ ಬಹು ಮುಖ್ಯ ಪಾತ್ರವಹಿಸುತ್ತಿದೆ ಎಂಬುವುದು ಈ ಅಧ್ಯಯನದಿಂದ ಸ್ಪಷ್ಟವಾಗುತ್ತದೆ.

ಮಾಹಿತಿದಾರರ ಪೋಷಕರ ಶೈಕ್ಷಣಿಕ ಮಟ್ಟ ವಿದ್ಯಾರ್ಥಿಗಳ ಸಾಮಾಜಿಕ ಹಾಗೂ ರಾಜಕೀಯ ವಿಚಾರಗಳ ಮೇಲೆ ಪ್ರಭಾವ ಬೀರುತ್ತದೆ. ಈ ಹಿನ್ನಲೆಯಲ್ಲಿ ಮಾಹಿತಿಯನ್ನು

ಕಲೆಹಾಕಿದಾಗ ನಮಗೆ ದೊರೆತ ಸಂಗತಿಗಳು ಈ ರೀತಿಯಾಗಿವೆ. ಶೇ. 21 ರಷ್ಟು ಪೋಷಕರ ವಿದ್ಯಾಭ್ಯಾಸ ಮಟ್ಟ ಪಿ.ಯು.ಸಿ. ಆಗಿದ್ದು, ಶೇ. 17ರಷ್ಟು ಪೋಷಕರು ತಮ್ಮ ಪ್ರೌಢ ಶಿಕ್ಷಣವನ್ನು ಮುಗಿಸಿದ್ದಾರೆ. ಶೇ. 18ರಷ್ಟು ಪೋಷಕರು ತಮ್ಮ ಪದವಿಯನ್ನು ಮುಗಿಸಿದ್ದರೆ, ಶೇ. 11 ರಷ್ಟು ಉನ್ನತ ವ್ಯಾಸಂಗವನ್ನು ಪಡೆದುಕೊಂಡಿದ್ದಾರೆ. ಹಾಗೆಯೇ ಶೇ. 7 ರಷ್ಟು ಪೋಷಕರು ತಮ್ಮ ಪ್ರಾಥಮಿಕ ಶಿಕ್ಷಣವನ್ನು ಪೂರೈಸಿದ್ದಾರೆ. ಶೇ. 18ರಷ್ಟು ಪೋಷಕರು ವೃತಿಪರ ಶಿಕ್ಷಣವನ್ನು ಪಡೆದುಕೊಂಡಿದ್ದರೆ, ಶೇ. 8 ರಷ್ಟು ಪೋಷಕರು ಔಪಚಾರಿಕ ಶಿಕ್ಷಣವನ್ನೇ ಪಡೆದುಕೊಳ್ಳಲು ಸಾಧ್ಯವಾಗಿಲ್ಲ. ಆದರೆ ಅವರ ಮಕ್ಕಳು ಕಾಲೇಜುಗಳ ಸಂಘಟನೆಗಳಲ್ಲಿ ತೊಡಗಿಸಿಕೊಂಡಿರುವುದು ಗಮನಾರ್ಹ. ಕೌಟುಂಬಿಕ ಮತ್ತು ಸಾಮಾಜಿಕವಾಗಿ ವಿದ್ಯಾರ್ಥಿ ಸಮೂಹವು ಅವರ ಪೋಷಕರ ಶೈಕ್ಷಣಿಕ ಹಿನ್ನೆಲೆಗಳಿಂದ ಪ್ರಭಾವಕ್ಕೆ ಒಳಪಡುತ್ತಾರೆ ಎಂಬುವುದು ಮುಖ್ಯವಾಗುತ್ತದೆ.

ಮಾಹಿತಿದಾರರ ಪೋಷಕರ ಉದ್ಯೋಗ ವಿವರಿಸುವಂತೆ, ಮಾಹಿತಿದಾರರ ಶೇ. 27 ರಷ್ಟು ಪೋಷಕರು ವಿವಿಧ ವೃತ್ತಿಯನ್ನು ಮಾಡುತ್ತಿದ್ದಾರೆ. ಉದಾಹರಣೆಗೆ ಶಿಕ್ಷಕ, ಉಪನ್ಯಾಸಕ, ನ್ಯಾಯವಾದಿ, ಪೊಲೀಸ್, ಸೆಕ್ಯುರಿಟಿ ಇತ್ಯಾದಿ ವೃತ್ತಿಯಲ್ಲಿ ಅವರು ತೊಡಗಿಸಿಕೊಂಡಿದ್ದಾರೆ. ಶೇ. 13ರಷ್ಟು ಪೋಷಕರು ಕೂಲಿ ಮಾಡಿದರೆ, ಶೇ. 26 ರಷ್ಟು ಪೋಷಕರು ಒಕ್ಕಲುತನ ಮತ್ತು ವ್ಯವಸಾಯ ವೃತ್ತಿಯನ್ನು ಮಾಡುತ್ತಿದ್ದಾರೆ. ಶೇ 23ರಷ್ಟು ಪೋಷಕರು ಸಣ್ಣ ವ್ಯವಹಾರಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ವಿದ್ಯಾರ್ಥಿಗಳ ಆರ್ಥಿಕ ಸಂಪನ್ಮೂಲಗಳೂ ಅವರ ಪೋಷಕರ ವೃತ್ತಿ ಅಥವಾ ಉದ್ಯೋಗದ ಮೇಲೆ ಅವಲಂಭಿತವಾಗಿರುವುದು ಸಾಮಾನ್ಯವಾಗಿ ಕಂಡುಬರುವ ಅಂಶ.

ಮಾಹಿತಿದಾರರ ಕುಟುಂಬದ ವಾರ್ಷಿಕ ಆದಾಯ ಯಾವ ಆರ್ಥಿಕ ಮತ್ತು ಸಾಮಾಜಿಕ ಹಿನ್ನೆಲೆಯುಳ್ಳ ವಿದ್ಯಾರ್ಥಿ ಸಮೂಹವನ್ನು ಸಂದರ್ಶಿಸಲಾಯಿತು ಎನ್ನುವ ಮಾಹಿತಿಯನ್ನು ಕೋಷ್ಟಕ 10 ಮತ್ತು ರೇಖಾಚಿತ್ರ 6 ವಿವರಿಸುತ್ತದೆ. ಶೇ. 34 ರಷ್ಟು ವಿದ್ಯಾರ್ಥಿಗಳ ಕುಟುಂಬದ ಆದಾಯ ವಾರ್ಷಿಕ ಆದಾಯ ರೂ. 25001 ರಿಂದ ರೂ 50000 ಆಗಿದೆ. ಶೇ. 31 ರಷ್ಟು ಕುಟುಂಬಗಳು ರೂ 5000 ದಿಂದ ರೂ 15000 ವಾರ್ಷಿಕ ಆದಾಯವನ್ನು ಹೊಂದಿದೆ. ರೂ 3 ಲಕ್ಷದಿಂದ 10 ಲಕ್ಷದವರೆಗಿನ ವಾರ್ಷಿಕ ಆದಾಯ ಹೊಂದಿದ ಕುಟುಂಬಗಳ ಪ್ರಮಾಣ ಶೇ. 6 . ಅಂತೆಯೇ ರೂ 15,001 ರಿಂದ 25,000 ದವರೆಗಿನ ವಾರ್ಷಿಕ ಆದಾಯ ಹೊಂದಿದ ಕುಟುಂಬದ ಪ್ರಮಾಣ ಶೇ. 22. ಈ ವಾರ್ಷಿಕ ಆದಾಯವು ಮಾಹಿತಿದಾರರ ಆರ್ಥಿಕ ಸ್ಥಿತಿಗತಿಗಳನ್ನು ತುಲನೆ ಮಾಡಲು ಸಹಾಯವಾಗಿದೆ ಮತ್ತು ಅವರು ಸಾಮಾಜಿಕವಾಗಿ ತೊಡಗಿಸಿಕೊಳ್ಳುವಲ್ಲಿ ಪೂರಕವಾಗಿ ಅದು ಹೇಗೆ ಸಹಕರಿಸಬಹುದು ಎಂಬುವುದನ್ನು ಅಂದಾಜಿಸಲಾಗಿದೆ.

ವಿದ್ಯಾರ್ಥಿಯಾಗಿ ತಮಗೆ ಹಣಕಾಸಿನ ಮೂಲ ಯಾವುದು ಎಂದು ಪ್ರಶ್ನಿಸಲಾಯಿತು. ಆಯ್ದ ಕಾಲೇಜುಗಳ ವಿದ್ಯಾರ್ಥಿ ಸಂಘಟನೆಗಳನ್ನು ಸಮೀಕ್ಷೆಗೊಳಪಡಿಸಿದಾಗ, ಶೇ. 94 ರಷ್ಟು ವಿದ್ಯಾರ್ಥಿಗಳಿಗೆ ತಂದೆ ತಾಯಿ ಹಾಗೂ ಪೋಷಕರು ಹಣಕಾಸಿನ ನೆರವನ್ನು ನೀಡುತ್ತಿದ್ದಾರೆ ಎನ್ನುವುದನ್ನು ಈ ಅಧ್ಯಯನದಿಂದ ತಿಳಿದುಬರುತ್ತದೆ. ಅಂದರೆ ವಿದ್ಯಾಭ್ಯಾಸಕ್ಕೆ ನೀಡುವ ಹಣವನ್ನು ವಿದ್ಯಾರ್ಥಿಗಳು ಸಂಘಟನೆಯಲ್ಲಿ ತೊಡಗಿಸಿಕೊಳ್ಳುವ ಸಂದರ್ಭದಲ್ಲಿಯೂ ಬಳಸಿಕೊಳ್ಳುತ್ತಿದ್ದಾರೆ. ಶೇ. 5ರಷ್ಟು ವಿದ್ಯಾರ್ಥಿಗಳು ವಿದ್ಯಾರ್ಥಿವೇತನ ಬಳಸಿಕೊಂಡರೆ, ಶೇ. 1 ರಷ್ಟು ವಿದ್ಯಾರ್ಥಿಗಳು ಅರೆಕಾಲಿಕ ಕೆಲಸಗಳಲ್ಲಿ ತಮ್ಮನ್ನು ತೊಡಗಿಸಿಕೊಂಡು, ಅದರಲ್ಲಿ ಬರುವ ಆದಾಯದಿಂದ ಶೈಕ್ಷಣಿಕ ಮತ್ತು ಸಂಘಟನೆಯಲ್ಲಿ ಬರಬಹುದಾದ ಖರ್ಚು–ವೆಚ್ಚವನ್ನು ಸರಿದೂಗಿಸಿಕೊಳ್ಳುತ್ತಿದ್ದಾರೆ. ಇಂದಿಗೂ ವಿದ್ಯಾರ್ಥಿಗಳು ಆರ್ಥಿಕ ವಿಷಯಕ್ಕೆ ಸಂಬಂಧಪಟ್ಟಂತೆ ತಮ್ಮ ಪೋಷಕರ ಮೇಲೆ ಅವಲಂಬನೆಯಾಗಿರುವುದು ಈ ಅಧ್ಯಯನದಿಂದ ತಿಳಿದುಬರುತ್ತದೆ.

ಮಾಹಿತಿದಾರರು ಯಾವುದಾದರೂ ರಾಜಕೀಯ ಪಕ್ಷದ ಸದಸ್ಯರೆ? ಎಂಬ ಪ್ರಶ್ನೆಗೆ ವಿದ್ಯಾರ್ಥಿ ಸಮೂಹದ ಸದಸ್ಯರು ಹೆಚ್ಚಾಗಿ ತಮ್ಮ ಕಾರ್ಯಚಟುವಟಿಕೆಗಳನ್ನು ಆಯಾ ಕಾಲೇಜುಗಳಿಗೆ ಸೀಮಿತಗೊಳಿಸಿಕೊಂಡಿರುತ್ತಾರೆ. ಆದರೆ ಪ್ರಾದೇಶಿಕ ಅಥವಾ ಸ್ಥಳೀಯವಾಗಿ ಹೆಚ್ಚು ಚರ್ಚಿತವಾಗುವ ವಿಷಯಗಳಲ್ಲಿ ಈ ಸಂಘಟನೆಗಳು ತಮ್ಮನ್ನು ಚಳುವಳಿ, ಹೋರಾಟಗಳ ಮೂಲಕ ತೊಡಗಿಸಿಕೊಳ್ಳುತ್ತವೆ. ಹೀಗೆ ಪರೋಕ್ಷವಾಗಿ ರಾಜಕೀಯ ಪಕ್ಷದ ಪ್ರಭಾವಗಳಿಗೆ ಒಳಗಾಗುತ್ತವೆ. ಈ ಸಮೀಕ್ಷೆ ವಿವರಿಸುವಂತೆ ಶೇ. 100ರಷ್ಟು (200) ವಿದ್ಯಾರ್ಥಿಗಳು ಯಾವುದೇ ರಾಜಕೀಯ ಪಕ್ಷದ ಅಧಿಕೃತ ಸದಸ್ಯರಾಗಿಲ್ಲ. ವಿದ್ಯಾರ್ಥಿ ಸಂಘಟನೆಗಳು ಯಾವುದಾದರೊಂದು ರಾಜಕೀಯ ಪಕ್ಷದ ಸೈದ್ಧಾಂತಿಕ ವಿಚಾರಗಳಿಗೆ ಸಾಹಾನುಭೂತಿ ತೋರಿಸಿದರೂ ಅವರು ರಾಜಕೀಯ ಪಕ್ಷದ ಅಧಿಕೃತ ಸದಸ್ಯರಾಗಿಲ್ಲದೆ ಇರುವದು ಗಮನಾರ್ಹವಾದ ವಿಷಯ.

ರಾಜಕೀಯ ಪ್ರಭಾವ ರೂಪಿಸುವಲ್ಲಿ ಸ್ನೇಹಿತರ ಪ್ರಭಾವ ಕುರಿತು ಪ್ರಶ್ನಿಸಲಾಯಿತು. ಇದಕ್ಕೆ ಉತ್ತರವಾಗಿ ಶೇ. 65 ರಷ್ಟು ವಿದ್ಯಾರ್ಥಿಗಳು ರಾಜಕೀಯ ಅಭಿಪ್ರಾಯ ರೂಪಿಸುವಲ್ಲಿ ಸ್ನೇಹಿತರ ಪ್ರಭಾವ ಇದೆ ಎಂದು ಹೇಳುತ್ತಾರೆ. ಶೇ. 35 ರಷ್ಟು ವಿದ್ಯಾರ್ಥಿಗಳು ಸ್ನೇಹಿತರ ಪ್ರಭಾವ ಇಲ್ಲ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಇದರಿಂದ ತಿಳಿದು ಬರುವುದೇನೆಂದರೆ ರಾಜಕೀಯ ಅಭಿಪ್ರಾಯ ರೂಪಿಸಿಕೊಳ್ಳುವಲ್ಲಿ ವಿದ್ಯಾರ್ಥಿಗಳ ಮೇಲೆ ಅವರ ಸ್ನೇಹಿತರ ಪ್ರಭಾವ ಗಣನೀಯವಾಗಿರುವುದನ್ನು ಇದು ಸ್ಪಷ್ಟಪಡಿಸುತ್ತದೆ.

ವಿದ್ಯಾರ್ಥಿಗಳಿಗೆ ರಾಜಕೀಯ ಚರ್ಚೆಯ ಪುನರಾವರ್ತನೆ ವಿಶ್ಲೇಷಣೆ ಮಾಡುವುದಕ್ಕಾಗಿ ಈ ಪ್ರಶ್ನೆಯನ್ನು ಕೇಳಲಾಯಿತು. ಏಕೆಂದರೆ ರಾಜಕೀಯ ಚರ್ಚೆಯು

ವಿದ್ಯಾರ್ಥಿಗಳಲ್ಲಿ ರಾಜಕೀಯ ಅರಿವು ಮೂಡಿಸುವಲ್ಲಿ ತುಂಬಾ ಸಹಾಯಕಾರಿಯಾಗುತ್ತದೆ. ಅಂತಹ ಚರ್ಚೆಗಳು ವಿದ್ಯಾರ್ಥಿಗಳನ್ನು ರಾಜಕೀಯ ಸಾಮಾಜೀಕರಣಗೊಳಿಸುವಲ್ಲಿ ಸಹಕರಿಸುತ್ತವೆ. ಇದರಿಂದ ವಿದ್ಯಾರ್ಥಿಗಳು ಕೆಲವೊಂದು ಕೌಶಲ್ಯಗಳು ಹಾಗೂ ಮೌಲ್ಯಗಳನ್ನು ಪಡೆದುಕೊಳ್ಳುವುದರ ಮುಖಾಂತರ ರಾಜಕೀಯದಲ್ಲಿ ಅವರು ಸಕ್ರಿಯವಾಗಿ ಭಾಗವಹಿಸಲು ಸಹಾಯಕವಾಗುತ್ತದೆ. " ರಾಜಕೀಯ ಚರ್ಚೆಯು ರಾಜಕೀಯ ಭಾಗವಹಿಸುವಿಕೆಯ ಭಾಗವಾಗಿದೆ" ಎಂದು ಮ್ಯಾಥ್ಯೂ ಅಭಿಪ್ರಾಯ ಪಡುತ್ತಾರೆ. ಈ ಪ್ರಶ್ನೆಗೆ ವಿದ್ಯಾರ್ಥಿಗಳ ಅಭಿಪ್ರಾಯ ಈ ರೀತಿಯಾಗಿದೆ. ಶೇ. 34 ರಷ್ಟು ವಿದ್ಯಾರ್ಥಿಗಳು ರಾಜಕೀಯ ಚರ್ಚೆಯನ್ನು ನಿಯಮಿತವಾಗಿ ಮಾಡುತ್ತಾರೆ. ಶೇ. 60 ರಷ್ಟು ವಿದ್ಯಾರ್ಥಿಗಳು ರಾಜಕೀಯ ಚರ್ಚೆಯನ್ನು ಪ್ರಾಸಂಗಿಕವಾಗಿ ಮಾಡುತ್ತಾರೆ. ಇದರಿಂದ ತಿಳಿದು ಬರುವುದೇನೆಂದರೆ ಶೇ. 94 ರಷ್ಟು ವಿದ್ಯಾರ್ಥಿಗಳು ರಾಜಕೀಯ ವಿಷಯಗಳನ್ನು ಚರ್ಚಿಸುತ್ತಾರೆ. ಹೆಚ್ಚಿನ ರಾಜಕೀಯ ಅರಿವು ವಿದ್ಯಾರ್ಥಿಗಳಲ್ಲಿ ಇದೆ ಎಂಬುವುದು ಇದರಿಂದ ತಿಳಿದು ಬರುತ್ತದೆ.

ಚರ್ಚೆಗೆ ಬರುವ ಐದು ಪ್ರಮುಖ ವಿಷಯಗಳನ್ನು ವಿದ್ಯಾರ್ಥಿಗಳಿಗೆ ನೀಡಲಾಗಿತ್ತು. ಇದರಲ್ಲಿ 65 ರಷ್ಟು ವಿದ್ಯಾರ್ಥಿಗಳು ರಾಜಕೀಯ ಚರ್ಚಿಸುವುದಾಗಿ ಹೇಳಿದರೆ, ಶೇ. 43 ರಷ್ಟು ವಿದ್ಯಾರ್ಥಿಗಳು ಶಿಕ್ಷಣದ ಕುರಿತು ಚರ್ಚಿಸುತ್ತೇವೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಹಾಗೆಯೆ, ಶೇ. 20 ರಷ್ಟು ವಿದ್ಯಾರ್ಥಿಗಳು ಧರ್ಮಕ್ಕೆ ಸಂಬಂಧಿಸಿದ ವಿಷಯಗಳ ಕುರಿತು ಚರ್ಚಿಸಿದರೆ, ಶೇ. 30 ರಷ್ಟು ವಿದ್ಯಾರ್ಥಿಗಳು ಚಲನಚಿತ್ರ ಹಾಗೂ ಶೇ. 35 ರಷ್ಟು ವಿದ್ಯಾರ್ಥಿಗಳು ಕ್ರೀಡೆಯ ಕುರಿತು ಚರ್ಚಿಸುತ್ತೇವೆ ಎಂದು ಹೇಳುತ್ತಾರೆ. ಶೇ. 65 ರಷ್ಟು ವಿದ್ಯಾರ್ಥಿಗಳು ರಾಜಕೀಯ ವಿಷಯಕ್ಕೆ ಸಂಬಂಧಿಸಿದ ವಿಷಯಗಳನ್ನು ಚರ್ಚಿಸುತ್ತೇವೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಇದರಿಂದ ತಿಳಿದು ಬರುವುದೇನೆಂದರೆ ವಿದ್ಯಾರ್ಥಿಗಳು ರಾಜಕೀಯವಾಗಿ ತುಂಬಾ ಪ್ರಜ್ಞಾವಂತರಾಗಿದ್ದಾರೆ.

ರಾಜಕೀಯದಲ್ಲಿ ಭಾಗವಹಿಸುವಿಕೆ ಕುರಿತು ವಿದ್ಯಾರ್ಥಿಗಳ ಅಭಿಪ್ರಾಯ ಏನು ಎಂಬ ಪ್ರಶ್ನೆಗೆ ಶೇ. 48 ರಷ್ಟು ವಿದ್ಯಾರ್ಥಿಗಳು ರಾಜಕೀಯದಲ್ಲಿ ಭಾಗವಹಿಸಬೇಕು ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿರುತ್ತಾರೆ. ಶೇ. 28 ರಷ್ಟು ವಿದ್ಯಾರ್ಥಿಗಳು ಕ್ಯಾಂಪಸ್ ರಾಜಕೀಯದಲ್ಲಿ ಭಾಗವಹಿಸಬೇಕು ಎಂಬ ಅಭಿಪ್ರಾಯವನ್ನು ನೀಡಿದರೆ ಕೇವಲ 24 ರಷ್ಟು ವಿದ್ಯಾರ್ಥಿಗಳು ಅಭ್ಯಾಸದ ಕಡೆಗೆ ತಮ್ಮ ಒಲವನ್ನು ತೋರಿಸಿದ್ದಾರೆ. ಅಂದರೆ ಬಹುಸಂಖ್ಯಾತ ವಿದ್ಯಾರ್ಥಿಗಳು ರಾಜಕೀಯದಲ್ಲಿ ಭಾಗವಹಿಸಬೇಕು ಎಂಬ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ

ಇದಕ್ಕೂ ಮುಂಚೆ ಯಾವುದಾದರೂ ಸಂಘಟನೆಯ ಜೊತೆಗೆ ನಿಕಟ ಸಂಬಂಧ ಹೊಂದಿದ್ದೀರಾ? ಎಂಬ ಪ್ರಶ್ನೆಗೆ ಈ ರೀತಿಯ ಮಾಹಿತಿಗಳು ನಮಗೆ ಲಭ್ಯವಾಗಿವೆ.

ವಿದ್ಯಾರ್ಥಿ ಸಂಘಟನೆಯ ಸದಸ್ಯರಾಗುವುದಕ್ಕೆ ಮುಂಚಿತವಾಗಿ ಯಾವುದಾದರೂ ಇತರ ಸಂಘಟನೆಗಳ ಸದಸ್ಯರಾಗಿದ್ದರೇ ಎನ್ನುವ ಪ್ರಶ್ನೆಯನ್ನು ಮಾಹಿತಿದಾರರಿಗೆ ಕೇಳಲಾಗಿತ್ತು. ಕೇವಲ ಶೇ. 5 ರಷ್ಟು ಮಾತ್ರ ಹೌದು ಎಂದು ಹೇಳಿದರೆ, ಶೇ 95 ರಷ್ಟು ಮಾಹಿತಿದಾರರು ಇಲ್ಲ ಎಂದು ಉತ್ತರಿಸಿದ್ದಾರೆ. ಹೀಗೆ ಪೂರ್ವ ಅನುಭವ ಹೊಂದಿದ ಶೇ. 5 ರಷ್ಟು ವಿದ್ಯಾರ್ಥಿಗಳು ಕರ್ನಾಟಕ ರಕ್ಷಣಾ ವೇದಿಕೆ, ರಾಷ್ಟ್ರೀಯ ಸೇವಾ ಯೋಜನೆ, ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ ಇತ್ಯಾದಿ ಸಂಘಟನೆಗಳಲ್ಲಿ ಸದಸ್ಯರಾಗಿದ್ದರು. ಇದು ಸಾಮಾಜಿಕ ಮತ್ತು ರಾಜಕೀಯ ಪ್ರಭಾವಿತ ಸಂಘಟನೆಗಳು ವಿದ್ಯಾರ್ಥಿ ಸಮೂಹದ ಮೇಲೆ ಪ್ರಭಾವವನ್ನು ತಿಳಿಸುತ್ತದೆ ಹಾಗೂ ಈ ಮೂಲಕ ಯುವಜನತೆಯಲ್ಲಿ ರಾಜಕೀಯ ಪ್ರಜ್ಞೆಯನ್ನು ಸಂಘಟನೆಗಳಲ್ಲಿ ಭಾಗವಹಿಸುವ ಮುಖಾಂತರ ಹೆಚ್ಚಿಸುತ್ತಿದೆ.

ಮಾಹಿತಿದಾರರ ತಂದೆ/ತಾಯಿ ಯಾವುದಾದರೂ ರಾಜಕೀಯ ಪಕ್ಷದ ಸಕ್ರಿಯ ಸದಸ್ಯರೇ? ಎಂಬುವುದನ್ನು ವಿಶ್ಲೇಷಣೆಗೆ ಒಳಪಡಿಸಿದಾಗ ಕಂಡುಬಂದ ಸಂಗತಿಗಳು ಈ ರೀತಿಯಾಗಿವೆ. ವಿದ್ಯಾರ್ಥಿಗಳ ಕುಟುಂಬದ ಸದಸ್ಯರು ರಾಜಕೀಯ ಪಕ್ಷದ ಸದಸ್ಯರಾಗಿದ್ದಲ್ಲಿ, ಅವರ ಪ್ರಭಾವ ವಿದ್ಯಾರ್ಥಿಗಳ ಮೇಲೆ ಬೀರುವುದು ಸಹಜ. ಶೇ. 8 ರಷ್ಟು (16) ಪೋಷಕರು ರಾಜಕೀಯ ಪಕ್ಷಗಳಾದ ಕಾಂಗ್ರೇಸ್, ಜನತಾದಳ (ಜಾತ್ಯಾತೀತ) ಹಾಗೂ ಭಾರತೀಯ ಜನತಾ ಪಕ್ಷಗಳ ಸದಸ್ಯರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಶೇ. 84ರಷ್ಟು ಪೋಷಕರು ಯಾವುದೇ ರಾಜಕೀಯ ಪಕ್ಷಗಳ ಸದಸ್ಯರಾಗಿರುವುದಿಲ್ಲ. ಅಂತೆಯೇ ಕುಟುಂಬದ ಯಾವುದಾದರೂ ಸದಸ್ಯರು ರಾಜಕೀಯ ಪಕ್ಷಗಳ ಸದಸ್ಯರಾಗಿರುವುದು ಕಂಡುಬರುವುದಿಲ್ಲ. ಈ ಅಧ್ಯಯನದಿಂದ ಕಂಡುಬಂದ ಸಂಗತಿಯೆಂದರೆ ಪೋಷಕರು ಯಾವ ಪಕ್ಷದ ಸದಸ್ಯರಾಗಿದ್ದಾರೊ ಅವರ ಮಕ್ಕಳೂ ಆ ಪಕ್ಷದ ವಿಚಾರಧಾರೆಗಳಿಂದ ಪ್ರಭಾವಿತರಾಗಿರುವುದು ಕಂಡುಬರುತ್ತದೆ. ಅಂದರೆ ವಿದ್ಯಾರ್ಥಿಗಳ ರಾಜಕೀಯ ಸಾಮಾಜೀಕರಣದಲ್ಲಿ ಕುಟುಂಬದ ಪಾತ್ರ ಗಣನೀಯವಾಗಿರುವುದು ಇದರಿಂದ ತಿಳಿದು ಬರುತ್ತದೆ.

ನಿಮಗೆ ವಿದ್ಯಾರ್ಥಿ ಸಂಘಟನೆಗಳ ಬಗ್ಗೆ ತಿಳಿದಿದೆಯೇ? ಎಂಬ ಪ್ರಶ್ನೆಗೆ ಶೇ.93 ರಷ್ಟು ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ಸಂಘಟನೆ ಬಗ್ಗೆ ತಿಳಿದಿದೆ. ಅಂದರೆ ವಿದ್ಯಾರ್ಥಿ ಸಂಘಟನೆಗಳ ಕಾರ್ಯಚಟುವಟಿಕೆ, ಅದರ ಉದ್ದೇಶಗಳ ಬಗ್ಗೆ ಅರಿವಿದೆ. ಇದರಲ್ಲಿ ಶೇ85 ರಷ್ಟು ವಿದ್ಯಾರ್ಥಿಗಳು ದೂರದರ್ಶನ, ಪತ್ರಿಕೆ ಹಾಗೂ ಇತರ ವಿದ್ಯಾರ್ಥಿಗಳಿಂದ ಸಂಘಟನೆಯ ಗುರಿಗಳ ಬಗ್ಗೆ ತಿಳಿದುಕೊಂಡಿದ್ದರೆ, ಶೇ. 8ರಷ್ಟು ವಿದ್ಯಾರ್ಥಿಗಳು, ಅಂತರ್ಜಾಲ ಮತ್ತು ಶಿಕ್ಷಕರ ಮುಖೇನ ವಿದ್ಯಾರ್ಥಿ ಸಂಘಟನೆಯ ಬಗ್ಗೆ ತಿಳಿದುಕೊಂಡಿದ್ದಾರೆ. ಕೇವಲ ಶೇ7 ರಷ್ಟು ವಿದ್ಯಾರ್ಥಿಗಳು ಸಂಘಟನೆಯಲ್ಲಿ ಸದಸ್ಯರಾಗಿದ್ದರೂ ಇದರ ಉದ್ದೇಶಗಳ ಬಗ್ಗೆ ಅರಿವನ್ನು ಹೊಂದಿಲ್ಲ. ಇದರಿಂದ ನಮಗೆ ತಿಳಿದು ಬರುವದೆನೆಂದರೆ ವಿದ್ಯಾರ್ಥಿ

ಸಂಘಟನೆಗಳು ಸಮಾಜದಲ್ಲಿ ಜನಪ್ರಿಯವಾಗಿದ್ದು, ಆ ಸಂಘಟನೆಗಳ ಗುರಿಗಳು, ಉದ್ದೇಶಗಳು, ಕಾರ್ಯವ್ಯಾಪ್ತಿಯ ಅರಿವು ವಿದ್ಯಾರ್ಥಿಗಳಿಗೆ ಇದೆ ಎಂಬುವದು ಸ್ಪಷ್ಟವಾಗುತ್ತದೆ.

ಮಾಹಿತಿದಾರರು ತಮ್ಮ ಶೈಕ್ಷಣಿಕ ಅವಧಿಯ ಯಾವ ಹಂತದಲ್ಲಿ ವಿದ್ಯಾರ್ಥಿ ಸಂಘಟನೆಯ ಬಗ್ಗೆ ತಿಳಿದುಕೊಂಡಿದ್ದಾರೆ? ಎಂಬ ಪ್ರಶ್ನೆಗೆ ಶೇ.57 ರಷ್ಟು ವಿದ್ಯಾರ್ಥಿಗಳು ಪದವಿ ಹಂತದ ವಿದ್ಯಾಭ್ಯಾಸದ ಅವಧಿಯಲ್ಲಿ ವಿದ್ಯಾರ್ಥಿ ಸಂಘಟನೆಯ ಬಗ್ಗೆ ತಿಳಿದುಕೊಂಡಿದ್ದರೆ, ಶೇ.38 ರಷ್ಟು ವಿದ್ಯಾರ್ಥಿಗಳು ಪದವಿಪೂರ್ವ ಹಂತದಲ್ಲಿಯೇ ಇದರ ಕುರಿತು ಮಾಹಿತಿಯನ್ನು ಪಡೆದುಕೊಂಡಿದ್ದಾರೆ. ಕೇವಲ ಶೇ. 5 ರಷ್ಟು ವಿದ್ಯಾರ್ಥಿಗಳು ಮಾತ್ರ ತಮ್ಮ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣದ ಅವಧಿಯಲ್ಲಿ ಇದರ ಬಗ್ಗೆ ತಿಳಿದುಕೊಂಡಿದ್ದಾರೆ. ಪದವಿ ಹಂತದ ವಿದ್ಯಾಭ್ಯಾಸದಲ್ಲಿ ಸಮವಯಸ್ಕರ ಗುಂಪಿನ ಪ್ರಭಾವ ಹೆಚ್ಚಾಗುವದರಿಂದ ವಿದ್ಯಾರ್ಥಿಗಳು ಯಾವುದಾದರೊಂದು ವಿಚಾರಧಾರೆಯ ಪ್ರಭಾವಕ್ಕೆ ಒಳಗಾಗುತ್ತಾರೆ ಎಂಬುವುದು ಇದರಿಂದ ಗೊತ್ತಾಗುತ್ತದೆ. ಇನ್ನೂ ಪದವಿ ಹಂತದಲ್ಲಿ ವಿದ್ಯಾರ್ಥಿ ಸಮೂಹಕ್ಕೆ ಹೆಚ್ಚು ಹೆಚ್ಚು ಮಾಹಿತಿಗಳ ಅವಕಾಶಗಳು ಮತ್ತು ಸಂಪರ್ಕ ಲಭಿಸಿರುವುದು ಇದರಿಂದ ತಿಳಿದುಬರುತ್ತದೆ.

ವಿದ್ಯಾರ್ಥಿ ಸಂಘಟನೆಗಳ ಅಗತ್ಯತೆ ಕುರಿತು ಕೇಳಿದ ಪ್ರಶ್ನೆಗೆ ಶೇ. 97 ರಷ್ಟು ವಿದ್ಯಾರ್ಥಿಗಳು ವಿದ್ಯಾರ್ಥಿ ಸಂಘಟನೆಗಳ ಅಗತ್ಯತೆ ಇದೆ ಎಂದು ಹೇಳುತ್ತಾರೆ. ಅದರಲ್ಲಿ ಶೇ. 90ರಷ್ಟು ವಿದ್ಯಾರ್ಥಿಗಳು, ವಿದ್ಯಾರ್ಥಿ ಹಿತಾಸಕ್ತಿ ಕಾಪಾಡಲು, ವೈಚಾರಿಕ ರಾಜಕೀಯ ಬೆಳೆಯಲು, ವಿದ್ಯಾರ್ಥಿ ಹಕ್ಕುಗಳನ್ನು ಮತ್ತು ಮಾಹಿತಿಗಳನ್ನು ಪೂರೈಸಲು, ವಿದ್ಯಾರ್ಥಿ ಪ್ರತಿನಿಧಿತ್ವಕ್ಕೆ, ಸಾರ್ವಜನಿಕ ಹತೋಟಿ ಮತ್ತು ಹಿತಾಸಕ್ತಿ ಕಾಪಾಡಲು, ಶೈಕ್ಷಣಿಕ ಸಂಸ್ಥೆಗಳ ಜವಾಬ್ದಾರಿಯುತ ಸೇವೆಗೆ, ವಿದ್ಯಾರ್ಥಿ ಸಮುದಾಯದ ಗುರುತಿಸುವಿಕೆಗೆ, ಉದ್ಯೋಗ ಚಲನಶೀಲತೆ ಹೆಚ್ಚಿಸಲು ಮೊದಲಾದ ಕಾರಣಗಳಿಗಾಗಿ ಸಂಘಟನೆಗಳ ಅಗತ್ಯವಿದೆ ಎಂದು ಹೇಳುತ್ತಾರೆ. ಇದರಿಂದ ನಮಗೆ ತಿಳಿದುಬರುವದೇನೆಂದರೆ ವಿದ್ಯಾರ್ಥಿ ಸಂಘಟನೆಗಳು ದೇಶದಲ್ಲಿನ ಪ್ರಚಲಿತ ವಿದ್ಯಮಾನಗಳಿಗೆ ಮುಖಾಮುಖಿಯಾಗುತ್ತಿವೆ.

ವಿದ್ಯಾರ್ಥಿಗಳಿಗೆ ಸಂಘಟನೆಯ ಉದ್ದೇಶಗಳ ಬಗ್ಗೆ ಅರಿವಿದೆಯೇ ಎನ್ನುವುದನ್ನು ಪರಿಶೀಲಿಸಿದಾಗ, ಶೇ. 52 ರಷ್ಟು ವಿದ್ಯಾರ್ಥಿಗಳು ಶೈಕ್ಷಣಿಕ ಪ್ರಗತಿ, ಭ್ರಷ್ಟಚಾರ ಮುಕ್ತ ಸಮಾಜ, ವಿದ್ಯಾರ್ಥಿ ನ್ಯಾಯ ಮತ್ತು ಹಕ್ಕುಗಳ ರಕ್ಷಣೆ ಇತ್ಯಾದಿಗಳು ಸಂಘಟನೆಯ ಉದ್ದೇಶಗಳೆಂದು ವಿವರಿಸುತ್ತಾರೆ. ಉಳಿದ ಶೇ. 48 ರಷ್ಟು ವಿದ್ಯಾರ್ಥಿಗಳು ಅನ್ಯಾಯದ ವಿರುದ್ಧ ಹೋರಾಟ, ವಿದ್ಯಾರ್ಥಿಗಳ ಅಭಿವೃದ್ಧಿ, ಜಾತ್ಯಾತೀತ ಮೌಲ್ಯಗಳನ್ನು ಎತ್ತಿ ಹಿಡಿಯುವುದು ಎನ್ನುವ ಬಗ್ಗೆ ವಿವರಿಸುತ್ತಾರೆ. ಇಲ್ಲಿ ವಿದ್ಯಾರ್ಥಿ ಸಮುದಾಯದ ಹಿತಾಸಕ್ತಿ

ಜೊತೆಗೆ ಸಾಮಾಜಿಕ, ರಾಜಕೀಯ, ಸಾಂವಿಧಾನಿಕ ಕಾಳಜಿಗಳ ಕುರಿತು ಸಂಘಟನೆಗಳು ಕಾರ್ಯನಿರ್ವಹಿಸುತ್ತಿವೆ ಎನ್ನುವುದನ್ನು ಇದರಿಂದ ಸ್ಪಷ್ಟವಾಗುತ್ತದೆ.

ವಿದ್ಯಾರ್ಥಿ ಸಂಘಟನೆ ಯಾವ ರೀತಿ ಹೋರಾಟವನ್ನು ಬೆಂಬಲಿಸುತ್ತಿದೆ ಎಂಬ ಪ್ರಶ್ನೆಗೆ ಬಹುಸಂಖ್ಯಾತ ವಿದ್ಯಾರ್ಥಿಗಳು ಸಾಮಾಜಿಕ ಮೌಲ್ಯಗಳನ್ನು ಎತ್ತಿ ಹಿಡಿಯುವ ಕಾರ್ಯವನ್ನು, ಸಮಾಜವಾದಿ ಹಾಗೂ ವೈಚಾರಿಕ ಹೋರಾಟವನ್ನು ವಿದ್ಯಾರ್ಥಿ ಸಂಘಟನೆ ಮಾಡುತ್ತದೆ ಎಂದು ಅಭಿಪ್ರಾಯ ಪಡುತ್ತಾರೆ. ರಾಜಕೀಯ ಮತ್ತು ಸಾಮಾಜಿಕ ಮೌಲ್ಯಗಳನ್ನು ಕಾಪಾಡಲು ವಿದ್ಯಾರ್ಥಿ ಸಂಘಟನೆಗಳು ಹೋರಾಡುತ್ತವೆ ಎನ್ನುವ ಅರಿವು ವಿದ್ಯಾರ್ಥಿ ಸಮೂಹದಲ್ಲಿದೆ.

ವಿದ್ಯಾರ್ಥಿ ಸಂಘಟನೆಗಳು ವಿದ್ಯಾರ್ಥಿಗಳಲ್ಲಿ ಸಾಮಾಜಿಕ – ರಾಜಕೀಯ ಪ್ರಜ್ಞೆ ಬೆಳೆಯುವಲ್ಲಿ, ಶೈಕ್ಷಣಿಕ ಅವ್ಯವಸ್ಥೆಗಳನ್ನು ನಿವಾರಿಸುವ ನಿಟ್ಟಿನಲ್ಲಿ ಪ್ರತಿಭಟನೆ ಕೈಗೊಳ್ಳಲು, ಯುವಜನತೆಯ ಕ್ರಿಯಾಶೀಲತೆ ಮತ್ತು ಒಗ್ಗಟ್ಟು ಪ್ರದರ್ಶಿಸಲು, ಸ್ವಾತಂತ್ರ್ಯ, ಸಮಾನತೆ, ಜಾತ್ಯಾತೀತ ಮೌಲ್ಯಗಳನ್ನು ಬೆಳೆಸುವಲ್ಲಿ ಸಹಾಯಕಾರಿಯಾಗಿವೆ. ಹಾಗೆಯೇ ಶಾಲಾ ಆಡಳಿತದಲ್ಲಿ ವಿದ್ಯಾರ್ಥಿಗಳಿಗೆ ಪ್ರಾತಿನಿಧ್ಯತೆ ದೊರಕುವಂತೆ ಮಾಡುವುದು, ಗುಣಮಟ್ಟದ ಶಿಕ್ಷಣ, ವಿದ್ಯಾರ್ಥಿ ಸಂಘಟನೆಗಳಿಗೆ ಮಾನ್ಯತೆ, ವ್ಯಕ್ತಿತ್ವ ವಿಕಸನ, ಶೈಕ್ಷಣಿಕ ಅಸಮಾನತೆ ಹೋಗಲಾಡಿಸಲು ಶ್ರಮಿಸುವುದು, ಶೈಕ್ಷಣಿಕ ಶುಲ್ಕ ಕಡಿತ, ಕಡ್ಡಾಯ ಶಿಕ್ಷಣ ಇತ್ಯಾದಿಗಳ ಬಗ್ಗೆ ಹೋರಾಟ ಮತ್ತು ಅರಿವನ್ನು ಹೆಚ್ಚಿಸುವ ನಿಟ್ಟಿನಲ್ಲಿಯೂ ಈ ವಿದ್ಯಾರ್ಥಿ ಸಂಘಟನೆಗಳು ಪ್ರಯೋಜನಕಾರಿಯಾಗಿವೆ ಎಂಬುವುದು ಅಧ್ಯಯನದಿಂದ ತಿಳಿದು ಬರುತ್ತದೆ..

ಶೇ 32 ರಷ್ಟು ವಿದ್ಯಾರ್ಥಿಗಳು ವಿದ್ಯಾರ್ಥಿ ಸಂಘಟನೆಗಳು ರಾಜ್ಯ ಮತ್ತು ರಾಷ್ಟ್ರ ಮಟ್ಟದಲ್ಲಿ ಕಾಯಿದೆ, ಶಾಸನಗಳನ್ನು ರೂಪಿಸಲು ಸಹಕರಿಸುತ್ತಿವೆ. ಶೇ. 24 ರಷ್ಟು ವಿದ್ಯಾರ್ಥಿಗಳು ಇಲ್ಲ ಎಂದು ಹೇಳಿದರೆ, ಶೇ. 44 ರಷ್ಟು ವಿದ್ಯಾರ್ಥಿಗಳು ಈ ಬಗ್ಗೆ ಅರಿವಿಲ್ಲ ಎಂದು ಹೇಳುತ್ತಾರೆ. ಹೀಗೆ ಪಾಲ್ಗೊಳ್ಳುವ ಸಂಘಟನೆಗಳು ಶೈಕ್ಷಣಿಕ ನೀತಿ ರೂಪಿಸುವಲ್ಲಿ, ವಿದ್ಯಾರ್ಥಿ ವೇತನ ಹೆಚ್ಚಳ, ಪ್ರತಿಭೆಗೆ ಪ್ರೋತ್ಸಾಹ (ಶೇ. 17) ಮತ್ತು ಭ್ರಷ್ಟಚಾರ ಮುಕ್ತ ಭಾರತ, ಮುಕ್ತ ಶಿಕ್ಷಣ ಮತ್ತು ವಿದ್ಯಾರ್ಥಿ ಕಲ್ಯಾಣ (ಶೇ. 15) ಇತ್ಯಾದಿ ಚಟುವಟಿಕೆಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳುತ್ತಿದ್ದಾರೆ.

ಸಮಾಜದ ಒಳತಿಗೆ ವಿದ್ಯಾರ್ಥಿ ಸಂಘಟನೆಗಳು ಬೇಕೆ? ಎಂದು ಪ್ರಶ್ನಿಸಲಾಯಿತು. ಶೇ. 100 ರಷ್ಟು ವಿದ್ಯಾರ್ಥಿಗಳು ಸಮಾಜದ ಒಳಿತಿಗಾಗಿ ವಿದ್ಯಾರ್ಥಿ ಸಂಘಟನೆಗಳು ಬೇಕಾಗಿವೆ ಎಂಬುದನ್ನು ಪ್ರತಿಪಾದಿಸಿವೆ. ಅವರಲ್ಲಿ ಶೇ. 97 ರಷ್ಟು ವಿದ್ಯಾರ್ಥಿಗಳು ಬಲಿಷ್ಠ ಮತ್ತು ಪ್ರಜಾಪ್ರಭುತ್ವ ಮಾದರಿ ವಿದ್ಯಾರ್ಥಿ ಸಮುದಾಯ ಕಟ್ಟಲು, ಸಮಾನತೆಯ ಸಮಾಜ

ಸ್ಥಾಪಿಸಲು, ವಿದ್ಯಾರ್ಥಿ ಹಕ್ಕುಗಳ ರಕ್ಷಣೆಗೆ, ಶೈಕ್ಷಣಿಕ ಪ್ರಗತಿಗೆ ಹಾಗೂ ಎಲ್ಲಾ ರಂಗಗಳಲ್ಲಿ ವಿದ್ಯಾರ್ಥಿಗಳ ಭಾಗವಹಿಸುವಿಕೆಗೆ ಇಂತಹ ಸಂಘಟನೆಗಳ ಅಗತ್ಯವಿದೆ ಎಂದು ಹೇಳುತ್ತಾರೆ. ಹಾಗೆಯೇ ಶೇ. 3 ರಷ್ಟು ವಿದ್ಯಾರ್ಥಿಗಳು ವಿದ್ಯಾರ್ಥಿಗಳಲ್ಲಿ ನಾಯಕತ್ವ ಮನೋಭಾವನೆ ಬೆಳೆಸಲು ಮತ್ತು ನ್ಯಾಯಕ್ಕಾಗಿ ಹೋರಾಡುವ ಮುಖಾಂತರ ಸಮಾಜದ ಒಳಿತಿಗೆ ಶ್ರಮಿಸುತ್ತಿದೆ ಎಂದು ಹೇಳುತ್ತಾರೆ. ಇದರಿಂದ ನಮಗೆ ತಿಳಿದು ಬರುವದೆನೆಂದರೆ ಪ್ರಜಾಸತ್ತಾತ್ಮಕ ಮೌಲ್ಯಗಳ ಆಧಾರದ ಮೇಲೆ ಸಮಾನತೆಯ ಸಮಾಜ ಸ್ಥಾಪಿಸುವ ಗುರಿಯನ್ನು ಈ ಸಂಘಟನೆಗಳು ಹೊಂದಿದ್ದು, ಆ ದಿಸೆಯಲ್ಲಿ ಕಾರ್ಯನಿರ್ವಹಿಸುತ್ತಿವೆ.

ಶೇ. 78 ರಷ್ಟು ವಿದ್ಯಾರ್ಥಿಗಳು ಪ್ರಸ್ತುತ ಇರುವ ವಿದ್ಯಾರ್ಥಿ ಸಂಘಟನೆಗಳು ಸರಿಯಾದ ರೀತಿಯಲ್ಲಿ ಕಾರ್ಯನಿರ್ವಹಿಸುತ್ತಿವೆ ಎಂದು ಹೇಳುತ್ತಾರೆ. ಆದರೆ ಶೇ. 22 ರಷ್ಟು ವಿದ್ಯಾರ್ಥಿಗಳು ಈ ಅಭಿಪ್ರಾಯವನ್ನು ತಳ್ಳಿಹಾಕುತ್ತಾರೆ. ವಿದ್ಯಾರ್ಥಿ ಸಂಘಟನೆಗಳು ಸರಿಯಾದ ರೀತಿಯಲ್ಲಿ ಕಾರ್ಯನಿರ್ವಹಿಸುತ್ತಿಲ್ಲದಿರುವುದಕ್ಕೆ ವಿದ್ಯಾರ್ಥಿ ಸಂಘಟನೆಗಳಲ್ಲಿ ಉಂಟಾಗುವ ಜಗಳ, ನಾಯಕತ್ವದ ಕೊರತೆ, ತರಗತಿ ಭಹಿಷ್ಕಾರ, ಬಂದ್/ರಸ್ತೆ ತಡೆ, ರಾಜಕೀಯದ ಅನಗತ್ಯ ಪ್ರವೇಶ ಇತ್ಯಾದಿಗಳು (ಶೇ. 20) ಕಾರಣ ಎಂದು ಹೇಳುತ್ತಾರೆ. ಹಾಗೆಯೇ ಶೇ. 3ರಷ್ಟು (5) ವಿದ್ಯಾರ್ಥಿಗಳು ಶೈಕ್ಷಣಿಕ ಮೌಲ್ಯಗಳ ಕಡೆಗಣನೆ, ಕ್ಯಾಂಪಸ್ ರಾಜಕೀಯಗಳೂ ಕಾರಣ ಎಂದು ಹೇಳುತ್ತಾರೆ.

ವಿದ್ಯಾರ್ಥಿಗಳು ಅವರ ಸಂಘಟನೆಗಳಲ್ಲಿ ಜಾತ್ಯಾತೀತ, ಪ್ರಜಾಪ್ರಭುತ್ವ, ಸಾಮಾಜಿಕ ಸುಧಾರಣೆ, ರಾಜಕಾರಣ, ಚುನಾವಣೆ ಇತ್ಯಾದಿ ವಿಚಾರಗಳಿಗೆ ಪ್ರಾಶಸ್ತ್ಯ ನೀಡುತ್ತಿವೆ ಎಂಬುವುದು ಈ ಸಮೀಕ್ಷೆಯಿಂದ ತಿಳಿದುಬರುತ್ತದೆ. ಉಳಿದ ಶೇ. 2 ರಷ್ಟು ವಿದ್ಯಾರ್ಥಿಗಳು ಸಾಮಾಜಿಕ ನ್ಯಾಯ ಮತ್ತು ಬದ್ಧತೆಗಳ ಕುರಿತಾಗಿ ಪ್ರಾಶಸ್ತ್ಯ ನೀಡುತ್ತಿವೆ ಎಂದು ಹೇಳುತ್ತಾರೆ. ವಿದ್ಯಾರ್ಥಿ ಸಂಘಟನೆಗಳು ವಿಶಾಲವಾದ ಸಾಮಾಜಿಕ ಸಂಗತಿಗಳ ತಳಹದಿಯ ಮೇಲೆ ಕಾರ್ಯನಿರ್ವಹಿಸುತ್ತಿರುವದು ಈ ಅಧ್ಯಯನದಿಂದ ತಿಳಿದುಬರುತ್ತದೆ. ಏಕೆಂದರೆ ವಿದ್ಯಾರ್ಥಿ ಸಂಘಟನೆಗಳು ವಿದ್ಯಾರ್ಥಿಗಳ ಹಿತಾಸಕ್ತಿ ಕುರಿತು ವಿಚಾರ ಮಾಡುವುದರ ಜೊತೆಗೆ, ದೇಶ ಕಟ್ಟುವ ನಿಟ್ಟಿನಲ್ಲಿ ಪ್ರಮುಖ ಪಾತ್ರ ವಹಿಸುವ ವಿಷಯಗಳಾದ ಜಾತ್ಯಾತೀತತೆ, ಪ್ರಜಾಪ್ರಭುತ್ವ, ಸಾಮಾಜಿಕ ಸುಧಾರಣೆ, ಪ್ರಚಲಿತ ರಾಜಕೀಯ ವಿದ್ಯಮಾನಗಳು ಮುಂತಾದ ಉದಾತ್ತ ವಿಚಾರಗಳಿಗೆ ಪ್ರಾಶಸ್ತ್ಯ ನೀಡುತ್ತಿವೆ. ಈ ವಿಷಯಗಳ ಆರೋಗ್ಯಕರ ಚರ್ಚೆ, ವಿಮರ್ಶೆ, ವಿಶ್ಲೇಷಣೆ ಆಗಬೇಕು ಎಂಬುವುದು ಈ ಸಂಘಟನೆಗಳ ದೃಢವಾದ ನಂಬಿಕೆಯಾಗಿದೆ.

ವಿದ್ಯಾರ್ಥಿ ಸಂಘಟನೆಗಳಲ್ಲಿ ರಾಜಕೀಯ ಶಕ್ತಿಗಳು ಪಾತ್ರವಹಿಸುತ್ತವೆಯೇ? ಎಂಬ ಪ್ರಶ್ನೆಗೆ ಶೇ. 36 ರಷ್ಟು ವಿದ್ಯಾರ್ಥಿಗಳು ವಿದ್ಯಾರ್ಥಿ ಸಂಘಟನೆಗಳಲ್ಲಿ ರಾಜಕೀಯ ಶಕ್ತಿಗಳು ಪ್ರವೇಶ ಮಾಡಿ ಪ್ರಮುಖ ಪಾತ್ರವಹಿಸುತ್ತವೆ ಎಂದು ಹೇಳಿದರೆ, ಶೇ. 64 ರಷ್ಟು ವಿದ್ಯಾರ್ಥಿಗಳು

ರಾಜಕೀಯ ಪಕ್ಷಗಳ ಪಾತ್ರವಿಲ್ಲ ಎಂದು ಹೇಳುತ್ತಾರೆ. ಶೇ. 12 ರಷ್ಟು ವಿದ್ಯಾರ್ಥಿಗಳು ರಾಜಕೀಯ ಪಕ್ಷಗಳು ಪಕ್ಷದ ಲಾಭಕ್ಕಾಗಿ, ಚುನಾವಣಾ ಮತಕ್ಕಾಗಿ, ಚುನಾವಣಾ ಪ್ರಚಾರಕ್ಕಾಗಿ ಹಾಗೂ ರಾಜಕೀಯ ಲಾಭಕ್ಕಾಗಿ ವಿದ್ಯಾರ್ಥಿ ಸಂಘಟನೆಗಳಲ್ಲಿ ಭಾಗವಹಿಸುತ್ತಿವೆ. ಹಾಗೆಯೇ ಶೇ. 24 ರಷ್ಟು ವಿದ್ಯಾರ್ಥಿಗಳು ಚುನಾವಣೆಯಲ್ಲಿ ವಿದ್ಯಾರ್ಥಿಗಳ ಬಳಕೆ ಮಾಡುವಲ್ಲಿ ರಾಜಕೀಯ ಶಕ್ತಿಗಳು ಪಾಲ್ಗೊಳ್ಳುತ್ತಿವೆ ಎಂದು ವಿವರಿಸುತ್ತಾರೆ.

ವಿದ್ಯಾರ್ಥಿ ಸಂಘಟನೆಗಳ ಮೂಲ ಉದ್ದೇಶ ಏನಾಗಿರಬೇಕು? ಎಂಬ ಪ್ರಶ್ನೆಗೆ ಶೇ. 97 ರಷ್ಟು ವಿದ್ಯಾರ್ಥಿಗಳು ವಿದ್ಯಾರ್ಥಿಗಳ ಸರ್ವೋತೋಮುಖ ಕಲ್ಯಾಣ, ಪ್ರಜಾಪ್ರಭುತ್ವ ಮೌಲ್ಯಗಳನ್ನು ಒಳಗೊಂಡಿರುವುದು ಹಾಗೂ ವಿದ್ಯಾರ್ಥಿಗಳ ಹಕ್ಕನ್ನು ಗುರುತಿಸುವ ವೇದಿಕೆಯಾಗಿರುವುದು ವಿದ್ಯಾರ್ಥಿ ಸಂಘಟನೆಗಳ ಮೂಲ ಉದ್ದೇಶವಾಗಿದೆ ಎಂದು ಹೇಳಿದರೆ, ಶೇ. 3 ರಷ್ಟು ವಿದ್ಯಾರ್ಥಿಗಳು ಜನಸಾಮಾನ್ಯರಲ್ಲಿ ಜನ ಜಾಗೃತಿ, ಏಕತೆ ಮತ್ತು ಸ್ವಾರ್ಥತ್ಯಾಗ ಸಿದ್ಧಾಂತಗಳು ಇಂತಹ ಸಂಘಟನೆಗಳ ಮೂಲ ಉದ್ದೇಶ ಎಂದು ಹೇಳುತ್ತಾರೆ.

ವಿದ್ಯಾರ್ಥಿ ಸಂಘಟನೆಗಳು ಯಾವ ರೀತಿಯ ರಾಜಕೀಯ ಪ್ರಜ್ಞೆಯನ್ನು ಬೆಳೆಸುತ್ತದೆ? ಎಂಬ ಪ್ರಶ್ನೆಯನ್ನು ಕೇಳಲಾಯಿತು. ಇದಕ್ಕೆ ಉತ್ತರವಾಗಿ ಶೇ. 76ರಷ್ಟು ವಿದ್ಯಾರ್ಥಿಗಳು ಶೈಕ್ಷಣಿಕ ಪ್ರಗತಿಗೆ ಪೂರಕವಾದ ಪ್ರಜ್ಞೆಯನ್ನು ವಿದ್ಯಾರ್ಥಿಗಳಲ್ಲಿ ಬೆಳೆಸುತ್ತದೆ ಎಂದು ಅಭಿಪ್ರಾಯಪಡುತ್ತಾರೆ. ಅಂತೆಯೇ ಶೇ. 10 ರಷ್ಟು ಶೈಕ್ಷಣಿಕ ಪ್ರಗತಿಗೆ ಪೂರಕವಲ್ಲದ, ಶೇ. 12 ರಷ್ಟು ರಾಜಕೀಯ ಹಸ್ತಕ್ಷೇಪದಿಂದ ಕೂಡಿದ, ಶೇ. 2 ರಷ್ಟು ಒತ್ತಡವನ್ನು ಹೇರುವ ಮೂಲಕ ರಾಜಕೀಯ ಪ್ರಜ್ಞೆಯನ್ನು ವಿದ್ಯಾರ್ಥಿ ಸಮೂಹದಲ್ಲಿ ಹೆಚ್ಚಿಸುತ್ತಿದೆ ಎನ್ನುವುದನ್ನು ವಿವರಿಸುತ್ತಾರೆ. ಅಂದರೆ ಬಹುಸಂಖ್ಯಾತ ವಿದ್ಯಾರ್ಥಿಗಳು ವಿದ್ಯಾರ್ಥಿ ಸಂಘಟನೆಗಳು ಶೈಕ್ಷಣಿಕ ಪ್ರಗತಿಗೆ ಪೂರಕವಾದ ಪ್ರಜ್ಞೆಯನ್ನು ವಿದ್ಯಾರ್ಥಿ ಸಮುದಾಯದಲ್ಲಿ ಮೂಡಿಸುತ್ತಿವೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿರುವುದು ಈ ಅಧ್ಯಯನದಿಂದ ಸ್ಪಷ್ಟವಾಗುತ್ತದೆ.

ವಿದ್ಯಾರ್ಥಿ ಸಂಘಟನೆಗಳಲ್ಲಿ ರಾಜಕೀಯ ಪ್ರಾತಿನಿಧಿತ್ವ ಇರಬೇಕೆಂದು ನೀವು ಬಯಸುತ್ತೀರಾ? ಎಂಬ ಪ್ರಶ್ನೆಗೆ ಶೇ. 47 ರಷ್ಟು ವಿದ್ಯಾರ್ಥಿಗಳು ವಿದ್ಯಾರ್ಥಿ ಸಂಘಟನೆಗಳಲ್ಲಿ ರಾಜಕೀಯ ಪ್ರಾತಿನಿಧಿತ್ವ ಇರಬೇಕೆಂದು ಅವರು ಬಯಸುತ್ತಾರೆ. ಅವರ ಪ್ರಕಾರ ಅದು ವಿದ್ಯಾರ್ಥಿಗಳಲ್ಲಿ ರಾಜಕೀಯ ಪ್ರಜ್ಞೆ ಬೆಳೆಸಲು, ಸಂಘಟನೆ ಸಬಲೀಕರಣಗೊಳಿಸಲು ಮತ್ತು ನಾಯಕತ್ವದ ಮಾರ್ಗದರ್ಶನವನ್ನು ನೀಡಲು ಸಹಾಯ ಮಾಡುತ್ತದೆ. ಹಾಗೆಯೇ ರಾಜಕೀಯ ಪ್ರಾತಿನಿಧಿತ್ವವು ವಿದ್ಯಾರ್ಥಿಗಳ ಹಿತಾಸಕ್ತಿ ಕಾಪಾಡಲು, ಪ್ರಜಾಪ್ರಭುತ್ವ ಮೌಲ್ಯ ಬೆಳೆಸಲು ಮತ್ತು ಸರಕಾರದ ಸಹಕಾರ ಪಡೆದುಕೊಳ್ಳಲು (ಶೇ. 27) ಸಹಾಯ ಮಾಡುತ್ತದೆ. ಆದರೆ ಶೇ. 53ರಷ್ಟು ವಿದ್ಯಾರ್ಥಿಗಳು ವಿದ್ಯಾರ್ಥಿ ಸಂಘಟನೆಗಳಲ್ಲಿ ರಾಜಕೀಯ ಪ್ರಾತಿನಿಧಿತ್ವ ಬೇಡವೆಂದು ಹೇಳುತ್ತಾರೆ. ಅದಕ್ಕೆ ಕಾರಣಗಳನ್ನು ನೀಡುತ್ತಾರೆ–ಅದು ವಿದ್ಯಾರ್ಥಿಗಳಲ್ಲಿ

ರಾಜಕೀಯ ಒತ್ತಡವನ್ನು ಮೂಡಿಸುತ್ತದೆ, ವಿದ್ಯಾರ್ಥಿಗಳ ದುರುಪಯೋಗ, ಒಳಜಗಳ, ಗುಂಪುಗಾರಿಕೆಯನ್ನು ಹೆಚ್ಚಿಸುತ್ತದೆ (ಶೇ. 31) ಹಾಗೂ ವಿದ್ಯಾರ್ಥಿ ಸಂಘಟನೆ ರಾಜಕೀಯದಿಂದ ಮುಕ್ತವಾಗಿರಬೇಕು ಎನ್ನುವವರ ಪ್ರಮಾಣ ಶೇ. 22 ರಷ್ಟು ಇದರಿಂದ ಸ್ಪಷ್ಟವಾಗುವ ಒಂದು ಸಂಗತಿಯೆನೆಂದರೆ ವಿದ್ಯಾರ್ಥಿ ಸಂಘಟನೆಯಲ್ಲಿ ರಾಜಕೀಯ ಪ್ರಾತಿನಿಧಿತ್ವ ಇರಬೇಕೆ ಅಥವಾ ಬೇಡವೇ? ಎಂಬ ವಿಷಯದ ಕುರಿತು ವಿದ್ಯಾರ್ಥಿ ಸಮುದಾಯದಲ್ಲಿ ಒಮ್ಮತದ ಅಭಿಪ್ರಾಯ ಇಲ್ಲದೆ ಇರುವುದು ಈ ಅಧ್ಯಯನದಿಂದ ತಿಳಿದುಬರುತ್ತದೆ.

ವಿದ್ಯಾರ್ಥಿ ಸಂಘಟನೆಗಳ ಇತರ ಉಪಯೋಗಗಳು ಯಾವುವು? ಎಂಬ ಪ್ರಶ್ನೆಯನ್ನು ಕೇಳಲಾಯಿತು. ಈ ಪ್ರಶ್ನೆಗೆ ಉತ್ತರವಾಗಿ ಶೇ. 92 ರಷ್ಟು ವಿದ್ಯಾರ್ಥಿಗಳು ವಿದ್ಯಾರ್ಥಿ ಸಂಘಟನೆಗಳ ಉಪಯೋಗಗಳ ಬಗ್ಗೆ ಹೇಳುತ್ತಾರೆ. ಬೇರೆ ಬೇರೆ ಶಿಕ್ಷಣ ಸಂಸ್ಥೆಗಳ ಪರಿಚಯ, ವಿದ್ಯಾರ್ಥಿಗಳಲ್ಲಿ ಪರಿಣಾಮಕಾರಿ ಒಗ್ಗಟ್ಟು ಮೂಡಿಸುವಿಕೆ, ಶೈಕ್ಷಣಿಕ ವಿನಿಮಯ, ವಿದ್ಯಾರ್ಥಿ ಪ್ರತಿನಿಧಿತ್ವ ಇತ್ಯಾದಿ ಉಪಯೋಗಗಳ ಬಗ್ಗೆ ಪ್ರಸ್ತಾಪಿಸಿದ್ದಾರೆ. ಹಾಗೆಯೇ ಶೇ. 8 ರಷ್ಟು ವಿದ್ಯಾರ್ಥಿಗಳು ಅವರ ಸಾಂಸ್ಕೃತಿಕ ಮತ್ತು ಪೂರಕ ಚಟುವಟಿಕೆಗಳ ಪ್ರಗತಿಯ ಉಪಯೋಗವೂ ದೊರೆಯುತ್ತಿದೆ ಎಂದು ಹೇಳುತ್ತಾರೆ.

ವಿದ್ಯಾರ್ಥಿ ಸಂಘಟನೆಗಳು ಈವರೆಗೆ ಯಾವ ವಿಷಯದಲ್ಲಿ ಹೋರಾಟ ಮಾಡಿದ ಅರಿವು ನಿಮ್ಮಲ್ಲಿದೆ? ಎಂಬ ಮಹತ್ವದ ಪ್ರಶ್ನೆಗೆ ಶೇ. 97 ರಷ್ಟು ವಿದ್ಯಾರ್ಥಿಗಳು ಭ್ರಷ್ಟಚಾರ, ಗುಣಮಟ್ಟದ ಶಿಕ್ಷಣದ ಬೇಡಿಕೆ, ದೌರ್ಜನ್ಯ ಮತ್ತು ರ್‍ಯಾಗಿಂಗ್, ಸಮಾನ ಶಿಕ್ಷಣಕ್ಕಾಗಿ ವಿದ್ಯಾರ್ಥಿ ಸಂಘಟನೆಗಳು ಹೋರಾಟ ಮಾಡಿವೆ ಮತ್ತು ಆ ಅರಿವನ್ನು ಹೊಂದಿವೆ ಎಂದು ಹೇಳುತ್ತಾರೆ. ಆದರೆ ಶೇ. 3 ರಷ್ಟು ವಿದ್ಯಾರ್ಥಿಗಳು ನಿರುದ್ಯೋಗ ಹಾಗೂ ಶಿಕ್ಷಕರ ನೇಮಕಾತಿ ಕುರಿತು ಹೋರಾಟ ಮಾಡಿವೆ ಎನ್ನುವುದನ್ನು ಹೇಳುತ್ತಾರೆ. ನಮ್ಮ ದೇಶದಲ್ಲಿ ಹಲವಾರು ಸಂಘಟನೆಗಳು ಇವೆ. ಉದಾಹರಣೆಗೆ ಕಾರ್ಮಿಕ ಸಂಘಟನೆ, ರೈತ ಸಂಘಟನೆ, ಮಹಿಳಾ ಸಂಘಟನೆ ಇತ್ಯಾದಿ. ಈ ಸಂಘಟನೆಗಳು ತಮ್ಮ ತಮ್ಮ ಹಿತಾಸಕ್ತಿಗಳಿಗಾಗಿ ಮಾತ್ರ ಹೋರಾಡುತ್ತವೆ. ಅಂದರೆ ಇವುಗಳ ಚಟುವಟಿಕೆಗಳು ಸೀಮಿತವಾಗಿವೆ. ಆದರೆ ವಿದ್ಯಾರ್ಥಿ ಸಂಘಟನೆಗಳು ಹಾಗಲ್ಲ. ದೇಶದ ಬಹು ಮುಖ್ಯ ಸಮಸ್ಯೆಗಳಾದ ಬಡತನ, ಹಸಿವು, ನಿರುದ್ಯೋಗ ಭ್ರಷ್ಟಾಚಾರ, ರಾಷ್ಟ್ರೀಯವಾದ, ದೇಶಭಕ್ತಿ ಮುಂತಾದ ವಿಷಯಗಳ ಕುರಿತು ಹೋರಾಟ ಮಾಡುತ್ತಿರುವುದು ಈ ವಿದ್ಯಾರ್ಥಿ ಸಂಘಟನೆಗಳ ವೈಶಿಷ್ಟ್ಯವಾಗಿದೆ.

ವಿದ್ಯಾರ್ಥಿ ಸಂಘಟನೆಗಳ ಬಗೆಗಿನ ಮಾಹಿತಿ ಕಾರ್ಯಗಾರದ ಅಗತ್ಯ ನಿಮಗಿದೆಯೇ? ಎಂಬ ಪ್ರಶ್ನೆಗೆ ಶೇ. 76 ರಷ್ಟು ವಿದ್ಯಾರ್ಥಿಗಳು ಇಂತಹ ಸಂಘಟನೆಗಳ ಬಗ್ಗೆ ಮಾಹಿತಿ ಬೇಕಾಗಿದೆ ಮತ್ತು ಕಾರ್ಯಾಗಾರಗಳ ಅಗತ್ಯವಿದೆ ಎಂದು ಅಭಿಪ್ರಾಯ

ಪಡುತ್ತಾರೆ. ಆದರೆ ಶೇ. 24 ರಷ್ಟು ವಿದ್ಯಾರ್ಥಿಗಳು ಈ ತೆರನಾದ ಮಾಹಿತಿ ಕಾರ್ಯಾಗಾರ ಬೇಕಾಗಿಲ್ಲ ಎನ್ನುವುದರ ಬಗ್ಗೆ ಹೆಚ್ಚು ಒಲವು ತೋರಿಸುತ್ತಾರೆ.

ವಿದ್ಯಾರ್ಥಿ ಸಂಘಟನೆಗಳಲ್ಲಿ ಭಾಗವಹಿಸಲು ನಿಮಗೆ ಇರುವ ಅಡೆತಡೆಗಳು ಯಾವುವು? ಎಂಬ ಪ್ರಶ್ನೆಯನ್ನು ವಿದ್ಯಾರ್ಥಿ ಸಮುದಾಯಕ್ಕೆ ಕೇಳಲಾಯಿತು. ಇದಕ್ಕೆ ಉತ್ತರವಾಗಿ ಕುಟುಂಬದ ನಿರ್ವಹಣೆ (ಶೇ. 32), ಶಿಕ್ಷಕ ವರ್ಗ (ಶೇ. 10), ಕಾಲೇಜು ಆಡಳಿತ ವ್ಯವಸ್ಥೆ (ಶೇ 11), ಪ್ರಚಲಿತದ ರಾಜಕಿಯ ವ್ಯವಸ್ಥೆ (ಶೇ. 11), ಸರಿಯಾದ ಮಾರ್ಗದರ್ಶನ ಕೊರತೆ (ಶೇ. 13), ಪಾಠಪ್ರವಚನಗಳ ಒತ್ತಡ (ಶೇ. 23) ಇತ್ಯಾದಿಗಳು ವಿದ್ಯಾರ್ಥಿಗಳಿಗೆ ಅವರ ಸಂಘಟನೆಗಳಲ್ಲಿ ಭಾಗವಹಿಸಲು ಇರುವ ಅಡೆತಡೆಗಳಾಗಿವೆ.

ವಿದ್ಯಾರ್ಥಿ ಸಂಘಟನೆಯು ಇನ್ನಷ್ಟು ಪರಿಣಾಮಕಾರಿಯಾಗಿ ಬೆಳೆಯಲು ಸಲಹೆಗಳನ್ನು ವಿಶ್ಲೇಷಿಸಿದಾಗ ಕಂಡುಬಂದ ಅಂಶಗಳೆನೆಂದರೆ ಶೇ. 97 ರಷ್ಟು ವಿದ್ಯಾರ್ಥಿಗಳು ಸಾರ್ವತ್ರಿಕ ಪ್ರಜಾಪಭುತ್ವ ಪರಿಕಲ್ಪನೆ, ಪರಿಣಾಮಕಾರಿ ತೀರ್ಮಾನ, ವಿದ್ಯಾರ್ಥಿಗಳಲ್ಲಿ ಸರಿಯಾದ ರಾಜಕೀಯ ಪ್ರಜ್ಞೆ, ಉತ್ತಮ ನಾಯಕತ್ವ ಇತ್ಯಾದಿ ಸಲಹೆಗಳನ್ನು ವಿದ್ಯಾರ್ಥಿ ಸಂಘಟನೆಗಳ ಪರಿಣಾಮಕಾರಿಯಾದ ಬೆಳವಣಿಗೆಗೆ ನೀಡಿರುತ್ತಾರೆ. ಹಾಗೆಯೇ ಶೇ. 3 ರಷ್ಟು (7) ವಿದ್ಯಾರ್ಥಿಗಳು ಆರ್ಥಿಕ ಸಬಲೀಕರಣ, ಕಾನೂನು ಬದ್ಧವಾದ ರಕ್ಷಣೆ ಮತ್ತು ನೀತಿಗಳನ್ನು ಈ ಸಂಘಟನೆಗಳು ಹೊಂದಿರಬೇಕು ಎಂದು ಆಶಿಸುತ್ತಾರೆ. ಅಂದರೆ ರಾಜಕೀಯ ಸಾಮಾಜೀಕರಣದ ಪ್ರಕ್ರಿಯೆಯಲ್ಲಿ ಸಮವಯಸ್ಕರ ಪಾತ್ರ ಅತ್ಯಂತ ಮಹತ್ವವಾಗಿರುವುದನ್ನು ಈ ಅಧ್ಯಯನ ದೃಢಿಕರಿಸುತ್ತದೆ. ಏಕೆಂದರೆ ವಿದ್ಯಾರ್ಥಿಗಳಲ್ಲಿ ಪ್ರಜಾಪ್ರಭುತ್ವದ ಪರಿಕಲ್ಪನೆ, ರಾಜಕೀಯ ತಿರ್ಮಾನ, ರಾಜಕೀಯ ಪ್ರಜ್ಞೆ ಬೆಳೆಯಬೇಕಾದರೆ ಸಮವಯಸ್ಕರ ಗಾಢವಾದ ಪ್ರಭಾದಿಂದ ಮಾತ್ರ ಸಾಧ್ಯ ಎಂಬ ಸತ್ಯವನ್ನು ಈ ಅಧ್ಯಯನ ಸ್ಪಷ್ಟಪಡಿಸುತ್ತದೆ.

ವಿದ್ಯಾರ್ಥಿ ಸಮುದಾಯದ ಏಳಿಗೆಗೆ ನಿಮ್ಮ ಬೇಡಿಕೆಗಳೇನು? ಎಂದು ಪ್ರಶ್ನಿಸಿದಾಗ ಶೇ. 47 ರಷ್ಟು ವಿದ್ಯಾರ್ಥಿಗಳು ಈ ಸಂಘಟನೆಗಳು ಉತ್ತಮ ಶಿಕ್ಷಣ, ಉತ್ತಮ ತರಬೇತಿ, ವೃತ್ತಿಪರ ಶಿಕ್ಷಣ, ಭ್ರಷ್ಟಾಚಾರ ಮುಕ್ತ ಸಮಾಜ, ಜಾತ್ಯಾತೀತ ಸಮಾಜ, ಸರಕಾರದ ಸೌಲಭ್ಯ ಇತ್ಯಾದಿ ಅಂಶಗಳನ್ನು ಒದಗಿಸುವಲ್ಲಿ ಪ್ರಯತ್ನಿಸಬೇಕು ಎಂದು ಹೇಳುತ್ತಾರೆ. ಹಾಗೆಯೇ ಶೇ. 53 ರಷ್ಟು ವಿದ್ಯಾರ್ಥಿಗಳು ಉತ್ತಮ ಶಿಕ್ಷಕ ವೃಂದ, ಉನ್ನತ ಶಿಕ್ಷಣ, ಕೌಶಲ್ಯ ವೃದ್ಧಿ, ಶಿಸ್ತು, ಪ್ರೋತ್ಸಾಹ, ಉತ್ತಮ ನೀತಿ, ಶಾಸನ ಕಾಯಿದೆಗಳು, ಉಚಿತ ಶಿಕ್ಷಣವನ್ನು ಒದಗಿಸುವಲ್ಲಿ ಸಂಘಟನೆ ಶ್ರಮಿಸಬೇಕು ಎಂದು ಹೇಳುತ್ತಾರೆ.

ಮುಂದೆ ರಾಜಕೀಯವನ್ನು ವೃತ್ತಿಯಾಗಿ ಮುಂದುವರಿಸುತ್ತೀರಾ? ಎಂದು ಕೇಳಿದ ಪ್ರಶ್ನೆಗೆ ವಿದ್ಯಾರ್ಥಿಗಳು ನೀಡಿದ ಉತ್ತರ ಹೀಗಿದೆ. ಶೇ. 16 ರಷ್ಟು ವಿದ್ಯಾರ್ಥಿಗಳು

ರಾಜಕೀಯವನ್ನು ವೃತ್ತಿಯನ್ನಾಗಿ ಮಾಡಿಕೊಂಡರೆ, ಶೇ. 73 ರಷ್ಟು ವಿದ್ಯಾರ್ಥಿಗಳು ರಾಜಕೀಯ ಎನ್ನುವುದು ವೃತ್ತಿಯಾಗಲಾರದು ಎಂದು ಹೇಳುತ್ತಾರೆ. ಹಾಗೆಯೇ ಶೇ. 11 ರಷ್ಟು ಇದರ ಬಗ್ಗೆ ಏನೂ ತಿಳಿದಿಲ್ಲ ಎಂದು ವಿವರಿಸಿದ್ದಾರೆ. ಅಂದರೆ ಬಹುಸಂಖ್ಯಾತ ವಿದ್ಯಾರ್ಥಿಗಳು ರಾಜಕೀಯವನ್ನು ಒಂದು ವೃತ್ತಿಯನ್ನಾಗಿ ಮಾಡಿಕೊಳ್ಳಲು ಸಿದ್ಧರಿಲ್ಲ. ಇದಕ್ಕೆ ಮುಖ್ಯ ಕಾರಣಗಳೆಂದರೆ 'ರಾಜಕೀಯ ಹೊಲಸು' 'ರಾಜಕೀಯವನ್ನು ದ್ವೇಷಿಸುತ್ತೇನೆ' 'ರಾಜಕೀಯ ಸುಸಂಸ್ಕೃತರಿಗೆ ಹೊಂದುವುದಿಲ್ಲ' ಎಂಬ ಹೇಳಿಕೆಗಳು ನಮ್ಮ ಸಮಾಜದಲ್ಲಿ ಪ್ರಚಲಿತವಾಗಿವೆ. ಇವುಗಳ ನೇರ ಪ್ರಭಾವ ವಿದ್ಯಾರ್ಥಿಗಳ ಮೇಲೂ ಆಗಿದೆ ಎಂಬುವುದನ್ನು ಇದರಿಂದ ಸ್ಪಷ್ಟವಾಗುತ್ತದೆ.

ರಾಜಕೀಯ ಪಕ್ಷಗಳು ಆಯೋಜಿಸುವ ವಿಚಾರ ಸಂಕಿರಣ ಮತ್ತು ಸಮಾರಂಭಗಳಿಗೆ ವಿದ್ಯಾರ್ಥಿಗಳು ಹಾಜರಾಗಬೇಕೆ ಎಂಬುವುದನ್ನು ವಿಶ್ಲೇಷಣೆಗೆ ಒಳಪಡಿಸಿದಾಗ ನಾವು ಕಂಡುಕೊಂಡ ಸತ್ಯ ಈ ರೀತಿಯಾಗಿದೆ. ಶೇ. 84 ರಷ್ಟು ವಿದ್ಯಾರ್ಥಿಗಳು ರಾಜಕೀಯ ಪಕ್ಷಗಳು ಆಯೋಜಿಸುವ ವಿಚಾರ ಸಂಕಿರಣ ಮತ್ತು ಸಮಾರಂಭಗಳಿಗೆ ವಿದ್ಯಾರ್ಥಿಗಳು ಹಾಜರಾಗಬೇಕು ಎಂದು ಹೇಳಿದರೆ, ಕೇವಲ ಶೇ. 13 ರಷ್ಟು ವಿದ್ಯಾರ್ಥಿಗಳು ಇಂತಹ ಸಮಾರಂಭಗಳಿಗೆ ಹಾಜರಾಗಬೇಕಾಗಿಲ್ಲ ಎಂದು ಹೇಳುತ್ತಾರೆ. ಇದರಿಂದ ನಮಗೆ ತಿಳಿದುಬರುವುದೇನೆಂದರೆ ವಿದ್ಯಾರ್ಥಿಗಳು ರಾಜಕೀಯ ಪಕ್ಷಗಳು ಆಯೋಜಿಸುವ ವಿಚಾರ ಸಂಕಿರಣ ಮತ್ತು ಸಮಾರಂಭಗಳಿಗೆ ಹಾಜರಾಗುವುದರಿಂದ ವಿದ್ಯಾರ್ಥಿಗಳಲ್ಲಿ ರಾಜಕೀಯ ಅರಿವು ಮೂಡಲು ಸಾಧ್ಯವಾಗುತ್ತದೆ. ಇದರ ಜೊತೆಗೆ ರಾಜಕೀಯ ವಿದ್ಯಮಾನಗಳನ್ನು ತಿಳಿದುಕೊಳ್ಳಲು ಸಾಧ್ಯವಾಗುತ್ತದೆ.

ರಾಜಕೀಯ ನಾಯಕರು ನೀಡುವ ಉಪದೇಶ/ಆದೇಶಗಳನ್ನು ವಿದ್ಯಾರ್ಥಿಗಳು ಪರಿಪಾಲಿಸಬೇಕೆ? ಎಂಬ ಬಹು ಮಹತ್ವದ ವಿಷಯವನ್ನು ವಿಶ್ಲೇಷಣೆಗೆ ಒಳಪಡಿಸಿದಾಗ ಹೊರಬಂದ ಫಲಿತವೆನೆಂದರೆ ಶೇ. 86 ರಷ್ಟು ವಿದ್ಯಾರ್ಥಿಗಳು ರಾಜಕೀಯ ನಾಯಕರು ನೀಡುವ ಉಪದೇಶ/ಆದೇಶಗಳನ್ನು ವಿದ್ಯಾರ್ಥಿಗಳು ಪರಿಪಾಲಿಸಬೇಕಾಗಿಲ್ಲ ಎಂದು ಹೇಳಿದರೆ ಶೇ. 9 ರಷ್ಟು ವಿದ್ಯಾರ್ಥಿಗಳು ಪಾಲಿಸಬೇಕಾಗುತ್ತದೆ ಎಂದು ಹೇಳುತ್ತಾರೆ. ಇದರಿಂದ ಒಂದು ವಿಷಯ ಸ್ಪಷ್ಟವಾಗುವುದೇನೆಂದರೆ ರಾಜಕೀಯ ನಾಯಕರ ಪ್ರಭಾವ ವಿದ್ಯಾರ್ಥಿಗಳ ಮೇಲೆ ಆಗಿಲ್ಲ. ಏಕೆಂದರೆ ಬಹುಸಂಖ್ಯಾತ ವಿದ್ಯಾರ್ಥಿಗಳು ರಾಜಕೀಯ ನಾಯಕರ ಉಪದೇಶ ಅಥವಾ ಆದೇಶಗಳನ್ನು ಪರಿಪಾಲಿಸಬೇಕಾಗಿಲ್ಲ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

ವಿದ್ಯಾರ್ಥಿ ಅಶಾಂತಿಗೆ ಕಾರಣವಾಗುವ ಪ್ರಮುಖ ಅಂಶಗಳು ಯಾವುವು? ಎಂಬ ಪ್ರಶ್ನೆಗೆ ವಿದ್ಯಾರ್ಥಿಗಳು ನೀಡಿದ ಪ್ರತಿಕ್ರಿಯೆಗಳು ಈ ರೀತಿಯಾಗಿವೆ. ಶೇ. 71 ರಷ್ಟು ವಿದ್ಯಾರ್ಥಿಗಳು ಶಿಕ್ಷಣದ ಗುಣಮಟ್ಟ ಕುಸಿತ, ವಿದ್ಯಾರ್ಥಿಗಳಿಗೆ ಸೂಕ್ತ ಮಾರ್ಗದರ್ಶನದ

ಕೊರತೆ, ಶೈಕ್ಷಣಿಕ ವ್ಯವಸ್ಥೆಯಲ್ಲಿರುವ ದೋಷ, ವಿದ್ಯಾರ್ಥಿಗಳು ಮತ್ತು ಅಧ್ಯಾಪಕರುಗಳ ನಡುವಿನ ಸಂಪರ್ಕದ ಕೊರತೆ, ಕಾಲೇಜುಗಳಲ್ಲಿ ಮೂಲಭೂತ ಸೌಕರ್ಯದ ಕೊರತೆ, ಶಿಕ್ಷಣದ ಶುಲ್ಕ ಏರಿಕೆ ಇತ್ಯಾದಿ ಅಂಶಗಳು ವಿದ್ಯಾರ್ಥಿಗಳ ಅಶಾಂತಿಗೆ ಕಾರಣವಾಗುತ್ತಿದೆ ಎಂದು ಹೇಳುತ್ತಾರೆ. ಶೇ. 14 ರಷ್ಟು ವಿದ್ಯಾರ್ಥಿಗಳು ರಾಜಕೀಯ ಭ್ರಷ್ಟಾಚಾರ, ಗುರುತಿಸಿಕೊಳ್ಳುವಿಕೆಯ ಸಮಸ್ಯೆ, ಬಡತನ, ನಿರುದ್ಯೋಗ, ವಿದ್ಯಾರ್ಥಿಗಳ ಮೇಲಿನ ದೌರ್ಜನ್ಯ ಮತ್ತು ಅತ್ಯಾಚಾರ, ಮಾಧ್ಯಮಗಳ ಪ್ರಭಾವ, ಜಾತಿ ಆಧಾರಿತ ಗುಂಪುಗಳು ಮತ್ತು ಸೌಲಭ್ಯಗಳಂತಹ ಕಾರಣಗಳನ್ನು ನೀಡಿದರೆ, ಶೇ. 15 ರಷ್ಟು ವಿದ್ಯಾರ್ಥಿಗಳು ಕಿಶೋರಾವಸ್ಥೆಯ ಮಾನಸಿಕ ಒತ್ತಡ, ಶಿಕ್ಷಣದಲ್ಲಿ ರಾಜಕೀಯ ಹಸ್ತಕ್ಷೇಪ, ಸಾಮಾಜಿಕ ಮೌಲ್ಯಗಳ ನಡುವಿನ ಸಂಘರ್ಷ, ಉತ್ತಮ ಆಡಳಿತ ಮತ್ತು ಶಿಸ್ತಿನ ಕೊರತೆಯಂತಹ ಕಾರಣಗಳನ್ನು ನೀಡುತ್ತಾರೆ. ಅಂದರೆ ಶಿಕ್ಷಣದ ಗುಣಮಟ್ಟ ಕುಸಿತ, ಶೈಕ್ಷಣಿಕ ವ್ಯವಸ್ಥೆಯಲ್ಲಿರುವ ದೋಷಗಳು, ವಿದ್ಯಾರ್ಥಿಗಳಿಗೆ ಸೂಕ್ತ ಮಾರ್ಗದರ್ಶನದ ಕೊರತೆ ಈ ವಿಷಯಗಳು ಇಂದು ವಿದ್ಯಾರ್ಥಿ ಸಮುದಾಯವನ್ನು ಬಹುವಾಗಿ ಕಾಡುತ್ತಿವೆ ಎಂಬುವುದು ಈ ಅಧ್ಯಯನದಿಂದ ತಿಳಿದುಬರುತ್ತದೆ.

ವಿದ್ಯಾರ್ಥಿ ಜೀವನದಲ್ಲಿ ಯಾವ ಸಂಗತಿಗಳು ನಿಮ್ಮನ್ನು ಹೆಚ್ಚು ಗೊಂದಲಕ್ಕೀಡು ಮಾಡಿವೆ? ಎಂಬ ಪ್ರಶ್ನೆಯನ್ನು ವಿಶ್ಲೇಷಣೆಗೆ ಒಳಪಡಿಸಿದಾಗ ಕಂಡುಬಂದ ಫಲಿತವೆನೆಂದರೆ ಶೇ. 82 ರಷ್ಟು ವಿದ್ಯಾರ್ಥಿಗಳು ಪರೀಕ್ಷೆಯ ಬಗೆಗಿನ ಮಾನಸಿಕ ಒತ್ತಡಗಳು, ಸಂಘಟನೆಯ ಅಸ್ಥಿರತೆ, ವಿದ್ಯಾರ್ಥಿ ಸಮುದಾಯದ ಬಗ್ಗೆ ಇರುವ ಅಸಡ್ಡೆ ಮನೋಭಾವ, ಮುಂದೆ ಬರುವ ನಿರುದ್ಯೋಗ ಸಮಸ್ಯೆ, ಮಾರ್ಗದರ್ಶನದ ಕೊರತೆ, ಕನ್ನಡ ಮತ್ತು ಇಂಗ್ಲಿಷ್ ಶಿಕ್ಷಣ ಮಾಧ್ಯಮದ ನಡುವಿನ ತಾರತಮ್ಯಗಳು ವಿದ್ಯಾರ್ಥಿಗಳ ಜೀವನದಲ್ಲಿ ಹೆಚ್ಚು ಗೊಂದಲಗಳನ್ನು ಉಂಟುಮಾಡುತ್ತಿವೆ ಎಂದು ಹೇಳುತ್ತಾರೆ. ಅಂತೆಯೇ ಶೇ. 18 ರಷ್ಟು ವಿದ್ಯಾರ್ಥಿಗಳು ಹಣಕಾಸಿನ ತೊಂದರೆ, ವಿದ್ಯಾರ್ಥಿ ಜೀವನದ ಸಂಕ್ರಮಣ ಕಾಲ, ವೃತ್ತಿಪರತೆ ಇಲ್ಲದ ಶಿಕ್ಷಣಗಳು ಹೆಚ್ಚು ಗೊಂದಲಗಳನ್ನು ಹುಟ್ಟುಹಾಕುತ್ತವೆ ಎಂದು ಹೇಳುತ್ತಾರೆ. ಇದರಿಂದ ನಮಗೆ ತಿಳಿದುಬರುವುದೆನೆಂದರೆ ವಿದ್ಯಾರ್ಥಿ ಸಮುದಾಯದ ಬಗ್ಗೆ ಇರುವ ಅಸಡ್ಡೆ ಮನೋಭಾವ, ನಿರುದ್ಯೋಗ ಸಮಸ್ಯೆ, ಪರೀಕ್ಷೆಯ ಬಗೆಗಿನ ಮಾನಸಿಕ ಒತ್ತಡಗಳು ಇಂದು ವಿದ್ಯಾರ್ಥಿ ಸಮುದಾಯವನ್ನು ಹೆಚ್ಚು ಗೊಂದಲಕ್ಕೀಡು ಮಾಡಿರುವುದು ಅಧ್ಯಯನದಿಂದ ತಿಳಿದುಬರುತ್ತದೆ.

ಶಿಕ್ಷಣದ ಗುರಿ/ ಉದ್ದೇಶಗಳಿಗೆ ನೀವು ಯಾವ ಪ್ರಾಶಸ್ತ್ಯ ನೀಡುತ್ತೀರಿ? ಎಂದು ವಿದ್ಯಾರ್ಥಿಗಳನ್ನು ಪ್ರಶ್ನಿಸಿದಾಗ ಅವರಿಂದ ಬಂದ ಪ್ರತಿಕ್ರಿಯೆಗಳು ಈ ರೀತಿಯಾಗಿವೆ. ಶೇ 47 ರಷ್ಟು ವಿದ್ಯಾರ್ಥಿಗಳು ಗುಣಮಟ್ಟದ ಬದುಕು ನಿರ್ವಹಿಸಲು ಶಿಕ್ಷಣ ಬೇಕಾಗಿದೆ ಮತ್ತು ಈ ನಿಟ್ಟಿನಲ್ಲಿ ಶಿಕ್ಷಣದ ಗುರಿಯನ್ನು ಅರ್ಥೈಸಿಕೊಳ್ಳಲು ಪ್ರಯತ್ನಿಸಿದ್ದಾರೆ. ಅಂತೆಯೇ ಶೇ.

30 ರಷ್ಟು ವಿದ್ಯಾರ್ಥಿಗಳು ಸಮಾಜದ ಉಪಯುಕ್ತ ಸದಸ್ಯನಾಗಲು ಮತ್ತು ಶೇ. 23 ರಷ್ಟು ವಿದ್ಯಾರ್ಥಿಗಳು (48) ನೈತಿಕ ಚಾರಿತ್ರ್ಯ ಉತ್ತಮಪಡಿಸಲು ಶಿಕ್ಷಣ ಸಹಾಯಕವಾಗಿದೆ ಎಂದು ಅಭಿಪ್ರಾಯಿಸುತ್ತಾರೆ. ಈ ಅಂಕಿ ಅಂಶಗಳು ಶಿಕ್ಷಣದ ಗುರಿ ಮತ್ತು ಉದ್ದೇಶಗಳ ಬಗ್ಗೆ ವಿದ್ಯಾರ್ಥಿಗಳ ಗ್ರಹಿಕೆ ಮತ್ತು ಮನೋಭಾವನೆಯನ್ನು ಸೂಚಿಸುತ್ತವೆ.

ನಿಮ್ಮ ಪ್ರಕಾರ ಶಿಕ್ಷಣದ ಉದ್ದೇಶದ ಕುರಿತು ವಿದ್ಯಾರ್ಥಿಗಳ ಗ್ರಹಿಕೆಗಳು ಈ ರೀತಿಯಾಗಿವೆ. ಶೇ. 72ರಷ್ಟು ವಿದ್ಯಾರ್ಥಿಗಳು ಶಿಕ್ಷಣದ ಉದ್ದೇಶವು ವೃತ್ತಿಪರತೆ ಮತ್ತು ಉದ್ಯೋಗ ಹೆಚ್ಚಿಸಿ, ಸರ್ವೋತೋಮುಖ ಅಭಿವೃದ್ಧಿ ಮತ್ತು ವ್ಯಕ್ತಿತ್ವ ನಿರ್ಮಾಣ ಹಾಗೂ ಬದುಕು ರೂಪಿಸುವ ನಿಟ್ಟಿನಲ್ಲಿ ಸಹಕರಿಸಬೇಕು ಎಂದು ಹೇಳಿದರೆ, ಶೇ. 28 ರಷ್ಟು ವಿದ್ಯಾರ್ಥಿಗಳು ಶಿಕ್ಷಣವು ಉತ್ತಮ ಸಮಾಜ ನಿರ್ಮಿಸುವ, ಸ್ವಾತಂತ್ರ್ಯ ಮತ್ತು ಸಮಾನತೆಯನ್ನು ರೂಪಿಸುವ ಹಾಗೂ ವಿದ್ಯಾರ್ಥಿ ಕ್ರಿಯಾಶೀಲತೆಯನ್ನು ಹೆಚ್ಚಿಸುವ ನಿಟ್ಟಿನಲ್ಲಿ ಉಪಯೋಗವಾಗುತ್ತಿದೆ ಎಂದು ಹೇಳುತ್ತಾರೆ. ಬದುಕು ರೂಪಿಸುವ ಹಾಗೂ ಉದ್ಯೋಗಾವಕಾಶಗಳನ್ನು ಹೆಚ್ಚಿಸುವಂತಹ ಶಿಕ್ಷಣದ ಅವಶ್ಯಕತೆ ಇದೆ ಎಂಬುವುದು ಬಹುಸಂಖ್ಯಾತ ವಿದ್ಯಾರ್ಥಿಗಳ ಅಭಿಮತವಾಗಿದೆ. ಶಿಕ್ಷಣ ಜ್ಞಾನಕ್ಕಾಗಿ ಎಂಬ ಪರಿಕಲ್ಪನೆ ತನ್ನ ಪ್ರಸ್ತುತತೆಯನ್ನು ಕಳೆದುಕೊಂಡಿದೆ. ಉದ್ಯೋಗ ನೀಡುವ ಶಿಕ್ಷಣ ಇಂದಿನ ಅಗತ್ಯವಾಗಿದೆ ಎಂಬುವುದು ಈ ಅಧ್ಯಯನದಿಂದ ಕಂಡುಕೊಂಡ ಸತ್ಯವಾಗಿದೆ.

ಕಾಲೇಜು/ ವಿಶ್ವವಿದ್ಯಾಲಯದ ಶಿಕ್ಷಣದ ಗುಣಮಟ್ಟದ ವಿಷಯವಾಗಿ ವಿದ್ಯಾರ್ಥಿ ಸಮುದಾಯದ ಅನಿಸಿಕೆಗಳು ಈ ರೀತಿಯಾಗಿವೆ. ಕಾಲೇಜು / ವಿಶ್ವವಿದ್ಯಾನಿಲಯಗಳಲ್ಲಿ ಶಿಕ್ಷಣದ ಗುಣಮಟ್ಟ ಸುಧಾರಿಸಿದೆ (ಶೇ 57). ಶೇ. 22 ರಷ್ಟು ವಿದ್ಯಾರ್ಥಿಗಳು ಸುಧಾರಿಸಿಲ್ಲ ಎಂದು ಹೇಳಿದರೆ ಶೇ. 30ರಷ್ಟು ತಕ್ಕಮಟ್ಟಿಗೆ ಸುಧಾರಿಸಿದೆ ಎಂದು ಹೇಳುತ್ತಾರೆ. ಶಿಕ್ಷಣದ ಗುಣಮಟ್ಟವು ಸುಧಾರಣೆ ಪ್ರಕ್ರಿಯೆಯಲ್ಲಿದೆ ಎನ್ನುವುದನ್ನು ವಿದ್ಯಾರ್ಥಿ ಸಮೂಹವು ಹತ್ತಿರದಿಂದ ಗಮನಿಸುತ್ತಿದೆ ಎನ್ನುವುದು ಇಲ್ಲಿ ಗಮನಾರ್ಹ ವಿಷಯ. ಸಾಮನ್ಯವಾಗಿ ಶಿಕ್ಷಣದ ಗುಣಮಟ್ಟ ಕುಸಿಯುತ್ತಿದೆ ಎಂದು ಎಲ್ಲರೂ ಅಭಿಪ್ರಾಯ ಪಡುತ್ತಾರೆ. ಆದರೆ ಬಹುಸಂಖ್ಯಾತ ವಿದ್ಯಾರ್ಥಿಗಳು ಕಾಲೇಜು/ ವಿಶ್ವವಿದ್ಯಾನಿಲಯಗಳಲ್ಲಿ ಶಿಕ್ಷಣದ ಗುಣಮಟ್ಟ ಸುಧಾರಿಸಿದೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿರುವುದು ವಿಶೇಷವಾಗಿದ್ದು, ಇದನ್ನು ವಿಶ್ಲೇಷಣೆಗೆ ಒಳಪಡಿಸುವ ಸಂಗತಿಯಾಗಿದೆ

ಶಿಕ್ಷಣದ ಗುಣಮಟ್ಟ ಕುಸಿಯಲು ಪ್ರಮುಖ ಕಾರಣಗಳ ಕುರಿತು ವಿದ್ಯಾರ್ಥಿಗಳ ಅಭಿಪ್ರಾಯಗಳು ಈ ರೀತಿಯಾಗಿವೆ. ಶೇ. 61 ರಷ್ಟು ವಿದ್ಯಾರ್ಥಿಗಳು ಶಿಕ್ಷಣದ ವ್ಯಾಪಾರೀಕರಣ, ಭ್ರಷ್ಟಾಚಾರ, ಶಿಕ್ಷಣಕ್ಕೆ ಸರಿ ಹೊಂದುವ ಉದ್ಯೋಗದ ಕೊರತೆಗಳು ಶಿಕ್ಷಣದ ಗುಣಮಟ್ಟ ಕುಸಿಯಲು ಕಾರಣ ಎಂದು ಹೇಳಿದರೆ, ಶೇ. 7 ರಷ್ಟು ಹಣಕಾಸು ಮತ್ತು ಆಡಳಿತದ

ಕೊರತೆ, ಶೇ. 6 ರಷ್ಟು ವಿದ್ಯಾರ್ಥಿಗಳ ಸಂಖ್ಯೆಯಲ್ಲಿ ಹೆಚ್ಚಳ+ಜನಸಂಖ್ಯೆ ಹೆಚ್ಚಳ ಹಾಗೂ ಶೇ. 26 ರಷ್ಟು ವಿಶ್ವವಿದ್ಯಾಲಯ ಮತ್ತು ಕಾಲೇಜು ಶಿಕ್ಷಣದಲ್ಲಿ ಗುಣಮಟ್ಟದ ಕೊರತೆ, ಆಸಕ್ತಿ ಕುಂದಿರುವುದು ಶಿಕ್ಷಣದ ಗುಣಮಟ್ಟ ಕುಸಿಯಲು ಕಾರಣ ಎಂದು ವಿವರಿಸುತ್ತಾರೆ. ಇದರಿಂದ ನಮಗೆ ತಿಳಿದುಬರುದೇನೆಂದರೆ ಶಿಕ್ಷಣದ ವ್ಯಾಪಾರೀಕರಣ, ಶಿಕ್ಷಣ ವ್ಯವಸ್ಥೆಯಲ್ಲಿರುವ ಭ್ರಷ್ಟಾಚಾರ, ಶಿಕ್ಷಣಕ್ಕೆ ಸರಿಹೊಂದುವ ಉದ್ಯೋಗದ ಕೊರತೆಗಳು ಇಂದು ಬಹುಸಂಖ್ಯಾತ ವಿದ್ಯಾರ್ಥಿಗಳನ್ನು ಕಾಡುವ ಪ್ರಮುಖ ಸಂಗತಿಗಳಾಗಿವೆ ಎಂಬುವುದು ಈ ಅಧ್ಯಯನದಿಂದ ಸ್ಪಷ್ಟವಾಗುತ್ತದೆ.

ಕಾಲೇಜು ಅಥವಾ ವಿಶ್ವವಿದ್ಯಾಲಯಗಳ ಶಿಕ್ಷಕ ವರ್ಗದ ಮುಖ್ಯ ಉದ್ದೇಶ ಯಾವುದಾಗಿರಬೇಕು ಎನ್ನುವ ಪ್ರಶ್ನೆಯನ್ನು ವಿದ್ಯಾರ್ಥಿಗಳಿಗೆ ಕೇಳಲಾಗಿತ್ತು. ಶೇ. 60 ರಷ್ಟು ವಿದ್ಯಾರ್ಥಿಗಳು ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡುವುದು ಅವರ ಮುಖ್ಯ ಉದ್ದೇಶವಾಗಿರಬೇಕು ಎನ್ನುವ ಆಶಯವನ್ನು ಅವರು ವ್ಯಕ್ತಪಡಿಸುತ್ತಾರೆ. ಹಾಗೆಯೇ ಶೇ. 27 ರಷ್ಟು ವಿದ್ಯಾರ್ಥಿಗಳು ಬೋಧನಾ ಜವಾಬ್ದಾರಿಯನ್ನು ನಿರ್ವಹಿಸುವುದು ಹಾಗೂ ಶೇ. 13 ರಷ್ಟು ವಿದ್ಯಾರ್ಥಿಗಳು ವಿದ್ಯಾರ್ಥಿಗಳ ಜೀವನ ಮತ್ತು ಭವಿಷ್ಯ ನಿರ್ವಹಿಸಲು ಮಾರ್ಗದರ್ಶನ ನೀಡುವುದು ಶಿಕ್ಷಕರ ಪ್ರಮುಖ ಉದ್ದೇಶವಾಗಿರಬೇಕು ಎಂದು ಹೇಳುತ್ತಾರೆ.

ಶಿಕ್ಷಕರ ಸಂಘಟನೆಯ ಅವಶ್ಯಕತೆ ಇದೆಯಾ? ಎಂಬ ಪ್ರಶ್ನೆಗೆ ಶೇ. 83 ರಷ್ಟು ವಿದ್ಯಾರ್ಥಿಗಳು ಶಿಕ್ಷಕರ ಸಂಘಟನೆಯ ಅಗತ್ಯವಿದೆ ಎಂದು ಹೇಳಿದರೆ, ಶೇ 10 ರಷ್ಟು ವಿದ್ಯಾರ್ಥಿಗಳು ಅದರ ಅಗತ್ಯವಿಲ್ಲ ಎಂದು ಪ್ರತಿಪಾದಿಸುತ್ತಾರೆ. ಹಾಗೆಯೇ ಶೇ. 7 ರಷ್ಟು ವಿದ್ಯಾರ್ಥಿಗಳು ಅದರ ಕುರಿತು ನಮಗೆ ಅರಿವಿಲ್ಲ ಎಂಬ ಉತ್ತರವನ್ನೂ ನೀಡಿದ್ದಾರೆ. ಅಂದರೆ ಶಿಕ್ಷಕರು ತಮ್ಮ ನ್ಯಾಯಬದ್ದ ಹಿತಾಸಕ್ತಿಗಳನ್ನು ರಕ್ಷಿಸಿಕೊಳ್ಳಲು ಸಂಘಟಿತರಾಗುವುದು ಅವಶ್ಯಕ ಎಂಬುವುದು ಈ ಅಧ್ಯಯನದಿಂದ ತಿಳಿದುಬರುತ್ತದೆ.

ಕಾಲೇಜು/ ವಿಶ್ವವಿದ್ಯಾಲಯದ ಆಡಳಿತಕ್ಕೆ ಸಂಬಂಧಿಸಿದಂತೆ ನಿರ್ಭಯದಿಂದ ಶಿಕ್ಷಕರ ಸಹಾಯ ಪಡೆಯುತ್ತಿರಾ? ಎಂದು ಕೇಳಲಾದ ಪ್ರಶ್ನೆಗೆ ವಿದ್ಯಾರ್ಥಿಗಳು ವ್ಯಕ್ತಪಡಿಸಿದ ಪ್ರತಿಕ್ರಿಯೆಗಳು ಈ ರೀತಿಯಾಗಿವೆ. ಶೇ. 83 ರಷ್ಟು ವಿದ್ಯಾರ್ಥಿಗಳು ಕಾಲೇಜು/ ವಿಶ್ವವಿದ್ಯಾಲಯದ ಆಡಳಿತಕ್ಕೆ ಸಂಬಂಧಿಸಿದಂತೆ ಶಿಕ್ಷಕರ ಸಹಾಯವನ್ನು ನಿರ್ಭಯತೆಯಿಂದ ಪಡೆಯುತ್ತಿದ್ದಾರೆ. ಕಡಿಮೆ ಪ್ರಮಾಣದ ವಿದ್ಯಾರ್ಥಿಗಳು ಈ ರೀತಿಯ ಸಹಾಯವನ್ನು ಪಡೆದುಕೊಳ್ಳುವಲ್ಲಿ ವಿಫಲರಾಗಿದ್ದಾರೆ. ಹಾಗೆಯೇ ಶೇ. 3 ರಷ್ಟು ವಿದ್ಯಾರ್ಥಿಗಳು ಕೆಲವೊಂದು ಸಂದರ್ಭದಲ್ಲಿ ಮಾತ್ರವೇ ಶಿಕ್ಷಕರ ಸಹಾಯವನ್ನು ಪಡೆದುಕೊಳ್ಳುತ್ತಿದ್ದಾರೆ. ಶಿಕ್ಷಕ ಮತ್ತು ವಿದ್ಯಾರ್ಥಿಗಳ ಸಂಬಂಧ ಅನ್ಯೋನ್ಯವಾಗಿದ್ದು, ಶಿಕ್ಷಕರು ತಮ್ಮ ವಿದ್ಯಾರ್ಥಿಗಳ ಬದುಕು

ರೂಪಿಸಿಕೊಳ್ಳುವ ಪ್ರಕ್ರಿಯೆಯಲ್ಲಿ ಸಹಾಯ ಮಾಡುತ್ತಿದ್ದಾರೆ ಎನ್ನುವ ಸಂಗತಿ ಇದರಿಂದ ಸ್ಪಷ್ಟವಾಗುತ್ತದೆ.

ಶಿಕ್ಷಕರ ನೇಮಕಾತಿ/ಪದೋನ್ನತಿಯಲ್ಲಿ ವಿದ್ಯಾರ್ಥಿಗಳ ಅನಿಸಿಕೆಗಳು ಈ ರೀತಿಯಾಗಿವೆ. ಶೇ. 64 ರಷ್ಟು ವಿದ್ಯಾರ್ಥಿಗಳು ಶಿಕ್ಷಕರ ನೇಮಕಾತಿ/ಪದೋನ್ನತಿಯಲ್ಲಿ ವಿದ್ಯಾರ್ಥಿಗಳ ಅನಿಸಿಕೆಯನ್ನು ಪರಿಗಣಿಸಬೇಕು ಎಂದು ಹೇಳಿದರೆ ಶೇ. 32 ವಿದ್ಯಾರ್ಥಿಗಳು ಬೇಕಾಗಿಲ್ಲ ಎಂಬ ಉತ್ತರವನ್ನು ಕೊಡುತ್ತಾರೆ. ಆದರೆ ಶೇ. 4ರಷ್ಟು ವಿದ್ಯಾರ್ಥಿಗಳು ಇದರ ಬಗ್ಗೆ ಅರಿವಿಲ್ಲ ಎಂಬ ಅಭಿಪ್ರಾಯವನ್ನು ಹೇಳುತ್ತಾರೆ. ವಿದ್ಯಾರ್ಥಿಗಳು ಕೂಡ ಒಟ್ಟು ವ್ಯವಸ್ಥೆಯ ಭಾಗವಾಗಿರುವದರಿಂದ ಶಿಕ್ಷಕರ ಪದೋನ್ನತಿಯಲ್ಲಿ ಅವರ ಅನಿಸಿಕೆಗಳನ್ನು ಪರಿಗಣಿಸಬೇಕು ಎಂಬ ವಿಷಯ ಸಮಂಜಸವಾಗಿದೆ.

ನಮ್ಮ ಕೌಟುಂಬಿಕ ಪದ್ಧತಿಗಳು ಮತ್ತು ಸಂಪ್ರದಾಯಗಳ ಬಗ್ಗೆ ವಿದ್ಯಾರ್ಥಿಗಳ ಗ್ರಹಿಕೆ ಮತ್ತು ಮನೋಭಾವನೆಗಳ ಕುರಿತು ಅರಿತುಕೊಳ್ಳಲು ಆಯ್ದ ಪ್ರಶ್ನೆಗಳನ್ನು ಕೇಳಲಾಗಿತ್ತು. ಶೇ. 50ರಷ್ಟು ವಿದ್ಯಾರ್ಥಿಗಳು ನಮ್ಮ ಕೌಟುಂಬಿಕ ಪದ್ಧತಿಗಳು ಮತ್ತು ಸಂಪ್ರದಾಯಗಳನ್ನು ಅನುಸರಿಸಬೇಕು ಎಂದು ಹೇಳಿದರೆ, ಶೇ. 44 ರಷ್ಟು ವಿದ್ಯಾರ್ಥಿಗಳು ಈಗಿನ ಕೌಟುಂಬಿಕ ಪದ್ಧತಿಗಳು ಹಾಗೂ ಸಂಪ್ರದಾಯಗಳಲ್ಲಿ ಬದಲಾವಣೆಗಳಾಗಬೇಕು ಎಂದು ಹೇಳುತ್ತಾರೆ. ಇದರಿಂದ ತಿಳಿದುಬರುವದೇನೆಂದರೆ ಇಂದಿಗೂ ಕೂಡ ಕುಟುಂಬ ರಾಜಕೀಯ ಸಾಮಾಜೀಕರಣದ ನಿಯೋಗವಾಗಿ ಅತ್ಯಂತ ಪ್ರಮುಖ ಪಾತ್ರ ವಹಿಸುತ್ತಿದೆ.

ವಿದ್ಯಾರ್ಥಿಗಳು ತಮ್ಮ ಜೀವನದಲ್ಲಿ ಯಾವು ತೀರ್ಮಾನಗಳಿಗೆ ಹೆಚ್ಚು ಒತ್ತು ನೀಡುತ್ತಿದ್ದಾರೆ ಎಂಬುದರ ಬಗ್ಗೆ ಗಮನಹರಿಸಲಾಯಿತು. ಅದರಲ್ಲಿ ಶೇ. 62 ರಷ್ಟು ವಿದ್ಯಾರ್ಥಿಗಳು ತಮ್ಮ ಕೌಟುಂಬಿಕ ಜೀವನಕ್ಕೆ ಒತ್ತು ನೀಡಿದರೆ, ಶೇ 23 ರಷ್ಟು ವಿದ್ಯಾರ್ಥಿಗಳು ಸಾಮಾಜಿಕ ವಿಷಯಗಳಿಗೆ ಹಾಗೂ ಶೇ. 15 ರಷ್ಟು ವಿದ್ಯಾರ್ಥಿಗಳು ವೈಯಕ್ತಿಕ ವಿಷಯಗಳಿಗೆ ಹೆಚ್ಚಿನ ಮಹತ್ವ ನೀಡುತ್ತಿದ್ದಾರೆ. ಇಲ್ಲಿಯೂ ಕೂಡ ಕುಟುಂಬದ ಬಿಗಿ ಹಿಡಿತ ವಿದ್ಯಾರ್ಥಿಗಳ ಮೇಲೆ ಇರುವುದನ್ನು ನಾವು ನೋಡಬಹುದು.

ವಿದ್ಯಾರ್ಥಿಯಾಗಿ ಸಮಾಜದಲ್ಲಿ ನಿಮ್ಮ ಪಾತ್ರ ಏನು ಎಂದು ಕೇಳಲಾದ ಪ್ರಶ್ನೆಗೆ ವಿದ್ಯಾರ್ಥಿಗಳು ನೀಡಿದ ಉತ್ತರಗಳು ಈ ರೀತಿಯಾಗಿವೆ. ಸಮಾಜದಲ್ಲಿ ವಿದ್ಯಾರ್ಥಿಗಳ ಪಾತ್ರ ಮಹತ್ವದ್ದಾಗಿದೆ. ಶೇ. 53 ರಷ್ಟು ವಿದ್ಯಾರ್ಥಿಗಳು ಜವಾಬ್ದಾರಿ ನಾಗರೀಕರಾಗುವುದು, ಶೇ. 25 ರಷ್ಟು ವಿದ್ಯಾರ್ಥಿಗಳು ಯೋಗ್ಯವಾದ ಶಿಕ್ಷಣ, ವಿದ್ಯಾರ್ಥಿ ಪ್ರತಿನಿಧಿತ್ವ ಮತ್ತು ಭಾಗವಹಿಸುವಿಕೆ, ಶೇ. 8 ರಷ್ಟು ಸಮಾಜದ ಧೋರಣೆಗಳು ಮತ್ತು ನೀತಿಗಳನ್ನು ರೂಪಿಸಲು ಸಹಾಯಮಾಡುವುದು ಹಾಗೂ ಸಂಭವಿಸುವ ವಿದ್ಯಾಮಾನಗಳ ವಿಮರ್ಶಾತ್ಮಕ ಮೌಲ್ಯಮಾಪನ,

ಶೇ. 6 ರಷ್ಟು ವಿದ್ಯಾರ್ಥಿಗಳು ಪ್ರಜಾಪ್ರಭುತ್ವ ಮತ್ತು ಸಮಾನತೆಯ ಸಮಾಜಕ್ಕಾಗಿ ಶ್ರಮಿಸುವುದು ಈ ಅಂಶಗಳನ್ನು ಕೇಂದ್ರೀಕರಿಸಿದ ಪಾತ್ರವನ್ನು ವಿವರಿಸುತ್ತದೆ

ವಿದ್ಯಾರ್ಥಿಗಳನ್ನು ದೇಶದ ನಿಜವಾದ ಸಮಸ್ಯೆಗಳ ಬಗ್ಗೆ ಬೆಳಕು ಚೆಲ್ಲುವ ನಿಟ್ಟಿನಲ್ಲಿ ಮತ್ತು ದೇಶದ ಬಗ್ಗೆ ಅವರಿಗಿರುವ ಧೋರಣೆಗಳ ಬಗ್ಗೆ ಪ್ರಶ್ನೆಯನ್ನು ಕೇಳಲಾಗಿತ್ತು. ಶೇ. 30 ರಷ್ಟು (60) ಬಡತನ, ಶೇ. 22 ರಷ್ಟು (43) ಭ್ರಷ್ಟಚಾರ, ಶೇ. 11 ರಷ್ಟು (23) ನಾಗರೀಕ ಜಡತ್ವ, ಶೇ. 16 ರಷ್ಟು (32) ಜಾತಿ/ಧರ್ಮ ಸಂಪ್ರದಾಯ ಹಾಗೂ ಶೇ. 21 ರಷ್ಟು (42) ಸರಿಯಾದ ನಾಯಕತ್ವದ ಕೊರತೆಗಳು ದೇಶ ಎದುರಿಸುತ್ತಿರುವ ಜ್ವಲಂತ ಸಮಸ್ಯೆಗಳು ಎಂದು ಹೇಳುತ್ತಾರೆ.

ಸಮಾಜದಲ್ಲಿರುವ ಈ ಪಿಡುಗುಗಳನ್ನು ಹೋಗಲಾಡಿಸಬೇಕೇ? ಎನ್ನುವ ಪ್ರಶ್ನೆಗೆ ಶೇ. 50 ರಷ್ಟು ವಿದ್ಯಾರ್ಥಿಗಳು ಸಮಾಜದಲ್ಲಿರುವ ಭ್ರಷ್ಟಾಚಾರವನ್ನು ತೊಡೆದು ಹಾಕಬೇಕು ಎಂದು ಹೇಳುತ್ತಾರೆ. ಹಾಗೆಯೇ ಶೇ 17 ರಷ್ಟು ಹಳೆಯ/ಜಾತಿ ಆಧಾರಿತ ಸಂಪ್ರದಾಯಗಳನ್ನು ಬದಲಾಯಿಸಬೇಕು, ಶೇ. 11 (22) ಜಾತಿ / ವರ್ಗ ತಾರತಮ್ಯ ಹೋಗಲಾಡಿಸಬೇಕು, ಶೇ. 8 ಸಾಂಸ್ಕೃತಿಕ ತಾರತಮ್ಯವನ್ನು ಕಡಿಮೆಗೊಳಿಸಬೇಕು, ಶೇ. 7 ರಷ್ಟು ವಿದ್ಯಾರ್ಥಿಗಳು ಕ್ರಮವಾಗಿ ಲಿಂಗತಾರತಮ್ಯ ಮತ್ತು ಅತ್ಯಾಚಾರದಂತಹ ಪಿಡುಗುಗಳನ್ನು ಹೋಗಲಾಡಿಸಬೇಕು ಎಂದು ಹೇಳುತ್ತಾರೆ.

ನಿಮ್ಮ ಪ್ರಕಾರ ವ್ಯಕ್ತಿಯಲ್ಲಿ ಸಾಮಾಜಿಕ/ ಆರ್ಥಿಕ / ರಾಜಕೀಯ ಸಾಮಾಜೀಕರಣದ ಪ್ರಕ್ರಿಯೆಗೆ ನೆರವಾಗುವ ಸಂಸ್ಥೆಗಳು ಯಾವುದು? ಎಂದು ಕೇಳಲಾದ ಪ್ರಶ್ನೆಗೆ ವ್ಯಕ್ತಿಯ ಮೇಲೆ ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯ ಸಾಮಾಜೀಕರಣದ ಪ್ರಕ್ರಿಯೆಗೆ ಪ್ರಭಾವ ಬೀರುವ ಸಂಸ್ಥೆಗಳ ಕುರಿತಾದ ಅಭಿಪ್ರಾಯವನ್ನು ಹೇಳುತ್ತದೆ. ಇದು ವಿದ್ಯಾರ್ಥಿಗಳ ರಾಜಕೀಯ ಪ್ರಜ್ಞೆ ಹಾಗೂ ರಾಜಕೀಯ ಸಾಮಾಜೀಕರಣದ ಕುರಿತದ್ದಾಗಿದೆ. ಶೇ. 29 ರಷ್ಟು ವಿದ್ಯಾರ್ಥಿಗಳು ಶಿಕ್ಷಣ ಸಂಸ್ಥೆಗಳು ಪ್ರಭಾವ ಬೀರಿದರೆ ಶೇ. 25 ರಷ್ಟು ವಿದ್ಯಾರ್ಥಿಗಳು ಕುಟುಂಬ ಪ್ರಭಾವ ಬೀರುತ್ತಿದೆ ಎಂದು ಹೇಳುತ್ತಾರೆ. ಹಾಗೆಯೇ ಶೇ 19 ರಷ್ಟು ಸಹಪಾಠಿಗಳು, ಶೇ 16 ರಷ್ಟು ಸುತ್ತಲಿನ ಸಮಾಜ ಹಾಗೂ ಶೇ. 11 ರಷ್ಟು ಧಾರ್ಮಿಕ ಕೇಂದ್ರಗಳು ಹೆಚ್ಚಿನ ಪ್ರಭಾವ ಬೀರುತ್ತಿವೆ ಎಂದು ಹೇಳುತ್ತಾರೆ. ಶಿಕ್ಷಣ ಸಂಸ್ಥೆಗಳು ಹಾಗು ಕುಟುಂಬ ಇಂದಿಗೂ ರಾಜಕೀಯ ಸಾಮಾಜೀಕರಣದ ಪ್ರಭಲ ನಿಯೋಗಿಗಳಾಗಿದ್ದು ಈ ಅಧ್ಯಯನದಿಂದ ತಿಳಿದುಬರುತ್ತದೆ.

ಮೂಲ ರಾಜಕೀಯ ಪ್ರಜ್ಞೆಗಳು ಯಾವುವು ಎನ್ನುವ ಪ್ರಶ್ನೆಗೆ ನಾಗರಿಕ ಹಕ್ಕು ಮತ್ತು ಕರ್ತವ್ಯದ ಅರಿವು (ಶೇ 37), ಸರ್ವೋತೋಮುಖ ಪ್ರಗತಿ (ಶೇ. 34), ನಾಗರಿಕ ಬೇಡಿಕೆಗಳು (ಶೇ. 13), ಉತ್ತಮ ಆಡಳಿತ ವ್ಯವಸ್ಥೆ (ಶೇ. 9), ಸಾಮಾಜಿಕ ನ್ಯಾಯ (ಶೇ. 7) ದಂತಹ ಅಂಶಗಳು ವಿದ್ಯಾರ್ಥಿಗಳಲ್ಲಿ ರಾಜಕೀಯ ಪ್ರಜ್ಞೆ ಬೆಳೆಸುವಲ್ಲಿ ಸಹಕಾರಿಯಾಗುತ್ತದೆ

ಶೈಕ್ಷಣಿಕ ವ್ಯವಸ್ಥೆಗಳು ಯಾವ ತೆರನಾಗಿ ರಾಜಕೀಯ ಸಾಮಾಜೀಕರಣವನ್ನು ಮಾಡಬಲ್ಲವು ಎಂದು ವಿದ್ಯಾರ್ಥಿಗಳನ್ನು ಕೇಳಲಾಗಿತ್ತು. ಶೇ. 66 ರಷ್ಟು ಅಲ್ಪ ಸಂಖ್ಯಾತ/ಬಹು ಸಂಖ್ಯಾತ, ಮುಂದುವರಿದ/ಹಿಂದುಳಿದ ಬೌದ್ಧಿಕ ವಿಚಾರ, ಸಾಂಪ್ರದಾಯಿಕ/ಆಧುನಿಕ, ಅಧಿಕಾರಿಶಾಹಿ/ಪ್ರಜಾಪ್ರಭುತ್ವ ವಿಚಾರಗಳು, ಮೂಲಭೂತ ವಿಚಾರಗಳು ಇತ್ಯಾದಿಗಳ ಮುಖೇನ ಈ ಪ್ರಕ್ರಿಯೆಯನ್ನು ಮಾಡಬಹುದು ಎಂದು ಹೇಳುತ್ತಾರೆ. ಹಾಗೆಯೇ ಶೇ 14 ರಷ್ಟು ವಯಸ್ಸು ಆಧಾರಿತ ವಿಷಯಗಳಲ್ಲಿ, ಶೇ. 9 ರಷ್ಟು ವರ್ಗಾಧಾರಿತ, ಶೇ. 7 ರಷ್ಟು ಜಾತಿಯಾಧಾರಿತ, ಶೇ. 4 ರಷ್ಟು ಲಿಂಗಾಧಾರಿತ ವಿಷಯಗಳ ಆಧಾರದಲ್ಲಿ ಮೂಲಭೂತ ರಾಜಕೀಯ ಸಾಮಾಜೀಕರಣ ಪ್ರಕ್ರಿಯೆ ಒಳಗೊಳ್ಳಬಲ್ಲುದು ಎನ್ನುವುದನ್ನು ಹೇಳುತ್ತಾರೆ

ನಿಮ್ಮ ಪ್ರಕಾರ ರಾಜಕೀಯ ಸಾಮಾಜೀಕರಣ ಎಂದರೇನು? ಎಂದು ಕೇಳಿದ ಪ್ರಶ್ನೆಗೆ ವಿದ್ಯಾರ್ಥಿಗಳನ್ನು ರಾಜಕೀಯ ಸಾಮಾಜೀಕರಣದ ಕುರಿತು ಪ್ರಶ್ನೆ ಕೇಳಲಾಗಿತ್ತು. ಶೇ. 49 ರಷ್ಟು ವಿದ್ಯಾರ್ಥಿಗಳು ರಾಜಕೀಯ ಸಂಸ್ಕೃತಿಯ ರಕ್ಷಣೆ, ಶೇ 32 ರಷ್ಟು ಪರಿಣಾಮಕಾರಿ ಆಡಳಿತದಲ್ಲಿ ಪ್ರತಿಯೊಬ್ಬ ನಾಗರಿಕನ ಅಭಿಪ್ರಾಯ, ಶೇ 11 ರಷ್ಟು ಸಮಾಜದ ಒಳಿತಿಗಾಗಿ ದೈನಂದಿನ ಚಟುವಟಿಕೆಯಲ್ಲಿ ಮಾಡುವ ತೀರ್ಮಾನ ಹಾಗೂ ಶೇ. 8 ರಷ್ಟು ಕುಟುಂಬ/ ಸಮಾಜ/ರಾಜಕೀಯ, ನಾಯಕತ್ವಗಳಂತಹ ಅಂಶಗಳು ರಾಜಕೀಯ ಸಾಮಾಜೀಕರಣವನ್ನು ಬೆಂಬಲಿಸುವ ಅಂಶಗಳು ಎಂದು ವಿದ್ಯಾರ್ಥಿಗಳು ಅಭಿಪ್ರಾಯಪಡುತ್ತಾರೆ.

ನಿಮ್ಮ ಶೈಕ್ಷಣಿಕ ವ್ಯವಸ್ಥೆಯಲ್ಲಿ ರಾಜಕೀಯ ಸಾಮಾಜೀಕರಣದ ಪ್ರಜ್ಞೆ ಹೇಗೆ ಕಂಡು ಬರುತ್ತದೆ? ಎಂದು ವಿದ್ಯಾರ್ಥಿಗಳನ್ನು ಪ್ರಶ್ನಿಸಲಾಯಿತು. ಶೇ. 78 ರಷ್ಟು ವಿದ್ಯಾರ್ಥಿಗಳು ಪಾಠ ಪುಸ್ತಕಗಳಲ್ಲಿ, ತರಗತಿಗಳಲ್ಲಿ, ಶಾಲೆಯ ಕ್ಲಬ್‌ಗಳಲ್ಲಿ, ವಿದ್ಯಾರ್ಥಿ ಚುನಾವಣೆ ಮತ್ತು ನಾಯಕತ್ವ ಮುಖಾಂತರ ರಾಜಕೀಯ ಸಾಮಾಜೀಕರಣ ಕಂಡುಬರುತ್ತಿದೆ ಎಂದು ವಿವರಿಸಿದರೆ, ಶೇ 22 ರಷ್ಟು ವಿದ್ಯಾರ್ಥಿಗಳು ಶಿಕ್ಷಕರು/ಆಡಳಿತ ವರ್ಗ ಮತ್ತು ವಿದ್ಯಾರ್ಥಿಗಳ ಚರ್ಚೆಗಳಲ್ಲಿ ಈ ಅಂಶಗಳನ್ನು ಕಾಣಬಹುದು ಎಂದು ಹೇಳುತ್ತಾರೆ.

ವಿಶ್ವವಿದ್ಯಾನಿಲಯ/ಕಾಲೇಜು ಆಡಳಿತದ ಬಗ್ಗೆ ವಿದ್ಯಾರ್ಥಿಗಳ ಅಭಿಪ್ರಾಯಗಳು ಈ ರೀತಿಯಾಗಿವೆ. ಶೇ. 65 ರಷ್ಟು ವಿದ್ಯಾರ್ಥಿಗಳು ಕಾಲೇಜು ಆಡಳಿತ ಉತ್ತಮವಾಗಿದೆ ಎಂದು ಹೇಳಿದರೆ, ಶೇ. 16 ರಷ್ಟು ಸಾಧಾರಣ, ಶೇ. 11 ರಷ್ಟು ಇನ್ನು ಹೆಚ್ಚಿನ ಸುಧಾರಣೆಯಾಗಬೇಕು ಹಾಗೂ ಶೇ. 7 ರಷ್ಟು ಉತ್ತಮವಾಗಿಲ್ಲ ಎಂದು ವಿವರಿಸುತ್ತಾರೆ.

ಕಾಲೇಜು/ವಿಶ್ವವಿದ್ಯಾನಿಲಯದ ಅಧಿಕಾರಿಗಳು ನಿಮ್ಮ ಸಮಸ್ಯೆಗಳಿಗೆ ಸ್ಪಂದಿಸುತ್ತಾರೆಯೇ? ಎಂದು ಕೇಳಲಾದ ಪ್ರಶ್ನೆಗೆ ವಿದ್ಯಾರ್ಥಿಗಳು ಈ ರೀತಿಯಾಗಿ ಪ್ರತಿಕ್ರಿಯೆಗಳನ್ನು ವ್ಯಕ್ತಪಡಿಸಿದ್ದಾರೆ. ಶೇ. 79 ರಷ್ಟು ವಿದ್ಯಾರ್ಥಿಗಳು (157) ಕಾಲೇಜು,

ವಿಶ್ವವಿದ್ಯಾನಿಲಯದ ಅಧಿಕಾರಿಗಳು ವಿದ್ಯಾರ್ಥಿಗಳ ಸಮಸ್ಯೆಗಳಿಗೆ ಸ್ಪಂದಿಸುತ್ತಾರೆ ಎಂದು ಹೇಳುತ್ತಾರೆ. ಆದರೆ ಶೇ. 15 ರಷ್ಟು (32) ವಿದ್ಯಾರ್ಥಿಗಳಿಗೆ ಅವರ ಸ್ಪಂದನೆ ಸಿಗುತ್ತಿಲ್ಲ ಹಾಗೂ ಶೇ. 6 ರಷ್ಟು (11) ವಿದ್ಯಾರ್ಥಿಗಳು ಸಾಧಾರಣ ಮಟ್ಟದಲ್ಲಿ ಅವರ ಸ್ಪಂದನೆ ದೊರಕುತ್ತಿದೆ ಎಂದು ಹೇಳುತ್ತಾರೆ.

ವಿಶ್ವವಿದ್ಯಾನಿಲಯ/ ಕಾಲೇಜು ಆಡಳಿತ ವಿದ್ಯಾರ್ಥಿಗಳ ಸಮಸ್ಯೆಗಳನ್ನು ಬಗೆಹರಿಸುವಲ್ಲಿ ವಿಫಲವಾದಾಗ ಹೇಗೆ ಬಗೆಹರಿಸುವಿರಿ? ಎಂದು ವಿದ್ಯಾರ್ಥಿಗಳನ್ನು ಪ್ರಶ್ನಿಸಲಾಯಿತು. ವಿಶ್ವವಿದ್ಯಾನಿಲಯ ಹಾಗೂ ಕಾಲೇಜು ಆಡಳಿತ ಮಂಡಳಿ ವಿದ್ಯಾರ್ಥಿಗಳ ಸಮಸ್ಯೆಗಳನ್ನು ಬಗೆಹರಿಸುವಲ್ಲಿ ಪ್ರಮುಖ ಪಾತ್ರವಹಿಸುತ್ತವೆ. ಒಂದು ವೇಳೆ ಆಡಳಿತ ಮಂಡಳಿ ಈ ಬಗ್ಗೆ ವಿಫಲವಾದಾಗ ವಿದ್ಯಾರ್ಥಿಗಳ ಸಹಾಯದಿಂದ (ಶೇ. 81), ಹೊರಗಿನವರ ಸಹಾಯದಿಂದ (ಶೇ. 5), ಹೊರಗಿನವರು ಮತ್ತು ವಿದ್ಯಾರ್ಥಿಗಳ ಸಹಾಯದಿಂದ (ಶೇ. 12) ಹಾಗೂ ಪ್ರಭಾವಿ ವ್ಯಕ್ತಿಗಳ ಸಹಾಯದಿಂದ ತಮ್ಮ ಸಮಸ್ಯೆಗಳನ್ನು ಪರಿಹರಿಸಿಕೊಳ್ಳುತ್ತಾರೆ ಎಂಬ ಅಭಿಪ್ರಾಯವನ್ನು ವಿದ್ಯಾರ್ಥಿಗಳು ವ್ಯಕ್ತಪಡಿಸಿದ್ದಾರೆ.

ನೀವು ಪ್ರತಿಭಟನೆ ನಡೆಸುತ್ತಿರುವಾಗ ಬೇರೆ ಸಂಘಟನೆಯ ಸಹಾಯ ಅಥವಾ ಬೆಂಬಲ ಪಡೆಯುತ್ತೀರಾ ಎಂದು ಕೇಳಲಾಯಿತು. ವಿದ್ಯಾರ್ಥಿಗಳು ತಮ್ಮ ಬೇಡಿಕೆಗಳ ಈಡೇರಿಕೆಗಾಗಿ ಪ್ರತಿಭಟನೆ ನಡೆಸುತ್ತಿರುವ ಸಂದರ್ಭದಲ್ಲಿ ಬೇರೆ ಸಂಘಟನೆಗಳ ಸಹಾಯ ಅಥವಾ ಬೆಂಬಲವನ್ನು ಪಡೆದುಕೊಳ್ಳುತ್ತಾರೆ (ಶೇ. 83). ಹೆಚ್ಚಾಗಿ ಸ್ವಯಂ ಸೇವಾ ಸಂಘಗಳು ಮತ್ತು ಇತರ ವಿದ್ಯಾರ್ಥಿ ಸಂಘಗಳ ಬೆಂಬಲವನ್ನು ಪಡೆದುಕೊಳ್ಳುತ್ತವೆ. ಕೇವಲ ಶೇ 9 ರಷ್ಟು (18) ವಿದ್ಯಾರ್ಥಿಗಳು ಮಾತ್ರ ಇಂತಹ ಸಂಘಟನೆಗಳ ಬೆಂಬಲ ಪಡೆದುಕೊಳ್ಳುತ್ತಿಲ್ಲ ಹಾಗೂ ಶೇ. 8 ರಷ್ಟು (16) ವಿದ್ಯಾರ್ಥಿಗಳು ಈ ಬಗ್ಗೆ ಅರಿವಿಲ್ಲ ಎಂಬ ಉತ್ತರವನ್ನು ನೀಡಿದ್ದಾರೆ.

ವಿದ್ಯಾರ್ಥಿಗಳನ್ನು ರಾಜಕೀಯಕರಣಗೊಳಿಸುವಲ್ಲಿ ಶಿಕ್ಷಕರ ಪ್ರಮುಖ ಪಾತ್ರ ಕುರಿತು ವಿದ್ಯಾರ್ಥಿಗಳ ಅನಿಸಿಕೆಗಳನ್ನು ಇಲ್ಲಿ ನೀಡಲಾಗಿದೆ. ಶೇ. 63 ರಷ್ಟು ವಿದ್ಯಾರ್ಥಿಗಳು ಅವರನ್ನು ರಾಜಕೀಯಕರಣಗೊಳಿಸುವಲ್ಲಿ ಶಿಕ್ಷಕರು ಪ್ರಮುಖ ಪಾತ್ರವನ್ನು ವಹಿಸುತ್ತಾರೆ ಎಂದು ಹೇಳುತ್ತಾರೆ. ಆದರೆ ಶೇ. 19ರಷ್ಟು ವಿದ್ಯಾರ್ಥಿಗಳು ಈ ಪ್ರಕ್ರಿಯೆಯಲ್ಲಿ ಶಿಕ್ಷಕರ ಪಾತ್ರವಿಲ್ಲ ಎಂದರೆ ಶೇ. 18 ರಷ್ಟು ವಿದ್ಯಾರ್ಥಿಗಳಿಗೆ ಈ ಬಗ್ಗೆ ಅರಿವಿಲ್ಲ ಎನ್ನುವುದನ್ನು ಗಮನಿಸಬಹುದು.

ಶಾಲಾ/ಕಾಲೇಜುಗಳಲ್ಲಿ ರಾಜಕೀಯ ಚಟುವಟಿಕೆಗಳಿಗೆ ಪೂರಕವಾದ ಅವಕಾಶಗಳ ಕುರಿತು ವಿದ್ಯಾರ್ಥಿ ಸಮುದಾಯ ವ್ಯಕ್ತಪಡಿಸಿರುವ ಅಭಿಪ್ರಾಯಗಳು ಈ ರೀತಿಯಾಗಿವೆ. ಶಾಲಾ ಕಾಲೇಜುಗಳಲ್ಲಿ ರಾಜಕೀಯ ಚಟುವಟಿಕೆಗಳಿಗೆ ವಿದ್ಯಾರ್ಥಿಯ ಅನೇಕ ಅಂಶಗಳು

ಕಾರಣವಾಗುತ್ತವೆ. ಶೇ. 41 ರಷ್ಟು ವಿದ್ಯಾರ್ಥಿಗಳಿಗೆ ಸ್ನೇಹಿತರ ಸಂಪರ್ಕವಾದರೆ, ಶೇ 27 ರಷ್ಟು ವಿದ್ಯಾರ್ಥಿಗಳಿಗೆ ಇತರ ಸಮುದಾಯದ ಪ್ರಜ್ಞೆ ಇಲ್ಲದಿರುವುದು ಕಂಡುಬಂದಿದೆ. ಆದರೆ ಶೇ. 15 ರಷ್ಟು ವಿದ್ಯಾರ್ಥಿಗಳಿಗೆ ಸಾಮಾಜಿಕ ಅಂತಸ್ತು ಪೂರಕ ಅಂಶವಾದರೆ, ಶೇ. 10 ರಷ್ಟು (19) ವಿದ್ಯಾರ್ಥಿಗಳಿಗೆ ವಿದ್ಯಾರ್ಥಿಯ ಕೌಟುಂಬಿಕ ಹಿನ್ನಲೆ ಕಾರಣವಾಗುತ್ತದೆ. ಹಾಗೆಯೇ ಶೇ. 7 ರಷ್ಟು (14) ವಿದ್ಯಾರ್ಥಿಗಳಿಗೆ ಕಾಲೇಜು ಕ್ಯಾಂಪಸ್ ಅವ್ಯವಸ್ಥೆಯೇ ಒಂದು ಕಾರಣವಾಗಿ ಪರಿಣಮಿಸಿದೆ.

ಶಾಲಾ ಕಾಲೇಜುಗಳಲ್ಲಿ ವಿದ್ಯಾರ್ಥಿ ಚುನಾವಣೆಗಳನ್ನು ಕಡ್ಡಾಯಗೊಳಿಸಬೇಕೆ? ಶಾಲಾ ಕಾಲೇಜುಗಳಲ್ಲಿ ವಿದ್ಯಾರ್ಥಿ ಚುನಾವಣೆಗಳನ್ನು ಕಡ್ಡಾಯಗೊಳಿಸುವುದರ ಬಗ್ಗೆ ವಿವರಿಸುತ್ತದೆ. ಶೇ. 67 ರಷ್ಟು ವಿದ್ಯಾರ್ಥಿಗಳು ಚುನಾವಣೆಗಳನ್ನು ಕಡ್ಡಾಯಗೊಳಿಸಬೇಕು ಎಂದು ಹೇಳಿದರೆ ಶೇ. 32 ರಷ್ಟು ವಿದ್ಯಾರ್ಥಿಗಳು ಬೇಕಾಗಿಲ್ಲ ಎಂದು ಹೇಳುತ್ತಾರೆ.

ನಿಮ್ಮ ಶಿಕ್ಷಕರು/ಆಡಳಿತ ನೀವು ವಿದ್ಯಾರ್ಥಿ ಸಂಘದ ಸದಸ್ಯರಾಗಲು ಒಪ್ಪಿಗೆ ಸೂಚಿಸುತ್ತಾರೆಯೇ? ಶಿಕ್ಷಕ ವರ್ಗದವರು ವಿದ್ಯಾರ್ಥಿಗಳನ್ನು ಸಂಘದ ಸದಸ್ಯರಾಗಲು ಒಪ್ಪಿಗೆ ನೀಡುತ್ತಾರೆಯೇ ಎಂದು ಪ್ರಶ್ನಿಸಲಾಗಿತ್ತು. ಶೇ. 70 ರಷ್ಟು (139) ವಿದ್ಯಾರ್ಥಿಗಳು ಶಿಕ್ಷಕರ ಒಪ್ಪಿಗೆ ಇದೆ ಎಂದು ಹೇಳಿದರೆ ಶೇ. 16 ರಷ್ಟು (34) ವಿದ್ಯಾರ್ಥಿಗಳು ಅವರ ಸಮ್ಮತಿ ಇಲ್ಲ ಎಂದು ಹೇಳಿರುತ್ತಾರೆ.

ವಿಶ್ವವಿದ್ಯಾನಿಲಯ / ಕಾಲೇಜು ಆಡಳಿತದಲ್ಲಿ ವಿದ್ಯಾರ್ಥಿಗಳು ಭಾಗವಹಿಸುವಿಕೆ ಕುರಿತು ವಿದ್ಯಾರ್ಥಿಗಳು ನೀಡಿದ ಅನಿಸಿಕೆಗಳನ್ನು ಇಲ್ಲಿ ವಿಶ್ಲೇಷಣೆಗೆ ಒಳಪಡಿಸಲಾಯಿತು. ಶೇ. 87 ರಷ್ಟು (173) ರಷ್ಟು ವಿದ್ಯಾರ್ಥಿಗಳು ಸೆನೆಟ್, ಸಿಂಡಿಕೇಟ್, ಶಿಸ್ತು ಪರಿಪಾಲನೆ, ಪರೀಕ್ಷೆ ಮತ್ತು ಮೌಲ್ಯಮಾಪನದ ಸರಿಯಾದ ವ್ಯವಸ್ಥೆಗಳಿಗೆ; ಶೈಕ್ಷಣಿಕ ವೇಳಾಪಟ್ಟಿ ತಯಾರಿಕೆ, ವಿದ್ಯಾರ್ಥಿಗಳ ಹಕ್ಕುಗಳ ರಕ್ಷಣೆಗಳಿಗಾಗಿ ಕಾಲೇಜು ಆಡಳಿತಗಳಲ್ಲಿ ವಿದ್ಯಾರ್ಥಿಗಳು ಭಾಗವಹಿಸಬೇಕು ಎಂದು ಹೇಳುತ್ತಾರೆ. ಕೇವಲ ಶೇ. 12 ರಷ್ಟು (25) ವಿದ್ಯಾರ್ಥಿಗಳು ಮಾತ್ರ ಈ ಭಾಗವಹಿಸುವಿಕೆಯ ಅಗತ್ಯವಿಲ್ಲ ಎಂದು ಹೇಳುತ್ತಾರೆ

ನಿಮ್ಮ ಕುಟುಂಬದ ಸಾಮಾಜಿಕ ಮನೋಭಾವ, ಮೌಲ್ಯಗಳ ಬದ್ಧತೆಯನ್ನು ಹೇಗೆ ಅರ್ಥೈಸುವಿರಿ? ಎಂದು ವಿದ್ಯಾರ್ಥಿಗಳನ್ನು ಕೇಳಲಾಯಿತು. ಇದು ವಿದ್ಯಾರ್ಥಿಗಳ ಕುಟುಂಬದ ಮನೋಭಾವನೆಯನ್ನು ಹೇಳುತ್ತದೆ. ಶೇ. 51 ರಷ್ಟು ವಿದ್ಯಾರ್ಥಿಗಳ ಕುಟುಂಬವು ಉದಾರವಾದವನ್ನು ಪ್ರೋತ್ಸಾಹಿಸಿದರೆ, ಶೇ. 44 ರಷ್ಟು ಸಂಪ್ರದಾಯಶೀಲ ಕುಟುಂಬಗಳಾಗಿವೆ. ಹಾಗೆಯೇ ಶೇ. 5 ರಷ್ಟು ಕುಟುಂಬಗಳು ತೀವ್ರಗಾಮಿ ನಿಲುವುಗಳನ್ನು ಪ್ರತಿಪಾದಿಸುತ್ತವೆ ಎನ್ನುವುದು ತಿಳಿದುಬರುತ್ತದೆ.

ವಿದ್ಯಾರ್ಥಿ ರಾಜಕೀಯದಲ್ಲಿನ ನಿಮ್ಮ ಆಸಕ್ತಿಯ ಬಗ್ಗೆ ಪಾಲಕ/ಪೋಷಕರ ಪ್ರತಿಕ್ರಿಯೆ ಕುರಿತು ವಿದ್ಯಾರ್ಥಿಗಳ ಅಭಿಪ್ರಾಯಗಳನ್ನು ಸಂಗ್ರಹಿಸಲಾಯಿತು. ಇದು ವಿದ್ಯಾರ್ಥಿಗಳ ಆಸಕ್ತಿಗಳ ಬಗ್ಗೆ ಪೋಷಕರ ನಿಲುವುಗಳನ್ನು ಹೇಳುತ್ತದೆ. ಶೇ. 39 ರಷ್ಟು ವಿದ್ಯಾರ್ಥಿಗಳಿಗೆ ಅವರ ಪೋಷಕರು ಪ್ರೋತ್ಸಾಹ ನೀಡಿದರೆ, ಶೇ. 28 ರಷ್ಟು ವಿದ್ಯಾರ್ಥಿಗಳ ಪೋಷಕರು ತಟಸ್ಥರಾಗಿದ್ದಾರೆ ಮತ್ತು ಶೇ 13 ರಷ್ಟು ವಿದ್ಯಾರ್ಥಿಗಳ ಪೋಷಕರು ತಮ್ಮ ಮಕ್ಕಳ ರಾಜಕೀಯ ಪ್ರವೇಶಕ್ಕೆ ಸಂಪೂರ್ಣ ವಿರೋಧ ವ್ಯಕ್ತಪಡಿಸಿದ್ದಾರೆ. ಆದರೆ ಶೇ. 20 ರಷ್ಟು ವಿದ್ಯಾರ್ಥಿಗಳ ಪೋಷಕರು ತಮ್ಮ ಮಕ್ಕಳ ರಾಜಕೀಯ ಆಸಕ್ತಿಗಳ ಕುರಿತು ಸಹಮತ ವ್ಯಕ್ತಪಡಿಸಿ ಬೆಂಬಲಿಸಿರುವುದು ಕಂಡುಬರುತ್ತದೆ.

ನೀವು ಯಾವ ವಿಚಾರಧಾರೆಯಿಂದ ಗುರಿ ನಿರ್ದೇಶಿತರಾಗಿದ್ದೀರಿ? ಎಂಬ ಪ್ರಶ್ನೆಗೆ ಶೇ. 76 ರಷ್ಟು ವಿದ್ಯಾರ್ಥಿಗಳು ಜಾತ್ಯಾತೀತ ಧೋರಣೆಗಳಿಂದ ಪ್ರಭಾವಿತರಾದರೆ, ಶೇ. 9 ರಷ್ಟು ವಿದ್ಯಾರ್ಥಿಗಳು ಕ್ರಮವಾಗಿ ಎಡಪಂಥೀಯ ಹಾಗೂ ಬಲಪಂಥೀಯ ವಿಚಾರಧಾರೆಗಳಿಂದ ಪ್ರಭಾವಿತರಾಗಿದ್ದಾರೆ. ಆದರೆ ಶೇ. 6 ರಷ್ಟು ವಿದ್ಯಾರ್ಥಿಗಳು ತಟಸ್ಥ ಧೋರಣೆಯೊಂದಿಗೆ ಯಾವುದೇ ವಿಚಾರಧಾರೆಗಳಿಂದ ಪ್ರಭಾವಿತಗೊಳ್ಳದಿರುವುದು ತಿಳಿದುಬಂದಿದೆ.

ನೀವು ಯಾವತ್ತಾದರೂ ಜನಾಕರ್ಷಕ ನಾಯಕನಿಂದ ಪ್ರಭಾವಿತರಾಗಿದ್ದೀರಾ? ಎಂಬ ಪ್ರಶ್ನೆಗೆ ವಿದ್ಯಾರ್ಥಿಗಳ ಅನಿಸಿಕೆಗಳು ಈ ರೀತಿಯಾಗಿವೆ. ದೇಶದ ರಾಜಕೀಯ ನೇತಾರರಿಂದ ಸಾಕಷ್ಟು ವಿದ್ಯಾರ್ಥಿಗಳು ಪ್ರಭಾವಿತರಾಗಿದ್ದಾರೆ ಎಂಬುವುದು ಈ ಅಧ್ಯಯನದಿಂದ ತಿಳಿದುಬರುತ್ತದೆ. ಶೇ. 47 ರಷ್ಟು ವಿದ್ಯಾರ್ಥಿಗಳು ಅಣ್ಣಾ ಹಜಾರೆ, ಬಿ. ಆರ್. ಅಂಬೇಡ್ಕರ್, ಅಬ್ದುಲ್ ಕಲಾಂ ಹಾಗೂ ಗಾಂಧೀಜಿಯವರ ಆದರ್ಶಗಳಿಂದ ಪ್ರಭಾವಿತರಾಗಿದ್ದಾರೆ. ಆದರೆ ಶೇ. 53 ರಷ್ಟು ವಿದ್ಯಾರ್ಥಿಗಳು ಯಾವುದೇ ನಾಯಕರಿಂದ ಪ್ರಭಾವಿತಗೊಂಡಿಲ್ಲ ಎಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ನಿಮ್ಮ ಕುಟುಂಬದ ಸದಸ್ಯರು ಅಥವಾ ಸಂಬಂಧಿಕರು ಯಾವುದಾದರೂ ಚುನಾಯಿತ ಹುದ್ದೆಯನ್ನು ಅಲಂಕರಿಸಿದ್ದಾರೆಯೇ? ಎಂದು ಕೇಳಲಾದ ಪ್ರಶ್ನೆಗೆ ಅವರ ಉತ್ತರಗಳು ಈ ರೀತಿಯಾಗಿವೆ. ಶೇ. 96 ರಷ್ಟು ವಿದ್ಯಾರ್ಥಿಗಳ ಕುಟುಂಬ ಸದಸ್ಯರು ಚುನಾಯಿತ ಹುದ್ದೆಯನ್ನು ಅಲಂಕರಿಸಿದ್ದಾರೆ. ಕೇವಲ ಶೇ. 4 ರಷ್ಟು ವಿದ್ಯಾರ್ಥಿಗಳ ಸಂಬಂಧಿಕರು ಮಾತ್ರ ಇಂತಹ ಅನುಭವವನ್ನು ಪಡೆದುಕೊಂಡಿಲ್ಲ.

ನಿಮ್ಮ ಕಾಲೇಜು ಜೀವನದಲ್ಲಿ ಇಲ್ಲಿ ನಮೂದಿಸಿದ ಪಾತ್ರಗಳನ್ನು ನಿರ್ವಹಿಸಿದ್ದೀರಾ? ಎಂದು ಕೇಳಲಾದ ಪ್ರಶ್ನೆಗೆ ಶೇ. 69 ರಷ್ಟು ವಿದ್ಯಾರ್ಥಿಗಳು ದಿನ ಪತ್ರಿಕೆ, ಪುಸ್ತಕ ಹಾಗೂ ನಿಯತಕಾಲಿಕಗಳ ರಾಜಕೀಯ ಸುದ್ದಿಯ ಓದುವಿಕೆ ಮತ್ತು ಸ್ವಯಂ ಸೇವಾ ಸಂಘಟನೆಗಳ

ಜೊತೆ ಸಮಾಜಸೇವೆಗಳಂತಹ ಕಾರ್ಯಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಶೇ. 17 ರಷ್ಟು ವಿದ್ಯಾರ್ಥಿಗಳು ಸ್ನೇಹಿತರ ಜೊತೆ ರಾಜಕೀಯ ಚರ್ಚೆ, ಶೇ. 6 ರಷ್ಟು ಶೈಕ್ಷಣಿಕ ಚರ್ಚೆಗಳಲ್ಲಿ ಭಾಗವಹಿಸುವಿಕೆ, ಶೇ. 5 ರಷ್ಟು ರಾಜಕೀಯ ಸಭೆಗಳಲ್ಲಿ ಭಾಗವಹಿಸಿರುವುದು ಹಾಗೂ ಶೇ. 3 ರಷ್ಟು (5) ವಿದ್ಯಾರ್ಥಿಗಳ ಕಲ್ಯಾಣಕ್ಕಾಗಿ ನಾಯಕತ್ವವಹಿಸಿರುವ ಬಗ್ಗೆ ವಿಶ್ಲೇಷಿದ್ದಾರೆ.

ನಿಮ್ಮ ಕಾಲೇಜು ಜೀವನದಲ್ಲಿ ವಿದ್ಯಾರ್ಥಿ ರಾಜಕೀಯದಲ್ಲಿ ಹೇಗೆ ಆಸಕ್ತಿ ವಹಿಸಿದ್ದೀರಿ? ನಿಮ್ಮ ಅನುಭವಗಳನ್ನು ಹಂಚಿಕೊಳ್ಳುವಿರಾ? ಇದು ವಿದ್ಯಾರ್ಥಿಗಳ ರಾಜಕೀಯ ಆಸಕ್ತಿಗಳ ಬಗ್ಗೆ ವಿವರಿಸುತ್ತದೆ. ಶೇ. 57 ರಷ್ಟು (113) ವಿದ್ಯಾರ್ಥಿಗಳು ಪ್ರಚಲಿತ ಸಮಸ್ಯೆಗಳನ್ನು ವಿದ್ಯಾರ್ಥಿ ಸಭೆಗಳಲ್ಲಿ ಚರ್ಚಿಸಿ ನ್ಯಾಯಕ್ಕಾಗಿ ಹೋರಾಟ ನಡೆಸಿರುತ್ತಾರೆ ಮತ್ತು ವಿದ್ಯಾರ್ಥಿ ದೌರ್ಜನ್ಯ, ಅತ್ಯಾಚಾರ ತಡೆಗಟ್ಟುವ ಧರಣಿಗಳಲ್ಲಿ ಭಾಗವಹಿಸಿರುವುದರ ಬಗ್ಗೆ ವಿವರಿಸುತ್ತಾರೆ. ಶೇ. 20 ರಷ್ಟು (40) ವಿದ್ಯಾರ್ಥಿಗಳು ವಿದ್ಯಾರ್ಥಿಗಳ ಹಕ್ಕನ್ನು ಕಾಪಾಡಲು ಮತ್ತು ಸಮಾಜದ ಸುಧಾರಣೆಗೆ ಒತ್ತು ನೀಡಿ ಎನ್. ಎಸ್. ಎಸ್, ಸಮಾಜ ಸೇವೆ ಮತ್ತು ವಿದ್ಯಾರ್ಥಿ ಸಂಘಗಳ ಜೊತೆಗೆ ಭಾಗವಹಿಸುವಿಕೆಯಲ್ಲಿ ತೊಡಗಿಸಿಕೊಂಡಿರುತ್ತಾರೆ. ಹಾಗೆಯೇ ಶೇ 13 ರಷ್ಟು (28) ಚುನಾವಣೆಯಲ್ಲಿ ಭಾಗವಹಿಸಿ ಉತ್ತಮ ನಾಯಕರನ್ನು ಆರಿಸುವಲ್ಲಿ ಪ್ರಯತ್ನ ಮತ್ತು ಕಾಲೇಜು ನಾಯಕತ್ವವನ್ನು ವಹಿಸಿಕೊಂಡಿರುವುದು; ಶೇ. 10 ರಷ್ಟು (19) ಉತ್ತಮ ಶಿಕ್ಷಕ ವೃಂದ, ವ್ಯವಸ್ಥಿತ ಆಡಳಿತ ಮತ್ತು ವಿದ್ಯಾರ್ಥಿಗಳ ಪ್ರಾತಿನಿಧಿತ್ವ, ಭಾಗವಹಿಸುವಿಕೆಗೆ ಶ್ರಮಿಸಿದ್ದರ ಕುರಿತು ಹೇಳುತ್ತಾರೆ.

<u>ಸಲಹೆಗಳು</u>

- ಶಾಲಾ–ಕಾಲೇಜುಗಳಲ್ಲಿ ವಿದ್ಯಾರ್ಥಿ ಚುನಾವಣೆಗಳನ್ನು ಕಡ್ಡಾಯಗೊಳಿಸಬೇಕು. ಲಿಂಗ್ಡೋ ಸಮಿತಿಯ ಶಿಫಾರಸ್ಸುಗಳನ್ನು ಅನುಷ್ಠಾನಗೊಳಿಸಬೇಕು. ಇದರಿಂದ ವಿದ್ಯಾರ್ಥಿಗಳು ಪ್ರಜಾಸತ್ತಾತ್ಮಕ ಮೌಲ್ಯಗಳನ್ನು ತಮ್ಮ ಬದುಕಿನಲ್ಲಿ ಅಳವಡಿಸಿಕೊಳ್ಳಲು ಸಹಾಯಕವಾಗುತ್ತದೆ.
- ಬಡತನ, ನಿರುದ್ಯೋಗ, ಭ್ರಷ್ಟಾಚಾರ, ಜಾತೀಯತೆ, ಕೋಮುವಾದ ಹಾಗೂ ನಾಗರಿಕ ಜಡತ್ವ ಇಂದು ವಿದ್ಯಾರ್ಥಿಗಳನ್ನು ಕಾಡುತ್ತಿರುವ ವಿಷಯಗಳಾಗಿವೆ. ಆದ್ದರಿಂದ ನಾಗರಿಕ ಸಮಾಜ ಮತ್ತು ಸರಕಾರ ಈ ವಿಷಯಗಳನ್ನು ಗಂಭೀರವಾಗಿ ಪರಿಗಣಿಸಿ ಸೂಕ್ತ ಪರಿಹಾರಗಳನ್ನು ಕಂಡುಕೊಳ್ಳಬೇಕು.
- ಸಮಾಜದಲ್ಲಿ ವಿದ್ಯಾರ್ಥಿಗಳ ಪಾತ್ರ ಮಹತ್ವದ್ದಾಗಿದೆ. ಆದ್ದರಿಂದ ರಾಷ್ಟ್ರ ನಿರ್ಮಾಣ ಕಾರ್ಯದಲ್ಲಿ ವಿದ್ಯಾರ್ಥಿ ಶಕ್ತಿಯನ್ನು ಸಮರ್ಥವಾಗಿ ಬಳಸಿಕೊಳ್ಳಬೇಕು.

- ವಿದ್ಯಾರ್ಥಿಗಳು ಶಿಕ್ಷಣ ವ್ಯವಸ್ಥೆಯ ಭಾಗವಾಗಿದ್ದರಿಂದ ಶಿಕ್ಷಣಕ್ಕೆ ಸಂಬಂಧಿಸಿದಂತೆ ಪ್ರಮುಖ ನಿರ್ಧಾರಗಳನ್ನು ತಗೆದುಕೊಳ್ಳುವಾಗ ವಿದ್ಯಾರ್ಥಿಗಳ ಅಭಿಪ್ರಾಯಗಳನ್ನು ಪರಿಗಣನೆಗೆ ತಗೆದುಕೊಳ್ಳಬೇಕು.
- ಗುಣಮಟ್ಟದ ಬದುಕು ನಿರ್ವಹಿಸಲು ಸಹಾಯಕವಾಗುವಂತಹ ಶಿಕ್ಷಣ ಇಂದಿನ ಅವಶ್ಯಕತೆಯಾಗಿದ್ದು, ಆ ನಿಟ್ಟಿನಲ್ಲಿ ಸರಕಾರ ಶಿಕ್ಷಣದ ರೂಪುರೇಷಗಳನ್ನು ಸಿದ್ಧಪಡಿಸಬೇಕು.
- ಶಿಕ್ಷಣದ ವ್ಯಾಪಾರೀಕರಣ, ಭ್ರಷ್ಟಾಚಾರ, ಖಾಸಗೀಕರಣ, ಮುಂತಾದವುಗಳು ಶಿಕ್ಷಣದ ಗುಣಮಟ್ಟ ಕುಸಿಯಲು ಪ್ರಮುಖ ಕಾರಣಗಳಾಗಿದ್ದು, ಶಿಕ್ಷಣ ಕ್ಷೇತ್ರವನ್ನು ರಾಷ್ಟ್ರೀಕರಣಗೊಳಿಸಬೇಕು.
- ಪ್ರಸ್ತುತ ಪರೀಕ್ಷಾ ವ್ಯವಸ್ಥೆಯಲ್ಲಿ ಅಮೂಲಾಗ್ರವಾದ ಬದಲಾವಣೆಯ ಅವಶ್ಯಕತೆ ಇದ್ದು, ವಿದ್ಯಾರ್ಥಿಗಳು ಪರೀಕ್ಷೆಯ ಬಗೆಗಿನ ಮಾನಸಿಕ ಒತ್ತಡಗಳನ್ನು ಕಡಿಮೆ ಮಾಡಬೇಕು.
- ವಿದ್ಯಾರ್ಥಿ ಸಂಘಟನೆಗಳು ಪ್ರಜಾಪ್ರಭುತ್ವ, ಜಾತ್ಯಾತೀತ, ಸಾಮಾಜಿಕ ಸುಧಾರಣೆ, ಭ್ರಷ್ಟಾಚಾರ ಮುಕ್ತ ಭಾರತ ಮುಂತಾದ ವಿಷಯಗಳಿಗೆ ಹೆಚ್ಚು ಮಹತ್ವ ನೀಡುತ್ತಿವೆ. ಆದ್ದರಿಂದ ಇಂತಹ ಪ್ರಗತಿಪರ ವಿಚಾರಗಳನ್ನು ಬಹುಸಂಖ್ಯಾತ ವಿದ್ಯಾರ್ಥಿಗಳು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳುವಂತಹ ವಾತಾವರಣ ನಿರ್ಮಿಸಬೇಕು.
- ವಿದ್ಯಾರ್ಥಿ ಸಂಘಟನೆಯು ಒಂದು ಒತ್ತಡ ಗುಂಪು ಆಗಿದ್ದು, ರಾಜಕೀಯ ವ್ಯವಸ್ಥೆಯ ಮುಂದೆ ತನ್ನ ಬೇಡಿಕೆಗಳನ್ನು ಹೇಗೆ ಪ್ರತಿನಿಧಿಸುತ್ತದೆ ಎಂಬ ವಿಷಯ ಅತ್ಯಂತ ಮಹತ್ವದಾಗಿದ್ದು, ವಿದ್ಯಾರ್ಥಿ ರಾಜಕೀಯದಲ್ಲಿ ಆಸಕ್ತಿ ಇರುವವರು ಈ ವಿಷಯದ ಮೇಲೆ ಸಂಶೋಧನೆ ಕೈಗೊಳ್ಳಬಹುದು.
- ಇತ್ತೀಚಿನ ಒಂದು ಪ್ರಮುಖ ಬೆಳವಣಿಗೆ ಎಂದರೆ ವಿದ್ಯಾರ್ಥಿ ಸಂಘಟನೆಗಳು ಜನಪ್ರಿಯವಾಗುತ್ತಿದ್ದು ತಮ್ಮ ಬೇಡಿಕೆಗಳನ್ನು ಈಡೇರಿಸಿಕೊಳ್ಳಲು ಪ್ರಭುತ್ವದ ವಿರುದ್ಧ ಒಂದಾಗಿ ಹೋರಾಟ ಮಾಡುತ್ತಿವೆ. ಹೀಗಾಗಿ ವಿದ್ಯಾರ್ಥಿಗಳು ಇಂದು ಸಂಘಟನೆಗಳ ಅಡಿಯಲ್ಲಿ ಒಂದಾಗುತ್ತಿದ್ದಾರೆ. ಯಾವ ಅಂಶಗಳು ವಿದ್ಯಾರ್ಥಿಗಳನ್ನು ಪ್ರೇರೇಪಿಸುತ್ತಿವೆ? ವಿದ್ಯಾರ್ಥಿ ಸಂಘಟನೆಗಳನ್ನು ಹೇಗೆ ಜನಪ್ರಿಯಗೊಳಿಸಬಹುದು? ಪ್ರಸ್ತುತ ಸಮಾಜದಲ್ಲಿ ಅವುಗಳ ಪಾತ್ರವೇನು? ಇವೆಲ್ಲ ಪ್ರಮುಖ ಪ್ರಶ್ನೆಗಳಾಗಿದ್ದು, ಈ ವಿಷಯದ ಕುರಿತು ಸಂಶೋಧನೆ ಕೈಗೊಳ್ಳಬಹುದು.

- ವಿದ್ಯಾರ್ಥಿ ಸಂಘಟನೆಗಳು ಮತ್ತು ರಾಜಕೀಯ ಪಕ್ಷಗಳ ನಡುವಿನ ನಂಟು ಪ್ರಶ್ನಾತೀತವಾಗಿದ್ದು, ಹೇಗೆ ರಾಜಕೀಯ ಪಕ್ಷಗಳು ತಮ್ಮ ಜಾಲವನ್ನು ವಿದ್ಯಾರ್ಥಿ ಸಮುದಾಯದಲ್ಲಿ ಪ್ರಸಾರ ಮಾಡುತ್ತಿವೆ? ಎಂಬ ಪ್ರಶ್ನೆ ಅತ್ಯಂತ ಮಹತ್ವದ್ದಾಗಿದ್ದು, ಈ ವಿಷಯದ ಮೇಲೆ ಸಂಶೋಧನೆಯನ್ನು ಕೈಗೊಳ್ಳಬಹುದು.
- ನಿರ್ದಿಷ್ಟ ವಿದ್ಯಾರ್ಥಿ ಹಿಂಸೆ, ಅಶಿಸ್ತು ಈ ವಿಷಯಗಳು ಅತ್ಯಂತ ಮಹತ್ವದಾಗಿದ್ದು, ವಿದ್ಯಾರ್ಥಿ ರಾಜಕೀಯದಲ್ಲಿ ಆಸಕ್ತಿ ಇರುವವರು ಸಂಶೋಧನೆ ಕೈಗೊಳ್ಳಬಹುದು.

ಪರಾಮರ್ಶನ ಗ್ರಂಥಗಳು.

01) ಎಸ್.ಎಮ್.ಲಿಪಸೆಟ್ (ಸಂ) "ಸ್ಟುಡೆಂಟ್ ಪೊಲಿಟಿಕ್ಸ್" ನ್ಯೂಯಾರ್ಕ ಬೇಸಿಕ್ ಬುಕ್ಸ್, 1967

02) ಲಿಬ್‌ಮ್ಯಾನ್ ವಾಕರ್ ಆಂಡ್ ಗ್ಲೇಜರ್, "ಲ್ಯಾಟಿನ್ ಅಮೆರಿಕನ್ ಯುನಿವರ್ಸಿಟಿ ಸ್ಟುಡೆಂಟ್ಸ್ : ಎ ಸಿಕ್ಸ್ ನೆಷನ್ಸ್ ಸ್ಟಡಿ" ಕ್ಯಾಂಬ್ರಿಜ್, ಮೆಸ್ಸಾಚುಸೆಟ್ಸ್, ಹಾವರ್ಡ ಯುನಿವರ್ಸಿಟಿ ಪ್ರೆಸ್, 1972.

03) ಎಸ್.ಎಮ್.ಲಿಪಸೆಟ್ ಆಂಡ್ ಫಿಲಿಫ್ ಜಿ.ಅಲ್ತಬಷ್, "ಸ್ಟುಡೆಂಟ್ ಇನ್ ರಿವ್ಹೋಲ್ಟ್, ಇಂಟ್ರಾಡಕ್ಸನ್" ಬೇಕನ್ ಪ್ರೆಸ್, ಬೋಸ್ಟನ್, 1969.

04) ಆಯನ್ ರ‍್ಯಾಂಡ್ "ದಿ ನ್ಯೂ ಲೆಫ್ಟ್ : ದ ಎಂಟಿ ಇಂಡಸ್ಟ್ರಿಯಲ್ ರೆವೂಲ್ಯೂಷನ್" ದ ನ್ಯೂ ಅಮೆರಿಕನ್ ಲೈಬ್ರರಿ, ನ್ಯೂಯಾರ್ಕ 1971.

05) ಎ.ಬೆಲ್ಡನ್ ಫಿಲ್ಡ್ಸ್, "ದ ರೆವೂಲ್ಯೂಷನ್ ಬೆಟ್ರಾಯಿಡ್ : ದ ಫ್ರೆಂಚ್ ಸ್ಟುಡೆಂಟ್ ರಿವ್ಹೋಲ್ಟ್ ಆಫ್ ಮೇ–ಜೂನ್ 1968" ಇನ್ ಎಸ್.ಎಮ್.ಲಿಪಸೆಟ್ ಆಂಡ್ ಫಿಲಿಫ್ ಜಿ.ಅಲ್ತಬಷ್.

06) ಎ.ಬೆಲ್ಡನ್ ಫಿಲ್ಡ್ಸ್, "ದ ರೆವೂಲ್ಯೂಷನ್ ಬೆಟ್ರಾಯಿಡ್ : ದ ಫ್ರೆಂಚ್ ಸ್ಟುಡೆಂಟ್ ರಿವ್ಹೋಲ್ಟ್ ಆಫ್ ಮೇ–ಜೂನ್ 1968" ಇನ್ ಎಸ್.ಎಮ್.ಲಿಪಸೆಟ್ ಆಂಡ್ ಫಿಲಿಫ್ ಜಿ.ಅಲ್ತಬಷ್.

07) ಆರ್.ಆರ್.ಶರ್ಮಾ, "ಕ್ಯಾಂಪಸೆಸ್ ಆಫ್ ಹೈಯರ್ ಎಜುಕೇಶನ್ : ಜೆನಿಸಿಸ್ ಆಫ್ ಅನರೆಸ್ಟ್" ಜರ್ನಲ್ ಆಫ್ ಹೈಯರ್ ಎಜುಕೇಶನ್, ಯುಜಿಸಿ, ವ್ಯಾಲ್ಯೂಮ್ 11, ನಂ1&2, ನ್ಯೂ ಡೆಲ್ಲಿ, 1981

08) ಜ್ವಾಯಿಸ್ ಗೆಲ್ಬ್ ಆಂಡ್ ಮ್ಯಾರಿಯನ್ ಲಿಫ್‌ಪ್ಯಾಲಿ, "ದ ಪೊಲಿಟಿಕ್ಸ ಆಫ್ ಸೋಷಿಯಲ್ ಚೆಂಜ್ : ಎ ರೀಡರ್ ಫಾರ್ ಸೆವೆಂಟೀಸ್", ಹೋಲ್ಟ್ ರಿನೆಹಾರ್ಟ ಆಂಡ್ ವಿನ್‌ಸ್ಟನ್, ನ್ಯೂಯಾರ್ಕ, 1971.

09) ಕ್ಯಾನಿಥ್ ಕೆನಿ234ಸ್ಟನ್, "ಯು ಹ್ಯಾವ್ ಟು ಗ್ರೋ ಅಪ್ ಇನ್ ಸಿಯರ್ಸ ಡ್ಯಾಲೆ ಟು ನೋ ಹೌ ಬ್ಯಾಡ್ ಥಿಂಗ್ಸ್ ರಿಯಲಿ ಆರ್" ಇನ್ ಜ್ವಾಯಿಸ್ ಗೆಲ್ಬ್ ಆಂಡ್ ಮ್ಯಾರಿಯನ್ ಲಿಫ್‌ಪ್ಯಾಲಿ.

10) ಎಡ್ವರ್ಡ ಶಿಲ್ಸ್, "ಡ್ರಿಮ್ಸ ಆಫ್ ಪ್ಯಾನಿಟ್ಯೂಡ್, ನೈಟ್‌ಮೇರ್ಸ್ ಆಫ್ ಸ್ಕೇರ್ಸಿಟಿ" ಇನ್ ಎಸ್.ಎಮ್.ಲಿಪಸೆಟ್ ಆಂಡ್ ಫಿಲಿಫ್ ಜಿ.ಅಲ್ತಬಷ್. (ಸಂ) ಟರ್ಮಾಯಿಲ್ ಆಂಡ್ ಟ್ರಾನ್ಸಷನ್, ಲಾಲವಾಣಿ ಪಬ್ಲಿಷಿಂಗ್ ಹೌಸ್, ಬಾಂಬೆ, 1968.

11) ಅಮರಜೀತ್ ಕೌರ್ "ಸ್ಟುಡೆಂಟ್ ಮೂವ್‌ಮೆಂಟ್ಸ್ ಥ್ರೂ ದಿ ಇಯರ್ಸ್", ನ್ಯೂ ಏಜ್, ಮಾರ್ಚ 9, 1986.

12) ತಾರಾಚಂದ್, "ಹಿಸ್ಟರಿ ಆಫ್ ದಿ ಫ್ರೀಡಮ್ ಮೂವ್‌ಮೆಂಟ್ ಇನ್ ಇಂಡಿಯಾ" ಗವ್ವರ್ನಮೆಂಟ್ ಆಫ್ ಇಂಡಿಯಾ, ನ್ಯೂ ಡೆಲ್ಲಿ, 1972, ವ್ಯಾಲ್ಯೂಮ್–3,

13) ಅಲ್ತ್‌ಬಷ್ ಫಿಲಿಫ್ ಜಿ, "ಸ್ಟುಡೆಂಟ್ ಪೋಲಿಟಿಕ್ಸ್: ಹಿಸ್ಟಾರಿಕಲ್ ಪರ್ಸಪೆಕ್ಟಿವ್ ಆಂಡ್ ಚೇಂಜಿಂಗ್ ಸಿನ್", ವಿಕಾಸ ಪಬ್ಲಿಷಿಂಗ್ ಹೌಸ್ ಪ್ರೈವ್ಹೇಟ್ ಲಿಮಿಟೆಡ್, ನ್ಯೂ ದೆಹಲಿ, 1974.

14) ಸುನೀತ್ ಚೋಪ್ರಾ, "ಪೊಲಿಟಿಕಲ್ ಕಾನ್ಸಿಯಸ್‌ನೆಸ್ ಆಫ್ ದಿ ಸ್ಟುಡೆಂಟ್ ಮೂವ್‌ಮೆಂಟ್ ಇನ್ ಇಂಡಿಯಾ", ಸೋಶಿಯಲ್ ಸೈಂಟಿಸ್ಟ್, ಮೇ 1977

15) ಅಲ್ತಬಷ್ ಫಿಲಿಫ್ ಜಿ "ಸ್ಟುಡೆಂಟ್ಸ್, ಪೊಲಿಟಿಕ್ಸ್ ಆಂಡ್ ಹೈಯರ್ ಎಜುಕೇಶನ್ ಇನ್ ಎ ಡೆವಲಪಿಂಗ್ ಏರಿಯಾ : ದಿ ಕೆಸ್ ಆಫ್ ಬಾಂಬೆ, ಇಂಡಿಯಾ (ಥಿಸಿಸ್) ಚಿಕಾಗೋ 1966

16) ಅಲ್ತಬಷ್, ಪಿ.ಜಿ. "ಸ್ಟುಡೆಂಟ್ಸ್, ಪೊಲಿಟಿಕ್ಸ್ ಆಂಡ್ ಹೈಯರ್ ಎಜುಕೇಶನ್ ಇನ್ ಇಂಡಿಯಾ" ಇನ್ ಪಿ.ಜಿ.ಅಲ್ತಬಷ್ (ಸಂ), ದ ಸ್ಟುಡೆಂಟ್ ರೆವಲ್ಯೂಷನ್: ಎ ಗ್ಲೋಬಲ್ ಅನಾಲಿಸಿಸ್" ವಿಕಾಸ ಪಬ್ಲಿಕೇಷನ್ ನ್ಯೂ ಡೆಲ್ಲಿ, 1975.

17) ಹಜಾರೆ ಎಸ್.ಸಿ., "ಪ್ರೋಟೆಸ್ಟ್ ಪೊಲಿಟಿಕ್ಸ್ ಆಫ್ ಸ್ಟುಡೆಂಟ್ ಯುಥ್ ಇನ್ ಇಂಡಿಯಾ", ದ ಇಂಡಿಯನ್ ಜರ್ನಲ್ ಆಫ್ ಪೊಲಿಟಿಕಲ್ ಸೈನ್ಸ್, ವ್ಯಾಲ್ಯೂಮ್, 49, ನಂ.1,1988

18) ಜವಾಹರಲಾಲ ನೆಹರು, "ಯುಥ್ ಆಂಡ್ ದ ಫ್ಯೂಚರ್" ಇನ್ ಸೆಲೆಕ್ಟೆಡ್ ವರ್ಕ್ಸ್ ಆಫ್ ಜವಾಹರಲಾಲ ನೆಹರು, ವ್ಯಾಲ್ಯೂಮ್ 14, ಎ ಪ್ರೋಜೆಕ್ಟ್ ಆಫ್ ನೆಹರು ಫೌಂಡೇಷನ್ ಓರಿಯಂಟ್ ಲಾಂಗಮನ್ ಲಿಮಿಟೆಡ್, ನ್ಯೂ ಡೆಲ್ಲಿ, 1982.

19) ಅಲ್ತಬಷ್, ಪಿ.ಜಿ. "ದ ಟ್ರಾನ್ಸ್‌ಫಾರಮೇಶನ್ ಆಫ್ ದಿ ಇಂಡಿಯನ್ ಸ್ಟುಡೆಂಟ್ ಮೂವ್‌ಮೆಂಟ್" ಏಷಿಯನ್ ಸರ್ವೆ, ವ್ಯಾಲ್ಯೂಮ್ 6 ನಂ–8 1966.

20) ಓಂದತ್ತ ತ್ರಿಪಾಠಿ, "ಎ ಸರ್ವೆ ಆಫ್ ಸ್ಟುಡೆಂಟ್ ಎಕ್ಟಿವಿಜಮ್ ಇನ್ ಯುನಿವರ್ಸಿಟಿ (ಥಿಸಿಸ್ ಸಬ್‌ಮಿಟೆಡ್ ಟು ಎಮ್.ಎಸ್. ಯುನಿವರ್ಸಿಟಿ, ಬರೋಡಾ), ಜುಲೈ 1981

21) ಆಶೀಸ್ ರಾಯ್, "ಎಕ್ಸ್‌ಟ್ರಿಮಿಸ್ಟ್ ಪೊಲಿಟಿಕ್ಸ್ ಆಂಡ್ ಯೂಥ್ ರಿವೋಲ್ಟ್ ಇನ್ ವೆಸ್ಟ್ ಬೆಂಗಾಲ್, 1967–72", ಇನ್ ಮುಖರ್ಜಿ (ಸಂ), ಯೂಥ್ ಚೇಂಜ್ ಆಂಡ್ ಚ್ಯಾಲೆಂಜ್, ಕಲ್ಕತ್ತಾ, ಫಿರಮಾ ಕೆ.ಎಲ್.ಎಮ್, 1971.

22) ಅನಿಲ ಬಾರನ್ ರಾಯ್, " ಸ್ಟುಡೆಂಟ್ಸ್ ಆಂಡ್ ಪೊಲಿಟಿಕ್ಸ್ ಇನ್ ಇಂಡಿಯಾ" ಮನೋಹರ ಪಬ್ಲಿಕೆಷನ್, ನ್ಯೂ ಡೆಲ್ಲಿ, 1977.

23) ಜೋಸೆಫ್ ಡಿ.ಬೋನಾ, "ಇನ್‌ಡಿಸಿಪ್ಲಿನ್ ಆಂಡ್ ಸ್ಟುಡೆಂಟ್ ಲೀಡರ್‌ಶಿಪ್ ಇನ್ ಆನ್ ಇಂಡಿಯನ್ ಯುನಿವರ್ಸಿಟಿ" ಇನ್ ಎಸ.ಎಮ್.ಲಿಪ್‌ಸೆಟ್ (ಸಂ), ಸ್ಟುಡೆಂಟ್ ಪೊಲಿಟಿಕ್ಸ್, ಬೇಸಿಕ್ ಬುಕ್ಸ್, ನ್ಯೂಯಾರ್ಕ 1967

24) ಎ.ಕೆ.ಸಿಂಗ್, "ಅಕಾಡೆಮಿಕ್ ಪೊಲಿಟಿಕ್ಸ್ ಆಂಡ್ ಸ್ಟುಡೆಂಟ್ ಅನ್‌ರೆಸ್ಟ್ : ದ ಕೇಸ್ ಆಫ್ ರಾಂಚಿ ಯುನಿವರ್ಸಿಟಿ", ಇನ್ ಪಿ.ಜಿ. ಅಲ್ತಬಷ್ (ಸಂ), ಟರ್ಮಾಯಿಲ್ ಆಂಡ್ ಟ್ರಾನ್ಸಿಷನ್, ಲಾಲವಾಣಿ, ಬಾಂಬೆ, 1968

25) ಹಿಂಗೋರಾಣಿ ಆರ್.ಸಿ. "ಸ್ಟುಡೆಂಟ್ ಅನ್‌ರೆಸ್ಟ್ ಇನ್ ಬಿಹಾರ, 1974" ಇನ್ ಜಿ.ಎಸ್.ಮನ್ಸುಖಾನಿ (ಸಂ), ಸ್ಟುಡೆಂಟ್ ಪಾವರ್ ಇನ್ ಇಂಡಿಯಾ, ಆಕ್ಸ್‌ಫರ್ಡ ಆಂಡ್ ಐ.ಬಿ.ಹೆಚ್. ನ್ಯೂ ಡೆಲ್ಲಿ, 1975.

26) ಯುಸುಫ್ ಎಸ್.ಎಮ್. "ಡೈಮೆನ್‌ಷನ್ ಆಫ್ ಸ್ಟುಡೆಂಟ್ ಎಕ್ಟಿವಿಜಮ್ ಇನ ಬಿಹಾರ", ಜರ್ನಲ್ ಆಫ್ ಸೋಶಿಯಲ್ ಆಂಡ್ ಎಕೋನೊಮಿಕ್ ಸ್ಟಡಿ, ವ್ಯಾಲ್ಯೂಮ್ 7(1) ಮಾರ್ಚ 1979.

27) ಅರವಿಂದ ನಾರಾಯನ್ ದಾಸ, "ಪಾರ್ಶಾಲಿಟಿ ಆಫ್ ಎ ಟೋಟಲ್ ರೆವ್ಯೂಲುಷನ್", ಮೆನ್‌ಸ್ಟ್ರಿಮ್, ಎನಿವಲ್ ನಂಬರ್, 1977

28) ಸಿನ್ಹಾ ಡಿ. "ಡೈಮೆನ್‌ಷನ್ಸ್ ಆಫ್ ಸ್ಟುಡೆಂಟ್ ಎಜಿಟೆಷನ್ಸ್ ಇನ ಇಂಡಿಯಾ", ಜರ್ನಲ್ ಆಫ್ ಸೋಷಿಯಲ್ ಆಂಡ್ ಎಕೋನೊಮಿಕ್ ಸ್ಟಡೀಸ್, ವ್ಯಾಲ್ಯೂಮ್ 3, ಸೆಪ್ಟೆಂಬರ್ 1975, ನಂ 3

29) ಥಕ್ಕರನ್ ಪಿ.ಕೆ. ಮೈಕಲ್, "ದ ಸ್ಟುಡೆಂಟ್ ಸಿಚುವೆಷನ್ ಇನ ಇಂಡಿಯಾ, 1968–78", ರಿಲಿಜಿಯನ್ ಆಂಡ್ ಸೊಸೈಟಿ, ಸೆಪ್ಟೆಂಬರ್ 1978, ವ್ಯಾಲ್ಯೂಮ್ 25 ನ. 3

30) ಜಯರಾಮ್ ಎನ್. "ಸಾಧುಸ್ ನೋ ಲಾಂಗರ್ : ರಿಸೆಂಟ್ ಟ್ರೇಂಡ್ಸ್ ಇನ್ ಇಂಡಿಯನ್ ಸ್ಟುಡೆಂಟ್ ಎಕ್ಟಿವಿಜಮ್", ಹೈಯರ್ ಎಜುಕೇಶನ್ (8), 1979.

31) ಸಂಜೀಬ್ ಬರುವಾ, "ಇಮಿಗ್ರೇಷನ್, ಎಥಿನಿಕ್ ಕಾನ್‌ಫ್ಲಿಕ್ಟ್ ಪೊಲಿಟಿಕಲ್ ಟರ್ಮಾಯಿಲ್ ಇನ್ ಆಸ್ಸಾಂ, 1979–1985", ಎಷಿಯನ್ ಸರ್ವೆ, ನವೆಂಬರ್ 1986 ವ್ಯಾಲ್ಯೂಮ್ 26, ನಂ. 11

32) ಎಮ್. ಚಂದ್ರ ಪೂಜಾರಿ, "ರಾಜಕೀಯ ಬಡತನ" ಸಿದ್ಧಾರ್ಥ ಪ್ರಕಾಶನ, ಹೊಸಪೇಟೆ,2008.

33) ಬಿ.ವಿ.ವೀರಭದ್ರಪ್ಪ, ಧರ್ಮ–ಮೀಸಲಾತಿ–ಸಾಮಾಜಿಕ ನ್ಯಾಯ–ಸಮಾನತೆ–ಆರ್ಥಿಕ ಹಕ್ಕು–ಅಂಬೇಡ್ಕರ್ ಚಿಂತನೆಯ ನೆಲೆಯಲ್ಲಿ, ದಲಿತ ಅಧ್ಯಯನ,(ಸಂ) ಟಿ.ಆರ್.ಚಂದ್ರಶೇಖರ್, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

34) ಅಸ್ಗರ್ ಅಲಿ ಎಂಜಿನೀಯರ್, "ಮಂಡಲ್ ಕಮೀಷನ್ ಕಾಂಟ್ರಾವರ್ಸಿ" ಅಜಂತಾ ಪಬ್ಲಿಕೇಷನ್, 1991.

35) ಅಲ್ತಬಷ್ ಫೀಲಿಪ್ ಜಿ, "ಇಂಡಿಯನ್ ಕ್ಯಾಂಪಸ್ ಪೊಲಿಟಿಕ್ಸ್" ಇನ್ ಪವನ ಅಗರವಾಲ (ಸಂ) ಸೇಜ್ ಪಬ್ಲಿಕೇಷನ್, ನ್ಯೂ ಡೆಲ್ಲಿ, 2012.

36) ಫೀಷರ್ ಜೊಸೆಫ್, "ದಿ ಯುನಿವರ್ಸಿಟಿ ಸ್ಟುಡೆಂಟ್ ಇನ್ ಸೌಥ್ ಆಂಡ್ ಸೌಥ್‌ಇಸ್ಟ್ ಏಷಿಯಾ", ಮಿನೆರ್ವಾವಾಲ್ಯೂಮ್ 2,ನಂ,1, ಅಟಮನ್,1973.

37) ನಂದಿ ಆಶಿಸ್, "ಸ್ಟುಡೆಂಟ್ಸ್ ಆಂಡ್ ಪೊಲಿಟಿಕ್ಸ್ ಇನ್ ಇಂಡಿಯಾ", ಇನ್ ಡಿ. ಮುಖರ್ಜಿ (ಸಂ), ಯೂಥ್: ಚೆಂಜ್ ಆಂಡ್ ಚಾಲೆಂಜ್, ಆಶಿಶ್ ಪಬ್ಲಿಷಿಂಗ್ ಹೌಸ್, ನ್ಯೂ ದೆಹಲಿ, 1987.

38) ಹಜಾರೆ.ಎಸ್.ಸಿ. "ಸ್ಟುಡೆಂಟ್ ಪೊಲಿಟಿಕ್ಸ್ ಇನ್ ಇಂಡಿಯಾ", ಆಶಿಶ್ ಪಬ್ಲಿಷಿಂಗ್ ಹೌಸ್, ನ್ಯೂ ದೆಹಲಿ, 1987

39) ಬೋನಾ ಜೋಸೆಫ್, "ಎಲೀಟ್ ಆಂಡ್ ಮಾಸ್ ಇನ್ ಇಂಡಿಯನ್ ಹೈಯರ್ ಎಜುಕೇಶನ್ : ದಿ ಕೇಸ್ ಆಫ್ ಅಲಹಾಬಾದ ಯುನಿವರ್ಸಿಟಿ", ಇನ್ ಪಿ.ಜಿ. ಅಲ್ತ್‌ಬಷ್ (ಸಂ), ಟರ್ಮಾಯಿಲ್ ಆಂಡ್ ಟ್ರಾನ್ಸಿಶನ್, ಬಾಂಬೆ, ಲಾಲವಾಣಿ,1968.

40) ಕುಮಾರ ಪ್ರಮೋದ, "ಸರ್ಟನ್ ಪರ್ಸನಲ್ ಫ್ಯಾಕ್ಟರ್ಸ್ ಇನ್ ಸ್ಟುಡೆಂಟ್ ಲೀಡರ್‌ಶಿಪ್", ಜರ್ನಲ್ ಆಫ್ ಸೈಕಾಲೋಜಿಕಲ್ ರಿಸರ್ಚಸ್, ವ್ಯಾಲ್ಯೂಮ್ 10, ನಂ.1, 1966.

41) ರಾಬರ್ಟ ಸಿ.ಶಹಾ, "ಸ್ಟುಡೆಂಟ್ ಪಾಲಿಟಿಕ್ಸ್ ಆಂಡ್ ಸ್ಟುಡೆಂಟ್ ಲೀಡರ್‌ಶಿಪ್ ಇನ್ ಇಂಡಿಯನ್ ಯುನಿವರ್ಸಿಟಿ :ದಿ ಕೇಸ್ ಆಫ್ ಉಸ್ಮಾನಿಯಾ" ಇನ್ ಪಿ.ಜಿ. ಅಲ್ಟ್‌ಬಷ್ (ಸಂ), ಟರ್ಮಾಯಿಲ್ ಆಂಡ್ ಟಾನ್ಸಿಶನ್, ಬಾಂಬೆ, ಲಾಲವಾಣಿ,1968.

42) ಎಸ್.ಎಮ್.ಸೈಯಿದ್, "ಪೊಲಿಟಿಸೈಜೇಶನ್ ಆಫ್ ದಿ ಸ್ಟುಡೆಂಟ್ ಲೀಡರ್ಸ್ : ಎ ಕೇಸ್ ಸ್ಟಡಿ ಆಫ್ ಲಕ್ನೋ ಯುನಿವರ್ಸಿಟಿ ಯುನಿಯನ್ ಸಿನ್ಸ್ ಇಂಡಿಪೆಂಡೆನ್ಸ್", ಇಂಡಿಯನ್ ಜರ್ನಲ್ ಆಫ್ ಪೊಲಿಟಿಕಲ್ ಸೈನ್ಸ್ ವ್ಯಾಲ್ಯೂಮ್ 34, (1), 1973

43) ಸೈಯದ್ ರಶೀದ್ ಅಲಿ, "ಸ್ಟುಡೆಂಟ್ ಲೀಡರ್‌ಶಿಪ್ ಇನ್ ಲಕ್ನೋ", ಸೋಶಿಯಲ್ ಸೈಂಟಿಸ್ಟ್, ವ್ಯಾಲ್ಯೂಮ್ 3, ನಂ.9, ಏಪ್ರಿಲ್ 1975.

44) ಸೈಯದ್ ರಶೀದ್ ಅಲಿ, "ಅಕಾಡೆಮಿಕ್ ಬ್ಯಾಕ್‌ಗ್ರೌಂಡ್ ಆಫ್ ಸ್ಟುಡೆಂಟ್ ಲೀಡರ್‌ಶಿಪ್", ಈಸ್ಟರ್ನ ಆಂಥ್ರೋಪೊಲೊಜಿಸ್ಟ್, ವ್ಯಾಲ್ಯೂಮ್ 30(4), ಅಕ್ಟೋಬರ್-ಡಿಸೆಂಬರ್,1977.

45) ಓ.ಕೆ.ಓಮೆನ್, "ಸ್ಟುಡೆಂಟ್ ಪೊಲಿಟಿಕ್ಸ್ ಇನ್ ಇಂಡಿಯಾ : ಎ ಕೇಸ್ ಆಫ್ ದೆಹಲಿ ಯುನಿವರ್ಸಿಟಿ" ಏಶಿಯನ್ ಸರ್ವೆ, ಸೆಪ್ಟೆಂಬರ್ 1974, ವ್ಯಾಲ್ಯೂಮ್ 14, 09.

46) ಅಲ್ಟ್‌ಬಷ್ ಫಿಲಿಫ್, "ಸ್ಟುಡೆಂಟ್ಸ್, ಪೊಲಿಟಿಕ್ಸ್ ಆಂಡ್ ಹೈಯರ್ ಏಜುಕೇಶನ್ ಇನ್ ಎ ಡೆಪವಲಪಿಂಗ್ ಎರಿಯಾ: ದಿ ಕೇಸ್ ಆಫ್ ಬಾಂಬೆ(ಥಿಸಿಸ್), ಚಿಕಾಗೋ, 1966

47) ಆರ್.ಎನ್.ಶರ್ಮಾ, "ಪವರ್ ಮೆಂಟೆನೆನ್ಸ್ ಇನ್ ಸ್ಟುಡೆಂಟ್ ಯುನಿಯನ್ ಲೀಡರ್‌ಶಿಪ್", ಜರ್ನಲ್ ಆಫ್ ಸೋಶಿಯಲ್ ಆಂಡ್ ಇಕೋನೋಮಿಕ್ ಸ್ಟಡೀಸ್, ಮಾರ್ಚ,1981, ವ್ಯಾಲ್ಯೂಮ್.9(1).

48) ಎಸ್.ಕೆ. ಪಟ್ನಾಯಕ್, "ಏ ಸೈಕೋ-ಸೋಶಿಯಲ್ ಪ್ರೊಫೈಲ್ ಆಫ್ ಏಲಿಯೆನೆಟೆಡ್ ಸ್ಟುಡೆಂಟ್ಸ್: ಏ ಕೇಸ್ ಸ್ಟಡಿ ಆಫ್ ಜೆ.ಎನ್.ಯು. ಥಿಸಿಸ್ ಸಬಮಿಟೆಡ್ ಟು ಜೆ.ಎನ್.ಯು. ಫಾರ ದಿ ಡಿಗ್ರಿ ಆಫ್ ಪಿ.ಹೆಚ್.ಡಿ. ಇನ್ ಸೈಕೋಲೋಜಿ ಆಫ್ ಎಜುಕೇಶನ್, ನ್ಯೂ ಡೆಲ್ಲಿ, 1983.

49) ಚಿತ್ರಾ ಶಿವುಕುಮಾರ, "ಹೀರೋಸ್ ಆಫ್ ದಿ ಫ್ಯೂಚರ್", ಸೆಮಿನಾರ್, ನ್ಯೂ ದೆಹಲಿ, ಜುಲೈ, 1984 ವ್ಯಾಲ್ಯೂಮ್ 299.

50) ಎಸ್.ಸಿ.ಹಜಾರೆ, "ಸ್ಟುಡೆಂಡ್ ಪೊಲಿಟಿಕ್ಸ್ ಇನ್ ಇಂಡಿಯಾ", ದಿ ಇಂಡಿಯನ್ ಜರ್ನಲ್ ಆಫ್ ಪೋಲಿಟಿಕಲ್ ಸೈನ್ಸ್, ವ್ಯಾಲ್ಯೂಮ್ 49,ನಂ.1 1988.

51) ಎ.ಬಿ.ರೇ, "ಸ್ಟುಡೆಂಟ್ಸ್ ಆಂಡ್ ಪೊಲಿಟಿಕ್ಸ್ ಇನ್ ಇಂಡಿಯಾ" ಮನೋಹರ್ ಪಬ್ಲಿಕೇಶನ್ ದೆಹಲಿ 1977.

52) ದುರ್ಗಾನಂದ್ ಸಿನ್ಹಾ, "ಡೈಮೆನ್‌ಶನ್ಸ್ ಆಫ್ ಸ್ಟುಡೆಂಟ್ ಎಜಿಟೇಶನ್ ಇನ್ ಇಂಡಿಯಾ", ಜರ್ನಲ್ ಆಫ್ ಸೋಶಿಯಲ್ ಆಂಡ್ ಇಕೋನೋಮಿಕ್ ಸ್ಟಡಿಸ್, ವ್ಯಾಲ್ಯೂಮ್ 3, ಸೆಪ್ಟೆಂಬರ್ 1975.

53) ಪ್ರದೀಪ್ ಸಿಂಗ್, "ಲೀಡರ್‌ಶಿಪ್", ಸೆಮಿಸಾರ (176), ಏಪ್ರೀಲ್ 1974.

54) ರಾಬರ್ಟ ಗಾಡಿನೋ, "ದಿ ಇಂಡಿಯನ್ ಯುನಿವರ್ಸಿಟಿ", ಬಾಂಬೆ 1967

55) ಎಸ್.ಎಲ್.ಶರ್ಮಾ, "ಪೊಲಿಟಿಕಲ್ ಓರಿಯಂಟೆಷನ್ ಆಂಡ್ ಪ್ರೋಟೆಸ್ಟ್ ಪಾರ್ಟಸಿಪೇಷನ್ : ಎ ಕಂಪೆರಿಟಿವ್ ಸ್ಟಡಿ ಆಫ್ ರವಿಶಂಕರ ಯುನಿವರ್ಸಿಟಿ ರಾಯಪೂರ ಅಂಡ್ ಪಂಜಾಬ ಯುನಿವರ್ಸಿಟಿ ಚಂಡಿಗಡ". 1971

56) ಡಿ.ಕೆ.ಮೊಹಾಂತಿ, "ಹೈಯರ್ ಎಜುಕೇಶನ್ ಆಂಡ್ ಸ್ಟುಡೆಂಟ್ ಪೊಲಿಟಿಕ್ಸ್ ಇನ್ ಇಂಡಿಯಾ", ಅನ್‌ಮೊಲ್ ಪಬ್ಲಿಕೇಶನ್ಸ್ ಪ್ರಾವೈಟ್ ಲಿಮಿಟೆಡ್ ನ್ಯೂ ಡೆಲ್ಲಿ, 1999.

57) ಎಸ್.ಕೆ.ಪಟ್ನಾಯಕ್, "ಸ್ಟುಡೆಂಟ್ ಪೊಲಿಟಿಕ್ಸ್ ಆಂಡ್ ವ್ಹೋಟಿಂಗ್ ಬಿಹೆವಿಯರ್", ಕನ್ಸೆಪ್ಟ್ ಪಬ್ಲಿಷಿಂಗ್ ಕಂಪನಿ ನ್ಯೂ ಡೆಲ್ಲಿ, 1982.

58) ಎಮ್. ಚಂದ್ರಪೂಜಾರಿ, "ಸಂಶೋಧನೆ ಏನು? ಏಕೆ? ಹೇಗೆ?" ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ. 2009

59) ಕಿಶೋರ ಗಾಂಧಿ, "ಇಶ್ಯೂಸ್ ಆಂಡ್ ಚಾಯ್ಸಸ್ ಇನ ಹೈಯರ್ ಎಜುಕೇಶನ್, ಏ ಸೋಶಿಯಾಲೋಜಿಕಲ್ ಅನಾಲಿಸಿಸ್, ಬಿ.ಆರ್.ಪಬ್ಲಿಷಿಂಗ್ ಕಾರ್ಪೋರೇಶನ್, ನ್ಯೂ ಡೆಲ್ಲಿ, 1977

60) ನಾಟ್ ಪಾಲ್, ಡಿ: ಸ್ಟುಡೆಂಟ್ ಎಕ್ಟಿವಿಜಮ್, ಡಬ್ಲ್ಯೂ.ಎಮ್.ಸಿ. ಬ್ರೌನ್ ಕಂಪನಿ ದೆಬಕ್, ಲೋವಾ, 1971

61) ಎಸ್.ಎಮ್.ಲಿಪ್‌ಸೆಟ್, ಆಂಡ್ ಫಿಲಿಫ್ ಜಿ. ಅಲ್ತಬಷ್: ಸ್ಟುಡೆಂಟ್ಸ್ ಇನ್ ರಿವೋಲ್ಟ್, ಬೇಕನ್ ಪ್ರೆಸ್, ಬೋಸ್ಟನ್, 1969

62) ಜಿ.ಎಸ್.ಮನುಸುಖಾ, : ಕ್ರೈಸಿಸ್ ಇನ ಇಂಡಿಯನ್ ಯುನಿವರ್ಸಿಟಿಸ್, ಆಕ್ಸ್‌ಫರ್ಡ ಆಂಡ್ ಐ.ಬಿ.ಹೆಚ್. ಪಬ್ಲಿಷಿಂಗ್ ಕಂಪನಿ ನ್ಯೂ ಡೆಲ್ಲಿ, 1972

63) ಅಮೋಲ್ ಕುಮಾರ ಮುಖ್ಯೋಪಾಧ್ಯಾಯ, "ಪೋಲಿಟಿಕಲ್ ಸೋಶಿಯಾಲೊಜಿ, ಆನ್ ಇಂಟ್ರೊಡುಕ್ಟರಿ ಅನಾಲಿಸಿಸ್", ಕೆ.ಪಿ.ಬಾಗಚಿ ಆಂಡ್ ಕಂಪನಿ, ಕಲ್ಕತ್ತಾ, 1987.

64) ವೇಣುರಾಜನ್ ಪಿಳ್ಳೈ, "ಸ್ಟುಡೆಂಟ್ ಆರ್ಗನೈಜೆಶನ್ ಇನ ಕೇರಳ: ಎ ಕೇಸ್ ಸ್ಟಡಿ ಆಫ್ ಎಸ.ಎಫ್.ಐ., ಎಮ್.ಎ.ಥಿಸಿಸ್" ಡಿಪಾರ್ಟಮೆಂಟ ಆಫ್ ಪೋಲಿಟಿಕ್ಸ್, ಯುನಿವರ್ಸಿಟಿ ಆಫ್ ಕೇರಳ, ತ್ರಿವೇಂದ್ರಂ, 1973

65) ಬಿ.ಕೆ.ಶರ್ಮಾ "ಪೋಲಿಟಿಕಲ್ ಇನ್‌ಸ್ಟಬಿಲಿಟಿ ಇನ್ ಇಂಡಿಯಾ" ಮಿತ್ತಲ ಪಬ್ಲಿಕೇಶನ್ಸ್, ನ್ಯೂ ಡೆಲ್ಲಿ, 1989

66) ರೂಡೊಲ್ಫ ಎಸ್.ಹೆಚ್., ಎಲ್.ಐ.ರೂಡೊಲ್ಫ, (ಸಂ): "ಎಜುಕೇಶನ್ ಆಂಡ್ ಪೊಲಿಟಿಕ್ಸ್ ಇನ್ ಇಂಡಿಯಾ" ಆಕ್ಸಫರ್ಡ ಯುನಿವರ್ಸಿಟಿ ಪ್ರೇಸ್, ನ್ಯೂ ಡೆಲ್ಲಿ, 1972

67) ಸರಸ್ವತಿ ಎಸ್.: "ಯುಥ್ ಇನ್ ಇಂಡಿಯಾ" ಇಂಡಿಯನ್ ಕೌನ್ಸಿಲ್ ಆಫ್ ಸೋಶಿಯಲ್ ಸೈನ್ಸ್ ರಿಸರ್ಚ, ನ್ಯೂ ಡೆಲ್ಲಿ, 1988

68) ಸುಭೇಂದ್ ಎನ್., "ಸ್ಟುಡೆಂಟ್ ಪೊಲಿಟಿಕ್ಸ್ ಇನ್ ಕೇರಳ, ವಿಥ್ ಸ್ಪೆಷಿಯಲ್ ರೆಫ್ರೆನ್ಸ್ ಟು ತ್ರಿವೇಂದ್ರಂ ಡಿಸ್ಟ್ರಿಕ್ಟ್ ಎಮ್.ಎ. ಥಿಸಿಸ್", ಡಿಪಾರ್ಟಮೆಂಟ ಆಫ್ ಪೊಲಿಟಿಕ್ಸ್, ಕೇರಳ ಯುನಿವರ್ಸಿಟಿ, ತ್ರಿವೇಂದ್ರಂ, 1982

69) ಎಸ್.ಪಿ.ವರ್ಮಾ, "ಮಾಡರ್ನ ಪೊಲಿಟಿಕಲ್ ಥಿಯರಿ" ವಿಕಾಸ ಪಬ್ಲಿಷಿಂಗ್ ಹೌಸ್, ನ್ಯೂ ಡೆಲ್ಲಿ, 1980

70) ಎಮ್. ಚಂದ್ರಪೂಜಾರಿ, "ಸಮಾಜ ಸಂಶೋಧನೆ" ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ, 2005

71) ಸೌರಭ ಮುಖರ್ಜಿ, "ಕ್ಯಾ ಛಾತ್ರೋಂ ಕೋ ರಾಜನೀತಿ ಕರನಿ ಚಾಹಿಯೆ?", ಛಾತ್ರ ಸಂಕಲ್ಪ ಪ್ರಕಾಶನ, ಕಲ್ಕತ್ತಾ 2009.

72) ಎಸ್.ನಾಗರತ್ನಮ್ಮ "ಕರ್ನಾಟಕದಲ್ಲಿ ಅಸಹಕಾರ ಮತ್ತು ನಾಗರಿಕ ಕಾನೂನು ಭಂಗ ಚಳುವಳಿ" ದೇಸಿ ಪುಸ್ತಕ, ವಿಜಯನಗರ ಬೆಂಗಳೂರು, 2009.

73) ಅನೀಲ ರಜಿಮ್ವಾಲೆ "ಹಿಸ್ಟರಿ ಆಫ್ ಸ್ಟೂಡೆಂಟ್ ಮೂವ್‌ಮೆಂಟ್ ಇನ್ ಇಂಡಿಯಾ" ಮನಕ ಪಬ್ಲಿಕೇಷನ್ಸ್, ದೆಹಲಿ, 2001.

74) ಶ್ರೀಧರ "ಭಾರತದ ಕ್ರಾಂತಿ ಮತ್ತು ಮಾವೋವಾದಿ ಚಳುವಳಿ", ಚಾರು ಪ್ರಕಾಶನ, ಬೆಂಗಳೂರು, 2012.

75) ಮುಜಾಫರ್ ಅಸ್ಸಾದಿ 'ಕರ್ನಾಟಕದಲ್ಲಿ ಐಡೆಂಟಿಟಿ ರಾಜಕೀಯ, ರೈತ, ರೈತ ಹೋರಾಟ ಹಾಗೂ ಸಾಮಾಜಿಕ ವಳುವಳಿ" ಪ್ರಗತಿ ಗ್ರಾಫಿಕ್ಸ್, ಬೆಂಗಳೂರು, 2009.

76) 'ಶೈಕ್ಷಣಿಕ ಪರಿವರ್ತನೆ–ದೇಶವ್ಯಾಪಿ ಆಂದೋಳನ' ಬೇಡಿಕೆ ಪತ್ರ, ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್, ಕರ್ನಾಟಕ

77) ವಾಸುದೇವ ಅಗ್ನಿಹೋತ್ರಿ, "ಹೈದ್ರಾಬಾದ ಕರ್ನಾಟಕದ ನೋಡುವ ಬೀಡುಗಳು", ಶ್ರೀ ಕೊತ್ತಲ ಬಸವೇಶ್ವರ ಭಾರತೀಯ ಶಿಕ್ಷಣ ಸಮಿತಿ, ಸೇಡಂ, 2006.

78) ಸಿ. ಆರ್. ಗೋವಿಂದ ರಾಜು, "ಮೂವ್ಹ್‌ಮೆಂಟ್ ಫಾರ್ ಯುನೈಟೇಡ್ ಕರ್ನಾಟಕ", ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2009.

79) ಕೆ. ರಾಘವೇಂದ್ರರಾವ್, " ಕರ್ನಾಟಕ ಯುನಿಫಿಕೇಶನ್– ಎ ಪೊಲಿಟಿಕಲ್ ಇಂಟರ್ ಪ್ರಿಟೇಶನ್", ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2010.

80) ಗೋಪಾಲರಾವ್ ಹೇಜೀಬ್, "ಹೈದ್ರಾಬಾದ ಮುಕ್ತಿ ಸಂಘರ್ಷ", ರಾಷ್ಟ್ರೋತ್ಥಾನ ಸಾಹಿತ್ಯ, ಬೆಂಗಳೂರು, 2001.

82. ವ್ಹಿ. ಡಿ. ಮಹಾಜನ್, " ಪೊಲಿಟಿಕಲ್ ಥಿಯರಿ", ಎಸ್. ಚಾಂದ್ ಅಂಡ್ ಕಂಪನಿ ಲಿಮಿಟೆಡ್, ನ್ಯೂ ದೆಹಲಿ, 1992.

83. ಬಿ.ಕೆ. ಗೋಖಲೆ, "ಎ ಸ್ಟಡಿ ಆಫ್ ಪೊಲಿಟಿಕಲ್ ಥಿಯರಿ" ಹಿಮಾಲಯ ಪಬ್ಲಿಷಿಂಗ್ ಹೌಸ್, ಬಾಂಬೆ, 1982.

84. ಡಿ. ಮೀನಾಕ್ಷಿ, "ನಿರ್ಣಯ ಪ್ರಕ್ರಿಯೆಯಲ್ಲಿ ಚುನಾಯಿತ ಮಹಿಳೆಯರ ಪಾತ್ರ", ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ, 2010.

85. ಎನ್. ಹಾಲಪ್ಪ, "ರಾಜ್ಯಶಾಸ್ತ್ರ" ನವಿತಾ ಪ್ರಕಾಶನ, ಮೈಸೂರು, 1997.

86. ಡೆವಿಡ್ ಜಿ. ಮೈಯರ್ಸ್, "ಸೊಶಿಯಲ್ ಸೈಕಾಲೋಜಿ" ಇನ್ ಬಿನೋದಾನಂದ ಝಾ, " ಸ್ಟುಡೆಂಟ್ ಆರ್ಗ್‌ನೈಜೇಷನ್ ಆಂಡ್ ಪೊಲಿಟಿಕ್ಸ್" ಇಂಟರ್–ಇಂಡಿಯಾ ಪಬ್ಲಿಕೇಷನ್, ನ್ಯೂ ಡೆಲ್ಲಿ, 1998.

87. ಜಿ. ಡಿ. ಬೋರ್, "ಜನರಲ್ ಸೈಕಾಲೋಜಿ" ಇನ್ ಬಿನೋದಾನಂದ ಝಾ, " ಸ್ಟುಡೆಂಟ್ ಆರ್ಗ್‌ನೈಜೇಷನ್ ಆಂಡ್ ಪೊಲಿಟಿಕ್ಸ್" ಇಂಟರ್–ಇಂಡಿಯಾ ಪಬ್ಲಿಕೇಷನ್, ನ್ಯೂ ಡೆಲ್ಲಿ, 1998.